श्री गुरुभ्यो नमः   श्री गणेशाय नमः   श्री दक्षिणामूर्तये नमः

ಶ್ರೀ ಗುರುಭ್ಯೋ ನಮಃ   ಶ್ರೀ ಗಣೇಶಾಯ ನಮಃ   ಶ್ರೀ ದಕ್ಷಿಣಾಮೂರ್ತಯೇ ನಮಃ

श्री शङ्कराचार्य कृत

श्री दक्षिणामूर्ति स्तोत्रम्

श्री सुरेश्वराचार्य कृत 'मानसोल्लास' (श्रीरामतीर्थस्य विवृत्ति सहितम्),

'पञ्चीकरण (प्रणव) वार्तिक'

स्वयंप्रकाश यति विरचित व्याख्या 'तत्त्वसुधा'

'दक्षिणामूर्ति उपनिषत्' सहितम्

ಶ್ರೀ ಶಂಕರಾಚಾರ್ಯ

ದಕ್ಷಿಣಾಮೂರ್ತಿ ಸ್ತೋತ್ರ

ಶ್ರೀ ಸುರೇಶ್ವರಾಚಾರ್ಯರ 'ಮಾನಸೋಲ್ಲಾಸ' (ಶ್ರೀರಾಮತೀರ್ಥರ ವಿವರಣೆಯೊಂದಿಗೆ),

'ಪಂಚೀಕರಣ (ಪ್ರಣವ) ವಾರ್ತಿಕ'

ಸ್ವಯಂಪ್ರಕಾಶ ಯತಿ ವಿರಚಿತ ವ್ಯಾಖ್ಯೆ 'ತತ್ತ್ವಸುಧಾ'

ಮತ್ತು 'ದಕ್ಷಿಣಾಮೂರ್ತಿ ಉಪನಿಷತ್ತು' ಸಹಿತ

ಸಂಪಾದಕರು: ಅಲ್ಲಾಡಿ ಮಹಾದೇವ ಶಾಸ್ತ್ರಿ ಮತ್ತು
ಪಂಡಿತರತ್ನ ಕೆ. ರಂಗಾಚಾರ್ಯ

ಕನ್ನಡ ಅನುವಾದಕ : ಶಿವಾಜಿ ಕುಮಾರ ಅಧಿಕಾರಿ ಪಾರೆಂಕಿ

ಅನುಕ್ರಮಣಿಕೆ

ಮುನ್ನುಡಿ (ಪ್ರಥಮ ಆವೃತ್ತಿ)

ಈ ಹೊತ್ತಗೆಯಲ್ಲಿಕೆಳಗೆ ದಾಖಲಿಸಿದ ಕೃತಿಗಳನ್ನು ಭಾವಾನುವಾದದ ರೂಪದಲ್ಲಿ, ಅಗತ್ಯವಿರುವಲ್ಲಿ ವಿವರಣೆಯೊಂದಿಗೆ ಕೊಡಲಾಗಿದೆ:

1. ಶ್ರೀ ಶಂಕರಾಚಾರ್ಯರ 'ದಕ್ಷಿಣಾಮೂರ್ತಿ ಸ್ತೋತ್ರ' (ಆ ಪರಾತ್ಪರಶಕ್ತಿಯನ್ನು ವಿವರಿಸುವ ಒಂದು ಕಾವ್ಯ), ಅದಕ್ಕೆ ಸುರೇಶ್ವರಾಚಾರ್ಯರು ಬರೆದಿರುವ 'ಮಾನಸೋಲ್ಲಾಸ' ಹೆಸರಿನ ವಾರ್ತಿಕ ಮತ್ತು ಅದಕ್ಕೆ ಶ್ರೀರಾಮತೀರ್ಥರು ಬರೆದಿರುವ ವಿವರಣೆ.
2. ದಕ್ಷಿಣಾಮೂರ್ತಿಸ್ತೋತ್ರಕ್ಕೆ ಶ್ರೀಸ್ವಯಂಪ್ರಕಾಶಯತಿಗಳು ಬರೆದಿರುವ 'ತತ್ತ್ವಸುಧಾ' ವ್ಯಾಖ್ಯೆ.
3. ಶ್ರೀ ಸುರೇಶ್ವರಾಚಾರ್ಯರ 'ಪ್ರಣವ ವಾರ್ತಿಕ' (ಓಂಕಾರದ ಮೂಲಕ ಆತ್ಮಸಾಧನೆ).
4. ದಕ್ಷಿಣಾಮೂರ್ತಿ ಉಪನಿಷತ್.

ಶ್ರೀ ಶಂಕರಾಚಾರ್ಯರ ಜಗದ್ವಂದ್ಯ ಕಾವ್ಯ ಮತ್ತು ಅವರ ಶಿಷ್ಯ ಶ್ರೀ ಸುರೇಶ್ವರಾಚಾರ್ಯರ ಎರಡು ಕೃತಿಗಳು, ಅವರು ತಮ್ಮ ಉಪನಿಷತ್ತುಗಳ ಭಾಷ್ಯಗಳಲ್ಲಿ ವಿವರಿಸಿದ ವೇದಾಂತ ತತ್ವಜ್ಞಾನದ ಸಾರವನ್ನು ಸಂಗ್ರಹೀತಗೊಳಿಸುತ್ತದೆ ಮತ್ತು ವೇದಾಂತದ ಅಧ್ಯಯನಕ್ಕೆ ಬೇಕಾದ ಸ್ಫೂರ್ತಿಯನ್ನು ಒದಗಿಸುತ್ತದೆ. ದಕ್ಷಿಣಾಮೂರ್ತಿ ಸ್ತೋತ್ರವು ವೇದಾಂತದ ಸತ್ಯಗಳನ್ನು ಕುರಿತಾದ ತನ್ನ ಪ್ರತಿಪಾದನೆಗಳಿಂದ ವಿದ್ಯಾರ್ಥಿಗಳ ಮನವನ್ನು ಗೆದ್ದು, ಅದರ ಮೇಲಿನ ಧ್ಯಾನದಿಂದ ತನ್ನದೇ ಆದ ವಿಚಾರಗಳನ್ನು ಮುಂದಿಡಲು ಸಹಕರಿಸುತ್ತದೆ. ಯಾವುದೇ ವರ್ಗ, ಜಾತಿ ಯಾ ಧರ್ಮಗಳನ್ನು ಸಂಭೋಧಿಸದೆ, ಸರ್ವರಿಗೂ ಉಪಯುಕ್ತವಾಗುವ ರೀತಿಯಲ್ಲಿ ಆತ್ಮದ ಶಾಶ್ವತತ್ವ ಮತ್ತು ಇತರ ವಿಷಯಗಳ ಮಿಥ್ಯತ್ವಗಳ ಪ್ರತಿಪಾದನೆಗಳನ್ನು ಮಂಡಿಸಲಾಗಿದೆ. ಇವರೀರ್ವರು ಅದ್ವೈತ ವೇದಾಂತ ಸಿದ್ಧಾಂತದ ಪ್ರಮುಖ ಪ್ರತಿಪಾದಕರು ಮತ್ತು ಈ ಸಿದ್ಧಾಂತಗಳನ್ನು 'ಮಾನಸೋಲ್ಲಾಸ'ವು ಸಮರ್ಥವಾಗಿ ನಮ್ಮಮುಂದಿಡುತ್ತದೆ.

ಶ್ರೀ ಶಂಕರಾಚಾರ್ಯರ ಜ್ಞಾನಶ್ರೇಷ್ಠತೆಯ ವಿಷಯದಲ್ಲಿ ಯಾರಿಗೂ ಸಂಶಯವಿಲ್ಲ ಆದರೆ ಅವರ ನೇರ ಶಿಷ್ಯರಾದ, ಒಬ್ಬ ಶ್ರೇಷ್ಠ ಮೀಮಾಂಸಕರಾದ ಶ್ರೀ ಸುರೇಶ್ವರಾಚಾರ್ಯರ ವಿಷಯದಲ್ಲಿ ಸಾಮಾನ್ಯರಿಗೆ ಹೆಚ್ಚು ತಿಳಿದಿಲ್ಲ ಯಾಕೆಂದರೆ ಅವರ ಕೃತಿಗಳು ವೇದಾಂತದ ವಿದ್ವಾಂಸರಿಗೆ ಮಾತ್ರ ಲಭ್ಯವಿದ್ದವು. ಅವರ ವ್ಯಾಖ್ಯಾನ, ಕೃತಿಗಳ ಸಂಬದ್ಧತೆ, ವಾದಗಳ ಪೂರಕತೆ ಮತ್ತು ಸಿದ್ಧಾಂತಗಳನ್ನು ವಿಷದೀಕರಿಸುವಲ್ಲಿನ ನಿಪುಣತೆ ಅವರಿಗೆ 'ವಾರ್ತಿಕಕಾರ'ರೆಂದು ಒಂದು ಗೌರವಯುತವಾದ ಸ್ಥಾನವನ್ನು ಕಲ್ಪಿಸಿದೆ. ಗುರುಗಳು 'ಭಾಷ್ಯಕಾರ'ರು ಮತ್ತು ಶಿಷ್ಯರು ಭಾಷ್ಯಗಳಿಗೆ ವಿವರಣೆಯನ್ನು ನೀಡುವ 'ವಾರ್ತಿಕಕಾರ'ರು. 'ಉಕ್ತಾನುಕ್ತದುರುಕ್ತಾರ್ಥವ್ಯಕ್ತಕಾರಿ ತು ವಾರ್ತಿಕಮ್' ಅಂದರೆ ಹೇಳಿರುವುದನ್ನು, ಹೇಳದಿರುವುದನ್ನು ಹಾಗೂ ಕೆಟ್ಟದಾಗಿ ಹೇಳಿರುವುದನ್ನು ವಿಷದವಾಗಿ ವಿವರಿಸುವುದನ್ನು ವಾರ್ತಿಕವೆನ್ನುತ್ತಾರೆ.

ಶ್ರೀ ಸುರೇಶ್ವರಾಚಾರ್ಯರ ಐದು ಕೃತಿಗಳು ಇತ್ತೀಚೆಗೆ ಭಾರತದಲ್ಲಿ ಪ್ರಕಟಗೊಂಡಿವೆ.

1. ಮಾನಸೋಲ್ಲಾಸ (ಮೈಸೂರು)
2. ಪ್ರಣವ ವಾರ್ತಿಕ (ಮೈಸೂರು)
3. ನೈಷ್ಕರ್ಮ್ಯ ಸಿದ್ಧಿ – ಅದ್ವೈತ ಸಿದ್ಧಾಂತದ ಕೈಪಿಡಿ (ಬೋಂಬೇ ಸಂಸ್ಕೃತ ಮಾಲೆ)
4. ಶ್ರೀ ಶಂಕರಾಚಾರ್ಯರ ತೈತ್ತರೀಯ ಉಪನಿಷತ್ತಿನ ಭಾಷ್ಯದ ವಿವರಣೆ (ಪೂನಾ, ಆನಂದಾಶ್ರಮ ಮಾಲೆ)

5. ಶ್ರೀ ಶಂಕರಾಚಾರ್ಯರ ಬೃಹದಾರಣ್ಯಕ ಉಪನಿಷತ್ತಿನ ಭಾಷ್ಯದ ವಿವರಣೆ (ಪೂನಾ, ಆನಂದಾಶ್ರಮ ಮಾಲೆ)

ವೇದಾಂತ ತತ್ತ್ವದ ಬಗೆಗಿನ ಶ್ರೀ ಸುರೇಶ್ವರಾಚಾರ್ಯರ ವಿವರಣೆಗಳು, ಅವರ ಆಲೋಚನೆಗಳ ಸ್ವಂತಿಕೆಯನ್ನು ಪ್ರತಿಬಿಂಬಿಸುತ್ತವೆ ಹಾಗೂ ಗಹನ, ನಿಖರ ಮತ್ತು ಸ್ಪಷ್ಟವಾಗಿ, ಉಪನಿಷತ್ತುಗಳ ವಿಷಯಗಳಿಗೆ ಪೂರಕವಾಗಿವೆ. ಕ್ಲಿಷ್ಟಕರ ವಿಷಯಗಳ ಸರಳ ವಿವರಣೆಯಲ್ಲಿ ಅವರ ಪ್ರಭುತ್ವವನ್ನು ಆನಂತರದ ಎಲ್ಲಾ ಅದ್ವೈತ ತತ್ವದ ಬರಹಗಾರರು ಗೌರವದಿಂದ ನೆನಪಿಸಿಕೊಳ್ಳುತ್ತಾರೆ.

ಪರಮಾತ್ಮತತ್ತ್ವವು ಆದಿಗುರುವೆಂದು ಮತ್ತು ತನ್ನ ಗುರುವು ಅದರ ಅಪರಾವತಾರವೆಂದು ಶ್ರೀ ಶಂಕರಾಚಾರ್ಯರ ಈ ಕೃತಿಯು ಹಾಗೂ ಶ್ರುತಿಗಳು ಸಾಧಕರಿಗೆ ತಿಳಿಸಿಕೊಡುತ್ತವೆ ಮತ್ತು ಈ ಆಲೋಚನೆಯು ವೇದಾಂತಗಳು ಅರುಹುವ ಸತ್ಯದ ಅರ್ಥೈಸುವಿಕೆಗೆ ಸಹಕಾರಿಯಾಗಿದೆ. ದಕ್ಷಿಣಾಮೂರ್ತಿ ಸ್ತೋತ್ರದಲ್ಲಿ ಪ್ರತಿಪಾದಿಸಿದ ವಿಷಯಗಳನ್ನು ಅಭ್ಯಸಿಸುವವರಿಗೆ ಆದಿಗುರುವಾದ ಶಿವನ ಸ್ವರೂಪ ಮತ್ತು ಉಪಾಸಿಸುವ ವಿಧಾನವನ್ನು ದಕ್ಷಿಣಾಮೂರ್ತಿ ಉಪನಿಷತ್ತು ವಿಷದೀಕರಿಸುತ್ತದೆ. ನನ್ನ 'ಸಣ್ಣ ಉಪನಿಷತ್ತುಗಳು ಸಂಪುಟ 1' ರಲ್ಲಿ ವಿವರಿಸಿರುವ ಲಕ್ಷಣಗಳಿಗೆ ಈ ಉಪನಿಷತ್ತು ಸರಿಯಾಗಿ ಹೊಂದಿಕೊಳ್ಳುತ್ತದೆ.

ಶ್ರೀ ಸುರೇಶ್ವರಾಚಾರ್ಯರ 'ಮಾನಸೋಲ್ಲಾಸವು' ಆಗಿನಕಾಲದ ಆಧ್ಯಾತ್ಮ ಪರಂಪರೆಗಳನ್ನು ಅನುಸರಿಸುವುದರಿಂದ, ಅದರ ಮೂಲ, ರೀತಿ ಮತ್ತು ಅನುಸರಿಸಿದ ಪರಂಪರೆಯ ನಿಯಮಗಳನ್ನು ಆಧರಿಸಿ ಅದಕ್ಕೊಂದು ಪರಿಚಯಾತ್ಮಕ ವಿವರಣೆಯನ್ನು ಕೊಟ್ಟಿದ್ದೇನೆ. ಇದರಿಂದ ಓದುಗರಿಗೆ ಭಾರತೀಯ ತತ್ವಶಾಸ್ತ್ರದ ಬೆಳಕಿನಲ್ಲಿ ಶಿಖರಪ್ರಾಯವಾಗಿ ಹೊಳೆಯುತ್ತಿರುವ ವೇದಾಂತ ಜ್ಞಾನವು ಕಾಣಿಸಲಿ.

ಅ. ಮಹಾದೇವ ಶಾಸ್ತ್ರಿ

ಮೈಸೂರು

24 ಮೇ, 1899

ಅನುವಾದಕನ ಎರಡುಮಾತು

ಈ ಹೊತ್ತಗೆಯಲ್ಲಿ ಶ್ರೀ ಅಲ್ಲಾಡಿ ಮಹದೇವಶಾಸ್ತ್ರಿ ಮತ್ತು ಪಂಡಿತರತ್ನ ಕೆ. ರಂಗಾಚಾರ್ಯರು ಸಂಗ್ರಹಿಸಿ 1895ರಲ್ಲಿ ಪ್ರಕಟಿಸಿರುವ ಶ್ರೀಶಂಕರ ಭಗವತ್ಪಾದರ ದಕ್ಷಿಣಾಮೂರ್ತಿಸ್ತೋತ್ರ ಮತ್ತು ಶ್ರೀಸುರೇಶ್ವರರು ಬರೆದಿರುವ ಅದರ ವ್ಯಾಖ್ಯಾನ 'ಮಾನಸೋಲ್ಲಾಸ' ಇದರ ಕನ್ನಡ ಅನುವಾದವಿದೆ. ಮಾನಸೋಲ್ಲಾಸಕ್ಕೆ ಶ್ರೀರಾಮತೀರ್ಥರ ವಿವರಣೆಯನ್ನೂ ಮತ್ತು ದಕ್ಷಿಣಾಮೂರ್ತಿಸ್ತೋತ್ರಕ್ಕೆ ಶ್ರೀಸ್ವಯಂಪ್ರಕಾಶಯತಿಗಳ 'ತತ್ತ್ವಸುಧಾ' ವ್ಯಾಖ್ಯಾನವನ್ನೂ ಇದರ ಜೊತೆಗೆ ನೀಡಲಾಗಿದೆ. ಜೊತೆಗೆ ಶ್ರೀಸುರೇಶ್ವರಾಚಾರ್ಯರ ಪಂಚೀಕರಣ (ಪ್ರಣವ) ವಾರ್ತಿಕ ಮತ್ತು ದಕ್ಷಿಣಾಮೂರ್ತಿ ಉಪನಿಷತ್ತುಗಳ ಕನ್ನಡ ಅನುವಾದವೂ ಇದರ ಜೊತೆಗೆ ಇದೆ.

ಇಲ್ಲಿರುವ ಪ್ರಸ್ತಾವನೆಯು ಎರಡನೆಯ ಮುದ್ರಣದಲ್ಲಿರುವಂತಹದು. ಅದರಲ್ಲಿರುವ ವಿಚಾರಗಳು ಆಧ್ಯಾತ್ಮ ಸಾಧಕರಿಗೆ ಪೂರಕವಾಗಿರುವ ಕಾರಣದಿಂದ ಅದನ್ನು ಇಲ್ಲಿ ಸೇರಿಸಿರುವೆನು. ಮತ್ತು ಮಾನಸೋಲ್ಲಾಸ ವ್ಯಾಖ್ಯೆ ಮತ್ತು ವಿವೃತ್ತಿಗಳಲ್ಲಿರುವ ಉಲ್ಲಾಸದ ಹೆಸರುಗಳು ಮತ್ತು ವಿಭಾಗದ ಹೆಸರುಗಳು ಮಹದೇವಶಾಸ್ತ್ರಿಗಳು ನೀಡಿರುವಂತಹದ್ದು, ಅದನ್ನೂ ಹಾಗೆಯೇ ಇಲ್ಲಿ ಉಪಯೋಗಿಸಿಕೊಂಡಿದ್ದೇನೆ.

ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು ಮಾನಸೋಲ್ಲಾಸವನ್ನು ಕನ್ನಡಕ್ಕೆ ಅನುವಾದಿಸಿರುವುದನ್ನು ಆಧ್ಯಾತ್ಮಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ ಅವರು ಪ್ರಕಟಿಸಿರುವರು. ಅದರ ಹೊಸ ಮುದ್ರಣವು ಲಭ್ಯವಿದೆಯೆಂಬುದು ನನಗೆ ತಿಳಿದಿಲ್ಲ. ಆಸಕ್ತರು ಕಾರ್ಯಾಲಯವನ್ನು ಸಂಪರ್ಕಿಸಬಹುದು. ಅದರ ಮುನ್ನುಡಿಯಲ್ಲಿ ಮಾನಸೋಲ್ಲಾಸವು ಶ್ರೀಸುರೇಶ್ವರಾಚಾರ್ಯರ ಕೃತಿಯೆಂಬುದನ್ನು ಸ್ಪಷ್ಟವಾಗಿ ನಿರಾಕರಿಸುತ್ತಾರೆ ಮತ್ತು ಅದಕ್ಕೆ ಸೂಕ್ತ ಕಾರಣಗಳನ್ನೂ ನೀಡುತ್ತಾರೆ. ಅವರು ಮತ್ತೂ ಮುಂದುವರೆದು ದಕ್ಷಿಣಾಮೂರ್ತಿಸ್ತೋತ್ರವು ಕೂಡಾ ಶ್ರೀಶಂಕರಾಚಾರ್ಯರ ಕೃತಿಯಾಗಿರಲಿಕ್ಕಿಲ್ಲ ಎಂಬ ಸಂಶಯವನ್ನೂ ಮುಂದಿಡುತ್ತಾರೆ. ನನ್ನಂತಹ ಪಾಮರನಿಗೆ ಅವರಂತಹ ಶ್ರೇಷ್ಠವಿದ್ವಾಂಸರನ್ನು ನಿರಾಕರಿಸಲು ಸಾಧ್ಯವಿಲ್ಲ ಆದರೂ ನಾನು ತಿಳಿದುಕೊಂಡಿರುವಂತೆ ದಕ್ಷಿಣಾಮೂರ್ತಿಸ್ತೋತ್ರಕ್ಕೆ ಶ್ರೀಶಂಕರರು ಮತ್ತು ಮಾನಸೋಲ್ಲಾಸಕ್ಕೆ ಶ್ರೀಸುರೇಶ್ವರರೇ ಕರ್ತೃಗಳು.

ಶ್ರೀಸಚ್ಚಿದಾನಂದ್ರೇಂದ್ರಸರಸ್ವತಿ ಸ್ವಾಮಿಗಳವರ ಪ್ರಮುಖ ಆಕ್ಷೇಪಣೆಯೆಂದರೆ ಶ್ರೀಶಂಕರರು ತಮ್ಮ ಬ್ರಹ್ಮಸೂತ್ರಭಾಷ್ಯದಲ್ಲಿ ಯಾ ಉಪನಿಷದ್ ಭಾಷ್ಯದಲ್ಲಿ ಹೇಳಿರುವುದನ್ನು ದಕ್ಷಿಣಾಮೂರ್ತಿಸ್ತೋತ್ರದಲ್ಲಿ ಹೇಳಿಲ್ಲ ಮತ್ತು ಶ್ರೀಸುರೇಶ್ವರರೂ ತಮ್ಮ ಗುರುಗಳನ್ನೇ ಅನುಸರಿಸಿದ್ದಾರೆ ಹಾಗೂ ಕೆಲವು ವಿಷಯಗಳನ್ನು ವ್ಯತ್ಯಸ್ತವಾಗಿ ಹೇಳಿದ್ದಾರೆ ಎಂಬುದು. ನನ್ನ ಅಭಿಪ್ರಾಯದಂತೆ ಅದರಲ್ಲಿ ಏನೂ ದೋಷವಿಲ್ಲ. ಏಕೆಂದರೆ ಶ್ರೀಶಂಕರರು ತಮ್ಮ ಹೆಚ್ಚಿನ ಸ್ತೋತ್ರಗಳನ್ನು ರಚಿಸಿರುವುದು ಮಂದಾಧಿಕಾರಿಗಳನ್ನು ಗಮನದಲ್ಲಿಟ್ಟು ಮತ್ತು ವಿವೇಕಚೂಡಾಮಣಿ ಮುಂತಾದ ಪ್ರಬಂಧಗಳನ್ನು ಹಾಗೂ ದಕ್ಷಿಣಾಮೂರ್ತಿಸ್ತೋತ್ರ ಮುಂತಾದ ಕೆಲವು ಸ್ತೋತ್ರಗಳನ್ನು ರಚಿಸಿರುವುದು ಮಧ್ಯಮ ಅಧಿಕಾರಿಗಳನ್ನು ದೃಷ್ಟಿಯಲ್ಲಿಟ್ಟು. ಆದರೆ ಕೆಲವರು ತಮ್ಮ ಹಿಂದಿನಜನ್ಮದ ಸುಕೃತಗಳಿಂದಾಗಿ ಹುಟ್ಟಿನಿಂದಲೇ ಮೇಲ್ಮಟ್ಟದಲ್ಲಿರುತ್ತಾರೆ. ಅಂತಹ ಉತ್ತಮ ಅಧಿಕಾರಿಗಳಿಗೆ ಸ್ತೋತ್ರಗಳ ಅಗತ್ಯವಿಲ್ಲದೆ, ಬ್ರಹ್ಮಸೂತ್ರ ಭಾಷ್ಯವಾಗಲೀ, ಉಪನಿಷದ್ ಭಾಷ್ಯವಾಗಲೀ ಇದ್ದೇ ಇದೆ. ಹೇಗೆ ನಾವು ನೇರವಾಗಿಯಲ್ಲದೆ ಹಂತ ಹಂತವಾಗಿ ಕಲಿತು ಸ್ನಾತಕೋತ್ತರ ಪದವಿಯನ್ನು ಪಡೆಯಲು ಸಾಧ್ಯವೋ, ಅಂತೆಯೇ ಆಧ್ಯಾತ್ಮ ಜ್ಞಾನವನ್ನು ಗಳಿಸುವ ಮಾರ್ಗವೂ ಇದೆ ಎಂದು ನನ್ನ ಅನಿಸಿಕೆ. ಶ್ರೀರಾಮತೀರ್ಥರು ಶ್ರೀಶಂಕರರು ದಕ್ಷಿಣಾಮೂರ್ತಿಸ್ತೋತ್ರದ ಕರ್ತೃವೆಂದು ಮತ್ತು ಶ್ರೀಸುರೇಶ್ವರರು ಮಾನಸೋಲ್ಲಾಸದ ಕರ್ತೃವೆಂದು ನೇರವಾಗಿ ತಮ್ಮ ಮಂಗಳಶ್ಲೋಕದಲ್ಲಿ

ಹೆಸರಿಸಿದ್ದಾರೆ. ಮತ್ತು ಶ್ರೀಸ್ವಯಂಪ್ರಕಾಶಯತಿಗಳು ತಮ್ಮ ವಿವರಣೆಯಲ್ಲಿ ಶ್ರೀಸುರೇಶ್ವರರನ್ನು ನೇರವಾಗಿ ಹೆಸರಿಸದಿದ್ದರೂ, ವಾರ್ತಿಕಕಾರರೆಂದು ಸಂಬೋಧಿಸಿದ್ದಾರೆ.

ಅನುವಾದದಲ್ಲಿ ಮೊದಲಿಗೆ ಮಾನಸೋಲ್ಲಾಸದ ಶ್ಲೋಕಗಳ ಶಬ್ದಾರ್ಥವನ್ನು ಬಳಿಕ ಶ್ರೀರಾಮತೀರ್ಥರ ವಿವರಣೆಯನ್ನೂ ನೀಡಲಾಗಿದೆ. ತತ್ತ್ವಸುಧಾದಲ್ಲಿರುವ ವಿವರಣೆಗಳು ಮಾನಸೋಲ್ಲಾಸದಲ್ಲಿರುವಂತೆ ವಿಸ್ತೃತವಾಗಿಲ್ಲದಿದ್ದರೂ, ಸ್ತೋತ್ರದ ಸಾರಾಂಶವನ್ನು ಗ್ರಹಿಸಲು ಸಹಾಯಕವಾಗಿದೆ.

ಮಂಗಳೂರು ಪಾರೆಂಕಿ ಶಿವಾಜಿ ಅಧಿಕಾರಿ

ಕುಂಭ ಶುಕ್ಲ ತದಿಗೆ, ಶಾರ್ವರಿ

ಪ್ರಸ್ತಾವನೆ

ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯಾರ್ಥಾಃ ಪ್ರಕಾಶಂತೇ ಮಹಾತ್ಮನಃ ॥

ಯಾರಿಗೆ ದೇವರಲ್ಲಿ ಮತ್ತು ಗುರುವಿನಲ್ಲಿ ಶ್ರೇಷ್ಠವಾದ ಭಕ್ತಿಯಿರುವುದೋ, ಅಂತಹಾ ಮಹಾತ್ಮರಿಗೆ ಇಲ್ಲಿ ತಿಳಿಸಿದ ಸತ್ಯಗಳು ಪೂರ್ಣರೂಪದಲ್ಲಿ ಪ್ರಕಾಶಿಸುತ್ತವೆ. (ಶ್ವೇತಾಶ್ವತರ ಉಪನಿಷತ್ 6–23)

ಈ ರೀತಿಯಾಗಿ ಉಪನಿಷತ್ತು ತನ್ನ ವಾದವನ್ನು ಕೊನೆಗೊಳಿಸುತ್ತದೆ ಮತ್ತು ಬೇರೆ ಅನೇಕ ವೇದಾಂತಿಗಳಂತೆ ಶ್ರೀ ಸುರೇಶ್ವರಾಚಾರ್ಯರೂ ಕೂಡಾ ಹೀಗೆಯೇ ತಮ್ಮ ವೇದಾಂತ ತತ್ವಗಳ ವಿವರಣೆಗಳನ್ನು ಕೊನೆಗೊಳಿಸುತ್ತಾರೆ. ಅದು ವೈದಿಕ ಧರ್ಮದ ಮತ್ತು 'ಜ್ಞಾನೋದಯ' (ಸಾಕ್ಷಾತ್ಕಾರ) ಮಾರ್ಗವನ್ನು ಅನುಸರಿಸುವ ಇತರ ಮತಗಳ ಆಧಾರವೂ ಆಗಿದೆ. ಆಧ್ಯಾತ್ಮ ವಿದ್ಯೆಯ ಪ್ರತಿಯೊಬ್ಬ ವಿದ್ಯಾರ್ಥಿಗೂ, ಪ್ರತಿಯೊಬ್ಬ ಸತ್ಯದ ಅನ್ವೇಷಕರಿಗೂ, ಮೇಲಿನ ವಾಕ್ಯದ ಗೂಢಾರ್ಥವನ್ನು ಅರ್ಥೈಸಿ, ಮನನಮಾಡಿಕೊಳ್ಳುವ ಆವಶ್ಯಕತೆಯಿದೆ. ಅದರಂತೆ ಧರ್ಮ ಯಾ ಮತದ ತತ್ತ್ವ ವಿವರಣೆಗಳಲ್ಲಿ, 'ಜ್ಞಾನೋದಯ'ದ ಪಾತ್ರವನ್ನು ಅರಿತುಕೊಳ್ಳುವುದು ಮುಖ್ಯವಾಗಿದೆ. ಭಗವಂತನಿಂದಲೇ ಪ್ರಕಟವಾಗಿದೆ ಎನ್ನಲಾದ ಅತೀ ಪುರಾತನವಾದ ವೇದಗಳು ವಿಭಿನ್ನ ಭಾಗಗಳಿಂದ ಕೂಡಿ, ಅದರ ಹೇಳಿಕೆಗಳು ವಿಭಿನ್ನ ವರ್ಗದ ಜನರಿಗೆ ಅನ್ವಯಿಸುವಂತಿದ್ದು, ಹೆಚ್ಚಿನ ಜನರು ಅದನ್ನು ಸತ್ಯದರ್ಶನದ ಪ್ರಮಾಣವೆಂದು ತಿಳಿದಿದ್ದಾರೆ. ಹಾಗಾಗಿ ಜ್ಞಾನೋದಯವು ಮಾನವನ ಬೆಳವಣಿಗೆಗೆ ಕಾರಣವಾಗಿ, ಅಂತಿಮ ಗುರಿಯೆಡೆಗೆ ಸಾಗುವತ್ತ ಸಹಕಾರಿಯಾಗಿದೆ.

ಮಾನವನ ಅಂತಿಮ ಗುರಿ

ತಾನು ಇತರರೊಡನೆ ಅಥವಾ ಸ್ವತಃ ತನ್ನೊಡನೆ ಮಾಡುವ ನಿತ್ಯದ ವ್ಯವಹಾರದಲ್ಲಿ ಯಾವ ವಿಷಯಗಳಿಗೆ ಪ್ರಾಮುಖ್ಯತೆಯನ್ನು ಕೊಡಬೇಕೆಂಬ ವಿಚಾರದಲ್ಲಿ, ತತ್ತ್ವ ಸಾಹಿತ್ಯಕಾರರಲ್ಲಿ ಬಹಳಷ್ಟು ಅಭಿಪ್ರಾಯಗಳಿದ್ದರೂ, ಅಂತಿಮಗುರಿಯೆಡೆಗೆ ಸಾಗುವಲ್ಲಿ ಸರ್ವೇಸಾಧಾರಣವಾಗಿ ಏಕತೆಯಿದೆ – ಅವನು ತಾನು ಮಾಡುವ ಎಲ್ಲಾ ಕೆಲಸ–ಕಾರ್ಯಗಳಿಂದ ಸಂತೋಷವನ್ನು ನಿಶ್ಚಯವಾಗಿಯೂ ಪಡೆಯಬೇಕು. ಹಾಗಾಗಿ ಒಂದು ಪ್ರಜ್ಞಾಪೂರ್ವಕವಾಗಿ ಶಾಶ್ವತವಾದ ಮತ್ತು ಅಸೀಮವಾದ ಶುದ್ಧ ಆನಂದಮಯ ಅವಸ್ಥೆಯನ್ನು ಹೊಂದುವುದು ಮಾನವನ ಮುಖ್ಯ ಮತ್ತು ಅಂತಿಮ ಗುರಿಯೆಂದು ಹೇಳಬಹುದು. ಅವನನ್ನು ಜಗತ್ತಿನ ಇತರ ಜೀವಿಗಳೊಡನೆ ಹೋಲಿಸಿದರೆ, ಅವನು ತನ್ನ ಗುರಿಯನ್ನು ಸಾಧಿಸಲು ಕೈಗೊಂಡ ಉಪಕ್ರಮಗಳ ಪರಿಶೀಲನೆಯಿಂದ ಇದು ನಮಗೆ ಅರ್ಥವಾದೀತು. ಪ್ರಾಚೀನರು ಮಾನವನ ಬೆಳವಣಿಗೆಯನ್ನು ಕೂಲಂಕಶವಾಗಿ ವಿವರಿಸಿದ್ದು, ಅದು ಇತ್ತೀಚಿನ ವಿಜ್ಞಾನದ ಪ್ರತಿಪಾದನೆಯಾದ ಪ್ರಾಣಿಗಳಿಂದ ಮಾನವನ ಉಗಮದ ವಾದವನ್ನು ಹೋಲುತ್ತದೆ. ಉಪನಿಷತ್ತುಗಳು ಮತ್ತು ಪುರಾಣಗಳು ಇನ್ನೂ ಅನೇಕ ಹಂತಗಳನ್ನು ಪ್ರತಿಪಾದಿಸಿವೆಯಾದರೂ, ಮಾನವನಿಗಿಂತ ಮೊದಲಿನ ಬೆಳವಣಿಗೆಯ ಪ್ರಾಣಿಲೋಕದ ಮೂರುಹಂತಗಳು ಆತ್ಮವು ತನ್ನ ಸಾಕ್ಷಾತ್ಕಾರಕ್ಕಾಗಿ ತನ್ನಿಂದ ಉಪಯೋಗಿಸಲ್ಪಡುವ ದೇಹವನ್ನು ಪೂರ್ಣತೆಯೆಡೆಗೆ ಸಾಗಿಸುವ ಕ್ರಿಯೆಯಾಗಿ ಕಂಡುಬರುತ್ತದೆ. ದೇಹದ ಪೂರ್ಣತೆಯಿಂದ ಅದರಲ್ಲಿರುವ ದೇವತ್ವವು ಸತ್ ಚಿತ್ ಆನಂದರೂಪದಿಂದ ತನ್ನನ್ನು ತಾನು ಪ್ರಕಟಗೊಳಿಸಲು ಸಹಕಾರಿಯಾಗುವುದು ಈ ಬೆಳವಣಿಗೆಯ

ಉದ್ದೇಶವಾಗಿದೆ. ಭೌತಿಕವಾದ ಖನಿಜಗಳ ಸಾಮ್ರಾಜ್ಯದಲ್ಲಿ, ಮೊದಲಿಗೆ ಅವುಗಳು ಅಸ್ಥಿರವಾಗಿದ್ದರೂ, ಭಿನ್ನ ಸ್ಥಿತಿಗಳಲ್ಲಿ ಸ್ಥಿರವಾಗಿರುವ ಬೆಳವಣಿಗೆಯ ಔನ್ನತ್ಯವನ್ನು ಗಳಿಸಿದೆ. ಫಲವಸ್ತುಗಳ ರಾಜ್ಯದಲ್ಲಿ ಸ್ಥಿರತೆಯನ್ನು ಕಳೆದುಕೊಳ್ಳದೆ, ಸಾವಯುವ ಬೆಳವಣಿಗೆಯನ್ನು ಸಾಧಿಸಿರುವುದು ಪ್ರಕೃತಿಯ ನಿಶ್ಚಯವನ್ನು ತಿಳಿಸುತ್ತದೆ. ಪ್ರಾಣಿಗಳ ಲೋಕದಲ್ಲಿ ಅದು ಸ್ಥಿರತೆ ಮತ್ತು ಉನ್ನತ ಸಾವಯವ ಬೆಳವಣಿಗೆಗಳ ಜೊತೆಗೆ ಭಾವನೆ–ಸಂವೇದನೆಗಳನ್ನು ಸೇರಿಸುತ್ತದೆ; ಜ್ಞಾನೇಂದ್ರಿಯಗಳು ಮತ್ತು ಕರ್ಮೇಂದ್ರಿಯಗಳು ತಕ್ಕಮಟ್ಟಿನ ಬೆಳವಣಿಗೆಯನ್ನು ಹೊಂದಿವೆ. ಮಾನವನಲ್ಲಿ ಇನ್ನೂ ಒಂದು ಹೆಜ್ಜೆ ಮುಂದು ಹೋಗಿ ಬುದ್ಧಿ ಮತ್ತು ಆಲೋಚನೆಗಳೊಡನೆ ದೇಹವನ್ನು ಇನ್ನೂ ಉತ್ತಮಗೊಳಿಸಿದೆ. ದೈಹಿಕ ಬೆಳವಣಿಗೆಯು ಅಂತಿಮ ಘಟ್ಟಕ್ಕೆ ಏರುತ್ತಿದ್ದಂತೆಯೇ, ಮಾನಸಿಕ ಬೆಳವಣಿಗೆಯ ವಿವಿಧ ಹಂತಗಳನ್ನು ನಾವು ಇಂದು ಕಾಣುತ್ತಿದ್ದೇವೆ; ವಸ್ತುಗಳ ಅನುಭವ, ಸಂಯೋಜನೆ, ಹೋಲಿಕೆ ಇತ್ಯಾದಿಗಳ ಮೂಲಕ. ಮಾನವನ ಹಾಗೆ ಪ್ರಾಣಿಗಳಲ್ಲಿಯೂ ಇಂದ್ರಿಯಗಳ ಅನುಭವಗಳಿದ್ದರೂ, ಅವು ಒಂದು ಅನುಭವವನ್ನು ಇನ್ನೊಂದಕ್ಕೆ ಸಮೀಕರಿಸಲು ಯಾ ಸಂಬಂಧವನ್ನು ಕಲ್ಪಿಸಲು ಶಕ್ತವಾಗುವುದಿಲ್ಲ. ಅವುಗಳು ಇಂದ್ರಿಯಗಳ ಮೂಲಕ ಪಡೆಯುವ ಸಂವೇದನೆಗಳು ಪ್ರಾಣದಲ್ಲಿ ಚಲಿಸಿ, ಪ್ರಾಣವು ಅದರ ದೈಹಿಕ ಕಾರ್ಯದ ರೂಪದಲ್ಲಿ ಬಾಹ್ಯವಾಗಿ ಕಂಡುಬರುತ್ತದೆ ಹಾಗೂ ಇಂದ್ರಿಯಗಳು ಇನ್ನೂ ಅಧಿಕವಾಗಿ ಬಾಹ್ಯವಸ್ತುಗಳ ಸಂಪರ್ಕಕ್ಕೆ ಬರುತ್ತದೆ. ಪ್ರಾಣಿಗಳಲ್ಲಿ ಜ್ಞಾನ ಮತ್ತು ಕರ್ಮೇಂದ್ರಿಯಗಳು ಒಂದಿನ್ನೊಂದರ ಜೊತೆ ವರ್ತಿಸಿ ಅವುಗಳ ಹೆಚ್ಚಳಕ್ಕೆ ಕಾರಣವಾಗುತ್ತವೆ. ಈ ಕ್ರಿಯೆ–ಪ್ರತಿಕ್ರಿಯೆಗಳ ಸರಣಿಯು ಮಾನವನಲ್ಲಿ ಅಂತರ್ಭೂತವಾಗಿರುವ ಅಂತಃಕರಣದ ಫಲವಾಗಿ ಕಡಿದುಬೀಳುತ್ತದೆ. ಆತ್ಮವು ಪ್ರಕೃತಿಯ ಎಲ್ಲಾ ವಸ್ತುಗಳಲ್ಲಿ ಅಸ್ತಿತ್ವ ಮತ್ತು ಅಹಂಕಾರವಾಗಿ ಇದ್ದರೂ, ಮಾನವನ ಅಂತಃಕರಣದ ಪ್ರತಿಯೊಂದು ಕ್ರಿಯೆಯಲ್ಲಿಯೂ 'ನಾನು' ಎಂಬ ಭಾವನೆಯು ಕ್ಷಣಿಕವಾಗಿ ಕಂಡುಬರುತ್ತದೆ. ಅಂತಃಕರಣವು ಎಲ್ಲಾ ಅನುಭವಗಳೊಡನೆ ಇದ್ದುಕೊಂಡು, ಅವುಗಳನ್ನು ಸ್ವೀಕರಿಸಿ, ಸಂಬಂಧವನ್ನು ಕಲ್ಪಿಸಿ, ವಸ್ತು ಮತ್ತು ವಿಷಯವೆಂದು ವರ್ಗೀಕರಿಸಿ, ಪರಸ್ಪರ ಹೋಲಿಕೆ–ವ್ಯತ್ಯಾಸಗಳನ್ನು ಗಮನಿಸಿ, ನಿಯಮಗಳನ್ನು ಅನುಸರಿಸಿ ತರ್ಕಿಸುತ್ತದೆ ಹಾಗೂ ಇದಮಿತ್ಥಂ (ಇದು ಹೀಗೆಯೇ) ಎಂದು ನಿರ್ಧರಿಸುತ್ತದೆ. ಆಲೋಚನೆಯ ಕರಣಗಳ ಬೆಳವಣಿಗೆಯು ಇಚ್ಛೆಯ ಉತ್ಪತ್ತಿಗೆ ಕಾರಣವಾಗುತ್ತದೆ ಮತ್ತು ಇಚ್ಛೆಯು ಆಲೋಚನೆ ಹಾಗೂ ಜ್ಞಾನದೊಡನೆ ಉನ್ನತಿಯನ್ನು ಹೊಂದುತ್ತದೆ. ಆದುದರಿಂದ ಸರಿಯಾದ ಅಭ್ಯಾಸಗಳಿಂದ ಆಲೋಚನೆ ಮತ್ತು ಇಚ್ಛೆಯನ್ನು ಅವುಗಳ ಪೂರ್ಣತೆಯೆಡೆಗೆ ಬೆಳೆಯಿಸುವುದು ಪ್ರತಿಯೊಬ್ಬ ಮಾನವನ ಅಂತಿಮ ಗುರಿಯಾಗಿದೆ. ದೇಶ, ಕಾಲಗಳ ಮಿತಿಯನ್ನು ಮೀರಿ ಬ್ರಹ್ಮಾಂಡದ ಜ್ಞಾನವನ್ನು ಪಡೆಯುವುದು, ವಿಶ್ವಾತ್ಮನೊಡನೆ ಏಕತ್ವವನ್ನು ಸಾಧಿಸುವವರೆಗೆ ತನ್ನ ಜ್ಞಾನ ಮತ್ತು ಇಚ್ಛೆಯನ್ನು ಉನ್ನತೀಕರಿಸುವುದು, ಸಂಪೂರ್ಣ ವಿಶ್ವವನ್ನು ಅವನ ಉಪಕರಣವಾಗಿ ಕಂಡು ಅವನನ್ನು ಶಾಶ್ವತವಾದ ಶುದ್ಧ ಆನಂದಮಯನಾಗಿ ಸರ್ವವ್ಯಾಪಕನಾಗಿ ಕಾಣುವುದು ಅದಕ್ಕೆ ಪೂರಕವಾಗಿದೆ.

ವ್ಯಷ್ಟಿಯಲ್ಲಿ ಮಾನವನ ವಿಕಾಸ

ಪ್ರಕೃತಿಯಲ್ಲಿ ಆಗಷ್ಟೇ ಉಗಮವಾಗಿ ಮನಸಿನ ಕೆಲಸಗಳು ಆರಂಭಿಕ ಹಂತದಲ್ಲಿರುವ ಒಬ್ಬ ಮನುಷ್ಯನನ್ನು ಈಗಿನ ಕಾಲದ ಒಬ್ಬನೊಡನೊಡನೆ ಹೋಲಿಸಿದರೆ, ಮಾನಸಿಕ ಬೆಳವಣಿಗೆಯ ವ್ಯತ್ಯಾಸಗಳು ಅಗಾಧವಾಗಿವೆ; ದೈಹಿಕ ರೂಪದಲ್ಲಿ ಸಾಮ್ಯತೆಯಿದ್ದರೂ, ಅವರಿಬ್ಬರೂ ಬೇರೆಯೇ ಪ್ರಭೇದಕ್ಕೆ ಸೇರಿದವರೇನೋ ಎನ್ನುವಷ್ಟು. ಆದರೆ ಅಭಿವೃದ್ಧಿಯ ವೇಗವನ್ನು ದೃಷ್ಟಿಸಿದರೆ, ಅದು ಬಹಳ ನಿಧಾನವಾಗಿ, ತಲೆಮಾರಿನಿಂದ ತಲೆಮಾರಿಗೆ ಉತ್ತಮಗೊಳ್ಳುತ್ತಾ ಬಂದಿದೆ. ಅಂದರೆ ಪ್ರತಿಯೊಂದು ಗುಣಲಕ್ಷಣಗಳು ತಮ್ಮ ಹುಟ್ಟಿನ ಸ್ಥಿತಿಯಿಂದ ಪೂರ್ಣ ಬೆಳವಣಿಗೆಯ ಹಂತಕ್ಕೆ ಏರಲು ಬಹಳ ಕಾಲ ತೆಗೆದುಕೊಂಡಿದೆ ಮತ್ತು ಈಗಲೂ ಪ್ರತಿಯೊಂದು ಗುಂಪಿನಲ್ಲೂ

ಬೆಳವಣಿಗೆಯು ವಿವಿಧ ಹಂತಗಳಲ್ಲಿರುವ ವ್ಯಕ್ತಿಗಳನ್ನು ಕಾಣಬಹುದು. ಒಂದೇ ರೀತಿಯ ಪರಿಸರವನ್ನು ಒದಗಿಸಿಕೊಟ್ಟಾಗಲೂ ವಿವಿಧ ವ್ಯಕ್ತಿಗಳಲ್ಲಿ ಕಾಣುವ ವಿವಿಧ ಸ್ತರಗಳ ಮಾನಸಿಕ ಮತ್ತು ತಾತ್ವಿಕ ಬೆಳವಣಿಗೆಗಳಿಂದ, ಪ್ರತಿಯೊಬ್ಬ ವ್ಯಕ್ತಿಯ ಅಹಂಕಾರವು ಅನೇಕ ಜನ್ಮಗಳನ್ನು ಹಿಂದೆ ತಳೆದು ಪ್ರತಿಯೊಂದು ಜನ್ಮದಲ್ಲೂ ಪಡೆದ ಗುಣವಿಶೇಷಗಳನ್ನು ಮುಂದಿನಜನ್ಮಕ್ಕೆ ಮುಂದುವರಿಸಿ ತನ್ನದೇ ಆದ ನಿಶ್ಚಿತ ರೀತಿಯಲ್ಲಿ ಮುಂದೆಯೂ ಪರಿವರ್ತನೆಗೆ ಒಳಪಡುತ್ತದೆಯೆಂದು ಧೃಢವಾಗಿ ನಿಶ್ಚಯಿಸಬಹುದು.

ಅರಿವಿನ ಆವಶ್ಯಕತೆ

ಅಹಂಕಾರವು ತನ್ನ ಬೆಳವಣಿಗೆಯ ಒಂದು ಮಟ್ಟಕ್ಕೆ ತಲುಪಿದಾಗ, ಮುಂದಿನ ಬೆಳವಣಿಗೆಗಳನ್ನು ನಿರ್ದೇಶಿಸಲು ಒಬ್ಬ ಮಾರ್ಗದರ್ಶಕನ ಆವಶ್ಯಕತೆ ಉಂಟಾಗುತ್ತದೆ. ಈ ಮೊದಲಿನ ಬೆಳವಣಿಗೆಗಳು ಹೊರಗಿನ ಪ್ರಭಾವದಿಂದಲೇ ಆಗಿದ್ದರೂ, ಅವುಗಳು ವ್ಯಕ್ತಿಯ ಇಚ್ಛೆ ಮತ್ತು ಆಯ್ಕೆಗಳಿಂದ ಸ್ವತಂತ್ರವಾಗಿ ನಡೆದಿರುತ್ತವೆ. ಒಂದು ಮಾನಸಿಕ ಬೆಳವಣಿಗೆಯ ಹಂತದಲ್ಲಿ, ಅಹಂಕಾರವು ಜಾಗರೂಕತೆಯಿಂದ ತನ್ನ ಆಯ್ಕೆಯನ್ನು ಮತ್ತು ಅದಕ್ಕೆ ಸರಿಯಾದ ಕ್ರಿಯೆಯನ್ನು ನಿರ್ಧರಿಸಬೇಕಾಗುತ್ತದೆ. ಪ್ರಸಕ್ತ ಪರಿಸರದಿಂದ ಸೀಮಿತ ಇಚ್ಛೆ ಮತ್ತು ಜ್ಞಾನದ ನಿಯಂತ್ರಣಕ್ಕೆ ಒಳಗಾಗಿರುವ ಅವನು, ಅದರಲ್ಲಿ ತೃಪ್ತನಾಗದೆ ತಾನು ಬಯಸುವ ಬೆಳವಣಿಗೆಯ ಮುಂದಿನ ಹಂತವನ್ನು ತಲುಪಲು ನಿರಂತರ ಪ್ರಯತ್ನಶೀಲನಾಗಬೇಕು. ತನ್ನ ಇಚ್ಛೆಗೆ ಅನುಸಾರವಾಗಿ ಜಗತ್ತನ್ನು ಚಲಿಸುವಂತೆ ಮಾಡುವ, ಸರ್ವಜ್ಞನಾದ, ಅವನ ಇಚ್ಛೆಯೇ ಜಗತ್ತಿನ ಬೆಳವಣಿಗೆಯ ನಿಯಮವಾಗಿರುವ ಪರಮಾತ್ಮನೊಡನೆ ಏಕತೆಯನ್ನು ಹೊಂದುವುದು ಅಂತಿಮ ಗುರಿಯಾಗಿ, ತನ್ನ ಜ್ಞಾನದ ಮತ್ತು ಅನುಭವದ ಪರಿಧಿಯನ್ನು ವಿಸ್ತರಿಸಿ ಸರಿ–ತಪ್ಪು, ಒಳ್ಳೆಯದು–ಕೆಟ್ಟದ್ದು ಇತ್ಯಾದಿಗಳ ವಿವೇಕವನ್ನು (ವಿಮರ್ಶಾ ಜ್ಞಾನ) ಗಳಿಸಿ, ಪ್ರಯತ್ನದಿಂದ ಸರಿಯಾದ ಮತ್ತು ಒಳ್ಳೆಯ ದಾರಿಯನ್ನು ಆಯ್ದುಕೊಳ್ಳಬೇಕು. ಆಗ ಗುರು ಅಥವಾ ಅವನ ಶ್ರುತಿಯ ರೂಪದ ಬೋಧನೆಗಳು, ಎಲ್ಲವನ್ನೂ ತಿಳಿದಿರುವ ಮತ್ತು ದೃಷ್ಟಿಸುತ್ತಿರುವ ವಿಶ್ವಾತ್ಮನ ಅರಿವನ್ನು ಆ ವ್ಯಕ್ತಿಯಲ್ಲಿ ಮೂಡಿಸುತ್ತದೆ ಹಾಗೂ ಆನಂದರೂಪಿಯಾದ ಅವನನ್ನು ಪಡೆಯುವ ಮಾರ್ಗೋಪಾಯಗಳನ್ನು ತಿಳಿಸಿಕೊಡುತ್ತದೆ. ಆತ್ಮದ ಶಾಶ್ವತತೆ ಮತ್ತು ಆನಂದದ ಗಳಿಸುವಿಕೆಯ ಅರಿವನ್ನು ಬರಿಯ ಸ್ವಜ್ಞಾನದಿಂದ ಪಡೆಯಲು ಕಷ್ಟಸಾಧ್ಯ; ಏಕೆಂದರೆ ಹಿಂದಿನ ಅನುಭವದ ಸಂವೇದನೆಗಳು ದೇಹದಿಂದ ಪ್ರತ್ಯೇಕವಾಗಿರುವ ಆತ್ಮದ ಅಸ್ತಿತ್ವವನ್ನು ಮತ್ತು ಪಾರಮಾರ್ಥಿಕವಾದ ಆನಂದವನ್ನು ಹೊಂದುವ ದಾರಿಯನ್ನು ತಿಳಿಸಿಕೊಡಲು ಅಸಮರ್ಥವಾಗಿವೆ.

ಗುರುಭಕ್ತಿಯು ಅವಶ್ಯ

ವೇದಗಳಲ್ಲಿ ಬೋಧಿಸಿದ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಜೀವನದಲ್ಲಿ ಅಳವಡಿಸಿಕೊಳ್ಳಲು, ನಮಗೆ ವೇದಗಳ ಮೇಲೆ ಅಸೀಮವಾದ ನಂಬಿಕೆಯಿರಬೇಕು, ಅಂದರೆ ಅದನ್ನು ಕಲಿಸುವ ಮತ್ತು ಅದರ ಬೋಧನೆಗಳಿಗೆ ಧ್ವನಿಯಾಗುವ ಗುರುವಿನ ಮೇಲೆ ವಿಶ್ವಾಸವಿರಬೇಕು. ಪದಶಃವಾಗಿ ವೇದ, ಎಂದರೆ ಅರಿವು ಯಾ ಜ್ಞಾನ ಎಂದರ್ಥ; ದೈವಿಕ ಕರುಣಾಮಯಿಗಳಾದ ಋಷಿಗಳಿಂದ ಮಾನವನ ಆಧ್ಯಾತ್ಮಿಕ ಬೆಳವಣಿಗೆಯ ಮಾರ್ಗದರ್ಶನಕ್ಕಾಗಿ ಮಾಡಿದ ಜ್ಞಾನದ ಬೋಧನೆಯೆಂದು ಅದು ತನ್ನ ಪೂಜ್ಯತೆಯನ್ನು ಮತ್ತು ಅಧಿಕಾರವನ್ನು ಗಳಿಸಿದೆ. ಆ ಋಷಿಗಳು ಸತ್ಯದರ್ಶನವನ್ನು ಮಾಡಿದವರಾದುದರಿಂದ, ಸತ್ಯವನ್ನು ಬಿಟ್ಟು ಬೇರೇನನ್ನೂ ನುಡಿಯಲಾರರು; ಹಾಗಾಗಿ ಆಧ್ಯಾತ್ಮಿಕ ಮಾರ್ಗದರ್ಶಕರ ಕಾರ್ಯಗಳು ಅವರ ಕುರಿತಾಗಿ ಅತೀವ ಗೌರವವನ್ನು ಮತ್ತು ಅಸೀಮವಾದ ಪ್ರೀತಿಯನ್ನು ಉಂಟುಮಾಡಿ, ಅವರು ಬೋಧಿಸಿದ ತತ್ತ್ವಗಳ ನಿಜಾರ್ಥವನ್ನು ತಿಳಿಸುತ್ತವೆ. ಗುರುವಿನಷ್ಟೇ ಸ್ಪಷ್ಟವಾಗಿ ಅವರ ಬೋಧನೆಗಳ ನಿಜಾರ್ಥವನ್ನು ತಿಳಿಯಲು, ಹಲವು ಅಂಶಗಳು

ಸಹಕಾರಿಯಾಗಿವೆ; ಶಿಷ್ಯನ ಮನಸು ಗುರುವನ್ನು ಅನುಸರಿಸಲು ತಯಾರಾಗಿದ್ದಿರಬೇಕು, ಗುರುವಿನ ಇಚ್ಛೆಯನ್ನರಿತು ಕಲಿಯುವ ಮನಸಿರಬೇಕು, ಗುರುವಿನಲ್ಲಿ ಸೀಮಾತೀತವಾದ ಪ್ರೀತಿ ಮತ್ತು ಭಕ್ತಿಯಿರಬೇಕು; ಇವು ಗುರುವಿನಿಂದ ಶಿಷ್ಯನೆಡೆಗೆ ಹರಿಯುವ ಜ್ಞಾನಪ್ರವಾಹಕ್ಕೆ ಇರುವ ತಡೆಗಳನ್ನು ನಿವಾರಿಸುತ್ತವೆ. ಮೂಲ ಬೋಧನೆಗಳನ್ನು ನೀಡಿದ ನಿರ್ದಿಷ್ಟ ಗುರುವಿನ ದೈಹಿಕ ಉಪಸ್ಥಿತಿ ಇಲ್ಲದಿದ್ದರೂ, ಅವರ ಬೋಧನೆಗಳಿಗೆ ಧ್ವನಿಯಾಗುವ ಗುರುವಿನ ಉಪಸ್ಥಿತಿ ಸಾಕಾಗುತ್ತದೆ; ಅದೂ ಸಾಧ್ಯವಿಲ್ಲದಿದ್ದರೆ ಶಿಷ್ಯನು ತನ್ನ ಹೃದಯದಲ್ಲಿ ಗುರುವಿನ ರೂಪವನ್ನು ಸ್ಥಾಪಿಸಿಕೊಂಡು ಮುಂದುವರೆಯಬಹುದು. ಸಾಕ್ಷಾತ್ಕಾರದ ಸಮಯದಲ್ಲಿ ಉದಯವಾದ ಜ್ಞಾನದ ತುಣುಕುಗಳು ಬರಹ ರೂಪದಲ್ಲಿರದೆ, ಮೌಖಿಕ ಪರಂಪರೆಯಲ್ಲಿ ಹರಿದುಬಂದಿರುತ್ತದೆ; ಹಾಗಾಗಿ ಅದು ಕಾಲದ ಪ್ರವಾಹದಲ್ಲಿ ಅಪಭ್ರಂಶವಾಗುವ ಸಾಧ್ಯತೆಯಿದೆ. ಈ ಕಾರಣಕ್ಕಾಗಿ, ಅದರ ನಿಜಾರ್ಥವನ್ನು ಅರಿತವರು ತಮ್ಮ ವ್ಯಾಖ್ಯಾನ ವಿವರಣೆಗಳ ಮೂಲಕ ಸರಿಯಾದ ಜ್ಞಾನವನ್ನು ಪಸರಿಸುತ್ತಾರೆ; ಇಂತಹವರು ಮೂಲ ಜ್ಞಾನದ ಬೋಧಕರ ಆಶಯಗಳಿಗೆ ಧ್ವನಿಯಾಗುತ್ತಾರೆ ಹಾಗೂ ಮೂಲ ಗುರುವಿನಷ್ಟೇ ಆದರಣೀಯರಾಗುತ್ತಾರೆ. ಆಧ್ಯಾತ್ಮಿಕ ಬೆಳವಣಿಗೆಯಲ್ಲಿ ಎದುರಾಗುವ ಎಡರು-ತೊಡರುಗಳನ್ನು ಸುಲಭವಾಗಿ ದಾಟಲು, ಗುರುವಿನ ಕುರಿತಾದ ಅರಿವು ಮತ್ತು ಪ್ರೀತಿ ಶಿಷ್ಯನಿಗೆ ಅತೀ ಆವಶ್ಯ.

ಕರ್ಮಕಾಂಡ ಮತ್ತು ಅದರ ಪಾಠಗಳು

ವೇದಗಳಲ್ಲಿ ದಾಖಲಿಸಿದ ಸತ್ಯಗಳು ಮಾನವನ ಬೆಳವಣಿಗೆಗೆ ಸಹಕಾರಿಯಾಗಿವೆ. ಆದರೆ ಭೌತಿಕ ದೇಹದ ಬಾಹ್ಯ ವಸ್ತುಗಳ ಸಂಪರ್ಕದಿಂದಾಗಿ ಇಂದ್ರಿಯಗಳು ಪಡೆದ ಸಂವೇದನೆಗಳ ವಿಶ್ಲೇಷಣೆಯಿಂದ ಬರುವ ಜ್ಞಾನವು, ಭೌತಿಕ ವಿಶ್ವದಾಚೆಗೆ ಅಂದರೆ ತನ್ನ ಸ್ವಂತಿಕೆ, ತನ್ನ ಅಂತಃಕರಣಗಳು ದೇಹದೊಂದಿಗೆ ನಾಶವಾಗುವಂತಹದು ಅಲ್ಲ ಎಂಬುದರ ಕುರಿತು ತಿಳಿಸಲು ಅಸಾಧ್ಯ. ವೇದಗಳು ಭೌತಿಕ ವಿಶ್ವದಾಚೆಗಿನ ಪ್ರಪಂಚದ ಕುರಿತು ಪ್ರಕಾಶವನ್ನು ಚೆಲ್ಲುತ್ತವೆ; ದೇಹ ಮೃತ್ಯುವಶವಾದ ಬಳಿಕ, ಕರ್ಮದ ನಿಯಮಗಳಿಗೆ ಅನುಸಾರವಾಗಿ ಮಾನವನು ಬೇರೊಂದು ಲೋಕದಲ್ಲಿ ಸುಖ-ದುಃಖಗಳನ್ನು ಅನುಭವಿಸುತ್ತಾನೆ. ಮಾನವನು ಪೃಥ್ವಿಯಲ್ಲಿ ಬದುಕಿರುವಷ್ಟು ಕಾಲ, ಅವನ ಅವನ ಜೀವನ ವಿಧಾನವನ್ನು ರೂಪಿಸುವ ನಿಯಮಗಳನ್ನು ತಿಳಿಸಿಕೊಡುವ ವೇದಗಳು, ಅವನ ಅನುಭವ ಮತ್ತು ಅರಿವಿನ ಪರಿಧಿಯನ್ನು ವಿಸ್ತರಿಸುತ್ತವೆ. ಜೀವಿಸಿರುವಾಗ ಪಡೆಯುವ ಸುಖ-ಸಂತೋಷಗಳು ಅವನ ಪ್ರಯತ್ನಗಳ ಮೇಲೆ ಅವಲಂಬಿತವಾಗಿರುವಂತೆ, ಜೀವನಾನಂತರ ಪಡೆಯುವ ಸುಖ-ಸಂತೋಷಗಳು ಜೀವಿಸಿರುವಾಗ ಮಾಡಿದ ವೇದ ನಿರ್ಧರಿತ ಕರ್ಮಗಳನ್ನು ನೇರವಾಗಿ ಅವಲಂಬಿಸಿವೆ; ಹಾಗೂ ಅದರ ಬಳಿಕ ಪುನಃ ಭೂಮಿಯಲ್ಲಿ ಇನ್ನೊಂದು ದೇಹದಲ್ಲಿ ಜನ್ಮ ತಳೆಯುತ್ತಾನೆ, ನಿದ್ದೆಯಿಂದ ಎಚ್ಚೆತ್ತಂತೆ. ಆದುದರಿಂದ ಒಬ್ಬ ಮಾನವನು, ತನ್ನ ಅಂತರಾತ್ಮದ ರೂಪದಲ್ಲಿ, ಭೂಮಿಯಲ್ಲಿ ಮತ್ತು ಅದರಾಚೆಯ ಜಗತ್ತಿನಲ್ಲಿ ಬದುಕಿದ್ದು, ನೋವು-ನಲಿವುಗಳನ್ನು ಅನುಭವಿಸಿ ಒಳಿತು-ಕೆಡುಕುಗಳನ್ನು ವಿಮರ್ಶಿಸುವ ವಿವೇಕವನ್ನು ಗಳಿಸುತ್ತಾನೆ. ವಿವೇಕವು ಅವನ ಅಂತಃಕರಣದಲ್ಲಿದ್ದು ಅವನಿಗೆ ನಿಜಜೀವನದ ಮಾರ್ಗದರ್ಶನವನ್ನು ಮಾಡುತ್ತದೆ.

ತಾನು ಪ್ರಯಾಣಿಸಿದ ಲೋಕಗಳೆಲ್ಲಾ ಒದಗಿಸಿದ ಎಲ್ಲಾ ವೈಶ್ವಿಕ ಸುಖ-ಸಂತೋಷಗಳನ್ನು ಅನುಭವಿಸಿದ ಅಂತಃಕರಣಕ್ಕೆ ಅವುಗಳ ಸೀಮಿತತೆಯ ಅರಿವುಂಟಾಗುವುದು; ಇದರಿಂದಾಗಿ ಐಹಿಕ ಸುಖಗಳ ಸೆಳೆತ ಕಡಿಮೆಯಾಗುವುದು ಮತ್ತು ಮೊದಲಿನಂತೆ ಅವುಗಳ ಸಂಪಾದನೆಗೆ ಪ್ರಯತ್ನಪಡದೆ ಅವುಗಳ ಕಡೆಗೆ ವಿಮುಖವಾಗುವುದು, ತಾನಾಗಿ ಬರುವ ಸುಖಗಳನ್ನೂ ಬಯಸುವುದಿಲ್ಲ. ಆಗ ಅವನಿಗೆ ವೇದಗಳು ಬೋಧಿಸಿದ ಐಹಿಕ ಸುಖಗಳ ನಶ್ವರತೆಯ ಅರಿವಾಗಿ, ಅವು ತನ್ನ ಅಂತರಾತ್ಮನ ಮೂಲಭೂತ ಗುಣಗಳಲ್ಲ

ಎಂದು ತಿಳಿದು ಬರುವುದು; ತಾನು ಅನುಭವಿಸಿದ ವಿವಿಧ ಸ್ತರದ ಸುಖಗಳ ಮಧ್ಯದಲ್ಲಿ ದುಃಖಗಳನ್ನೂ ಅನುಭವಿಸಿ, ಆತ್ಮವು ಅವುಗಳಿಂದ ಪ್ರಭಾವಿತವಾಗಿಲ್ಲವೆಂದೂ ತಿಳಿದುಕೊಳ್ಳುತ್ತಾನೆ. ಹೀಗೆ ಆತ್ಮವು ಭೌತಿಕ ದೇಹದಿಂದ, ಸುಖ-ದುಃಖಗಳಿಂದ, ಅಂಗಗಳಿಂದ ಮತ್ತು ಬಾಹ್ಯ ಸಂತೋಷದ ಮೂಲಗಳಿಂದ ಬೇರೆಯಾಗಿದೆ ಎಂದು ಊಹಿಸುವ ಕ್ಷಮತೆಯುಂಟಾಗುವುದು. ಹೀಗೆ ಯೋಚಿಸುವ ವ್ಯಕ್ತಿಯು ಇಂದ್ರಿಯಗಳ ಹಿಡಿತದಿಂದ ಹೊರಬರಲು ಅಸಹಾಯಕನಾಗಿ ಮೊರೆಯಿಟ್ಟಾಗ, ವೇದದ ತತ್ತ್ವಗಳು ಅಥವಾ ಅದರ ಧ್ವನಿಯಾದ ಗುರುವು ಸಹಾಯಕ್ಕೆ ಬರುತ್ತವೆ; ಆತ್ಮವು ಇಂದ್ರಿಯಗಳು ಮತ್ತು ದೇಹದಿಂದ ಬೇರೆಯೇ ಆದ ಒಂದು ತತ್ತ್ವ ಹಾಗೂ ಈಗಿನ ಅಸಹಾಯಕತೆಯ ಸ್ಥಿತಿಯಿಂದ ಹೊರಬರಲು ಸಾಧ್ಯವಿದೆ ಎಂಬುದರ ಅರಿವನ್ನು ಅವು ಮೂಡಿಸುವುವು. ಮೊದಲ ಹೆಜ್ಜೆಯಾಗಿ, ಅವನು ತನ್ನ ಕರ್ತವ್ಯಗಳನ್ನು ನಿರ್ಮೋಹಿಯಾಗಿ ನಿರಾತಂಕದಿಂದ, ಗುರುವಿನ ಇಚ್ಛೆಯನ್ನು ಪೂರೈಸಲು, ಜಾತಿ ಮತ ಭೇದವಿಲ್ಲದೆ ನಿರ್ವಹಿಸುತ್ತಾನೆ.

ಉಪಾಸನಾಕಾಂಡ ಮತ್ತು ಅದರ ಪಾಠಗಳು

ಶರಣಾಗತಿಯ ಈ ದಾರಿಯಲ್ಲಿ ಮುಂದುವರಿದಂತೆ, ವಿಶ್ವದ ವಿಸ್ತಾರ ಮತ್ತು ವಿವಿಧತೆ ಕುರಿತಾದ ಶಿಷ್ಯನ ಗ್ರಹಿಕೆಗಳು ಅದರಲ್ಲಿ ಸಮ್ಮಿಳಿತವಾದ ವಿವಿಧ ಲೋಕಗಳ ವ್ಯವಸ್ಥೆಯ ವಿಷಯವಾದ ಗುರುವಿನ ಬೋಧನೆಗಳಿಂದ ಒಂದು ನಿಶ್ಚಿತ ರೂಪವನ್ನು ಪಡೆಯುವುದು; ಆ ವ್ಯವಸ್ಥೆಯು ಬ್ರಹ್ಮಾಂಡದ ಭಾಗವಾಗಿರುವುದರಿಂದ, ಅವನು ವಿಶ್ವ ಮತ್ತು ಅದರಲ್ಲಿರುವ ವಸ್ತುಗಳ ಕುರಿತು ಉದಾಸೀನಕರವಾದ ದೃಷ್ಟಿಕೋನವನ್ನು ಹೊಂದುತ್ತಾನೆ. ಈ ಕ್ರಿಯೆಗಳೆಲ್ಲವೂ ಅವನ ಆಲೋಚನೆಗಳನ್ನು ಶುದ್ಧೀಕರಿಸಲು ಮತ್ತು ಬುದ್ಧಿಯನ್ನು ದೃಢಗೊಳಿಸಲು ಅಗತ್ಯವಾಗಿವೆ; ಇದರಿಂದಾಗಿ ಶಿಷ್ಯನು ತಾತ್ವಿಕವಾಗಿ ಮತ್ತು ಬೌದ್ಧಿಕವಾಗಿ ಗುರುವು ಪ್ರಕಟಗೊಳಿಸುವ ಅಂತರಾತ್ಮನ ಸತ್ಯಗಳನ್ನು ಸ್ವೀಕರಿಸಲು ಮತ್ತು ತನ್ನ ಅಂತಿಮ ಗುರಿಯೆಡೆಗೆ ಸಾಗಲು ಸಾಧ್ಯವಾಗುತ್ತದೆ.

ಜ್ಞಾನಕಾಂಡ

ಆಗ ಉಪನಿಷತ್ತುಗಳ ಧ್ವನಿಯಾಗಿರುವ ಗುರುವು ಹೀಗೆ ಉಪದೇಶಿಸುತ್ತಾನೆ: "ಆತ್ಮ ಅಥವಾ ಮಾನವನ ಸ್ವತಂತ್ರವಾದ ಅಸ್ತಿತ್ವವು ಶಾಶ್ವತವಾಗಿದೆ; ಜ್ಞಾನ, ಆನಂದ ಮತ್ತು ಶುದ್ಧತೆ ಅದರ ಮೂಲ ಪ್ರಕೃತಿಯಾಗಿದೆ; ಹುಟ್ಟು-ಸಾವುಗಳಿಗೆ, ಸುಖ-ದುಃಖಗಳಿಗೆ ಅದು ಅಧೀನವಾಗಿಲ್ಲ; ಬ್ರಹ್ಮಾಂಡವೂ ಸೇರಿದಂತೆ ಎಲ್ಲಾ ಜೀವಿಗಳು ಅದರಲ್ಲೇ ಹುಟ್ಟಿ, ಅದರಲ್ಲೇ ಬದುಕಿ, ಅದರಲ್ಲೇ ಲಯವಾಗುತ್ತವೆ; ಹಾಗಾಗಿ ಅದು ಒಂದೇ ಅಸ್ತಿತ್ವವಾಗಿದೆ ಬೇರೆ ಏನೂ ಇಲ್ಲ; ಸಮಷ್ಟಿಯ ಆತ್ಮತತ್ತ್ವದೊಂದಿಗೆ (ಪರಮಾತ್ಮ) ಅದು ಏಕತೆಯನ್ನು ಹೊಂದಿದೆ ಹಾಗೂ ಇದರ ಅರಿವನ್ನು ಗಳಿಸುವುದು ನಮ್ಮ ಅಂತಿಮ ಗುರಿಯಾಗಿದೆ." ತಾನು ಸೀಮಿತ ಜ್ಞಾನ ಹಾಗೂ ಆನಂದವುಳ್ಳ ಅಂತಃಕರಣ ಮಾತ್ರವಲ್ಲ ಎಂದು ಪ್ರಯತ್ನಪೂರ್ವಕವಾಗಿ ಯೋಚಿಸಿದಾಗ ಮಾತ್ರ ಮಾನವನು ಭೌತಿಕ ಸುಖ ಲಾಲಸೆಗಳ ಕಡೆಗೆ ಆಕರ್ಷಿತನಾಗುವುದಿಲ್ಲ; ಚಿದಾನಂದನಾದ ಈಶ್ವರನೊಡನೆ ಐಕ್ಯವಾದಾಗ, ಅವನೊಡನಿರುವ ಜ್ಞಾನ ಮತ್ತು ಆನಂದಗಳು ನಮ್ಮೊಡನೆಯೂ ಇರುತ್ತವೆ.

ಭಕ್ತಿ ಮತ್ತು ಅರಿವು

ಶಿಷ್ಯನಿಗೆ ಈ ಸತ್ಯವನ್ನು ಬೋಧಿಸಿದಾಗ, ಅದು ಹೇಗೆ ಸಾಧ್ಯವೆಂಬ ಸಂದೇಹವು ಸ್ವಾಭಾವಿಕವಾಗಿಯೇ ಅವನ ಮನಸಿನಲ್ಲಿ ಉದಯಿಸಿದರೂ, ಉಪನಿಷತ್ತುಗಳು ಮತ್ತು ಗುರುವು ಮುಂದಿರಿಸಿದ ತರ್ಕದ ಆಧಾರದ ಮೇಲೆ ಅವನು ತನ್ನ ಯೋಚನೆಗಳನ್ನು ವಿಮರ್ಶಿಸಬಹುದು. ಮನಸಿನಿಂದ ಎಲ್ಲಾ ಬಾಹ್ಯ ಆಲೋಚನೆಗಳನ್ನು

ಹೊರಹಾಕಿ ತನ್ನ ಆತ್ಮ, ಗುರು ಮತ್ತು ಈಶ್ವರ ಎಲ್ಲವೂ ಏಕವಾಗಿವೆ, ಅದುವೇ ತನ್ನ ಅಂತಿಮ ಗುರಿ ಹಾಗೂ ಸಾಧನ ಎಂಬ ಭಾವನೆಯಿಂದ ಮುಂದುವರೆದರೆ, ನಿಧಾನವಾಗಿ ಈಶ್ವರನೆಂಬ ಸೂರ್ಯನ ಪ್ರಕಾಶದಿಂದ ಕತ್ತಲೆಯು ಕರಗಿ ಜ್ಞಾನವು ಬೆಳಗುವುದು ಮತ್ತು ಸದಾ ವಿಸ್ತಾರವಾಗುತ್ತಿರುವ ನಿತ್ಯ ಸತ್ಯದ ಅರಿವು ಈಶ್ವರನ ಕುರಿತಾದ ಪ್ರೀತಿ ಮತ್ತು ಭಕ್ತಿಯನ್ನು ಹೆಚ್ಚಿಸುವುದು. ಮನಸು ಮತ್ತು ಬುದ್ಧಿಯು ಶುದ್ಧ ಹಾಗೂ , ಶಾಂತವಾದಾಗ, ಈಶ್ವರನು ಅದರಲ್ಲಿ ತಾನೇ ತಾನಾಗಿ ಪ್ರತಿಫಲಿಸುತ್ತಾನೆ ಮತ್ತು ಮನಸು–ಬುದ್ಧಿಗಳು ಅವನ ಪ್ರಕಾಶದಲ್ಲಿ ಲೀನವಾಗುತ್ತವೆ. ಇಲ್ಲಿಗೆ ಅವನು ತನ್ನ ಗುರಿಯನ್ನು ತಲುಪಿರುತ್ತಾನೆ ಮತ್ತು ಮುಕ್ತನೆನಿಕೊಳ್ಳುತ್ತಾನೆ; ಅವನು ನಿರ್ವಾಣದ (ಪರಮಾತ್ಮ ತತ್ತ್ವ) ಸ್ಥಿತಿಯನ್ನು ಹೊಂದುತ್ತಾನೆ.

ಅಂತಿಮ ಸತ್ಯವನ್ನು ಅರಿಯುವ ಸ್ಥಿತಿಗೆ ಏರಲು ಜ್ಞಾನ ಮತ್ತು ಭಕ್ತಿಯ ಉತ್ಕೃಷ್ಟತೆಯ ಅಗತ್ಯವಿದೆ; ಆತ್ಮಜ್ಞಾನದ ಅರಿವುಂಟಾಗಬೇಕಾದರೆ ವಿವೇಕ ಮತ್ತು ಬುದ್ಧಿಗಳು ಸಮನಾಗಿ ಬೆಳೆದು ಆತ್ಮದ ಬೆಳಕಿನಲ್ಲಿ ಲೀನವಾಗಬೇಕು. ಕೆಲವರು ಹೆಚ್ಚು ವಿವೇಕಯುತರಾಗಿದ್ದರೂ, ಕಡಿಮೆ ಭಕ್ತಿಯುಳ್ಳವರಾಗಿರುತ್ತಾರೆ; ಅಥವಾ ಕಡಿಮೆ ವಿವೇಕವನ್ನು ಹೊಂದಿ ಹೆಚ್ಚು ಭಕ್ತಿಯುಳ್ಳವರಾಗಿರುತ್ತಾರೆ. ಅವೆರಡೂ ಒಂದಕ್ಕೊಂದು ಪೂರಕವಾಗಿ ಬೆಳವಣಿಗೆಯನ್ನು ಹೊಂದಿದಾಗ ಮಾತ್ರ ಅವನಿಗೆ ತನ್ನ, ವಿಶ್ವದ ಹಾಗೂ ಈಶ್ವರನ ಸಂಬಂಧಗಳ ಅರಿವುಂಟಾಗುವುದು. ಹೀಗೆ ಜ್ಞಾನ ಮತ್ತು ಭಕ್ತಿಗಳು ಒಂದು ಇನ್ನೊಂದರೊಡನೆ ವರ್ತಿಸಿ, ಪರಿವರ್ತಿಸಿ ಪರಿಪೂರ್ಣವಾಗುತ್ತವೆ ಮತ್ತು ಆತ್ಮದೊಡನೆ ಒಂದಾಗುತ್ತವೆ.

ತತ್ವಶಾಸ್ತ್ರದ ಉಗಮ ಮತ್ತು ಬೆಳವಣಿಗೆ

ಒಬ್ಬ ವ್ಯಕ್ತಿಗೆ ತನ್ನ ಅಂತಿಮ ಗುರಿಯೆಡೆಗೆ ಸಾಗುವ ದಾರಿಯ ಪ್ರಥಮ ಹೆಜ್ಜೆಯಾಗಿ ಅವನಲ್ಲಿ ತನ್ನ ಮತ್ತು ಸುತ್ತಲಿನ ವಿಶ್ವದ ಹಾಗೂ ತಾನು ವ್ಯವಹರಿಸುವ ಇತರ ಜೀವಿಗಳ ಕುರಿತು ಉತ್ತಮವೇ ಅನ್ನಬಹುದಾದ ವಿವೇಕಪೂರ್ಣವಾದ ಕಲ್ಪನೆ ಇರಬೇಕು. ಪ್ರಾಣಿಗಳ ಸಂವೇದನೆಯ ಮಟ್ಟದಿಂದ ಮುಂದೆ ಸಾಗಿ, ಜ್ಞಾನದ ಒಂದು ಹಂತವನ್ನು ತಲುಪಿದ ಪ್ರತಿಯೊಬ್ಬನಿಗೂ ಪರಿಸರದಲ್ಲಿ ತನ್ನ ಸ್ಥಾನವನ್ನು ಗುರುತಿಸಿಕೊಂಡು ಒಂದು ದಿನ ಸರ್ವವ್ಯಾಪಕನ ಮಟ್ಟಕ್ಕೇರುವ ಅರ್ಹತೆಯಿದೆ. ಅವನ ಪ್ರಯಾಣದಲ್ಲಿ ಅನೇಕ ಸಂದೇಹಗಳು ಕಾಡಬಹುದು ಮತ್ತು ಅವುಗಳಿಗೆ ಸಮಾಧಾನವು ಅನೇಕ ರೀತಿಯಲ್ಲಿ ಸಿಗಬಹುದು; ಕೆಲವು ಬಾರಿ ಅದು ತನ್ನೊಳಗಿನಿಂದ ಬಂದ ಸಲಹೆಯಂತೆ ಅಥವಾ ಇನ್ನೊಬ್ಬರು ಕೊಟ್ಟ ಸೂಚನೆಯಂತೆ ಕಂಡುಬಂದು, ಅದಕ್ಕೊಂದು ನಿರ್ದಿಷ್ಟವಾದ ಆಧಾರವಿಲ್ಲದಿದ್ದರೂ ಅದು ಮಾನ್ಯವಾಗಬಹುದು. ಅಪರೂಪಕ್ಕೆ ಅದು ಸಾಕ್ಷಾತ್ಕಾರದ ರೂಪದಲ್ಲಿ ಬಂದು ಆಧ್ಯಾತ್ಮಿಕ ಸತ್ಯಗಳನ್ನು ತಿಳಿಸಿಕೊಡಬಹುದು. ಇಂತಹ ಬೆಳವಣಿಗೆಗಳು ಅನಾದಿ ಕಾಲದಿಂದ ನಡೆದು ಬಂದಿದ್ದು, ಅದು ನಿಧಾನವಾಗಿದ್ದರೂ ನಿಶ್ಚಿತವಾದ ಅಂತಃಕರಣದ ಉನ್ನತೀಕರಣವನ್ನು ಸಾರುತ್ತದೆ. ಇಂತಹ ಉನ್ನತೀಕರಣದ ಕ್ರಿಯೆಗಳು ಭಿನ್ನ ಪರಿಸರಗಳಲ್ಲಿ ಹೇಗೆ ಕಾರ್ಯತತ್ಪರವಾಗುತ್ತವೆ ಎಂಬುದನ್ನು ಭಾರತೀಯ ತತ್ತ್ವ ಸಾಹಿತ್ಯವು ತುಂಬಾ ಚೆನ್ನಾಗಿ ದಾಖಲಿಸಿವೆ. ಭಾರತೀಯ ಮನಸುಗಳು ಕಂಡುಕೊಂಡಂತಹ ವೈವಿಧ್ಯಮಯವಾದ ತಾತ್ವಿಕ ಪಂಥಗಳು ಕಟ್ಟಾ ಭೌತಿಕವಾದಿಗಳೆನಿಸಿದ ಚಾರ್ವಾಕರಿಂದ ಹಿಡಿದು ಗೂಢವಾದ ಮತ್ತು ಕಟ್ಟಾಆಧ್ಯಾತ್ಮವಾದಿಗಳೆನಿದ ವೇದಾಂತಿಗಳವರೆಗೆ ವ್ಯಾಪಿಸಿವೆ. ಮಾನವನ ವಿವೇಕ–ಬುದ್ಧಿಗಳು ಈ ಎಲ್ಲಾ ಪಂಥಗಳ ತತ್ತ್ವದ ಮೂಲಕ ಸಾಗಿದಾಗ (ಸಾಗಿರುತ್ತದೆ) ಅವನ ಮಾನಸಿಕ ಬೆಳವಣಿಗೆಯ ವಿವಿಧ ಹಂತಗಳನ್ನು ದಾಟುತ್ತದೆ. ವಿಭಿನ್ನ ಪಂಥಗಳು ವಿಭಿನ್ನ ಮನಸ್ಥಿತಿಯ ವ್ಯಕ್ತಿಗಳಿಗೆ ಅಭ್ಯಾಸದ ಅಂಗಳವಾಗಿದ್ದು, ಒಂದು ಇನ್ನೊಂದಕ್ಕೆ ದಾರಿಮಾಡಿಕೊಡುತ್ತದೆ. ಈ ಹಿನ್ನೆಲೆಯಲ್ಲಿ ನಾವು ಪರಾಮರ್ಶಿಸಿದರೆ, ಆರಂಭಿಕ ಹಂತದಲ್ಲಿರುವವರಿಗೆ ಅತ್ಯಂತ ಭೌತಿಕವಾದವಾದ ಚಾರ್ವಾಕರ ತರ್ಕಗಳ ಆವಶ್ಯಕತೆಯು ಕಂಡುಬರುವುದು ಮತ್ತು ಮುಂದೆ ಅವರಿಗೆ

ಭೌತಿಕತೆಯ ಮಹತ್ವ ಕಡಿಮೆಯಾಗಿ ಪಾರಮಾರ್ಥಿಕತೆಯ ಆರಂಭವಾಗಬಹುದು. ಒಬ್ಬ ಪುರಾಣಕಾರನು ಬಲು ಸುಂದರವಾಗಿ ಇದನ್ನು ತಿಳಿಸಿದ್ದಾನೆ:

"ಓ ಮುನಿಗಳೇ, ಸತ್ಯಾನ್ವೇಷಣೆಯ ವಿವಿಧ ಮಾರ್ಗಗಳ ಕುರಿತು ನಾನು ಹೇಳುವುದನ್ನು ಶ್ರದ್ಧೆಯಿಂದ ಕೇಳಿ. ವೇದಗಳು, ಧರ್ಮಶಾಸ್ತ್ರಗಳು, ಪುರಾಣಗಳು, ಭಾರತ, ವೇದಾಂಗಗಳು ಮತ್ತು ಲಘು ವೇದಗಳು; ಕಾಮಿಕ ಮತ್ತು ಇತರ ಆಗಮಗಳು; ಕಪಾಲ ಮತ್ತು ಲಕುಲ ತಮ್ಮ ವೈವಿಧ್ಯಗಳೊಂದಿಗೆ; ಪಾಶುಪತ, ಸೋಮ, ಭೈರವ ಮುಂತಾದ ಆಗಮಗಳು ಮತ್ತು ಅವುಗಳ ನೂರು ವೈವಿಧ್ಯಗಳು; ವೈಷ್ಣವ ಮತ್ತು ಬ್ರಹ್ಮ ಆಗಮಗಳು; ಬೌದ್ಧರ ಮತ್ತು ಅರ್ಹತರ ಆಗಮಗಳು, ಲೋಕಾಯತರ ಮತ್ತು ತರ್ಕಶಾಸ್ತ್ರಗಳು ತಮ್ಮ ವಿಶಾಲತೆಯೊಂದಿಗೆ, ಗೂಢವಾದ ಮೀಮಾಂಸೆಗಳು ಹಾಗೂ ಸಾಂಖ್ಯ ಮತ್ತು ಯೋಗ; ಇವೆಲ್ಲವೂ ಮತ್ತು ಅನೇಕ ಇತರ ಶಾಸ್ತ್ರಗಳನ್ನು ಸರ್ವದೃಷ್ಟಾರ ದೇವತಾ ಪುರುಷನು ಚಿಕ್ಕದಾಗಿ ಸೃಷ್ಟಿಸಿದ್ದಾನೆ. ದೇವತೆಗಳಾದ ಬ್ರಹ್ಮ ಮತ್ತು ವಿಷ್ಣು, ಸಿದ್ಧರು, ವಿದ್ಯಾಧರರು, ಯಕ್ಷರು, ರಾಕ್ಷಸರು, ಮುನಿಗಳು ಮತ್ತು ಮಾನವರು ರುದ್ರನ ಕೃಪೆಯಿಂದ ಮಾತ್ರ ಶಾಸ್ತ್ರಗಳನ್ನು ಲಘುವಾಗಿ ಇಲ್ಲಾ ದೀರ್ಘವಾಗಿ ಪುನಃ ಸೃಷ್ಟಿಸುತ್ತಾರೆ. ಪ್ರತಿಯೊಂದು ಶಾಸ್ತ್ರವು ಒಂದು ನಿರ್ದಿಷ್ಟ ಗುಂಪಿನ ಜನರಿಗಾಗಿ, ಅವರ ವೈಯುಕ್ತಿಕ ಅರ್ಹತೆಗಳಿಗನುಸಾರವಾಗಿ ಇದೆ, ಎಲ್ಲರಿಗಾಗಿ ಅಲ್ಲ ಎಂದು ತಿಳಿದವರು ಹೇಳುತ್ತಾರೆ. ಕಲಿತವರು ಈ ಪಂಥಗಳನ್ನು ಕಷ್ಟಕರವಾದ ಪರೀಕ್ಷೆಗಳಿಗೆ ಒಡ್ಡಬಾರದು. ಎಲ್ಲಾ ನದಿಗಳು ಸಮುದ್ರದಲ್ಲಿ ತಮ್ಮನ್ನು ಖಾಲಿಮಾಡಿಕೊಳ್ಳುವಂತೆ, ಈ ಎಲ್ಲಾ ಮಾರ್ಗಗಳು ಸ್ವತಃ ಮಹೇಶ್ವರನೆಡೆಗೆ ಸಾಗುತ್ತವೆ. ಜನರು ತಾವು ಅನುಸರಿಸುವ ಶಾಸ್ತ್ರವು ತಿಳಿಸಿದ ಯಾವುದೇ ರೂಪದಲ್ಲಿ ಅವನನ್ನು ಆರಾಧಿಸಿದರೂ, ಅವನು ಅದೇ ರೂಪವನ್ನು ಧರಿಸಿ ಅವರನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುತ್ತಾನೆ ಮತ್ತು ಅವನ ಕೃಪೆಯಿಂದ ಮಾನವನು ಉತ್ತಮವಾದ ಪಥವನ್ನು ಅನುಸರಿಸುತ್ತಾನೆ. ಶಾಸ್ತ್ರಗಳು ನಿರೂಪಿಸಿದ ರೂಪದಲ್ಲಿ ಆರಾಧಿಸಲ್ಪಟ್ಟ ದೇವತೆಯು, ಭಕ್ತನನ್ನು ಹಂತ ಹಂತವಾಗಿ ವೇದಮಾರ್ಗಕ್ಕೆ ತಲುಪಿಸುತ್ತದೆ. ವೇದದಲ್ಲಿ ನಿರೂಪಿಸಿರುವ ರೂಪದಲ್ಲಿ ಅದೇ ದೇವತೆಯು ಮುಕ್ತಿಗೆ ಕಾರಣವಾಗುತ್ತದೆ. ಅಲ್ಲಿಯೂ ಕೂಡಾ, ಕರ್ಮಕಾಂಡದಲ್ಲಿ ಹೇಳಿದ ದೇವತೆಯ ರೂಪಗಳು ಜ್ಞಾನದ ಬಯಕೆಯನ್ನು ಉತ್ತೇಜಿಸುತ್ತವೆ ಮತ್ತು ಜ್ಞಾನಕಾಂಡದಲ್ಲಿ ಹೇಳಿದ ರೂಪಗಳು ಅವನನ್ನು ಜ್ಞಾನದ ಮೂಲಕ ಮೋಕ್ಷದೆಡೆಗೆ ಕೊಂಡೊಯ್ಯುತ್ತವೆ.

ಮುಕ್ತಿ ಯಾ ಮೋಕ್ಷವು ಒಂದೇ ಆಗಿರುವುದರಿಂದ (ಅದರಲ್ಲಿ ವಿವಿಧತೆಯಿರಲು ಸಾಧ್ಯವಿಲ್ಲ), ಅದರೆಡೆಗೆ ಸಾಗುವ ಮಾರ್ಗವು ಒಂದೇ ಆಗಿರಬೇಕು ಮತ್ತು ಬೇರೆಲ್ಲಾ ದಾರಿಗಳು ಅದನ್ನೇ ಸೇರಬೇಕು. ಆಚಾರ್ಯ ಶಂಕರರ ವೇದಾಂತದ ಉಪದೇಶಗಳು ಆತ್ಮದ ಹಾಗೂ ಈಶ್ವರನ ಐಕ್ಯತೆ ಮತ್ತು ಅದ್ವಿತೀಯತೆಯ ಕುರಿತು ಗಾಢವಾಗಿ ಬೆಳಕು ಚೆಲ್ಲಿದಷ್ಟು, ಬೇರಾವ ದರ್ಶನಗಳೂ ಸಾಧಿಸಿಲ್ಲ. ಆದುದರಿಂದ ವೇದಗಳಲ್ಲಿರುವ ಜ್ಞಾನವು ಮಾತ್ರ ಮುಕ್ತಿಯೆಡೆಗೆ ಸಾಗುವ ದಾರಿಯನ್ನು ತೋರಿಸುವ ನಿಜವಾದ ಜ್ಞಾನವಾಗಿದೆ. ಬೇರೆ ಪಂಥಗಳಲ್ಲಿ ಪಡೆದ ಜ್ಞಾನವು ಅವಿದ್ಯೆ ಯಾ ಮಿಥ್ಯಾಜ್ಞಾನವಾಗಿದ್ದು ಅವು ಮೋಕ್ಷಮಾರ್ಗದ ದೀಪವಾಗದೆ ವೇದಮಾರ್ಗದೆಡೆಗೆ ಸಾಗುವ ದಾರಿಯನ್ನು ತೋರಿಸುವ ಒಂದು ಮೆಟ್ಟಿಲಾಗಿರುತ್ತದೆ. ವೇದಾಂತದಲ್ಲಿ ತಿಳಿಸಿದ ಮಹಾದೇವನು ಮಾತ್ರ ಮೋಕ್ಷವನ್ನು ಕರುಣಿಸಬಲ್ಲವನಾಗಿದ್ದಾನೆ; ಬೇರೆ ಮತಗಳಲ್ಲಿ ತಿಳಿಸಿದ ರೂಪದಲ್ಲಿ ಆರಾಧಿಸಲ್ಪಟ್ಟ ಅವನು ಭಕ್ತನನ್ನು ನಿಧಾನವಾಗಿ ನೇರವಾದ ದಾರಿಗೆ ಸೆಳೆಯುತ್ತಾನೆ. ಹಾಗಾಗಿ ಒಮ್ಮೆ ವೇದಾಂತದ ದಾರಿಯನ್ನು ಹಿಡಿದ ಜನರು ತಮ್ಮ ಪಥವನ್ನು ಬದಲಿಸುವುದಿಲ್ಲ ಮತ್ತು ಅವರಿಗೆ ಯಾವುದೂ ಅಶಕ್ಯವಾಗುವುದಿಲ್ಲ; ಅಲ್ಲಿಯೇ ಪರಿಪೂರ್ಣ ಅರಿವು ಮತ್ತು ಆನಂದವಿರುವುದು.

ಆದುದರಿಂದ, ಭಿನ್ನ ಅರ್ಹತೆಯುಳ್ಳ ನಿರ್ದಿಷ್ಟ ವ್ಯಕ್ತಿಗಳು ತಮ್ಮ ಅರ್ಹತೆಗನುಸಾರಾಗಿ ಭಿನ್ನ ಪಂಥಗಳನ್ನು ಅನುಸರಿಸುತ್ತಾರೆ. ಬಂಧನದ ಕಾರಣ, ವಿಶ್ವದ ಉತ್ಪತ್ತಿ, ಮುಕ್ತಿ, ಜ್ಞಾನ ಇತ್ಯಾದಿಗಳ ವೇದಾಂತ ವಿವರಣೆಗಳನ್ನು ವಿರೋಧಿಸುವ ಇತರ ಮತಗಳು ಮಾಯೆಯಿಂದುಂಟಾದ ಮಿಥ್ಯಾಜ್ಞಾನವುಳ್ಳವರ ಕುರಿತಾಗಿದೆ; ಅವು ಸತ್ಯದ ವಿವರಣೆಯನ್ನು ನೀಡುತ್ತವೆಯೆಂಬ ಕಾರಣಕ್ಕೆ ಅಲ್ಲದೆ ಅವು ಅವರ ಬಯಕೆಗಳನ್ನು ತೀರಿಸಿಕೊಂಡು ತಕ್ಕಮಟ್ಟಿನ ಮಾನಸಿಕ ನೆಮ್ಮದಿಯನ್ನು ಪಡೆದು ನಿಜ ದಾರಿಯೆಡೆಗೆ ಸಾಗುವ ಮಾರ್ಗವನ್ನು ತೋರಿಸಿಕೊಡುವುದಕ್ಕಾಗಿದೆ. ಹಸಿರು ಹುಲ್ಲನ್ನು ತೋರಿಸಿ ಒಂದು ಉಪದ್ರವಿ ಹಸುವನ್ನು ನಿಯಂತ್ರಿಸುವಂತೆ, ಮಹೇಶ್ವರನು ಐಹಿಕ ಬಯಕೆಗಳ ಪ್ರಲೋಭನೆಯನ್ನು ತೋರಿಸಿ, ಮನಸು ನಿಯಂತ್ರಣಕ್ಕೆ ಬಂದಾಗ ಅಂತಿಮ ಜ್ಞಾನದ ಬೆಳಕನ್ನು ಹರಿಸುತ್ತಾನೆ.

ಹೀಗೆ ಎಲ್ಲಾ ಪಂಥಗಳು ಶಿವನಿಂದಲೇ ನಿರ್ದೇಶಿತವಾಗಿದ್ದು, ಎಲ್ಲವೂ ಸತ್ಯಮಾರ್ಗದ ದರ್ಶಕವಾಗಿವೆ. ಅವನು ನಂಬಿದವರಿಗೆ ಹೇಗೆ ಮೋಸಮಾಡಬಲ್ಲ ? ಅವನು ಕರುಣಾಸಾಗರನು, ಸರ್ವಜ್ಞನು ಮತ್ತು ದೋಷರಹಿತನು. ಎಲ್ಲಾ ದಾರಿಗಳಿಗಿಂತ ವೇದಮಾರ್ಗವು ಅತ್ಯುತ್ತಮ ಮತ್ತು ನೇರವಾಗಿದೆ." (ಸ್ಕಂದ ಪುರಾಣ, ಸೂತ ಸಂಹಿತ, ಯಜ್ಞ-ವೈಭವ-ಕಾಂಡ, 22ನೇ ಅಧ್ಯಾಯ)

ಮನುಷ್ಯ ಜಾತಿಯು ತನ್ನೊಳಗಿನ ವಿವಿಧತೆಯಿಂದ ಮತ್ತು ಗಳಿಸಿರುವ ಬೌದ್ಧಿಕ ಮತ್ತು ಮಾನಸಿಕ ಯೋಗ್ಯತೆಗೆ ಅನುಸಾರವಾಗಿ ಆಲೋಚಿಸುವರೆ ವಿನಃ, ವಿಶ್ವ ಮತ್ತು ಜ್ಞಾನದ ಕುರಿತಾಗಿ ಒಟ್ಟಾಗಿ ಒಂದೇರೀತಿಯಲ್ಲಿ ಕಾರ್ಯವೆಸಗಲಾರರು ಎಂಬುದು ವೈವಿಧ್ಯಮಯ ಪಂಥಗಳ ಮತ್ತು ಮತಗಳ ಕುರಿತು ಪುರಾಣದ ಈ ದೃಷ್ಟಿಕೋನವು ಸೂಕ್ತವಾಗಿದೆ. ಮಾನವನು ಜನಾಂಗೀಯವಾಗಿ ಇತರ ಪ್ರಾಣಿಗಳಿಗಿಂತ ಉತ್ತಮ ಸ್ಥಿತಿಯಲ್ಲಿದ್ದರೂ, ಜನಾಂಗದೊಳಗಿನ ಭಿನ್ನತೆಯಲ್ಲಿ ಬುದ್ಧಿ, ಮಾನಸಿಕ ಸ್ಥಿತಿ, ಜ್ಞಾನದ ಮಟ್ಟದಲ್ಲಿ ಅಥವಾ ರಾಷ್ಟ್ರದ ಮಟ್ಟದಲ್ಲೂ ತುಂಬಾ ಅಂತರ ಕಂಡುಬರುವುದು ಮತ್ತು ಈ ಅಂತರವು ಅವರು ಅನುಸರಿಸುವ ಮತ ಯಾ ಪಂಥದ ಕಾರಣವಾಗಿರುವುದು.

ವಿಷಯಸುಖದ ಬೆನ್ನೇರಿ

ಈ ಹಿಂದೆ ತಿಳಿಸಿದಂತೆ ಮಾನವನ ಅನುಭವಗಳ ಪರಿಧಿಯು ಇಂದ್ರಿಯಗಳ ಸೀಮೆಯನ್ನು ಮೀರಬೇಕಾಗಿ ಬಂದಾಗ, ಅವನು ಪ್ರಾಕೃತಿಕವಾಗಿ ಮತ್ತು ಅವನ ಯೋಚನೆಗಳು ಒದಗಿಸಬಹುದಾದ ವಿಷಯಸುಖಗಳನ್ನು ದಾಟಿ ಹೋಗಲು ಬಯಸುತ್ತಾನೆ. ಆಗ ದೈವಿಕ ಮಾರ್ಗದರ್ಶನದಿಂದ ಯಾ ಗುರುವಿನಿಂದ (ದೈವಿಕವಾಗಿ ಮಾರ್ಗದರ್ಶನ ಮಾಡಲು ನಿಯೋಜಿತರಾದವರು), ಅವನಿಗೆ ನಿಯಮಗಳ ಸಹಿತವಾಗಿ ಹೊಸ ಕಾರ್ಯಕ್ಷೇತ್ರಗಳ ಪರಿಚಯವಾಗುವುದು. ಅವನಲ್ಲಿ ಹೀಗೆ ಸ್ವತಂತ್ರ ಆಲೋಚನೆಗಳು ಬೆಳೆದರೆ, ಸಮಯಾಂತರದಲ್ಲಿ ಅಜ್ಞಾನದಿಂದ ಮತ್ತು ಸ್ವಹಿತಕ್ಕಾಗಿ ಮಾಡುವ ಸಾಮಾನ್ಯ ಕ್ರಿಯೆಗಳ ಬಗೆಗೆ ಅಸಡ್ಡೆ ಮೂಡುವುದು. ಕರ್ಮಠ ವ್ಯವಸ್ಥೆಯ ವಿರೋಧವು ಅವನನ್ನು ಇಂದ್ರಿಯಗೋಚರವಾದ ವಿಷಯಗಳ ಹೊರತಾದ ಎಲ್ಲವೂ, ಸಾಕ್ಷಾತ್ಕಾರದ ಜ್ಞಾನ ಸೇರಿಸಿ, ಮಿಥ್ಯೆಯೆಂಬ ನಿರ್ಧಾರಕ್ಕೆ ಬರುವನು; ತಾರ್ಕಿಕ ಪ್ರಮಾಣವನ್ನು, ಮೃತ್ಯುವಿನ ಆಚೆಯ ಸ್ಥಿತಿಯನ್ನು ನಂಬದ ಪರಿಸ್ಥಿತಿಗೆ ಬಂದಿರುವನು. ಇದು ಅತೀ ಭೌತಿಕತೆಯ ಹಂತವಾಗಿ, ಪ್ರತಿಯೊಂದು ವಸ್ತುವಿನಲ್ಲೂ ಉಪಯೋಗವನ್ನು ಹುಡುಕುವ ಮಟ್ಟಕ್ಕೆ ಬೆಳೆಯುವುದು; ಇದು ಚಾರ್ವಾಕರ ಮತವಾಗಿದೆ. ಇದು ಬಯಕೆಗಳ ಬೆನ್ನೆತ್ತಿ ಹೋಗುವವರನ್ನು ಖುಶಿಪಡಿಸಿದರೂ, ಇದರಿಂದ ಮುಂದೇನು ಎಂದು ಆಲೋಚಿಸುವ ಮತ್ತು ಪ್ರಾಕೃತಿಕ ಆನಂದದಿಂದ ತೃಪ್ತಿ

ಹೊಂದದ ಕೆಲವರನ್ನು ಆಲೋಚಿಸುವಂತೆ ಮಾಡುವುದು. ಇಂತಹವರು ಮುಂದಿನ ಮತದ ಬೆಳವಣಿಗೆಗೆ ಕಾರಣರಾಗುತ್ತಾರೆ.

ಏಕತತ್ವ ಮತ್ತು ಬಹುತತ್ವ ಆಲೋಚನೆಗಳು

ಪ್ರಶ್ನಿಸುವ ಮನೋಭಾವವು ಪ್ರಾಕೃತಿಕ ಮತ್ತು ಬಹುತತ್ವ ಆಲೋಚಕರ ಬುದ್ಧಿಮತ್ತೆಯನ್ನು ಚುರುಕುಗೊಳಿಸುತ್ತದೆ ಮತ್ತು ಅಲ್ಪ ಸಹಾಯದಿಂದ ಮುಂದಿನ ಬೆಳವಣಿಗೆಗಳಿಗೆ ಮುಂದಡಿಯಿಡುವಂತೆ ಮಾಡುತ್ತದೆ. ತಮ್ಮ ಪ್ರಯತ್ನಗಳಿಗನುಸಾರವಾಗಿ ದೊರೆಯುವ ಐಹಿಕ ಲಾಭಗಳಿಗೆ ಮನಸೋಲದೆ, ಅವುಗಳು ತಮ್ಮ ಸಮಯಮಿತಿಯಿಂದ ಚಿಂತೆಗೆ ಕಾರಣವಾಗುತ್ತವೆ ಎಂಬುದನ್ನು ಅರಿತುಕೊಂಡಿರುತ್ತಾರೆ. ಈಗ ಪುನಃ ದೈವಿಕ ಮಾರ್ಗದರ್ಶನವು ದೊರೆತು, ಹುಟ್ಟು–ಸಾವುಗಳ ಚಕ್ರದಿಂದ ಬಿದುಗಡೆಯ ಹಾದಿಯ ಮೇಲೆ ಅಲ್ಪ ಪ್ರಕಾಶವನ್ನು ಹಾಕುತ್ತದೆ. ಹುಟ್ಟು–ಸಾವು, ಸುಖ–ದುಃಖಗಳು ತಾತ್ಕಾಲಿಕ, ಪದಾರ್ಥಗಳನ್ನು ಅವುಗಳ ನಿಜರೂಪದಲ್ಲಿ ಅರಿತುಕೊಂಡಾಗ ದುಃಖ ದೂರವಾಗುವುದು ಮುಂತಾಗಿ ತಿಳಿಸಿಕೊಡುವ ಅದು, ಮುಕ್ತಿಮಾರ್ಗದಲ್ಲಿ ಸಾಗುವ ರೀತಿಯನ್ನು ತಿಳಿಸಿ ಕೊಡುತ್ತದೆ. ಏಕತತ್ವವಾದಿಗಳು ವೇದಾಂತಮಾರ್ಗವನ್ನು ಆಯ್ದುಕೊಂಡರೆ, ಬಹುತತ್ವವಾದಿಗಳು ವೈಶೇಷಿಕ, ನ್ಯಾಯ, ಸಾಂಖ್ಯ, ಯೋಗ ಇತ್ಯಾದಿಗಳನ್ನು ಆಯ್ದುಕೊಂಡು ನಿಧಾನವಾಗಿ ವೇದಾಂತಮಾರ್ಗಕ್ಕೆ ಬರುತ್ತಾರೆ.

ಏಕತತ್ವ ಆಲೋಚನೆಗಳು

ಏಕತತ್ವದ ಆಲೋಚಕರು ತಮ್ಮ ಸಂಗ್ರಹಿತ ಜ್ಞಾನವನ್ನು ವ್ಯವಸ್ಥಿತವಾಗಿ ಮಂಡಿಸುವವರು. ಭೌತಿಕತೆಯ ಆಧಾರದ ಮೇಲೆ ನಿಂತಿರುವ ಚಾರ್ವಾಕಮತವನ್ನು ಖಂಡಿಸುವುದು ಅವರ ಮುಖ್ಯ ಗುರಿ ಹಾಗೂ ಅದಕ್ಕಾಗಿ ಅವರ ವಾದಗಳು ಶುದ್ಧ ಮತ್ತು ಪ್ರಖರವಾಗಿರಬೇಕು. 'ಪ್ರತ್ಯಕ್ಷ'ವನ್ನು ಪ್ರಬಲವಾಗಿ ನಂಬಿರುವ ಚಾರ್ವಾಕರನ್ನು ಸುಮ್ಮನಾಗಿಸುವ ಅವರ ಯತ್ನದ ಫಲವಾಗಿ 'ಅನುಮಾನ'ವೆಂಬ ಹೊಸ ಪ್ರಮಾಣವನ್ನು, (ಇದರಿಂದ ಯಾವುದೇ ತಿಳಿಯತಕ್ಕ ವಸ್ತು–ವಿಷಯಗಳನ್ನು ತಾರ್ಕಿಕವಾಗಿ ತಿಳಿಯಬಹುದು ಮತ್ತು ಪ್ರಮಾಣೀಕರಿಸಬಹುದು) ಹುಟ್ಟುಹಾಕಿದರು. ಬಾಹ್ಯ ವಸ್ತುಗಳ ನಡುವಿನ ಹೋಲಿಕೆ ಮತ್ತು ವ್ಯತ್ಯಾಸಗಳ ಸಂಬಂಧವು ತರ್ಕದ ನಿಯಮಗಳನ್ನು ರೂಪಿಸುತ್ತದೆ; ಗ್ರಹಿಸುವವನ ಅನುಭವಕ್ಕೆ ಬಾಹ್ಯವಾಗಿರುವ, ಇಂದ್ರಿಯಗಳ ಸಂವೇದನೆಗೆ ಸರಕಾಗಿರುವ ವಸ್ತು–ವಿಷಯಗಳು ಈ ವರ್ಗಕ್ಕೆ ಸೇರುತ್ತವೆ. ಆದರೆ ಅದೇ ನಿಯಮಗಳನ್ನು ಇಂದ್ರಿಯಗೋಚರವಲ್ಲದ ವಸ್ತು–ವಿಷಯಗಳಿಗೆ ತಳಕುಹಾಕಿದರೆ, ನಾವು ಗ್ರಹಿಸುವ ಕಾರ್ಯಗಳ ಹಿಂದಿನ ಕಾರಣಗಳಂತೆ, ಆಗ ದೊರೆಯುವ ಉತ್ತರಗಳು ಸಮಾಧಾನಕರವಾಗಿರುವುದು ಕಷ್ಟಸಾಧ್ಯ. ಉದಾಹರಣೆಗೆ ಆತ್ಮದ ಪ್ರಕೃತಿಯನ್ನು ವಿಶ್ಲೇಷಿಸಿದಾಗ, ಅದು ಅವನು ಅನುಭವಿಸಿದ ಬೇರೆಲ್ಲದ್ದಕ್ಕಿಂತಲೂ ಭಿನ್ನವಾಗಿದ್ದು, (ಅದು ಅನುಭವಿಸುವುದು ಮತ್ತು ಇತರ ವಸ್ತು–ವಿಷಯಗಳು ಅದರ ಅನುಭವದ ಸರಕು), ಸಿಗುವ ಉತ್ತರಗಳು ಶ್ರುತಿಯಲ್ಲಿ ತಿಳಿಸಿದಂತೆ ಇರಲಾರದು. ಆದರೆ ಈ ರೀತಿಯ ಹುಡುಕಾಟಗಳು ಪೂರ್ಣ ಸಮ್ಮತವಾದ ಅಲ್ಲದಿದ್ದರೂ, ಒಂದು ಸಮಾಧಾನಕರವಾದ ಸಹಮತವನ್ನು ಒದಗಿಸಿಕೊಡುತ್ತವೆ.

ತಾರ್ಕಿಕರ ನಿಯಮಗಳು

ವಿಶ್ವವು ಅತೀ ಸೂಕ್ಷ್ಮ ಪರಮಾಣುಗಳಿಂದ, ಸರ್ವಜ್ಞ ಮತ್ತು ಸರ್ವಶಕ್ತನಾದ ಈಶ್ವರನ ಇಚ್ಛೆಗನುಸಾರವಾಗಿ ಮಾಡಲ್ಪಟ್ಟಿವೆಯೆಂದು ತಾರ್ಕಿಕರು (ವೈಶೆಷಿಕರು ಮತ್ತು ನೈಯ್ಯಾಯಿಕರು) ನಂಬುತ್ತಾರೆ. ಆತ್ಮವು ಸ್ವತಃ

ಜಡವಾಗಿದ್ದು, ಮನಸಿನೊಡನೆ ಸಂಯೋಗಹೊಂದಿ ಚೈತನ್ಯಯುತವಾಗಿ ಸುಖ–ದುಃಖಗಳ ಸಂವೇದನೆಯನ್ನು ಪಡೆಯುತ್ತದೆ. ಶಾಶ್ವತವಾದ ಆತ್ಮವು ಅಜ್ಞಾನದಿಂದ ದೇಹ ಇತ್ಯಾದಿಗಳೊಡನೆ ಗುರುತಿಸಿಕೊಂಡು, ದೇಹದೊಡನೆ ತನಗೂ ಹುಟ್ಟು–ಸಾವುಗಳಿವೆ ಎಂದು ತಿಳಿದು ತುಂಬಾ ನೋವುಗಳನ್ನು ಅನುಭವಿಸುತ್ತದೆ. ಈ ನೋವಿನಿಂದ ಮುಕ್ತಿಯನ್ನು ಪಡೆಯಲು ದೈವಿಕ ಮಾರ್ಗದರ್ಶನದಿಂದ ಅಜ್ಞಾನವನ್ನು ಕಳೆದು ಸತ್ಯದ ಅರಿವನ್ನು ಹೊಂದುವುದು, ಒಂದು ದಾರಿಯಾಗಿದೆ. ತಪ್ಪು ಕಲ್ಪನೆಗಳು ನಶಿಸಿದಾಗ ಎಲ್ಲಾ ಕೆಟ್ಟ ಬಯಕೆಗಳು ನಾಶವಾಗುತ್ತವೆ; ಅದರೊಂದಿಗೆ ಕ್ರಿಯೆಗಳು ನಿಲ್ಲುತ್ತವೆ ಮತ್ತು ಜನಿಸುವ ಕಷ್ಟ ತಪ್ಪುತ್ತದೆ. ಇದು ದುಃಖಗಳನ್ನು ದೂರಮಾಡುತ್ತದೆ ಹಾಗೂ ಇದೇ ಅಂತಿಮವಾಗಿ ಆನಂದವನ್ನು ಕೊಡುತ್ತದೆ. ಮನಸಿನಿಂದ ದೂರವಾದ ಆತ್ಮವು, ತಾನು ಜಡವಾದುದರಿಂದ ಬಾಹ್ಯವಾದ ಯಾವುದರ ಸಂವೇದನೆಯನ್ನೂ ಹೊಂದುವುದಿಲ್ಲ.

ಸಾಂಖ್ಯರ ತತ್ವಗಳು

ಭೌತಿಕವಾದ ವಿಶ್ವವು, ಸರ್ವವ್ಯಾಪಕ ಮತ್ತು ಜಡವೆನಿಸಿದ 'ಪ್ರಧಾನ'ವೆಂಬ ವಸ್ತುಮೂಲದಿಂದ, ಈಶ್ವರನೆಂಬ ಚೈತನ್ಯದ ಪ್ರಭಾವದಿಂದ ಉಗಮಿಸಿದೆ ಎಂದು ಕೆಲವು ಸಾಂಖ್ಯರು ನಂಬಿದ್ದಾರೆ; ಉಳಿದವರು ಈಶ್ವರನ ಅಸ್ತಿತ್ವವನ್ನು ಹೇಳದೆ, ಪ್ರಧಾನವೇ ತಾನಾಗಿ ಪರಿವರ್ತನೆಗೊಂಡು ಬಹುಮುಖವಾದ ಜಗತ್ತಿನ ಉತ್ಪತ್ತಿಗೆ ಕಾರಣವಾಗುತ್ತದೆ ಎಂದು ಹೇಳುತ್ತಾರೆ. ತಮ್ಮೊಳಗೆ ಅವಲಂಬನೆಯನ್ನು ಹೊಂದಿರುವ ಪ್ರಕೃತಿ ಮತ್ತು ಆತ್ಮದಿಂದ ಸೃಷ್ಟಿಯ ಆರಂಭವಾಗುತ್ತದೆ ಎಂದು ಅವರು ತಿಳಿದಿದ್ದಾರೆ. ಆತ್ಮವು ನೋವನ್ನು ಅನುಭವಿಸದಿದ್ದರೂ, ಅದು ಪ್ರಕೃತಿಯಿಂದ ಉತ್ಪತ್ತಿಯಾಗಿರುವ ಚಿತ್ತದೊಡನೆ ತನ್ನನ್ನು ತಾನು ಸಮೀಕರಿಸಿಕೊಳ್ಳುವುದರಿಂದ ಎಲ್ಲಾ ದುಃಖಗಳು ಉಂಟಾಗುತ್ತವೆ. ಸತ್ಯದ ಕುರಿತಾದ ಆಲೋಚನೆಗಳಿಂದ, ಆತ್ಮವು ತಾನು ಪ್ರಕೃತಿಯಿಂದ ಬೇರೆಯಾಗಿರುವ ಅರಿವನ್ನು ಗಳಿಸುತ್ತದೆ ಮತ್ತು ಅಂತಿಮವಾಗಿ ದೂರವಾಗುತ್ತದೆ. ಅಲ್ಲಿಗೆ ಕೈವಲ್ಯ ಅಥವಾ ಏಕಾಂತತೆಯನ್ನು ಹೊಂದಿದಂತಾಗುವುದು ಮತ್ತು ಅದು ಅಂತಿಮವಾಗಿ ಆನಂದವನ್ನು ನೀಡುತ್ತದೆ. ಈ ಸ್ಥಿತಿಯಲ್ಲಿ, ಆತ್ಮವು ಶುದ್ಧಜ್ಞಾನವಾಗಿರುವುದು ಮತ್ತು ಪ್ರಕೃತಿಯು ಆತ್ಮದ ದೃಷ್ಟಿಗೋಚರವಾಗಿರುವುದು.

ಬೌದ್ಧ ತತ್ವಗಳು

ನೈಯ್ಯಾಯಿಕರು ಮತ್ತು ಸಾಂಖ್ಯರು ತಮ್ಮ ಪ್ರತಿಪಾದನೆಯನ್ನು ಸಾಕ್ಷಾತ್ಕಾರದಲ್ಲಿ ದೊರೆತ ವಿವರಣೆಯ ಆಧಾರದಲ್ಲಿಯೇ ಮಾಡಿದ್ದಾರೆಯೇ ಹೊರತು ಅದನ್ನು ವಿರೋಧಿಸಿ ಅಲ್ಲ. ಆದರೆ ಬಹುತತ್ತ್ವವಾದಿಗಳಿಗೆ ವೇದದ ಆಲೋಚನೆಗಳನ್ನು ಮತ್ತು ಕರ್ಮಕಾಂಡವನ್ನು ಅನುಸರಿಸುವುದು ಕಷ್ಟಕರವಾದುದರಿಂದ, ಅವರು ಇಂದು ತನ್ನ ಕರ್ಮವನ್ನು ಮಾಡಿ, ಮುಂದೆ ಅದರ ಫಲವನ್ನು ಅನುಭೋಗಿಸುವ ನಿರಂತರತೆಯುಳ್ಳ ಆತ್ಮದ ಅಸ್ತಿತ್ವವನ್ನು ಅಲ್ಲಗಳೆಯುತ್ತಾರೆ. ವೇದಜ್ಞಾನ ಮತ್ತು ಕರ್ಮಗಳ ಬದಲಿಗೆ ಅವರು ತಮ್ಮ ಒಬ್ಬ ಸರ್ವಜ್ಞನಾದ ಆಲೋಚಕನು (ಬುದ್ಧ ಯಾ ಅರ್ಹತ) ಬೋಧಿಸಿದ ನೈತಿಕತೆಯ ವಿಚಾರಗಳನ್ನು ಮುಂದಿಡುತ್ತಾರೆ. ಬೌದ್ಧರು ಹೀಗೆ ಹೇಳುತ್ತಾರೆ: ಈಶ್ವರನೆಂಬವನು ಇಲ್ಲ, ನಿರಂತರ ಅಸ್ತಿತ್ವವುಳ್ಳ ಮತ್ತು ವಿಶ್ವದ ಜನಕನಾದ ದೇವರೆಂಬವುದು ಇಲ್ಲ. ಜಗತ್ತಿನಲ್ಲಿರುವ ಎಲ್ಲವೂ, ಆತ್ಮವೂ ಸೇರಿ, ಸ್ವಯಂ ಉತ್ಪತ್ತಿಯಾದವುಗಳು ಮತ್ತು ಕೆಲವು ಸಮಯ ಅಸ್ತಿತ್ವವನ್ನು ಹೊಂದಿರುತ್ತವೆ ಹಾಗೂ ಅದರ ಮೊದಲೂ ಯಾ ಆನಂತರವೂ ಅವುಗಳು ಇರುವುದಿಲ್ಲ. ಎಲ್ಲವೂ ನೋವನ್ನುಂಟುಮಾಡುವವಾಗಿವೆ; ಅಜ್ಞಾನ ಮತ್ತು ಪ್ರಾರಬ್ಧಕರ್ಮಗಳ ದೆಸೆಯಿಂದ ಆತ್ಮ ಮತ್ತು ವಿಶ್ವವನ್ನು ನಿರಂತರವಾದ ಅಸ್ತಿತ್ವವನ್ನು ಹೊಂದಿರುವಂತೆ

ಭಾವಿಸುವುದು ಆತ್ಮದ ಬಂಧನಕ್ಕೆ ಕಾರಣವಾಗುತ್ತದೆ. ಸತ್ಯದ ಕುರಿತಾದ ಧ್ಯಾನದಿಂದ ಎಲ್ಲವೂ ದುಃಖಕಾರಕ, ಕ್ಷಣಿಕ, ಸ್ವಯಂಕೃತ ಮತ್ತು ಹಿಂದೆಯೂ ಮುಂದೆಯೂ ಅಸ್ತಿತ್ವವಿಲ್ಲದ್ದು ಎಂದು ಅರಿತ ಆತ್ಮವು ತನ್ನ ಮತ್ತು ಇತರೆಲ್ಲದರ ಕ್ಷಣಿಕತೆಯನ್ನು ಗುರುತಿಸಿದಾಗ ಮುಕ್ತಿಯು ದೊರೆಯುವುದು. ಬಾಹ್ಯ ಇಂದ್ರಿಯಗಳಿಂದ ಪ್ರಭಾವಿತವಾಗದ ಶುದ್ಧವಾದ ಅನಿರ್ಬಂಧಿತ ಜ್ಞಾನದ ಸ್ಥಿತಿಗಳು ಒಂದರಹಿಂದೊಂದು ನಿರಂತರವಾಗಿ ಉಂಟಾದಾಗ, ಅದನ್ನು ಮುಕ್ತಿಯೆನ್ನುತ್ತಾರೆ; ಅಥವಾ ಶೂನ್ಯವಾದಿಗಳ ಪ್ರಕಾರ ಎಲ್ಲವೂ, ಆತ್ಮವನ್ನೂ ಸೇರಿಸಿ, ಶುದ್ಧವಾದ ಶೂನ್ಯವೆಂದು ಅರಿವಾಗುವುದು ಮುಕ್ತಿ.

ಅರ್ಹತರ ತತ್ವಗಳು

ಆದರೆ ಅರ್ಹತರನ್ನು ಅನುಸರಿಸುವವರು, ಬೌದ್ಧರ ಕ್ಷಣಿಕತೆಯ ವಾದವನ್ನು ನಿರಾಕರಿಸಿ, ವಿಶ್ವಕ್ಕೆ ನಿರಂತರ ಅಸ್ತಿತ್ವದ ಲಾಭವನ್ನು ಕೊಡುತ್ತಾರೆ. ಹಾಗೆಯೇ ಆತ್ಮವೂ ಶಾಶ್ವತವೆಂದು ತಿಳಿದು, ಅದು ಸೂಕ್ಷ್ಮವೂ ಅಲ್ಲ ಸ್ಥೂಲವೂ ಅಲ್ಲ ಅದು ಒಂದು ನಿರ್ದಿಷ್ಟವಾದ ಸ್ಥಳವನ್ನು ಆಕ್ರಮಿಸುತ್ತದೆ; ಇಂದು ಮಾಡಿದ ಕಾರ್ಯಗಳ ಫಲವನ್ನು ಮುಂದೆ ಅನುಭವಿಸುತ್ತದೆ ಎಂದು ತಿಳಿಸುತ್ತಾರೆ. ಬೌದ್ಧರಂತೆ ಶಾಶ್ವತವಾದ ದೇವರ ಅಸ್ತಿತ್ವವನ್ನು ನಂಬದಿದ್ದರೂ, ದೋಷಗಳನ್ನೆಲ್ಲಾ ಮೀರಿದ, ಆತ್ಮದ ಬೆಳವಣಿಗೆಯಲ್ಲಿ ಬಂಧನಗಳೆಂಬ ಮೋಹಪಾಶಗಳನ್ನೆಲ್ಲಾ ಕಿತ್ತೊಗೆದ ಒಬ್ಬ ಸರ್ವಜ್ಞನ ಅಸ್ತಿತ್ವವನ್ನು ಒಪ್ಪಿಕೊಳ್ಳುತ್ತಾರೆ. ವೈಯುಕ್ತಿಕ ಕರ್ಮಗಳ ದೆಸೆಯಿಂದ ವಿಶ್ವವು ಪರಮಾಣುಗಳಿಂದ ರೂಪುಗೊಂಡಿದೆ; ಎಲ್ಲವೂ ಕೆಲವು ಶಾಶ್ವತ ಮತ್ತು ಕೆಲವು ಅಶಾಶ್ವತ ವಸ್ತುಗಳಿಂದ ಮಾಡಲ್ಪಟ್ಟಿವೆ. ಪಾಪಕರ್ಮಗಳಿಂದ ಮತ್ತು ಕೆಟ್ಟ ಆಲೋಚನೆಗಳಿಂದ ಆತ್ಮವು ವಿವಿಧ ದೇಹಗಳಿಂದ ಸೀಮಿತ ಅವಕಾಶದಲ್ಲಿ ತುಂಬಿಕೊಳ್ಳುವುದನ್ನು ಬಂಧನವೆನ್ನುತ್ತಾರೆ. ಅಸ್ತಿತ್ವ ಮತ್ತು ಬಂಧನದ ಕಾರಣಗಳ ನಾಶದಿಂದಾಗುವ ಬಿಡುಗಡೆಯು ಮುಕ್ತಿಯಾಗಿದೆ. ಅದು ಉನ್ನತ ಸ್ತರದಲ್ಲಿದೆ, ಆತ್ಮವು ಆನಂದದಲ್ಲಿ ಲೀನವಾಗಿರುವುದು, ತಡೆಯಿಲ್ಲದ ಜ್ಞಾನವಿರುವುದು ಮತ್ತು ದುಃಖ ಹಾಗೂ ಅದರ ನೆನಪುಗಳು ಆನಂದವನ್ನು ಕಳಂಕಿಸಲಾರದು. ಅದು ಅರ್ಹತರ ಉಪದೇಶಲ್ಲಿ ಇರುವ ದೃಢವಾದ ನಂಬಿಕೆಯಿಂದ ದೊರೆಯುವ ನಿಜಜ್ಞಾನದಿಂದ, ಒಳ್ಳೆಯ ನಡತೆಯಿಂದ ಮತ್ತು ಕೆಟ್ಟಕಾರ್ಯಗಳನ್ನು ದೂರಮಾಡುವುದರಿಂದ ಸ್ಥಿರವಾಗುವುದು.

ತರ್ಕದ ಪ್ರತಿಕ್ರಿಯೆಗಳು

ಚಾರ್ವಾಕರಂತಹ ಭೌತಿಕವಾದಿಗಳ ವಿರುದ್ಧದ ಹೋರಾಟದಲ್ಲಿ, ಚಿತ್ತವು ಅತ್ಯುತ್ತಮವಾದ ಪ್ರತಿಕ್ರಿಯೆಯನ್ನು ತೋರಿದೆ ಹಾಗೂ ಅದರಿಂದಾಗಿ ತರ್ಕಶಾಸ್ತ್ರದ ಬೆಳವಣಿಗೆಯಾಗಿದೆ. ಎಲ್ಲವನ್ನೂ ತಾರ್ಕಿಕವಾಗಿ ನಿಜವೆಂದು ಸಾಧಿಸಲು ತೊಡಗಿದಾಗ, ಕೆಲವು ಸಾಮಾನ್ಯ ಸಮಸ್ಯೆಗಳನ್ನು ಹೊರತುಪಡಿಸಿ, ಉಳಿದವುಗಳಿಗೆ ಭಿನ್ನ ಉತ್ತರಗಳು ದೊರೆಯಬಹುದು. ಆಧ್ಯಾತ್ಮಿಕ ಸಮಸ್ಯೆಗಳಿಗೆ ಉತ್ತರಗಳನ್ನು ಹುಡುಕುವಾಗ, ಪ್ರತಿಯೊಬ್ಬ ತಾರ್ಕಿಕನೂ ಭಿನ್ನ ಪರಿಹಾರವನ್ನು ಹೇಳಿದಾಗ ಹಲವು ವಿರೋಧಾಭಾಸವುಳ್ಳ ವ್ಯವಸ್ಥೆಗಳು ಉದ್ಭವವಾಗಿ, ಅದರ ಪ್ರತಿಕ್ರಿಯೆಗಳು ಕಾಣಬರುವುದು. ಇಂದ್ರಿಯಗೋಚರವಲ್ಲದ ವಿಷಯಗಳ ವಿಚಾರಮಾಡುವಾಗಲಂತೂ, ತರ್ಕದ ಉತ್ತರಗಳು ನಿಜಜ್ಞಾನಕ್ಕಿಂತ ಬೇರೆಯೇ ಆಗಿರಬಹುದು. ಮೂಲತಃ ತರ್ಕದ ನಿಯಮಗಳು ಇಂದ್ರಿಯಗೋಚರ ವಸ್ತು–ವಿಷಯಗಳ ಸಂಬಂಧದ ಕುರಿತಾಗಿವೆ; ಮತ್ತು ಇಂದ್ರಿಯಗಳು ತಮಗೆ ಗೋಚರಿಸುವ ವಸ್ತು–ವಿಷಯಗಳಿಗೆ ತಮ್ಮದೇ ಆದ ಬಣ್ಣ ರೂಪಗಳನ್ನು ಒದಗಿಸಿ, ಅವುಗಳ ಮೂಲ ಸ್ವರೂಪದಿಂದ ಭಿನ್ನವಾಗಿ ಕಾಣುವಂತೆ ಮಾಡಬಹುದು. ಹೀಗೆ ಬೌದ್ಧಿಕ ಕಸರತ್ತಿನ ಆಧಾರವುಳ್ಳ ಈ ಶಾಸ್ತ್ರವು,

ವಸ್ತು–ವಿಷಯಗಳನ್ನು ತಿಳಿಯಲು ಬಳಸುವ ಉಪಕರಣಗಳ ನ್ಯೂನತೆಯಿಂದ ತಪ್ಪು ತಿಳುವಳಿಕೆಗಳಿಗೆ ಕಾರಣವಾಗುವುದು.

ವೇದಗಳನ್ನು ವ್ಯಾಖ್ಯಾನಮಾಡುವ ಸರಿಯಾದ ರೀತಿ

ದರ್ಶಿತ ಸತ್ಯಗಳನ್ನು ತಿರುಚಿ ತೋರಿಸುವ ವಾದಗಳನ್ನು ಸರಿದಾರಿಯಲ್ಲಿ ತರಲು, ಪ್ರಥಮವಾಗಿ ದರ್ಶಿತ ಸತ್ಯಗಳನ್ನು ನಿಜರೂಪದಲ್ಲಿ ಅರ್ಥಮಾಡಿಕೊಳ್ಳಬೇಕು ಮತ್ತು ಅದನ್ನು ನಿಜಜೀವನದ ಅನುಭವಗಳೊಂದಿಗೆ ತಾಳೆಹಾಕಬೇಕು. ಈ ಕ್ರಿಯೆಯಲ್ಲಿ ಅನುಭವ ಆಧಾರಿತ ತರ್ಕದ ಮೂಲಕ ಸಾಧಿಸಬಹುದಾದ ತಥ್ಯಗಳು ಮತ್ತು ಮತ್ತು ಹಾಗೆ ಮಾಡಲಾಗದ ಆದರೂ ದರ್ಶಿತ ಸತ್ಯಗಳ ವಿರುದ್ಧವಲ್ಲದ ತಥ್ಯಗಳು ಎಂದು ವಿಭಾಗಿಸಿಕೊಳ್ಳಬೇಕು. ಎರಡನೆಯ ವರ್ಗದ ತಥ್ಯಗಳು ಇಂದ್ರಿಯಗೋಚರ ವಸ್ತು ನಿಯಮಗಳಿಗೆ ಅನುಸಾರವಾಗಿ ಬದಲಾಗದಿದ್ದರೂ, ಬುದ್ಧಿ ಮತ್ತು ಇಂದ್ರಿಯಗಳ ಸೀಮಿತ ಪರಿಧಿಯ ಹೊರಗೆ ಸಾಕ್ಷಾತ್ಕಾರವು ಆಧ್ಯಾತ್ಮಿಕ ಗ್ರಂಥಗಳಿಗೆ ಸ್ವತಂತ್ರವಾದ ವ್ಯಾಖ್ಯೆಯನ್ನು ನೀಡುತ್ತದೆ. ಇದು ಮೀಮಾಂಸಾ ಶಾಸ್ತ್ರ ಎನಿಸಿಕೊಳ್ಳುತ್ತದೆ. ವೇದಗಳನ್ನು ಸರಿಯಾದ ರೀತಿಯಲ್ಲಿ, ಮಾನವನ ಸೀಮಿತ ತಾರ್ಕಿಕ ಯೋಚನೆಗಳಿಗೆ ತುತ್ತಾಗದಂತೆ, ಮೀಮಾಂಸಕರು ದರ್ಶಿತ ಗ್ರಂಥಗಳನ್ನು ವ್ಯಾಖ್ಯಾನಿಸಲು ಒಂದು ಸಾಮಾನ್ಯ ನಿಯಮಗಳ ಗುಚ್ಛವನ್ನು ತೋರಿಸಿದ್ದಾರೆ.

ಮೀಮಾಂಸೆಗಳು

ವೇದದೊಳಗಿನಿಂದ ಉತ್ಪತ್ತಿಯಾದ, ವೇದಗಳ ನಿಜವಾದ ಅರ್ಥವನ್ನು ತಿಳಿಸಿಕೊಡುವ ಶಾಸ್ತ್ರವೇ ಮೀಮಾಂಸೆ. ಅದನ್ನು ಎರಡಾಗಿ ವಿಭಾಗಿಸಿದ್ದಾರೆ: ಮೊದಲನೆಯ ಪೂರ್ವ ಮೀಮಾಂಸೆಯು ಕರ್ಮಕಾಂಡವನ್ನು ವಿಶ್ಲೇಷಿಸುತ್ತದೆ ಮತ್ತು ಎರಡನೆಯದಾದ ಉತ್ತರ ಮೀಮಾಂಸೆಯು ಆತ್ಮ ಮತ್ತು ಬ್ರಹ್ಮಾಂಡವನ್ನು ವಿವರಿಸುತ್ತದೆ. ಎರಡನೆಯದನ್ನು ಶಾರೀರಿಕ ಮೀಮಾಂಸೆಯೆಂದೂ, ಅದು ದೇಹದಲ್ಲಿ ಸಮಾಯುತವಾದ ಆತ್ಮದ ವಿಮರ್ಶೆಯೆಂದೂ, ಬ್ರಹ್ಮಸೂತ್ರಗಳೆಂದೂ, ವೇದಾಂತಸೂತ್ರಗಳೆಂದೂ ಕರೆಯುತ್ತಾರೆ. ಇವೆರಡೂ ಒಂದೇ ಶಾಸ್ತ್ರದ ಎರಡು ವಿಭಾಗಗಳಾದರೂ, ಕೆಲವು ಮೂಲಭೂತ ಪ್ರಶ್ನೆಗಳಿಗೆ ಅವು ವಿಭಿನ್ನ ಪರಿಹಾರಗಳನ್ನು ಒದಗಿಸುತ್ತವೆ. ಜಗತ್ತು ಸರ್ವಜ್ಞನಾದ ಈಶ್ವರನಿಂದ ಉತ್ಪತ್ತಿಯಾಗಿದೆಯೆಂದು ವೇದಾಂತಿಗಳು ನಂಬಿದ್ದರೆ, ಮೀಮಾಂಸಕರು ಸರ್ವಜ್ಞ ಈಶ್ವರನಿಲ್ಲ, ವೈಯುಕ್ತಿಕ ಕರ್ಮವು ವಸ್ತುಗಳ ಪರಮಾಣುಗಳೊಡನೆ ವರ್ತಿಸಿ, ವಿಶ್ವದ ಉಗಮಕ್ಕೆ ಕಾರಣವಾಗುತ್ತವೆ ಎನ್ನುತ್ತಾರೆ. ವೇದಗಳಲ್ಲಿ ಹೇಳಿದ ಕರ್ಮಗಳನ್ನು ಮಾಡುವುದರಿಂದ ಮುಕ್ತಿಯು ದೊರೆಯುವುದೆಂದು ಮೀಮಾಂಸಕರು ನಂಬಿದ್ದರೆ, ವೇದ ಪ್ರಣೀತ ನಿಷ್ಕಾಮಕರ್ಮಗಳು ತಮ್ಮ ಅಶಾಶ್ವತತೆಯಿಂದ ಮುಕ್ತಿಯೆಡೆಗೆ ಸಾಗುವ ಮಾರ್ಗವನ್ನು ತೋರಿಸುತ್ತದೆ ಹಾಗೂ ಜ್ಞಾನವೊಂದೇ ಶಾಶ್ವತ ಮುಕ್ತಿಯನ್ನು ನೀಡಬಲ್ಲದೆಂದು ವೇದಾಂತಿಗಳು ಹೇಳುತ್ತಾರೆ. ಬೌದ್ಧರ ನಂತರದ ಕಾಲದ ಮೀಮಾಂಸಕರು, ಆ ಕಾಲದಲ್ಲಿ ಕಾಮ್ಯಕರ್ಮ ವಿರೋಧಿ ಅಲೆಯ ಪ್ರಾಬಲ್ಯವಿದ್ದುದರ ಕಾರಣಕ್ಕಾಗಿರಬಹುದು, ವೇದಾಂತ ವಿರೋಧೀ ದೃಷ್ಟಿಕೋನವನ್ನು ಪ್ರಚುರಪಡಿಸಿದರು. ಕಾಮ್ಯಕರ್ಮಗಳನ್ನೇ ಹೆಚ್ಚಾಗಿ ವಿರೋಧಿಸಿದ ಬೌದ್ಧರ ವಾದಗಳನ್ನು ಖಂಡಿಸುವ ಭರದಲ್ಲಿ, ವೇದಗಳನ್ನು ಒಂದು ಶಾಸ್ತ್ರವಾಗಿ ಅಧಿಕಾರಯುತವಾಗಿ ಸಾಧಿಸಿದವರು ಮೀಮಾಂಸಕರು. ಆದರೆ ಇದರಿಂದಾಗಿ ವೇದಗಳೆಂದರೆ ಅದರಲ್ಲಿರುವ ಕರ್ಮಕಾಂಡ ಮಾತ್ರ ಎಂದು ತಿಳಿದ ಜನರು ಉಳಿದ ಭಾಗಗಳನ್ನು ಅಮುಖ್ಯವಾಗಿಸಿದರು; ನಿಷಿದ್ಧವಾದ ಕಾರ್ಯಗಳನ್ನು ಮಾಡದೆ, ನಿಷ್ಕಾಮ ಭಾವನೆಯಿಂದ ನಿಶ್ಚಿತ ಕಾರ್ಯಗಳನ್ನು ಮಾಡುತ್ತಾ ಬಂದರೆ, ಹೊಸ ಕರ್ಮಗಳು ಸಂಚಯವಾಗದೆ, ಮುಕ್ತಿಯ ಹಾದಿಯಲ್ಲಿ ಪುನರ್ಜನ್ಮದ ಆವಶ್ಯಕತೆ ಕಡಿಮೆಯಾಗುತ್ತದೆ

ಎಂಬುದು ಅವರ ನಂಬಿಕೆ. ಬೌದ್ಧರ ಮತ್ತು ಅರ್ಹತರ ತತ್ತ್ವಗಳಲ್ಲಿ ಪ್ರತಿಪಾದಿಸುವ ಸರ್ವಜ್ಞನ ಅಸ್ತಿತ್ವವನ್ನು ಹಾಗೂ ಅವನ ಬೋಧನೆಗಳನ್ನು ನಿರಾಕರಿಸುವಾಗ, ಮೀಮಾಂಸಕರು ವೇದಗಳ ಸರ್ವಜ್ಞ ಈಶ್ವರನನ್ನೂ ನಿರಾಕರಿಸಿದರು. ವೇದಗಳು ಶಾಶ್ವತ ಮತ್ತು ಸ್ವಯಂಕೃತ, ಮನಸಿನ ಸೃಷ್ಟಿಯಲ್ಲ, ಈಶ್ವರನೇ ಇಲ್ಲವೆನ್ನುವಾಗ, ಅದು ಈಶ್ವರನ ಸೃಷ್ಟಿಯಾಗಲು ಸಾಧ್ಯವೇ ಇಲ್ಲ ಎಂಬುದು ಅದರ ಅಧಿಕಾರವನ್ನು ಎತ್ತಿಹಿಡಿಯಲು ಅವರು ಹೇಳುವ ಮಾತುಗಳು. ಉಪನಿಷತ್ತಿನಲ್ಲಿ ಈಶ್ವರನ ಕುರಿತು ತಿಳಿಸುವ ಭಾಗಗಳನ್ನು ಮೀಮಾಂಸಕರು ಮೋಕ್ಷದ ಬಯಕೆಯಿಂದ ಧ್ಯಾನಮಾಡಲು ಉಪಯೋಗಿಸುವ ಬರಿಯ ಒಂದು ಊಹಾತ್ಮಕವಾದ ರೂಪವೆಂದು ತಿಳಿಯುತ್ತಾರೆ.

ವೇದಾಂತ ಮತ್ತು ಅದರ ಶಾಖೆಗಳು

ಒಬ್ಬನು ಜ್ಞಾನಭಾಗದ ಅಧ್ಯಯನವನ್ನು ಆರಂಭಿಸುವ ಅರ್ಹತೆಯನ್ನು ಪಡೆಯಲು ಆಚರಿಸಬೇಕಾದ ವೇದದ ಕರ್ಮಭಾಗವನ್ನು ವಿವರಿಸುವುದನ್ನು ಮೀಮಾಂಸೆಯೆಂದು ವೇದಾಂತಿಗಳು ತಿಳಿದಿದ್ದಾರೆ; ಆದರೆ ಉಪನಿಷತ್ತುಗಳು ತೋರಿಸುವ, ವಿಶ್ವದ ಉಗಮಕ್ಕೆ ಕಾರಣನಾದ ನಿಜವಾದ ಬ್ರಹ್ಮನ (ಸರ್ವಜ್ಞ ಈಶ್ವರ) ಅಸ್ತಿತ್ವವನ್ನು ಮೀಮಾಂಸಕರು ವಿರೋಧಿಸುವುದನ್ನು ಅವರು ಅನುಮೋದಿಸುವುದಿಲ್ಲ. ನಿಷ್ಕಾಮಕರ್ಮಗಳನ್ನು ಮಾಡುವುದರಿಂದ ಶಾಶ್ವತವಾದ ಆನಂದವನ್ನು ಹೊಂದಲು ಅಸಾಧ್ಯ ಮತ್ತು ಅದನ್ನು ಜ್ಞಾನದ ಬೆಳಕನ್ನು ಕಾಣುವುದರ ಮೂಲಕವೇ ಪಡೆಯಬಹುದು, ಜ್ಞಾನದ ಬೆಳಕು ಕಂಡಾಗ ಅವನ ದೃಷ್ಟಿಯನ್ನು ಮರೆಮಾಡಿದ ಸಂಸಾರಬಂಧವನ್ನು ದೂರಮಾಡಿ ಆನಂದದ ಪ್ರವಾಹವನ್ನೇ ಹರಿಸುವುದು ಎಂದು ವೇದಾಂತಿಗಳು ತಿಳಿಯುತ್ತಾರೆ. ಬ್ರಹ್ಮನು (ಈಶ್ವರ) ಸಂಪೂರ್ಣ ವಿಶ್ವವನ್ನು ನಿಯಂತ್ರಿಸುವ ಮತ್ತು ನಿರ್ದೇಶಿಸುವ ದೈವಿಕ ಜ್ಞಾನವಾಗಿದ್ದಾನೆ; ಮಡಕೆಯಲ್ಲಿ ಮಣ್ಣು ವಸ್ತುಕಾರಣವಾಗಿ ಸೇರಿಕೊಂಡಿರುವಂತೆ, ನಾವು ಆಲೋಚಿಸಬಹುದಾದ ಯಾ ಅನುಭವಿಸುವ ಎಲ್ಲಾ ವಸ್ತು–ವಿಷಯಗಳಲ್ಲಿ ಅವುಗಳ ಮೂಲಕಾರಣನಾಗಿ ಇರುತ್ತಾನೆ. ವೇದಾಂತದ ಎಲ್ಲಾ ಶಾಖೆಗಳು ಇತರ ಮತಗಳನ್ನು ಸಮಾನವಾಗಿ ವಿರೋಧಿಸಿದರೂ, ದೇವರು, ವೈಯುಕ್ತಿಕ ಆತ್ಮ (ಜೀವಾತ್ಮ), ವಿಶ್ವ ಮತ್ತು ಅವುಗಳೊಳಗಿನ ಸಂಬಂಧಗಳ ಬಗೆಗೆ ತಮ್ಮೊಳಗೇ ಭಿನ್ನತೆಯನ್ನು ಹೊಂದಿವೆ ಮತ್ತು ಹಾಗಿದ್ದರೂ ಅವೆಲ್ಲವೂ ವೇದಾಂತವೆನಿಸಿದ ಉಪನಿಷತ್ತುಗಳ ಬೋಧನೆಗಳನ್ನು ಅವಲಂಬಿಸಿವೆ. ಮಧ್ವಾಚಾರ್ಯರ ದ್ವೈತ ಸಿದ್ಧಾಂತದಂತೆ, ಅವು ಮೂರೂ ಪರಸ್ಪರ ಭಿನ್ನವಾಗಿವೆ, ಪ್ರತಿಯೊಬ್ಬನ ವ್ಯಕ್ತಿಗತವಾದ ಆತ್ಮವು ಇನ್ನೊಬ್ಬನ ಆತ್ಮದಿಂದ ಬೇರೆಯಾಗಿದೆ ಮತ್ತು ಪ್ರತಿಯೊಂದು ವಸ್ತು–ವಿಷಯವೂ ಇನ್ನೊಂದು ವಸ್ತು–ವಿಷಯಕ್ಕಿಂತ ಭಿನ್ನವಾಗಿದೆ. ರಾಮಾನುಜಾಚಾರ್ಯರ ವಿಶಿಷ್ಟಾದ್ವೈತದಂತೆ, ಸಂಪೂರ್ಣ ಅಸ್ತಿತ್ವವು ಮೂರು ತತ್ವಗಳಿಂದ, ಪರಮಾತ್ಮ–ಚೈತನ್ಯ–ಜಡ ಇವುಗಳ ಸಂಕೀರ್ಣವಾದ ಸಂಯೋಗದಿಂದ ಉಂಟಾಗುತ್ತದೆ ಮತ್ತು ಪರಮಾತ್ಮನಿಗಿಂತ ಬೇರೆಯಾದ ಅಸ್ತಿತ್ವ ಉಳಿದೆವರಡಕ್ಕೆ ಇಲ್ಲ. ಬಾಹ್ಯ ದೃಷ್ಟ ಜಗತ್ತು ಅದನ್ನು ಅನುಭವಿಸುವ ಆತ್ಮನಷ್ಟೇ ಸತ್ಯ, ಚೈತನ್ಯದ ಮೂಲವಾದ ವ್ಯಕ್ತಿಗತ ಆತ್ಮಗಳು ತಮ್ಮೊಳಗೆ ಭಿನ್ನವಾಗಿವೆ ಮತ್ತು ಪರಮಾತ್ಮನಿಂದಲೂ ಭಿನ್ನವಾಗಿದ್ದು ಪ್ರತಿಯೊಂದರಲ್ಲಿಯೂ ವೈಯುಕ್ತಿಕ ಜ್ಞಾನ ಹುದುಗಿದೆ; ವ್ಯಕ್ತಿಗತ ಆತ್ಮಗಳು ತಮ್ಮ ಆಲೋಚನೆ ಮತ್ತು ಕ್ರಿಯೆಗಳಲ್ಲಿ ಪರಮಾತ್ಮನ ಸಂಪೂರ್ಣ ನಿಯಂತ್ರಣಕ್ಕೆ ಒಳಪಟ್ಟಿವೆ; ಪರಮಾತ್ಮನೊಡನೆ ಐಕ್ಯತೆಯನ್ನು ಹೊಂದಿದಾಗ ಸಂಸಾರ ಬಂಧನದಿಂದ ಬಿಡುಗಡೆಯಾಗಿ ಉಚ್ಚಶ್ರೇಣಿಯ ಆನಂದವನ್ನು ಪಡೆಯುತ್ತವೆ ಎಂದು ದ್ವೈತಿಗಳಂತೆ ಇವರೂ ನಂಬುತ್ತಾರೆ. ಶ್ರೀಕಂಠ ಶಿವಾಚಾರ್ಯರ ಮತದ ಇನ್ನು ಕೆಲವು ವೇದಾಂತಿಗಳು, ವ್ಯಕ್ತಿಗತ ಆತ್ಮಗಳು ಮುಕ್ತಿಯಲ್ಲಿಯೂ ತಮ್ಮ ಅನೇಕತೆಯನ್ನು ಕಾಪಾಡಿಕೊಳ್ಳುತ್ತವೆ; ಮುಕ್ತಿಯನ್ನು ಪಡೆದ ಆತ್ಮಗಳು ತಮ್ಮಷ್ಟಕ್ಕೇ ಜೀವಿಸಿದ್ದು ಆನಂದವನ್ನು ಮತ್ತು ತಮ್ಮ ಸುತ್ತಲೂ ಪರಮಾತ್ಮನ ಪ್ರಭಾವವನ್ನು

ಅನುಭವಿಸುತ್ತವೆ. ಇಂತಹ ಇನ್ನೂ ಅನೇಕ ಮತದವರು ಆತ್ಮದಿಂದ ಬೇರೆಯಾದ ಅಸ್ತಿತ್ವವನ್ನು ಹೊಂದಿರುವ ಅಥವಾ ಆತ್ಮದಿಂದ ಉಗಮವಾಗಿರುವ ಬಾಹ್ಯ ಜಗತ್ತಿನ ನೈಜತೆಯನ್ನು ಒಪ್ಪಿಕೊಳ್ಳುತ್ತಾರೆ.

ಅದ್ವೈತ ತತ್ವ

ಬೇರೆ ಎಲ್ಲಾ ವೇದಾಂತ ಆಧಾರಿತ ಮತಗಳಿಗಿಂತ, ಆತ್ಮ-ಪರಮಾತ್ಮರ ಐಕ್ಯತೆಯನ್ನು ಮತ್ತು ಭೇದಗಳೆಲ್ಲವೂ ಕಲ್ಪಿತವೆಂದು ಅದ್ವೈತ ತತ್ತ್ವವು ಹೇಳುತ್ತದೆ. ಈ ಐಕ್ಯತೆಯ ಸಂಪೂರ್ಣ ಅರಿವು ಮತ್ತು ತನ್ನ ಆತ್ಮವು ಇತರರಲ್ಲಿರುವ ಆತ್ಮವೂ ಒಂದೇ ಆಗಿದೆ ಮತ್ತು ಅದು ಪರಮಾತ್ಮನೇ ಆಗಿದೆ ಎಂಬ ಅರಿವು ಸಂಸಾರ ಬಂಧನದಿಂದ ಮುಕ್ತಿಯನ್ನು ನೀಡುತ್ತದೆ ಎಂದು ಅದು ತಿಳಿಸುತ್ತದೆ. ಸಾಮಾನ್ಯರ ಕಣ್ಣಿಗೆ ನಿಜವಾಗಿ ಕಾಣುವ ಜಗತ್ತು ಮುಕ್ತರಾದವರ ದೃಷ್ಟಿಗೋಚರವಾಗುವುದಿಲ್ಲ; ಅವರು ಅದನ್ನು ಅನುಭವಿಸಿದರೂ, ಅದು ತನ್ನ ಆತ್ಮ ಅಂದರೆ ಸರ್ವಜ್ಞನಾದ ಈಶ್ವರನಿಂದ ಉತ್ಪತ್ತಿಯಾಗಿ, ಅವನ ನಿಯಂತ್ರಣದಲ್ಲಿದೆಯೆಂದು ತಿಳಿಯುತ್ತಾರೆ. ಯಾವುದೇ ರೀತಿ ನೋಡಿದರೂ, ವಿಶ್ವಕ್ಕೆ ಸ್ವತಂತ್ರವಾದ ಅಸ್ತಿತ್ವವಿಲ್ಲ ಮತ್ತು ಅದು ಆತ್ಮದ ಬೆಳಕಿನಲ್ಲಿ ಕಂಡುಬಂದು ಆತ್ಮದಿಂದ ಅಸ್ತಿತ್ವವನ್ನು ಪಡೆಯುತ್ತದೆ.

ಇವು ಶ್ರೀ ಶಂಕರಾಚಾರ್ಯ ಪ್ರಣೀತ ವೇದಾಂತ ತತ್ತ್ವದ ಮುಖ್ಯ ಅಂಶಗಳು ಮತ್ತು ಒಂದೇ ಆದ ಅಸ್ತಿತ್ವ ಮತ್ತು ಪ್ರಕಾಶ ಹಾಗೂ ಆತ್ಮದ ಏಕತೆಯನ್ನು ಪ್ರತಿಪಾದಿಸುವ ಅದ್ವೈತ ಸಿದ್ಧಾಂತವು. ಉಪನಿಷತ್ತುಗಳು, ಭಗವದ್ಗೀತೆ ಮತ್ತು ಶಾರೀರಿಕ ಮೀಮಾಂಸ ಸೂತ್ರಗಳ ಆಧಾರದಿಂದ ಶ್ರೀ ಶಂಕರಾಚಾರ್ಯರು ಈ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ ಮತ್ತು ಅವರ ಶಿಷ್ಯರಾದ ಶ್ರೀ ಸುರೇಶ್ವರಾಚಾರ್ಯರು (ಕ್ರಮವಾಗಿ ಭಾಷ್ಯಕಾರ ಮತ್ತು ವಾರ್ತಿಕಕಾರ) ಅದನ್ನು ಬೆಳೆಸಿ ವಿಷದೀಕರಿಸಿದ್ದಾರೆ. ಒಬ್ಬರು ಅದ್ವೈತ ತತ್ತ್ವದ ಅಡಿಪಾಯ ಮತ್ತು ಹಂದರವನ್ನು ರಚಿಸಿದರು ಮತ್ತು ಅವರ ಶಿಷ್ಯರು ಅದರೊಳಗಿನ ಖಾಲಿ ಜಾಗವನ್ನು ತುಂಬಿ ಅದನ್ನು ಸುಂದರವಾಗಿ ಜನಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಪ್ರಸ್ತುತಪಡಿಸಿದರು. ಅದ್ವೈತ ಸಿದ್ಧಾಂತದ ಮುಖ್ಯ ಅಂಶಗಳನ್ನು ಚುಟುಕಾಗಿ ಶ್ರೀ ಶಂಕರಾಚಾರ್ಯರು ತಮ್ಮ ಶ್ರೀ ದಕ್ಷಿಣಾಮೂರ್ತಿ ಸ್ತೋತ್ರದಲ್ಲಿ – ಗುರುಗಳ ಗುರುವೆಂದು ತಿಳಿದಿರುವ ಪರಬ್ರಹ್ಮನ ಕುರಿತಾದ ಕಾವ್ಯ ಮತ್ತು ಭಕ್ತರಿಗೆ ತಮ್ಮ ನಿತ್ಯಜೀವನದಲ್ಲಿ ಧ್ಯಾನಿಸಲು ಸೂಕ್ತವಾದ ಪಠ್ಯ – ತಿಳಿಸಿದ್ದಾರೆ. ವಾರ್ತಿಕಕಾರರು ತಮ್ಮ ಮಾನಸೋಲ್ಲಾಸ ಕೃತಿಯಲ್ಲಿ ಕಾವ್ಯದ ಗೂಢ ಅಂಶಗಳನ್ನು ಹೊರತೆಗೆದು ಬಹು ಸುಂದರವಾಗಿ ವಿವರಿಸಿದ್ದಾರೆ.

ಉಪನಿಷತ್ತುಗಳಲ್ಲಿ ತಿಳಿಸಿದಂತೆ ಆತ್ಮ ಮತ್ತು ಬ್ರಹ್ಮನ ಏಕತೆ

ಆತ್ಮದ ಅದ್ವಿತೀಯತೆಯನ್ನು ಸಾಧಿಸಲು ಶ್ರೀ ಸುರೇಶ್ವರಾಚಾರ್ಯರು ಉಪಯೋಗಿಸಿದ ಹಾದಿಯನ್ನು ಚುಟುಕಾಗಿ ತಿಳಿಸುವುದರಿಂದ ಆರಂಭಿಕ ಹಂತದಲ್ಲಿರುವವರಿಗೆ ಸ್ವಲ್ಪ ಅನುಕೂಲವಾಗಬಹುದು. ಬೇರೆಮೂಲಗಳಿಂದ ತಿಳಿಯುವುಂತಹದ್ದನ್ನು ವೇದಗಳು ತಿಳಿಸುವುದಿಲ್ಲ ಎಂಬ ಮೀಮಾಂಸೆಯ ಮೂಲತತ್ತ್ವದಂತೆ, ಅದ್ವೈತದ ವೇದಾಂತಿಗಳು ಉಪನಿಷತ್ತುಗಳಿಂದ (ಪ್ರತೀ ವೇದದಿಂದ ಒಂದರಂತೆ), ಸತ್ಯದ ಕುರಿತು ಶ್ರುತಿಗಳು ಮಾತ್ರ ಕಲಿಸಲು ಸಾಧ್ಯವಿರುವ, ನಾಲ್ಕು ಮಹಾವಾಕ್ಯಗಳನ್ನು ಹೆಕ್ಕಿ ತೆಗೆದಿದ್ದಾರೆ.

ಪ್ರಜ್ಞಾನಂ ಬ್ರಹ್ಮಃ (ಐತರೇಯೋಪನಿಷತ್, ಋಗ್ವೇದ)
ಅಹಂ ಬ್ರಹ್ಮಾಸ್ಮಿ (ಬೃಹದಾರಣ್ಯಕ ಉಪನಿಷತ್, ಯಜುರ್ವೇದ)
ತತ್ತ್ವಮಸಿ (ಛಾಂದೋಗ್ಯ ಉಪನಿಷತ್, ಸಾಮವೇದ)
ಅಯಮಾತ್ಮಾ ಬ್ರಹ್ಮಃ (ಮಾಂಡೂಕ್ಯೋಪನಿಷತ್, ಅಥರ್ವ ವೇದ)

ಸ್ವಯಂ ಮತ್ತು ಬ್ರಹ್ಮನ ಏಕತೆಯನ್ನು ಎಲ್ಲಾ ನಾಲ್ಕು ವಾಕ್ಯಗಳು ಸ್ಫುಟವಾಗಿ ತಿಳಿಸುತ್ತವೆ; ನಿತ್ಯಜೀವನದ ಅಭ್ಯಾಸಬಲದಿಂದ, ನಾವು ಯಾವಾಗಲೂ ಜ್ಞಾನ ಮತ್ತು ಬೆಳಕಿಗಾಗಿ ಹೊರಗೆ ಹುಡುಕಾಟ ನಡೆಸುತ್ತೇವೆ ಹಾಗೂ ನಮ್ಮ ಅನುಭವಗಳು ಕೂಡಾ ಅದಕ್ಕೆ ಪೂರಕವಾಗಿರುವುದರಿಂದ ಈ ಸತ್ಯವು ನಮ್ಮ ಬುದ್ಧಿ ಮತ್ತು ಇಂದ್ರಿಯಗಳಿಗೆ ಅಗೋಚರವಾಗಿದೆ. ಅಂತಃಕರಣದ ಶಕ್ತಿ ಮತ್ತು ಜ್ಞಾನದ ಸೀಮಿತತೆಯಿಂದ ಮಾನವನ ಆಲೋಚನೆಗಳೂ ಸೀಮಿತವಾಗಿ, ತಾನು ಸರ್ವಜ್ಞ ಮತ್ತು ಸರ್ವಶಕ್ತ ಬ್ರಹ್ಮನೆಂದು ಅರಿತುಕೊಳ್ಳಲು ಮೇಲ್ನೋಟಕ್ಕೆ ಕಷ್ಟವಾಗುವುದು. ಹಾಗಿದ್ದರೂ ಅದೇ ಕಾರಣಕ್ಕಾಗಿ ಅಂದರೆ ಸಾಧಾರಣವಾಗಿ ಬುದ್ಧಿಗೆ ಅರ್ಥವಾಗದಿರುವ ಸತ್ಯದ ಬಗೆಗೆ ಸಾಕ್ಷಾತ್ಕಾರಗಳು ಬೆಳಕು ಚೆಲ್ಲುತ್ತವೆ ಎಂಬಂತೆ, ಉಪನಿಷತ್ತುಗಳು ಅದನ್ನು ಪ್ರಮುಖವಾದ ಸತ್ಯವೆಂದು ಘೋಷಿಸಿವೆಯೆಂದು ಅರ್ಥೈಸಿಕೊಳ್ಳಬೇಕು; ಈ ಸತ್ಯದ ಹಿನ್ನೆಲೆಯಲ್ಲಿ ಮನುಷ್ಯನ ಅನುಭವಗಳನ್ನು ವಿಶ್ಲೇಷಿಸುವುದು ಅದ್ವೈತ ಸಿದ್ಧಾಂತದ ಪ್ರಯತ್ನವಾಗಿದೆ. ಸಾಕ್ಷಾತ್ಕರಿಸಿದ ಸತ್ಯವು ಸರಿಯಾದ ವಿಶ್ಲೇಷಣೆ ಮತ್ತು ವಿವರಣೆಗಳಿಂದ ಮನುಷ್ಯನ ಬುದ್ಧಿಮತ್ತೆಯನ್ನು ಉನ್ನತಮಟ್ಟಕ್ಕೇರಿಸುತ್ತದೆ ಎಂಬುದು ಶ್ರೀ ಶಂಕರಾಚಾರ್ಯ ಮತ್ತು ಶ್ರೀ ಸುರೇಶ್ವರಾಚಾರ್ಯರ ಬರವಣಿಗೆಗಳ ಮುಖ್ಯ ಗುರಿಯಾಗಿದೆ.

ಮಾಯೆಯ ಪ್ರಭಾವದಿಂದ ಜೀವ – ಈಶ್ವರ ಭೇದ

ಈಶ್ವರ ಮತ್ತು ಆತ್ಮದ ಗುರುತನ್ನು ದೃಢವಾಗಿಸಲು, ಜೀವ–ಈಶ್ವರ ಭೇದವನ್ನು ಅದ್ವೈತವಾದಿಗಳು ತಿಳಿಸುತ್ತಾರೆ; ಜೀವ ಮತ್ತು ಈಶ್ವರರು ಭಿನ್ನವಾಗಿ ಕಾಣಲು, ಅವುಗಳ ಮೂಲಪ್ರಕೃತಿಯಾಗಿರದ ಉಪಾಧಿ ಅಥವಾ ಅವುಗಳನ್ನು ನೋಡಲು ಬಳಸುವ ಉಪಕರಣ ಮುಖ್ಯ ಕಾರಣವಾಗಿದೆ. ಒಂದು ಸತ್ ಮತ್ತು ಪ್ರಕಾಶವಾಗಿರುವ ಈಶ್ವರನು ಶುದ್ಧ ಸಾತ್ವಿಕ ಮಾಯೆಯ ಮೂಲಕ ದೃಷ್ಟಿಸಿದಾಗ, ಸಂಪೂರ್ಣ ಬ್ರಹ್ಮಾಂಡವನ್ನು ಅವನು ತಿಳಿದಿರುತ್ತಾನೆ ಮತ್ತು ಅದು ಅವನ ವಶದಲ್ಲಿರುವುದು. ಅಶುದ್ಧ ಮಾಯೆಯ ಮೂಲಕ ಚಲಿಸಿ ಅವಿದ್ಯೆಯೆಂಬ ಹಲವು ಬಣ್ಣದ ಕನ್ನಡಕಗಳಿಂದ ದೃಷ್ಟಿಸಿದಾಗ, ಎಲ್ಲವನ್ನೂ ಇಂದ್ರಿಯಗಳ ಬಣ್ಣದಲ್ಲಿ ನೋಡುವ ಸೀಮಿತ ಅರಿವುಳ್ಳ ಅನಂತ ಜೀವಗಳ ರೂಪದಲ್ಲಿ ಈಶ್ವರನು ಕಂಡುಬರುತ್ತಾನೆ. ಬಾಹ್ಯ ವಸ್ತುಗಳು ಅಂದರೆ ನಿರ್ದಿಷ್ಟ ರೂಪದಲ್ಲಿ ಕಾಣುವ ಬಾಹ್ಯ ಜಗತ್ತು ಎಲ್ಲದರಲ್ಲೂ ಈಶ್ವರನು ಒಳಗೂ ಹೊರಗೂ ವಸ್ತುವಾಗಿ ಮತ್ತು ಅದರ ವಿಷಯವಾಗಿ ಇರುತ್ತಾನೆ. ವಸ್ತು ಮತ್ತು ವಿಷಯಗಳ ಭೇದವು ಅಜ್ಞಾನದಿಂದ ಉಂಟಾಗಿದ್ದು, ಸತ್ಯವನ್ನು ಅರಿಯಲು ವಿಶ್ವವನ್ನು ನಿಜವೆಂದೂ ಮತ್ತು ಆತ್ಮದ ಹೊರಗಿದೆಯೆಂದೂ ಕಾಣಿಸುವ ಅಜ್ಞಾನದ ಮುಸುಕನ್ನು ಕಿತ್ತೊಗೆಯಬೇಕು. ಆಗ ಆತ್ಮವು, ಸ್ವಯಂ, ತನ್ನ ನಿಜರೂಪದಲ್ಲಿ, ಸಮಸ್ತ ವಿಶ್ವದ ರೂಪದಲ್ಲಿ ಹೊಳೆಯಲಾರಂಬಿಸುತ್ತದೆ; ಎಲ್ಲೆಡೆಯೂ ತನ್ನನ್ನೇ ಕಾಣುತ್ತಾ ಬೇರೇನನ್ನೂ ಕಾಣದೆ ತನ್ನಲ್ಲೇ ಲೀನವಾಗಿ 'ಎಲ್ಲಿ, ಯಾವಾಗ' ಎಂಬ ಪ್ರಶ್ನೆಗಳೇಳದಂತೆ. ಆಗ ಆ ಜೀವನು ಮಾಯೆಯ ನಿದ್ರೆಯಿಂದ ಎಚ್ಚರವಾಗಿರುತ್ತಾನೆ ಮತ್ತು ಹಿಂದಿನ ಅನುಭವಗಳೆಲ್ಲವೂ ಕನಸಿನಂತೆ ಕಾಣುತ್ತವೆ.

ಜೀವ ಮತ್ತು ಈಶ್ವರ ಸಂಯೋಗ

ಜೀವವು ಈಶ್ವರನೊಡನೆ ಐಕ್ಯತೆಯನ್ನು ಹೊಂದಿದಾಗ, ಅದು ಈಶ್ವರನಂತೆ ಸರ್ವಜ್ಞತ್ವವನ್ನು ಹೊಂದಿ ಕ್ರಿಯಾಶೀಲ ವ್ಯವಹಾರವನ್ನು ಮಾಡುತ್ತದೆ; ಅವುಗಳು ಜೀವದ ಮೂಲಪ್ರಕೃತಿಯಾಗಿದ್ದರೂ, ಅವು ಮಾಯೆಯ ಕಾರಣದಿಂದ ಸೀಮಿತ ಪರಿಧಿಯನ್ನು ಹೊಂದಿರುತ್ತವೆ. ಜಗತ್ತಿನ ಬೆಳವಣಿಗೆಯ ಎಲ್ಲಾ ಕ್ರಿಯೆಗಳು ಚೈತನ್ಯದ ಇಚ್ಛೆ ಮತ್ತು ವಿವೇಕದಲ್ಲಿ ತಮ್ಮ ಮೂಲವನ್ನು ಹೊಂದಿರುತ್ತವೆ ಮತ್ತು ಈ ಚೈತನ್ಯವು ಈಶ್ವರನೇ ಆಗಿರಬೇಕು. ಅವನ ಇಚ್ಛೆಯು ಜೀವರಲ್ಲಿ ಪ್ರತಿಬಿಂಬಿಸಿ, ಜಗತ್ತನ್ನು ಕ್ರಿಯಾಶೀಲವಾಗಿಸುವ ವಿವಿಧ ಕಾರ್ಯಗಳನ್ನು ಮಾಡಿಸುತ್ತದೆ.

ಆತ್ಮವು ಬ್ರಹ್ಮಾಂಡದ ಮೂಲಕಾರಣ

ಆತ್ಮದ ಹೊರತಾಗಿ ಕಂಡುಬರುವ ವಸ್ತುಗಳೆಲ್ಲವೂ ಆತ್ಮದಿಂದ ಆವರಿಸಲ್ಪಟ್ಟ ರೂಪಗಳೇ ಆಗಿದ್ದು, ಆತ್ಮದಿಂದ ಅವುಗಳಿಗೆ ಅಸ್ತಿತ್ವವಿದ್ದು, ಅದರ ಬೆಳಕಿನಲ್ಲಿ ಅವು ಹೊಳೆಯುತ್ತವೆ; ಆದುದರಿಂದ ಅವುಗಳೆಲ್ಲವೂ ಆತ್ಮದಿಂದ ಉತ್ಪತ್ತಿಯಾಗಿ, ಆತ್ಮವು ಅವುಗಳ ಕಾರಣವಾಗಿರುತ್ತದೆ. ಅವುಗಳೆಲ್ಲವೂ ಆತ್ಮದ ಕಲ್ಪಿತ ರೂಪಗಳಾಗಿದ್ದು, ಅವಿದ್ಯೆಯಿಂದಾಗಿ ಕಂಡುಬರುತ್ತವೆ, ಹಗ್ಗವನ್ನು ಹಾವಾಗಿ ಭ್ರಮಿಸಿದರೂ, ಅದು ಹಗ್ಗವೇ ಆಗಿರುವ ಹಾಗೆ. ಆತ್ಮದ ಸಂಪರ್ಕವಿಲ್ಲದ ಯಾವುದೇ ವಸ್ತುವು ಸ್ವಯಂಪ್ರಕಾಶಿತವಲ್ಲ; ಆತ್ಮವು ಅದನ್ನು ಅನುಭವಿಸುವಾಗ ಮತ್ತು ಅದರ ವಸ್ತುಕಾರಣವಾದಾಗ, ಮಣ್ಣು ಮಡಿಕೆಯ ವಸ್ತುಕಾರಣವಾದಂತೆ, ಮಾತ್ರ ಅದು ಪ್ರಕಾಶಿಸುತ್ತದೆ. ಮಣ್ಣಿನಿಂದಾದ ವಸ್ತುಗಳೆಲ್ಲದಕ್ಕೂ ಮಣ್ಣಿನ ಸಂಪರ್ಕವಿರುವಂತೆ, ಆತ್ಮದ ಮೂಲ ಪ್ರಕೃತಿಯಾದ ಅಸ್ತಿತ್ವ ಮತ್ತು ಬೆಳಕು ಆತ್ಮದ ಸಂಪರ್ಕವಿರುವ ವಿಶ್ವದಲ್ಲೂ, ಅದರಲ್ಲಿರುವ ವಸ್ತುಗಳಲ್ಲಿಯೂ ಕಂಡುಬರುತ್ತದೆ.

ಆತ್ಮ, ಒಂದು ಇರುವಿಕೆ

ನಮ್ಮ ಕಣ್ಣಿಗೆ ಕಾಣುವ ಜಗತ್ತು ಆತ್ಮದ ಇಚ್ಛೆ, ಜ್ಞಾನ ಮತ್ತು ಕ್ರಿಯೆಗಳ ಒಂದು ಬಾಹ್ಯ ಪ್ರಕಟಣೆ ಮಾತ್ರವಾಗಿದೆ ಹಾಗೂ ಅದು ಸ್ವಲ್ಪ ಸಮಯ ಕಂಡುಬರುತ್ತದೆ ಮತ್ತು ಕೆಲಕಾಲ ಅದೃಷ್ಯವಾಗುತ್ತದೆ. ಈಶ್ವರನು ಶಾಶ್ವತನಾಗಿದ್ದರೂ, ಇಚ್ಛೆ, ಜ್ಞಾನ ಮತ್ತು ಕ್ರಿಯೆಗಳು ಅವನ ಮೂಲಪ್ರಕೃತಿಯಲ್ಲ; ಮತ್ತು ವಿವಿಧ ರೂಪಗಳ ಈ ವಿಶ್ವಕ್ಕೆ ಅಸ್ತಿತ್ವವಿದೆ ಅಥವಾ ಈಶ್ವರನು ಅದರ ಸೃಷ್ಟಿಕರ್ತ ಎಂದು ಹೇಳುವುದೂ ತಪ್ಪಾಗುತ್ತದೆ. ಬಾಹ್ಯ ವಸ್ತುಗಳ ಕಂಡುಬರುವಿಕೆ ಮತ್ತು ಹೊಳೆಯುವಿಕೆಯು ನಿಜವಾಗಿ ಇಂದ್ರಿಯಗೋಚರವಾದ ವಸ್ತುಗಳ ರೂಪದಲ್ಲಿ ಆತ್ಮದ ಕಂಡುಬರುವಿಕೆ ಮತ್ತು ಹೊಳೆಯುವಿಕೆಯಾಗಿದೆ. ವಸ್ತುಶಃ ಎಲ್ಲಾ ವಸ್ತುಗಳು ಅಂತಃಕರಣದ ಒಂದು ಗುರಿಯ ರೂಪದಲ್ಲಿ ಮಾತ್ರ ಹೊಳೆಯಲು ಸಾಧ್ಯ; ಅಂತಃಕರಣ ಅಂದರೆ 'ನಾನು' ಎಂಬ ಭಾವನೆ ಯಾವಾಗಲೂ ಇರುತ್ತದೆ ಮತ್ತು ಅದು ವಸ್ತುಗಳ ಇರುವಿಕೆಯನ್ನೂ, ಇಲ್ಲದಿರುವಿಕೆಯನ್ನೂ ಗಮನಿಸುತ್ತದೆ. ಸರಿಯಾಗಿ ಹೇಳುವುದಾದರೆ ಇಂದ್ರಿಯಗೋಚರ ವಸ್ತುಗಳಿಗೆ ನಿಜವಾದ ಅಸ್ತಿತ್ವವಿರುವುದಿಲ್ಲ, ಹಗ್ಗದಲ್ಲಿ ಭ್ರಮೆಯಿಂದ ಸರ್ಪವನ್ನು ಕಲ್ಪಿಸಿದಂತೆ. ಬಾಹ್ಯ ವಸ್ತುಗಳಲ್ಲಿರುವ ಅಸ್ತಿತ್ವ ಮತ್ತು ಪ್ರಕಾಶವನ್ನು ಅದರೊಡನೆ ಸಂಬಂಧವಿರುವ ಅಥವಾ ಅದನ್ನು ದೃಷ್ಟಿಸುವ ಅಹಂಕಾರದಲ್ಲಿ ಕಾಣುವುದು, ಆತ್ಮದ ಸಾರ್ವತ್ರಿಕತೆ ಮತ್ತು ಏಕತೆಯನ್ನು ಅರ್ಥಮಾಡಿಕೊಳ್ಳುವ ಒಂದು ವಿಧಾನವಾಗಿದೆ. ಏಕೈಕ ಆತ್ಮವು ಅಹಂಕಾರವಾಗಿ ಬುದ್ಧಿಯಲ್ಲಿ ಪ್ರಕಟವಾದಾಗ ಅನುಭವಿಸುವುದಾಗಿಯೂ, ಪ್ರಾಣದಲ್ಲಿ ಪ್ರಕಟವಾದಾಗ ಕರ್ತೃವಿನಂತೆಯೂ ಕಂಡುಬರುತ್ತದೆ; ಭ್ರಾಮಕವಾದ ಮಾಯೆಯಿಂದ ಮೋಹಿತವಾಗಿ ಎಲ್ಲ ರೀತಿಯ ಮನಸು ಮತ್ತು ಪ್ರಾಣದೊಡನೆ ತನ್ನನ್ನು ಸಮೀಕರಿಸಿ ಜೀವವಾಗುತ್ತದೆ. ಸಾಂಸಾರಿಕ ಬಂಧನಕ್ಕೆ ಕಾರಣವಾಗುವ ಭ್ರಮೆಯ ನಿವಾರಣೆಯು ಮುಕ್ತಿ ಯಾ ಮೋಕ್ಷವೆಂದು ಹೇಳಲ್ಪಡುತ್ತದೆ; ಈ ಸ್ಥಿತಿಯಲ್ಲಿ ಮಾಯೆಯಿಂದ ಉಂಟಾದ ಸೀಮಿತತೆಗಳೆಲ್ಲವೂ ನಾಶವಾಗಿ ಜೀವವು ತನ್ನ ನಿಜಸ್ವರೂಪವನ್ನು, ಸರ್ವಜ್ಞನಾದ ಆತ್ಮವೆಂದು, ಅರಿತುಕೊಳ್ಳುತ್ತದೆ.

ಮಾಯೆ ಮತ್ತು ವಿದ್ಯೆ

ಮಾಯೆ ಮತ್ತು ವಿದ್ಯೆ, ಭ್ರಮೆ ಮತ್ತು ಜ್ಞಾನ, ಈಶ್ವರನ ಎರಡು ಮಹಾನ್ ಶಕ್ತಿಗಳು. ಮೊದಲನೆಯದರಿಂದ ಅವನು ತನ್ನ ನಿಜಸ್ವರೂಪವನ್ನು ಮರೆಮಾಚಿ, ಜೀವನಾಗಿ ಕಾಣಿಸಿಕೊಳ್ಳುತ್ತಾನೆ ಹಾಗೂ ಎರಡನೆಯದರಿಂದ ಭ್ರಾಮಕ ಆವರಣವನ್ನು ಕಳಚಿ, ತಾನೇತಾನಾಗಿ ವಿಜೃಂಭಿಸುತ್ತಾನೆ. ವಿದ್ಯೆಯು, ಜ್ಞಾನದ ಬೆಳಕು, ಅವನ

ಸಹಜ ಸ್ವಭಾವವಾಗಿದೆ ಆದರೆ ಅದು ಮಾಯೆಯ ಪರದೆಯನ್ನು ಕಳಚಿದಾಗ ಮಾತ್ರ ಕಂಡುಬರುತ್ತದೆ; ಆತ್ಮದಲ್ಲಿರುವ ಸಹಜವಾದ ಬೆಳಕು, ಇದುವರೆಗೆ ಕತ್ತಲೆಯ ವಶದಲ್ಲಿದ್ದ ಮನಸನ್ನು ಪೂರ್ತಿಯಾಗಿ ಪ್ರಕಾಶಿಸುತ್ತದೆ, ಗ್ರಹಣ ಕಾಲದಲ್ಲಿ ಸೂರ್ಯನ ಬೆಳಕು ನೋಡುವವನ ದೃಷ್ಟಿಯಿಂದ ಮರೆಯಾಗಿ ನೆರಳು ಸರಿದ ಬಳಿಕ ಪುನಃ ಪ್ರಕಾಶಿಸುವಂತೆ.

ಮಾಯೆಯ ವಿವರಣೆ

ಸ್ವಪ್ರಕಾಶಿತನನ್ನು ಗ್ರಹಣಹಿಡಿದಂತೆ ಮಾಡುವ ಮಾಯೆ ಅಥವಾ ಅವಿದ್ಯೆ ಎಂದರೇನು? ಅದು ನಿಜವಾಗಿಯೂ ಇದೆಯೇನು? ಅದ್ವೈತಿಗಳು ಹೀಗೆ ಹೇಳುತ್ತಾರೆ: ಸಾಮಾನ್ಯವಾಗಿ ಒಂದು ವ್ಯವಸ್ಥೆ ಯಾ ಘಟನೆಯನ್ನು ಪ್ರಕೃತಿಯ ಯಾವುದೇ ನಿಯಮಗಳಿಂದ ವಿವರಿಸಲು ಅಸಾಧ್ಯವಾಗಿ, ಅದಕ್ಕೆ ಅಸ್ತಿತ್ವ ಇದೆಯೋ ಯಾ ಇಲ್ಲವೋ ಎಂಬಷ್ಟು ಸಂಶಯಾತ್ಮಕವಾಗಿರುವುದನ್ನು ಮಾಯೆ ಅಥವಾ ಅವಿದ್ಯೆ ಎನ್ನುತ್ತಾರೆ. ಐಂದ್ರಜಾಲಿಕನ ಮನಸಿನಿಂದ ಉಂಟಾದ ಇಂದ್ರಜಾಲವು, ನಿಜವಾಗಿಯೂ ಅಸ್ತಿತ್ವವನ್ನು ಹೊಂದಿಲ್ಲ ಯಾಕೆಂದರೆ ಅದು ಅಲ್ಪಸಮಯದಲ್ಲಿಯೇ ಇಲ್ಲವಾಗುವುದು ಮತ್ತು ಸ್ವತಃ ಐಂದ್ರಜಾಲಿಕನಿಗೆ ಅದು ಭ್ರಮೆಯೆಂಬ ಅರಿವಿದೆ. ಆದರೆ ನಮಗೆ ಅದನ್ನು ಇಲ್ಲವೆನ್ನಲಾಗದು ಯಾಕೆಂದರೆ ಅಲ್ಪಸಮಯಕ್ಕಾದರೂ ನಾವು ಅದನ್ನು ಅನುಭವಿಸಿದ್ದೇವೆ ಮತ್ತು ಇಲ್ಲದ ವಸ್ತು–ವಿಷಯಗಳು ನಮ್ಮ ಅನುಭವಕ್ಕೆ ಬರುವುದಿಲ್ಲ, ಮನುಷ್ಯನ ಕೊಂಬಿನಂತೆ. ನಾವು ಕಾಣುವ ಜಗತ್ತು ಅದೇರೀತಿಯ ವ್ಯವಸ್ಥೆಯಾಗಿದ್ದು, ಅದನ್ನು ಆತ್ಮದಿಂದ ಬೇರೆಂದು ನಾವು ಭ್ರಮಿಸಿದ್ದೇವೆ, ಮುತ್ತಿನ ಚಿಪ್ಪಿನಲ್ಲಿ ಬೆಳ್ಳಿಯನ್ನು ಕಂಡಂತೆ. ಇಲ್ಲಿ ನೋಡುವವನ ಮನಸಿನ ಭ್ರಾಮಕತೆಯಿಂದ, ಆತ್ಮವು ಹಲವು ವಸ್ತು–ವಿಷಯಗಳ ರೂಪದಲ್ಲಿ ಬಾಹ್ಯವಾಗಿ ಕಂಡುಬರುವುದು ಮತ್ತು ಜ್ಞಾನದಿಂದ ಭ್ರಮೆಯು ದೂರವಾಗಿ, ಆತ್ಮದ ನಿಜರೂಪ ಕಾಣಿಸಿಕೊಳ್ಳುವುದು; ಜ್ಞಾನಿಗಳಾದ ಋಷಿಗಳು ಮತ್ತು ಶ್ರುತಿಯು ಕೂಡಾ ಈ ವಿಷಯವನ್ನು ಒಪ್ಪಿಕೊಂಡಿದ್ದಾರೆ. ಈ ಅರ್ಥದಲ್ಲಿ ಬಾಹ್ಯವಾಗಿ ಕಂಡುಬರುವ ಜಗತ್ತು ಮಿಥ್ಯೆಯೆಂದು ಮತ್ತು ಆತ್ಮವು ಶಾಶ್ವತವಾದ ಸತ್ಯವೆಂದು ಹೇಳಿರುವುದು.

ಆತ್ಮಜ್ಞಾನಕ್ಕೆ ಯೋಗದ ಆವಶ್ಯಕತೆ

ಯೋಗವನ್ನು ಅಭ್ಯಾಸಮಾಡುವ ವ್ಯಕ್ತಿಯು ಹೊರ ಪ್ರಪಂಚದಿಂದ ಮನಸನ್ನು ಹಿಂದೆಗೆದುಕೊಂಡು ಆತ್ಮದಲ್ಲಿ ಕೇಂದ್ರೀಕರಿಸಿ, ನಿಧಾನವಾಗಿ ಮನಸಿನ ಚಂಚಲತೆಯನ್ನು ದೂರಮಾಡುತ್ತಾನೆ ಮತ್ತು ಆ ಸಮಯದಲ್ಲಿ ಅದು ಶುದ್ಧವಾಗಿ ಆತ್ಮದ ಸಹಯೋಗಿಯಾಗಿರುತ್ತದೆ. ಮನಸು ಸ್ಥಿರತೆಯನ್ನು ಪಡೆದುಕೊಂಡಾಗ ಅದು ತನ್ನ ನಿಜರೂಪವನ್ನು ತಾಳಿ (ಆತ್ಮ) ವಿವಿಧ ರೂಪಗಳಿಂದ ಜಗತ್ತನ್ನು ಕಾಣುವುದನ್ನು ನಿಲ್ಲಿಸುತ್ತದೆ. ಈ ಸ್ಥಿತಿಯನ್ನು ತಲುಪಿದ ವ್ಯಕ್ತಿಯು ಜೀವನ್ಮುಕ್ತನೆನಿಸಿಕೊಳ್ಳುತ್ತಾನೆ ಮತ್ತು ದೇಹವೆಂಬ ಉಪಕರಣವಿದ್ದರೂ ಸಂಸಾರ ಬಂಧನವಿರುವುದಿಲ್ಲ.

ಆತ್ಮದ ಸ್ವಭಾವ ಮತ್ತು ಪ್ರಪಂಚದ ಮಿಥ್ಯತ್ವದ ವಿಷಯದಲ್ಲಿ ತತ್ವಜ್ಞಾನಿಗಳಲ್ಲಿ ಸಹಮತ

ಉಪನಿಷತ್ತುಗಳು ಮತ್ತು ಇತರ ಸ್ಮೃತಿಗಳು, ಇತಿಹಾಸ, ಪುರಾಣಗಳು ಅದ್ವೈತ ತತ್ತ್ವವನ್ನು ಒಂದೇ ಕಂಠದಿಂದ ಸಾರುತ್ತವೆಯೆಂದು ವೇದಾಂತಿಗಳು ನಂಬುತ್ತಾರೆ. ಇತರ ಮತದವರಲ್ಲಿಯೂ ಬಹುಮಂದಿ ತಮ್ಮ ಬರವಣಿಗೆಗಳಲ್ಲಿ ಅದ್ವೈತವನ್ನು ಸಮರ್ಥಿಸದಿದ್ದರೂ, ಅದನ್ನು ವಿರೋಧಿಸುವುದಿಲ್ಲ. ಆತ್ಮವು ಸ್ವಯಂ ಅಸ್ತಿತ್ವವುಳ್ಳದ್ದು ಮತ್ತು ಸ್ವಜ್ಞಾನವುಳ್ಳದ್ದು ಎಂದು ಶೈವರು ಮತ್ತು ಸಾಂಖ್ಯರು ಒಪ್ಪಿಕೊಳ್ಳುತ್ತಾರೆ ಮತ್ತು ಅದು ಆನಂದಮಯ ಎನ್ನುವುದನ್ನು ವಿರೋಧಿಸುವುದಿಲ್ಲ. ಪತಂಜಲಿಯ ಯೋಗಸೂತ್ರಗಳ ಮೇಲಿನ

ಭಾಷ್ಯದಲ್ಲಿ ಶ್ರೀ ವೇದವ್ಯಾಸರು ಈ ಕಥೆಯನ್ನು ಹೇಳಿದ್ದಾರೆ: ಒಮ್ಮೆ ಜೈಗಿಷವ್ಯನೆಂಬ ಒಬ್ಬ ಮಹಾನ್ ಯೋಗಿಯಿದ್ದನು. ಯೋಗಾಭ್ಯಾಸದಿಂದ ಅವನು ಎಲ್ಲಾ ಸಿದ್ಧಿಗಳನ್ನು ಗಳಿಸಿಕೊಂಡು, ವಿಶ್ವದ ಇತಿಹಾಸವನ್ನು ಅನೇಕ ಜನ್ಮಾಂತರಗಳವರೆಗೆ ಹೇಳಬಲ್ಲವನಾಗಿದ್ದನು. ಕಾಲಸಂದಂತೆ ಅವನು ಸಿದ್ಧಿಗಳ ಕಡೆಗೆ ವಿಮುಖನಾಗಿ, ಆತ್ಮಜ್ಞಾನವನ್ನು ಗಳಿಸಿ ತನ್ನ ನಿಜಸ್ವರೂಪವನ್ನು ಅರಿತುಕೊಂಡು, ಅದರಲ್ಲೇ ಮಗ್ನನಾಗಿದ್ದನು. ಆಗಲೇ ಗಳಿಸಿದ ಸಿದ್ಧಿಗಳಿಂದ ಯಾವ ರೀತಿಯ ಆನಂದವನ್ನು ಅನುಭವಿಸಿದೆಯೆಂದು ಒಮ್ಮೆ ಗುರುಗಳು ಅವನನ್ನು ಕೇಳಿದಾಗ, 'ಯಾವ ಆನಂದವನ್ನೂ ಅನುಭವಿಸಲಿಲ್ಲ' ಎಂದು ಅವನು ಉತ್ತರಿಸಿದನು. ಶ್ರೇಷ್ಠವಾದ ಸಿದ್ಧಿಗಳಿಂದ ಯಾವ ಆನಂದವೂ ದೊರೆಯಲಿಲ್ಲವೆಂದು ಕೇಳಿ ಗುರುಗಳು ಆಶ್ಚರ್ಯಚಕಿತರಾದಾಗ, ಅವನು 'ಸಿದ್ಧಿಗಳಿಂದ ದೊರೆಯುವ ಶಕ್ತಿಯು ಕೊಡುವ ಆನಂದವು ಜಗತ್ತಿನಲ್ಲಿ ದೊರೆಯುವ ಇತರ ಆನಂದಗಳಿಗಿಂತ ಉತ್ತಮವಾದುದರಲ್ಲಿ ಸಂಶಯವಿಲ್ಲ. ಆದರೆ ಕೈವಲ್ಯದಿಂದ ಅಥವಾ ಮುಕ್ತಿಯಿಂದ ದೊರೆಯುವ ಆನಂದದ ಎದುರಿಗೆ ಅದು ತೃಣಸಮಾನ' ಎಂದನು.

ಆತ್ಮವು ಆನಂದದ ಸಾಗರವೆಂದು ಈ ಕಥೆಯಿಂದ ತಿಳಿದುಬರುತ್ತದೆ. ಸಾಂಖ್ಯರು ಇದನ್ನು ಮುಕ್ತವಾಗಿ ಒಪ್ಪಿಕೊಳ್ಳುವುದಿಲ್ಲ ಯಾಕೆಂದರೆ ಆನಂದ ಶಬ್ದವನ್ನು ಐಹಿಕ ವಿಷಯ ವಸ್ತುಗಳ ಉಪಭೋಗದಿಂದ ದೊರೆಯುವ ಸಂತೋಷಕ್ಕೆ ಪರ್ಯಾಯವಾಗಿ ಉಪಯೋಗಿಸಿರುವುದು. ಇಂದ್ರ ಅಥವಾ ಚತುರ್ಮುಖನ ಸ್ಥಾನವನ್ನು ಪಡೆಯುವ ಸಂತೋಷಕ್ಕಿಂತಲೂ ಹೆಚ್ಚಿನದು ಆತ್ಮದ ಅರಿವುಂಟಾಗುವುದರಿಂದ ಆಗುತ್ತದೆಯೆಂದು ನೈಯಾಯಿಕರೂ ಒಪ್ಪುತ್ತಾರೆ. ಆದರೆ ಮೋಕ್ಷದ ಸ್ಥಿತಿಯಲ್ಲಿ ಆತ್ಮವು ಕಲ್ಲಿನಂತೆ ಜಡವಾಗುತ್ತದೆ ಎಂದು ಅವರು ಹೇಳುತ್ತಾರೆ ಯಾಕೆಂದರೆ ದೇಹ ಮತ್ತು ಇಂದ್ರಿಯಗಳ ಸಂವೇದನೆಗಳು ಅದಕ್ಕೆ ಆಗ ಇಲ್ಲ. ಇದೇ ಕಾರಣಕ್ಕಾಗಿ ಶೂನ್ಯವಾದಿಗಳು ಕೂಡಾ ನಿರ್ವಾಣದಲ್ಲಿ ಆತ್ಮವು ಅವಸ್ತುವಾಗುತ್ತದೆಯೆಂದು ಹೇಳುತ್ತಾರೆ.

ಎಲ್ಲವೂ ತಾತ್ಕಾಲಿಕ ಎಂಬ ತಮ್ಮ ವಾದವನ್ನು ಪುಷ್ಟೀಕರಿಸಿ, ಆತ್ಮವು ನಿರಂತರವಲ್ಲ, ಶಾಶ್ವತವಲ್ಲ; ಅದು ಹಲವು ಕ್ಷಣಿಕ ಪರಿವರ್ತನೆಗೊಳ್ಳುತ್ತಿರುವ ವಿಚಾರ ಯಾ ಅರಿವುಗಳ ಸರಣಿ ಎಂದು ವಿಜ್ಞಾನವಾದಿಗಳು (ಸಹಜ ಬೌದ್ಧರು) ಹೇಳುತ್ತಾರೆ. ನಿಜವಾದ ಜ್ಞಾನದಿಂದ ಭ್ರಾಮಕ ವಸ್ತು–ವಿಷಯಗಳ ನಾಶವು ಉಂಟುಮಾಡುವ ಸ್ವತಂತ್ರ ಶುದ್ಧ ಆಲೋಚನೆಗಳ ಸರಣಿಯು ಮುಕ್ತಿ ಎಂದು ಅವರು ಭಾವಿಸುತ್ತಾರೆ. ಮುಕ್ತಿಯಲ್ಲಿ ಆತ್ಮದ ನಿರಂತರತೆಯ ಅನುಭವವಾಗುತ್ತದೆ, ಅಗ್ನಿಜ್ವಾಲೆಯ ನಿರಂತರತೆಯಂತೆ. ಆತ್ಮದ ನಿರಂತರತೆಯು ಅನುಭವಗಮ್ಯವಾಗಿದ್ದರೂ, ಅದನ್ನು ತಮ್ಮ ಕ್ಷಣಿಕತೆಯ ವಾದವನ್ನು ಪುಷ್ಟೀಕರಿಸಲು ಅವರು ಒಪ್ಪುವುದಿಲ್ಲ. ಬಾಹ್ಯ ವಸ್ತುಗಳಿಗೆ, ವಸ್ತುಗಳ ಯೋಚನೆಗಳ (ಸ್ವತಂತ್ರವಾದ ಕ್ಷಣಿಕ ಜ್ಞಾನದ ಸ್ಥಿತಿ) ಹೊರತಾದ ಸ್ವತಂತ್ರ ಅಸ್ತಿತ್ವವಿಲ್ಲ ಮತ್ತು ಯೋಚನೆಗಳು ಅನುಭವಜನ್ಯ ಅಲ್ಲ ಎಂಬುದು ಅವರ ನಂಬಿಕೆ. ಮೀಮಾಂಸಕರು ಇದನ್ನು ವಿರೋಧಿಸಿ, ಜ್ಞಾನಗೋಚರವಾಗುವ ವಸ್ತು ರೂಪಗಳು, ಅದೇ ಬಾಹ್ಯ ವಸ್ತುಗಳ ಅಂತರ್ಯದಲ್ಲಿವೆ; ಆಲೋಚನೆಗಳ ಅಥವಾ ಮನಃಸ್ಥಿತಿಗಳ ಅಸ್ತಿತ್ವವು ಅನುಭವಜನ್ಯ ವಸ್ತುರೂಪಗಳೊಡನೆ ನೇರ ಸಂಬಂಧವನ್ನು ಹೊಂದಿವೆ ಎನ್ನುತ್ತಾರೆ. 'ಈಗ ಈ ವಸ್ತುವನ್ನು ಸ್ಪರ್ಷಿಸುತ್ತಿರುವ ನಾನು, ಹಿಂದೆ ಅದರ ರುಚಿಯನ್ನು ಅನುಭವಿಸಿದ್ದ ವ್ಯಕ್ತಿಯೇ ಆಗಿದ್ದೇನೆ' ಎಂದು ಆಲೋಚಿಸುವ ಮನಸು, ಆತ್ಮದ ನಿರಂತರತೆಯ ಪ್ರಮಾಣವಾಗಿದೆ. ಆತ್ಮವು ಕರ್ತೃವೂ, ಅನುಭವಿಸುವುದೂ ಆಗಿದೆ ಎಂದು ಮೀಮಾಂಸಕರು ಹೇಳಿದರೆ, ಅದು ಕಾರ್ಯವನ್ನು ಮಾಡುವುದು ಅಥವಾ ಆನಂದಿಸುವುದು ಉಪಾಧಿಗಳೊಡನೆ ಸಂಪರ್ಕವನ್ನು ಹೊಂದಿದಾಗ ಮಾತ್ರ ಎಂದು ವೇದಾಂತಿಗಳು ಹೇಳುತ್ತಾರೆ. ಚಾರ್ವಾಕರ ವಾದಗಳನ್ನು ಖಂಡಿಸುವುದು ಮೀಮಾಂಸಕರ ಮುಖ್ಯ ಗುರಿಯಾದುದರಿಂದ, ದೇಹದಿಂದ ಸ್ವತಂತ್ರವಾಗಿ ಬೇರೆಯಾದ ಒಂದು ವಸ್ತುವನ್ನು, ವೇದಗಳ ಬೋಧನೆಗಳ ವಿರುದ್ಧ ಹೋಗದಂತೆ ಈಗ ಈ ಲೋಕದಲ್ಲಿ ಕರ್ಮಗಳನ್ನು ಮಾಡಿ, ಮುಂದೆ ಅದರ

ಫಲಗಳನ್ನು ಬೇರೊಂದು ಲೋಕದಲ್ಲಿ ಪಡೆಯುವ, ಒಪ್ಪಿಕೊಳ್ಳುವುದರಲ್ಲಿ ಅವರು ಸಮಾಧಾನ ಪಟ್ಟುಕೊಳ್ಳುತ್ತಾರೆ. ವೇದ ಪ್ರಣೀತ ಕರ್ಮಗಳಿಗೆ ಒಂದು ತಾರ್ಕಿಕ ವಿವರಣೆಯನ್ನು ನೀಡುವುದು ಮೀಮಾಂಸಕರ ಮುಖ್ಯ ಉದ್ದೇಶವಾಗಿರುವುದರಿಂದ, ಆತ್ಮವು ತನ್ನ ಮೂಲ ಸ್ವರೂಪದಲ್ಲಿ ಸತ್ ಚಿತ್ ಮತ್ತು ಆನಂದವಾಗಿದೆ ಎನ್ನುವುದನ್ನು ಅವರು ಅಲ್ಲಗಳೆಯುವುದಿಲ್ಲ.

ವಿಶ್ವವು ವಸ್ತುಮೂಲಗಳಿಂದ ಮಾಡಲ್ಪಟ್ಟಿದೆ, ವಸ್ತುಗಳು ಸತ್ಯವಾಗಿವೆ ಮತ್ತು ಅದರಲ್ಲಿ ಅನಂತ ಆತ್ಮಗಳಿವೆ ಎಂದು ಇತರ ಎಲ್ಲಾ ಮತಗಳವರು, ಮುಖ್ಯವಾಗಿ ಸಾಂಖ್ಯರು ಮತ್ತು ನೈಯಾಯಿಕರು, ಪ್ರತಿಪಾದಿಸುತ್ತಾರೆ. ಆದರೆ ಆತ್ಮವು ಮುಕ್ತವಾದಾಗ, ಅದು ಅದರಷ್ಟಕ್ಕೇ ಸ್ವಪ್ರಕಾಶದಲ್ಲಿ ಇದ್ದು ಬೇರಾವುದೂ ಅದಕ್ಕೆ ಗೋಚರವಾಗುವುದಿಲ್ಲ ಎಂದು ಒಪ್ಪಿಕೊಳ್ಳುತ್ತಾರೆ. ಅದಲ್ಲದೆ ಆತ್ಮದ ನಿಜಜ್ಞಾನವನ್ನು ಪಡೆದಾಗ ಮತ್ತು ಆತ್ಮವನ್ನು ವಸ್ತುವಿನಿಂದ ಬೇರ್ಪಡಿಸಿದಾಗ ಮುಕ್ತಿಯು ಲಭಿಸುವುದೆಂದು ತಾರ್ಕಿಕರು ಮತ್ತು ಸಾಂಖ್ಯರು ಕಲಿಸುತ್ತಾರೆ. ಆತ್ಮದ ನಿಜಜ್ಞಾನದಿಂದ ವಿಶ್ವ ಮತ್ತು ಅದರಲ್ಲಿರುವ ವಸ್ತು–ವಿಷಯಗಳು ಅದೃಷ್ಯವಾದರೆ, ಅವುಗಳು ಅಸ್ತಿತ್ವದಲ್ಲಿವೆಯೆಂದು ಹೇಗೆ ಹೇಳುವುದು? ಮತ್ತು ಯಾವುದು ನಮ್ಮ ಅನುಭವಕ್ಕೆ ಬರುವುದಿಲ್ಲವೋ ಅದು ಅಸ್ತಿತ್ವದಲ್ಲಿರುವುದು ಹೇಗೆ? ಹಾಗಾಗಿ ಆತ್ಮದ ನಿಜಜ್ಞಾನದ ಹಿನ್ನೆಲೆಯಲ್ಲಿ ವಿಶ್ವದ ಅಸ್ತಿತ್ವವು ಪ್ರಶ್ನಾರ್ಹವಾಗುತ್ತದೆ. ಜ್ಞಾನವುಂಟಾದಾಗ ಭ್ರಮೆಯು ಹರಿಯುವುದು; ನಮಗೆ ಹಗ್ಗದಲ್ಲಿ ಹಾವು ಕಾಣುವುದು ಭ್ರಮೆಯ ಕಾರಣದಿಂದ; ಭ್ರಮೆಯು ತೊಲಗಿದಾಗ ಅಲ್ಲಿ ನಮಗೆ ಕಂಡುಬರುವುದು ಹಗ್ಗವೇ ಹೊರತು ಹಾವಲ್ಲ. ಅದೇರೀತಿ ವಿಶ್ವವೆಂಬ ಭ್ರಮೆಯು ಜ್ಞಾನದಿಂದ ತೊಲಗಿದಾಗ ನಮಗೆ ಅಲ್ಲಿ ಆತ್ಮವೊಂದೇ ಕಂಡುಬರುವುದು. ತನ್ನ ಯೋಗಸೂತ್ರಗಳಲ್ಲಿ ಪತಂಜಲಿಯು ಹೇಳುತ್ತಾನೆ: ‘ಜ್ಞಾನಿಯ ದೃಷ್ಟಿಯಿಂದ ವಿಶ್ವವು ಲಯವಾದರೂ, ಅದು ಇತರರ ಅನುಭವದಲ್ಲಿ ಬರುವುದರಿಂದ, ಅದು ಸಂಪೂರ್ಣವಾಗಿ ಲಯವಾಗಿದೆಯೆಂದು ಹೇಳಲಾಗದು.’ ಯಾವುದು ಎಲ್ಲರಿಗೂ ಸಮಾನವಾಗಿ ಕಂಡುಬಂದರೆ, ಆಗ ಅದು ಸತ್ಯವೆಂದು ತಿಳಿಯಬಹುದು; ಹಾಗಾಗಿ ಜಗತ್ತನ್ನು ಭ್ರಮೆ ಅಥವಾ ಮಿಥ್ಯೆ ಎಂದು ಹೇಳಿರುವುದು.

ಉಪಸಂಹಾರ

ಆರ್ಯರ ವಿವಿಧ ಮತ ಮತ್ತು ಧರ್ಮಗಳ ಕುರಿತಾದ ಈ ಲಘು ವಿಮರ್ಶೆಯು ಮುಂದಿನ ವೇದಾಂತ ದರ್ಶನದ ಮುಖ್ಯಾಂಶಗಳ ವಿವರಣೆಗಳ ಬಗೆಗಿನ ಲಘು ಕಾವ್ಯಕ್ಕೆ ಒಂದು ಮುನ್ನುಡಿಯಾಗಿದೆ. ಇದರಲ್ಲಿ ಇತರ ಸಿದ್ಧಾಂತಗಳ ನಿರ್ಧಾರಗಳನ್ನೂ ನಿರಾಕರಿಸಲಾಗಿದೆ. ವಿವಿಧ ಮತದವರ ಆಲೋಚನೆ ಮತ್ತು ವಿವರಣೆಗಳು ಯಾವರೀತಿಯಲ್ಲಿ ಭಿನ್ನವಾಗಿವೆ ಎಂಬುದನ್ನೂ ಮತ್ತು ಅಂತಿಮವಾಗಿ ಅವುಗಳು ಯಾವ ಅಂಶದಲ್ಲಿ ಸಹಮತವನ್ನು ಹೊಂದಿವೆ ಎಂಬುದನ್ನೂ ತಿಳಿಸಲು ಪ್ರಯತ್ನಿಸಲಾಗಿದೆ. ಹೀಗೆ ವಿವಿಧ ಮತಗಳ ದೃಷ್ಟಿಕೋನಗಳನ್ನು ಸಮದೃಷ್ಟಿಯಿಂದ ವಿಮರ್ಶಿಸುವುದರಿಂದ, ಆರ್ಯರ ಧಾರ್ಮಿಕ ಮತ್ತು ತಾತ್ವಿಕ ವಿಚಾರಗಳನ್ನು, ವಿವಿಧ ಜನರ ಆಲೋಚನೆಗಳ ಮಟ್ಟಕ್ಕೆ ಸರಿಯಾಗಿ, ಪ್ರಸ್ತುತಪಡಿಸಲು ಸಾಧ್ಯವಾಗಿದೆ.

ಮೈಸೂರು — ಅಲ್ಲಾಡಿ ಮಹದೇವ ಶಾಸ್ತ್ರಿ

ಪ್ರಥಮೋಲ್ಲಾಸಃ

ಅಹಂಕಾರದಂತೆ ಆತ್ಮ

मङ्गळं दिशतु मे विनायको मङ्गळं दिषतु मे सरस्वती ।
मङ्गळं दिशतु मे महेश्वरी मङ्गळं दिशतु मे सदाशिवः ॥ १ ॥

ಮಂಗಳಂ ದಿಶತು ಮೇ ವಿನಾಯಕೋ ಮಂಗಳಂ ದಿಷತು ಮೇ ಸರಸ್ವತೀ ।
ಮಂಗಳಂ ದಿಶತು ಮೇ ಮಹೇಶ್ವರೀ ಮಂಗಳಂ ದಿಶತು ಮೇ ಸದಾಶಿವಃ ॥ 1 ॥

ವಿನಾಯಕನು ನನ್ನನ್ನು ಅನುಗ್ರಹಿಸಲಿ, ಸರಸ್ವತೀಯು ನನ್ನನ್ನು ಅನುಗ್ರಹಿಸಲಿ, ಮಹೇಶ್ವರಿಯು ನನ್ನನ್ನು ಅನುಗ್ರಹಿಸಲಿ, ಸದಾಶಿವನು ನನ್ನನ್ನು ಅನುಗ್ರಹಿಸಲಿ. [1–1]

ಶ್ರೀರಾಮತೀರ್ಥರ ವಿವೃತ್ತಿ

ಪ್ರೋದ್ಯಚ್ಛಾಖಿಮಹಾವಟದ್ರುಮತಲೇ ಯೋಗಾಸನಸ್ಥಂ ಪ್ರಭುಂ
ಪ್ರತ್ಯಕ್ತತ್ತ್ವಬುಭುತ್ಸುಭಿಃ ಪ್ರತಿದಿಶಂ ಪ್ರೋದ್ವೀಕ್ಷ್ಯಮಾಣಾನನಮ್ ।
ಮುದ್ರಾಂ ತರ್ಕಮಯೀಂ ದಧಾನಮಮಲಂ ಕರ್ಪೂರಗೌರಂ ಶಿವಂ
ಹೃದ್ಯಂತಃ ಕಲಯೇ ಸ್ಫುರಂತಮನಿಶಂ ಶ್ರೀದಕ್ಷಿಣಾಮೂರ್ತಿಕಮ್ ॥

ನತ್ವಾದ್ಯಾನ್ ಶಂಕರಾಚಾರ್ಯಮುಖ್ಯಾನ್ಸರ್ವಾನ್ ಗರೀಯಸಃ ।
ಮಾನಸೋಲ್ಲಾಸವೃತ್ತಾಂತಂ ವರ್ಣಯಾಮಿ ಯಥಾಮತಿ ॥

ಇದರಲ್ಲಿ ಭಗವಾನ್ ಶ್ರೀಮಚ್ಛಂಕರಾಚಾರ್ಯ ಎಂಬ ಹೆಸರಿನ ಭಾಷ್ಯಕಾರರು ಮಂದಮತಿಗಳನ್ನು ಮತ್ತು ತತ್ತ್ವಜಿಜ್ಞಾಸುಗಳನ್ನು ಅನುಗ್ರಹಿಸುವ ಉದ್ದೇಶದಿಂದ ದಕ್ಷಿಣಾಮೂರ್ತಿಸ್ತೋತ್ರದ ಮೂಲಕ ಸಮಸ್ತ ವೇದಾಂತರಹಸ್ಯಗಳನ್ನು ಹತ್ತು ಪದ್ಯಗಳಲ್ಲಿ ಬಂಧಿಸಿರುವರು. ಅವರ ಶಿಷ್ಯರಾದ ವಿಶ್ವರೂಪಾಚಾರ್ಯರು, ಸುರೇಶ್ವರರೆಂದು ಹೆಚ್ಚಾಗಿ ಪ್ರಸಿದ್ಧರಾದವರು, ಆ ಪದ್ಯಗಳಲ್ಲಿ ಬಂಧಿಸಿರುವ ತತ್ತ್ವಾರ್ಥಗಳ ತಾತ್ಪರ್ಯವನ್ನು ಮಾನಸೋಲ್ಲಾಸ ಎಂಬ ಹೆಸರಿನ ವಾರ್ತಿಕ ರೂಪದ ಗ್ರಂಥದಲ್ಲಿ ಆವಿಷ್ಕರಿಸಿದರು. ಆ ಗ್ರಂಥವನ್ನು ನಾನು ಯಥಾಶಕ್ತಿ ವಿವರಿಸಿರುವೆನು. ಅದರ ವಿಶಿಷ್ಟಾಚಾರವನ್ನು ಸಂರಕ್ಷಿಸಲು ಮಾಡಿರುವ ಮಂಗಲಾಚರಣೆಯು ಈ ಪ್ರಥಮ ಶ್ಲೋಕವು **ಮಂಗಳಂ ದಿಶತ್ವಿತ್ಯಾದಿ.** [1–1]

ಸ್ತೋತ್ರದ ಗುರಿ

आत्मलाभात्परो लाभो नास्तीति मुनयो विदुः ।
तल्लाभार्थं कविस्स्तौति स्वात्मानां परमेश्वरम् ॥ २ ॥

ಆತ್ಮಲಾಭಾತ್ಪರೋ ಲಾಭೋ ನಾಸ್ತೀತಿ ಮುನಯೋ ವಿದುಃ ।
ತಲ್ಲಾಭಾರ್ಥಂ ಕವಿಸ್ಸ್ತೌತಿ ಸ್ವಾತ್ಮಾನಂ ಪರಮೇಶ್ವರಮ್ ॥ 2 ॥

ಆತ್ಮಜ್ಞಾನದ ಲಾಭಕ್ಕಿಂತ ಹೆಚ್ಚಿನ ಲಾಭ ಯಾವುದೂ ಇಲ್ಲವೆಂದು ಜ್ಞಾನಿಗಳು (ಋಷಿ ಮುನಿಗಳು) ಹೇಳುತ್ತಾರೆ. ಈ ದೃಷ್ಟಿಯಿಂದ ಕವಿಯು ತನ್ನೊಳಗಿನ ಆತ್ಮರೂಪೀ ಪರಮೇಶ್ವರನನ್ನು ಸ್ತುತಿಸುತ್ತಾರೆ. [1–2]

ವಿವೃತ್ತಿ

ಈ ಶ್ಲೋಕದ ವೇದಾಂತಶಾಸ್ತ್ರಪ್ರಕರಣ ರೂಪದಿಂದಾಗಿ, ಅದನ್ನು ಮತ್ತು ಶಾಸ್ತ್ರವನ್ನು ಅನೇಕ ವಿಧವಾದ ಲಕ್ಷಣಗಳಿಂದ ಸಂಬದ್ಧಗೊಳಿಸಬಹುದಾಗಿರುವುದನ್ನು ತಿಳಿಸಲು ಶಾಸ್ತ್ರೀಯ ವಿಷಯಪ್ರಯೋಜನವನ್ನು ತಿಳಿಸುವ **ಆತ್ಮಾಲಾಭಾದಿತ್ಯಾದಿನಾ.** ಆತ್ಮವು ಪ್ರತ್ಯಕ್ಷವಾಗಿ ಸರ್ವಸಾಕ್ಷಿಯಾಗಿರುವುದರಿಂದ, ಅದರ ಲಾಭವು ವಿಶೇಷ ಅರ್ಥಗಳನ್ನು ಭೇದಿಸುವಾಗ ಉದ್ಧರಿಸಲ್ಪಡುವುದರಿಂದ, ಆ ಲಾಭಕ್ಕಿಂತ ಉತ್ಕೃಷ್ಟವಾದ ಲಾಭವು ಇಲ್ಲವೆಂದು ಆಪಸ್ತಂಬ ಮೊದಲಾದ ಮುನಿಗಳು ತಿಳಿದಿದ್ದು, 'ಆತ್ಮಲಾಭಾನ್ನ ಪರಂ ವಿದ್ಯತೇ' (ಆಪ.ಧ.1.2.2.2) ಮುಂತಾದ ಸ್ಮೃತಿವಚನಗಳು ಕೂಡ ಹೇಳುತ್ತವೆ ಎಂಬ ಅರ್ಥವು. ಅಂತೆಯೇ ನಿರಸ್ತವಾದ ಅಜ್ಞಾನದಿಂದ, ಅದರ ಕಾರ್ಯಪ್ರಪಂಚದಲ್ಲಿ ಬ್ರಹ್ಮರೂಪದ ಆತ್ಮನ ಅವಸ್ಥಾನದ ಪ್ರಯೋಜನವು 'ಬ್ರಹ್ಮ ವೇದ ಬ್ರಹ್ಮೈವ ಭವತಿ' (ಮು.ಉ.3.2.9) ಮುಂತಾಗಿ ಶಾಸ್ತ್ರಗಳಲ್ಲಿ ಸಿದ್ಧವಾಗಿದೆ. ಸ್ವ ಆತ್ಮವೇ ಪರಮೇಶ್ವರನು ಎಂದು ಸಮಾನಾಧಿಕರಣವನ್ನು ಮಾಡಿ ತತ್ತ್ವ-ಪದಾರ್ಥಗಳ ಐಕ್ಯವು ಶಾಸ್ತ್ರವಿಷಯವು ಎಂದು ತಿಳಿಸುತ್ತದೆ. [1–2]

स्वेच्छया सृष्टमाविष्य विश्वं यो मनसि स्थितः ।
स्तोत्रेण स्तूयतेऽनेन स एव परमेश्वरः ॥ ३ ॥

ಸ್ವೇಚ್ಛಯಾ ಸೃಷ್ಟಮಾವಿಶ್ಯ ವಿಶ್ವಂ ಯೋ ಮನಸಿ ಸ್ಥಿತ: ।
ಸ್ತೋತ್ರೇಣ ಸ್ತೂಯತೇಽನೇನ ಸ ಏವ ಪರಮೇಶ್ವರಃ ॥ 3 ॥

ಯಾವನು ತನ್ನ ಇಚ್ಛಾನುಸಾರವಾಗಿ ಸೃಷ್ಟಿಸಿದ ಬ್ರಹ್ಮಾಂಡವನ್ನು ಪ್ರವೇಶಿಸಿ, ಎಲ್ಲರ ಮನದಲ್ಲೂ ಬೆಳಗುತ್ತಾನೋ, ಆ ಪರಮೇಶ್ವರನನ್ನು ಈ ಸ್ತೋತ್ರದಿಂದ ಸ್ತುತಿಸುತ್ತೇನೆ. [1–3]

ವಿವೃತ್ತಿ

ಇಂತಹ ಶಾಸ್ತ್ರೀಯವಿಷಯದ ಪ್ರಯೋಜನದ ಸ್ವರೂಪವನ್ನು ನಿರ್ದಿಷ್ಟಗೊಳಿಸಿ, ಈ ಸ್ತೋತ್ರದ ಲಾಭವನ್ನು ಸ್ಫುಟಗೊಳಿಸಲು ***ಸ್ವೇಚ್ಛಯೇತಿ. ಸ್ವೇಚ್ಛಯಾ*** ಸ್ವಶಕ್ತಿಯಿಂದ ***ಸೃಷ್ಟಂ*** ಚಿದಾತ್ಮನಿಂದ ಉತ್ಪತ್ತಿಯಾಗಿರುವ ***ವಿಶ್ವಂ*** ಸ್ಥೂಲ-ಸೂಕ್ಷ್ಮ ಮತ್ತು ಸಮಷ್ಟಿ-ವ್ಯಷ್ಟಿ ರೂಪದಲ್ಲಿರುವ ಜಗತ್ತು ***ಆವಿಶ್ಯ*** ಮಡಕೆಯ ನೀರಿನಲ್ಲಿ ಪ್ರತಿಬಿಂಬಿಸಿದ ಸೂರ್ಯಬಿಂಬದಿಂದಾಗಿ ಸೂರ್ಯನು ಮಡಕೆಯಲ್ಲಿ ಸನ್ನಿಹಿತನಾಗಿರುವ ಆಭಾಸವನ್ನು ಉಂಟುಮಾಡಿದಂತೆ ***ಯೋ ಮನಸಿ ಸ್ಥಿತ:*** ಅಂತಃಕರಣದಲ್ಲಿ ವಿಶೇಷವಾಗಿ ಅಭಿವ್ಯಕ್ತವಾಗಿರುವ ***ಸ ಏವ ಪರಮೇಶ್ವರಃ ಅನೇನ ಸ್ತೋತ್ರೇಣ ಸ್ತೂಯತೇ*** ತಾನು ಅಧ್ಯಸ್ತವಾಗಿರುವ ಪ್ರಪಂಚದ ಪ್ರತಿಯೊಂದು ಜೀವಿಯ ಚಿತ್ತದಲ್ಲಿ ಪ್ರತಿಪಾದಿತವಾಗಿರುವವನನ್ನು ಸ್ತುತಿಸುತ್ತೇನೆ. ಹೀಗೆ ಶಾಸ್ತ್ರದ ಒಂದು ವಿಧದ ಸಂಬಂಧವನ್ನು ಉಪಪಾದಿಸಿದೆ. [1–3]

ಮೂಲಭೂತ ಪ್ರಶ್ನೆಗಳು

ಜನ್ಮಜನ್ಮಾಂತರಗಳಿಂದ ಒಟ್ಟುಗೂಡಿಸಿದ ಕರ್ಮಗಳ (ಸಂಚಿತ ಕರ್ಮ) ಪರಿಣಾಮದಿಂದ, ಒಬ್ಬನು ತನ್ನ ಮನಸಿನ ಮೇಲೆ ತಕ್ಕಮಟ್ಟಿನ ಹತೋಟಿಯನ್ನು ಪಡೆದುಕೊಳ್ಳುತ್ತಾನೆ, ಪ್ರಾಪಂಚಿಕ ಲಾಲಸೆಗಳೆಡೆ ಸ್ವಲ್ಪ ವಿಮುಖನಾಗುತ್ತಾನೆ, ಸದ್ವಸ್ತುವಿನ ಕಿರುನೋಟವನ್ನು ಗಳಿಸಿಕೊಳ್ಳುತ್ತಾನೆ, ವಾಸ್ತವಿಕ ಮತ್ತು ಶಾಶ್ವತಗಳನ್ನು ಅವಾಸ್ತವಿಕ ಮತ್ತು

ಅಶಾಶ್ವತಗಳಿಂದ ಬೇರೆಯಾಗಿಸುತ್ತಾನೆ ಹಾಗೂ ಶ್ರುತಿಗಳ ಅಧ್ಯಯನದೆಡೆಗೆ ಸೆಳೆಯಲ್ಪಡುತ್ತಾನೆ. ಕೆಲಸಮಯದ ಅಧ್ಯಯನದ ಬಳಿಕ ಮತ್ತು ಅನುಭವಗಳಿಂದ, ಒಬ್ಬ ಗುರುವಿನೆಡೆಗೆ ಸಾಗಿ ಶಿಷ್ಯವೃತ್ತಿ ಕೈಗೊಂಡು ಈ ಪ್ರಶ್ನೆಗಳನ್ನು ಮುಂದಿಡುತ್ತಾನೆ:

अस्ति प्रकाशत इति व्यवहारः प्रवर्तते ।
तच्चास्तित्वं प्रकाशत्वं कस्मिन्नर्थे प्रतिष्ठितम् ॥ ४ ॥

ಅಸ್ತಿ ಪ್ರಕಾಶತ ಇತಿ ವ್ಯವಹಾರಃ ಪ್ರವರ್ತತೇ ।
ತಚ್ಚಾಸ್ತಿತ್ವಂ ಪ್ರಕಾಶತ್ವಂ ಕಸ್ಮಿನ್ನರ್ಥೇ ಪ್ರತಿಷ್ಠಿತಂ ॥ 4 ॥

ಪ್ರಶ್ನೆ 1. ನಾವು ವಸ್ತುಗಳನ್ನು ಇರುವಿಕೆಯಿಂದಲೂ, ಕಾಣಲ್ಪಡುವಿಕೆಯಿಂದಲೂ ನಿತ್ಯ ವ್ಯವಹಾರದಲ್ಲಿ ಗುರುತಿಸುತ್ತೇವೆ. ಆದರೆ ಈ ಇರುವಿಕೆಯು ಯಾವ ನಿಯಮಗಳಿಂದ ಬಂಧಿಸಲ್ಪಟ್ಟಿದೆ ಹಾಗೂ ಯಾವ ಪ್ರಕಾಶದಿಂದ ಅವು ಕಾಣಲ್ಪಡುತ್ತದೆ? [1–4]

ವಿವೃತ್ತಿ

ಇಲ್ಲಿ ಇನ್ನೊಂದು ವಿಧವಾಗಿ ವಸ್ತುಗಳ ಲಕ್ಷಣವನ್ನು ಹೇಳಿ ಅವುಗಳ ಅಧಿಕಾರಪುರುಷರನ್ನು ಸ್ಥಾಪಿಸುವ **ಅಸ್ತಿ ಪ್ರಕಾಶತ ಇತೀತಿ.** ಪೂರ್ವಜನ್ಮಗಳಲ್ಲಿ ಯಾದೃಚ್ಛಿಕವಾಗಿ ಮಾಡಿರುವ ಪುಣ್ಯಪುಂಜಗಳ ಪರಿಣಾಮವಾಗಿ ವಿವೇಕ ವೈರಾಗ್ಯಗಳು ಸಂಪನ್ನನಾಗಿ, ಶಮ ಮೊದಲಾದ ಗುಣಯುಕ್ತನಾದವನು ತನ್ನ ವ್ಯವಹಾರದಲ್ಲಿ ಸಮದೃಷ್ಟಿಯಿಂದ ಸರ್ವ ಪದಾರ್ಥಗಳನ್ನು ನೋಡುವಾಗ ಇರುವಿಕೆ, ಬೆಳಗುವಿಕೆ ಭಾಸವಾಗುವುದು. ಯಾವ ಧರ್ಮದ ಅನುಸಾರವಾಗಿ ಎಲ್ಲಾ ದೃಷ್ಯ ವಸ್ತುಗಳಿಗೆ ಅಸ್ತಿತ್ವವಿದೆ ಮತ್ತು ಹೇಗೆ ಪ್ರಕಾಶಿಸುತ್ತವೆ?

ಇದರ ಅಕ್ಷರಾರ್ಥವು ಹೀಗಿದೆ: ನಿತ್ಯ ವ್ಯವಹಾರದಲ್ಲಿ ಸರ್ವ ಪದಾರ್ಥಗಳಿಗೆ ಅಸ್ತಿತ್ವ ಮತ್ತು ಪ್ರಕಾಶತ್ವಗಳು ಇರುವುದು. ಈ ಅಸ್ತಿತ್ವ-ಪ್ರಕಾಶತ್ವಗಳು ಹೇಗೆ ನಿರಪೇಕ್ಷವಾಗಿರುವುದು ಎಂದು ಕೇಳುವನು ಗುರು ಸಮ್ಮುಖದಲ್ಲಿ ಎಂದು ಸೇರಿಸಿಕೊಳ್ಳುವುದು. [1–4]

किं तेषु तेषु वार्थेषु किं वा सर्वात्मनीश्वरे ।
ईश्वरत्वं च जीवत्वं सर्वात्मत्वं च कीदृशम् ॥ ५ ॥

ಕಿಂ ತೇಷು ತೇಷು ವಾರ್ಥೇಷು ಕಿಂ ವಾ ಸರ್ವಾತ್ಮನೀಶ್ವರೇ ।
ಈಶ್ವರತ್ವಂ ಚ ಜೀವತ್ವಂ ಸರ್ವಾತ್ಮತ್ವಂ ಚ ಕೀದೃಶಮ್ ॥ 5 ॥

ಅದು ಈ ವಸ್ತುಗಳಲ್ಲಿ ಬಹುಬಗೆಯಾಗಿ ಇರುವುದೋ ಯಾ ಸರ್ವಾತ್ಮಕಾರಕನಾದ ಈಶ್ವರನಲ್ಲಿಯೋ? [1–5]

ಬಾಹ್ಯ ಘಟನಾವಳಿಗಳು ಸಮಯದಿಂದ ಸಮಯಕ್ಕೆ ಬದಲಾವಣೆಯಾಗುತ್ತಿದ್ದರೂ, ಅವುಗಳೊಡನೆ ನಮ್ಮ ಸಂಬಂಧ ಯಾ ಅವುಗಳೊಂದಿಗಿನ ನಮ್ಮ ಸಂವೇದನೆ ಬದಲಾಗುವುದಿಲ್ಲ. ಹಾಗಾಗಿ ಇಲ್ಲಿ ನಿಯಮಗಳ ಬಂಧನದ ಪ್ರಶ್ನೆ ಏಳುತ್ತದೆ. ಅದು ಪ್ರತೀ ವಸ್ತುವಿನಲ್ಲೂ ಪ್ರತ್ಯೇಕವಾಗಿ ಅದರ ಗುಣಲಕ್ಷಣಗಳನ್ನು ಹೊಂದಿಕೊಂಡು ಇರುವುದೋ ಅಥವಾ ಸರ್ವವ್ಯಾಪಿಯಾಗಿ ಎಲ್ಲದರಲ್ಲೂ ಇರುವ ಆತ್ಮ ರೂಪೀ ಈಶ್ವರನನ್ನು

ಅವಲಂಬಿಸಿರುವುದೋ? "ಆತ್ಮವು ಇವುಗಳೆಲ್ಲದರಲ್ಲೂ ನೆಲೆಸಿದೆ" ಎಂದು ಈಶಾವಾಸ್ಯೋಪನಿಷತ್ತಿನಲ್ಲಿ ಹೇಳಿದಂತೆ.

ಪ್ರಶ್ನೆ 2. ಈಶ್ವರನೆಂದರೆ ಯಾರು? [1–5]

ಸೃಷ್ಟಿಯ ಜನಕನಾದ ಅದರ ಹೊರಗಿದ್ದಾನೋ ಅಥವಾ ಅವನು ಅದರ ಮೂಲಸ್ವರೂಪನಾಗಿದ್ದಾನೋ?

ಪ್ರಶ್ನೆ 3. ಜೀವನೆಂದರೆ ಯಾರು? [1–5]

ಜೀವನು ಪ್ರತ್ಯಗಾತ್ಮನ ಮೂಲಸ್ವರೂಪನೋ ಅಥವಾ ಉಪಾಧಿಗಳ ಕಾರಣದಿಂದ ಪ್ರಮಾದವಶಾತ್ ಆಗಿರುವನೋ?

ಪ್ರಶ್ನೆ 4. ಆತ್ಮನೆಂದರೆ ಯಾರು? [1–5]

ಆತ್ಮನು ವಾಸ್ತವಿಕವಾಗಿ ಈಶ್ವರನೆಯೋ ಅಥವಾ ಸೌಜನ್ಯಕ್ಕೋಸ್ಕರ ಹಾಗೆ ಹೇಳಲ್ಪಡುವನೋ?

ವಿವೃತ್ತಿ

ಅದರ ಜಿಜ್ಞಾಸೆಯ ನಿಮಿತ್ತದಿಂದ ಉತ್ಪತ್ತಿಯಾದ ಸಂಶಯಗಳಿಗೆ **ಕಿಂ ತೇಷ್ವಿತಿ.** ಎಲ್ಲಿ ಅವೆರಡೂ ಇರುವವೋ ಅಲ್ಲಿ, ಪ್ರತಿವ್ಯಕ್ತಿಯಲ್ಲಿ ಅವು ಭಿನ್ನ ಪರಿಮಾಣದಲ್ಲಿ ಇರುವವೋ ಎಂದು ಒಂದು ಸಂಶಯವು. ಸಾಮಾನ್ಯವಾಗಿ ಅವು ಪ್ರತಿವ್ಯಕ್ತಿಯಲ್ಲಿ ಸ್ವರೂಪಭೇದದಿಂದ ಇರುವವೋ ಯಾ ಒಂದೇ ಆಗಿ ಇರುವುದೋ ಎಂಬುದು ಎರಡನೆಯ ಸಂಶಯ. ಅದನ್ನು **ಸರ್ವಾತ್ಮನೀಶ್ವರೇ** ಎಂದು ವಿಶೇಷವಾಗಿ ನಿರ್ದೇಶಿಸಿದೆ. 'ಈಶಾವಾಸ್ಯಮಿದಂ ಸರ್ವಮ್' (ಈ.ಉ.1), 'ತಸ್ಯ ಲೋಕಃ ಸ ಉ ಲೋಕ ಏವ' (ಬೃ.ಉ.6–4–13) ಮುಂತಾದ ಶ್ರುತಿಗಳಲ್ಲಿ ಹೇಳಿರುವಂತೆ. ಪುನಃ ಶ್ರುತಿಗಳ ಹೇಳಿಕೆಯನ್ನು ಪ್ರಶ್ನಿಸುವಂತೆ ಈಶ್ವರತ್ವದ ಜಗತ್ಕರ್ತೃತ್ವವು ಮಹಾರಾಜನಿಂದ ಕುಂಬಾರನವರೆಗೆ ತಟಸ್ಥವಾಗಿರುವುದೋ? ಅಥವಾ ರಜ್ಜು ಮುಂತಾದವುಗಳಲ್ಲಿರುವ ಅಧ್ಯಾಸದಂತೆ ಸತ್ ಮೊದಲಾದವುಗಳ ಅಧಿಷ್ಠಾತೃವಾಗಿರುವುದೋ? ಹಾಗೆ ಜೀವಾತ್ಮನು ಪ್ರತ್ಯಗಾತ್ಮನಾಗಿರುವುದು ಸ್ವಾಭಾವಿಕವೋ? ಇಂತಹ ಉಪಾಧಿಗಳ ಬಂಧನವು ಏಕೆ? ಮತ್ತು ಸರ್ವಾತ್ಮಕತೆಗೆ ಗೌಣ–ಮುಖ್ಯ ಭೇದವಿರುವುದೋ? ಇವುಗಳನ್ನು ವಿಮರ್ಶಿಸಬೇಕು. [1–5]

जानीयात्तत्कथं जीवः किं तज्ज्ञानस्य साधनम् ।
ज्ञानात्तस्य फलं किं स्यादेकत्वं च कथं भवेत् ॥ ६ ॥

ಜಾನೀಯಾತ್ತತ್ಕಥಂ ಜೀವಃ ಕಿಂ ತಜ್ಜ್ಞಾನಸ್ಯ ಸಾಧನಮ್ ।
ಜ್ಞಾನಾತ್ತಸ್ಯ ಫಲಂ ಕಿಂ ಸ್ಯಾದೇಕತ್ವಂ ಚ ಕಥಂ ಭವೇತ್ ॥ 6 ॥

ಪ್ರಶ್ನೆ 5. ಜೀವನು ಅದನ್ನು ತಿಳಿದುಕೊಳ್ಳುವ ಬಗೆ ಹೇಗೆ? [1–6]

ಈ ವಿಷಯಗಳ ನಿಜವಾದ ಅರಿವು ಏನು?

ಪ್ರಶ್ನೆ 6. ಈ ಅರಿವನ್ನು ಪಡೆಯುವ ದಾರಿ ಯಾವುದು? [1–6]

ಪ್ರಶ್ನೆ 7. ಈ ಅರಿವನ್ನು ಗಳಿಸುವುದರಿಂದ ಆಗುವ ಲಾಭವೇನು? [1–6]

ಪ್ರಶ್ನೆ 8. ಜೀವ ಮತ್ತು ಈಶ್ವರ ಒಂದೇ ಹೇಗೆ? [1–6]

ವಿವೃತ್ತಿ

ಪುನಃ ಬೇರೆ ಪ್ರಶ್ನೆಗಳೊಡನೆ **ಜಾನೀಯಾದಿತಿ.** ಒಂದುವೇಳೆ ಸತ್ ಮೊದಲಾದವುಗಳ ಅಧಿಷ್ಠಾತೃತ್ವವೇ ಈಶ್ವರತ್ವವಾದರೆ, ಇತರ ಉಪಾಧಿಗಳ ಕಾರಣದಿಂದ ಸ್ವರ್ಣ ಮೊದಲಾದವುಗಳ ವಿಕಾರಗಳಂತೆ, ಜೀವತ್ವಕ್ಕೆ ಸರ್ವಾತ್ಮಕತೆಯು ಲಭಿಸುವುದೋ? ಅದನ್ನು ಜೀವನು ಅರಿಯುವುದು ಹೇಗೆ? ಇಂತಹ ಜ್ಞಾನವು ಹೇಗೆ ಅರಿಯಲ್ಪಡುವುದು ಎಂಬ ಅರ್ಥದಲ್ಲಿ. ಅಂತಹ ಜ್ಞಾನಕ್ಕೆ ಸಾಧನವು ಯಾವುದು? ಯಾವ ಸಾಧನೆಗಳಿಂದ ಅದು ಉತ್ಪತ್ತಿಯಾಗುವುದು ಎಂಬ ಅರ್ಥದಲ್ಲಿ. ಅದರಿಂದ ಜೀವ–ಈಶ್ವರ ತತ್ತ್ವಗಳ ಜ್ಞಾನಾತ್ಮಕ ಫಲವು ಲಭಿಸುವುದೋ? ಸ್ವರ್ಗಾದಿಗಳು ಪ್ರಯತ್ನದಿಂದ ಯಾ ಅಪ್ರಯತ್ನಕವಾಗಿ ಸಿದ್ಧಿಸುವುದೋ? ಜೀವ–ಈಶ್ವರರ ಏಕತ್ವ, ತಾದಾತ್ಮ್ಯವು ಹೇಗೆ ಆಗುವುದು? ಕೇಳಿಬರುವ ಏಕತ್ವವು ವಿರುದ್ಧಸ್ವಭಾವವಿರುವುದರಿಂದ ಗೌಣವೋ ಯಾ ವಿರೋಧಾಭಾಸಗಳಿರುವುದರಿಂದ ಮುಖ್ಯವೋ? ಎಂದು ಮುಂತಾಗಿ. [1–6]

सर्वज्ञस्सर्वकर्ता च कथमात्मा भविष्यति ।
शिष्यं प्रतीत्थं पृच्छन्तं वक्तुमारभते गुरुः ॥ ७ ॥

ಸರ್ವಜ್ಞಸ್ಸರ್ವಕರ್ತಾ ಚ ಕಥಮಾತ್ಮಾ ಭವಿಷ್ಯತಿ ।
ಶಿಷ್ಯಂ ಪ್ರತೀತ್ಥಂ ಪೃಚ್ಛಂತಂ ವಕ್ತುಮಾರಭತೇ ಗುರುಃ ॥ 7 ॥

ಪ್ರಶ್ನೆ 9. ಆತ್ಮನು ಎಲ್ಲವನ್ನೂ ತೀಳಿದವನು ಮತ್ತು ಎಲ್ಲವನ್ನೂ ಮಾಡುವವನು ಹೇಗೆ?

ಹೀಗೆ ಸಂಶಯಗಳನ್ನು ಶಿಷ್ಯನು ಮುಂದಿಡಲು, ಗುರುವು ಹೀಗೆ ಉತ್ತರಿಸುತ್ತಾನೆ. [1–7]

ವಿವೃತ್ತಿ

ವಿರುದ್ಧಧರ್ಮಗಳಿದ್ದರೂ ಜೀವ–ಈಶ್ವರರ ಐಕ್ಯವನ್ನು ಹೇಳಲು **ಸರ್ವಜ್ಞ ಇತಿ.** ಆತ್ಮನೇ ಜೀವನಾದರೆ ಸ್ವಲ್ಪ ಅಜ್ಞನಾಗಿರುವ, ಅಲ್ಪ ಕರ್ತನಾಗಿರುವವನು ಪರಮೇಶ್ವರನು ಹೇಗಾಗುತ್ತಾನೆ? ಅಥವಾ ಸರ್ವಜ್ಞ, ಸರ್ವಕರ್ತನಾಗಿರುವ ಈಶ್ವರನು ಅದರ ವಿರುದ್ಧಗುಣಗಳಿರುವ ಆತ್ಮನು ಹೇಗಾಗುತ್ತಾನೆ? ಈ ಎಲ್ಲ ಪ್ರಶ್ನೆಗಳನ್ನು ಕೇಳಿರುವ ಶಿಷ್ಯನಿಗೆ ಉತ್ತರಿಸಲು ಗುರುವು ಆರಂಭಿಸುತ್ತಾ ಪ್ರಥಮ ಶ್ಲೋಕವನ್ನು ಉದ್ಧರಿಸುತ್ತಾನೆ. [1–7]

ಪರಸ್ಪರವಾಗಿ ವಿರುದ್ಧ ಗುಣಗಳನ್ನು ಹೊಂದಿರುವುದರಿಂದ, ಜೀವ ಮತ್ತು ಈಶ್ವರನ ಏಕತೆಯನ್ನು ಸೌಜನ್ಯಕ್ಕಾಗಿ ಹೇಳಿರುವುದೋ ಅಥವಾ ಅವರು ಒಂದೇ ಆಗಿದ್ದರೆ, ಅವರ ವಿರುದ್ಧ ಗುಣಗಳು ತೋರಿಕೆಗೆ ಮಾತ್ರವೋ? ಇದರಲ್ಲಿ ಯಾವುದು ಸರಿ?

ಈ ಪ್ರಶ್ನೆಗಳನ್ನು ಉತ್ತರಿಸಲು, ಗುರುವು ದಕ್ಷಿಣಾಮೂರ್ತಿ ಸ್ತೋತ್ರದ ಪ್ರಥಮಚರಣವನ್ನು ಹೇಳಿ, ಹೀಗೆ ವಿವರಿಸುತ್ತಾರೆ:

ಸ್ತೋತ್ರದ ಪ್ರಥಮ ಚರಣ

विश्वं दर्पणदृष्यमाननगरीतुल्यं निजान्तर्गतं
पश्यन्नात्मनि मायया बहिरिवोद्भूतं यथा निद्रया ।
यस्साक्षात्कुरुतेप्रबोधसमये स्वात्मानमेवाद्वयं
तस्मै श्री गुरुमूर्तये नम इदं दक्षिणामूर्तये ॥ १ ॥

ವಿಶ್ವಂ ದರ್ಪಣದೃಶ್ಯಮಾನನಗರೀತುಲ್ಯಂ ನಿಜಾಂತರ್ಗತಂ
ಪಶ್ಯನ್ನಾತ್ಮನಿ ಮಾಯಯಾ ಬಹಿರಿವೋದ್ಭೂತಂ ಯಥಾ ನಿದ್ರಯಾ ।
ಯಸ್ಸಾಕ್ಷಾತ್ಕುರುತೇ ಪ್ರಬೋಧಸಮಯೇ ಸ್ವಾತ್ಮಾನಮೇವಾದ್ವಯಂ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀ ದಕ್ಷಿಣಾಮೂರ್ತಯೇ ॥ 1 ॥

ನಿದ್ದೆಯಲ್ಲಿ ಕನ್ನಡಿಯೊಳಗಿನ ನಗರವನ್ನು ಕಂಡಂತೆ ಯಾವನು ಆತ್ಮರೂಪದ ಬ್ರಹ್ಮಾಂಡದಂತೆ ನಮ್ಮೊಳಗೆ ಇರುವನೋ, ಮಾಯೆಯ ಪ್ರಭಾವದಿಂದ ಅದು ಅವನಿಲ್ಲದೆ ಸೃಷ್ಟಿಯಾದಂತೆ ಕಂಡರೂ ಎಚ್ಚರವಾದಾಗ ಯಾವನು ಅದ್ವಿತೀಯನಾಗಿ ತಾನೇ ತಾನಾಗಿ ವಿಜೃಂಭಿಸುವನೊ, ಶ್ರೀಗುರುರೂಪದಲ್ಲಿರುವ ಶ್ರೀದಕ್ಷಿಣಾಮೂರ್ತಿ ಸ್ವರೂಪನಿಗೆ, ಶಿವನಿಗೆ, ನನ್ನ ಈ ನಮಸ್ಕಾರಗಳು. {1}

ವಿವೃತ್ತಿ

ಹಿಂದಿನ ಶ್ಲೋಕಗಳಲ್ಲಿ ಎತ್ತಿರುವ ಪ್ರಶ್ನೆಗಳಿಗೆ ಉತ್ತರವಾಗಿ ಮೊದಲಶ್ಲೋಕವನ್ನು ಉದಾಹರಿಸುವ **ವಿಶ್ವಂ ದರ್ಪಣೇತಿ.** ಇದರ ಅಕ್ಷರಯೋಜನೆಯು ಹೀಗಿದೆ: ***ತಸ್ಮೈ ಶ್ರೀ ದಕ್ಷಿಣಾಮೂರ್ತಯೇ ಇದಂ ನಮಃ*** ನಮಸ್ಕರಿಸುವ ಕ್ರಿಯೆಯನ್ನು ಸೂಚಿಸುತ್ತದೆ. ದಕ್ಷಿಣಾಭಿಮುಖವಾಗಿರುವ ರೂಪವಿರುವವನು ದಕ್ಷಿಣಾಮೂರ್ತಿ, ಶಿವನು. ಶ್ರೀಮಾನ್ ಎಂಬುದನ್ನು ಶ್ರೀ ಎಂದು ಉಚ್ಚರಿಸಲಾಗುತ್ತದೆ ಹಾಗಾಗಿ ಶ್ರೀ ತತ್ತ್ವಭೋಧೆಯ ರೂಪವಾಗಿರುವ, ಶೋಭೆಯಿರುವವನು ಶ್ರೀಮಾನ್. ಅಂತಹ ಶೋಭೆಯಿರುವ ದಕ್ಷಿಣಾಮೂರ್ತಿಯು ಶ್ರೀದಕ್ಷಿಣಾಮೂರ್ತಿಯು ಎಂಬ ಅರ್ಥವು. ಅವನ ವಿಶೇಷಣವು ***ಶ್ರೀಗುರುಮೂರ್ತಯೇ*** ಎಂಬುದು. ಗೃಣಾತಿ, ಶಿಷ್ಯನಿಗೆ ತತ್ತ್ವಜ್ಞಾನವನ್ನು ಉಪದೇಶಿಸುವವನು ಗುರು; ಶ್ರೀ ಎಂಬ ಶೋಭೆಯಿರುವವನು ಶ್ರೀಗುರು, ಅವನ ರೂಪವಾಗಿರುವವನು ಶ್ರೀಗುರುಮೂರ್ತಿಯು. ಇದರಿಂದ ಸ್ವ ಪದದಲ್ಲಿ ದೃಷ್ಟವಾಗುವ ಗುರುರೂಪದವನು ಎಂದು ಅರಿಯುವುದು. ದೇವತಾರೂಪದಲ್ಲಿ ಮತ್ತು ಗುರುರೂಪದಲ್ಲಿ ಎಂದು ಎರಡು ವಿಧವಾಗಿ ಗ್ರಹಿಸಲ್ಪಡುವವನು ಎದು ಅರ್ಥವಾಗುವುದು. ವಿಶ್ವದಲ್ಲಿ ಸತ್ ಎಂದು ಸ್ಫುರಣವಾಗಿ ನಿರಪೇಕ್ಷ ಅಧಿಷ್ಠಾನವಿರುವ ಈಶ್ವರನೇ ದಕ್ಷಿಣಾಮೂರ್ತಿಯೂ, ಗುರುವೂ ಆಗಿ ಪ್ರಶ್ನೆಗಳಿಗೆ ಉತ್ತರವನ್ನು ಪ್ರಕಟಿಸುವನು. ***ಯೋ ನಿಜ*** ಸಾಧಾರಣವಾಗಿ ಸ್ವಪ್ರಕಾಶಿತವಾದ ಸ್ವಸ್ವರೂಪ ಎಂದು ಹೇಳಿದೆ. ***ಅಂತರ್ಗತಂ*** ಅದರ ಸತ್‌ಪ್ರಕಾಶದಿಂದ ವ್ಯಾಪ್ತವಾಗಿರುವ, ಅದರಲ್ಲಿರುವ ***ವಿಶ್ವಂ*** ಭೂತಭೌತಿಕರೂಪ ವಿಷಯದಿಂದ ಜನಿಸಿರುವ ***ಮಾಯಯಾ ಆತ್ಮನಿ*** ಅನಿರ್ವಾಚ್ಯ ಅನಾದಿಯಾದ ತನ್ನ ಆತ್ಮನಲ್ಲಿ ಕಲ್ಪಿತವಾಗಿರುವ ***ಬಹಿಃ*** ಸ್ವಾತ್ಮನಿಂದ ಹೊರತಾಗಿ ಇದು ಎಂದು ಹೇಳಲ್ಪಡುವ ***ಉದ್ಭೂತಂ ಪಶ್ಯನ್*** ವಿಶ್ವದೃಷ್ಟಿಯಿಂದ ಪ್ರತೀತವಾಗದ ಎಂಬ ಅಭಿಪ್ರಾಯದಲ್ಲಿ. ದೃಶ್ಯದ ಮಾಯಾಮಯತ್ವದಿಂದ ತತ್ತ್ವಜ್ಞಾನವನ್ನು ತಿಳಿಸಲು ***ಪ್ರಬೋಧಸಮಯೇ*** ಆಚಾರ್ಯರಿಂದ ಉಪದಿಷ್ಟವಾದ ಮಹಾವಾಕ್ಯಾರ್ಥವು ಸಾಕ್ಷಾತ್ಕಾರವಾಗುವ ಸಮಯದಲ್ಲಿ ***ಸ್ವಾತ್ಮಾನಂ ಏವ*** ಸತ್‌ಪ್ರಕಾಶರೂಪದಲ್ಲಿಯೇ ***ಅದ್ವಯಂ*** ದ್ವಯ ಶಬ್ದವಾಚ್ಯವಾದ ವಿಶ್ವವು ಶೂನ್ಯವಾಗಿ ವಿಲೀನವಾಗಿರುವ ಸ್ವಾತ್ಮನ ಅಸಾಧಾರಣ ಸ್ವಸ್ವರೂಪವನ್ನು

ಸಾಕ್ಷಾತ್ಕುರುತೇ ತಾನೇ ಈ ಅದ್ವಯ ಆನಂದ ಪ್ರಕಾಶಾತ್ಮನು ಎಂದು ಅರಿವಾಗಿ. ವಸ್ತುತಃ ಸ್ವಾತ್ಮನು ಅಸತ್ ಎಂದು ಅವಭಾಸಕ್ಕೆ ದೃಷ್ಟಾಂತವನ್ನು ಹೇಳುವ ***ದರ್ಪಣದೃಶ್ಯಮಾನ ನಗರೀತುಲ್ಯಂ*** ವಿಶ್ವದ ವಿಶೇಷಣವು. ಇದರಿಂದ ಆತ್ಮನು ವಿಶ್ವಾಕಾರನಾಗಿ ಪರಿಣಾಮಹೊಂದಿರುವ ಶಂಕೆಯನ್ನು ನಿರಸ್ತಗೊಳಿಸಲಾಗಿದೆ. ಹೊರಗಿನ ವಿದ್ಯಮಾನಗಳು ಹೊರಗಿನ ಅವಭಾಸಗಳೆಂದು ದೃಷ್ಟಾಂತವು ತಿಳಿಸಿರುವುದು ಪ್ರಬೋಧವಾಗುವುದನ್ನು ಧೃಢಪಡಿಸಿರುವುದು. ***ಯಥಾ ನಿದ್ರಯಾ*** ಸ್ವಸ್ವರೂಪದ ಸತ್‌ಪ್ರಕಾಶದಿಂದ ವ್ಯಾಪ್ತವಾಗಿರುವ ವಾಸನಾಮಯ ವಿಶ್ವವು ನಿದ್ರೆಯ ಸಮಯದಲ್ಲಿ ಸುಪ್ತವಾಗಿದ್ದರೂ ಹೊರಗಿನ ವ್ಯವಹಾರಗಳಲ್ಲಿ ಚಟುವಟಿಕೆಯಿಂದ ಇದ್ದು, ಜಾಗ್ರದವಸ್ಥೆಯಲ್ಲಿ ಸ್ವಾತ್ಮನಿಂದ ಬೇರೆಯಾಗಿರದೆ ಸ್ವಪ್ನದಲ್ಲಿ ಜನಿಸಿರುವ ಪ್ರಪಂಚರಹಿತವಾಗಿರುವುದೆಂದು ಸಾಕ್ಷಾತ್ಕರಿಸಿಕೊಳ್ಳುವನು. ಅಥವಾ ಸಂಸಾರಿಯು ವಿಶ್ವವನ್ನು ಸ್ವಸಂಬಂಧಗಳಿಂದ ದರ್ಶಿಸಿದರೂ, ಅದನ್ನೇ ಪ್ರಬೋಧಸಮಯದಲ್ಲಿ ವಿದ್ಯಾಬಾಧಿತ ವಿಶ್ವವಾಗಿ ಸ್ವಾತ್ಮದೊಡನೆ ಅದ್ವಯವಾಗಿ ಸಾಕ್ಷಾತ್ಕರಿಸಿಕೊಳ್ಳುವನು ಎಂದು ತೋರಿಸಿದೆ. {1}

ಆತ್ಮನಲ್ಲಿ ಬ್ರಹ್ಮಾಂಡ

अस्यार्थः –
अन्तरस्मिन्निमे लोका अन्तर्विश्वमिदं जगत् ।
बहिर्वन्माययाऽऽभाति दर्पणे प्रतिबिम्बितम् ॥ ८ ॥

ಅಸ್ಯಾರ್ಥ:–
ಅಂತರಸ್ಮಿನ್ನಿಮೇ ಲೋಕಾ ಅಂತರ್ವಿಶ್ವಮಿದಂ ಜಗತ್ ।
ಬಹಿರ್ವನ್ಮಾಯಯಾಽಽಭಾತಿ ದರ್ಪಣೇ ಪ್ರತಿಬಿಂಬಿತಮ್ ॥ 8 ॥

ಇದರ ಅರ್ಥವು ಹೀಗಿದೆ: ನಾವು ಅನುಭವಿಸುವ ಎಲ್ಲಾ ವಸ್ತುಗಳು, ಬ್ರಹ್ಮಾಂಡ ಕೂಡಾ, ನಮ್ಮೊಳಗಿರುವ ಪರಮಾತ್ಮನಲ್ಲಿವೆ. ಕನ್ನಡಿಯಲ್ಲಿ ಪ್ರತಿಬಿಂಬಿಸಿದ ನಮ್ಮ ದೇಹದಂತೆ, ಮಾಯೆಯ ಕಾರಣದಿಂದ ಅದು ಹೊರಗಿರುವಂತೆ ಕಾಣುತ್ತದೆ. [1–8]

ವಿವೃತ್ತಿ

ಮೂಲಶ್ಲೋಕದಲ್ಲಿ ಉದಾಹರಿಸಿದ ತಾತ್ಪರ್ಯವನ್ನು ವಾರ್ತಿಕಶ್ಲೋಕದಲ್ಲಿ ವ್ಯಾಖ್ಯಾನಿಸಲು ಆರಂಭಿಸಿದೆ **ಅಸ್ಯಾರ್ಥ ಇತಿ.** ***ಇಮೇ ಲೋಕಾ ಅಸ್ಮಿನ್ ಅಂತಃ*** ಪ್ರಸಿದ್ಧವಾದ, ಪ್ರತ್ಯಕ್ಷ ಪ್ರಮಾಣದಿಂದ ಸಿದ್ಧವಾದ ಈ ವಿಶ್ವ ಶಬ್ದದಿಂದ ನಿರ್ದಿಷ್ಟವಾದ ಲೋಕವು ಪರಮಾತ್ಮನ ಒಳಗೆ ಇರುವುದು, ಸ್ವತಂತ್ರವಾಗಿ ಹೊರಗಿನಿಂದ ಅಲ್ಲ. ಹೇಳಿರುವ ಅರ್ಥವನ್ನು ಪ್ರಕಟವಾಗಿಸುತ್ತಾ ***ವಿಶ್ವಂ ಇದಂ ಜಗತ್ ಅಂತಃ*** ಇವೆಲ್ಲ ವಿಶ್ವವು ಜಗತ್ತು, ಬ್ರಹ್ಮಾಂಡವೂ ಕೂಡ ಪರಮಾತ್ಮನೊಳಗಿರುವುದು, ಸಂಕೋಚಗೊಳಿಸಿಕೊಂಡು ಎಂಬ ಅರ್ಥದಲ್ಲಿ ಅಲ್ಲ. 'ಬ್ರಹ್ಮೈವ ಭೀತಾನಾಂ ಜ್ಯೇಷ್ಠಮ್ । ತೇನ ಕೋರ್ಹತಿ ಸ್ಪರ್ಧಿತುಮ್ । ಬ್ರಹ್ಮನ್‌ದೇವಾಸ್ತ್ರಯಸ್ತ್ರಿಂಶತ್ । ಬ್ರಹ್ಮನ್ನಿಂದ್ರಪ್ರಜಾಪತೀ । ಬ್ರಹ್ಮನ್ ಹ ವಿಶ್ವಾ ಭೂತಾನಿ । ನಾವೀವಾಂತಸ್ಸಮಾಹಿತಾ ।' (ತೈ.ಬ್ರಾ.2–8–8) ಎಂದು ಶ್ರುತಿವಾಕ್ಯವಿದೆ. ***ಬಹಿರ್ವನ್ ಮಾಯಯಾ ಆಭಾತಿ ದರ್ಪಣೇ ಪ್ರತಿಬಿಂಬಿತಮ್*** ಈ ವಿಶ್ವವು ದರ್ಪಣದಲ್ಲಿರುವ ಪ್ರತಿಬಿಂಬದಂತೆ ಮಾಯೆಯಿಂದಾಗಿ ಹೊರಗಿನಿಂದಿರುವಂತೆ ಆಭಾಸವಾಗುವುದು. [1–8]

स्वप्ने स्वान्तर्गतं विश्वं यथा पृथगवेक्षते ।
तथैव जाग्रत्कालेपि प्रपञ्चोयं विविच्यताम् ॥ ९ ॥

ಸ್ವಪ್ನೇ ಸ್ವಾಂತರ್ಗತಂ ವಿಶ್ವಂ ಯಥಾ ಪೃಥಗವೇಕ್ಷತೇ ।
ತಥೈವ ಜಾಗ್ರತ್ಕಾಲೇಪಿ ಪ್ರಪಂಚೋಯಂ ವಿವಿಚ್ಯತಾಮ್ ॥ 9 ॥

ನಮ್ಮೊಳಗಿರುವ ವಿಶ್ವವನ್ನು, ಕನಸಿನಲ್ಲಿ ಹೊರಗಿರುವಂತೆ ಕಂಡ ಹಾಗೆ, ಜಾಗೃತ ಸ್ಥಿತಿಯಲ್ಲಿಯೂ ಈ ವಿಶ್ವವು ನಮ್ಮೊಳಗೆಯೇ ಇದೆ ಆದರೆ ಹೊರಗಿರುವಂತೆ ಭಾಸವಾಗುತ್ತದೆ. [1–9]

ವಿವೃತ್ತಿ

ಇದರಲ್ಲಿ ಮೂಲ ಶ್ಲೋಕದ 'ಯಥಾ ನಿದ್ರಯಾ' ಎಂಬುದಕ್ಕೆ ದೃಷ್ಟಾಂತ ನೀಡುತ್ತಾ **ಸ್ವಪ್ನ ಇತಿ.** ಇದನ್ನು ಮುಂದಿನ ಶ್ಲೋಕದೊಡನೆ ವ್ಯಾಖ್ಯಾನಿಸಿದೆ. [1–9]

स्वप्ने स्वसत्तैवार्थानां सत्ता नान्येति निश्चिता ।
कोजाग्रति विशेषोस्ति जडानामाशु नाशिनाम् ॥ १० ॥

ಸ್ವಪ್ನೇ ಸ್ವಸತ್ತೈವಾರ್ಥಾನಾಂ ಸತ್ತಾ ನಾನ್ಯೇತಿ ನಿಶ್ಚಿತಾ ।
ಕೋಜಾಗ್ರತಿ ವಿಶೇಷೋಸ್ತಿ ಜಡಾನಾಮಾಶು ನಾಶಿನಾಮ್ ॥ 10 ॥

ಸ್ವಪ್ನದಲ್ಲಿ ಕಂಡ ವಸ್ತುಗಳ ಇರುವಿಕೆಯು ಆತ್ಮನ ಇರುವಿಕೆಯ ಮೇಲೆ ನಿರ್ಭರವಾಗಿದೆ ಎಂಬುದು ಖಂಡಿತ. ಜಾಗ್ರತ ಸ್ಥಿತಿಯಲ್ಲಿ ಕಂಡ ವಸ್ತುಗಳು ಕೂಡಾ, ಯಾವಾಗಲೂ ಅಶಾಶ್ವತ ಮತ್ತು ಜಡವಾಗಿದ್ದು, ಇದಕ್ಕಿಂತ ಭಿನ್ನವೇನಾಗಿಲ್ಲ. [1–10]

ವಿವೃತ್ತಿ

ಸ್ವಪ್ನದಲ್ಲಿ ಕಾಣುವುದೆಲ್ಲವೂ ಆತ್ಮದಲ್ಲಿಯೇ ಆಯತನ ಹೊಂದಿವೆ ಎಂದು ತಿಳಿಸುವ **ಸ್ವಪ್ನೇ ಸ್ವಸತ್ತೈವೇತಿ.** ಸ್ವಪ್ನದಲ್ಲಿ ದೃಶ್ಯವಾಗುವ, ಅರ್ಥೈಸಿಕೊಳ್ಳುವ ವಸ್ತುಗಳ ಅಸ್ತಿತ್ವವು ಆತ್ಮನ ಅಸ್ತಿತ್ವದ ಮೇಲೆ ನಿಶ್ಚಿತವಾಗಿದೆ, ಇತರ ಸಾಮಾನ್ಯರೂಪ ಯಾ ಕಾರ್ಯ ರೂಪದಲ್ಲಿ ಅಲ್ಲ. ಹಾಗಾಗಿಯೇ ಅವುಗಳ ಅಸ್ತಿತ್ವದ ಕಾರಣವು ಇಂದ್ರಿಯಗಳಿಂದ ಹೊರತಾಗಿರುವುದರಿಂದ ಬಾಹ್ಯ ಅರ್ಥದಲ್ಲಿ ದೃಷ್ಟವಾಗುವುದಿಲ್ಲ. 'ಸ ಯತ್ರ ಪ್ರಸ್ವಪಿತ್ಯಸ್ಯ ಲೋಕಸ್ಯ ಸರ್ವಾವತೋ ಮಾತ್ರಾಮಪಾದಯ' (ಬೃ.ಉ.6–3–9) ಎಂಬ ಶ್ರುತಿಯಂತೆ ಸ್ವಪ್ನದೃಷ್ಟ ದೇಶ–ಕಾಲ–ವಸ್ತುಗಳು ಜಾಗ್ರತ್‌ನಲ್ಲಿ ಕಂಡುಬರಬೇಕಿಲ್ಲ. ಅಂತಹ ಸ್ವಪ್ನದಲ್ಲಿ ದೇಹದ ಒಳಗಿರುವ ನಾಡಿಗಳನ್ನು ದರ್ಶಿಸಿದರೂ, ಅವು ಹೊರಗಿರುವಂತೆ ಕಾಣುವುದಿಲ್ಲ ಮತ್ತು ಅವು ಹೊರಬರುವಂತೆಯೂ ಕಾಣುವುದಿಲ್ಲ. ಅಂತೆಯೇ ವಸ್ತುಗಳ ಮತ್ತು ದೇಶದ ದರ್ಶನವು ಕೂಡಾ ಜಾಗೃತವಾಗಿರುವಾಗ ಕಂಡದ್ದೇ ಆಗಿರಬಹುದು. ದೇಶಾಂತರ ಚಲನೆ, ಅಲ್ಲಿ ವಿವಿಧ ವಸ್ತುಗಳ ಅವಲೋಕನ ಮುಂತಾದವುಗಳು, ಸುಪ್ತ ದೇಹ, ದೇಶಗಳು ಕೂಡಾ ಕಾಣಸಿಗಬಹುದು ಆದರೆ ಬಾಹ್ಯವಾಗಿ ಕಂಡುಬಾರದು. ಅವು 'ಅಥ ರಥಾನ್ ರಥಯೋಗಾನ್ ಪಥಃ ಸೃಜತೇ' (ಬೃ.ಉ.6–3–10) ಎಂಬ ಶ್ರುತಿಯಂತೆ ವಾಸನೆಗಳ ನಿಮಿತ್ತವಾಗಿ ಉದ್ಭವವಾದ ದರ್ಶನಮಾತ್ರ ವಿಷಯಗಳಾಗಿರುವುದು. ಹಾಗೆಯೇ

ಜಾಗ್ರತ್ತಿನಲ್ಲಿ ಕಂಡ ಸುಪ್ತ ಲಾಲಸೆಗಳು ನಿದ್ರಾದೋಷದಿಂದ ಹೊರಗಿರುವಂತೆ ಅವಭಾಸವಾಗುವುದು ಮತ್ತು ಅದು ಜಾಗ್ರತ್ತಿನ ವಿಷಯದರ್ಶನದ ಮಿಥ್ಯತ್ವವನ್ನೂ ತೋರಿಸುವುದು. ಸ್ವಪ್ನದಲ್ಲಿ ಕಂಡದ್ದು ಮತ್ತು ಜಾಗ್ರತ್ತಿನಲ್ಲಿ ಅನುಭವಿಸಿರುವುದು ಬೇರೆ ಬೇರೆಯಾಗಿರದೇ ಇರುವುದು ಸಿದ್ಧವಾಗಿ, ಕಾಣುವವನು ಯಾರು ಎಂಬ ಅನುಮಾನವನ್ನು ಹುಟ್ಟುಹಾಕುತ್ತದೆ. ಎಲ್ಲವೂ ಆತ್ಮನನ್ನೇ ನಿರ್ದೇಶಿಸಿ ಜಾಗ್ರತ್ ಮತ್ತು ಸ್ವಪ್ನದಲ್ಲಿ ಕಾಣುವುದೆಲ್ಲವೂ ಜಡ ಎಂದು ತಿಳಿಸುತ್ತದೆ. ಹಗ್ಗವು ಸರ್ಪದಂತಹ ದಂಡಮಾಲೆಗೆ ಆಧಾರವಾಗಿರುವಂತೆ, ಸ್ವಾತ್ಮನಿಲ್ಲದಿದ್ದರೆ ಯಾವ ವಸ್ತು-ವಿಷಯಗಳೂ ಇರುವುದಿಲ್ಲ. [1–10]

ಆತ್ಮದ ಬೆಳಕಿನಲ್ಲಿ ಹೊಳೆಯುವ ಪ್ರಪಂಚ

स्वप्ने प्रकाशो भावनां स्वप्रकाशान्न हीतरः ।
जाग्रत्यपि तथैवेति निश्चिन्वन्ति विपश्चितः ॥ ११ ॥

ಸ್ವಪ್ನೇ ಪ್ರಕಾಶೋ ಭಾವನಾಂ ಸ್ವಪ್ರಕಾಶಾನ್ನ ಹೀತರಃ ।
ಜಾಗ್ರತ್ಯಪಿ ತಥೈವೇತಿ ನಿಶ್ಚಿನ್ವಂತಿ ವಿಪಶ್ಚಿತಃ ॥ 11 ॥

ಸ್ವಪ್ನಾವಸ್ಥೆಯಲ್ಲಿ ನಾವು ಆತ್ಮದ ಬೆಳಕಿನಲ್ಲಿ ವಸ್ತು-ವಿಷಯಗಳನ್ನು ಕಾಣುತ್ತೇವೆ ಏಕೆಂದರೆ ಅಲ್ಲಿ ಬೇರೆ ಯಾವ ಬೆಳಕೂ ಇಲ್ಲ. ಜಾಗ್ರತ ಸ್ಥಿತಿಯಲ್ಲಿಯೂ ಹಾಗೆಯೇ ಎಂದು ವಿದ್ವಜ್ಜನರು ನಿಶ್ಚಯಿಸಿದ್ದಾರೆ. [1–11]

ವಿವೃತ್ತಿ

ಹೀಗೆ ಅಧಿಷ್ಠಾನವಾಗಿ ದೃಶ್ಯವಾಗುವ ಸತ್ ಸ್ಫುರಣದ ವ್ಯುತ್ಪತ್ತಿಯನ್ನು ತಿಳಿಸುವ **ಸ್ವಪ್ನೇ ಪ್ರಕಾಶ ಇತಿ.** 'ಆತ್ಮನೈವಾಯಂ ಜ್ಯೋತಿಷಾಸ್ತೇ', 'ಅತ್ರಾಯಂ ಪುರುಷಸ್ಸ್ವಯಂಜ್ಯೋತಿಃ' (ಬೃ.ಉ.6–3–6) ಎಂಬ ಶ್ರುತಿಯಂತೆ ಸ್ವಪ್ನದಲ್ಲಿ ಭಾಸವಾಗುವ ದೃಶ್ಯ-ಭಾವನೆಗಳ ಅರ್ಥವು ಸ್ವಪ್ರಕಾಶದಿಂದ ಅಧಿಷ್ಠಾನವಾಗಿರುವ ಆತ್ಮದ ಪ್ರಕಾಶದಿಂದ ಬೆಳಗುತ್ತದೆಯೇ ವಿನಃ ಸ್ವತಂತ್ರವಾಗಿ ಅಲ್ಲ. ಸತ್ ವಿಹೀನರಿಗೆ ಸ್ವತಃ ಸ್ಫುರಣಸಾಮರ್ಥ್ಯ ಇರುವುದಿಲ್ಲ ಎಂಬ ಅರ್ಥವು. ಅದರಲ್ಲಿರುವ ಸಂಶಯವನ್ನು ನಿವಾರಿಸಲು ಜಾಗ್ರತ್ತಿನಲ್ಲಿ ಕಾಣುವ ವಿಷಯ-ವಸ್ತುಗಳೂ ಅಷ್ಟೇ, ಬೇರೆಯದರ ಬೆಳಕಿನಿಂದ ಪ್ರಕಾಶಿತವಾಗಿವೆ. ಬೇರೆಯದಾಗಿ ಭಾಸವಾದರೂ, ಅವುಗಳ ತೋರುವಿಕೆಯು ಸ್ವಪ್ನದೃಶ್ಯದಂತೆ ಆತ್ಮನ ಪ್ರಕಾಶದಿಂದ ಎಂಬುದು ನಿಶ್ಚಿತವು ಎಂಬ ಅರ್ಥದಲ್ಲಿ. ಅವುಗಳ ಅಪ್ರಯೋಜಕತೆಯನ್ನು ಶಂಕಿಸದೆ, ಕಂಡುಬರುವ ಅನ್ಯಾಧೀನ ಪ್ರಕಾಶತ್ವವನ್ನು ಮಾತ್ರ ಸೂಚಿಸಿದೆ, ಇಂದ್ರಿಯಗಳು ತಮ್ಮ ಕಾರ್ಯಗಳಿಗೆ ಅಂತಃಕರಣವನ್ನು ಅವಲಂಬಿಸಿರುವಂತೆ. [1–11]

ಏಕತ್ವದ ತಿಳುವಳಿಕೆ

निद्रया दर्शितानर्थान्न पश्यति यथोत्थितः ।
सम्यग्ज्ञानोदयादूर्ध्वं तथा विश्वं न पश्यति ॥ १२ ॥

ನಿದ್ರಯಾ ದರ್ಶಿತಾನರ್ಥಾನ್ನ ಪಶ್ಯತಿ ಯಥೋತ್ಥಿತಃ ।
ಸಮ್ಯಗ್ಜ್ಞಾನೋದಯಾದೂರ್ಧ್ವಂ ತಥಾ ವಿಶ್ವಂ ನ ಪಶ್ಯತಿ ॥ 12 ॥

ಕನಸಿನಲ್ಲಿ ಕಂಡ ವಸ್ತು–ವಿಷಯಗಳನ್ನು ಎಚ್ಚರವಾಗಿರುವಾಗ ಕಾಣದಿರುವಂತೆ, ಸರಿಯಾದ ತಿಳುವಳಿಕೆ ಉದಯಿಸಿದಾಗ ಅವನು ಬ್ರಹ್ಮಾಂಡವನ್ನು ಕಾಣಲಾರ. [1–12]

ವಿವೃತ್ತಿ

ಅಂತೆಯೇ ಮಾಯಾವಸ್ಥೆಯಲ್ಲಿ ಮಾಯೆಯ ವಿಶ್ವವನ್ನು ದರ್ಶಿಸುವನಾದರೂ, ವಿಶ್ವದ ಹೊರತಾಗಿರುವ ನಿರಪೇಕ್ಷ ಸತ್ತೆಯ ಸ್ಫುರಣೆಯನ್ನು ಅಲ್ಲ. ಆತ್ಮನ ಸತ್ತಾಸ್ಫುರಣೆಯಿಂದ, ಬ್ರಹ್ಮಜ್ಞಾನದ ಉದಯವಾದ ಬಳಿಕ ಮಾಯಾವಿಶ್ವವನ್ನು ಕಾಣಲಾರ. [1–12]

अनादिमायया सुप्तो यदा जीवः प्रबुध्यते ।
अजन्मनिद्रमस्वप्रमद्वैतं बुध्यते तदा ॥ १३ ॥

ಅನಾದಿಮಾಯಯಾ ಸುಪ್ತೋ ಯದಾ ಜೀವಃ ಪ್ರಬುಧ್ಯತೇ ।
ಅಜನ್ಮನಿದ್ರಮಸ್ವಪ್ರಮದ್ವೈತಂ ಬುಧ್ಯತೇ ತದಾ ॥ 13 ॥

ಆದಿಯಿಲ್ಲದ ಮಾಯೆಯಲ್ಲಿ ಮುಳುಗಿರುವ ಜೀವನನ್ನು ಎಚ್ಚರಿಸಿದಾಗ ಅವನು ಹುಟ್ಟಿಲ್ಲದ, ನಿದ್ರೆಯಿಲ್ಲದ, ಕನಸಿಲ್ಲದ ಅದ್ವಿತೀಯನಾದವನನ್ನು ಅರಿತುಕೊಳ್ಳುತ್ತಾನೆ. (ಶ್ರೀ ಗೌಡಪಾದಾಚಾರ್ಯರ ಮಾಂಡೂಕ್ಯ ಕಾರಿಕೆ 1–16) [1–13]

ವಿವೃತ್ತಿ

ಹೇಳಿರುವ ಅರ್ಥದಲ್ಲಿಯೇ ಅದ್ವೈತ ಸಾಕ್ಷಾತ್ಕಾರ ಪ್ರಕಾರದ ಕುರಿತಾಗಿ ಪೂರ್ವಗುರುಗಳು ಹೇಳಿರುವುದನ್ನು ಸೂಚಿಸುವ **ಅನಾದೀತಿ.** ***ಅನಾದಿಮಾಯಯಾ ಸುಪ್ತೋ*** ಜೀವನಿಗೆ ಜ್ಞಾನವು ತಾನಾಗಿಯೇ ಉಂಟಾಗುವುದಿಲ್ಲ ಎಂದು ಸೂಚಿಸುತ್ತದೆ. ***ಯದಾ ಪ್ರಬುಧ್ಯತೇ*** ಅಂದರೆ ಪ್ರಬೋಧ, ಜ್ಞಾನೋದಯದ ದುರ್ಲಭತೆಯ ದ್ಯೋತಕವಾಗಿದೆ. ಹಾಗೆಂದು 'ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ ಶೃಣ್ವಂತೋಪಿ ಬಹವೋ ಯನ್ನವಿದ್ಯುಃ । ಆಶ್ಚರ್ಯೋ ವಕ್ತಾ ಕುಶಲೋಸ್ಯ ಲಬ್ಧಾ ಆಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ ॥' (ಕ.ಉ.2–7) ಶ್ರುತಿಯಲ್ಲಿ ಹೇಳಿದೆ. ಸ್ಮೃತಿಯಲ್ಲಿ 'ಆಶ್ಚರ್ಯವತ್ ಪಶ್ಯತಿ ಕಶ್ಚಿದೇನಮ್' (ಗೀತಾ.2–29) ಮೊದಲಾಗಿ ಹೇಳಿದೆ. ಆಚಾರ್ಯರ ವೇದಾಂತವಾಕ್ಯದ ಉಪದೇಶದಿಂದಾಗಿ ಪ್ರಬೋಧವಾದಾಗ ಆತ್ಮದ ಅದ್ವೈತತತ್ವದ ಸಾಕ್ಷಾತ್ಕಾರವಾಗುವುದು. ಅದ್ವೈತದ ಲಕ್ಷಣವೇನು?***ಅಜನ್ಮನಿದ್ರಮಸ್ವಪ್ರಮದ್ವೈತಂ ಬುಧ್ಯತೇ ತದಾ*** ಜನಿಸಿರುವ ಜ್ಞಾನದಿಂದ ಜಾಗ್ರದವಸ್ಥೆಯನ್ನು ವರ್ಜಿಸಿರುವ, ನಿದ್ರೆಯಿಂದ ಉಂಟಾಗಿರುವ ಮೂರ್ಛೆ ಸುಷುಪ್ತಿ ರಹಿತವಾಗಿ, ಸ್ವಪ್ನವೆಂಬ ಮಧ್ಯಾವಸ್ಥೆ ಇಲ್ಲದಿರುವ, ಇಂತಹ ಮೂರು ಅವಸ್ಥೆಗಳೆಂಬ ದ್ವೈತಶೂನ್ಯತೆ ಇರುವುದು ಅದ್ವೈತವು. [1–13]

श्रुत्याचार्यप्रसादेन योगाभ्यासवशेन च ।
ईश्वरानुग्रहेणापि स्वात्मबोधो यदा भवेत् ॥ १४ ॥
भुक्तं यथान्नं कुक्षिस्थं स्वात्मत्वेनैव पश्यति ।
पूर्णाहन्ताकबळितं विश्वं योगीश्वरस्तथा ॥ १५ ॥

ಶ್ರುತ್ಯಾಚಾರ್ಯಪ್ರಸಾದೇನ ಯೋಗಾಭ್ಯಾಸವಶೇನ ಚ ।
ಈಶ್ವರಾನುಗ್ರಹೇಣಾಪಿ ಸ್ವಾತ್ಮಬೋಧೋ ಯದಾ ಭವೇತ್ ॥ 14 ॥
ಭುಕ್ತಂ ಯಥಾನ್ನಂ ಕುಕ್ಷಿಸ್ಥಂ ಸ್ವಾತ್ಮತ್ವೇನೈವ ಪಶ್ಯತಿ ।
ಪೂರ್ಣಾಹಂತಾಕಬಳಿತಂ ವಿಶ್ವಂ ಯೋಗೀಶ್ವರಸ್ತಥಾ ॥ 15 ॥

ವೇದಜ್ಞಾನಿಯಾದ ಗುರುವು ಕಲಿಸಿದ ಪ್ರಸಾದ ರೂಪದ ಯೋಗಾಭ್ಯಾಸದ ಫಲದಿಂದ, ಈಶ್ವರಾನುಗ್ರಹವುಂಟಾಗಿ ಆತ್ಮಭೋಧೆಯುಂಟಾಗುವುದು. ಈ ಸ್ಥಿತಿಯಲ್ಲಿ, ನಾವು ಭುಂಜಿಸಿದ ಆಹಾರವು ನಮ್ಮಲ್ಲೇ ಒಂದಾಗಿರುವಂತೆ, ಈ ಪ್ರಪಂಚವು ತನ್ನೊಳಗೇ ಇರುವುದನ್ನು ನುರಿತ ಯೋಗಿಯು ಕಂಡುಕೊಳ್ಳುತ್ತಾನೆ ಹಾಗೂ ತಾನೇ ಸರ್ವಾತ್ಮನಾಗಿ, ಈಶ್ವರನಾಗಿ ಮೆರೆಯುತ್ತಾನೆ. [1–14..15]

ವಿವೃತ್ತಿ

ಉದಾಹರಿಸಿದ ಸ್ಮೃತಿಯ ಅರ್ಥವನ್ನು ವಿವರಿಸುತ್ತಾ **ಶ್ರುತ್ಯಾಚಾರ್ಯೇತಿ** ಎಂಬ ಎರಡು ವಾರ್ತಿಕಗಳು. ಆಚಾರ್ಯ ಪ್ರಸಾದವೆಂಬ ಅನುಗ್ರಹದಿಂದ, ಸ್ವಾರ್ಥದ ಸಂಭವನೀಯತೆ ಇಲ್ಲದಿರುವ ಶ್ರುತಿಯಿಂದ, ನಿಧಿಧ್ಯಾಸನ ಮುಂತಾದ ಯೋಗ ಪ್ರಕ್ರಿಯೆಗಳ ಅನುಷ್ಠಾನದಿಂದ, ಹಿಂದೆ ಅಂತರ್ಯಾಮಿಯೆಂದು ಕೇಳಿರುವ ಆರಾಧ್ಯವಾದ ಪರಮಾತ್ಮನ ಅನುಗ್ರಹದಿಂದ ಉಪಾಸಕನ ಚಿತ್ತದಲ್ಲಿ ತತ್ತ್ವದ ಆವಿಷ್ಕಾರವಾಗುವುದರಿಂದ. ***ಅಪಿ*** ಶಬ್ದವು ಈ ಎಲ್ಲ ಸಾಧ್ಯತೆಗಳನ್ನು ಸಮುಚ್ಚಯಗೊಳಿಸುವುದು. ಹಾಗೆಂದು ಶ್ರುತಿಯಲ್ಲಿ 'ವೇದಾಂತ ವಿಜ್ಞಾನಸುನಿಶ್ಚಿತಾರ್ಥಾ:' (ತೈ.ಉ.4–12), 'ಆಚಾರ್ಯವಾನ್ ಪುರುಷೋ ವೇದ' (ಛಾ.ಉ.6–14–2), 'ತತಸ್ತು ತಂ ಪಶ್ಯತೇ ನಿಷ್ಕಳಂ ಧ್ಯಾಯಮಾನಃ' (ಮು.ಉ.3–1–18), 'ಯಮೇವೈವ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವೃಣುತೇ ತನೂಂ ಸ್ವಾಮ್' (ಮು.ಉ.3–2–3) ಮುಂತಾಗಿ ಹೇಳಿದೆ. ಇಂತಹ ಸಾಧನಗಳನ್ನು ಸಂಪಾದಿಸಿದರೆ ಆಗ ಪುರುಷನು ಪ್ರಬೋಧಗೊಳ್ಳುವನು ಎಂದು ***ಯದಾ*** ಶಬ್ದವನ್ನು ವ್ಯಾಖ್ಯಾನಿಸಿದೆ. [1–14]

ಅದ್ವೈತಬೋಧ ಶಬ್ದವನ್ನು ವಿವರಿಸುತ್ತಾ **ಭುಕ್ತಮಿತಿ.** ಅದರ ಅರ್ಥವು ಸ್ಫುಟವಾಗಿಯೇ ಇದೆ. ಜೀವನು ಅದನ್ನು ತಿಳಿದುಕೊಳ್ಳುವುದು ಹೇಗೆ? ಎಂಬ ಹಿಂದಿನ ಪ್ರಶ್ನೆಗೆ ಉತ್ತರವಾಗಿ ತನ್ನನ್ನು ಪ್ರತ್ಯಗಾತ್ಮನರೂಪದಲ್ಲಿ ಅರಿತುಕೊಳ್ಳುವನು ಎಂದು ತಿಳಿಸಿದೆ. ಅದನ್ನು ತಿಳಿದುಕೊಳ್ಳಲು ಸಾಧನವಾವುದು? ಎಂಬ ಪ್ರಶ್ನೆಗೆ ಶ್ರುತ್ಯಾಚಾರ್ಯ ಎಂದು ಮೊದಲಾಗುವ ಹಿಂದಿನ ಶ್ಲೋಕವು ಉತ್ತರ ನೀಡುತ್ತದೆ. ಈ ಜ್ಞಾನದ ಫಲವನ್ನು ಸಂಸಾರನಿವೃತ್ತಿ ಲಕ್ಷಣವೆಂದು ಮೂರನೆಯಶ್ಲೋಕದಲ್ಲಿ ಹೇಳಲಾಗಿದೆ. [1–15]

ಇಲ್ಲಿಯವರೆಗೆ ಪ್ರಥಮಚರಣವು ವಸ್ತುಶಃ ತಿಳಿಸಲ್ಪಟ್ಟಿತು. ಇನ್ನುಮುಂದೆ ವಾರ್ತಿಕಕಾರರು ಇತರ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡುತ್ತಾರೆ. ಮೊದಲಾಗಿ ಅವರು ಸ್ವಪ್ನಾವಸ್ಥೆಯ ಕುರಿತು ತಿಳಿಸಿ, ಹೇಗೆ ಆತ್ಮನು ಮಾಯೆಯ ವಶದಿಂದ ಈಶ್ವರ ಮತ್ತು ಜೀವನಾಗಿ ತಿಳಿಯಲ್ಪಡುತ್ತಾನೆ ಎಂದು ವಿವರಿಸುತ್ತಾರೆ.

ಆತ್ಮ, ಈಶ್ವರ ಮತ್ತು ಜೀವ

यथा स्वप्ने नृपो भूत्वा भुक्त्वा भोगान्यथेप्सितान् ।
चतुरङ्गबलोपेतश्शत्रुं जित्वा रणाङ्गणे ॥ १६ ॥

ಯಥಾ ಸ್ವಪ್ನೇ ನೃಪೋ ಭೂತ್ವಾ ಭುಕ್ತ್ವಾ ಭೋಗಾನ್ಯಥೇಪ್ಸಿತಾನ್ ।
ಚತುರಂಗಬಲೋಪೇತಶ್ಶತ್ರುಂ ಜಿತ್ವಾ ರಣಾಂಗಣೇ ॥ 16 ॥

ಸ್ವಪ್ನದಲ್ಲಿ ಒಬ್ಬನು ರಾಜನಾಗಿ ಮೆರೆಯಬಹುದು, ಬಯಸಿದ ಎಲ್ಲಾ ವಿಷಯ ವಸ್ತುಗಳನ್ನು ಅನುಭವಿಸಬಹುದು, ಚತುರಂಗಬಲದಿಂದ ಒಡಗೂಡಿ ರಣಾಂಗಣದಲ್ಲಿ ಶತ್ರುಗಳನ್ನು ಜಯಿಸಬಹುದು. [1–16]

ವಿವೃತ್ತಿ

ಈ ಶ್ಲೋಕವು ಪದಶಃ ಹೇಳಿರುವ ಅರ್ಥದಿಂದ ಅಧಿಕವಾದ ಅರ್ಥವನ್ನು ಆವಿಷ್ಕರಿಸಿ 'ಈಶ್ವರತ್ವಂ ಚ ಜೀವತ್ವಂ' ಎಂಬ ಪ್ರಶ್ನೆಗೆ ಉತ್ತರವನ್ನು ಒದಗಿಸುತ್ತದೆ. **ಯಥಾ ಸ್ವಪ್ನ ಇತಿ.** ಚಿದಾತ್ಮನ ಜೀವ–ಈಶ್ವರ ಭಾವವು ಮಾಯೆಯಿಂದ ಬಂಧಿಸಲ್ಪಟ್ಟಿದೆ ಎಂದು ಉದಾಹರಿಸುತ್ತಾ, ಯಾವನೋ ಸ್ವಪ್ನದಲ್ಲಿ ತಾನು ರಾಜನಾಗಿರುವಂತೆ ಅನುಭೂತಿ ಪಡೆದು ತಾನು ಸ್ವತಂತ್ರನೆಂದು ತಿಳಿಯಬಹುದು; ಅಂತೆಯೇ ಚಿದಾತ್ಮನು ಪರರನ್ನು ತನ್ನ ವಶವಾಗಿಸಿಕೊಂಡು ಜಗತ್ಪತಿಯೆಂಬ ಸ್ವಾತಂತ್ರ್ಯದ ಅವಸ್ಥೆಯಲ್ಲಿರುವುದು ಈಶ್ವರತ್ವವು. [1–16]

ಅಂದರೆ ಒಬ್ಬನು ಸ್ವಪ್ನದಲ್ಲಿ ತನ್ನನ್ನು ತಾನು ರಾಜನೆಂದು ಭಾವಿಸಿಕೊಂಡಂತೆ, ಚಿದಾತ್ಮನು, ಸ್ವಸ್ವರೂಪಜ್ಞಾನಿಯಾದ ಆತ್ಮನು, ಹೊರಗಿನ ಎಲ್ಲಾ ವಸ್ತು ವಿಷಯಗಳ ಮೇಲೆ ಹತೋಟಿಯನ್ನು ಸಾಧಿಸಿ ತಾನು ಅವುಗಳ ಪ್ರಭುವಾಗಿ ಈಶ್ವರನಾಗುತ್ತಾನೆ. ಹೀಗೆಯೇ ಆತ್ಮನ ಜೀವ ಅವಸ್ಥೆಯನ್ನು ವಿವರಿಸಿದ್ದಾರೆ:

परात्पराजितो भूत्वा वनं प्राप्य तपश्चरन् ।
मुहूर्तमात्रमात्मानं मन्यते कल्पजीवितम् ॥ १७ ॥

ಪರಾತ್ಪರಾಜಿತೋ ಭೂತ್ವಾ ವನಂ ಪ್ರಾಪ್ಯ ತಪಶ್ಚರನ್ ।
ಮುಹೂರ್ತಮಾತ್ರಮಾತ್ಮಾನಂ ಮನ್ಯತೇ ಕಲ್ಪಜೀವಿತಮ್ ॥ 17 ॥

ಶತ್ರುಗಳಿಂದ ಪರಾಜಿತನಾಗಿ ಅವನು ವನಪ್ರವೇಶಮಾಡಿ ತಪಸ್ಸನ್ನಾಚರಿಸುತ್ತಾನೆ. ಒಂದು ಮುಹೂರ್ತ ಸಮಯದಲ್ಲಿ, ಅವನು ದೀರ್ಘಕಾಲ ಜೀವಿಸಿದ ಅನುಭವವನ್ನು ಪಡೆಯುತ್ತಾನೆ. [1–17]

ವಿವೃತ್ತಿ

ಜೀವತ್ವಕ್ಕೆ ಉದಾಹರಣೆಯಾಗಿ **ಪರಾದಿತಿ.** ಪಾರತಂತ್ರ್ಯದಲ್ಲಿರುವ ಅಭಿಲಾಷೆಯಿರುವವನು ಜೀವನೆನಿಸುತ್ತಾನೆ ಎಂಬ ಅರ್ಥವು. [1–17]

ಅಂದರೆ ಆತ್ಮನು ಇನ್ನೊಬ್ಬರ ವಶವರ್ತಿಯಾಗಿ, ವಿಷಯ ವಾಸನೆಗಳನ್ನು ಹೊಂದಲು ಪ್ರಯತ್ನಿಸುವಾಗ, ಜೀವನೆಂದು ಕರೆಯಲ್ಪಡುತ್ತಾನೆ.

तथैव जाग्रत्कालेपि मनोराज्यं करोत्यसौ ।
कालनद्योघयोगेन क्षीणमायुर्न पश्यति ॥ १८ ॥

तथैव जाग्रत्कालेपि मनोराज्यं करोत्यसौ ।
कालनद्योघयोगेन क्षीणमायुर्न पश्यति ॥ 18 ॥

(Kannada script:)
ತಥೈವ ಜಾಗ್ರತ್ಕಾಲೇಪಿ ಮನೋರಾಜ್ಯಂ ಕರೋತ್ಯಸೌ ।
ಕಾಲನದ್ಯೋಘಯೋಗೇನ ಕ್ಷೀಣಮಾಯುರ್ನ ಪಶ್ಯತಿ ॥ 18 ॥

ಹಾಗೆಯೇ ಜಾಗ್ರತಸ್ಥಿತಿಯಲ್ಲಿ, ತನ್ನದೇ ಆದ ಕಾಲ್ಪನಿಕ ಜಗತ್ತಿನಲ್ಲಿ ವಿಹರಿಸುತ್ತಾನೆ; ಆದರೆ ಅವನಿಗೆ ಕಾಲ ಸರಿದಂತೆ ಜೀವನದ ಅಂತ್ಯ ಹತ್ತಿರಬರುವುದೆಂದು ಅರಿವಿರುವುದಿಲ್ಲ. [1–18]

ವಿವೃತ್ತಿ

ಸ್ವಪ್ನದಲ್ಲಿ ಜೀವಭಾವವಿರುವಂತೆಯೇ ಜಾಗ್ರದವಸ್ಥೆಯಲ್ಲಿಯೂ ಇರುವನು. ಅದಕ್ಕೆ ದೃಷ್ಟಾಂತವಾಗಿ ಈ ಶ್ಲೋಕ **ತಥೈವೇತಿ.** [1–18]

मेघच्छन्नोंशुमालीव मायया मोहितोधिकम् ।
किञ्चित्कर्ता च किञ्चिज्ज्ञो लक्ष्यते परमेश्वरः ॥ १९ ॥

ಮೇಘಚ್ಛನ್ನೋಂಶುಮಾಲೀವ ಮಾಯಯಾ ಮೋಹಿತೋಧಿಕಮ್ ।
ಕಿಂಚಿತ್ಕರ್ತಾ ಚ ಕಿಂಚಿಜ್ಜ್ಞೋ ಲಕ್ಷ್ಯತೇ ಪರಮೇಶ್ವರಃ ॥ 19 ॥

ಸೂರ್ಯನನ್ನು ಮೋಡವು ಮರೆಮಾಡಿದಂತೆ, ಮಾಯೆಯಿಂದ ಮರೆಮಾಡಿದವನಾಗಿ ಪರಮೇಶ್ವರನು ಸೀಮಿತ ಶಕ್ತಿ ಹಾಗೂ ಸೀಮಿತ ಜ್ಞಾನವುಳ್ಳವನಾಗಿ ಕಾಣಿಸುತ್ತಾನೆ. [1–19]

ವಿವೃತ್ತಿ

ಆಯಸ್ಸು ಕ್ಷೀಣವಾಗುವುದನ್ನು ಅರಿಯದಿರುವುದು ಈಶ್ವರನ ವೈಪರೀತ್ಯ ಎಂದು ಹೇಳುತ್ತಾರೆ. ಈಶ್ವರನೇ ಮಾಯೆಗೆ ಪರವಶನಾಗಿ ಜೀವನೆನಿಸುತ್ತಾನೆ ಮತ್ತು ಜೀವನು ಎಂದಿಗೂ ಸ್ವತಂತ್ರನಾಗಿರುವುದಿಲ್ಲ ಎಂಬುದನ್ನು ಉಪಪಾದನೆ ಮಾಡುವ **ಮೇಘಚ್ಛನ್ನ ಇತಿ.** [1–19]

ಈಶ್ವರನು ಮಾಯೆಯಿಂದ ಆವೃತನಾದಾಗ, ಜೀವನೆಂದು ಕರೆಯಲ್ಪಡುತ್ತಾನೆ ಹಾಗೂ ಜೀವನಿಗೆ ಸ್ವತಂತ್ರ ಅಸ್ತಿತ್ವವಿಲ್ಲ.

यद्यत्करोति जानाति तस्मिन्परेश्वरः ।
राजा विद्वान् स्वसामर्थ्यादीश्वरोयमितीर्यते ॥ २० ॥

ಯದ್ಯತ್ಕರೋತಿ ಜಾನಾತಿ ತಸ್ಮಿನ್ಪರೇಶ್ವರಃ ।
ರಾಜಾ ವಿದ್ವಾನ್ ಸ್ವಸಾಮರ್ಥ್ಯಾದೀಶ್ವರೋಯಮಿತೀರ್ಯತೇ ॥ 20 ॥

ಒಬ್ಬನು ಸ್ವಸಾಮರ್ಥ್ಯದಿಂದ ತನ್ನ ಶಕ್ತಿಯನ್ನುಅರಿತುಕೊಳ್ಳುತ್ತಾನೋ, ಆವಾಗ ಆ ಪರಮೇಶ್ವರನು ರಾಜ, ಋಷಿ ಅಥವಾ ಈಶ್ವರನೆಂದು ಕರೆಸಿಕೊಳ್ಳುತ್ತಾನೆ. [1–20]

ವಿವೃತ್ತಿ

ಸ್ವಪ್ನದಲ್ಲಿರುವ ಜೀವನ ದೃಷ್ಟಾಂತದ ಬಳಿಕ ಸ್ವಪ್ನದಲ್ಲಿರುವ ಈಶ್ವರನ ಉದಾಹರಣೆಯನ್ನು ನೀಡುವ **ಯದ್ಯತ್ಕರೋತಿ.** ಯಾವನು ಸ್ವಸಾಮರ್ಥ್ಯದಿಂದ ಸ್ವಾತಂತ್ರ್ಯವನ್ನು ಹೊಂದುವನೋ, ಆಯಾಯ ಕ್ರಿಯೆಯಲ್ಲಿರುವ ಪರಮೇಶ್ವರನು ರಾಜನೆನಿಸಿಕೊಳ್ಳುವನು. ಅಂತೆಯೇ ಸ್ವಸಾಮರ್ಥ್ಯದಿಂದ ವಿದ್ಯಾರ್ಜನೆ ಮಾಡುವನೋ ಅವನು ವಿದ್ವಾಂಸನು ಮತ್ತು ಸ್ವತಂತ್ರವಾಗಿ ಜ್ಞಾನವಂತನಾಗುವನೋ ಅವನು ಈಶ್ವರ ಎಂದೆನಿಸಿಕೊಳ್ಳುವರು. [1–20]

ಈ ರೀತಿಯಾಗಿ ಈಶ್ವರ ಮತ್ತು ಜೀವಭೇದಗಳನ್ನು ಉತ್ತರಿಸಿಯಾಯಿತು. ಆತ್ಮನು ಮಾಯೆಯ ಆವರಣದಿಂದ ಈಶ್ವರ ಯಾ ಜೀವನಾಗಿ ಕಾಣಿಸಿಕೊಳ್ಳುತ್ತಾನೆ. ಅವನು ಕೆಲವು ಸಂದರ್ಭಗಳಲ್ಲಿ ಜೀವನಾಗಿ ಯಾ ಈಶ್ವರನಾಗಿ ಇರಬಹುದು ಆದರೆ ತನ್ನಷ್ಟಕ್ಕೇ ಅಲ್ಲ.

ಈಶ್ವರನು ಎಲ್ಲರಲ್ಲಿಯೂ ಇದ್ದಾನೆ

ज्ञानक्रिये शिवेनैक्यात्सङ्क्रान्ते सर्वजन्तुषु ।
ईश्वरत्वं च जीवानां सिद्धं तच्छक्तिसङ्गमात् ॥ २१ ॥

ಜ್ಞಾನಕ್ರಿಯೇ ಶಿವೇನೈಕ್ಯಾತ್ಸಂಕ್ರಾಂತೇ ಸರ್ವಜಂತುಷು ।
ಈಶ್ವರತ್ವಂ ಚ ಜೀವಾನಾಂ ಸಿದ್ಧಂ ತಚ್ಛಕ್ತಿಸಂಗಮಾತ್ ॥ 21 ॥

ಶಿವನೊಂದಿಗೆ ಒಂದಾಗಿರುವುದರಿಂದ, ಎಲ್ಲಾ ಜೀವರಲ್ಲಿಯೂ ಬುದ್ಧಿ ಮತ್ತು ಕ್ರಿಯಾಶೀಲತೆ ಇದೆ. ಜೀವರಲ್ಲಿ ಈಶ್ವರನ ಶಕ್ತಿ ಸಮ್ಮಿಳಿತವಾಗಿರುವುದರಿಂದ, ಜೀವರು ಈಶ್ವರನೆಂದು (ಸಮಾನರೆಂದು) ನಿರ್ಧರಿಸಬಹುದು. [1–21]

ವಿವೃತ್ತಿ

ಈಶ್ವರತ್ವ ಮತ್ತು ಜೀವತ್ವಗಳೆರಡೂ ಸಾಪೇಕ್ಷವಾಗಿ ಮಾಯೆಯಿಂದ ಉತ್ಪತ್ತಿಯಾಗಿದ್ದು ಚಿದಾತ್ಮನ ಸರ್ವಾತ್ಮತ್ವದ ವ್ಯುತ್ಪತ್ತಿಯನ್ನು, 'ಸರ್ವಾತ್ಮತ್ವಂ ಚ ಕೀದೃಶಮ್' ಎಂಬ ಪ್ರಶ್ನೆಗೆ ಉತ್ತರವಾಗಿ ಹೇಳಲು **ಜ್ಞಾನಕ್ರಿಯೇ ಇತಿ.** ಎಲ್ಲಾ ಜಂತುಗಳಲ್ಲಿಯೂ ಜ್ಞಾತೃತ್ವ ಮತ್ತು ಕರ್ತೃತ್ವಗಳು ಸ್ವತಂತ್ರವಾಗಿವೆ ಏಕೆಂದರೆ ಅವುಗಳು ಶಿವನೊಂದಿಗೆ ಸಂಕ್ರಾಂತವಾಗಿರುವುದರಿಂದ, ಬೆಂಕಿಯಲ್ಲಿ ಕಾಯಿಸಿದ ಕಬ್ಬಿಣದ ಗುಂಡು ಬೆಂಕಿಯ ಹಾಗೆ ಸುಡುವಂತೆ. ಹಾಗಾಗಿ ಈಶ್ವರಶಕ್ತಿಯಿರುವುದರಿಂದ ಜೀವನಿಗೆ ಈಶ್ವರತ್ವವು ಸಿದ್ಧವಾಗುವುದು. ಈಶ್ವರನೇ ಸರ್ವಾತ್ಮನು ಮತ್ತು ಅದುವೇ ಸರ್ವಾತ್ಮಕತೆಯು. [1–21]

ಎಲ್ಲಾ ಜೀವರಲ್ಲೂ ಜ್ಞಾನ ಮತ್ತು ಕ್ರಿಯೆಗಳನ್ನು ಕಾಣಬಹುದು ಯಾಕೆಂದರೆ ಅವು ಶಿವಸಮಾನವಾಗಿವೆ. ಶಿವ ಯಾ ಪರಮಾತ್ಮನಿಗೆ ಮಾತ್ರ ಸ್ವತಂತ್ರವಾಗಿ ಯೋಚಿಸುವ ಹಾಗೂ ಕ್ರಿಯಾಶೀಲತೆಯ ಶಕ್ತಿ ಇದೆ. ಬೆಂಕಿಯಲ್ಲಿ ಹಾಕಿದ ಒಂದು ತುಂಡು ಕಬ್ಬಿಣವು ಉರಿಯುತ್ತಿದೆ ಎಂದು ಹೇಳುವುದು ಅದು ಬೆಂಕಿಯಂತೆ ಕೆಂಪಾದಾಗ ಮಾತ್ರ. ಎಲ್ಲಾ ಜೀವರು ಈಶ್ವರ ಸಮಾನರಾಗಿರುವುದರಿಂದ, ಅವನು ಸರ್ವಾತ್ಮನು, ಎಲ್ಲರಲ್ಲಿರುವ ಆತ್ಮನು.

ಸ್ವಪ್ರಕಾಶಿತ ಈಶ್ವರಜ್ಞಾನ

अयं घटोयं पट इत्येवं नानाप्रतीतिषु ।
अर्कप्रभेव ज्ञानं तत्स्वयमेव प्रकाशते ॥ २२ ॥

ಅಯಂ ಘಟೋಽಯಂ ಪಟ ಇತ್ಯೇವಂ ನಾನಾಪ್ರತೀತಿಷು ।
ಅರ್ಕಪ್ರಭೇವ ಜ್ಞಾನಂ ತತ್ಸ್ವಯಮೇವ ಪ್ರಕಾಶತೇ ॥ 22 ॥

"ಇದು ಮಡಕೆ", "ಇದು ಬಟ್ಟೆ" ಇತ್ಯಾದಿ ಎಂದು ಬಾಹ್ಯ ವಸ್ತುಗಳನ್ನು ಅರಿಯುವಿಕೆಯಲ್ಲಿ, ನಮ್ಮ ಸ್ವಸ್ವರೂಪವನ್ನು ಬಿಂಬಿಸುವ ಅಂತಃಕರಣವೇ ಅದನ್ನು ಪ್ರಕಾಶಿಸುತ್ತದೆ, ಸೂರ್ಯನ ಕಿರಣದಂತೆ. [1–22]

ವಿವೃತ್ತಿ

ಸರ್ವಜಂತುಗಳಲ್ಲಿರುವ ಈ ಜ್ಞಾನವು ಅದರ ಏಕತ್ವದ ಸ್ವಪ್ರಕಾಶತ್ವದಿಂದ ಸಾಧ್ಯವಾಗಿದೆ ಎನ್ನುವ **ಅಯಮಿತಿ.** ಸ್ವಜ್ಞಾನದಿಂದ ತನ್ನನ್ನು ಕಾಣುವುದರಿಂದ ಸ್ವರೂಪಜ್ಞಾನವು ತಾನಾಗಿಯೇ ಪ್ರಕಾಶಿಸಿ ಸ್ಫುರಿಸುತ್ತದೆ. [1–22]

ज्ञानं न चेत्स्वयं सिद्धं जगदन्धं तमो भवेत् ।
न चेदस्य्स् क्रिया काचित् व्यवहारः कथं भवेत् ॥ २३ ॥

ಜ್ಞಾನಂ ನ ಚೇತ್ಸ್ವಯಂ ಸಿದ್ಧಂ ಜಗದಂಧಂ ತಮೋ ಭವೇತ್ ।
ನ ಚೇದಸ್ಯ ಕ್ರಿಯಾ ಕಾಚಿತ್ ವ್ಯವಹಾರಃ ಕಥಂ ಭವೇತ್ ॥ 23 ॥

ಅಂತಃಕರಣವು ಸ್ವಪ್ರಕಾಶಿತವಾಗಿರದಿದ್ದರೆ, ಈ ಪ್ರಪಂಚವು ಕುರುಡಾಗುವ ಕತ್ತಲೆಯಿಂದ ತುಂಬಿರುತ್ತಿತ್ತು. [1–23]

ಈಶ್ವರನ ಕಾರ್ಯಗಳು

ಆವನಲ್ಲಿ ಯಾವುದೇ ರೀತಿಯ ಕ್ರಿಯಾಶೀಲತೆಯಿಲ್ಲದಿದ್ದ ಪಕ್ಷದಲ್ಲಿ, ಒಬ್ಬನು ಒಂದು ಕ್ರಿಯೆಯ ಕರ್ತೃ ಎಂದು ಹೇಗೆ ಹೇಳುವುದು? [1–23]

ವಿವೃತ್ತಿ

ಜ್ಞಾನದ ಸ್ವಪ್ರಕಾಶತ್ವದ ಕುರಿತಾದ ಸಂಶಯ ನಿವಾರಣೆಗೆ **ಜ್ಞಾನಂ ನ ಚೇದಿತಿ.** ಈಶ್ವರನಲ್ಲಿ ಜ್ಞಾನವು ಅಮೂರ್ತವಾಗಿದ್ದು ಅವನಲ್ಲಿ ಕ್ರಿಯಾಶೀಲತೆಯು ಏಕಾಗಿ ಇರುವುದು ಎಂದು ತಿಳಿಸಲು **ನ ಚೇದಿತಿ.** ಈಶ್ವರನು ಕರ್ತನೆಂದು ವ್ಯವಹಾರದಲ್ಲಿ ಸಿದ್ಧವಾಗಿರುವುದರಿಂದ, ಕ್ರಿಯೆಯೂ ಕೂಡ ಅದೇರೀತಿಯಾಗಿ ಅಂಗೀಕೃತವಾಗುವುದು. [1–23]

ಈಶ್ವರನನ್ನು ಸೃಷ್ಟಿಕರ್ತ ಇತ್ಯಾದಿ ಸಂಬೋಧಿಸುವುದರ ಕಾರಣದಿಂದ, ರೂಪರಹಿತನಾಗಿದ್ದರೂ, ಈಶ್ವರನಲ್ಲಿ ಕ್ರಿಯಾಶೀಲತೆಯು ಮೂಲಭೂತವಾಗಿ ಇದ್ದಿರಬೇಕು.

क्रिया नाम परिस्पन्दपरिणामस्वरूपिणी
स्पन्दमाने बहिर्ज्ञाने तदङ्कुरवदुद्रवेत् ॥ २४ ॥

ಕ್ರಿಯಾ ನಾಮ ಪರಿಸ್ಪಂದಪರಿಣಾಮಸ್ವರೂಪಿಣೀ ।
ಸ್ಪಂದಮಾನೇ ಬಹಿರ್ಜ್ಞಾನೇ ತದಂಕುರವದುದ್ರವೇತ್ ॥ 24 ॥

ಚಲನೆ ಯಾ ಸ್ಥಿತಿಬದಲಾವಣೆಯ ಕ್ರಿಯೆಯ ಪರಿಣಾಮವು ಅಂತಃಕರಣದ ಒಂದು ಅಂಕುರದ ಬಾಹ್ಯಸಂಚಾರವನ್ನು ಪ್ರತಿನಿಧಿಸುತ್ತದೆ. [1–24]

ವಿವೃತ್ತಿ

ಕ್ರಿಯೆಯ ಸ್ವರೂಪವೇನು? ಎಂದು ತಿಳಿಸಲು **ಕ್ರಿಯಾ ನಾಮೇತಿ.** ***ಪರಿಸ್ಪಂದ*** ಚಲನೆ; ***ಪರಿಣಾಮ*** ಅವಸ್ಥಾಂತರ. ಬಾಣ ಮತ್ತು ಸ್ವರ್ಣಗಳು ಕ್ರಿಯೆಯ ಪ್ರಸಿದ್ಧ ರೂಪಗಳಾಗಿವೆ. ಅದು ಅಮೂರ್ತ ಉಪಾಧಿಕಾರಣವಾಗಿ ಭಾಸವಾಗುವುದನ್ನು ತಿಳಿಸಲು **ಸ್ಪಂದಮಾನ ಇತಿ.** ಮನೋವೃತ್ತಿಯು ಇಂದ್ರಿಯಗಳ ಮೂಲಕ ಜ್ಞಾನವಾಗಿ ಹೊರಮುಖವಾಗಿ ಸ್ಪಂದಿಸಿದರೆ, ಬೀಜಾಂಕುರದಂತೆ ಜ್ಞಾನದ ಅಂಕುರದಂತಹ ಕಾರ್ಯದಿಂದ ಕ್ರಿಯೆಯು ಜ್ಞಾನದ ವ್ಯಾಪ್ತಿಯಲ್ಲಿ ಉದ್ಭವಿಸುವುದು. ಜ್ಞಾನವನ್ನು ಆಶ್ರಯಿಸಿರುವ ಪ್ರಾಣವು ಅಧಿಷ್ಠಿತವಾಗಿರುವ ಶರೀರದಲ್ಲಿ ಕ್ರಿಯೆಯು ಪ್ರಕಟವಾಗುವುದು. ಅಂತರ್ಯಾಮಿಯಾದ ಈಶ್ವರನ ಸನ್ನಿಧಾನದಲ್ಲಿ ಪ್ರಾಣದ ಚೇಷ್ಟೆಗಳು ಜರಗುವುದರಿಂದ, ಎಲ್ಲಾ ಜಂತುಗಳಲ್ಲಿ ಪ್ರತೀತವಾಗುವ ಕ್ರಿಯೆ, ಚೇಷ್ಟೆಗಳು ಈಶ್ವರನದೇ ಆಗಿವೆ ಎಂಬ ಅರ್ಥವು. [1–24]

ಯಾವುದೇ ವಸ್ತು-ವಿಷಯಗಳು ರೂಪರಹಿತವಾಗಿದ್ದರೂ, ಒಂದು ಉಪಾಧಿಯೊಡನೆ ಸಂಬಂಧಹೊಂದಿದಾಗ ಮೇಲೆ ಹೇಳಿದ ಕ್ರಿಯೆಗಳು ಸಾಧ್ಯವಿದೆ. ಜ್ಞಾನೇಂದ್ರಿಗಳಿಂದ ಬರುವ ಸಂವೇದನೆಗಳಿಗೆ ಸ್ಪಂದಿಸಿದ ಮನಸು, ಅಂತಃಕರಣದೊಂದಿಗೆ ಸಂಬಂಧ ಹೊಂದಿದಾಗ, ಅದು ಚಲನಶೀಲವಾಗುತ್ತದೆ. ಇದರ ಪರಿಣಾಮವಾಗಿ ಅಂತಃಕರಣದೊಂದಿಗಿರುವ ಹಾಗೂ ಮನಸಿನಿಂದ ಬೇರೆಯಾಗಿರದ ಪ್ರಾಣವು ಒಂದು ರೀತಿಯ ಸ್ಪಂದನೆಗಳಿಗೆ ಒಳಗಾಗಿ, ಅದು ಒಳಗೊಂಡಿರುವ ಭೌತಿಕ ದೇಹದಲ್ಲಿ ಕೆಲವು ರೀತಿಯ ಕ್ರಿಯೆಗಳಾಗಿ ಪ್ರಕಟಗೊಳ್ಳುತ್ತದೆ. ಹೀಗೆ ಪ್ರಾಣ ಇತ್ಯಾದಿಗಳ ಕಾರ್ಯಗಳು, ದೇಹದೊಳಗಿರುವ ನಿಯಂತ್ರಕನಾದ ಈಶ್ವರನ ಸಂಸ್ಥಿತಿಯಲ್ಲಿ ಜರಗುವುದರಿಂದ, ಒಬ್ಬನಲ್ಲಿ ಕಾಣಬರುವ ಎಲ್ಲಾ ಕ್ರಿಯೆಗಳು ಈಶ್ವರನಿಗೇ ಸಂಬಂಧಪಟ್ಟದ್ದು ಎಂದು ತಿಳಿಯಬಹುದು. (ಅಧ್ಯಾಯ 4, ಶ್ಲೋಕ 7–8 ನೋಡಿ).

उत्पाद्यप्राप्यसंस्कार्यविकार्योपाश्रया क्रिया ।
करोति गच्छत्युन्मार्ष्टि छिनत्तीति प्रतीयते ॥ २५ ॥

ಉತ್ಪಾದ್ಯಪ್ರಾಪ್ಯಸಂಸ್ಕಾರ್ಯವಿಕಾರ್ಯೋಪಾಶ್ರಯಾ ಕ್ರಿಯಾ ।
ಕರೋತಿ ಗಚ್ಛತ್ಯುನ್ಮಾರ್ಷ್ಟಿ ಛಿನತ್ತೀತಿ ಪ್ರತೀಯತೇ ॥ 25 ॥

ಒಂದು ವಸ್ತುವಿನ ಉತ್ಪಾದನೆ, ಸಂಗ್ರಹ, ಸಂಸ್ಕರಣೆ ಯಾ ಸ್ಥಿತಿ ಬದಲಾವಣೆ ಮುಂತಾದವುಗಳಲ್ಲಿ ಕ್ರಿಯೆ ಜರಗಿಸಲ್ಪಡುತ್ತದೆ; ನಾವು ಅದನ್ನು ಅವನು ಮಾಡಿದನು, ಅವನು ಹೋದನು, ಕೊರಡನ್ನು ಸ್ವಚ್ಛಗೊಳಿಸಿದನು, ಗೆಲ್ಲನ್ನು ಕಡಿದನು ಇತ್ಯಾದಿಯಾಗಿ ಹೇಳುತ್ತೇವೆ. [1–25]

ವಿವೃತ್ತಿ

ಇದರಲ್ಲಿ ಕ್ರಿಯೆಯ ಕಾರ್ಯಗಳನ್ನು ವಿವರಿಸುತ್ತಾ **ಉತ್ಪಾದ್ಯೇತಿ.** ಅಥವಾ ಪರಿಸ್ಪಂದನೆರೂಪದ ಕ್ರಿಯೆಯ ಪರಿಣಾಮ ರೂಪಗಳನ್ನು ಉದಾಹರಿಸುವ **ಉತ್ಪಾದ್ಯೇತಿ.** ಉತ್ಪಾದನೆ ಮೊದಲಾದ ಕ್ರಿಯೆಗಳಿಗೆ ಅದೇ ಸಂಖ್ಯೆಯಲ್ಲಿ ಉದಾಹರಣೆಗಳನ್ನು ನೀಡುವ **ಕರೋತೀತ್ಯಾದಿ.** ***ಉನ್ಮಾರ್ಷ್ಟಿ*** ನೀರಿನಲ್ಲಿ ತೊಳೆಯುವುದರ ಮೂಲಕ ಸಂಸ್ಕರಿಸುವುದು. ಹೀಗೆ ಕರ್ಮಕಾರಕ ಪರಿಣಾಮಗಳು ಕ್ರಿಯೆಯೆಂದು ಪ್ರತೀತವಾಗುತ್ತವೆ. [1–25]

ಈಶ್ವರ ಮತ್ತು ಜೀವರ ಉಪಾಧಿ ಭೇದಗಳು

ಸರ್ವಜ್ಞತೆ ಮತ್ತು ಅಲ್ಪಜ್ಞಾನ ಎರಡೂ ವಿಷಯಗಳು ಒಂದೇ ವಸ್ತುವಿನ ವಿಶೇಷಣವಾಗಿದ್ದು, ಅದರ ಉಪಾಧಿಯೊಂದಿಗಿನ ಸಂಬಂಧವು ಅದನ್ನು ನಿರ್ಧರಿಸುತ್ತದೆ.

शिवो ब्रह्मादिदेहेषु सर्वज्ञ इति भासते ।
देवतिर्यङ्मनुष्येशु किञ्चिज्ज्ञस्तारतम्यतः ॥ २६ ॥
जरायुजोण्डजश्चैव स्वेदजः पुनरुद्भिदः ।
एते चतुर्विधाः पूर्वक्रमशो न्यूनवृत्तयः ॥ २७ ॥

ಶಿವೋ ಬ್ರಹ್ಮಾದಿದೇಹೇಷು ಸರ್ವಜ್ಞ ಇತಿ ಭಾಸತೇ ।
ದೇವತಿರ್ಯಙ್ಮನುಷ್ಯೇಷು ಕಿಂಚಿಜ್ಜ್ಞಸ್ತಾರತಮ್ಯತಃ ॥ 26 ॥
ಜರಾಯುಜೋಂಡಜಶ್ಚೈವ ಸ್ವೇದಜಃ ಪುನರುದ್ಭಿದಃ ।
ಏತೇ ಚತುರ್ವಿಧಾಃ ಪೂರ್ವಕ್ರಮಶೋ ನ್ಯೂನವೃತ್ತಯಃ ॥ 27 ॥

ಬ್ರಹ್ಮಾದಿಗಳಲ್ಲಿ ಶಿವನು ಸರ್ವಜ್ಞನಾಗಿ ಪ್ರಕಟಗೊಳ್ಳುತ್ತಾನೆ; ದೇವ (ದೇವತೆಗಳು, ಗಂಧರ್ವರು, ಯಕ್ಷರು ಇತ್ಯಾದಿ), ತಿರ್ಯಕ್ ಯೋನಿಯ (ಕೆಳಸ್ತರದ) ಪ್ರಾಣಿಗಳಲ್ಲಿ ಮತ್ತು ಮನುಷ್ಯರಲ್ಲಿ, ಅವನು ಬೇರೆ ಬೇರೆ ಸ್ತರದ ಸೀಮಿತ ಜ್ಞಾನದಿಂದ ಪ್ರಕಟಗೊಳ್ಳುತ್ತಾನೆ. ಮೇಲುಸ್ತರದಿಂದ ಕೆಳಗೆಬರುವಂತೆ ಜರಾಯುಜ (ದೇಹದಿಂದ), ಅಂಡಜ (ಮೊಟ್ಟೆಯಿಂದ), ಸ್ವೇದಜ (ಬೆವರಿನಿಂದ) ಮತ್ತು ಉದ್ಭಿಜ (ಮಣ್ಣಿನಿಂದ) ಜನಿಸಿದ ಎಂಬ ನಾಲ್ಕು ರೀತಿಯ ದೇಹಗಳಿವೆ. [1–26..27]

ವಿವೃತ್ತಿ

ಇದರಲ್ಲಿ ಸರ್ವಜ್ಞತ್ವ ಮತ್ತು ಅಲ್ಪಜ್ಞಾನತ್ವಗಳು ಉಪಾಧಿ ಭೇದದಿಂದ ಒಂದೇ ವಿಧವಾದ ಜಂತುಗಳಲ್ಲಿ ಹೇಗಿರುವುದೆಂದು ಪ್ರತಿಪಾದಿಸಿದೆ **ಶಿವ ಇತಿ.** [1–26]

ಇದು ತಾರತಮ್ಯವನ್ನು ತಿಳಿಸುತ್ತದೆ; ಯಾವುದರಿಂದಾಗಿ ಜೀವಿಗಳು ತಾರತಮ್ಯದಿಂದ ಕಂಡುಬರುತ್ತವೆ ಎಂದರೆ ಅವುಗಳ ಶರೀರದ ಉಪಾಧಿಯಿಂದ ಎಂದು ತಿಳಿಸುವ **ಜರಾಯುಜ ಇತಿ.** ಇಲ್ಲಿ 'ಪುರುಷತ್ವೇ ವಾಚಿ ಸ್ತರಾಮಿ' (ಶ್ವೇ.ಉ.3–30) ಎಂಬ ಶ್ರುತಿಯಂತೆ ಜರಾಯುಜ ಮೊದಲಾದವುಗಳಲ್ಲಿ ಜ್ಞಾನದ ತಾರತಮ್ಯವು ಕಂಡುಬರುತ್ತದೆ. [1–27]

ಭೇದಗಳಿಗೆ ಮಾಯೆಯು ಕಾರಣ

ब्रह्मादिस्तम्बपर्यन्ता स्वप्रकल्पैव कल्पना ।
साक्षात्कर्त्रनवच्छिन्नप्रकाशे परमात्मनि ॥ २८ ॥

ಬ್ರಹ್ಮಾದಿಸ್ತಂಬಪರ್ಯಂತಾ ಸ್ವಪ್ನಕಲ್ಪೈವ ಕಲ್ಪನಾ ।
ಸಾಕ್ಷಾತ್ಕರ್ತ್ರನವಚ್ಛಿನ್ನಪ್ರಕಾಶೇ ಪರಮಾತ್ಮನಿ ॥ 28 ॥

ಅನವಚ್ಛಿನ್ನ ಪ್ರಕಾಶನಾದ ಪರಮಾತ್ಮನ ಸಾಕ್ಷಾತ್ಕಾರವಾದಾಗ, ಬ್ರಹ್ಮನಿಂದ ಮೊದಲುಗೊಂಡು ಕೆಳಸ್ತರದ ಗಿಡಗಳವರೆಗೆ ಎಲ್ಲಾ ಜೀವಜಂತುಗಳು ಕನಸಿನಂತೆ ಕರಗಿಹೋಗುಹೋಗುತ್ತವೆ. [1–28]

ವಿವೃತ್ತಿ

ಈಶ್ವರತ್ವವು ಮಾಯೆಯಿಂದ ಆವರಿಸಿರುವುದಾಗಿ ಉಪಪಾದಿಸಿರುವುದನ್ನು ಉಪಸಂಹಾರಮಾಡುತ್ತಾ **ಬ್ರಹ್ಮಾದಿತಿ.** ಅನವಚ್ಛಿನ್ನ ಪ್ರಕಾಶನಾದ ಪರಮೇಶ್ವರನನ್ನು ಅರಿತುಕೊಂಡಾಗ, ಸ್ವಪ್ನವು ಜಾಗ್ರತ್ತಿನಲ್ಲಿ ವಿಲೀನವಾಗುವಂತೆ, ಜಾಗ್ರತ್ ಪ್ರಬೋಧದಲ್ಲಿ ಲೀನವಾಗಿ ಎಲ್ಲ ಕಲ್ಪನೆಗಳೂ ಸ್ವಪ್ನತುಲ್ಯವಾಗುತ್ತವೆ. [1–28]

अणोरणीयान्महतो महीयानिति वेदवाक् ।
रुद्रोपनिशदप्येवं स्तौति सर्वात्मकं शिवम् ॥ २९ ॥

ಅಣೋರಣೀಯಾನ್ಮಹತೋ ಮಹೀಯಾನಿತಿ ವೇದವಾಕ್ ।
ರುದ್ರೋಪನಿಷದಪ್ಯೇವಂ ಸ್ತೌತಿ ಸರ್ವಾತ್ಮಕಂ ಶಿವಂ ॥ 29 ॥

ಶಿವನು ಅಣುವಿಗಿಂತ ಸಣ್ಣವನು ಮತ್ತು ಅತೀ ದೊಡ್ಡದಕ್ಕಿಂತ ದೊಡ್ಡವನು ಎಂದು ವೇದಗಳು ಹೇಳಿವೆ; ಅವನು ಸರ್ವಾತ್ಮಕನೆಂದು, ಎಲ್ಲರ ಆತ್ಮರೂಪಿಯೆಂದು, ರುದ್ರೋಪನಿಷತ್ತು ಹೊಗಳಿದೆ. [1–29]

ವಿವೃತ್ತಿ

ಹೇಳಿರುವ ಸರ್ವಾತ್ಮಕತೆಯ ಪ್ರಮಾಣವಾಗಿ **ಅಣೋರಣೀಯಾನಿತಿ.** [1–29]

ईश्वरो गुरुरात्मेति मूर्तिभेदविभागिने ।
व्योमवद्व्याप्तदेहाय दक्षिणामूर्तये नमः ॥ ३० ॥

ಈಶ್ವರೋ ಗುರುರಾತ್ಮೇತಿ ಮೂರ್ತಿಭೇದವಿಭಾಗಿನೇ ।
ವ್ಯೋಮವದ್ವ್ಯಾಪ್ತದೇಹಾಯ ದಕ್ಷಿಣಾಮೂರ್ತಯೇ ನಮಃ ॥ 30 ॥

ಈಶ್ವರನಾಗಿ, ಗುರುವಾಗಿ, ಆತ್ಮವಾಗಿ ವಿವಿಧ ರೂಪಗಳಲ್ಲಿ ಪ್ರಕಟವಾದ, ಆಕಾಶದಂತೆ ಸರ್ವವ್ಯಾಪಿಯಾದ ಶರೀರವುಳ್ಳ ಶ್ರೀದಕ್ಷಿಣಾಮೂರ್ತಿಗೆ, ಶಿವನಿಗೆ ನನ್ನ ನಮಸ್ಕಾರಗಳು. [1–30]

ವಿವೃತ್ತಿ

ಗುರುಮೂರ್ತಯೇ ದಕ್ಷಿಣಾಮೂರ್ತಯೇ ಎಂಬ ಪದದ್ವಯಗಳ ಅರ್ಥವನ್ನು ಹೇಳುವ **ಈಶ್ವರ ಇತಿ.** ಇವರಿಗೆ ನಮಸ್ಕಾರಗಳು ಎಂದು ಆತ್ಮಸಮರ್ಪಣೆಯ ಭಾವವನ್ನು ವಿವರಿಸುತ್ತಾ ***ಆತ್ಮೇತಿ ಮೂರ್ತಿಭೇದ*** ಎಂದು ಹೇಳಿದೆ. ಮತ್ತು ಈಶ್ವರ, ಗುರು, ಆತ್ಮರೂಪದಲ್ಲಿ ರೂಪಭೇದದಿಂದ ಭಿನ್ನವಾಗಿ ಕಾಣುವ ದಕ್ಷಿಣಾಮೂರ್ತಿಗೆ

ನಮಸ್ಕಾರಗಳು ಎಂಬ ಅರ್ಥದಲ್ಲಿದೆ. ಮೂರ್ತಿತ್ರಯಗಳು ಪರಿಚ್ಛಿನ್ನವಾಗಿರುವವೋ ಎಂಬ ಆಶಂಕೆಗೆ ***ವ್ಯೋಮವದ್ವ್ಯಾಪ್ತದೇಹಾಯ*** ಎಂಬ ವಿಶೇಷಣವು, ವ್ಯಾಪಕನಾಗಿರುವವನು ಎಂಬ ಅರ್ಥದಲ್ಲಿ. [1–30]

ಪರಮಾತ್ಮನಿಗೆ ನಮಸ್ಕಾರಗಳು ಅಂದರೆ ತಾವಿಬ್ಬರೂ ಒಂದೇ ಹಾಗೂ ಸಮಾನತೆ ಹೊಂದಿದವರು ಎಂಬ ಭಾವನೆಯಿಂದ ತನ್ನನ್ನು ತಾನು ಅವನಿಗೆ ಅರ್ಪಿಸಿಕೊಳ್ಳುವುದು. 'ದಕ್ಷಿಣಾಮೂರ್ತಿ' ಎಂಬ ಶಬ್ದಕ್ಕೆ ಹೀಗೆ ಕೆಲವು ವಿವರಣೆಗಳಿವೆ: (1) ಶಿವನ ಒಂದು ಅವತಾರ ರೂಪಕ್ಕೆ ಈ ಸಂಭೋದನೆಯಿದೆ. ಈ ಅವತಾರದಲ್ಲಿ ಅವನು ದಕ್ಷಿಣಮುಖವಾಗಿ ಒಂದು ಅತ್ತಿಮರದ ಕೆಳಗೆ ಗುರುರೂಪದಲ್ಲಿ, ಶಿಷ್ಯರಾಗಿ ಕುಳಿತಿರುವ ಶ್ರೇಷ್ಠರಾದ ಸನಕಾದಿ ಋಷಿಗಳಿಗೆ (ಸನಕ, ಸನಂದನ, ಸನತ್ಕುಮಾರ, ಸನತ್ಸುಜಾತ ಎಂಬ ಚತುರ್ಮುಖ ಬ್ರಹ್ಮನ ಮಾನಸ ಪುತ್ರರು) ಬೋಧಿಸುತ್ತಿರುವನು. (2) ಸತ್ಯ, ಜ್ಞಾನ ಮತ್ತು ಆನಂದದಿಂದ ಕೂಡಿರುವವನಾಗಿ ಆದಿಯಿಲ್ಲದ ಹಾಗೂ ಊಹಿಸಲಸಾಧ್ಯವಾದ ಶಕ್ತಿಯುತವಾದ ಮಾಯೆಯನ್ನು ಹೊಂದಿದವನಾದ, ಜಗತ್ತಿನ ಸೃಷ್ಟಿ–ಸ್ಥಿತಿ–ಲಯಗಳಿಗೆ ಕಾರಣನಾದ ರೂಪರಹಿತನಾಗಿರುವ ಶಿವ. (3) ಅವನನ್ನು ಅರಿಯಲು ಮತ್ತು ಸಾಕ್ಷಾತ್ಕರಿಸಲು ಇರುವ ಒಂದೇ ದಾರಿಯಾದ ಆಧ್ಯಾತ್ಮಿಕ ಜ್ಞಾನವನ್ನು ನೀಡುವ ಶಿವ.

इति श्री दक्षिणामूर्तिस्त्रोत्रार्थप्रतिपादके ।
प्रबन्धे मानसोल्लासे प्रथमोल्लाससङ्ग्रहः ॥ ३१ ॥

ಇತಿ ಶ್ರೀದಕ್ಷಿಣಾಮೂರ್ತಿಸ್ತ್ರೋತ್ರಾರ್ಥಪ್ರತಿಪಾದಕೇ ।
ಪ್ರಬಂಧೇ ಮಾನಸೋಲ್ಲಾಸೇ ಪ್ರಥಮೋಲ್ಲಾಸಸಂಗ್ರಹಃ ॥ 31 ॥

ಶ್ರೀದಕ್ಷಿಣಾಮೂರ್ತಿ ಸ್ತೋತ್ರದ ಅರ್ಥವನ್ನು ಪ್ರತಿಪಾದಿಸುವ ಮಾನಸೋಲ್ಲಾಸವೆಂಬ ಪ್ರಬಂಧದ ಪ್ರಥಮ ಉಲ್ಲಾಸದ ವಿವರಣೆಯು ಇಲ್ಲಿಗೆ ಮುಗಿಯಿತು. [1–31]

ವಿವೃತ್ತಿ

ಪ್ರಥಮಶ್ಲೋಕದ ವ್ಯಾಖ್ಯಾನವನ್ನು ಉಪಸಂಹರಿಸುವ **ಇತೀತಿ.** [1–31]

ಇತಿ ಶ್ರೀಮಾನಸೋಲ್ಲಾಸವೃತ್ತಾಂತೇ ಪ್ರಥಮೋಲ್ಲಾಸಃ ।

ದ್ವಿತೀಯೋಲ್ಲಾಸಃ

ಆತ್ಮವು ಪ್ರಥಮ ಕಾರಣ

ಹಿಂದಿನ ಅಧ್ಯಾಯದಲ್ಲಿ ಬಾಹ್ಯಪ್ರಪಂಚಕ್ಕೆ ಆತ್ಮವನ್ನು ಬಿಟ್ಟು ತನ್ನದೇ ಆದ ಸ್ವತಂತ್ರ ಅಸ್ತಿತ್ವ ಇಲ್ಲವೆಂದೂ, ಮಾಯೆಯ ಕಾರಣದಿಂದ ಹಾಗೆ ಕಂಡುಬರುವುದೆಂದೂ ತೋರಿಸಿಕೊಡಲಾಯಿತು. ವೇದಾಂತದ ತರ್ಕವನ್ನು ಮುಂದುವರೆಸಿ, ಆತ್ಮನ ಹೊರತಾಗಿ ಅಸ್ತಿತ್ವವುಳ್ಳ ಬೇರೆ ಯಾವುದೋ ಒಂದು ವಸ್ತುವು ಪ್ರಪಂಚದ ವಸ್ತು ಕಾರಣವೆಂದು ಪ್ರತಿಪಾದಿಸುವ ಯೋಚನೆಗಳನ್ನು ನಿರಾಕರಿಸುವ ಮೂಲಕ ಆತ್ಮವು ವಿಶ್ವದ ಪ್ರಥಮ ಕಾರಣವೆಂದು ವಿವರಿಸಲಾಗಿದೆ.

ವೈಶೇಷಿಕರ ಕಣ ಸಿದ್ಧಾಂತ

उपादानं प्रपञ्चस्य संयुक्ताः परमाणव ।
मृदन्वितो घटस्तस्माद्भासते नेश्वरान्वितः ॥ १ ॥

ಉಪಾದಾನಂ ಪ್ರಪಂಚಸ್ಯ ಸಂಯುಕ್ತಾಃ ಪರಮಾಣವ ।
ಮೃದನ್ವಿತೋ ಘಟಸ್ತಸ್ಮಾದ್ಭಾಸತೇ ನೇಶ್ವರಾನ್ವಿತಃ ॥ 1 ॥

ಪರಮಾಣುಗಳು, ಅತೀ ಚಿಕ್ಕದಾದ ಸೂಕ್ಷ್ಮಕಣಗಳು, ಜೊತೆಗೂಡಿ ಈ ಪ್ರಪಂಚದ ಉಪಾದಾನ (ವಸ್ತು) ಕಾರಣವಾಗುತ್ತವೆ. ಆದುದರಿಂದ ಮಣ್ಣಿನೊಂದಿಗಿನ ನಿರಂತರ ಸಂಪರ್ಕದಿಂದ ಮಡಕೆಯು ಉತ್ಪತ್ತಿಯಾಗುತ್ತದೆಯೇ ವಿನಃ ಈಶ್ವರನ ಸಂಪರ್ಕದಿಂದಲ್ಲ. [2–1]

ವಿವೃತ್ತಿ

ಮಾಯೆಯಿಂದಾಗಿ ಬಾಹ್ಯವಾಗಿ ಕಂಡುಬರುವ ಎಲ್ಲವನ್ನೂ ಒಳಗೊಂಡಿರುವ ವಿಶ್ವವು ಆತ್ಮನಲ್ಲಿ ಅಧ್ಯಸ್ತವಾಗಿದೆ ಎಂದು ಹೇಳಿದೆ. ಆದರೆ ಕೆಲವರು ವಿಶ್ವವು ಆತ್ಮನಲ್ಲಿರದೆ, ತನ್ನಷ್ಟಕ್ಕೇ ಸತ್ಯವಾಗಿದೆ ಎಂದು ವಾದಿಸುತ್ತಾರೆ. ಅದರ ನಿರಾಕರಣೆಯನ್ನು ಮುಂದಿನ ಶ್ಲೋಕದಲ್ಲಿ ಮಾಡಿದೆ. **ಉಪಾದಾನಮಿತ್ಯಾದಿನಾ.** ಇಲ್ಲಿ ವೈಶೇಷಿಕರ ಅಭಿಪ್ರಾಯವನ್ನು ಹೇಳುತ್ತಾ ***ಪ್ರಪಂಚಸ್ಯ*** ಕಾರ್ಯದ ದ್ರವ್ಯಾತ್ಮಕತೆಯು ಪರಸ್ಪರ ಸಂಯುಕ್ತವಾಗಿರುವ ***ಪರಮಾಣವಃ*** ನಿರವಯವ ಪರಮಸೂಕ್ಷ್ಮದ್ರವ್ಯವಿಶೇಷವನ್ನು ***ಉಪಾದಾನಂ*** ಆಶ್ರಯಿಸಿದೆ. ಪರಮಾಣುವಿನಲ್ಲಿರುವ ಗುಣವಿಶೇಷವು ದ್ರವ್ಯದ ಗುಣವಾಗಿದೆ. ನಿತ್ಯದ್ರವ್ಯದ ಗುಣ ಜಾತಿ ವಿಶೇಷಗಳು ತಾವೂ ನಿತ್ಯವಾಗಿವೆ. ಇದರಿಂದ ಅತಿರಿಕ್ತವಾದ ಭಾವರೂಪಗಳು ಯಾವುದೂ ಇರುವುದಿಲ್ಲ; ಹಾಗಾಗಿ ಪ್ರಪಂಚಕ್ಕೆ ಈಶ್ವರನಾಗಲೀ ಆತ್ಮನಾಗಲೀ ಉಪಾದಾನಕಾರಣವಲ್ಲ, ಮಾಯೆಯೂ ಅಲ್ಲ. ಅದನ್ನು ಸಾಧಿಸಲು ಉದಾಹರಿಸುತ್ತಾ ಅಚೇತನ ದ್ರವ್ಯಗಳು ಉಪಾದಾನವಾಗಿರುವ ವಸ್ತುಗಳು ಅಚೇತನವಾಗಿಯೇ ಭಾಸವಾಗುತ್ತವೆ. ಈ ನಿಯಮಕ್ಕೆ ಒಳಪಟ್ಟಿರುವ ವಸ್ತುಗಳಿಗೆಲ್ಲ ಅವುಗಳೇ ಉಪಾದಾನಕವಾಗಿ ಭಾಸವಾಗಿ ಕಂಡುಬರುವುದು, ಹೇಗೆ ಮಣ್ಣಿನಿಂದಾಗಿರುವ ಮಡಕೆಗೆ ಮಣ್ಣೇ ಉಪಾದಾನಕವೋ ಹಾಗೆ. ಈಶ್ವರರೂಪವಾಗಿ ಭಾಸವಾಗದಿರುವ ವಸ್ತುಗಳು ಕಂಡುಬರುವುದರಿಂದ, ಅವುಗಳಿಗೆ ಈಶ್ವರನು ಉಪಾದಾನಕಾರಣನಲ್ಲ ಮತ್ತು ಪ್ರಪಂಚಕ್ಕೂ ಈಶ್ವರನು ಉಪಾದಾನಕನಲ್ಲ. [2–1]

ಈ ವಿಶ್ವದಲ್ಲಿರುವ ಎಲ್ಲಾ ವಸ್ತುಗಳು ತಮ್ಮ ವಿಶೇಷತೆ ಮತ್ತು ಕಾರ್ಯಗಳೊಂದಿಗೆ, ಭೇದಿಸಲಾಗದ ಸೂಕ್ಷ್ಮ ಕಣಗಳೆಂದು ಪರಿಗಣಿಸಲಾದ ಪರಮಾಣುಗಳ ವಿವಿಧ ಸಂಯೋಜನೆಗಳಿಂದ ಆಗಿವೆ. ವಸ್ತುಗಳು ಇನ್ನೊಂದು ವಸ್ತುವಿನಿಂದ ಅಗತ್ಯವಾಗಿ ಆಗಿರುವಾಗ ಹಾಗೂ ಅದರ ಅಸ್ತಿತ್ವವು ಅವುಗಳ ಅಸ್ತಿತ್ವವನ್ನು ನಿರ್ಧರಿಸುವಾಗ, ಆ ವಸ್ತುವನ್ನು ಉಪಾದಾನ (ವಸ್ತು) ಕಾರಣವೆಂದು ಹೇಳುತ್ತಾರೆ. ನಮ್ಮ ಅನುಭವದಲ್ಲಿ ಯಾವುದೇ ವಸ್ತು–ವಿಷಯಗಳು, ಆತ್ಮನ ಯಾ ಈಶ್ವರನ ಮೇಲೆ ನಿರ್ಭರವಾಗಿರುವುದನ್ನು ನಾವು ಕಾಣುವುದಿಲ್ಲ. ಅದರ ಬದಲಾಗಿ ಸೃಷ್ಟಿಸಿದ ಪ್ರತಿಯೊಂದು ವಸ್ತುವೂ ಅಗತ್ಯವಾಗಿ, ಆತ್ಮನಿಂದ ಹೊರತಾದ ಕೆಲ ಜಡಪದಾರ್ಥಗಳೊಂದಿಗೆ ಸಂಬಂಧ ಹೊಂದಿರುವುದು ಕಂಡು ಬರುತ್ತದೆ, ಮಡಕೆಯು ಮಣ್ಣಿನೊಂದಿಗೆ ಸಂಬಂಧ ಹೊಂದಿರುವ ಹಾಗೆ. ಹೀಗೆ ಚೈತನ್ಯಯುತ ಈಶ್ವರ ಯಾ ಅವನ ಮಾಯೆಯಲ್ಲದೆ, ಜಡ ಪರಮಾಣುಗಳು ಈ ವಿಶ್ವದ ವಸ್ತು ಕಾರಣವಾಗಿವೆ.

परमाणुगता एव गुणा रूपसादयः ।
कार्ये समानजातीयमारभन्ते गुणान्तरम् ॥ २ ॥

ಪರಮಾಣುಗತಾ ಏವ ಗುಣಾ ರೂಪಸಾದಯಃ ।
ಕಾರ್ಯೇ ಸಮಾನಜಾತೀಯಮಾರಭಂತೇ ಗುಣಾಂತರಮ್ ॥ 2 ॥

ಪರಮಾಣುವಿನಲ್ಲಿ ಅಂತರ್ಭೂತವಾಗಿರುವ ಬಣ್ಣ, ರುಚಿ ಮುಂತಾದ ಗುಣಲಕ್ಷಣಗಳು ಪದಾರ್ಥಗಳಲ್ಲಿ ಪ್ರತಿಫಲನಗೊಳ್ಳುತ್ತವೆ. [2–2]

ವಿವೃತ್ತಿ

ಕಾರಣದ ಗುಣವಿಶೇಷಗಳಿಂದಲೇ ಕಾರ್ಯದ ಗುಣವಿಶೇಷಗಳ ಉತ್ಪತ್ತಿಯಾಗುವುದರಿಂದ ಈಶ್ವರನು ಕಾರ್ಯಕ್ಕೆ ಹೇತುವಲ್ಲ ಎಂದು ಹೇಳಲು **ಪರಮಾಣುಗತಾ ಇತಿ.** ವಿಶೇಷಗುಣಗಳ ಅಭಿಪ್ರಾಯದಲ್ಲಿ ಸಮಾನಜಾತೀಯ ಪರಮಾಣುಗಳು ದ್ವಯಾಣುಕ ಮುಂತಾಗಿ ಪರಿಣಾಮ ಹೊಂದುವುದು ಅಂಗೀಕೃತವಾಗಿರುವುದರಿಂದ ಪರತ್ವ–ಅಪರತ್ವಗಳಲ್ಲಿಯೂ ದಿಕ್ಕು, ಕಾಲ, ಪಿಂಡಗಳ ಸಂಯೋಗವೂ ಅಂಗೀಕೃತವಾಗುತ್ತವೆ. [2–2]

ಪರಮಾಣುಗಳು ಮತ್ತು ಅವುಗಳ ಗುಣಲಕ್ಷಣಗಳು ಸೃಷ್ಟಿಯಲ್ಲಿರುವ ಎಲ್ಲಾ ವಸ್ತುಗಳು ಮತ್ತು ಅವುಗಳ ಗುಣಲಕ್ಷಣಗಳನ್ನು ನಿರ್ಧರಿಸುತ್ತವೆ; ಈಶ್ವರನು ವಸ್ತುಗಳ ಯಾ ಅವುಗಳ ಗುಣಲಕ್ಷಣಗಳ ಉಪಾದಾನ ಕಾರಣನಲ್ಲ.

ವೈಶೇಷಿಕರ ಮೂರು ಕಾರಣಗಳು

कार्यं यत्र समन्वेति कारणं समवायि तत् ।
चक्राध्यं साधनं यत्तु घटस्यासमवायि तत् ॥ ३ ॥

ಕಾರ್ಯಂ ಯತ್ರ ಸಮನ್ವೇತಿ ಕಾರಣಂ ಸಮವಾಯಿ ತತ್ ।
ಚಕ್ರಾಧ್ಯಂ ಸಾಧನಂ ಯತ್ತು ಘಟಸ್ಯಾಸಮವಾಯಿ ತತ್ ॥ 3 ॥

ಕಾರ್ಯದೊಡನೆ (ವಸ್ತು) ಅತೀ ಸಮೀಪದ ಸಂಬಂಧವನ್ನು ಹೊಂದಿರುವುದನ್ನು ಸಮವಾಯಿ (ಪ್ರತ್ಯೇಕಗೊಳಿಸಲಾಗದ) ಕಾರಣವೆಂದು ಹೇಳುತ್ತಾರೆ; ಅದಕ್ಕೆ ವಿರುದ್ಧವಾಗಿ ಕುಂಬಾರನ ಚಕ್ರದಂತಹ ಪೂರಕ ಉಪಕರಣಗಳು ಸಮವಾಯಿ ಕಾರಣದಿಂದ ಭಿನ್ನವಾದ ಗುಂಪಿಗೆ ಸೇರಿವೆ. [2–3]

ವಿವೃತ್ತಿ

ಕಾರ್ಯಗಳ ಕಾರಣವು ಸಮವಾಯಿ, ನಿಮಿತ್ತ, ಅಸಮವಾಯಿ ಕಾರಣಗಳೆಂದು ಮೂರುವಿಧವಾಗಿ ಪ್ರಸಿದ್ಧವಾಗಿವೆ. ಈ ಮೂರು ವಿಧದ ಕಾರಣಗಳಲ್ಲಿ ಈಶ್ವರನ ಕರ್ತೃತ್ವರೂಪದ ನಿಮಿತ್ತವನ್ನು ಹೊರತುಪಡಿಸಿ ಇತರ ಕಾರಣತ್ವದ ಪ್ರಕಾರಗಳು ಇಲ್ಲವೆಂದು ಹೇಳುತ್ತಾ, ಕಾರಣಭೇದಗಳ ಲಕ್ಷಣವನ್ನು ತಿಳಿಸುವ **ಕಾರ್ಯಂ ಯತ್ರೇತಿ.** ಕಾರ್ಯದೊಡನೆ ಪ್ರತ್ಯೇಕಗೊಳಿಸಲಾಗದ ಸಂಬಂಧವಿರುವ ಕಾರಣವು ಅದರ ಸಮವಾಯಿ ಎನಿಸುತ್ತದೆ, ಮತ್ತು ಅದುವೇ ಉಪಾದಾನ ಶಬ್ದವಾಚ್ಯವಾಗಿದೆ. ಪುನಃ ಸಮವಾಯೇತರ ಸಂಬಂಧದಿಂದ ಕೂಡಿರುವುದು ಮತ್ತು ಕಾರ್ಯದ ಉತ್ಪತ್ತಿಕಾರಣವು ನಿಮಿತ್ತವೆನಿಸಿ ಅದನ್ನು ಉದಾಹರಿಸುತ್ತಾ ಕುಂಬಾರನ ಚಕ್ರವು ಮಡಕೆಯ ಅಸಮವಾಯಿಕಾರಣ ಮತ್ತು ಕುಂಬಾರನು ನಿಮಿತ್ತಕಾರಣ ಆಗಬಹುದು. [2–3]

समवायिनितिष्ठेद्यत् समवाय्याश्रये तथा ।
कर्येऽवधृतसामर्थ्यं कल्प्यतेऽसमवायि तत् ॥ ४ ॥

ಸಮವಾಯಿನಿತಿಷ್ಠೇಧ್ಯತ್ ಸಮವಾಯ್ಯಾಶ್ರಯೇ ತಥಾ ।
ಕಾರ್ಯೇಽವಧೃತಸಾಮರ್ಥ್ಯಂ ಕಲ್ಪ್ಯತೇಽಸಮವಾಯಿ ತತ್ ॥ 4 ॥

ಕಾರ್ಯವನ್ನುಂಟುಮಾಡಲು ಅಗತ್ಯವಾದ ಪ್ರತ್ಯೇಕಿಸಲ್ಪಡುವ ಯಾ ಅನಿರ್ದಿಷ್ಟ ಕಾರಣವನ್ನು ಅಸಮವಾಯಿ ಕಾರಣವೆನ್ನುತ್ತಾರೆ ಹಾಗೂ ಅದು ಸಮವಾಯಿಯ ಒಳಗೆ ಯಾ ಅಂತರ್ಭೂತವಾಗಿ ಇರುತ್ತದೆ. [2–4]

ವಿವೃತ್ತಿ

ಅಸಮವಾಯಿಕಾರಣದ ಲಕ್ಷಣವನ್ನು ವಿವರಿಸುವ **ಸಮವಾಯಿನೀತಿ.** ಕಾರ್ಯದಿಂದ ಪ್ರತ್ಯೇಕಿಸಲ್ಪಡದ ಸಮವಾಯಿ ಕಾರಣವು ಅದರೊಳಗೇ ಇರುತ್ತದೆ; ನೂಲುಗಳ ಸಂಯೋಗದಿಂದ ವಸ್ತ್ರವು ಉತ್ಪತ್ತಿಯಾದಾಗ, ನೂಲು ವಸ್ತ್ರದ ಸಮವಾಯಿಕಾರಣವು. ಹಾಗಾಗಿ ಕಾರ್ಯವು ಕಾರ್ಯಸಮವಾಯಿಯಿಂದ ಪ್ರತ್ಯೇಕವಾಗಿಲ್ಲ. ಹಾಗೆಯೇ ಸಮವಾಯಿಯ ಆಶ್ರಯದಲ್ಲಿ ಕಾರ್ಯವು ಇರುವುದು ಎಂದು ಯೋಜಿಸಿಕೊಳ್ಳುವುದು. ಅಂತೆಯೇ ಕಾರಣವು ಕಾರ್ಯಸಮವಾಯಿಯಿಂದ ಪ್ರತ್ಯೇಕವಾಗಿಲ್ಲ. ನೂಲಿನ ರೂಪ ಮೊದಲಾದವುಗಳು ವಸ್ತ್ರದ ರೂಪ ಮುಂತಾದವುಗಳಿಗೆ ಆಶ್ರಯವಾಗಿರುವುದು ಎಂಬುದು ಒಂದು ಉದಾಹರಣೆಯು. ನೂಲಿನ ಹೊರತಾಗಿರುವುದು ಯಾವುದು ಎಂದು ತಿಳಿಸಲು ***ಅವಧೃತಸಾಮರ್ಥ್ಯಂ*** ಹೊರಗಿನಿಂದ ಆಧರಿಸಿರುವುದು ಎಂಬ ಅರ್ಥವು. [2–4]

निमित्तं कारणं तेषामीश्वरश्च कुलालवत् ।

ನಿಮಿತ್ತಂ ಕಾರಣಂ ತೇಷಾಮೀಶ್ವರಶ್ಚ ಕುಲಾಲವತ್ ।

ಕುಂಬಾರನಂತೆ, ಎಲ್ಲಾ ಕಾರ್ಯಗಳ ನಿಮಿತ್ತ (ಸಮರ್ಥ) ಕಾರಣವು ಈಶ್ವರನಾಗಿದ್ದಾನೆ. [2–5]

ವಿವೃತ್ತಿ

ಈ ಕಾರಣತ್ರಯಗಳು ಅಪೇಕ್ಷಿತ ಕಾರ್ಯದ ಸ್ವರೂಪವನ್ನು ನಿರ್ದೇಶಿಸಿ, ಈಶ್ವರನೇ ಸರ್ವಕಾರ್ಯಗಳ ಉತ್ಪತ್ತಿಯ ನಿಮಿತ್ತಕಾರಣವೆಂದು ಸಾಧಿಸಲು **ನಿಮಿತ್ತಮಿತಿ.** ಚೈತನ್ಯವು ಇರದಿದ್ದರೆ, ಅಚೇತನ ಪ್ರವೃತ್ತಿಯಿಂದ ಕಾರ್ಯವು ಸಂಪನ್ನವಾಗದಿರುವುದರಿಂದ, ಈಶ್ವರನೇ ಎಲ್ಲಾ ಕಾರ್ಯಗಳಿಗೂ ನಿಮಿತ್ತವಾಗಿರುವನು ಎಂಬುದು ಅಂಗೀಕಾರ್ಹವಾಗಿದೆ. ಚಕ್ರ, ಮಣ್ಣು ಎಲ್ಲವೂ ಇದ್ದರೂ ಕುಂಬಾರನಿಲ್ಲದಿದ್ದರೆ ಮಡಕೆಯ ಉತ್ಪತ್ತಿಯಾಗುವುದಿಲ್ಲ ಎಂಬಂತೆ. ಅಥವಾ ಚೇತನವು ಅಧಿಷ್ಠಿತವಾಗಿರುವ ಅಚೇತನದ ಕಾರ್ಯದಿಂದ ಮಡಕೆ ಮುಂತಾದವುಗಳು ರೂಪತಳೆಯುತ್ತವೆ. [2–5]

ಎಲ್ಲಾ ಬಗೆಯ ಕಾರ್ಯಗಳಿಗೆ ಸಮವಾಯಿ (ಉಪಾದಾನ), ಅಸಮವಾಯಿ (ಅನಿರ್ದಿಷ್ಟ) ಹಾಗೂ ನಿಮಿತ್ತ (ಸಮರ್ಥ ಯಾ ಬುದ್ಧಿವಂತ) ಎಂದು ಮೂರು ಕಾರಣಗಳನ್ನು ವೈಶೇಷಿಕರು ಹೇಳುತ್ತಾರೆ. ಬಟ್ಟೆಯು ನೂಲಿನೊಡನೆ ನಿತ್ಯ ಸಂಬಂಧವನ್ನು ಹೊಂದಿರುವುದರಿಂದ, ನೂಲನ್ನು ವಸ್ತ್ರದ ಸಮವಾಯಿ ಕಾರಣವೆಂದು ತಿಳಿಯಬಹುದು. ನೇಯುವ ಕ್ರಿಯೆಯು ವಸ್ತ್ರದ ಸಮವಾಯಿ ಕಾರಣವಾದ ನೂಲಿನೊಡನಿರುವುದರಿಂದ, ನೂಲನ್ನು ನೇಯುವ ಕ್ರಿಯೆಯನ್ನು ವಸ್ತ್ರದ ಅಸಮವಾಯಿ ಕಾರಣವೆಂದು ಹೇಳಬಹುದು. ಹಾಗೆಯೇ ನೂಲಿನ ಬಣ್ಣವು ಬಟ್ಟೆಯ ಸಮವಾಯಿ ಕಾರಣವಾದ ನೂಲಿನಲ್ಲಿರುವುದರಿಂದ, ನೂಲಿನ ಬಣ್ಣವು ಬಟ್ಟೆಯ ಬಣ್ಣದ ಅಸಮವಾಯಿ ಕಾರಣವಾಗಿದೆ; ಬಟ್ಟೆಯು ಗಳಿಸುವ ಬಣ್ಣವು ಅದರೊಂದಿಗೆ ನಿಶ್ಚಿತ ಸಂಬಂಧವನ್ನು ಹೊಂದಿರುವುದರಿಂದ ಬಟ್ಟೆಯನ್ನು ಆ ಬಣ್ಣದ ಸಮವಾಯಿ ಕಾರಣವೆಂದು ಹೇಳಬಹುದು. ನಿಮಿತ್ತ ಕಾರಣ (ನೇಕಾರನಂತಹ ಸಮರ್ಥ ಕಾರಣ) ಮತ್ತು ಸಹಕಾರಿ ಯಾ ಪೂರಕ ಕಾರಣ (ನೇಯಲು ಉಪಯೋಗಿಸುವ ಕೈಮಗ್ಗ) ಇತರ ಕಾರಣಗಳ ಗುಂಪಿಗೆ ಸೇರಿದೆ. ಈಶ್ವರನನ್ನು ಎಲ್ಲಾ ಕಾರ್ಯಗಳ ಸಮರ್ಥ ಕಾರಣನೆಂದು ಹೇಳುತ್ತಾರೆ ಮತ್ತು ಚೇತನದ ಆಘಾತವಿಲ್ಲದೆ ಯಾವುದೇ ವಸ್ತುವಿನಿಂದ ಕಾರ್ಯದ ಉತ್ಪತ್ತಿಯಾಗದಿರುವುದರಿಂದ (ಕುಂಬಾರನಿಲ್ಲದೆ ಮಡಕೆಯಾಗುವುದು ಸಾಧ್ಯವಿಲ್ಲದಿರುವಂತೆ), ಅವನು ವಿಶ್ವದ ಸೃಷ್ಟಿಯ ಮುಖ್ಯ ಪ್ರಚೋದಕನಾಗಿದ್ದಾನೆ. ಹಾಗಾಗಿ ಚೈತನ್ಯಯುತ ಈಶ್ವರನೊಬ್ಬನೇ ವಿಶ್ವದ ಮೂಲಕಾರಣ ಎಂಬುದು ನಮ್ಮ ಅನುಭವಕ್ಕೆ ವಿರುದ್ಧವಾಗಿದೆ.

यत्कार्यं जायते यस्मात्तस्मिन् तत्प्रतितिष्ठति ॥ ५ ॥
मृत्तिकायां घटस्तन्तौ पटस्स्वर्णेङ्गुलीयकम् ।
इति वैशेषिकाः प्राहुस्तथा नैयायिका अपि ॥ ६ ॥

ಯತ್ಕಾರ್ಯಂ ಜಾಯತೇ ಯಸ್ಮಾತ್ತಸ್ಮಿನ್ ತತ್ಪ್ರತಿತಿಷ್ಠತಿ ॥ 5 ॥
ಮೃತ್ತಿಕಾಯಾಂ ಘಟಸ್ತಂತೌ ಪಟಸ್ಸ್ವರ್ಣೇಂಗುಲೀಯಕಮ್ ।
ಇತಿ ವೈಶೇಷಿಕಾಃ ಪ್ರಾಹುಸ್ತಥಾ ನೈಯಾಯಿಕಾ ಅಪಿ ॥ 6 ॥

ಯಾವುದರಿಂದ ಕಾರ್ಯವು ಜನಿಸುತ್ತದೋ, ಅದು ಅದರಲ್ಲೇ ನಿಯಮನಗೊಳ್ಳುತ್ತದೆ; ಮಡಕೆಯು ಮಣ್ಣಿನಲ್ಲಿ, ವಸ್ತ್ರವು ನೂಲಿನಲ್ಲಿ, ಉಂಗುರವು ಚಿನ್ನದಲ್ಲಿ ನಿಯಮನಗೊಂಡಂತೆ. ವೈಶೇಷಿಕರು ಹೀಗೆ ಹೇಳುತ್ತಾರೆ ಹಾಗೂ ನೈಯಾಯಿಕರು ಕೂಡಾ. [2–5..6]

ವಿವೃತ್ತಿ

ಇಂತಹ ಯುಕ್ತಿಯುಕ್ತ ಕಲ್ಪನೆಯು, ಚೈತನ್ಯದ ಜಗತ್ತಿನ ಉತ್ಪಾದಕತ್ವವನ್ನು ಸರ್ವಾತ್ಮಕತ್ವ ಎಂದು ಕಲ್ಪಿಸುವುದು ವ್ಯಾಪಕವಾಗಿರುವ ನಮ್ಮ ಅನುಭವಗಳಿಗೆ ವಿರುದ್ಧವಾಗಿರುವುದು ಎಂದು ಉಪಸಂಹರಿಸುತ್ತಾ **ಯತ್ಕಾರ್ಯಮಿತಿ.** ಕಾರ್ಯಕ್ಕೆ ಯಾವುದು ಉಪಾದಾನವಾಗಿರುವುದೋ, ಅದು ಅದರಲ್ಲಿಯೇ ಇರುವುದು; ಮೃತ್ತಿಕೆಯಲ್ಲಿ ಮಡಕೆ ಇರುವಂತೆ ಎಂದು ಮುಂತಾದ ಉದಾಹರಣೆಗಳು. ಹಾಗೆಯೇ ಎಲ್ಲಾ ಕಾರ್ಯಗಳು ಚೇತನದಲ್ಲಿರುವುದೆಂಬುದು ಅನುಭವವಿರುದ್ಧವಾಗಿ, ಚೇತನದ ಉಪಾದಾನತ್ವವು ಕಲ್ಪನೆಯಾಗಿದೆ.

ಇದು ಎಂತಹ ಕಲ್ಪನೆಯು ಎಂದು ವೈಶೇಷಿಕರು ಮತ್ತು ನೈಯಾಯಿಕರು ಹೇಳುತ್ತಾರೆ. [2–5..6]

ಸಾಂಖ್ಯ ಸಿದ್ಧಾಂತ

रजस्सत्वं तमश्चेति प्रधानस्य गुणस्त्रयः ।
रजो रक्तं चलं तेषु सत्वं शुक्लं प्रकाशकम् ॥ ७ ॥
तमः कृष्णं चावरकं सृष्टिस्थित्यन्तहेतवः ।
इति साङ्ख्याश्च भाषन्ते तेषां दूषणमुच्यते ॥ ८ ॥

ರಜಸ್ಸತ್ವಂ ತಮಶ್ಚೇತಿ ಪ್ರಧಾನಸ್ಯ ಗುಣಸ್ತ್ರಯಃ ।
ರಜೋ ರಕ್ತಂ ಚಲಂ ತೇಷು ಸತ್ವಂ ಶುಕ್ಲಂ ಪ್ರಕಾಶಕಂ ॥ 7 ॥
ತಮಃ ಕೃಷ್ಣಂ ಚಾವರಕಂ ಸೃಷ್ಟಿಸ್ಥಿತ್ಯಂತಹೇತವಃ ।
ಇತಿ ಸಾಂಖ್ಯಾಶ್ಚ ಭಾಷಂತೇ ತೇಷಾಂ ದೂಷಣಮುಚ್ಯತೇ ॥ 8 ॥

ರಜಸ್, ಸತ್ತ್ವ ಮತ್ತು ತಮಸ್ ಈ ಮೂರು ಗುಣಗಳು ಪ್ರಧಾನವಾಗಿವೆ. ರಜೋಗುಣವು ರಕ್ತವರ್ಣದ್ದಾಗಿದ್ದು, ಚರವಾಗಿದೆ; ಸತ್ತ್ವಗುಣವು ಶುಕ್ಲವರ್ಣದ್ದಾಗಿದ್ದು (ಬಿಳಿ) ಹೊಳೆಯುತ್ತಿದೆ; ಕೃಷ್ಣವರ್ಣದ ತಮೋಗುಣವು ಮರೆಮಾಚುವಂತದ್ದಾಗಿದೆ; ಅವು ಸೃಷ್ಟಿ, ಸ್ಥಿತಿ ಹಾಗೂ ಲಯಗಳ ಕಾರಣವಾಗಿವೆ. [2–7..8]

ವಿವೃತ್ತಿ

ಇದರಲ್ಲಿ ಸಾಂಖ್ಯತತ್ತ್ವದ ಕಲ್ಪನೆಯನ್ನು ವಿವರಿಸುತ್ತಾ **ರಜಃ ಇತ್ಯಾದಿನಾ.** ***ಪ್ರಧಾನಂ*** ಪ್ರಕೃತಿಯು; 'ಮಾಯಾಪ್ರಧಾನಮವ್ಯಕ್ತಮ್' (ಮಾ.ಉ.2–31) ಎಂಬುದು ಅದರ ಲಕ್ಷಣವು. ಪ್ರಕೃತಿಗೆ ರಜಃ, ಸತ್ತ್ವ, ತಮಃ ಎಂಬ ಮೂರು ಗುಣಗಳಿವೆ. 'ತ್ರಿಗುಣಮವಿವೇಕಿವಿಷಯಃ' (ಸಾಂಖ್ಯ ಸಪ್ತತಃ.11) ಮುಂತಾದವುಗಳಂತೆ ಸಾಂಖ್ಯಶಾಸ್ತ್ರದಲ್ಲಿ ನಿರ್ದಿಷ್ಟವಾಗಿ ಪ್ರಧಾನವು ಮೂರು ಗುಣಾತ್ಮಕವಾಗಿದೆ.

ಹಾಗೆ ಹೇಳಿರುವ ಗುಣಗಳ ಲಕ್ಷಣವನ್ನು ತಿಳಿಸುತ್ತಾ ರಜೋಗುಣವು ***ರಕ್ತಂ*** ರಂಜನಾತ್ಮಕವಾಗಿ ***ಚಲಂ*** ಚಲನಸ್ವಭಾವವುಳ್ಳದ್ದಾಗಿದೆ. ಸತ್ತ್ವಗುಣವು ***ಶುಕ್ಲಂ*** ಶುದ್ಧವಾಗಿ ***ಪ್ರಕಾಶಕಮ್*** ಸರ್ವಾರ್ಥಸಾಧಕವಾಗಿದೆ. ತಮೋಗುಣವು ***ಕೃಷ್ಣಂ*** ಹಿರಿದಾಗಿ ಮಲಿನಸ್ವಭಾವವುಳ್ಳದ್ದಾಗಿ ***ಆವರಕಂ*** ಅವಿವೇಕಕರವಾಗಿದೆ. ಅವುಗಳ ಭಾವವನ್ನು ಸಾಧಿಸುತ್ತಾ ರಜೋಗುಣವು ಸೃಷ್ಟಿಗೆ ಕಾರಣವಾಗಿದೆ, ಸತ್ತ್ವಗುಣವು ಸ್ಥಿತಿಗೆ ಹೇತುವಾಗಿದೆ ಮತ್ತು ತಮೋಗುಣವು ಪ್ರಳಯಕ್ಕೆ ಕಾರಣವಾಗಿದೆ. ಅವು ಹೇಗೆ ಸೃಷ್ಟ್ಯಾದಿಗಳಿಗೆ ಹೇತುವಾಗಿವೆ ಎಂಬುದನ್ನು ಮುಂದೆ ಹೇಳಲಾಗಿದೆ.

ಈ ಮತದಲ್ಲಿ ಜಗತ್ತಿಗೆ ನಿಮಿತ್ತವಾಗಲು ಚೇತನದ ಅಗತ್ಯವಿಲ್ಲ ಎಂದು ಉಪಸಂಹರಿಸುತ್ತಾ ಹೀಗೆಂದು ಸಾಂಖ್ಯರು ಅಭಿಪ್ರಯಿಸುತ್ತಾರೆ. ಚಕಾರವು ಇತರರನ್ನು ಅಂದರೆ ಸ್ವಭಾವವಾದಿಗಳು, ಶೂನ್ಯವಾದಿಗಳು, ಶೈವರು, ಯೌಗಿಕರು, ಪೌರಾಣಿಕರು ಲಕ್ಷಿತವಾಗುವರು. ಅವರೆಲ್ಲರೂ ದೂಷಣೆಗೆ ಅರ್ಹರು ಎಂದು ಎರಡನೆಯ ಶ್ಲೋಕವನ್ನು ಹೇಳುತ್ತಾರೆ. [2–7..8]

ಪ್ರಧಾನ ಯಾ ಪ್ರಕೃತಿಯು ಮೂರು ಗುಣಗಳೆಂಬ ಧಾತುಗಳಿಂದ ಮಾಡಲ್ಪಟ್ಟಿವೆ ಎಂದು ಹೇಳುತ್ತಾರೆ; ವಸ್ತು ಮತ್ತು ಅವಸ್ತುಗಳ ವ್ಯತ್ಯಾಸದ ಅರಿವಿಲ್ಲದವರು ಗುಣಗಳು ಆತ್ಮನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿವೆ ಯಾ ಆತ್ಮವೇ ಆಗಿವೆ ಎಂದು ಭಾವಿಸುತ್ತಾರೆ. ಮೋಹ ಮತ್ತು ಚಲನೆಯು ರಜೋಗುಣದ ವಿಷಯವಾಗಿವೆ ಹಾಗೂ ಇತರ ಎರಡು ಗುಣಗಳು ತಮ್ಮ ಸ್ಥಾನಗಳಲ್ಲಿರುವಂತೆ ಮಾಡುವ ಆಧಾರವಾಗಿದೆ. ಸತ್ತ್ವ ಅಂದರೆ ಒಳ್ಳೆಯತನ, ಸೂಕ್ಷ್ಮವಾಗಿದ್ದು ಪ್ರಕಾಶಮಾನವಾಗಿದೆ; ಇದರಿಂದ ನಾವು ಬಾಹ್ಯಜಗತ್ತನ್ನು ಅನುಭವಿಸುತ್ತೇವೆ. ತಮೋಗುಣವು ಕತ್ತಲೆಯ ಪ್ರತೀಕವಾಗಿದ್ದು, ಸ್ಥೂಲ, ಅಶುದ್ಧ ಹಾಗೂ ವಸ್ತುಸ್ಥಿತಿಯನ್ನು ಮರೆಮಾಚುವ ಸ್ವಭಾವವುಳ್ಳದ್ದಾಗಿದೆ. ಪ್ರಧಾನದ ಈ ಮೂರು ಗುಣಗಳ ಕಾರ್ಯಗಳು ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಸಂಹಾರದ ರೂಪದಲ್ಲಿ ಪ್ರಕಟವಾಗುತ್ತವೆ. ಜಗತ್ತಿಗೆ ನಿಮಿತ್ತ ಕಾರಣದ ರೂಪದಲ್ಲೂ ಯಾವುದೇ ಚೈತನ್ಯದ ಆವಶ್ಯಕತೆಯಿಲ್ಲವೆಂದು ಸಾಂಖ್ಯದರ್ಶನವು ಪ್ರತಿಪಾದಿಸುತ್ತದೆ.

ಇನ್ನುಮುಂದೆ ಇದರ ನಿರಾಕರಣೆ ಆರಂಭವಾಗುತ್ತದೆ. ವಿಶ್ವದ ಮೂಲದ ಕುರಿತು ವೈಶೇಷಿಕರು, ನೈಯಾಯಿಕರು, ಸಾಂಖ್ಯರು, ಸ್ವಭಾವವಾದಿಗಳು, ಶೂನ್ಯವಾದಿಗಳು, ಶೈವರು ಹಾಗೂ ಪೌರಾಣಿಕರು ಮುಂದಿಟ್ಟ ತರ್ಕಗಳನ್ನು ನಿರಾಕರಿಸಲು ಎರಡನೆಯ ಚರಣವು ಬದ್ಧವಾಗಿದೆ.

ಸ್ತೋತ್ರದ ಎರಡನೆಯ ಚರಣ

बीजस्यान्तरिवाङ्कुरो जगदिदं प्राग्निर्विकल्पं
पुनर्मायाकल्पितदेशकालकलनावैचित्र्यचित्रीकृतम् ।
मायावीव विजृम्भयत्यापि महायोगीव यस्स्वेच्छया
तस्मै श्रीगुरुमूर्तये नम इदं श्रीदक्षिणामूर्तये ॥ २ ॥

ಬೀಜಸ್ಯಾಂತರಿವಾಂಕುರೋ ಜಗದಿದಂ ಪ್ರಾಗ್ನಿರ್ವಿಕಲ್ಪಂ
ಪುನರ್ಮಾಯಾಕಲ್ಪಿತದೇಶಕಾಲಕಲನಾವೈಚಿತ್ರ್ಯಚಿತ್ರೀಕೃತಮ್ ।
ಮಾಯಾವೀವ ವಿಜೃಂಭಯತ್ಯಾಪಿ ಮಹಾಯೋಗೀವ ಯಸ್ಸ್ವೇಚ್ಛಯಾ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ 2 ॥

ತನ್ನ ಮಾಯಾಜಾಲದಿಂದ ವಿಜೃಂಭಿಸುವ ಮಾಂತ್ರಿಕನಿಗೆ ಯಾ ಸ್ವೇಚ್ಛೆಯಿಂದ ಪ್ರವರ್ತಿಸುವ ಮಹಾಯೋಗಿಗೆ, ಆರಂಭದಲ್ಲಿ ಬೀಜದೊಳಗಿನ ವೃಕ್ಷದಂತೆ ವಿವಿಧತೆಯಿರದ, ಬಳಿಕ ಮಾಯೆಯಿಂದ ಉತ್ಪತ್ತಿಯಾದ ವಿವಿಧ ದೇಶ–ಕಾಲಗಳ ಸಂಯೋಜನೆಯನ್ನು ಮಾಡಿ ನಾನಾ ವೈಚಿತ್ರ್ಯಗಳಿಂದ ಕೂಡಿದ ಈ ಪ್ರಪಂಚವನ್ನು ತನ್ನ ಇಚ್ಛೆಯಿಂದ ಸೃಷ್ಟಿಸಿದ ಶ್ರೀಗುರುರೂಪದಲ್ಲಿರುವ ಶ್ರೀದಕ್ಷಿಣಾಮೂರ್ತಿ ಸ್ವರೂಪನಿಗೆ, ಶಿವನಿಗೆ, ನನ್ನ ಈ ನಮಸ್ಕಾರಗಳು. {2}

ವಿವೃತ್ತಿ

ಇಲ್ಲಿ 'ಸದೇವ ಸೌಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್' (ಛಾ.ಉ.6–1), 'ಆತ್ಮಾ ವಾ ಇದಮೇಕ ಏವಾಗ್ರ ಆಸೀನ್ನಾನ್ಯತ್ಕಿಂಚನ ಮಿಷತ್' (ಐ.ಉ.1–1) ಮುಂತಾದ ಶ್ರುತಿಗಳನ್ನು ಆಧರಿಸಿ ಜಗತ್ಕಾರಣತತ್ತ್ವವನ್ನು ಈ ಪದ್ಯದಲ್ಲಿ ನಿರೂಪಿಸಿದೆ. ಹಾಗೆ ಸ್ವಬುದ್ಧಿಯಿಂದ ಉತ್ಪ್ರೇಕ್ಷಿಸಿ ಬೇರೆಯೇ ಅರ್ಥವನ್ನು ಹೇಳುವುದು ಶ್ರುತಿವಿರುದ್ಧವಾಗಿದೆ ಎಂಬ ಅಭಿಪ್ರಾಯ ಇಲ್ಲಿದೆ. ***ನಿರ್ವಿಕಲ್ಪಂ*** ಸತ್ ಮಾತ್ರವಾಗಿದ್ದ, ಜಾತಿ ಗುಣ ಕ್ರಿಯೆ ಮುಂತಾದ ವಿಕಲ್ಪರಹಿತವಾಗಿದ್ದ ಈ ಜಗತ್ತನ್ನು. ಸತ್ ಅಂದರೆ ಬ್ರಹ್ಮತತ್ತ್ವ ಎಂದು ಹಿಂದೆ ಉಪಪಾದಿಸಿದೆ. ಅದಕ್ಕೆ ದೃಷ್ಟಾಂತವಾಗಿ ***ಬೀಜಸ್ಯಾಂತಃ ಅಂಕುರ ಇವ*** ಬೀಜಾವಸ್ಥೆಯಲ್ಲಿ ಅದರೊಳಗಿರುವ ಅಂಕುರದ, ವೃಕ್ಷದ ಅರಿವು ನಮಗಿರದಿರುವಂತೆ. ಆಲದಬೀಜದಲ್ಲಿ ಬೃಹತ್ತಾದ ಆಲದಮರವೇ ಅಡಗಿರುವಂತೆ, ಬೀಜದಲ್ಲಿರುವ ಅಂತಹ ಸಾಮರ್ಥ್ಯದ ಅರಿವು ನಮಗಿರುವುದಿಲ್ಲ. ಅದರ ಅರಿವಾಗಬೇಕಾದರೆ ನಾವು ಪೂರ್ವನಿಶ್ಚಿತ ಕೆಲವು ನಿಯಮಗಳನ್ನು ಅನ್ವಯಿಸಬೇಕು. ಹೀಗೆ ಅನ್ವಯವಾಗುವ ಕಾರ್ಯವು ನಮಗೆ ಸದಾ ದೃಶ್ಯವಾಗಲು, ಅದರ ಉಪಾದಾನವು ಉತ್ಪತ್ತಿಗಾಗಿ ನಿಮಿತ್ತವಾಗಬೇಕಾಗುವುದು ಎಂದು ಹೇಳುವುದು ಹೆಚ್ಚಿನವಿಷಯವಲ್ಲ; ಅದೇರೀತಿ ಬೀಜದಲ್ಲಿ ಅನ್ವಿತವಾಗಿರುವ ಅಂಕುರದ ದರ್ಶನಕ್ಕಾಗಿ ಬೀಜದ ಉಪಾದಾನತ್ವವು ಸಿದ್ಧವಾಗುವುದು. ಬೀಜದ ಅವಯವಗಳಲ್ಲಿ ಉಪಾದಾನತ್ವವು ಇಲ್ಲ ಮತ್ತು ಬೀಜಕ್ಕೆ ಅವಯವಗಳೂ ಇಲ್ಲ ಆದರೆ ಅಂಕುರಕ್ಕೆ ಅವಯವಗಳಿವೆ. ಅದೇರೀತಿ ಬ್ರಹ್ಮದಲ್ಲಿಯೇ, ಬೇರಾವುದರಲ್ಲಿಯೂ ಅಲ್ಲದೆ, ಬೀಜದಲ್ಲಿರುವ ಅಂಕುರದಂತೆ ಈ ಜಗತ್ತು ಅಂತರ್ಗತವಾಗಿ ವಿಜೃಂಭಿಸುವುದು, ಅಂತಹ ಬ್ರಹ್ಮನಿಗೆ ನಮಸ್ಕರಿಸುವೆನು ಎಂಬ ಅರ್ಥವು. ಹೇಗೆ ಬೀಜದಲ್ಲಿರುವ ಅಂಕುರದ ಜನನಕ್ಕಾಗಿ ನೀರು, ಮಣ್ಣು, ಬೆಳಕು ಮುಂತಾದ ಸಹಕಾರಿಗಳ ಅಗತ್ಯವಿರುವುದೋ ಹಾಗೆಯೇ ಬ್ರಹ್ಮನಿಗೂ ಜಗತ್ತಿನ ಉತ್ಪತ್ತಿಗಾಗಿ ಸಹಕಾರಿಗಳಿರುವರೋ ಇಲ್ಲವೋ? ಇರುವರು ಎಂದರೆ 'ಏಕಮೇವಾದ್ವಿತೀಯಂ', 'ನಾನ್ಯತ್ ಕಿಂಚನ ಮಿಷತ್' (ಛಾ.ಉ.6–1) ಎಂಬ ಶ್ರುತಿ ವಿರೋಧವಾಗುವುದು. ಇಲ್ಲ ಎಂದರೆ ಕಂಡುಬರುವುದಕ್ಕೆ ವಿರೋಧವಾಗುವುದು. ಅದಕ್ಕಾಗಿ ಪುನಃ ಸೃಷ್ಟಿಕಾಲದಲ್ಲಿ ಲಭಿಸಿದ ಮಾಯೆಯಿಂದ; 'ದೇವಾತ್ಮಶಕ್ತಿಂ ಸ್ವಗುಣೈರ್ನಿಗೂಢಾಮ್' (ಐ.ಉ.1–1) ಮುಂತಾದ ಶ್ರುತಿಯಂತೆ ಬ್ರಹ್ಮನ ಶಕ್ತಿತ್ವದಿಂದ ಈ ದೇಶ ಮತ್ತು ಕಾಲಗಳು ನಿರ್ದಿಷ್ಟವಾಗಿ ಕಲ್ಪಿತವಾಗುವವು. ***ಕಲನಾ*** ಅವುಗಳ ಸಂಬಂಧವಿಶೇಷವು ***ವೈಚಿತ್ರ್ಯಂ*** ವಿಚಿತ್ರವಾಗಿ ***ಚಿತ್ರೀಕೃತಂ*** ವಿವಿಧ ವಿಶೇಷ ಅವಸ್ಥೆಗಳನ್ನು ಹೊಂದಿರುವ ಎಂಬ ಅರ್ಥದಲ್ಲಿ. ಇದರಿಂದ ಬ್ರಹ್ಮನ ಕಾರಣತ್ವದ ಮಾಯಾಮಯತ್ವದ ಉಪಪಾದನೆಯಿಂದ ಆರಂಭವಾದ, ಪರಿಣಾಮವಾದ ಮತ್ತು ಸ್ವಭಾವವಾದಗಳು ನಿರಾಕೃತವಾಗುವವು. ಸದ್ರೂಪದ ಉಪಾದಾನತ್ವವು ಅಂಗೀಕೃತವಾಗುವುದರಿಂದ ಶೂನ್ಯವಾದವೂ ನಿರಸ್ತವಾಗುವುದು ತಿಳಿದುಬರುತ್ತದೆ.

ಇನ್ನು ಕಾರ್ಯದ ಮಾಯಾಕಲ್ಪಿತತ್ವವನ್ನು ಹಿಂದೆಯೇ ಹೇಳಿರುವುದರಿಂದ ಪುನಃ ಯಾಕೆ ನಿರ್ದೇಶಿಸಿರುವುದು ಎಂಬುದಕ್ಕೆ ಅದರಿಂದ ದೋಷವೇನಿಲ್ಲ, ಅದು ವ್ಯವಹಾರದಲ್ಲಿ ಹೇಳಿರುವುದನ್ನೇ ಪುನಃ ಸ್ಥಾಪಿಸಿರುವುದು. ಅದು ಶ್ರುತಿವಿರೋಧವೂ ಅಲ್ಲ, ಅನುಭವವಿರೋಧವೂ ಅಲ್ಲ. ಮಾಯೆಯ ಸಹಕಾರಿತೆಯ ಕಾರಣತ್ವದಿಂದ ಯಾವ ಉಪಲಬ್ಧಿಯಿದೆ ಎಂದು ತಿಳಿಸಲು ಉದಾಹರಿಸುತ್ತಾರೆ ***ಮಾಯಾವೀ ಇವ*** ಲೋಕಪ್ರಸಿದ್ಧರಾದ ಐಂದ್ರಜಾಲಿಕರು; ಅವರು ಮಣಿ, ಮಂತ್ರ ಮುಂತಾದ ಪ್ರಯೋಗಗಳಿಂದ ಸಂಕ್ಷೋಭೆಹುಟ್ಟಿಸುವ ಮಾಯೆಯ ಸಹಾಯ ಪಡೆದು ರಥ, ಗಜ, ತುರಗ ಮುಂತಾದ ಅನೇಕ ಜಗತ್ತನ್ನು ಸೃಷ್ಟಿಸುತ್ತಾರೆ, ಅವರೇ ಈಶ್ವರ ಎಂಬಂತೆ. ಇನ್ನೊಂದು ದೃಷ್ಟಾಂತವನ್ನು ನೀಡುತ್ತಾ ***ಮಹಾಯೋಗೀ ಇವ*** ಮಹಾಯೋಗಿಗಳು ಸ್ವ ಇಚ್ಛೆಯಿಂದ ಸೃಷ್ಟಿಸುವಂತೆ. ಪುರಾಣಗಳಲ್ಲಿ ಪ್ರಸಿದ್ಧವಾದ ವಿಶ್ವಾಮಿತ್ರ ಮೊದಲಾದ ಯೋಗಿಗಳು ವಿಚಿತ್ರವಾದ ಭೋಗಜಗತ್ತಿನ ರಚನೆಯ ಕ್ಷಮತೆ ಹೊಂದಿರುವಂತೆ ಬ್ರಹ್ಮನು ಸಹಕಾರಿ ಸಾಧನಗಳಿಲ್ಲದೇ ಸಂಕಲ್ಪಮಾತ್ರದಿಂದ, ಸ್ವ ಇಚ್ಛೆಯ ಈಕ್ಷಣೆಮಾತ್ರದಿಂದ ವಿಚಿತ್ರವಾದ ಈ ಜಗತ್ತನ್ನು ಸೃಷ್ಟಿಸುವನು. {2}

अस्यायमभिप्रायः ।
अङ्कुरादिफलान्तेषु कार्येश्वस्तित्वमिष्यते ।
कुत आगत्य सम्बद्धा वटबीजेशु ते कणाः ॥ ९ ॥

ಅಸ್ಯಾಯಮಭಿಪ್ರಾಯಃ ।
ಅಂಕುರಾದಿಫಲಾಂತೇಷು ಕಾರ್ಯೇಷ್ವಸ್ತಿತ್ವಮಿಷ್ಯತೇ ।
ಕುತ ಆಗತ್ಯ ಸಂಬದ್ಧಾ ವಟಬೀಜೇಷು ತೇ ಕಣಾಃ ॥ 9 ॥

ಮೊಳಕೆಯಿಂದ ವೃಕ್ಷವಾಗಿ ಫಲನೀಡುವತನಕದ ಕಾರ್ಯಗಳಲ್ಲಿ ಅಣುಗಳ ಅಸ್ತಿತ್ವವನ್ನು ಒಪ್ಪುತ್ತೇವೆ. ಆದರೆ ಪರಮಾಣುಗಳು ಹೇಗೆ ಮತ್ತು ಯಾಕಾಗಿ ಆಲದಮರದ ಬೀಜವಾಗಿ ಒಟ್ಟುಗೂಡುತ್ತವೆ? [2–9]

ವಿವೃತ್ತಿ

ಶ್ಲೋಕದ ವ್ಯಾಖ್ಯೆಯನ್ನು ಮುಂದುವರೆಸುತ್ತಾ **ಅಸ್ಯಾಯಮಭಿಪ್ರಾಯಃ ಇತಿ.** ಜಗತ್ತಿಗೆ ಅಣುಗಳು ಕಾರಣವೆಂದು, ಅವುಗಳು ದ್ವಯಣುಕಗಳಾಗಿ ಒಟ್ಟುಗೂಡಿ ಕಾರ್ಯಮಾಡುವುದೆಂಬುದು ಅನುಭವಕ್ಕೆ ವಿರುದ್ಧವಾಗಿದೆಯೆಂದು ಉಪಪಾದಿಸುತ್ತಾ ಎಲ್ಲಾ ಕಾರ್ಯಗಳಿಗೆ ಅನ್ವಯವಾಗುವ ಅವುಗಳ ಉಪಾದಾನಕ್ಕೆ ಅವುಗಳೊಡನೆ ಅವಿನಾಭಾವ ಸಂಬಂಧವಿರಬೇಕು. ಎಲ್ಲೆಡೆಯೂ ಸತ್ ಮಾತ್ರವೇ ಅನ್ವಯವಾಗುವುದು ಕಂಡುಬರುವುದರಿಂದ ಮತ್ತು ಪರಮಾಣುವಿನ ದರ್ಶನವಾಗದಿರುವುದರಿಂದ, ಸತ್ ಶಬ್ದವಾಚ್ಯವಾದ ಬ್ರಹ್ಮವೇ ಉಪಾದಾನವಾಗಿದೆ , ಅಣು ಮುಂತಾದವುಗಳಲ್ಲ ಎಂಬುದು ವಾರ್ತಿಕಶ್ಲೋಕದ ಅರ್ಥವು. ಪೂರ್ವಾರ್ಧದ ಅಕ್ಷರಾರ್ಥವು ಸ್ಪಷ್ಟವಾಗಿಯೇ ಇದೆ. ವಟಬೀಜವೆಂಬ ಅಂತಿಮಕಾರ್ಯದಲ್ಲಿ ಆ ಪರಮಾಣುಲಕ್ಷಣವುಳ್ಳ ಕಣಗಳಿಗೆ ಯಾವ ಸಂಬಂಧವಿದೆ? ಅವು ದ್ವಯಣುಕಗಳಾಗಿ ಸಂಭವವಾಗುವುದು ಎಲ್ಲಾ ಕಾರ್ಯಗಳಿಗೂ ಅನ್ವಯವಾಗುವುದಿಲ್ಲವಾದುದರಿಂದ ಅವು ಉಪಾದಾನವಲ್ಲ ಎಂಬ ಅರ್ಥವು. ದ್ವಯಣುಕಗಳು ತ್ರಯಣುಕ ಮುಂತಾಗಿ ಅನ್ವಯವಾಗುವುದಕ್ಕೆ ಪ್ರಮಾಣವಿಲ್ಲ. ಹಾಗಾಗಿದ್ದರೆ ಮಣ್ಣಿನಮುದ್ದೆಯಿಂದಾದ ಮಡಕೆಯಲ್ಲಿ ಮಣ್ಣಿನ ಗಟ್ಟಿಚೂರುಗಳು, ಕಪಾಲ ಯಾ ಅನ್ನದ ಅಗಳು ಕಂಡುಬರಬೇಕು. ಪೂರ್ವಾವಸ್ಥೆಯ ವಿನಾಶದ ಬಳಿಕ ಉತ್ತರಾವಸ್ಥೆಯು ಲಭಿಸುವುದರಿಂದ ನಷ್ಟವಾಗಿರುವುದು ಉಪಾದಾನವಾಗುವುದಿಲ್ಲ. ನಾಶವಾಗುವ ಪೂರ್ವದಲ್ಲಿರುವ ಅವಯವಗಳಿಗೆ ಉತ್ತರಾವಸ್ಥೆಯ ಉಪಾದಾನತ್ವವಿದೆ, ಹಾಗಾಗಿ ಅಂತಿಮಕಾರ್ಯದಲ್ಲಿ ಪರಮಾಣುಗಳ ಉಪಾದಾನತ್ವವು ಸಿದ್ಧವಾಗುವುದೆಂದು ಹೇಳಬಹುದು. ಆದರೆ ಅವುಗಳು ಇಂದ್ರಿಯಗೋಚರ ಆಗದಿರುವುದರಿಂದ ಅವುಗಳ ಕಾರ್ಯವು ಅಪ್ರತ್ಯಕ್ಷವಾಗಿವೆ. ಸತ್‌ಗೆ ಸರ್ವಕಾರ್ಯಗಳಿಗೂ ಅನ್ವಯವಾಗುವ ಉಪಾದಾನತ್ವವಿರುವುದರಿಂದ, ಬ್ರಹ್ಮವೇ ಅವುಗಳ ಉಪಾದಾನವು ಎಂದು ಉತ್ತರಾರ್ಧದ ಅರ್ಥ. ಇನ್ನು ಕಾರ್ಯವನ್ನು ಬಯಸುವವನು ಅದಕ್ಕಾಗಿ ಮುಖ್ಯವಾದ ಉಪಾದಾನವನ್ನು ಉಪಯೋಗಿಸುವನಾದುದರಿಂದ, ಬ್ರಹ್ಮಸತ್ತೆ ಅಲ್ಲದೆ ಬೀಜದಲ್ಲಿರುವ ಕಣ ಮೊದಲಾದವುಗಳೇ ಅದರ ಉಪಾದಾನವು ಎನ್ನುತ್ತಾರೆ ಪರಮಾಣುವಾದಿಗಳು. ಆದರೆ ಪರಮಾಣುಗಳು ಇಂದ್ರಿಯಗೋಚರವಲ್ಲವಾದುದರಿಂದ ಕಾರ್ಯಾರ್ಥಿಯು ಅವುಗಳನ್ನು ಯಾ ಅವುಗಳ ವಿಕಾರಗಳನ್ನು ಹೇಗೆ ಉಪಯೋಗಿಸುವನು? ನಮಗೆ ಬೀಜದಲ್ಲಿ ಅನ್ವಯವಾಗಿರುವ ಮೊಳಕೆಯ ದರ್ಶನವಾಗುವುದೇ ವಿನಹ ಪರಮಾಣುಗಳು ಅಲ್ಲ. ಇದಕ್ಕಿಂತ ಹೆಚ್ಚಿನ ಯುಕ್ತಿಯುತವಾದ ಉತ್ತರವು ತುಂಬಾ ವಿಸ್ತಾರವಾಗುವುದು. [2–9]

ಅಂದರೆ, ಅಣುಗಳು ವಿಶ್ವದ ಮೂಲಕಾರಣವೆಂಬ ತರ್ಕವು ಅನುಭವದೆದುರು ಸೋಲುತ್ತದೆ. ಸೃಷ್ಟಿಸಲ್ಪಟ್ಟ ಎಲ್ಲಾ ವಸ್ತುಗಳ ಉಪಾದಾನ ಕಾರಣವು ಅದರೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿರಬೇಕು. ನಾವು ಅಣುಗಳನ್ನು ಕಾಣದೆ, ಸೃಜಿಸಿದ ವಸ್ತುಗಳ ಅಸ್ತಿತ್ವವನ್ನು ಮಾತ್ರ ಗಮನಿಸುವುದರಿಂದ ಹಾಗೂ ಬ್ರಹ್ಮನನ್ನು ಸತ್ ಯಾ ಅಸ್ತಿತ್ವವುಳ್ಳವನು ಎಂದು ಸಂಭೋಧಿಸುವುದರಿಂದ, ಬ್ರಹ್ಮನೇ ಈ ವಿಶ್ವದ ಉಪಾದಾನ ಕಾರಣನಾಗಿರಬೇಕು, ಪರಮಾಣುಗಳು ಅಥವಾ ಬೇರಿನ್ನೇನೋ ಅಲ್ಲ. ಉದಾಹರಣೆಗೆ, ಅಂತಿಮ ಕಾರ್ಯವಾದ ಆಲದಬೀಜಕ್ಕೆ ಅಣುಗಳು ಉಪಾದಾನವೆಂದು ಹೇಗೆ ಹೇಳುವುದು? ಅಣುಗಳು ದ್ವಯಣುಕಗಳ (ಎರಡು ಅಣುಗಳ ಸಂಯೋಗ) ಉಪಾದಾನವಾಗಿರಬಹುದು ಆದರೆ ಇದು ಎಲ್ಲಾ ವಸ್ತುಗಳಲ್ಲಿ ಕಂಡುಬರುವುದಿಲ್ಲ. —ಮೂರು ದ್ವಯಣುಕಗಳು ಸಂಯೋಗ ಹೊಂದಿ, ತ್ರ್ಯಯಣುಕವಾಗುವುದೆಂದು, ಮುಂದಿನ ಸಂಯುಕ್ತ, ಹೇಳುತ್ತಾರೆ; ಇದು ಒಂದು ಊಹೆ ಮಾತ್ರ, ಅನುಭವಸಿದ್ಧವಲ್ಲ. ಅದು ನಿಜವಾಗಿದ್ದರೆ, ಮಡಕೆಮಾಡುವಾಗ ಮಣ್ಣಿನ ಗಟ್ಟಿತುಂಡುಗಳು ಕಂಡುಬರಬೇಕಿತ್ತು. ಮೊದಲಿನ ಸ್ಥಿತಿ ಸಂಪೂರ್ಣವಾಗಿ ಮರೆಯಾಗದೆ ಮುಂದಿನ ಸ್ಥಿತಿಯು ಅನುಭವಕ್ಕೆ ಬಾರದಿರುವುದರಿಂದ ಮತ್ತು ಯಾವುದು ದೃಷ್ಟಿಗೋಚರವಾಗದೇ ಮರೆಯಾಗಿರುವುದೋ ಅದನ್ನು ಉಪಾದಾನ ಕಾರಣವೆಂದು ಹೇಳಲಾಗುವುದಿಲ್ಲ. ಅದು ಸಾಧ್ಯವಿದ್ದಿದ್ದರೆ, ಅಣುಗಳು ಅಂತಿಮ ಸಂಯುಕ್ತದ ಉಪಾದಾನವಾಗಬಹುದು ಹಾಗೂ ಇದು ವೈಶೇಷಿಕರ ವಾದಕ್ಕೆ ವಿರುದ್ಧವಾಗಿದೆ. ಇನ್ನೊಂದು ಕಾರಣವೆಂದರೆ, ಅಣುಗಳು ಅತೀ ಸಂವೇದನಾಶೀಲವೆಂದು ಭಾವಿಸುತ್ತಾರೆ ಹಾಗೂ ಇದರಿಂದ ಉಂಟಾದ ಕಾರ್ಯಗಳೂ ಅತೀ ಸಂವೇದನಾಶೀಲವಾಗಿರಬೇಕು. ಹಾಗಾಗಿ, ಅಸ್ತಿತ್ವವೆಂದು ಭಾವಿಸುವ, ಸೃಜಿಸಲ್ಪಟ್ಟ ಎಲ್ಲದರಲ್ಲಿಯೂ ಇರುವ ಬ್ರಹ್ಮನು ಮಾತ್ರವೇ ಈ ಸೃಷ್ಟಿಯ ಉಪಾದಾನ ಕಾರಣನು.

ಉಪಾದಾನದ ಪದಶಃ ಅರ್ಥವನ್ನು ಗಮನಿಸಿದರೆ, ಒಂದು ಕಾರ್ಯವನ್ನು ಉಂಟುಮಾಡಲು ಪ್ರಥಮವಾಗಿ ಸಂಗ್ರಹಿಸಲ್ಪಟ್ಟ ಒಂದು ವಸ್ತುವನ್ನು ಉಪಾದಾನ ಕಾರಣವೆಂದು ಹೇಳಬಹುದು. ಈ ಅರ್ಥದಲ್ಲಿ, ಒಂದು ಮರವನ್ನು ಉಂಟುಮಾಡಲು ನಮಗೆ ಬೇಕಾದದ್ದು ಒಂದು ಬೀಜ ಮಾತ್ರ, ಬ್ರಹ್ಮನ ಅಗತ್ಯವಿಲ್ಲ ಹಾಗಾಗಿ ಬ್ರಹ್ಮನು ಎಲ್ಲಾ ವಸ್ತುಗಳ ಉಪಾದಾನ ಕಾರಣನಲ್ಲ ಎಂದು ವೈಶೇಷಿಕರು ವಾದ ಮಂಡಿಸಬಹುದು. ಇದಕ್ಕೆ ಬ್ರಹ್ಮವಾದಿಯು ತನ್ನ ಆಕ್ಷೇಪವನ್ನು ಹೇಳುತ್ತಾನೆ: ಯಾವನು ಮರವನ್ನು ಉತ್ಪತ್ತಿಮಾಡಲು ಹೊರಟಿದ್ದಾನೆಯೋ, ಅವನು ಬೀಜವನ್ನು ಸಂಗ್ರಹಿಸಬೇಕು, ಪರಮಾಣುವನ್ನಲ್ಲ. ಬೀಜವು ಮೂಲತಃವಾಗಿ ಪರಮಾಣುಗಳಿಂದ ಮಾಡಲ್ಪಟ್ಟಿದೆಯೆಂದು ವೈಶೇಷಿಕರು ಹೇಳುತ್ತಾರೆ. ಬೀಜವು ಬ್ರಹ್ಮನ ವಿವರ್ತರೂಪ (ಭ್ರಮೆ); ಬೀಜದಲ್ಲಿ ಅಸ್ತಿತ್ವವನ್ನು ಕಾಣುತ್ತೇವೆ, ಅಣುಗಳು ದೃಷ್ಟವಾಗುವುದಿಲ್ಲ ಎಂದು ಬ್ರಹ್ಮವಾದಿಗಳು ನಿರೂಪಿಸುತ್ತಾರೆ.

कारणान्तर्गतं कार्यमिति सर्वैश्च सम्मतम् ।
तस्मात्सत्ता स्फुरत्ता सर्वत्राप्यनुवर्तते ॥ १० ॥

ಕಾರಣಾಂತರ್ಗತಂ ಕಾರ್ಯಮಿತಿ ಸರ್ವೈಶ್ಚ ಸಮ್ಮತಮ್ ।
ತಸ್ಮಾತ್ಸತ್ತಾ ಸ್ಫುರತ್ತಾ ಸರ್ವತ್ರಾಪ್ಯನುವರ್ತತೇ ॥ 10 ॥

ಕಾರ್ಯವು (ಉಪಾದಾನ) ಕಾರಣದೊಡನೆ ಇರುತ್ತದೆಯೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದುದರಿಂದ ಎಲ್ಲಾ ಪದಾರ್ಥಗಳಲ್ಲಿ ಅಸ್ತಿತ್ವ ಮತ್ತು ಪ್ರಕಾಶ ಇರುತ್ತದೆ. [2–10]

ವಿವೃತ್ತಿ

ಇದುವರೆಗೆ ಹೇಳಿರುವುದನ್ನು ಸ್ಪಷ್ಟಪಡಿಸುತ್ತಾ **ಕಾರಣಾಂತರ್ಗತಮಿತಿ.** ಕಾರ್ಯವು ಉಪಾದಾನಕಾರಣದ ಅಂತರ್ಗತವಾಗಿರುವುದೆಂಬ ಅರ್ಥವು. ಪ್ರಕಾಶಾತ್ಮಕವಾದ ಸತ್ ಎಲ್ಲೆಡೆಯೂ ಕಾರ್ಯದಂತೆ ಅನುವರ್ತಿಸುವುದು ಎಂದು ತಮ್ಮ ಉಪಪಾದನೆಯನ್ನು ಸಿದ್ಧಮಾಡುತ್ತಾರೆ. [2–10]

ಸೃಜಿಸಲ್ಪಟ್ಟ ಎಲ್ಲಾ ಪದಾರ್ಥಗಳು ಜ್ಞಾನದ ಬೆಳಕಿನಲ್ಲಿ ತಮ್ಮ ಅಸ್ತಿತ್ವವನ್ನು ತೋರುತ್ತವೆ; ಆದುದರಿಂದ ಸ್ವಪ್ರಕಾಶಿತ ಅಸ್ತಿತ್ವವು ಅವುಗಳ ಉಪಾದಾನ ಕಾರಣವಾಗಿದೆ.

पुष्पे फलत्वमापन्ने क्षीरे च दधितां गते ।
विजातीयाः प्रवर्तन्ते गुणा रूपसादयः ॥ ११ ॥

ಪುಷ್ಪೇ ಫಲತ್ವಮಾಪನ್ನೇ ಕ್ಷೀರೇ ಚ ದಧಿತಾಂ ಗತೇ ।
ವಿಜಾತೀಯಾಃ ಪ್ರವರ್ತಂತೇ ಗುಣಾ ರೂಪಸಾದಯಃ ॥ 11 ॥

ಹೂವು ಫಲಿತವಾಗಿ ಹಣ್ಣಾಗುವಾಗ, ಹಾಲು ಹೆಪ್ಪುಗಟ್ಟಿ ಮೊಸರಾಗುವಾಗ, ರೂಪ ರಸ ಇತ್ಯಾದಿ ಉಪಾದಾನ ಕಾರಣವನ್ನು ಹೊರತುಪಡಿಸಿ ಬೇರೆಯೇ ವರ್ಗದ ಗುಣಲಕ್ಷಣಗಳು ಅರಿವಿಗೆ ಬರುತ್ತದೆ. [2–11]

ವಿವೃತ್ತಿ

ಹಿಂದಿನ ಕಾರ್ಯಗಳು ಮುಂದಿನ ಕಾರ್ಯದ ಉಪಾದಾನವಾಗುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಸುತ್ತಾ **ಪುಷ್ಪೇ ಫಲಮಿತಿ.** ಉಪಾದಾನದಲ್ಲಿರುವ ಗುಣಗಳು ಮತ್ತು ಕಾರ್ಯದಲ್ಲಿರುವ ಗುಣಗಳು ಸಜಾತೀಯವಾಗಿರುತ್ತವೆ ಎಂಬುದು ಸಮ್ಮತವು. ಆದರೆ ಪುಷ್ಪವು ಫಲವಾಗುವಾಗ ಯಾ ಹಾಲು ಮೊಸರಾಗುವಾಗ ಉಪಾದಾನ–ಉಪಾದೇಯ ಭಾವವಿದ್ದರೆ, ಅವುಗಳಲ್ಲಿ ಸಮಾನಸ್ವಭಾವದ ಗುಣಗಳಿರಬೇಕಾಗಿತ್ತು; ಅದು ಹಾಗೆ ಕಂಡುಬರುವುದಿಲ್ಲ. ಹಾಗಾಗಿ ಪೂರ್ವ–ಅಪರ ಭಾವದಲ್ಲಿರುವ ಕಾರ್ಯಗಳಲ್ಲಿ ಪೂರ್ವಕಾರ್ಯವು ಉತ್ತರಕಾರ್ಯಕ್ಕೆ ಉಪಾದಾನವಾಗುವುದಿಲ್ಲ. [2–11]

ವೈಶೇಷಿಕರ ಅಭಿಪ್ರಾಯದಂತೆ, ಕಾರಣದ ಗುಣಲಕ್ಷಣಗಳಂತೆ ಕಾರ್ಯದ ಗುಣಲಕ್ಷಣಗಳಿರುತ್ತವೆ. ಆದರೆ ಒಂದು ಕಾರ್ಯವು ಇನ್ನೊಂದನ್ನು ಅನುಸರಿಸುವಾಗ, ಹಿಂದಿನ ಕಾರ್ಯವು ಮುಂದಿನ ಕಾರ್ಯದ ಉಪಾದಾನ ಕಾರಣವಾಗಲು ಸಾಧ್ಯವಿಲ್ಲ.

ಭ್ರಮೆಯ ನಿಯಮ

ರೂಪರಹಿತವಾದ ಸ್ವಪ್ರಕಾಶಿತ ಅಸ್ತಿತ್ವವು ಮಾತ್ರ ರೂಪಸಹಿತವಾದ ವಿಶ್ವದ ಸೃಷ್ಟಿಗೆ ಹೇಗೆ ಕಾರಣವಾಗುವುದು ಎಂದು ಕೇಳಬಹುದು. ಹಗ್ಗದಲ್ಲಿ ಕಂಡ ಹಾವಿನಂತೆ, ಎಲ್ಲಾ ಪ್ರಕಟಿತವಾದ ಭ್ರಾಮಕ ರೂಪಗಳಲ್ಲಿ ಸ್ವಪ್ರಕಾಶಿತ ಅಸ್ತಿತ್ವವು ಅಂತರ್ಭೂತವಾಗಿದೆ. ಇದನ್ನು ವಾರ್ತಿಕಕಾರರು ಹೀಗೆ ಹೇಳುತ್ತಾರೆ:

कारणं कार्यमंशोंशी जातिव्यक्ती गुणी गुणः ।
क्रिया क्रियावानित्याध्याः प्रकाशस्यैव कल्पनाः ॥ १२ ॥

ಕಾರಣಂ ಕಾರ್ಯಮಂಶೋಂಶೀ ಜಾತಿವ್ಯಕ್ತೀ ಗುಣೀ ಗುಣಃ ।

ಕ್ರಿಯಾ ಕ್ರಿಯಾವಾನಿತ್ಯಾಧ್ಯಾಃ ಪ್ರಕಾಶಸ್ಯೈವ ಕಲ್ಪನಾಃ ॥ 12 ॥

ಕಾರ್ಯ–ಕಾರಣ, ಆಂಶಿಕ–ಪೂರ್ಣ, ಗುಂಪು–ಏಕವ್ಯಕ್ತಿ, ಪದಾರ್ಥ–ಗುಣ, ಕ್ರಿಯೆ–ಕಾರ್ಯವಾಹ ಇತ್ಯಾದಿಗಳು ಒಂದೇ ಪ್ರಕಾಶದ ಅನೇಕ ಭ್ರಾಮಕ ರೂಪಗಳು. [2–12]

ವಿವೃತ್ತಿ

ಇನ್ನು ಸ್ವಪ್ರಕಾಶಿತ ಸತ್‌ನ ಆಕಾಶದಂತಹ, ಅಮೂರ್ತ ಸ್ವರೂಪಕ್ಕೆ ಕಾರ್ಯದ ಆರಂಭಕತ್ವವು ಇರುವುದು ಹೇಗೆ? ಹೇಗೆ ಅದಕ್ಕೆ ಕಾರಣತ್ವವು ದೊರೆತಿರುವುದು? ಹಗ್ಗವು ಸರ್ಪಕ್ಕೆ ಆಧಾರವಾಗಿರುವಂತೆ ಎಲ್ಲಾ ಕಲ್ಪನಾರೂಪಗಳಲ್ಲಿ ಭ್ರಾಮಕತ್ವದ ಅಧಿಷ್ಠಾನದಿಂದ ಎಂದು ತಿಳಿಸುವ **ಕಾರಣಂ ಕಾರ್ಯಮಿತಿ.** ಬೀಜವು ಕಾರಣ, ಅಂಕುರವು ಕಾರ್ಯ; ವಸ್ತ್ರವು ಅಂಶೀ, ನೂಲು ಅಂಶ; ಗೋವುಗಳು ಜಾತಿ, ಒಂದು ಹೋರಿಯು ವ್ಯಕ್ತಿ; ವಸ್ತ್ರವು ಗುಣೀ, ಅದರ ರೂಪ ಮೊದಲಾದವುಗಳು ಗುಣ; ಚಲನೆಯು ಕ್ರಿಯೆ, ಅದು ಆಶ್ರಯಿಸಿರುವ ಎಂಬ ಅಭಿಪ್ರಾಯದಲ್ಲಿ ಬಾಣ ಚಕ್ರ ಮುಂತಾದವುಗಳು ಕ್ರಿಯಾವಾನ್. ಆದಿ ಶಬ್ದದಿಂದ ವಿಶೇಷೋ–ವಿಶೇಷೀ, ಸಮವಾಯಃ ಸಮವಾಯೀ, ವಿಶೇಷಣ ವಿಶೇಷ್ಯ, ಸದೃಶಃ ಸಾದೃಶ್ಯ ಮುಂತಾದವುಗಳು ಗ್ರಹಿಸಲ್ಪಡುತ್ತವೆ. ಇಂತಹ ಕಲ್ಪನೆಗಳು ವ್ಯವಹಾರದಲ್ಲಿ ಸತ್ಪ್ರಕಾಶದ ಸ್ಫುರಣೆಯ ಭ್ರಾಮಕರೂಪಗಳೇ ಆಗಿವೆ ಎಂಬ ಅರ್ಥದಲ್ಲಿ. ಆರಂಭವಾದದಲ್ಲಿ ಯಾ ಪರಿಣಾಮವಾದದಲ್ಲಿ ಕಾರ್ಯಕಾರಣಭಾವದ ನಿರೂಪಣೆಯು ಅಸಂಭವ ಆಗಿರುವುದಿಂದ ಮತ್ತು ಇತರ ವಾದಗಳು ತುಚ್ಛವಾಗಿರುವುದರಿಂದ ಸ್ವಪ್ರಕಾಶಿತ ಚಿದ್ರೂಪ ಚಿದಾತ್ಮನಲ್ಲಿಯೇ ಈ ಜಗತ್ತು ಮಾಯೆಯಿಂದ ವಿಜೃಂಭಿಸುತ್ತದೆ ಎಂಬ ಅಭಿಪ್ರಾಯ. [2–12]

ಆಧುನಿಕ ವಿಜ್ಞಾನದಲ್ಲಿ ಬರುವ ಸಾಪೇಕ್ಷ ಸಿದ್ಧಾಂತದ ಮೂಲ ಇಲ್ಲಿದೆ. ಆರಂಭವಾದ (ವೈಶೇಷಿಕರ ಸೃಷ್ಟಿಯ ನಿಯಮ) ಯಾ ಪರಿಣಾಮವಾದ (ಸಾಂಖ್ಯರ ಪರಿವರ್ತನಾ ನಿಯಮ) ಇವುಗಳ ಮೂಲಕ ಒಂದು ವಸ್ತುವು ಇನ್ನೊಂದನ್ನು ಉಂಟುಮಾಡುತ್ತದೆ ಎಂದು ವಿವರಿಸಲು ಅಸಾಧ್ಯವಾಗುತ್ತದೆ; ಬೇರೆ ಎಲ್ಲಾ ವಾದಗಳು ಕೂಡಾ ಅತಾರ್ಕಿಕವಾದುದರಿಂದ, ಈ ವಿಶ್ವವು ಆತ್ಮ ಸ್ವರೂಪಿ ಬ್ರಹ್ಮನ ಹಿನ್ನೆಲೆಯಲ್ಲಿ ಮಾಯೆಯ ಒಂದು ಪ್ರದರ್ಶನ ಮಾತ್ರವೆಂದು ನಿಶ್ಚಯಿಸಬೇಕಾಗಿದೆ.

ಜ್ಞಾನ ಮತ್ತು ಕ್ರಿಯೆ ಚೈತನ್ಯದಲ್ಲಿ ಮಾತ್ರ ಇವೆ

चैतन्यं परमाणूनां प्रधानस्यापि नेप्यते ।
ज्ञानक्रिये जगत्क्लप्तौ दृश्येते चेतनाश्रये ॥ १३ ॥

ಚೈತನ್ಯಂ ಪರಮಾಣೂನಾಂ ಪ್ರಧಾನಸ್ಯಾಪಿ ನೇಪ್ಯತೇ ।
ಜ್ಞಾನಕ್ರಿಯೇ ಜಗತ್ಕ್ಲಪ್ತೌ ದೃಶ್ಯೇತೇ ಚೇತನಾಶ್ರಯೇ ॥ 13 ॥

ಜಗತ್ತನ್ನು ಉಂಟುಮಾಡುವಾಗ ಪರಮಾಣುವಿನಲ್ಲಿ ಯಾ ಪ್ರಧಾನದಲ್ಲಿ (ಪ್ರಕೃತಿ) ಚೈತನ್ಯದ ಇರುವಿಕೆಯನ್ನು ಹೇಳಿಲ್ಲ. ಜ್ಞಾನ ಮತ್ತು ಕ್ರಿಯೆಗಳು ಚೈತನ್ಯಯುತ ಪದಾರ್ಥದಲ್ಲಿ ಅಂತರ್ಭೂತವಾಗಿವೆ. [2–13]

ವಿವೃತ್ತಿ

ಪರಮಾಣುಗಳಲ್ಲಿ ಯಾ ಪ್ರಧಾನದಲ್ಲಿ ಸತ್‌ಚೇತನದ ಇರುವಿಕೆಯನ್ನು ಹೇಳಿರುವುದಿಲ್ಲ, ವೈಶೇಷಿಕರು ಮತ್ತು ಸಾಂಖ್ಯರು ಎಂದು ಸೇರಿಸಿಕೊಳ್ಳುವುದು. 'ಸ ಏಷೋಣಿಮ್ಯೈತದಾತ್ಮ್ಯಮಿದಂ ಸರ್ವಂ' (ಛಾ.ಉ.6–7), 'ತಮ ಆಸೀತ್ತಮಸಾ ಗೂಢಮ್' (ಋ.ವೇ.10) ಎಂಬ ಶ್ರುತಿಗಳಂತೆ ಪರಮಾಣು, ಪ್ರಧಾನಗಳಲ್ಲಿ ಸರ್ವಕಾರಣತ್ವವು ಇರುವ ಕಾರಣವನ್ನು ತಿಳಿಸಲು **ಚೈತನ್ಯಮಿತಿ.** ಜಗತ್ತನ್ನು ಅದರ ಕಾರಣವು ಈಕ್ಷಣಾಪೂರ್ವಕವಾಗಿ ಸೃಷ್ಟಿಸಿರುವುದು ಎಂದು ಶ್ರುತಿಯು ಹೇಳಿರುವುದು, 'ತದೈಕ್ಷತ' (ಛಾ.ಉ.6–2) ಎಂದು ಮತ್ತು ಅದರಲ್ಲಿ ತಟಸ್ಥ ಈಶ್ವರನು ಕರ್ತೃತ್ವ ನಿಮಿತ್ತಭೂತತ್ವ ಯುಕ್ತವಾಗಿರುವುದನ್ನು 'ಬಹುಸ್ಯಾಂ ಪ್ರಜಾಯೇಯ' (ಛಾ.ಉ.6–2) ಎಂದು ತಿಳಿಸಿ ಆತ್ಮನೇ ಬಹುವಾಗಿರುವುದನ್ನು ಕೇಳಿಸುವುದು. ಇದರಿಂದ ಪ್ರಧಾನ, ಪರಮಾಣುಗಳ ಅನಾತ್ಮತ್ವವು ಅಂಗೀಕಾರವಾಗುವುದು. ಇನ್ನು ಈಶ್ವರನಲ್ಲಿ ಜ್ಞಾತೃತ್ವ, ಕರ್ತೃತ್ವಗಳು ಹೇಗೆ ಇವೆ ಎಂಬ ಶಂಕೆಗೆ, ಅವನಲ್ಲಿ ಮಾಯಾಶಕ್ತಿ ಇರುವುದರಿಂದಲೇ ಅವಿರುವುವು, ಇತರ ಯಾವುದರಿಂದಲೂ ಅಲ್ಲ ಎಂದು ತಿಳಿಸಲು **ಜ್ಞಾನಕ್ರಿಯೇ ಇತಿ.** ಅಚೇತನದಲ್ಲಿ ದರ್ಶನವಾಗದೇ, ಕುಲಾಲ ಮುಂತಾದವರಂತಹ ಚೇತನದಲ್ಲಿ ಕಂಡುಬರುವುದರಿಂದ ಜಗತ್ತಿಗೆ ಚೇತನದ ಆಶ್ರಯವು ಅಂಗೀಕಾರಾರ್ಹವಾಗಿದೆ. ಹಾಗೆಯೇ ಜಗತ್ಕಾರಣನಾದ ಈಶ್ವರನಿಗೆ ಕಾರ್ಯಕಾರಣ ಉಪಾಧಿಯ ಆರೋಪದಿಂದ ಕುಲಾಲನಂತಹ ಜೀವನಿಗೂ ಕಾರ್ಯಕಾರಣ ಸಂಸ್ಕಾರ ರೂಪದ ಮಾಯಾ ಉಪಾಧಿಯನ್ನು ಆರೋಪಿಸಿರುವುದರಿಂದ ಜ್ಞಾನಕ್ರಿಯೆಗಳೇ ಶಕ್ತಿ ಎಂದೆನಿಸುವುದು ಎಂದು ಹೇಳಬಹುದು. ಹಾಗೆಂದೇ ವೈಯ್ಯಾಸಿಕನ್ಯಾ ಸೂತ್ರವಿದೆ 'ಯಥಾ ಚ ತಕ್ಷೋಭಯಥಾ' (ಬ್ರ.ಸೂ.2–3–40) ಎಂದು. [2–13]

ವಿಶ್ವದ ಕಾರಣವಾದ ಪರಮಾಣು ಯಾ ಪ್ರಧಾನದಲ್ಲಿ ಚೈತನ್ಯವನ್ನು ವೈಶೇಷಿಕರು ಮತ್ತು ಸಾಂಖ್ಯರು ಪ್ರತಿಪಾದಿಸಿಲ್ಲ. ಆತ್ಮಸ್ವರೂಪಿಯಾದ ವಸ್ತುವಿನಿಂದ ಸೃಷ್ಟಿಯು ಆರಂಭವಾಗುತ್ತದೆ, ಅದು ತನ್ನ ವಿವಿಧ ಗುಣಗಳನ್ನು ಸಮೀಕರಿಸಿ ವಿಶ್ವವಾಗುತ್ತದೆ ಎಂದು ಶ್ರುತಿಯು (ಛಾ.ಉ.6–2) ಹೇಳುತ್ತದೆ. ಆತ್ಮಜ್ಞಾನ ಹೊಂದಿದ ವಸ್ತುವಿನೊಡನೆ ಸಂಪರ್ಕವಿಲ್ಲದ ಜಡ ವಸ್ತುಗಳಲ್ಲಿ ಅರಿವು ಮತ್ತು ಕರ್ತೃತ್ವಶಕ್ತಿಯ ಅಭಾವ ಕಂಡುಬರುತ್ತದೆ. ಆಲೋಚಿಸಬಲ್ಲ ಮತ್ತು ಕ್ರಿಯಾಶೀಲ ಆತ್ಮಜ್ಞಾನಿಯಾದ ತತ್ವವು ಸೃಷ್ಟಿಯನ್ನು ಆರಂಭಿಸಲು ಶಕ್ತವಾಗಿದೆ ಎಂದು ಇದರಿಂದ ಹೇಳಬಹುದು. ಹೀಗೆ ಶ್ರುತಿಯ ಪ್ರಕಾರ, ಜಡ ಪರಮಾಣುಗಳಿಂದ ಅಥವಾ ಜಡ ಪ್ರಧಾನದಿಂದ, ಅಥವಾ ಇವುಗಳ ಮೇಲಿನ ಚೈತನ್ಯಯುತ ತತ್ವದ ಪ್ರಭಾವದಿಂದ, ಅಥವಾ ಈ ವಿಶ್ವದ ಮೂಲವಸ್ತುವಿನಿಂದ ಬೇರೆಯಾಗಿರುವ ಬಾಹ್ಯ ದೇವತತ್ವವು ಇವುಗಳ ಮೇಲೆ ಬೀರುವ ಪ್ರಭಾವದಿಂದ ಈ ಪ್ರಪಂಚದ ಉತ್ಪತ್ತಿಯಾಗಲು ಸಾಧ್ಯವಿಲ್ಲ. ಇದಕ್ಕೆ ಬೇರೆಯಾಗಿ, ಈಶ್ವರನ ಇಚ್ಛಾಮಾತ್ರದಿಂದ, ಅವನು ಅದರ ನಿಮಿತ್ತ ಮತ್ತು ಉಪಾದಾನ ಕಾರಣನು ಆಗಿದ್ದುಕೊಂಡು, ಈ ವಿಶ್ವದ ಉತ್ಪತ್ತಿಯಾಗುವುದು ಎಂದು ಶ್ರುತಿಯು ಹೇಳುತ್ತದೆ. ಭ್ರಮಾತ್ಮಕವಾದ ವಿವಿಧ ಕಾರಣ–ಕಾರ್ಯಗಳಿಂದ ಉಂಟಾದ ಈ ವಿಶ್ವವನ್ನು ಅವನ ಮಾಯಾ ಶಕ್ತಿಯೊಂದಿಗೆ ಅರಿತುಕೊಳ್ಳುವಾಗ, ಅವನು ಬದಲಾವಣೆಯನ್ನು ಹೊಂದದಿರುವವನು, ಯಾವುದರ ಪ್ರಭಾವಕ್ಕೂ ಒಳಗಾಗದಿರುವವನು ಎಂದಿದ್ದರೂ, ಅವನು ಆಲೋಚಿಸುತ್ತಾನೆ ಮತ್ತು ಕ್ರಿಯಾಶೀಲನಾಗಿದ್ದಾನೆ, ಬಾಹ್ಯ ಪ್ರಪಂಚದ ಕುರಿತು ಆಸಕ್ತನಾಗಿದ್ದಾನೆ ಹಾಗೂ ಅದರೊಂದಿಗೆ ಸ್ಪಂದಿಸುತ್ತಾನೆ ಎಂದು ಭಾವಿಸಬಹುದು.

कालरूपक्रियाशक्त्या क्षीरात्परिणमेद्दधि ।
ज्ञातृज्ञानज्ञेयरूपं ज्ञानशक्त्याभवेज्जगत् ॥ १४ ॥

ಕಾಲರೂಪಕ್ರಿಯಾಶಕ್ತ್ಯಾ ಕ್ಷೀರಾತ್ಪರಿಣಮೇದ್ದಧಿ ।
ಜ್ಞಾತೃಜ್ಞಾನಜ್ಞೇಯರೂಪಂ ಜ್ಞಾನಶಕ್ತ್ಯಾಭವೇಜ್ಜಗತ್ ॥ 14 ॥

ಅವನ ಕ್ರಿಯಾಶಕ್ತಿಯು ಕಾಲದರೂಪ ತಳೆಯುವುದರಿಂದ ಹಾಲು ಮೊಸರಾಗುತ್ತದೆ. ಅವನ ಜ್ಞಾನಶಕ್ತಿಯಿಂದ ಅರಿಯುವವನು, ಅರಿವು ಮತ್ತು ಅರಿಯುವಿಕೆಯ ರೀತಿಯಲ್ಲಿ ಈ ವಿಶ್ವದ ಉತ್ಪತ್ತಿಯಾಗುತ್ತದೆ. [2–14]

ವಿವೃತ್ತಿ

ಇನ್ನು ಚೇತನದ ಅಪೇಕ್ಷೆಯಿಲ್ಲದೆ ಕಾರ್ಯವು ನೆರವೇರುವುದು ಕಂಡುಬರುತ್ತದೆ, ಹಾಲು ತನ್ನಷ್ಟಕ್ಕೇ ಮೊಸರಿನ ರೂಪದಲ್ಲಿ ಪರಿಣಾಮವನ್ನು ಹೊಂದಿದ ಹಾಗೆ ಎಂದು ಸಾಂಖ್ಯರ ಶಂಕೆಯನ್ನು ನಿರಾಕರಿಸುವ **ಕಾಲರೂಪೇತಿ.** 'ಯಃ ಸರ್ವೇಷು ಭೂತೇಷು ತಿಷ್ಠನ್' (ಬೃ.ಉ.3–7–15) ಎಂಬ ಶ್ರುತಿಯಂತೆ ಸರ್ವಾಂತರ್ಯಾಮಿಯಾಗಿರುವ ಈಶ್ವರನು ಕಾಲವೆಂಬ ಕ್ರಿಯಾಶಕ್ತಿಯಾಗಿ ಹಾಲಿನಲ್ಲಿ ಅಧಿಷ್ಠಿತನಾಗಿರುವುದರಿಂದ ಅದು ಮೊಸರಾಗಿ ಪರಿಣಾಮ ಹೊಂದುವುದು. ತಾನಾಗಿಯೇ ಮೊಸರಾಗಿ ಪರಿವರ್ತಿತವಾಗುವುದು ಹಾಲಿನ ಸ್ವಭಾವವಲ್ಲ ಎಂಬ ಅರ್ಥವು. ಇದರಿಂದ ಕಾಲವು ಕೂಡಾ ಈಶ್ವರ ಶಕ್ತ್ಯಾಕಾರದ ಭೇದ ಎಂದು ಸೂಚಿತವಾಗುವುದು. ಹಾಗೆಂದು ಶ್ರುತಿಯು 'ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ' (ಶ್ವೇ.ಉ.6–8) ಎಂದು ಹೇಳುತ್ತದೆ. ಮುಂದೆ ಜ್ಞಾನರೂಪದ ಶಕ್ತಿಯನ್ನು ವಿವರಿಸುತ್ತಾ, ಅದರಿಂದ ಜಗತ್ತಿನ ಉತ್ಪತ್ತಿಯಾಯಿತು ಎಂದು ಹೇಳಲು **ಜ್ಞಾತೃಜ್ಞಾನೇತಿ.** ಜ್ಞಾನ ಅಂದರೆ ಜಗತ್ತಿನ ಕರ್ತೃವಿನ ಈಕ್ಷಣ ವ್ಯವಹಾರಪ್ರವೃತ್ತಿಯ ಕ್ಷಮತೆ ಯಾ ವೃತ್ತಿಯ ಆಭಾಸ ಎಂದು ಹೇಳಿದೆ. ಹಾಗೆ ಅದು ತನ್ನನ್ನು ಆಶ್ರಯಿಸಿರುವ ಮಾಯಾಶಬಲದ ಜ್ಞಾತೃತ್ವವನ್ನು ಸಂಪಾದಿಸಿರುವುದು; ಸ್ವರೂಪದಿಂದ ಜ್ಞಾನಾತ್ಮನಾಗಿ ವರ್ತಿಸುವುದು. ಜ್ಞೇಯಂ ಅಂದರೆ ಸೃಜಿಸಲ್ಪಟ್ಟ ಜಗತ್ತಿನ ಅವಭಾಸ; ಅದರ ಆಕಾರದಲ್ಲಿ ರೂಪುಗೊಂಡಿರುವುದು ಜ್ಞೇಯರೂಪ ಆಗಿರುವುದು. ಈ ವಿಧವಾಗಿ ಜ್ಞಾನಶಕ್ತಿಯು ಜಗತ್ತಿನ ರೂಪತಳೆದಿರುವುದು ಎಂಬ ಅರ್ಥ. [2–14]

ಯಾವುದೇ ಚೈತನ್ಯದ ಪ್ರಭಾವವಿಲ್ಲದೆ ಹಾಲು ಮೊಸರಾಗುವುದು ಎಂಬ ಉದಾಹರಣೆಯನ್ನು ಉಲ್ಲೇಖಿಸಿ, ಕಾರ್ಯವು ಚೈತನ್ಯದ ಸಹಕಾರವಿಲ್ಲದೆ ಜರಗಿಸಲ್ಪಡುತ್ತದೆ ಎಂದು ಸಾಂಖ್ಯರು ಪ್ರತಿಪಾದಿಸುತ್ತಾರೆ. ಶ್ರುತಿ (ಬೃ.ಉ.5–7–15) ಹೇಳಿದಂತೆ, ಸೃಜಿಸಲ್ಪಟ್ಟ ಎಲ್ಲಾ ಪದಾರ್ಥಗಳಲ್ಲಿ ನಿಯಾಮಕನಾಗಿ ಹಾಗೂ ಮಾರ್ಗದರ್ಶಕನಾಗಿ ವಾಸಿಸುವ ಈಶ್ವರನು ತನ್ನ ಕ್ರಿಯಾಶಕ್ತಿಯಿಂದ, ಸಮಯದ ರೂಪದಿಂದ ಹಾಲಿನ ಮೇಲೆ ಪ್ರಭಾವವನ್ನು ಬೀರಿ ಅದನ್ನು ಮೊಸರಾಗಿಸುತ್ತಾನೆ. ಹಾಲು ತನ್ನಷ್ಟಕ್ಕೇ ಮೊಸರಾಗಲು ಸಾಧ್ಯವಿಲ್ಲ; ಹಾಗಾಗುವುದಿದ್ದರೆ, ಹಾಲುಕರೆದಕೂಡಲೇ ಅದು ಮೊಸರಾಗಬೇಕಿತ್ತು. ಮಾಯೆಯ ಒಂದು ಅವಸ್ಥೆಯಲ್ಲಿ ಅದು ಬ್ರಹ್ಮತತ್ವದಂತೆ ಕಂಡು ಸೃಷ್ಟಿಕರ್ತನಾದ ಈಶ್ವರ ತತ್ವವಾಗುತ್ತದೆ ಮತ್ತು ಸೃಷ್ಟಿಯ ಆರಂಭದಲ್ಲಿ ಅವನಿಗೆ ವಿಶ್ವದಲ್ಲಿರಬೇಕಾದ ಎಲ್ಲಾ ವಸ್ತುಗಳ ಕಲ್ಪನೆ (ವಿಶ್ವಜ್ಞಾನ) ಇರುತ್ತದೆ. ಈ ಈಶ್ವರ ತತ್ವವನ್ನು ಜ್ಞಾನಶಕ್ತಿ ಎಂದು ಕರೆಯಲಾಗಿದೆ. ಹೀಗೆ ಮಾಯೆಯು ಬ್ರಹ್ಮನ ಸಂಪರ್ಕದಿಂದ ಈಶ್ವರ ತತ್ವವಾಗಿ, ತಾನು ವಿಶ್ವರೂಪದಿಂದ, ಅನುಭವಿಸಲ್ಪಡುವ ಪದಾರ್ಥದಂತೆ ಕಾಣಿಸಿಕೊಳ್ಳುತ್ತದೆ; ಈಶ್ವರನ ಜ್ಞಾನಶಕ್ತಿಯಿಂದ ಜಗತ್ತಿನ ಸೃಷ್ಟಿಯಾಗುತ್ತದೆ.

ज्ञानं द्विधा वस्तुमात्रद्योतकं निर्विकल्पकम् ।
सविकल्पन्तु संज्ञादिद्योतकत्वादनेकधा ॥ १५ ॥

ಜ್ಞಾನಂ ದ್ವಿಧಾ ವಸ್ತುಮಾತ್ರದ್ಯೋತಕಂ ನಿರ್ವಿಕಲ್ಪಕಮ್ ।
ಸವಿಕಲ್ಪಂತು ಸಂಜ್ಞಾದಿದ್ಯೋತಕತ್ವಾದನೇಕಧಾ ॥ 15 ॥

ಜ್ಞಾನವು ಎರಡುವಿಧವಾಗಿದೆ. ನಿರ್ವಿಕಲ್ಪ ಯಾ ಏಕೀಕೃತವಾದ ಜ್ಞಾನವು ವಸ್ತು-ವಿಷಯಗಳನ್ನು ಬೆಳಗುತ್ತದೆ; ಸವಿಕಲ್ಪ ಯಾ ಬಹುರೂಪವಾದ ಜ್ಞಾನವು ಗುಣವಿಶೇಷಣಗಳನ್ನು ಬೆಳಗುತ್ತದೆ. [2–15]

ವಿವೃತ್ತಿ

ಹೀಗೆ ತಿಳಿಸಿರುವ ಜ್ಞಾನಶಕ್ತಿಯನ್ನು ಸಾಮಾನ್ಯ-ವಿಶೇಷ ಎಂದು ವಿಭಜಿಸುವ **ಜ್ಞಾನಂ ದ್ವಿಧೇತಿ.** ವಸ್ತುಮಾತ್ರ ದ್ಯೋತಕವಾದ, 'ಬಹು ಸ್ಯಾಮ್' (ತೈ.ಉ.26) ಎಂಬ ಶ್ರುತಿಯಂತೆ ಸಾಮಾನ್ಯರೂಪದಿಂದ ಸಮಸ್ತವಸ್ತುಗಳ ಸೃಜನೆಯನ್ನು ಉಲ್ಲೇಖಿಸುತ್ತದೆ. ಪುನಃ ಆಕಾಶಾದಿ ಭೂತ ಭೌತಿಕ ಪ್ರಕಾರದಲ್ಲಿ ಅನೇಕವಾಗಿ ಸೃಜಿಸುವ ಅರ್ಥದಲ್ಲಿ ವಿಶೇಷತೆಯ ದ್ಯೋತಕವಾಗಿ ಸವಿಕಲ್ಪತೆಯನ್ನು ಹೊಂದಿರುವುದು. [2–15]

ಎರಡು ವಿಧವಾಗಿ ಜ್ಞಾನಶಕ್ತಿಯು ಕಾಣಿಸಿಕೊಳ್ಳುತ್ತದೆ. ಮೊದಲನೆಯದಾಗಿ, ಸೃಷ್ಟಿಯ ಆರಂಭದಲ್ಲಿ 'ನಾನು ಬಹಳವಾಗುವೆನು' ಎಂದು ಆಲೋಚಿಸುವ ಹಾಗೂ ಬಾಹ್ಯ ಜಗತ್ತನ್ನು ಪೂರ್ಣತೆಯಿಂದ ಕಾಣುವ ಶಕ್ತಿಯನ್ನು ನಿರ್ವಿಕಲ್ಪ (ಏಕೀಕೃತ) ಜ್ಞಾನ ಎನ್ನುತ್ತಾರೆ. ಎರಡನೆಯದಾಗಿ, ಅದೇ ಜ್ಞಾನವು ಬಾಹ್ಯ ಜಗತ್ತನ್ನು ಅದರಲ್ಲಿರುವ ವಸ್ತುಗಳ ವಿವಿಧತೆಯಂತಹ ಗುಣವಿಶೇಷಗಳ ಮೂಲಕ ದೃಷ್ಟಿಸುವಾಗ, ಅದು ಸವಿಕಲ್ಪ (ಬಹುರೂಪದ) ಜ್ಞಾನವೆನಿಸಿಕೊಳ್ಳುತ್ತದೆ. ಜ್ಞಾನವು ಒಂದೇ ಆಗಿದ್ದರೂ, ಅದು ವಿವಿಧ ರೂಪಗಳನ್ನು ಬೆಳಗುವಾಗ, ಬಹುರೂಪಿಯಾಗುತ್ತದೆ.

सङ्कल्पसंशयभ्रान्ति स्मृतिसादृश्यनिश्चयाः ।
ऊहोनध्यवसायश्च तथान्येनुभवा अपि ॥ १६ ॥

ಸಂಕಲ್ಪಸಂಶಯಭ್ರಾಂತಿ ಸ್ಮೃತಿಸಾದೃಶ್ಯನಿಶ್ಚಯಾಃ ।
ಊಹೋನಧ್ಯವಸಾಯಶ್ಚ ತಥಾನ್ಯೇನುಭವಾ ಅಪಿ ॥ 16 ॥

ಆಲೋಚನೆ, ಸಂಶಯ, ಭ್ರಾಂತಿ, ನೆನಪು, ಸಾದೃಶ್ಯತೆ, ಧೃಢತೆ, ಊಹೆ, ಅನಿಶ್ಚಯ ಮುಂತಾದವುಗಳು ಜ್ಞಾನದ ರೂಪಗಳು. [2–16]

ವಿವೃತ್ತಿ

ಜ್ಞಾನದ ಸ್ವರೂಪದಲ್ಲಿರುವ ಭೇದಭಾವಗಳು ಜ್ಞೇಯಾಕಾರವಾಗಿ ಅವಭಾಸವಾದ ಭೇದಗಳಾಗುವವು ಎಂಬ ಅಭಿಪ್ರಾಯ ದ್ಯೋತಕವಾಗಿ ಅನೇಕತೆಯನ್ನು ಹೇಳುತ್ತಾ, ಅದನ್ನು ಲೋಕಾನುಭವದಿಂದ ತಿಳಿಸುವ **ಸಂಕಲ್ಪೇತಿ.** ಇದನ್ನು ಇದರಿಂದ ಮಾಡುವೆನು ಎಂಬಂತಹ ಮನೋವೃತ್ತಿಯು ಸಂಕಲ್ಪವೆನಿಸಿದೆ. ಅನಿರ್ಧರಿತ ಅನೇಕತೆಯ ಜ್ಞಾನವು ಸಂಶಯವು. ಸಾದೃಶ್ಯವೆಂದರೆ ಇದು ಅದರಂತೆ ಇದೆ ಎಂಬ ತುಲನಾಕಾರದ ವೃತ್ತಿ, ಕಂಡುಬರುವ ಸಾಧರ್ಮ-ವೈಧರ್ಮ್ಯದಿಂದ, ಇನ್ನೊಂದನ್ನು ಉತ್ಪ್ರೇಕ್ಷಿಸುವುದು. ಕಂಡುಬರುವ ವಸ್ತುವಿನಲ್ಲಿ ಅನಿಶ್ಚಯತೆಯ ರೂಪದ ವೃತ್ತಿಯು ಅನಧ್ಯವಸಾಯ ಎನಿಸಿದೆ, ಇದು ಯಾವ ವೃಕ್ಷವಾಗಿರಬಹುದು? ಎಂಬ ಯೋಚನೆಯಂತೆ. ಉಳಿದವುಗಳಿಗೆ ಅರ್ಥವು ಪ್ರಸಿದ್ಧವಾಗಿಯೇ ಇದೆ. ಇವುಗಳು ವಿಶೇಷವಾಗಿ ಲೋಕದಲ್ಲಿ ಕಂಡುಬರುವ ಅನುಭವರೂಪವಾಗಿದ್ದು, ಇತರವುಗಳು ಯಥಾರ್ಥಜ್ಞಾನದ ಪ್ರಮಾರೂಪದಲ್ಲಿ ಪ್ರತ್ಯಕ್ಷ ಮುಂತಾದ ಭೇದದಿಂದ ಅನೇಕವಿಧವಾಗಿವೆ. [2–16]

‘ಪ್ರಮಸ್’ ಎಂದು ಹೇಳಲ್ಪಡುವ – ವಸ್ತುಸ್ಥಿತಿಯ ವಾಸ್ತವಿಕ ಜ್ಞಾನ – ಇತರ ಜ್ಞಾನದ ರೂಪಗಳಾಗಿವೆ. ಬೇರೆ ಬೇರೆ ಸಿದ್ಧಾಂತಗಳಲ್ಲಿ ಅವುಗಳನ್ನು ಹೀಗೆ ವಿವರಿಸಿವೆ:

प्रत्यक्षमेकं चार्वाकाः कणादसुगतौ पुनः ।
अनुमानञ्च तच्चापि साङ्ख्याश्शब्दञ्च ते अपि ॥ १७ ॥
न्यायैकदेशिनोप्येवमुपमानश्च के चन ।
अर्थापत्त्या सहैतानि चत्वार्याह प्रभाकरः ॥ १८ ॥
अभावषष्ठान्येतानि भाट्टा वेदान्तिनस्तथा ।
सम्भवैतिह्ययुक्तानि तानि पौराणिका जगुः ॥ १९ ॥

ಪ್ರತ್ಯಕ್ಷಮೇಕಂ ಚಾರ್ವಾಕಾಃ ಕಣಾದಸುಗತೌ ಪುನಃ ।
ಅನುಮಾನಂಚ ತಚ್ಚಾಪಿ ಸಾಂಖ್ಯಾಶ್ಶಬ್ದಂಚ ತೇ ಅಪಿ ॥ 17 ॥
ನ್ಯಾಯೈಕದೇಶಿನೋಪ್ಯೇವಮುಪಮಾನಶ್ಚ ಕೇ ಚನ ।
ಅರ್ಥಾಪತ್ತ್ಯಾ ಸಹೈತಾನಿ ಚತ್ವಾರ್ಯಾಹ ಪ್ರಭಾಕರಃ ॥ 18 ॥
ಅಭಾವಷಷ್ಠಾನ್ಯೇತಾನಿ ಭಾಟ್ಟಾ ವೇದಾಂತಿನಸ್ತಥಾ ।
ಸಂಭವೈತಿಹ್ಯಾಯುಕ್ತಾನಿ ತಾನಿ ಪೌರಾಣಿಕಾ ಜಗುಃ ॥ 19 ॥

ಚಾರ್ವಾಕರು ಪ್ರತ್ಯಕ್ಷವನ್ನು (ಸ್ವಂತ ಅನುಭವ) ಒಪ್ಪುತ್ತಾರೆ ಆದರೆ ಕಣಾದ ಮತ್ತು ಸುಗತರು ಅದರೊಂದಿಗೆ ಅನುಮಾನವನ್ನು (ತಾರ್ಕಿಕ ತಿಳುವಳಿಕೆ) ಬಯಸುತ್ತಾರೆ. ಸಾಂಖ್ಯರು ಅವೆರಡರೊಂದಿಗೆ ಶಬ್ದವನ್ನು (ವಾಚಿಕ ವಿವರಣೆ) ಸೇರಿಸುತ್ತಾರೆ.
ಕೆಲವು ನೈಯಾಯಿಕರು ಇದಕ್ಕೆ ಸಹಮತವನ್ನು ಹೊಂದಿದ್ದಾರೆ ಆದರೆ ಇತರ ನೈಯಾಯಿಕರು ಉಪಮಾನವನ್ನು (ಹೋಲಿಕೆ) ಸೇರಿಸುತ್ತಾರೆ. ಪ್ರಭಾಕರನು ಈ ನಾಲ್ಕರೊಂದಿಗೆ ಅರ್ಥಾಪತ್ತಿಯನ್ನೂ (ಪೂರ್ವಾಗ್ರಹ) ಹೇಳುತ್ತಾನೆ. ವೇದಾಂತಿಗಳು ಮತ್ತು ಭಾಟ್ಟಾನ ಅನುಚರರು ಆರನೆಯದಾಗಿ ಅಭಾವವನ್ನು (ಇಲ್ಲದಿರುವಿಕೆ) ಗುರುತಿಸುತ್ತಾರೆ; ಪೌರಾಣಿಕರು ಇವುಗಳೊಂದಿಗೆ ಸಂಭವ (ನಿಯತ) ಹಾಗೂ ಐತಿಹ್ಯವನ್ನೂ (ಇತಿಹಾಸ, ಸಂಪ್ರದಾಯ) ಕೂಡಿಸುತ್ತಾರೆ. [2–17..19]

ವಿವೃತ್ತಿ

ಅವುಗಳ ವಿವಿಧ ವಾದಗಳ ಪ್ರಕಾರಗಳನ್ನು ವಿವರಿಸುತ್ತಾ **ಪ್ರತ್ಯಕ್ಷಾದಿನಾ.** ಚಾರ್ವಾಕರು ದೃಷ್ಟವಾಗುವುದೇ ಪ್ರಮಾಣ ಎಂಬ ಬುದ್ಧಿಯವರು; ಅವರು ಇಂದ್ರಿಯಗಳ ನಿಷ್ಕರ್ಷೆಯಿಂದ ಉತ್ಪನ್ನವಾದ ಯಥಾರ್ಥಜ್ಞಾನವು ಪ್ರತ್ಯಕ್ಷವು ಎಂದು ಹೇಳುತ್ತಾರೆ. ***ಕಣಾದಃ*** ಷಟ್ಪದಾರ್ಥ ತತ್ತ್ವವಾದಿಗಳು. ***ಸುಗತಃ*** ಬುದ್ಧ, ಕ್ಷೀಣವಾಗುವ ಜ್ಞಾನರೂಪ ಎಂದು ತಿಳಿಯುವವರು. ಅವರಿಬ್ಬರೂ ***ಅನುಮಾನಂ*** ವಸ್ತುವ್ಯಾಪ್ತಿಯ ವಿಶಿಷ್ಟತೆ ಲಿಂಗ ಜ್ಞಾನ ಲಕ್ಷಣವನ್ನು ಮತ್ತು ಪ್ರತ್ಯಕ್ಷ ಎಂಬ ಎರಡು ಪ್ರಮಾಣಗಳನ್ನು ಬಯಸುವವರು. ***ಸಾಂಖ್ಯಾಃ*** ಇಪ್ಪತ್ತೈದು ತತ್ತ್ವಗಳಿವೆ ಎನ್ನುವವರು. ಅವರು ***ಶಬ್ದಃ*** ಆಪ್ತವಾಕ್ಯಲಕ್ಷಣವೆಂಬ ಪ್ರಮಾಣವನ್ನು ಮತ್ತು ಪ್ರತ್ಯಕ್ಷ, ಅನುಮಾನವನ್ನು, ಹೀಗೆ ಮೂರು ಪ್ರಮಾಣಗಳನ್ನು ಇಚ್ಛಿಸುತ್ತಾರೆ. ಅವರಂತೆ ಒಂದುಗುಂಪಿನ ನೈಯಾಯಿಕರು ಈ

ಮೂರನ್ನು ಬಯಸುತ್ತಾರೆ ಆದರೆ ಇತರ ನೈಯಾಯಿಕರು ಮತ್ತು ಗೌತಮೀಯರು ***ಉಪಮಾನಂ*** ಹಿಂದೆ ತಿಳಿಸಿರುವ ಮೂರರೊಡನೆ ನಾಲ್ಕನೆಯದಾಗಿ ದೇಶವಾಕ್ಯಾರ್ಥಜ್ಞಾನದಿಂದ ಸಹಕೃತವಾದ ಸಾದೃಶ್ಯ, ವಿಶಿಷ್ಟವಾದ ಪಿಂಡಜ್ಞಾನ ಲಕ್ಷಣದ ಪ್ರಮಾಣವನ್ನು ಇಚ್ಛಿಸುತ್ತಾರೆ. ***ಪ್ರಭಾಕರಃ*** ಒಂದು ಗುಂಪಿನ ಮೀಮಾಂಸಕರು ***ಅರ್ಥಾಪತ್ತಿ*** ಉಪಪಾದಿಸಲಾಗದ ಅರ್ಥವಿದೆಯೆಂದು ತಿಳಿದು, ಉಪಪಾದಿಸಲಾದ ಅರ್ಥದಿಂದ ಬೇರೆಯೇ ಆದ ಅರ್ಥವನ್ನು ಕಲ್ಪಿಸಿಕೊಳ್ಳುವ ನಾಲ್ಕನೆಯ ಲಕ್ಷಣವನ್ನು ಪ್ರತ್ಯಕ್ಷ ಮೊದಲಾದವುಗಳೊಡನೆ ಸೇರಿಸಿ ಐದನ್ನು ಪ್ರಮಾಣವೆಂದು ತಿಳಿಯುತ್ತಾರೆ. ಈ ಐದು ಪ್ರಮಾಣಗಳಿಗೆ ***ಅಭಾವಂ*** ಇಲ್ಲದಿರುವಿಕೆಯ ಲಕ್ಷಣವನ್ನು ಸೇರಿಸಿ, ಭಾಟ್ಟಮತ ಅನುಸಾರಿಗಳಾದ ಮೀಮಾಂಸಕರು ಆರನ್ನು ಪ್ರಮಾಣವಾಗಿ ಹೇಳುತ್ತಾರೆ. ವೇದಾಂತಿಗಳು ಕೂಡಾ ವ್ಯವಹಾರದಲ್ಲಿ ಹಾಗೆಯೇ ತಿಳಿದುಕೊಳ್ಳುವರು. ಹೀಗೆ ಹೇಳಿರುವ ಆರಕ್ಕೆ ಸಂಭವನೀಯತೆ ಮತ್ತು ಐತಿಹ್ಯಗಳನ್ನು ಕೂಡಿಸಿ ಎಂಟು ಪ್ರಮಾಣಗಳನ್ನು ಪೌರಾಣಿಕರು ಹೇಳುತ್ತಾರೆ. ಸಂಭವನೀಯತೆ ಎಂದರೆ ಆರು ದ್ರೋಣ (ಅಳತೆಯ ಮಾನ) ಬೀಜಗಳಿಂದ ಉತ್ಪತ್ತಿಯಾಗುವ ಬೆಳೆ; ಐತಿಹ್ಯ ಎಂದರೆ ಆ ವೃಕ್ಷದಲ್ಲಿ ಯಕ್ಷನಿದ್ದಾನೆ ಎಂಬಂತಹ ಪರಂಪರೆಯಲ್ಲಿ ಬಂದಿರುವಂತಹ ಜ್ಞಾನ ಎಂಬ ಭೇದವಿದೆ. [2–17..19]

ಚಾರ್ವಾಕರು: ಲೋಕಾಯತರೆಂದೂ ಕರೆಯಲ್ಪಡುವವರು, ಇಂದ್ರಿಯಗಳ ಅನುಭವಕ್ಕೆ ಬರುವ ವಸ್ತುಗಳನ್ನು ಹೊರತುಪಡಿಸಿ ಉಳಿದೆಲ್ಲವೂ ಅವಾಸ್ತವಿಕವೆಂದು ಹೇಳುವವರು. ಕಣಾದ: ವೈಶೇಷಿಕ ಸಿದ್ಧಾಂತದ ಜನಕ. ಸುಗತ: ಬುದ್ಧ, ಆತ್ಮವು ಕ್ಷಣದಿಂದ ಕ್ಷಣಕ್ಕೆ ಬದಲಾಗುವ ಜ್ಞಾನದ ವಿವಿಧ ಸ್ಥಿತಿಗಳ ಮೇಲೆ ನಿರ್ಭರವಾಗಿದೆ ಎಂದು ಪ್ರತಿಪಾದಿಸಿದವನು. ಸಾಂಖ್ಯರು: ಕಪಿಲ ಮತ್ತು ಪತಂಜಲಿಯ ಸಿದ್ಧಾಂತಗಳ ಅನುಚರರು. ನೈಯಾಯಿಕರು: ಗೌತಮನ ನ್ಯಾಯಶಾಸ್ತ್ರವನ್ನು ಅನುಸರಿಸುವವರು. ಪ್ರಭಾಕರ ಮತ್ತು ಭಾಟ್ಟ: ಜೈಮಿನಿಯ ಕರ್ಮ–ಮೀಮಾಂಸೆಯ ಎರಡು ವಿಭಿನ್ನ ಶಾಖೆಗಳ ಪ್ರವರ್ತಕರು. ವೇದಾಂತಿಗಳು: ಬ್ರಹ್ಮನ ಗುಣಗಳ ವಿಮರ್ಶೆ ಮಾಡುವ ಶಾರೀರಿಕ ಮೀಮಾಂಸದ ಕರ್ತೃವಾದ ಬಾದರಾಯಣನ ಅನುಚರರು. ಪೌರಾಣಿಕರು: ಪುರಾಣಗಳನ್ನು ಅವಲಂಬಿಸಿ, ತಮ್ಮ ಸಿದ್ಧಾಂತವನ್ನು ಪ್ರಚುರಪಡಿಸುವವರು.

ಪ್ರತ್ಯಕ್ಷ: ಭಾವನಾತ್ಮಕ ಗ್ರಹಿಕೆ; ಸ್ವಂತ ಅನುಭವ; ಬಾಹ್ಯ ವಸ್ತುಗಳೊಡನೆ ಸಂಪರ್ಕಕ್ಕೆ ಬರುವ ಇಂದ್ರಿಯಗಳು ನೀಡುವ ಜ್ಞಾನ; ಕಣ್ಣುಗಳು ನೀಡುವ ಬಣ್ಣದ ಗ್ರಹಿಕೆ ಇತ್ಯಾದಿ.

ಅನುಮಾನ: ತಾರ್ಕಿಕ ತಿಳುವಳಿಕೆಯ ಮೂಲಕ ಪಡೆಯುವ ಸರಿಯಾದ ಜ್ಞಾನ. ಮೊದಲಾಗಿ ಗಮನವಿಟ್ಟು ನೋಡುವುದರಿಂದ, ಹೊಗೆಯಿದ್ದಲ್ಲಿ ಬೆಂಕಿ ಇರಬೇಕೆಂದು ತಿಳಿಯುತ್ತೇವೆ. ಅನಂತರ, ಹೊಗೆಯನ್ನು ಎಲ್ಲಾದರೂ ಕಂಡರೆ, ಅಲ್ಲಿ ಬೆಂಕಿಯಿದೆಯೆಂದು ನಿರ್ಧರಿಸುತ್ತೇವೆ. ಬೆಂಕಿಯ ಅಸ್ತಿತ್ವವನ್ನು ತರ್ಕದ ಮೂಲಕ ತಿಳಿಯುತ್ತೇವೆ.

ಶಬ್ದ: ನಂಬಬಹುದಾದ ಮೂಲಗಳಿಂದ ಪಡೆದ ವಾಚಿಕ ವಿವರಣೆಗಳಿಂದ ಗಳಿಸಿದ ಸರಿಯಾದ ಜ್ಞಾನ.

ಉಪಮಾನ: ವಸ್ತುಗಳ ಹೋಲಿಕೆಯಿಂದ ಪಡೆದ ಸರಿಯಾದ ಜ್ಞಾನ. ಒಬ್ಬನು ಆಕಳನ್ನು ನೋಡಿರುತ್ತಾನೆ ಹಾಗೂ ಕಡವೆಯು (ಕಾಡುಪ್ರಾಣಿ) ಆಕಳಿನಂತೆ ಇದೆಯೆಂದು ಕೇಳಿರುತ್ತಾನೆ. ಅವನು ಕಾಡಿನಲ್ಲಿ ಸಂಚರಿಸುವಾಗ ಆಕಳಿನಂತಹ ಪ್ರಾಣಿಯನ್ನು ನೋಡಿ, ಅದು ಕಡವೆಯೆಂದು ನಿಶ್ಚಯಿಸುತ್ತಾನೆ.

ಅರ್ಥಪತ್ತಿ: ಪೂರ್ವಾಗ್ರಹಗಳಿಂದ ಪಡೆದ ಸರಿಯಾದ ಜ್ಞಾನ; ಒಂದು ವಸ್ತುವಿನ ತಿಳುವಳಿಕೆಯಿಂದ ಪಡೆದ ಬೇರೊಂದು ವಸ್ತುವಿನ ಜ್ಞಾನ. ಒಬ್ಬ ಧಢೂತಿ ಮನುಷ್ಯ, ದಿನದಲ್ಲಿ ಊಟಮಾಡದಿದ್ದರೆ, ಅವನ ಧಢೂತಿತನಕ್ಕೆ ಕಾರಣ ಅವನ ರಾತ್ರೆಯ ಆಹಾರ ಸೇವನೆಯಾಗಿರಬೇಕು. ಇದರಿಂದ ಅವನು ರಾತ್ರೆ ಊಟಮಾಡುತ್ತಾನೆ ಎಂದು ತಿಳಿಯಬಹುದು.

ಅಭಾವ: ಒಂದು ವಸ್ತುವಿನ ಅನುಪಸ್ಥಿತಿ; ಅದು ಇದ್ದಿದ್ದರೆ ಅನುಭವಕ್ಕೆ ಬರಬೇಕಿತ್ತು. ಒಂದು ಬೆಳಕುತುಂಬಿದ ಕೋಣೆಯಲ್ಲಿ, ಮಡಕೆಯನ್ನು ಕಾಣದಿದ್ದರೆ, ನಾವು ಅದರ ಅನುಪಸ್ಥಿತಿಯನ್ನು ಅನುಭವಿಸುತ್ತೇವೆ.

ಸಂಭವ: ಪೂರ್ಣ ವಸ್ತುವಿನ ತಿಳುವಳಿಕೆಯಿದ್ದಾಗ, ಅದರ ಒಂದು ಭಾಗದ ಅಸ್ತಿತ್ವದ ಅರಿವು. ಒಬ್ಬನ ಬಳಿ ನೂರು ರೂಪಾಯಿ ಇದೆಯೆಂದು ಅರಿತರೆ, ಅವನ ಬಳಿ ಹತ್ತು ರೂಪಾಯಿ ಇದೆಯೆಂಬ ತಿಳುವಳಿಕೆ.

ಐತಿಹ್ಯ: ತಲೆತಲಾಂತರದಿಂದ ಬಂದ ಸಂಪ್ರದಾಯದ ಮೂಲಕ ಪಡೆದ ಸರಿಯಾದ ಜ್ಞಾನ. ಒಂದು ಮರದಲ್ಲಿ ವಾಸವಾಗಿರುವ ಒಬ್ಬ ಯಕ್ಷನ (ದೃಷ್ಟಿಗೋಚರವಾಗದ ವಸ್ತು) ಅರಿವು.

ಈ ಪದಗಳು 'ಪ್ರಮ' ಯಾ ಸರಿಯಾದ ತಿಳುವಳಿಕೆಯ ಗಳಿಕೆಗೆ ಹಾಗೂ 'ಪ್ರಮಾಣ' ಅಂದರೆ ಅಂತಹ ತಿಳುವಳಿಕೆಯನ್ನು ಪಡೆಯುವ ದಾರಿಗೆ ಸಂಬಂಧಿಸಿವೆ. ಸ್ವಂತ ಅನುಭವವನ್ನು ಹೊರತುಪಡಿಸಿ, ಇತರೆಲ್ಲದರ ಜ್ಞಾನವು ಅವಾಸ್ತವಿಕ ಹಾಗೂ ನಂಬಲಸಾಧ್ಯವೆಂದು ಚಾರ್ವಾಕರು ಧೃಢವಾಗಿ ಪ್ರತಿಪಾದಿಸಿದರೂ, ಇತರರು ಈ ಎಂಟು ವಿಧದ ಜ್ಞಾನ ಮೂಲಗಳಲ್ಲಿ ಒಂದು ಯಾ ಹಲವನ್ನು ಜ್ಞಾನದ ಸ್ವತಂತ್ರ ಮೂಲವೆಂದು ಪರಿಗಣಿಸಿದ್ದಾರೆ.

ವೈಶೇಷಿಕರ ವಿಭಾಗಗಳು

द्रव्यं गुणस्तथा कर्म सामान्यं सविशेषकम् ।
समवायं च काणादाः पदार्थान्षट्प्रचक्षते ॥ २० ॥

ದ್ರವ್ಯಂ ಗುಣಸ್ತಥಾ ಕರ್ಮ ಸಾಮಾನ್ಯಂ ಸವಿಶೇಷಕಮ್ ।
ಸಮವಾಯಂ ಚ ಕಾಣಾದಾಃ ಪದಾರ್ಥಾನ್ಷಟ್ಪ್ರಚಕ್ಷತೇ ॥ 20 ॥

ಕಣಾದನ ಅನುಚರರು ಆರು ಬಗೆಯಾಗಿ ಪದಾರ್ಥಗಳನ್ನು ವಿಭಾಗಿಸಿದ್ದಾರೆ: (1) ದ್ರವ್ಯ, ಮೂಲವಸ್ತು (2) ಗುಣ, (3) ಕರ್ಮ, ಚಲನೆ ಯಾ ಕ್ರಿಯೆ (4) ಸಾಮಾನ್ಯ, ಗುಂಪು ಯಾ ಜಾತಿ (5) ವಿಶೇಷ, ವ್ಯತ್ಯಾಸ (6) ಸಮವಾಯ, ಸಂಬಂಧ ಯಾ ಒಂದೇರೀತಿಯ ಮೂಲತತ್ವ. [2–20]

ವಿವೃತ್ತಿ

ಪ್ರಮಾಣವಾದಿಗಳಲ್ಲಿ ತತ್ತ್ವ ವಿಭಾಗಗಳನ್ನು ಹೇಳುವ ವೈಶೇಷಿಕಮತವನ್ನು ತಿಳಿಸುತ್ತಾ **ದ್ರವ್ಯಮಿತ್ಯಾದಿನಾ.** ಗುಣವಿರುವ ದ್ರವ್ಯ, ಜಾತಿಯ ಆಶ್ರಯತ್ವದಿಂದ ಸತ್ಯಸ್ಪಂದನೆಯ ಗುಣ, ಚಲನೆ ರೂಪದ ಕರ್ಮ, ನಿತ್ಯ ಅನೇಕವಿರುವ ಸಾಮಾನ್ಯ, ನಿತ್ಯದ್ರವ್ಯವನ್ನು ಆಶ್ರಯಿಸಿರುವ ವಿಶೇಷ, ನಿತ್ಯಸಂಬಂಧವಿರುವ ಸಮವಾಯ. ಹೀಗೆ ಲಕ್ಷಣಭೇದದಿಂದ ಭಿನ್ನವಾಗಿರುವ ಆರು ಪದಾರ್ಥಗಳಿವೆ ಎಂದು ಹೇಳುತ್ತಾರೆ. [2–20]

नव द्रव्याणि भूतानि दिक्कालात्ममनांसि च ।
चतुर्विंशतिरेव स्युर्गुणाश्शब्दादिपञ्चकम् ॥ २१ ॥
परिमाणं च सङ्ख्या च द्वौ संयोगविभागकौ ।
स्वभावतः पृथक्त्वं च गुरुत्वं द्रवता पुनः ॥ २२ ॥
परत्वं चापरत्वं च स्नेहस्संस्कार इत्यपि ।

धीद्वेषसुखदुःखेच्छाधर्माधर्मप्रयत्नकाः ॥ २३ ॥

ನವ ದ್ರವ್ಯಾಣಿ ಭೂತಾನಿ ದಿಕ್ಕಾಲಾತ್ಮಮನಾಂಸಿ ಚ ।
ಚತುರ್ವಿಂಶತಿರೇವ ಸ್ಯುರ್ಗುಣಾಶ್ಶಬ್ದಾದಿಪಂಚಕಮ್ ॥ 21 ॥
ಪರಿಮಾಣಂ ಚ ಸಂಖ್ಯಾ ಚ ದ್ವೌ ಸಂಯೋಗವಿಭಾಗಕೌ ।
ಸ್ವಭಾವತಃ ಪೃಥಕ್ತ್ವಂ ಚ ಗುರುತ್ವಂ ದ್ರವತಾ ಪುನಃ ॥ 22 ॥
ಪರತ್ವಂ ಚಾಪರತ್ವಂ ಚ ಸ್ನೇಹಸ್ಸಂಸ್ಕಾರ ಇತ್ಯಪಿ ।
ಧೀಧ್ವೇಷಸುಖದುಃಖೇಚ್ಛಾಧರ್ಮಾಧರ್ಮಪ್ರಯತ್ನಕಾಃ ॥ 23 ॥

ಮೂಲವಸ್ತುಗಳು ಒಂಭತ್ತಿವೆ – ಪಂಚಭೂತಗಳು (ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ), ದಿಕ್ಕುಗಳು, ಕಾಲ (ಸಮಯ), ಆತ್ಮ, ಮನಸು. ಗುಣಗಳು ಇಪ್ಪತ್ತನಾಲ್ಕು – ಶಬ್ದ, ಸ್ಪರ್ಶ, ರೂಪ, ರಸ (ರುಚಿ), ಗಂಧ (ಪರಿಮಳ), ಪರಿಮಾಣ (ಆವರಿಸಿಕೊಳ್ಳುವ ಸ್ಥಳ), ಸಂಖ್ಯೆ, ಸಂಯೋಗ (ಜೋಡಣೆ), ವಿಭಾಗ (ಬೇರೆಯಾಗುವಿಕೆ), ಪೃಥಕ್ತ್ವ (ಪರಸ್ಪರ ಬೇರೆಯಾಗಿರುವಿಕೆ), ಗುರುತ್ವ (ತೂಕ), ದ್ರವತ್ವ, ಪರತ್ವ (ಮೊದಲ ಗುರಿ), ಅಪರತ್ವ (ಕೊನೆಯ ಗುರಿ), ಸ್ನೇಹ, ಸಂಸ್ಕಾರ, ಧೀ (ಅರಿತುಕೊಳ್ಳುವಿಕೆ), ದ್ವೇಷ, ಸುಖ, ದುಃಖ, ಇಚ್ಛೆ (ಬಯಕೆ), ಧರ್ಮ, ಅಧರ್ಮ, ಪ್ರಯತ್ನ. [2–21..23]

ವಿವೃತ್ತಿ

ಅದರಲ್ಲಿ ದ್ರವ್ಯಭೇದಗಳನ್ನು ತಿಳಿಸುವ **ನವೇತಿ.** ಪೃಥ್ವೀ ಮುಂತಾದ ಪಂಚಭೂತಗಳು, ದಿಕ್ಕು, ಕಾಲ, ಆತ್ಮ, ಮನಸು ಇವು ಒಂಭತ್ತು ದ್ರವ್ಯಗಳು. ಗುಣವಿಭಾಗಗಳನ್ನು ತಿಳಿಸುತ್ತಾ **ಚತುರ್ವಿಂಶತಿ ಇತಿ.** ಶಬ್ದ ಮೊದಲಾದ ಐದು (ಶಬ್ದ, ಸ್ಪರ್ಶ, ರೂಪ ರಸ, ಗಂಧ), ಪರಿಮಾಣ (ಅಣು, ಹ್ರಸ್ವ, ಮಹತ್, ದೀರ್ಘ), ಸಂಖ್ಯೆ, ಸಂಯೋಗ–ವಿಭಾಗ, ಪೃಥಕ್ತ್ವ (ವ್ಯವಹಾರದಲ್ಲಿ ಪ್ರತ್ಯೇಕವಾಗಿರುವುದು, ಸ್ವಭಾವತ ಅಂದರೆ ಆಕಾಶ ಮುಂತಾದ ರೂಪದಲ್ಲಿರುವ ಭೇದಗಳು, ಪರಸ್ಪರ ಸ್ಪರ್ಧಿಸುವ ಭೇದಗಳಲ್ಲ), ಗುರುತ್ವ, ದ್ರವತ್ವ, ಪರತ್ವ, ಅಪರತ್ವ, ಸ್ನೇಹ (ಸ್ನಿಗ್ಧತೆ), ಸಂಸ್ಕಾರ, ಧೀ (ಬುದ್ಧಿ), ದ್ವೇಷ (ಅಸಹಿಷ್ಣುತೆ), ಸುಖ, ದುಃಖ, ಇಚ್ಛೆ, ಧರ್ಮ (ವಿಹಿತ ಕ್ರಿಯೆಯಿಂದ ಜನಿಸಿದ ಅತೀಂದ್ರಿಯ ಗುಣ), ಅಧರ್ಮ (ನಿಷಿದ್ಧ ಕ್ರಿಯೆಯಿಂದ ಜನಿಸಿದ ಅತೀಂದ್ರಿಯ ಗುಣ), ಪ್ರಯತ್ನ (ಉತ್ಸಾಹ) ಎಂಬ ಇಪ್ಪತ್ತನಾಲ್ಕು ಗುಣಗಳು. [2–21..23]

संस्कारस्त्रिविधो वेग इष्वादेर्गतिकारणम् ।
दृष्टश्रुतानुभूतार्थस्मृतिहेतुश्च भावना ॥ २४ ॥
स्थितस्थापकता नाम पूर्वस्थिति कारणम् ।
आकृष्टशाखाभूर्जादौ स्पष्टमेवोपलक्ष्यते ॥ २५ ॥

ಸಂಸ್ಕಾರಸ್ತ್ರಿವಿಧೋ ವೇಗ ಇಷ್ವಾದೇರ್ಗತಿಕಾರಣಮ್ ।
ದೃಷ್ಟಶ್ರುತಾನುಭೂತಾರ್ಥಸ್ಮೃತಿಹೇತುಶ್ಚ ಭಾವನಾ ॥ 24 ॥
ಸ್ಥಿತಸ್ಥಾಪಕತಾ ನಾಮ ಪೂರ್ವಸ್ಥಿತಿಕಾರಣಮ್ ।

ಆಕೃಷ್ಟಶಾಖಾಭೂರ್ಜಾದೌ ಸ್ಪಷ್ಟಮೇವೋಪಲಕ್ಷ್ಯತೇ ॥ 25 ॥

ಸಂಸ್ಕಾರಗಳು ಮೂರು ವಿಧ – (1) ವೇಗ, ಬಾಣವನ್ನು ಹಾರಿಸುವಂತಹ ಇತ್ಯಾದಿ (2) ಭಾವನೆ, ನೋಡಿದ ಕೇಳಿದ ಅನುಭವದಿಂದ ಬರುವ ಅಂತರ್ಭೂತವಾಗಿರುವ ಸಂವೇದನೆ, ಅನುಕೂಲಕರ ಸಂದರ್ಭಗಳಲ್ಲಿ ನೆನಪಿಸಲಾಗುವ. (3) ಸ್ಥಿತಿಸ್ಥಾಪಕತೆ, ತನ್ನ ಮೊದಲಿನ ಸ್ಥಿತಿಗೆ ಮರಳುವಂತಹ (ಮರದ ಗೆಲ್ಲನ್ನು ಎಳೆದು ಬಿಟ್ಟಾಗ ಅದು ತನ್ನ ಹಿಂದಿನ ಸ್ಥಾನಕ್ಕೆ ಮರಳುವಂತೆ). [2–24..25]

ವಿವೃತ್ತಿ

ಅವುಗಳಲ್ಲಿ ಸಂಸ್ಕಾರವನ್ನು ವಿಭಜಿಸುತ್ತಾ **ಸಂಸ್ಕಾರಸ್ತ್ರಿವಿಧ ಇತಿ.** ವೇಗ – ಬಿಲ್ಲಿನಿಂದ ಪ್ರಯೋಗಿಸಿದ ಬಾಣಕ್ಕೆ ಚಲನೆಯನ್ನು ನಿರ್ಧರಿಸುವಂತಹದು, ಭಾವನೆ – ಕಂಡುಕೇಳಿದ ಅನುಭೂತಿಯ ವಿಷಯಕವಾದ ನೆನಪಿಗೆ ಕಾರಣವಾಗುವಂತಹದು, ಸ್ಥಿತಿಸ್ಥಾಪಕತ್ವ – ತನ್ನ ಮೊದಲಿನ ಸ್ಥಿತಿಗೆ ಮರಳುವಂತಹ ಕೌಶಲ್ಯ, ಎಳೆದು ಬಿಟ್ಟಂತಹ ಗೆಲ್ಲು, ಎಲೆ ಮುಂತಾದವುಗಳು. [2–24..25]

उत्क्षेपणमवक्षेपो गमनं च प्रसारणम् ।
आकुञ्चनमिति प्राहुः कर्म पञ्चविधं बुधाः ॥ २६ ॥

ಉತ್ಕ್ಷೇಪಣಮವಕ್ಷೇಪೋ ಗಮನಂ ಚ ಪ್ರಸಾರಣಮ್ ।
ಆಕುಂಚನಮಿತಿ ಪ್ರಾಹುಃ ಕರ್ಮ ಪಂಚವಿಧಂ ಬುಧಾಃ ॥ 26 ॥

ಬುದ್ಧಿವಂತರು ಐದು ತರಹದ ಚಲನೆ ಯಾ ಕ್ರಿಯೆಗಳನ್ನು ಹೇಳಿದ್ದಾರೆ – (1) ಉತ್ಕ್ಷೇಪ, ಮೇಲೆ ಎಸೆತ (2) ಅವಕ್ಷೇಪ, ಕೆಳಗೆ ಎಸೆಯುವುದು (3) ಗಮನ, ಹೋಗುವಿಕೆ (4) ಪ್ರಸರಣ, ವಿಸ್ತರಿಸುವಿಕೆ (5) ಆಕುಂಚನ, ಕುಂಠಿತಗೊಳ್ಳುವಿಕೆ. [2–26]

ವಿವೃತ್ತಿ

ಕರ್ಮ ವಿಭಾಗಗಳನ್ನು ಹೇಳಿದೆ. ಅರ್ಥವು ಸ್ಪಷ್ಟವಾಗಿದೆ. [2–26]

सामान्यं द्विविधं प्रोक्तं परं चापरमेव च ।
परं सत्तैव सर्वत्र तदनुस्यूतवर्तनम् ॥ २७ ॥
द्रव्यत्वं च गुणत्वाद्यं सामान्यमपरं तथा ।

ಸಾಮಾನ್ಯಂ ದ್ವಿವಿಧಂ ಪ್ರೋಕ್ತಂ ಪರಂ ಚಾಪರಮೇವ ಚ ।
ಪರಂ ಸತ್ತೈವ ಸರ್ವತ್ರ ತದನುಸ್ಯೂತವರ್ತನಮ್ ॥ 27 ॥
ದ್ರವ್ಯತ್ವಂ ಚ ಗುಣತ್ವಾದ್ಯಂ ಸಾಮಾನ್ಯಮಪರಂ ತಥಾ ।

ಜಾತಿಗಳು ಎರಡಿವೆ – ಪರ, ಮೇಲಿನ ಸ್ತರದ, ಸತ್ ಯಾ ಅಸ್ತಿತ್ವದಂತೆ; ಅಪರ, ಕೆಳಗಿನ ಸ್ತರದ, ವಸ್ತುಗಳ ಗುಂಪು, ಗುಣಗಳ ಗುಂಪು ಇತ್ಯಾದಿಗಳಂತೆ. [2–27..28]

ವಿವೃತ್ತಿ

ಸಾಮಾನ್ಯವನ್ನು ವಿಭಜಿಸುತ್ತಾ **ಸಾಮಾನ್ಯಮಿತಿ.** ಸತ್‌ನಂತೆ ವ್ಯಾಪಕವಾಗಿರುವ ಪರ ಮತ್ತು ದ್ರವ್ಯಗುಣದಂತೆ ವಸ್ತುಗತವಾಗಿರುವ ಅಪರ. [2–27..28]

विशेषास्युरनन्तास्ते व्यावृत्तिज्ञानहेतवः ॥ २८ ॥

ವಿಶೇಷಾಸ್ಯುರನಂತಾಸ್ತೇ ವ್ಯಾವೃತ್ತಿಜ್ಞಾನಹೇತವಃ ॥ 28 ॥

ವಿಶೇಷಗಳು, ವ್ಯತ್ಯಾಸಗಳು, ಅನಂತವಾಗಿವೆ; ಅವು ವಸ್ತುಗಳನ್ನು ವಿಭಾಗಿಸಿ, ಒಂದು ಇನ್ನೊಂದರಿಂದ ಹೇಗೆ ಬೇರೆ ಎಂದು ತೋರಿಸುತ್ತವೆ. [2–28]

ವಿವೃತ್ತಿ

ವಿಶೇಷಗಳು ಅನಂತವಾಗಿದ್ದು, ವಿವರಣಾಜ್ಞಾನವನ್ನು ಒದಗಿಸುತ್ತವೆ. [2–28]

ಮನಸು, ಆತ್ಮ, ಕಾಲ, ಆಕಾಶ; ಭೂಮಿ, ನೀರು, ಅಗ್ನಿ, ಗಾಳಿಗಳ ಪರಮಾಣುಗಳಂತಹ ಶಾಶ್ವತ ವಸ್ತುಗಳಲ್ಲಿ ಅವು ಇರುತ್ತವೆ.

रूपस्येव घटे नित्यः संबन्धस्समवायकः ।

ರೂಪಸ್ಯೇವ ಘಟೇ ನಿತ್ಯಃ ಸಂಬಂಧಸ್ಸಮವಾಯಕಃ ।

ಸಮವಾಯ ಅಂದರೆ ನಿತ್ಯ ಸಂಬಂಧ, ಗಡಿಗೆಗೆ ಅದರ ರೂಪ ಅಥವಾ ಬಣ್ಣದೊಡನಿರುವಂತೆ. [2–29]

ವಿವೃತ್ತಿ

ನಿತ್ಯಸಂಬಂಧವು ಸಮವಾಯಕ ಎನಿಸುತ್ತದೆ, ಮಡಕೆಗೆ ಅದರ ರೂಪದೊಡನಿರುವಂತೆ. [2–29]

ಸಂಯುಕ್ತ ಮತ್ತು ಅದರ ಭಾಗಗಳು, ವಸ್ತು ಮತ್ತು ಅದರ ಗುಣಗಳು, ಕ್ರಿಯೆ ಮತ್ತು ಅದರ ಕರ್ತೃ, ಗುಂಪು ಮತ್ತು ಏಕ, ವಿಶೇಷಗಳು ಮತ್ತು ಮೂಲವಸ್ತು ಇವುಗಳು ಜೊತೆಯಾಗಿ, ಅತೀ ಹತ್ತಿರದ ಸಂಬಂಧವನ್ನು ಹೊಂದಿರುತ್ತವೆ.

कालाकाशदिगात्मानो नित्याश्च विभवश्च ते ॥ २९ ॥
चतुर्विधाः परिच्छिन्ना नित्याश्च परमाणवः ।

ಕಾಲಾಕಾಶದಿಗಾತ್ಮಾನೋ ನಿತ್ಯಾಶ್ಚ ವಿಭವಶ್ಚ ತೇ ॥ 29 ॥
ಚತುರ್ವಿಧಾಃ ಪರಿಚ್ಛಿನ್ನಾ ನಿತ್ಯಾಶ್ಚ ಪರಮಾಣವಃ ।

ಕಾಲ, ಆಕಾಶ, ದಿಕ್ಕುಗಳು ಮತ್ತು ಆತ್ಮನು ನಿತ್ಯವೂ, ಎಲ್ಲವನ್ನು ಆವರಿಸಿಯೂ ಇರುತ್ತವೆ. ನಾಲ್ಕು ವಿಧದ ಪರಮಾಣುಗಳು, ಅತೀ ಸೂಕ್ಷ್ಮವಾಗಿ ನಿತ್ಯವಾಗಿವೆ. [2–29..30]

ವಿವೃತ್ತಿ

ಹೇಳಿರುವ ಕಾಲ ಮುಂತಾದ ಒಂಬತ್ತು ದ್ರವ್ಯಗಳ ನಿತ್ಯಾನಿತ್ಯತೆ ಯನ್ನು ತಿಳಿಸುವುದು. [2–30]

इति वैशेषिकमते पदार्थषट्प्रकीर्तिताः ॥ ३० ॥

ಇತಿ ವೈಶೇಷಿಕಮತೇ ಪದಾರ್ಥಷ್ಷಟ್ಪ್ರಕೀರ್ತಿತಾಃ ॥ 30 ॥

ವೈಶೇಷಿಕರ ಮತದಂತೆ ಪದಾರ್ಥಗಳ ಆರು ವಿಧಗಳನ್ನು ತಿಳಿಸಿದ್ದಾಯಿತು. [2–30]

ವಿವೃತ್ತಿ

ವೈಶೇಷಿಕರ ಕಲ್ಪನೆಯನ್ನು ಸಂಕ್ಷೇಪವಾಗಿ ತಿಳಿಸಿ ಉಪಸಂಹರಿಸುತ್ತದೆ. [2–30]

ಸಾಂಖ್ಯರ ವಿಭಾಗಗಳು

ವಾರ್ತಿಕಕಾರರು ಮುಂದುವರೆದು ಸಾಂಖ್ಯರ ಪದಾರ್ಥ ವಿಭಾಗಗಳನ್ನು ಚರ್ಚಿಸುತ್ತಾರೆ.

माया प्रधानमव्यक्तमविद्याऽज्ञानमक्षरम् ।
अव्याकृतं च प्रकृतिः तम इत्यभिधीयते ॥ ३१ ॥
माययां ब्रह्मचैतन्यप्रतिबिम्बानुषङ्गतः ।
महत्कालपुमांसस्स्युः महत्तत्त्वादहङ्कृतिः ॥ ३२ ॥

ಮಾಯಾ ಪ್ರಧಾನಮವ್ಯಕ್ತಮವಿದ್ಯಾಽಜ್ಞಾನಮಕ್ಷರಮ್ ।
ಅವ್ಯಾಕೃತಂ ಚ ಪ್ರಕೃತಿಃ ತಮ ಇತ್ಯಭಿಧೀಯತೇ ॥ 31 ॥
ಮಾಯಯಾಂ ಬ್ರಹ್ಮಚೈತನ್ಯಪ್ರತಿಬಿಂಬಾನುಷಂಗತಃ ।
ಮಹತ್ಕಾಲಪುಮಾಂಸಸ್ಸ್ಯುಃ ಮಹತ್ತತ್ತ್ವಾದಹಂಕೃತಿಃ ॥ 32 ॥

ಪ್ರಧಾನ (ಮೂಲ ವಸ್ತು), ಅವ್ಯಕ್ತ (ಅಪ್ರಕಟಿತ), ಅವಿದ್ಯೆ (ಮಿಥ್ಯಾ ಜ್ಞಾನ), ಅಜ್ಞಾನ (ಅರಿವಿನ ಕೊರತೆ), ಅಕ್ಷರ (ನಾಶವಾಗದ), ಅವ್ಯಾಕೃತ (ವ್ಯತ್ಯಾಸವಿಲ್ಲದ), ಪ್ರಕೃತಿ (ದ್ರವ್ಯ ಕಾರಣ), ತಮಸ್ (ಕತ್ತಲೆ) ಎಂದು ಮಾಯೆಯನ್ನು ಹೆಸರಿಸಿದ್ದಾರೆ. [2–31]

ಬ್ರಹ್ಮನ ಚೈತನ್ಯವು ಮಾಯೆಯಲ್ಲಿ ಪ್ರತಿಬಿಂಬಿಸಿದಾಗ, ಮಹತ್, ಕಾಲ ಮತ್ತು ಪುರುಷನ ಆವಿರ್ಭಾವವಾಗುತ್ತದೆ; ಮಹತ್ ತತ್ತ್ವದಿಂದ ಅಹಂಕಾರ ಉಂಟಾಗುತ್ತದೆ. [2–32]

ವಿವೃತ್ತಿ

ಇದರಲ್ಲಿ ಸಾಂಖ್ಯರ ಕಲ್ಪನೆಯ ಈಶ್ವರನನ್ನು ವಿವರಿಸುತ್ತಾ **ಮಾಯಾಪ್ರಧಾನಮಿತ್ಯಾದಿನಾ.** ಮಾಯೆ ಎಂಬ ಶಬ್ದವು ಶ್ರುತಿ, ಸ್ಮೃತಿ, ಪುರಾಣಗಳ ಮೂಲಪ್ರಕೃತಿಯನ್ನು ಸೂಚಿಸುತ್ತದೆ. ಮಾಯೆಯನ್ನು ***ಬ್ರಹ್ಮಚೈತನ್ಯ ಪ್ರತಿಬಿಂಬಃ*** ಅದರಲ್ಲಿ ಅಧಿಷ್ಠಿತವಾಗಿರುವ ಈಶ್ವರಚೈತನ್ಯದ ಪ್ರತಿಬಿಂಬ ಎಂದು, ಅದರ ಸಂಸರ್ಗದಿಂದ ಮಹತ್, ಕಾಲ,

ಪುರುಷ ಎಂಬ ಮೂರು ಪದಾರ್ಥಗಳು ಸೃಷ್ಟಿಯಾಗುತ್ತವೆ. ಕಾಲವು ಗುಣಕ್ಷೋಭಕ, ಬದಲಾವಣೆಯನ್ನು ಪ್ರೇರೇಪಿಸುವಂತಹದು. ಪುರುಷನು ಕಾರ್ಯವಾಗಿರುವ ಜೀವನು. ಅದರಲ್ಲಿ ಕಾಲವು ಪ್ರಕೃತಿ ಸೇರಿರುವ ಬ್ರಹ್ಮಚೈತನ್ಯದ ಒಂದು ಅವಸ್ಥಾವಿಶೇಷ. ಸಂಸಾರದಲ್ಲಿ ಸ್ವತಂತ್ರ, ಅನಾದಿಯಾಗಿರುವ ಪುರುಷನು ಜೀವನೆನಿಸುತ್ತಾನೆ. ಮಹತ್‌ತತ್ತ್ವವು ಪ್ರಕೃತಿಯ ಪ್ರಥಮ ವಿಕಾರವಾಗಿ, ಭೋಕ್ತೃತ್ವದಿಂದ ಕೂಡಿರುವುದು. ಮಹತ್‌ನ ಅಹಂಭಾವದಿಂದ ಅಹಂಕಾರವು ಜನಿಸುವುದು. [2–31..32]

ಶ್ರುತಿ, ಸ್ಮೃತಿ ಮತ್ತು ಪುರಾಣಗಳಲ್ಲಿ ಮೂಲಪ್ರಕೃತಿಯನ್ನು (ವಿಶ್ವದ ಮೂಲ ದ್ರವ್ಯಕಾರಣ ವಸ್ತು) ಈ ಹೆಸರುಗಳಿಂದ ಕರೆದಿದ್ದಾರೆ. ಮಾಯೆಯನ್ನು ನಿಯಂತ್ರಿಸುವ ಈಶ್ವರನ ಚೈತನ್ಯವು ಅದರೊಳಗೆ ಪ್ರವೇಶಿಸಿದಾಗ ಮೂರು ತತ್ತ್ವಗಳ ಉಗಮವಾಗುತ್ತದೆ: ಕಾಲ, ಪ್ರಕೃತಿಯ ಗುಣ-ವಿಶೇಷಗಳಲ್ಲಿ ಬದಲಾವಣೆಯನ್ನು ಉಂಟುಮಾಡುವಂತಹದು; ಚೈತನ್ಯದ ಒಂದು ಸ್ಥಿತಿ. ಕಾಲದ ಪ್ರಭಾವದಿಂದ, ಪ್ರಕೃತಿಯು ಮಹತ್‌ತತ್ತ್ವವಾಗಿ (ಜ್ಞಾನ) ಪರಿವರ್ತನೆಗೊಳ್ಳುವುದು; ಪ್ರಕೃತಿಯ ಈ ಪ್ರಥಮ ಬೆಳವಣಿಗೆಯನ್ನು ಹಿನ್ನೆಲೆಯಾಗಿಟ್ಟುಕೊಂಡು, ಜೀವ ಯಾ ಪುರುಷನ ಉಗಮವಾಗುವುದು. ಪ್ರತಿಯೊಬ್ಬ ಪುರುಷನೂ ಸ್ವತಂತ್ರ ಹಾಗೂ ನಿತ್ಯನಾಗಿರುತ್ತಾನೆ; ಅವರು ಎಲ್ಲಾ ಸೃಜಿಸಲ್ಪಟ್ಟ ವಸ್ತುಗಳನ್ನು ಆವರಿಸಿಕೊಳ್ಳುತ್ತಾರೆ. ಸಂಸಾರವು ಅವರ ಬೆಳವಣಿಗೆ ಮತ್ತು ಲಾಭಕ್ಕಾಗಿದೆ; ಅವರು ಪ್ರಕೃತಿಯ ಬದಲಾವಣೆಗಳನ್ನು ವೀಕ್ಷಿಸುತ್ತಾರೆ ಹಾಗೂ ಅದರಿಂದ ಪ್ರಭಾವಿಸಲ್ಪಡುತ್ತಾರೆ. ಮಹತ್‌ನಿಂದ ಸಾತ್ತ್ವಿಕ, ರಾಜಸಿಕ ಯಾ ತಾಮಸಿಕ ಅಹಂಕಾರದ (ನಾನು, ನನ್ನಿಂದ ಎಂಬ ಭಾವ) ಉಗಮವಾಗುವುದು.

तमसात्स्युरहङ्कारात्खानिलाग्न्यम्बुभूमयः ।
शब्दस्स्पर्शश्च रूपं च रसो गन्धोप्यनुक्रमात् ॥ ३३ ॥
इन्द्रियाणां च विषया भूतानामपि ते गणाः ।
देवास्सदाशिवश्चेशो रुद्रो विष्णुश्चतुर्मुखः ॥ ३४ ॥

ತಾಮಸಾತ್ಸ್ಯುರಹಂಕಾರಾತ್ಖಾನಿಲಾಗ್ನ್ಯಂಬುಭೂಮಯಃ ।
ಶಬ್ದಸ್ಸ್ಪರ್ಶಶ್ಚ ರೂಪಂ ಚ ರಸೋ ಗಂಧೋಪ್ಯನುಕ್ರಮಾತ್ ॥ 33 ॥
ಇಂದ್ರಿಯಾಣಾಂ ಚ ವಿಷಯಾ ಭೂತಾನಾಮಪಿ ತೇ ಗಣಾಃ ।
ದೇವಾಸ್ಸದಾಶಿವಶ್ಚೇಶೋ ರುದ್ರೋ ವಿಷ್ಣುಶ್ಚತುರ್ಮುಖಃ ॥ 34 ॥

ತಾಮಸಿಕ ಅಹಂಕಾರದಿಂದ ತನ್ಮಾತ್ರೆಗಳಾಗಿ (ಸೂಕ್ಷ್ಮ ಭೂತ) ಆಕಾಶ, ವಾಯು, ಅಗ್ನಿ, ಜಲ, ಭೂಮಿಗಳು ಹಾಗೂ ಭೂತಗುಣಗಳಾಗಿ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು ಕ್ರಮವಾಗಿ ಉತ್ಪತ್ತಿಯಾಗುತ್ತದೆ. ಭೂತಗುಣಗಳು ಇಂದ್ರಿಯಗಳಿಗೆ ವಿಷಯವಾಗಿರುತ್ತವೆ. ಸದಾಶಿವ, ಈಶ, ರುದ್ರ, ವಿಷ್ಣು ಮತ್ತು ಚತುರ್ಮುಖ ಬ್ರಹ್ಮನು ತನ್ಮಾತ್ರೆಗಳ ದೇವತೆಗಳು. [2–33..34]

ವಿವೃತ್ತಿ

ಈ ಅಹಂಕಾರವು ಮೂರುವಿಧ– ತಾಮಸ, ಸಾತ್ತ್ವಿಕ ಮತ್ತು ರಾಜಸ. ತಾಮಸಿಕ ಅಹಂಕಾರದಿಂದ ಆಕಾಶ ಮೊದಲಾದ ಸೂಕ್ಷ್ಮಭೂತಗಳ ಉತ್ಪತ್ತಿಯಾಗುವುದು. ಮತ್ತು ಕ್ರಮವಾಗಿ ಶಬ್ದ, ಸ್ಪರ್ಶ, ರೂಪ, ರಸ, ಗಂಧ

ಎಂಬ ಸೂಕ್ಷ್ಮಭೂತಗಳ ಗುಣಗಳು ಇಂದ್ರಿಯಗಳಿಗೆ ವಿಷಯಗಳಾಗಿರುತ್ತವೆ. ಸದಾಶಿವ, ಈಶ, ರುದ್ರ, ವಿಷ್ಣು, ಚತುರ್ಮುಖರು ಆ ಸೂಕ್ಷ್ಮಭೂತಗಳ ದೇವತೆಗಳು. [2–33..34]

ಶಬ್ದ ಇತ್ಯಾದಿಗಳು ಕ್ರಮವಾಗಿ ಆಕಾಶ ಮುಂತಾದ ತನ್ಮಾತ್ರೆಗಳ ಗುಣವಿಶೇಷಗಳು. ದೇವತೆಗಳು ಅಂದರೆ ಚೈತನ್ಯ ಸ್ಥಿತಿಗಳು, ಪಂಚಭೂತಗಳನ್ನು ನಿಯಂತ್ರಿಸಿ ಅವುಗಳ ಬೆಳವಣಿಗೆಯನ್ನು ಕೆಲವು ನಿಯಮಗಳ ಅನುಸಾರ ಮುನ್ನಡೆಸುವುದು.

सात्विकात्स्यादहङ्कारादन्तःकरणधीन्द्रियम् ।
मनो बुद्धिरहङ्कारश्चित्तं करणमान्तरम् ॥ ३५ ॥
संशयो निश्चयो गर्वस्स्मरणं विषया अमी ।
चन्द्रः प्रजापती रुद्रः क्षेत्रज्ञ इति देवताः ॥ ३६ ॥

ಸಾತ್ತ್ವಿಕಾತ್ಸ್ಯಾದಹಂಕಾರಾದಂತಃಕರಣಧೀಂದ್ರಿಯಮ್ ।
ಮನೋ ಬುದ್ಧಿರಹಂಕಾರಶ್ಚಿತ್ತಂ ಕರಣಮಾಂತರಮ್ ॥ 35 ॥
ಸಂಶಯೋ ನಿಶ್ಚಯೋ ಗರ್ವಸ್ಸ್ಮರಣಂ ವಿಷಯಾ ಅಮೀ ।
ಚಂದ್ರಃ ಪ್ರಜಾಪತೀ ರುದ್ರಃ ಕ್ಷೇತ್ರಜ್ಞ ಇತಿ ದೇವತಾಃ ॥ 36 ॥

ಸಾತ್ತ್ವಿಕ ಅಹಂಕಾರದಿಂದ ಅಂತಃಕರಣ (ಅಂತರ್‌ಜ್ಞಾನೇಂದ್ರಿಯ) ಮತ್ತು ಬಾಹ್ಯ ಜ್ಞಾನೇಂದ್ರಿಯಗಳು ಜನಿಸುತ್ತವೆ. ಮನಸು, ಬುದ್ಧಿ, ಅಹಂಕಾರ, ಚಿತ್ತ ಎಂದು ಅಂತಃಕರಣವು ನಾಲ್ಕು ವಿಧವಾಗಿದೆ. ಸಂಶಯ, ನಿಶ್ಚಯ (ನಿರ್ಧಾರ), ಗರ್ವ, ಸ್ಮರಣೆ (ನೆನಪು) ಅವುಗಳ ವಿಷಯವಾಗಿವೆ. ಚಂದ್ರ, ಪ್ರಜಾಪತಿ, ರುದ್ರ, ಕ್ಷೇತ್ರಜ್ಞ ಅವುಗಳ ದೇವತೆಗಳು. [2–35..36]

ವಿವೃತ್ತಿ

ಸಾತ್ತ್ವಿಕ ಅಹಂಕಾರದ ಕಾರ್ಯವನ್ನು ತಿಳಿಸುವ **ಸಾತ್ತ್ವಿಕಾದಿತಿ.** ***ಧೀಂದ್ರಿಯಂ*** ಬುದ್ದಿ ಇಂದ್ರಿಯವು. ಅಂತಃಕರಣದ ಭಾಗವಾಗಿರುವ ಬುದ್ಧಿ, ಮನಸು, ಅಹಂಕಾರ, ಚಿತ್ತ ಎಂಬ ಅರ್ಥ. ಅವುಗಳ ವಿಷಯಗಳನ್ನು ತಿಳಿಸುತ್ತಾ **ಸಂಶಯ ಇತಿ.** ಅವುಗಳ ದೇವತೆಗಳನ್ನು ಕ್ರಮವಾಗಿ ತಿಳಿಸುವ **ಚಂದ್ರೇತ್ಯಾದಿನಾ.** [2–35..36]

श्रोत्रं त्वक्चक्षुषी जिह्वा घ्राणं ज्ञानेन्द्रियं विदुः ।
दिग्वातसूर्यवरुणा नासत्यौ देवतास्स्मृताः ॥ ३७ ॥

ಶ್ರೋತ್ರಂ ತ್ವಕ್ಚಕ್ಷುಷೀ ಜಿಹ್ವಾ ಘ್ರಾಣಂ ಜ್ಞಾನೇಂದ್ರಿಯಂ ವಿದುಃ ।
ದಿಗ್ವಾತಸೂರ್ಯವರುಣಾ ನಾಸತ್ಯೌ ದೇವತಾಸ್ಸ್ಮೃತಾಃ ॥ 37 ॥

ಕಿವಿ, ಚರ್ಮ, ಕಣ್ಣು, ನಾಲಿಗೆ ಹಾಗೂ ಮೂಗುಗಳನ್ನು ಜ್ಞಾನೇಂದ್ರಿಯಗಳೆಂದು ಬಲ್ಲವರು ತಿಳಿಯುತ್ತಾರೆ (ಇವುಗಳ ಮೂಲಕ ನಮಗೆ ಬಾಹ್ಯ ಜಗತ್ತಿನ ಅನುಭವವಾಗುವುದು). ದಿಕ್ಕು, ವಾಯು, ಸೂರ್ಯ, ವರುಣ ಹಾಗೂ ಅಶ್ವಿನೀ ದೇವತೆಗಳು ಅವುಗಳ ದೇವತೆಗಳು. [2–37]

ವಿವೃತ್ತಿ

ಬುದ್ಧೀಂದ್ರಿಯವನ್ನು ವಿಭಜಿಸುತ್ತಾ **ಶ್ರೋತ್ರಮಿತಿ.** ಅವುಗಳ ದೇವತೆಗಳನ್ನು ತಿಳಿಸುವ **ದಿಗಿತಿ.** [2–37]

राजसात्स्युरहङ्कारात्कर्मेन्द्रियसमीरणाः ।
कर्मेन्द्रियाणि वाक्पाणिः पादः पायुरुपस्थकम् ॥ ३८ ॥
वचनादानगमनविसर्गानन्दसंज्ञकाः ।
विषया देवतास्तेषां वह्नीन्द्रोपेन्द्रमृत्युकाः ॥ ३९ ॥

ರಾಜಸಾತ್ಸ್ಯುರಹಂಕಾರಾತ್ಕರ್ಮೇಂದ್ರಿಯಸಮೀರಣಾಃ ।
ಕರ್ಮೇಂದ್ರಿಯಾಣಿ ವಾಕ್ಪಾಣಿಃ ಪಾದಃ ಪಾಯುರುಪಸ್ಥಕಮ್ ॥ 38 ॥
ವಚನಾದಾನಗಮನವಿಸರ್ಗಾನಂದಸಂಜ್ಞಕಾಃ ।
ವಿಷಯಾ ದೇವತಾಸ್ತೇಷಾಂ ವಹ್ನೀಂದ್ರೋಪೇಂದ್ರಮೃತ್ಯುಕಾಃ ॥ 39 ॥

ರಾಜಸಿಕ ಅಹಂಕಾರದಿಂದ ಕರ್ಮೇಂದ್ರಿಗಳು ಮತ್ತು ಮುಖ್ಯ ವಾಯುಗಳು ಉಗಮಿಸುತ್ತವೆ. ಮಾತಿನ ಅಂಗ (ಧ್ವನಿಪೆಟ್ಟಿಗೆಗಳೂ ಸೇರಿಕೊಂಡಿರುವ ನಾಲಿಗೆ), ಪಾಣಿ (ಕರ), ಪಾದ (ಕಾಲು), ಪಾಯು (ಗುದ) ಹಾಗೂ ಉಪಸ್ಥಗಳು (ಜನನಾಂಗ) ಕರ್ಮೇಂದ್ರಿಯಗಳಾಗಿವೆ (ಇವುಗಳಿಂದ ನಾವು ಬಾಹ್ಯಜಗತ್ತಿನ ಕೆಲಸಗಳನ್ನು ಮಾಡುತ್ತೇವೆ). ಮಾತು, ಸ್ವೀಕಾರ, ಚಲನೆ, ವಿಸರ್ಜನೆ ಹಾಗೂ ಸಂತೋಷ ಇವುಗಳ ಕೆಲಸಗಳು. ಅಗ್ನಿ, ಇಂದ್ರ, ಉಪೇಂದ್ರ, ಮೃತ್ಯು (ಯಮ) ಹಾಗೂ ಪ್ರಜಾಪತಿ ಇವುಗಳ ದೇವತೆಗಳು. [2–38..39]

ವಿವೃತ್ತಿ

ರಾಜಸ ಅಹಂಕಾರದ ಕಾರ್ಯವನ್ನು ತಿಳಿಸುತ್ತಾ **ರಾಜಸಾದಿತಿ.** ಕರ್ಮೇಂದ್ರಿಯಗಳು ಮತ್ತು ಪಂಚಪ್ರಾಣಗಳು ಉತ್ಪತ್ತಿಯಾಗುವುವು. ಕರ್ಮೇಂದ್ರಿಯಗಳ ವಿಭಜನೆಯನ್ನು ತಿಳಿಸುವ **ಕರ್ಮೇಂದ್ರಿಯಾಣೀತಿ.** ಅವುಗಳ ದೇವತೆಗಳನ್ನು ತಿಳಿಸುತ್ತಾ **ದೇವತಾ ಇತಿ.** ಅವುಗಳಿಗೆ ಸಂಬಂಧಿಸಿದ ವಿಷಯಗಳನ್ನು ಹೇಳುವ **ವಚನ ಇತಿ,** ಉಳಿದವುಗಳನ್ನು ಮುಂದೆ ಹೇಳಿದೆ. [2–38..39]

प्राणोपानस्समानश्चोदानव्यानौ च वायवः ।

ಪ್ರಾಣೋಪಾನಸ್ಸಮಾನಶ್ಚೋದಾನವ್ಯಾನೌ ಚ ವಾಯವಃ ।

ಪ್ರಾಣ, ಅಪಾನ, ವ್ಯಾನ, ಉದಾನ ಹಾಗೂ ಸಮಾನ ಮುಖ್ಯವಾಯುಗಳಾಗಿವೆ. [2–40]

ವಿವೃತ್ತಿ

ಇದರಲ್ಲಿ ಪಂಚಪ್ರಾಣಗಳ ವಿಭಜನೆಯನ್ನು ತಿಳಿಸುತ್ತಾ **ಪ್ರಾಣೋಪಾನ ಇತಿ.**

ಹೃದಯ, ಗುದ, ಸಂಪೂರ್ಣ ದೇಹ, ಕುತ್ತಿಗೆ ಹಾಗೂ ಹೊಕ್ಕಳು ಇವುಗಳ ಆವಾಸಸ್ಥಾನವಾಗಿವೆ.

भूतैस्तु पञ्चभिः प्राणैः चतुर्दशभिरिन्द्रियैः ॥ ४० ॥
चतुर्विंशतितत्त्वानि साङ्ख्यशास्त्रविदो विदुः ।

ಭೂತೈಸ್ತು ಪಂಚಭಿಃ ಪ್ರಾಣೈಃ ಚತುರ್ದಶಭಿರಿಂದ್ರಿಯೈಃ ॥ 40 ॥
ಚತುರ್ವಿಂಶತಿತತ್ತ್ವಾನಿ ಸಾಂಖ್ಯಶಾಸ್ತ್ರವಿದೋ ವಿದುಃ ।

ಪಂಚಭೂತಗಳು, ಪಂಚ ಪ್ರಾಣಗಳು ಹಾಗೂ ಹದಿನಾಲ್ಕು ಇಂದ್ರಿಯಗಳು (ಅಂತಃ ಹಾಗೂ ಬಾಹ್ಯ), ಈ ಇಪ್ಪತ್ತನಾಲ್ಕು ತತ್ತ್ವಗಳನ್ನು ಸಾಂಖ್ಯರ ಸಿದ್ಧಾಂತಗಳು ವಿವರಿಸುತ್ತವೆ. [2–40..41]

ವಿವೃತ್ತಿ

ಹೀಗೆ ಆಸ್ತಿಕ ಸಾಂಖ್ಯರ ತತ್ತ್ವವಿವರಣೆಗಳನ್ನು ಉಪಸಂಹರಿಸುತ್ತಾ **ಭೂತೈರಿತಿ.** ಈ ಮತದಂತೆ ಮಾಯೆ, ಬ್ರಹ್ಮ ಮೊದಲಾಗಿ ತನ್ಮಾತ್ರೆಗಳವರೆಗಿನ ಎಲ್ಲಾ ತತ್ತ್ವಗಳು ಕಾರಣರೂಪವಾಗಿ ಈ ಇಪ್ಪತ್ತನಾಲ್ಕುತತ್ತ್ವಗಳಲ್ಲಿ ಅನುಗಾಮಿಯಾಗಿರುವುದರಿಂದ ಪತ್ಯೇಕವಾಗಿ ಪರಿಗಣಿಸಬೇಕಾಗಿಲ್ಲ ಎಂದು ಹೇಳಲಾಗಿದೆ. ಆದರೆ ಅನೀಶ್ವರ ಸಾಂಖ್ಯರ ಮತವು ಇಪ್ಪತ್ತನಾಲ್ಕು ತತ್ತ್ವಗಳನ್ನು ಬೇರೆಯಾಗಿಯೇ ಹೇಳುತ್ತದೆ. ಅದರಲ್ಲಿ ಮೂಲಪ್ರಕೃತಿಯು ಸ್ವತಂತ್ರವಾಗಿದೆ. ಅದರ ವಿಕೃತಿಗಳಾದ ಮಹತ್ ಮುಂತಾದ ಏಳು ಪ್ರಕೃತಿಯ ವಿಕೃತಿರೂಪವಾಗಿವೆ. ಸಾತ್ತ್ವಿಕ ಅಹಂಕಾರದಿಂದ ಜನಿಸಿದ ಅಂತಃಕರಣವೆಲ್ಲವೂ ಜ್ಞಾನೇಂದ್ರಿಯಗಳೆಂದು ತಿಳಿಯಲ್ಪಡುತ್ತವೆ. ಅವುಗಳೊಡನೆ ರಾಜಸಿಕದ ಕರ್ಮೇಂದ್ರಿಯಗಳು, ತಾಮಸಿಕದ ಪಂಚತನ್ಮಾತ್ರೆಗಳು, ಪಂಚ ಮಹಾಭೂತಗಳು. ಪ್ರಾಣಗಳು ತತ್ತ್ವಗಳಾಗಿರದೆ, ಇಂದ್ರಿಯಗಳ ಸಾಧಾರಣ ವೃತ್ತಿಯಾಗಿವೆ. ಪುರುಷರು ಅನಂತವಾಗಿದ್ದು, ಪ್ರಕೃತಿಯೂ ಅಲ್ಲ, ಅದರ ವಿಕೃತಿಯೂ ಅಲ್ಲ. ಕಾಲವು ಭೂತ–ಭವಿಷ್ಯಗಳಲ್ಲಿ ವ್ಯವಹರಿಸಲ್ಪಡುವ ಪದಾರ್ಥಗಳಿಂದ ಸ್ವತಂತ್ರವಾಗಿಲ್ಲ. ಹಾಗೆ ಮೂಲಪ್ರಕೃತಿ, ಮಹತ್ ಮುಂತಾದ ಪ್ರಕೃತಿವಿಕೃತಿಗಳು ಏಳು, ಹನ್ನೊಂದು ಇಂದ್ರಿಯಗಳು ಮತ್ತು ಪಂಚ ಮಹಾಭೂತಗಳೆಂಬ ಹದಿನಾರು ವಿಕಾರಗಳು ಒಟ್ಟಾಗಿ ಇಪ್ಪತ್ತನಾಲ್ಕು ತತ್ತ್ವಗಳು, ಪುರುಷನು ಸೇರಿ ಇಪ್ಪತ್ತೈದು ತತ್ತ್ವಗಳು ಎಂಬುದು ಅವರ ಮತವು. [2–40..41]

ಆಸ್ತಿಕ ಸಾಂಖ್ಯ ಸಿದ್ಧಾಂತವು ಈ ಇಪ್ಪತ್ತನಾಲ್ಕು ತತ್ತ್ವಗಳನ್ನು ಮಾತ್ರ ಪ್ರತಿಪಾದಿಸುತ್ತದೆ. ಬೇರೆ ಎಲ್ಲಾ ತತ್ತ್ವಗಳು, ಬ್ರಹ್ಮ ಹಾಗೂ ಮಾಯೆಯಿಂದ ಹಿಡಿದು ತನ್ಮಾತ್ರೆಗಳವರೆಗೆ (ಸೂಕ್ಷ್ಮ ಭೂತ), ಈ ಇಪ್ಪತ್ತನಾಲ್ಕು ತತ್ತ್ವಗಳಲ್ಲಿ ಅವುಗಳ ಕಾರಣ ರೂಪದಲ್ಲಿ ಕಂಡುಬರುತ್ತವೆ ಮತ್ತು ಅವುಗಳನ್ನು ಬೇರೆಯಾಗಿ ಲೆಕ್ಕ ಹಾಕಬೇಕಿಲ್ಲ ಎಂಬುದು ಅವರ ಮತ.

ನಾಸ್ತಿಕ ಸಾಂಖ್ಯರ ಇಪ್ಪತ್ತನಾಲ್ಕು ತತ್ವಗಳು

ನಾಸ್ತಿಕ ಸಾಂಖ್ಯರು ಈ ಕೆಳಗಿನ ಕ್ರಮದಲ್ಲಿ ಇಪ್ಪತ್ತನಾಲ್ಕು ತತ್ತ್ವಗಳ ಉಗಮವನ್ನು ಹೇಳುತ್ತಾರೆ: (1) ಮೂಲಪ್ರಕೃತಿ, (2) ಮಹತ್, (3) ಅಹಂಕಾರ, (4–8) ಐದು ತನ್ಮಾತ್ರೆಗಳು (ತಾಮಸಿಕ ಅಹಂಕಾರದಿಂದ ಉಗಮಿಸಿದ), (9–13) ಐದು ಮಹಾಭೂತಗಳು, ವ್ಯಷ್ಟಿ ವಸ್ತು ಮೂಲಗಳು (ತನ್ಮಾತ್ರೆಗಳಿಂದ ಉತ್ಪತ್ತಿಯಾದ), (14–18) ಐದು ಕರ್ಮೇಂದ್ರಿಯಗಳು (ರಾಜಸಿಕ ಅಹಂಕಾರದಿಂದ ಉಗಮಿಸಿದ), (19–24) ಅಂತಃಕರಣ ಮತ್ತು ಐದು ಬಾಹ್ಯ ಜ್ಞಾನೇಂದ್ರಿಯಗಳು (ಸಾತ್ವಿಕ ಅಹಂಕಾರದಿಂದ ಉಗಮಿಸಿದ). ಮೊದಲನೆಯದು ಉಳಿದೆಲ್ಲದರ ಕಾರಣವಾಗಿ, ಅವುಗಳ ಕಾರ್ಯವಾಗಿಲ್ಲ. 2ರಿಂದ 8ನೇಯವರಗಿನ ತತ್ತ್ವಗಳು ಹಿಂದಿನದರ ಕಾರ್ಯವಾಗಿ, ಮುಂದಿನದರ ಕಾರಣವಾಗಿವೆ. 9ರಿಂದ 24ರವರೆಗಿನವು ಕಾರ್ಯಮಾತ್ರವಾಗಿವೆ. ಪ್ರತ್ಯೇಕ ತತ್ತ್ವಗಳಾಗಿ

ಪ್ರಾಣಗಳನ್ನು ಪರಿಗಣಿಸಿಲ್ಲ; ಇಂದ್ರಿಯಗಳ ಕ್ರಿಯೆಗಳಿಂದು ಅವುಗಳ ಮೊತ್ತವನ್ನು ದೃಷ್ಟಿಸಲಾಗಿದೆ. ಪುರುಷರು ಅಸಂಖ್ಯರಾಗಿದ್ದು, ಯಾವುದೇ ವಸ್ತು-ವಿಷಯಗಳ ಕಾರ್ಯ-ಕಾರಣ ಸಂಬಂಧವನ್ನು ಹೊಂದಿಲ್ಲ. ಹಿಂದಿದ್ದ, ಈಗಿರುವ ಯಾ ಮುಂದೆ ಉಂಟಾಗುವ ವಸ್ತುಗಳಿಂದ ಸ್ವತಂತ್ರವಾಗಿ ಕಾಲವು ಕಾರ್ಯನಿರ್ವಹಿಸುವುದಿಲ್ಲ.

ಪೌರಾಣಿಕರ ಮೂವತ್ತು ತತ್ವಗಳು

महान्कालः प्रधानं च मायाविद्ये च पुरुषः ॥ ४१ ॥
इति पौराणिकाः प्राहुस्त्रिंशत्तत्त्वानि तैस्सह ।

ಮಹಾನ್ಕಾಲಃ ಪ್ರಧಾನಂ ಚ ಮಾಯಾವಿದ್ಯೇ ಚ ಪುರುಷಃ ॥ 41 ॥
ಇತಿ ಪೌರಾಣಿಕಾಃ ಪ್ರಾಹುಸ್ತ್ರಿಂಶತ್ತತ್ತ್ವಾನಿ ತೈಸ್ಸಹ ।

ಇವುಗಳಿಗೆ ಮಹತ್, ಕಾಲ, ಪ್ರಧಾನ, ಮಾಯೆ, ಅವಿದ್ಯೆ ಹಾಗೂ ಪುರುಷ ತತ್ತ್ವಗಳನ್ನು ಸೇರಿಸಿ, ಪೌರಾಣಿಕರು ಮೂವತ್ತು ತತ್ತ್ವಗಳನ್ನು ಹೇಳುತ್ತಾರೆ. [2–41..42]

ವಿವೃತ್ತಿ

ಇದರಲ್ಲಿ ಪೌರಾಣಿಕರ ಮತವನ್ನು ತಿಳಿಸುತ್ತಾ **ಮಹಾನ್ ಕಾಲ ಇತಿ.** ***ಮಹಾನ್*** ಪ್ರಕೃತಿಯ ಮೊದಲ ವಿಕಾರ. ***ಪ್ರಧಾನಂ*** ಮೂಲಪ್ರಕೃತಿ. ***ಮಾಯಾ*** ತಾನು ಆಶ್ರಯಿಸಿರುವುದರನ್ನು ವ್ಯಾಮೋಹಿಸುವ, ಕರ್ತೃವಿನ ಇಚ್ಛೆಯನ್ನು ಅನುಸರಿಸಿರುವುದು. ***ಅವಿದ್ಯೆ*** ಅದಕ್ಕೆ ವಿಪರೀತವಾಗಿರುವುದು. ***ಕಾಲ*** ಈಶ್ವರನ ಚೇಷ್ಟೆಯು; 'ಯೋಽಯಂ ಕಾಲಸ್ತಸ್ಯ ತೇಽವ್ಯಕ್ತಬಂಧೋ ಚೇಷ್ಟಾಮಾಹುಶ್ಚೇಷ್ಟತೇ ಯೇನ ವಿಶ್ವಮ್' ಎಂಬ ವಚನದಂತೆ *ಅವ್ಯಕ್ತಂ* ಪ್ರಧಾನವು, ಅದರ *ಬಂಧು* ಪ್ರವರ್ತಕವಾಗಿರುವುದು, ಅದರ ಸಂಬೋಧನೆ *ಅವ್ಯಕ್ತಬಂಧೋ.* ***ಪುರುಷ*** ಪರಮಾತ್ಮನ ಅಂಶ. 'ಏಕಸ್ಯೈವ ಮಮಾಂಶಸ್ಯ ಜೀವಸ್ಯೈವ ಮಹಾಮತೇ', 'ಮಮೈವಾಂಶೋ ಜೀವಲೋಕೇ ಜೀವಭೂತಸ್ಸನಾತನಃ' (ಭ.ಗೀ.15–7) ಎಂಬ ವಚನಗಳಂತೆ. ಈ ಆರು ಹಿಂದೆ ತಿಳಿಸಿರುವ ಇಪ್ಪತ್ತನಾಲ್ಕರೊಡನೆ ಮೂವತ್ತು ತತ್ತ್ವಗಳಾಗಿವೆ ಎಂದು ಪೌರಾಣಿಕರು ಹೇಳುತ್ತಾರೆ. [2–41..42]

ಪ್ರಧಾನವು ಮೂಲಪ್ರಕೃತಿಯಾಗಿ, ಮಹತ್ ಅದರ ಪ್ರಥಮ ಬದಲಾವಣೆಯಾಗಿದೆ. ಮಾಯೆಯು ತಾನು ಅನುಸರಿಸುವವನ ನಿಯಂತ್ರಣದಲ್ಲಿದ್ದು, ಅವನನ್ನು ಮರುಳುಗೊಳಿಸುವುದಿಲ್ಲ. ಅದಕ್ಕೆ ವಿರುದ್ಧವಾಗಿ ಅವಿದ್ಯೆಯು ಜೀವನಲ್ಲಿದ್ದು, ಅವನನ್ನು ಮರುಳುಗೊಳಿಸುತ್ತದೆ. ಕಾಲವು, ಪುರುಷನು ಅವ್ಯಕ್ತದೊಡನೆ ಸೇರಿಕೊಂಡು ಮಾಡುವ ಒಂದು ಕಾರ್ಯ. ಪುರುಷನು ಪರಮಾತ್ಮನ ಒಂದು ಅಂಶ ಯಾ ಒಂದು ಕಿರಣ.

ಶೈವಾಗಮದ ಮೂವತ್ತಾರು ತತ್ವಗಳು

बिन्दुनादौ शक्तिशिवौ शान्तातीतौ ततः परम् ॥ ४२ ॥
षट्त्रिंशत्तत्त्वमित्युक्तं शैवागम विशारदे ।

ಬಿಂದುನಾದೌ ಶಕ್ತಿಶಿವೌ ಶಾಂತಾತೀತೌ ತತಃ ಪರಮ್ ॥ 42 ॥
ಷಟ್ತ್ರಿಂಶತ್ತತ್ತ್ವಮಿತ್ಯುಕ್ತಂ ಶೈವಾಗಮ ವಿಶಾರದೇ ।

ಬಿಂದು ಮತ್ತು ನಾದ, ಶಕ್ತಿ ಮತ್ತು ಶಿವ, ಶಾಂತ ಮತ್ತು ಅತೀತ ಇವುಗಳನ್ನು ಕೂಡಿಸಿ ಶೈವಾಗಮದ ಪಂಡಿತರು ಮೂವತ್ತಾರು ತತ್ತ್ವಗಳನ್ನು ಹೇಳುತ್ತಾರೆ. [2–42..43]

ವಿವೃತ್ತಿ

ಶೈವಮತವನ್ನು ತಿಳಿಸುವ **ಬಿಂದುನಾದಾವಿತಿ.** ***ಬಿಂದು*** ಸರ್ವಾಧಿಷ್ಠಾನವಾಗಿರುವ ಸದಾಶಿವನೆಂಬ ನಿರ್ಗುಣತತ್ತ್ವ. ***ನಾದಃ*** ಪ್ರಣವರೂಪದಲ್ಲಿ ಸರ್ವಾರ್ಥ ಸ್ಫುರಣೆಯಾಗಿ ಅಭಿವ್ಯಕ್ತವಾಗುವ ಬಿಂದುವಿನ ಸ್ವರೂಪಾಂತರವು. ***ಶಕ್ತಿಃ*** ಮಾಯೆ, ಅವಿದ್ಯೆಗಳಿಂದ ಬೇರೆಯಾಗಿರುವ ಸರ್ವಾಧಿಷ್ಠಾನ ಸಾಮರ್ಥ್ಯವು. ಶಿವನು ಶಕ್ತಿವಂತನಾಗಿ ಈಶ್ವರನೆನಿಸಿ ಲೀಲಾವಿಗ್ರಹವಾಗಿರುವನು. ***ಶಾಂತಾ ಅತೀತೌ*** ಅವನ ಅವಸ್ಥಾವಿಶೇಷಗಳು. 'ತಸ್ಯೈತೇ ತನುವೌ ಘೋರಾನ್ಯಾ ಶಿವಾನ್ಯಾ' (ತೈ.ಸಂ.5–7–3) ಎಂಬ ಶ್ರುತಿಯಿದೆ. ಅವುಗಳಿಗೆ ಪೂರ್ವೋಕ್ತ ಮೂವತ್ತು ತತ್ತ್ವಗಳನ್ನು ಸೇರಿಸಿ ಮೂವತ್ತಾರು ತತ್ತ್ವಗಳನ್ನು ಶೈವಾಗಮ ವಿಶಾರದರು ಹೇಳುತ್ತಾರೆ. ಅಂದರೆ ಇದು ಮೂವತ್ತಾರುತತ್ತ್ವಗಳ ಕಲ್ಪನೆಯ ಮೂಲವೆಂದು ಸೂಚಿಸಲಾಗಿದೆ. [2–42..43]

ಬಿಂದು: ಸದಾಶಿವ ತತ್ತ್ವ, ಸಂಪೂರ್ಣ ಅಸ್ತಿತ್ವವನ್ನು ನಿಯಂತ್ರಿಸುವಂತಹದು, ಏನೂ ವಿಶೇಷಣಗಳಿಲ್ಲ. ನಾದ: ಓಂಕಾರವಾಗಿ ಪ್ರಕಟವಾಗುವ ಬಿಂದುವಿನ ಇನ್ನೊಂದು ರೂಪ, ಎಲ್ಲವನ್ನೂ ಬೆಳಗುವಂತಹದು. ಶಕ್ತಿಃ ಮಾಯೆ ಮತ್ತು ಅವಿದ್ಯೆಯಿಂದ ಬೇರೆಯಾಗಿರುವ, ಈಶ್ವರನು ನಿಯಮನ ಮಾಡಲು ಉಪಯೋಗಿಸುವ ಶಕ್ತಿ. ಶಿವ: ಭಕ್ತರ ಉದ್ಧಾರಕ್ಕಾಗಿ ಮೂರ್ತ ರೂಪತಾಳಿ, ಶಕ್ತಿಯನ್ನು ತನ್ನಲ್ಲಿರಿಸಿಕೊಂಡವ. ಶಾಂತ ಮತ್ತು ಅತೀತ: ಶಿವನ ಇನ್ನೆರಡು ಭಾವನಾತ್ಮಕ ರೂಪಗಳು. ಶ್ರುತಿ (ತೈತ್ತರೀಯ ಸಂಹಿತೆ 5–7–3) ಹೀಗೆ ಹೇಳುತ್ತದೆ "ಈ ಬೆಂಕಿಯು ರುದ್ರನೇ ಆಗಿದ್ದಾನೆ; ಆವನಿಗೆ ಎರಡು ದೇಹಗಳು, ಒಂದು ಭಯಾನಕ ಮತ್ತು ಇನ್ನೊಂದು ಸೌಮ್ಯ."

ವೇದಗಳಲ್ಲಿ ಕಂಡಂತೆ ಮಾಯೆ

ಮೇಲೆ ತಿಳಿಸಿದಂತಹ ಯಾವೊಂದು ತತ್ತ್ವಗಳೂ ನಿಜಾರ್ಥದಲ್ಲಿಸತ್ಯವಲ್ಲ; ಶ್ರುತಿಗಳ ಪ್ರಕಾರ ಅವುಗಳು ಮಾಯೆಯ ಪ್ರಭಾವದಿಂದ ಕಾಣುವ ಪರಬ್ರಹ್ಮನ ಪ್ರಕಟರೂಪಗಳು ಮಾತ್ರ. ಹಾಗಾಗಿ ವಾರ್ತಿಕಕಾರರು ಹೇಳುತ್ತಾರೆ:

सर्वे विकल्पाः प्रागासन् बीजोङ्कुर इवात्मनि ॥ ४३ ॥
इच्छाज्ञानक्रियारूपमायया ते विजृम्भिताः

ಸರ್ವೇ ವಿಕಲ್ಪಾಃ ಪ್ರಾಗಾಸನ್ ಬೀಜೋಂಕುರ ಇವಾತ್ಮನಿ ॥ 43 ॥
ಇಚ್ಛಾಜ್ಞಾನಕ್ರಿಯಾರೂಪಮಾಯಯಾ ತೇ ವಿಜೃಂಭಿತಾಃ ।

ಹೀಗೆ ನಿಶ್ಚಯಿಸಿದ ಎಲ್ಲಾ ತತ್ತ್ವಗಳು, ಬೀಜದಲ್ಲಿ ಮರವಿದ್ದಂತೆ, ಆತ್ಮನಲ್ಲಿ ಮೊದಲಿನಿಂದಲೇ ಇದ್ದವು. ಇಚ್ಛೆ, ಜ್ಞಾನ ಮತ್ತು ಕ್ರಿಯೆ ಈ ಮೂರು ರೂಪದಲ್ಲಿ ಮಾಯೆಯು ಪ್ರವರ್ತಿಸುವುದರಿಂದ, ಅವು ಪ್ರಕಟವಾಗುತ್ತವೆ. [2–43..44]

ವಿವೃತ್ತಿ

ಯಾಕೆ ಈ ಅನೇಕತೆ? ಎಂಬ ಪ್ರಶ್ನೆಗೆ ಉತ್ತರವಾಗಿ ಈ ಎಲ್ಲ ವಿಕಲ್ಪಗಳು ಉಂಟಾಗಿರುವುದು ಒಂದೇ ಆದ ಪರಬ್ರಹ್ಮನ ಮಾಯಾವಿಲಾಸದಿಂದ, ಪಾರಮಾರ್ಥಿಕವಾಗಿ ಅವುಗಳಿಗೆ ಅಸಿತ್ವವಿಲ್ಲ; ಬೀಜದೊಳಗೆ ಅಂಕುರವಿದ್ದಂತೆ ಎಂದು ಶ್ರೌತಮತವನ್ನು ಅನುಸರಿಸುತ್ತಾ **ಸರ್ವೇ ವಿಕಲ್ಪಾ ಇತಿ.** ***ಕ್ರಿಯಾ*** ಪ್ರಯತ್ನವು; ಹಾಗೆಯೇ ***ಇಚ್ಛಾ, ಜ್ಞಾನ*** ಎರಡನ್ನೂ ನಿರೂಪಿಸಿದೆ. ಯಾವನೋ ಕವಿಯು ಕಾವ್ಯರಚನೆಯ ಇಚ್ಛುಕನಾಗಿ ಪ್ರಸಂಗಗಳನ್ನು ಕಲ್ಪಿಸಿಕೊಂಡು ವಿರಚಿಸುವಂತೆ, ಆಯಾಯ ದೃಷ್ಯನಿರ್ಮಾಣದ ಬಯಕೆಯಿಂದ ಆಯಾಯ ಆಗಮಗಳ ನಿರ್ಮಾಣವಾಗಿದೆ. ಕೆಲವರು ಜ್ಞಾನದ ಮೂಲಕ ಕಂಡುಬರುವ ಲೋಕವನ್ನು ನೋಡಿ, ಅರಿತು ಅನುಸಂಧಾನಮಾಡಿರುವರು, ವೇದವ್ಯಾಸ ಮೊದಲಾದ ರೂಪದಿಂದ ಮಹಾಭಾರತ ಮುಂತಾದ ಗ್ರಂಥಗಳ ರಚಿಸಿದಂತೆ. ಸ್ವಲ್ಪ ಪ್ರಯತ್ನದ ಅಗತ್ಯವೂ ಇದೆ, ಮಹಾರಾಜ ಮುಂತಾದ ರೂಪಗಳಿಂದ ಮಹಾನಗರ, ಕೋಟೆ ಮೊದಲಾದವುಗಳನ್ನು ಕಲ್ಪಿಸಿಕೊಂಡಿರುವನು, ಅವನೇ ಈಶ್ವರ. ಮಾಯೆಯ ಸಹಜವಾದ ಶಕ್ತಿರೂಪವು ಅನಿರ್ವಚನೀಯವಾಗಿ ಹಿಂದೆ ತಿಳಿಸಿರುವ ಕಲ್ಪನಾಪ್ರಕಾರದಿಂದ ಈಶ್ವರನೇ ವಿಜ್ರಂಭಿಸಿ ಪ್ರಕಟವಾಗುತ್ತಿರುವನು, ಪರಮಾರ್ಥದಲ್ಲಿ ಅಲ್ಲ ಎಂಬ ಅರ್ಥವು. ಜಗತ್ತತ್ತ್ವವನ್ನು ಯಾರು ಹೇಗೆ ವರ್ಣಿಸಿರುವರೋ, ಅವರಿಗೆ ಅದುವೇ ಪರಮಾರ್ಥ, ಅಂತಿಮ ಸತ್ಯವು ಹಾಗಾಗಿ ವಾದ-ವಿವಾದಗಳ ಅಗತ್ಯವಿಲ್ಲ. ಅದುವೇ ಕಂಡುಬರುತ್ತದೆ, ಪರಮಾರ್ಥಕಲ್ಪನೆಯಲ್ಲ ಎಂಬ ಭಾವ. [2-43..44]

इच्छाज्ञानक्रियापूर्वा यस्मात्सर्वाः प्रवृत्तयः ॥ ४४ ॥
सर्वेऽपि जन्तवस्तस्मादीश्वरा इति निश्चिताः ।

ಇಚ್ಛಾಜ್ಞಾನಕ್ರಿಯಾಪೂರ್ವಾ ಯಸ್ಮಾತ್ಸರ್ವಾಃ ಪ್ರವೃತ್ತಯಃ ॥ 44 ॥
ಸರ್ವೇಽಪಿ ಜಂತವಸ್ತಸ್ಮಾದೀಶ್ವರಾ ಇತಿ ನಿಶ್ಚಿತಾಃ ।

ಪ್ರತಿಯೊಂದು ಕೆಲಸವೂ ಇಚ್ಛೆ, ಜ್ಞಾನ ಮತ್ತು ಕ್ರಿಯೆಗಳ ಕಾರಣದಿಂದ ಜರಗುವುದರಿಂದ, ಎಲ್ಲಾ ಜೀವಿಗಳು ನಿಶ್ಚಯವಾಗಿಯೂ ಈಶ್ವರನೇ ಆಗಿದ್ದಾರೆ. [2-44..45]

ವಿವೃತ್ತಿ

ಈಶ್ವರನು ಬೇರೆಯಾಗಿರುವ ಭಾವದಿಂದ ಜಗತ್ತಿನ ಉತ್ಪತ್ತಿಯನ್ನು ಮಾಡಿಲ್ಲ ಎಂದು ಹಿಂದೆ ತಿಳಿಸಿದ್ದರೂ, ಅದನ್ನೇ ಉಪಪಾದಿಸುವ **ಇಚ್ಛಾಜ್ಞಾನೇತಿ.** ಎಲ್ಲದರ ಸರ್ವ ಪ್ರವೃತ್ತಿಗಳು ಇಚ್ಛಾ-ಜ್ಞಾನ-ಕ್ರಿಯಾ ಪೂರ್ವಕವಾಗಿರುವುದರಿಂದ ಎಲ್ಲ ಜಂತುಗಳು ಈಶ್ವರನೇ ಆಗಿರಬೇಕು ಎಂಬುದು ನಿಶ್ಚಿತವಾಗಿದೆ. ಇಚ್ಛೆ, ಜ್ಞಾನ ಮತ್ತು ಪ್ರಯತ್ನಗಳು ಮಾಯೆಯಿಂದ ಆವರಿಸಲ್ಪಟ್ಟ ಈಶ್ವರನದಲ್ಲದೆ ಇತರ ಚೇತನದಿಂದ ಉತ್ಪತ್ತಿಯಾದುದಲ್ಲ. ಇತರ ಉಪಾಧಿಗಳ ಪರಾಮರ್ಶೆಯಿಂದ, ಸ್ವತಃ ಚೇತನನಾಗಿರುವುದರ ಪ್ರಮಾಣದ ಅಭಾವವಿರುವುದರಿಂದ, ಸರ್ವ ಜಂತುಗಳೂ ಈಶ್ವರನಿಂದ ಅಭಿನ್ನವೆಂದು ಸಿದ್ಧವಾಗುವುದು. ಹಾಗೆಯೇ ಅವುಗಳಲ್ಲಿರುವ ಇಚ್ಛೆ ಮುಂತಾದವುಗಳ ಮಾಯಾಮಯತ್ವದ ನಿಮಿತ್ತವಾಗಿ ಸರ್ವ ಪ್ರಪಂಚವು ಮಯಾಮಯತ್ವದಿಂದ ಯುಕ್ತವಾಗಿದೆ ಎಂಬ ಭಾವವು. [2-44..45]

ವಿಶ್ವದ ಉಗಮಕ್ಕೆ ಕಾರಣವಾದ ಇಚ್ಛೆ, ಜ್ಞಾನ ಮತ್ತು ಕ್ರಿಯೆಗಳು ಮಾಯೆಯೊಂದಿಗೆ ಸೇರಿದ ಈಶ್ವರನ ಹೊರತಾಗಿ ಬೇರೆ ಯಾವುದರಲ್ಲೂ ಇರುವುದು ಅಸಾಧ್ಯವಾಗಿದೆ. ಚೈತನ್ಯಯುತ ಅಸ್ತಿತ್ವದಲ್ಲಿ (ಜೀವ) ಸಮ್ಮಿಳಿತವಾಗಿರುವ ಇಚ್ಛೆ, ಜ್ಞಾನ ಮತ್ತು ಕ್ರಿಯೆಗಳು ಪ್ರಪಂಚವನ್ನು ಸಲಹುತ್ತವೆ; ಆದುದರಿಂದ ಚೈತನ್ಯಯುತ

ಅಸ್ತಿತ್ವವು ಈಶ್ವರನೇ ಆಗಿರಬೇಕು. ಬಾಹ್ಯ ಸ್ಥಿತಿಗಳನ್ನು ಅವಲಂಬಿಸಿ ವ್ಯತ್ಯಾಸಗಳು ಕಾಣಬಹುದೇ ಹೊರತು ಶುದ್ಧ ಮತ್ತು ಸಾಮಾನ್ಯ ಚೈತನ್ಯದಿಂದ ಈಶ್ವರನನ್ನು ಪ್ರತ್ಯೇಕಿಸಲು ಯಾವುದೇ ಆಧಾರಗಳು ಇರುವುದಿಲ್ಲ. ಎಲ್ಲಾ ನಿರ್ಧಾರ, ಯೋಚನೆ ಮತ್ತು ಕಾರ್ಯಗಳು ಮಾಯೆಯ ಕಾರಣದಿಂದಾಗಿ ನಡೆಯುವುದರಿಂದ, ಅವು ಸೃಜಿಸುವ ಸಂಪೂರ್ಣ ವಿಶ್ವದ ಅಸ್ತಿತ್ವವು ಮಾಯೆಯ ಹೊರತಾಗಿ ಬೇರೇನೂ ಅಲ್ಲ ಎಂದು ದೃಢವಾಗಿ ಹೇಳಬಹುದು.

बीजाद्वृक्षस्तरोर्बीजं पारस्पर्येण जायते ॥ ४५ ॥
इतिशङ्कानिवृत्त्यर्थं योगिदृष्टान्तकीर्तनम् ।
विश्वामित्रादयः पूर्वे परिपक्वसमाधयः ॥ ४६ ॥
उपादानोपकरणप्रयोजनविवर्जिताः ।
स्वेच्छया ससृजुस्स्वर्गं सर्वभोगोपबृंहितम् ॥ ४७ ॥
ईश्वरोनन्तशक्तित्वात्स्वतन्त्रोन्यानपेक्षतः ।
स्वेच्छामात्रेण सकलं सृजत्यवति हन्ति च ॥ ४८ ॥

ಬೀಜಾದ್ವೃಕ್ಷಸ್ತರೋರ್ಬೀಜಂ ಪಾರಸ್ಪರ್ಯೇಣ ಜಾಯತೇ ॥ 45 ॥
ಇತಿಶಂಕಾನಿವೃತ್ತ್ಯರ್ಥಂ ಯೋಗಿದೃಷ್ಟಾಂತಕೀರ್ತನಮ್ ।
ವಿಶ್ವಾಮಿತ್ರಾದಯಃ ಪೂರ್ವೇ ಪರಿಪಕ್ವಸಮಾಧಯಃ ॥ 46 ॥
ಉಪಾದಾನೋಪಕರಣಪ್ರಯೋಜನವಿವರ್ಜಿತಾಃ ।
ಸ್ವೇಚ್ಛಯಾ ಸಸೃಜುಸ್ಸ್ವರ್ಗಂ ಸರ್ವಭೋಗೋಪಬೃಂಹಿತಮ್ ॥ 47 ॥
ಈಶ್ವರೋನಂತಶಕ್ತಿತ್ವಾತ್ಸ್ವತಂತ್ರೋನ್ಯಾನಪೇಕ್ಷತಃ ।
ಸ್ವೇಚ್ಛಾಮಾತ್ರೇಣ ಸಕಲಂ ಸೃಜತ್ಯವತಿ ಹಂತಿ ಚ ॥ 48 ॥

ಬೀಜದಿಂದ ವೃಕ್ಷವು ಹುಟ್ಟುವುದು; ಆ ವೃಕ್ಷದಿಂದ ಪುನಃ ಬೀಜವು ಜನಿಸುವುದು ಮತ್ತು ಇದು ಪುನರಾವರ್ತನೆ ಆಗುತ್ತಿರುವುದು. ಇಂತಹ ತಪ್ಪು ನಂಬಿಕೆಗಳನ್ನು ದೂರಮಾಡಲು ಒಬ್ಬ ಯೋಗಿಯ ಉದಾಹರಣೆಯನ್ನು ಕೊಟ್ಟಿದೆ. ಸಮಾಧಿ ಸ್ಥಿತಿಯನ್ನು ಸಾಧಿಸಿದ ಹಿಂದಿನ ಋಷಿಗಳಲ್ಲೊಬ್ಬನಾದ ವಿಶ್ವಾಮಿತ್ರನು, ಯಾವುದೇ ಉಪಕರಣವನ್ನು ಅವಲಂಬಿಸದೆ, ಸ್ವಾರ್ಥದ ಲವಲೇಶವಿಲ್ಲದೆ ಇಚ್ಛಾಮಾತ್ರದಿಂದ ಸರ್ವ ಭೋಗಗಳಿರುವ ಪರ್ಯಾಯ ವಿಶ್ವವನ್ನು ಸೃಷ್ಟಿಸಿದನು. ಅನಂತಶಕ್ತಿಯನ್ನು ಹೊಂದಿದ ಈಶ್ವರನಂತೆ, ಬೇರೇನೂ ಸಹಾಯವನ್ನು ಪಡೆಯದೆ ಸ್ವತಂತ್ರವಾಗಿ, ತನ್ನ ಇಚ್ಛೆಯಿಂದ ಅವನು ಎಲ್ಲವನ್ನೂ ಸೃಷ್ಟಿಸಿ, ರಕ್ಷಿಸಿ ಮತ್ತು ನಾಶಗೊಳಿಸಿದನು. [2–45..48]

ವಿವೃತ್ತಿ

ಇನ್ನು ಬೀಜದಲ್ಲಿ ಅಂಕುರವಿರುವಂತೆ, ಜಗತ್ತು ಈಶ್ವರನಲ್ಲಿದ್ದರೆ ಕಾರ್ಯ–ಕಾರಣತೆಯಿಂದ ಆಗ ವೃಕ್ಷದಿಂದ ಬೀಜವು ವ್ಯಕ್ತವಾದಂತೆ ಜಗತ್ತಿನಿಂದ ಈಶ್ವರನು ವ್ಯಕ್ತವಾಗುವನೇ ಎಂಬ ಸಂಶಯಕ್ಕೆ, 'ನ ಜಾಯತೇ ಮ್ರಿಯತೇ ವಾ ವಿಪಶ್ಚಿತ್' (ಕ.ಉ.2–18), 'ಅವಿಕಾರ್ಯೋಽಯಮುಚ್ಯತೇ' (ಭ.ಗೀ.2–25) ಎಂಬ ಶ್ರುತಿ, ಸ್ಮೃತಿಗಳಿಗೆ ಅದು ವಿರೋಧವಾಗುವುದು. ಅದಕ್ಕೆ ಯೋಗಿಯ ದೃಷ್ಟಾಂತವನ್ನು ಪ್ರತಿಪಾದಿಸುತ್ತಾ **ಬೀಜಾದಿತಿ.** ಅದನ್ನು

ಉದಾಹರಣೆಯಿಂದ ಸ್ಪಷ್ಟಪಡಿಸುತ್ತಾ **ವಿಶ್ವಾಮಿತ್ರಾದಯ ಇತಿ.** ದೃಷ್ಟಾಂತ ಶ್ಲೋಕಾರ್ಥವು ಸ್ಪಷ್ಟವಾಗಿದೆ. [2–45..48]

ಬೀಜ–ವೃಕ್ಷ ಉದಾಹರಣೆಯಿಂದ, ಕಾರ್ಯ–ಕಾರಣ ಸಂಬಂಧದಿಂದ ಒಂದರ ಬೆನ್ನಹಿಂದೆ ಇನ್ನೊಂದು ಬರುವ ಹಲವು ಈಶ್ವರರ ಮತ್ತು ಹಲವು ವಿಶ್ವದ ಕಲ್ಪನೆ ಕೆಲವರಿಗೆ ಬರಬಹುದು. ಇದು ಈಶ್ವರನಿಗೆ ಹುಟ್ಟು–ಸಾವುಗಳಿಲ್ಲ ಎಂಬ ಶ್ರುತಿಯ ಹೇಳಿಕೆಗಳಿಗೆ ವಿರುದ್ಧವಾಗಿದೆ. ವಿರುದ್ಧಾರ್ಥವನ್ನು ತಿಳಿಯದಂತೆ, ಈಶ್ವರನು ವಿಶ್ವದ ಏಕೈಕ ಸೃಷ್ಟಿಕರ್ತ ಎಂಬುದನ್ನು ಸ್ಪಷ್ಟಪಡಿಸಲು ಋಷಿಯ ಉದಾಹರಣೆಯನ್ನು ಕೊಟ್ಟಿದೆ.

ಬದಲಾವಣೆಯಿಲ್ಲದ ಈಶ್ವರನು ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳನ್ನು ಹೇಗೆ ಮಾಡಲು ಸಾಧ್ಯವಾದೀತು ಎಂಬ ಸಂಶಯವೇಳಬಹುದು. ಅದಕ್ಕೆ ಉತ್ತರವಾಗಿ ಹೀಗೆ ಹೇಳುತ್ತಾರೆ:

न कारकाणां व्यापारात्कर्ता स्यान्नित्य ईश्वरः ।
नापि प्रमाणव्यापारात् ज्ञाताऽसौ स्वप्रकाशकः ॥ ४९ ॥

ನ ಕಾರಕಾಣಾಂ ವ್ಯಾಪಾರಾತ್ಕರ್ತಾ ಸ್ಯಾನ್ನಿತ್ಯ ಈಶ್ವರಃ ।
ನಾಪಿ ಪ್ರಮಾಣವ್ಯಾಪಾರಾತ್ ಜ್ಞಾತಾಽಸೌ ಸ್ವಪ್ರಕಾಶಕಃ ॥ 49 ॥

ಬಾಹ್ಯ ವಸ್ತುಗಳನ್ನು ಉಪಯೋಗಿಸಿ ಈಶ್ವರನು ಸೃಷ್ಟಿಕಾರ್ಯವನ್ನು ಮಾಡುವುದಿಲ್ಲ; ಸ್ವಪ್ರಕಾಶಿತನಾದ ಅವನು ಪ್ರಮಾಣಗಳನ್ನು ಯಾ ಜ್ಞಾನೇಂದ್ರಿಯಗಳನ್ನು ಬಳಸುವುದಿಲ್ಲ. [2–49]

ವಿವೃತ್ತಿ

ಸೃಷ್ಟಿ–ಸ್ಥಿತಿ–ಸಂಹಾರಗಳಲ್ಲಿ ತೊಡಗುವಾಗ ಈಶ್ವರನು ಹೇಗೆ ವ್ಯವಹರಿಸುತ್ತಾನೆ ಎಂಬ ಶಂಕೆಗೆ ಉತ್ತರವಾಗಿ **ನ ಕಾರಕಾಣಾಮಿತಿ.** ಕಾರಕಗಳು ಅಂದರೆ ಉಪಕರಣಗಳೆಂಬ ವಿಕಾರಗಳು. ವಿಕಾರಗಳ ಅನಿತ್ಯತ್ವದಿಂದ ಮತ್ತು ಈಶ್ವರನ ನಿತ್ಯತ್ವದಿಂದ, ಕರಣಗಳನ್ನು ಉಪಯೋಗಿಸುವ ಈಶ್ವರನ ಅಸ್ತಿತ್ವವಿಲ್ಲ. ಈಶ್ವರನು ತನ್ನ ಸತ್ ಸನ್ನಿಧಿಯಿಂದ ಮಾತ್ರವೇ, ರಾಜನಂತೆ ಯಾ ಅಯಸ್ಕಾಂತದಂತೆ ನಿರ್ವಿಕಾರಿಯಾಗಿಯೇ ಕಾರ್ಯಗಳನ್ನು ಮಾಡುವ ಕರ್ತನಾಗಿರುವನು. ಈಶ್ವರನ ಜ್ಞಾತೃತ್ವವು ಕೂಡಾ ಲೋಕವಿಲಕ್ಷಣ ಕಾರ್ಯದಲ್ಲಿ ಪ್ರಮಾಣಗಳ ಸಹಾಯವನ್ನು ಬಯಸುವುದಿಲ್ಲ ಎಂದು ತಿಳಿಸಲು **ನಾಪೀತಿ.** ***ಸ್ವಪ್ರಕಾಶಕಃ*** ತಾನೇತಾನಾಗಿ, ಕಾರಣನಾಗಿ ಎಂಬ ವಿಶೇಷಣವು. [2–49]

ಸೃಷ್ಟಿಸುವಾಗ, ಸಲಹುವಾಗ ಯಾ ನಾಶಮಾಡುವಾಗ ಈಶ್ವರನು ಯಾವ ಬದಲಾವಣೆಗಳಿಗೂ ಒಳಪಡುವುದಿಲ್ಲ. ಅವನು ಈ ಕಾರ್ಯಗಳನ್ನು ಮಾಡುವಾಗ ಉಪಕರಣಗಳ ಸಹಾಯವನ್ನು ಪಡೆದುಕೊಂಡರೆ, ಅವನೂ ಸ್ಥಿತಿ ಬದಲಾವಣೆಗೆ, ಮಡಕೆಯನ್ನು ಮಾಡುವ ಕುಂಬಾರನಂತೆ, ಒಳಪಡುತ್ತಾನೆ. ವಿರುದ್ಧವಾಗಿ, ರಾಜನಂತೆ ಯಾ ಚುಂಬಕದಂತೆ ಬರಿಯ ಉಪಸ್ಥಿತಿಯಿಂದ ಅವನು ಕ್ರಿಯೆಗಳನ್ನು, ಅದರಲ್ಲಿ ಕ್ರಿಯಾತ್ಮಕವಾಗಿ ಪಾಲುಗೊಳ್ಳದೆ, ತನ್ನ ಪರಿಸರದಲ್ಲಿ ಉಂಟುಮಾಡುತ್ತಾನೆ.

ज्ञातृत्वमपि कर्तृत्वं स्वातन्त्र्यं तस्य केवलम्
या चेच्छाशक्तिवैचित्रीसास्य स्वच्छन्दकारिता ॥ ५० ॥

यया कर्तुं न वा कर्तुमन्यथा कर्तुमर्हति ।
स्वतन्त्रामीश्वरेच्छां के परिच्छेत्तुमिहेशते ॥ ५१ ॥

ಜ್ಞಾತೃತ್ವಮಪಿ ಕರ್ತೃತ್ವಂ ಸ್ವಾತಂತ್ರ್ಯಂ ತಸ್ಯ ಕೇವಲಮ್ ।
ಯಾ ಚೇಚ್ಛಾಶಕ್ತಿವೈಚಿತ್ರೀಸಾಸ್ಯ ಸ್ವಚ್ಛಂದಕಾರಿತಾ ॥ 50 ॥
ಯಯಾ ಕರ್ತುಂ ನ ವಾ ಕರ್ತುಮನ್ಯಥಾ ಕರ್ತುಮರ್ಹತಿ ।
ಸ್ವತಂತ್ರಾಮೀಶ್ವರೇಚ್ಛಾಂ ಕೇ ಪರಿಚ್ಛೇತ್ತುಮಿಹೇಶತೇ ॥ 51 ॥

ಅವನ ಜ್ಞಾನ ಮತ್ತು ಕರ್ತೃತ್ವ ಶಕ್ತಿಯು, ಅವನ ಸ್ವತಂತ್ರತೆಯ ಕಾರಣದಿಂದ ಶುದ್ಧವಾಗಿವೆ; ಅವನ ಸ್ವಚ್ಛಂದತೆಯು ಅವನ ಸ್ವ ಇಚ್ಛೆಯಾಗಿದೆ. ಕ್ರಿಯಾಶಕ್ತಿಯನ್ನು ಮನಬಂದಂತೆ ಉಪಯೋಗಿಸುವ, ಒಂದು ಕಾರ್ಯವನ್ನು ಮಾಡಲೋ ಬೇಡವೋ ಅಥವಾ ಬೇರೆ ರೀತಿ ಮಾಡಲೋ ಎಂಬಂತೆ, ಅವನ ಸ್ವೇಚ್ಛೆಯನ್ನು ಯಾರು ತಾನೆ ನಿರ್ಧರಿಸಿಯಾರು? [2–50..51]

ವಿವೃತ್ತಿ

ವಿವರಣೆಯನ್ನು ಉಪಸಂಹರಿಸುತ್ತಾ **ಜ್ಞಾತೃತ್ವಮಪಿ.** ***ಸ್ವಾತಂತ್ರ್ಯಂ*** ಇತರರ ಸಹಾಯದ ಅಪೇಕ್ಷೆಯಿಲ್ಲದೆ ಎಂಬ ಅರ್ಥ. ***ಕೇವಲಂ*** ತನ್ನಿಂದ ಉತ್ಪತ್ತಿಯಾದ ವಿಕಾರಗಳ ಅಪೇಕ್ಷೆಯೂ ಇಲ್ಲದೆ. ***ಇಚ್ಛಾಶಕ್ತಿ*** ಈಶ್ವರನ ಪರಾಪೇಕ್ಷೆಯಿಲ್ಲದಿರುವಿಕೆಯು ಅಪ್ರತಿಹತವಾಗಿದೆ ಎಂದು ಹೇಳುತ್ತದೆ. ಸ್ವಚ್ಛಂದವಾಗಿಯೇ ಕಾರ್ಯವು ಜರಗುವುದು ಎಂಬುದನ್ನು ವಿಶದೀಕರಿಸಲು ***ಯಯೇತಿ.*** [2–50..51]

ಅವನು ಯಾವ ಬದಲಾವಣೆಗಳಿಗೂ ಒಳಪಡದೆ, ಅರಿವುಳ್ಳವನಾಗಿ ಹಾಗೂ ಕ್ರಿಯಾಶೀಲನಾಗಿ ಸ್ವತಂತ್ರವಾಗಿ ವ್ಯವಹರಿಸುತ್ತಾನೆ. ಅವನ ಇಚ್ಛೆಯು ಯಾವುದೇ ಅಡ್ಡಿ ಆತಂಕಗಳಿಲ್ಲದ ನಿರ್ಭಯ ಸ್ವಾತಂತ್ರ್ಯವನ್ನು ಹೊಂದಿದೆ.

श्रुतिश्च सोकामयतेतीच्छया सृष्टिमीशितुः ।
तस्मादात्मन् आकाशस्सम्भूत इति चाब्रवीत् ॥ ५२ ॥

ಶ್ರುತಿಶ್ಚ ಸೋಕಾಮಯತೇತೀಚ್ಛಯಾ ಸೃಷ್ಟಿಮೀಶಿತುಃ ।
ತಸ್ಮಾದಾತ್ಮನ್ ಆಕಾಶಸ್ಸಂಭೂತ ಇತಿ ಚಾಬ್ರವೀತ್ ॥ 52 ॥

"ಅವನು ಬಯಸಿದನು ಹಾಗೂ ಅವನಿಂದ, ಆತ್ಮನಿಂದ, ಆಕಾಶವು ಜನಿಸಿತು ಎಂದು ತಿಳಿಯಿರಿ" ಎಂಬುದಾಗಿ ಜಗತ್ತಿನ ಸೃಷ್ಟಿಯಾಗಲು ಈಶ್ವರನ ಇಚ್ಛೆಯ ಕುರಿತು ಶ್ರುತಿಯು ಘೋಷಿಸಿದೆ. [2–52]

ವಿವೃತ್ತಿ

ಈಶ್ವರನು ಇಚ್ಛಾಪೂರ್ವಕವಾಗಿಯೇ ಜಗತ್ತಿನ ಸೃಷ್ಟಿ ಮುಂತಾದ ವ್ಯವಹಾರಗಳನ್ನು ಮಾಡುತ್ತಾನೆ ಎಂಬುದಕ್ಕೆ ಪ್ರಮಾಣವಾಗಿ **ಶ್ರುತಿಶ್ಚೇತಿ.** [2–52]

ಮಾಯೆಯ ವಶದಿಂದ ಸೃಷ್ಟಿಯಾದ ನಾಮ–ರೂಪಗಳಿಂದ ಕೂಡಿದ, ವಾಸ್ತವಿಕ–ಅವಾಸ್ತವಿಕವೆಂದು ನಿಶ್ಚಯಿಸಲಾಗದ ಈ ವಿಶ್ವಕ್ಕೆ ಈಶ್ವರನು ವಸ್ತು ಕಾರಣನೂ, ಸಮರ್ಥ ಕಾರಣನೂ ಆಗಿದ್ದಾನೆ'' ಎಂಬ ವೇದಾಂತದ ಸಿದ್ಧಾಂತವನ್ನು ಪ್ರಚುರಪಡಿಸಲು, ಒಬ್ಬ ಮಾಂತ್ರಿಕನಂತೆ ಮತ್ತು ಒಬ್ಬ ಮಹಾಯೋಗಿಯಂತೆ ಈಶ್ವರನನ್ನು ಚಿತ್ರಿಸಲಾಗಿದೆ. ಸಮಸ್ತ ಉಪನಿಷತ್ತುಗಳು ಇದನ್ನು ಏಕಕಂಠದಿಂದ ಘೋಷಿಸುವುದರಿಂದ, ಬೇರೆ ಮೂಲಗಳಲ್ಲಿ ಹೇಳಿದ ವಿಷಯಗಳ ಆಧಾರದ ಮೇಲೆ ಈ ಸಿದ್ಧಾಂತವನ್ನು ಬದಿಗೆ ಸರಿಸಲು ಸಾಧ್ಯವಿಲ್ಲ.

ಈಶ್ವರನು ಬರಿಯ ಸಮರ್ಥ ಕಾರಣ ಮಾತ್ರವಲ್ಲ

निमित्तं चेद्भवेदस्य जगतः परमेश्वरः ।
विकारित्वं विनाषित्वं भवेदस्य कुलालवत् ॥ ५३ ॥

ನಿಮಿತ್ತಂ ಚೇದ್ಭವೇದಸ್ಯ ಜಗತಃ ಪರಮೇಶ್ವರಃ ।
ವಿಕಾರಿತ್ವಂ ವಿನಾಷಿತ್ವಂ ಭವೇದಸ್ಯ ಕುಲಾಲವತ್ ॥ 53 ॥

ಈಶ್ವರನು ಈ ಜಗತ್ತಿನ ನಿಮಿತ್ತ ಕಾರಣನು ಮಾತ್ರ ಆಗಿದ್ದರೆ, ಕುಂಬಾರನಂತೆ ಅವನು ಬದಲಾವಣೆಗಳಿಗೆ ಒಳಪಡುತ್ತಾನೆ ಹಾಗೂ ನಾಶ ಹೊಂದುತ್ತಾನೆ. [2–53]

ವಿವೃತ್ತಿ

ಅಂತೆಯೇ ತನ್ನಾತ್ಮನಲ್ಲಿ ಸ್ಥಿತವಾಗಿರುವ ತತ್ತ್ವಗಳಿಂದ ಬೇರೆಯೇ ಆಗಿ ಅನಿರ್ವಚನೀಯ ನಾಮ ರೂಪಗಳ, ಸ್ವಮಾಯೆಯಿಂದ ಒಡಗೂಡಿರುವ ಈಶ್ವರನು ಜಗತ್ತಿನ ಉಪಾದಾನನೂ, ನಿಮಿತ್ತನೂ ಆಗಿ ಅವಿಕಾರಿಯೂ ಆಗಿರುವನು. ಅದನ್ನು ಮಾಯಾವಿ ಮತ್ತು ಮಹಾಯೋಗಿಯ ದೃಷ್ಟಾಂತಗಳಿಂದ ಉಪಪಾದಿಸಿದೆ. ಅದನ್ನು ಉಪನಿಷತ್ತುಗಳ ಎಲ್ಲಾಶಾಖೆಗಳು ಒಂದೇವಿಧವಾಗಿ ಉದ್ಘೋಷಿಸಿದರೂ, ಲೌಕಿಕ ಪ್ರಮಾಣಗಳಿಗೆ ಬದ್ಧವಾಗಿ ಸಿದ್ಧವಾದರೆ ಅದು ಇನ್ನೂ ಪ್ರಬಲವಾಗುವುದು. ಇದರಲ್ಲಿ ಈಶ್ವರನ ತಟಸ್ಥತ್ವವನ್ನು ಕುಂಬಾರನ ನಿಮಿತ್ತದಂತೆ ದೂಷಿಸುತ್ತಾ **ನಿಮಿತ್ತಂ ಚೇದೇತಿ.** ಪರಮಾಣುಗಳು ಉಪಾದಾನವಾಗಿರುವ ಈ ಜಗತ್ತಿಗೆ ಈಶ್ವರನು ನಿಮಿತ್ತ ಕಾರಣ ಮಾತ್ರವಾದರೆ, ಕುಂಬಾರನಂತೆ ಅವನಲ್ಲಿ ಕೂಡ ವಿಕಾರಿತ್ವವೂ ಕ್ರಿಯಾವತ್ವವೂ ಉತ್ಪತ್ತಿಯಾಗುವುದು. ಸ್ವಯಂ ಕ್ರಿಯಾಹೀನನಾದರೆ ವಿಕಾರಗಳು ಜನಿಸುವುದಿಲ್ಲ. ಕ್ರಿಯಾವತ್ವದಿಂದ ಶರೀರತ್ವವು ಲಭಿಸಿ, ವಿನಾಶತ್ವವೂ ಅವಶ್ಯವಾಗಿ ಉಂಟಾಗುವುದು. ಹಾಗಾಗಿ ವಿಕಾರಗಳನ್ನುಂಟುಮಾಡುವವನು ನಿತ್ಯನಾಗಿರುವುದಿಲ್ಲ ಎಂದು ಈ ಉದಾಹರಣೆಯು ಹೇಳುತ್ತದೆ. ಆದುದರಿಂದ ಪರಮಾರ್ಥದಲ್ಲಿ ಕರ್ತೃತ್ವವು ವಿಕಾರಿತ್ವದ ದೋಷಗಳಿಗೆ ಕಾರಣವಾಗುವುದು ಎಂಬ ಅಭಿಪ್ರಾಯವು. [2–53]

ಈಶ್ವರನು ವಿಶ್ವದ ನಿಮಿತ್ತ ಕಾರಣನು ಮಾತ್ರ ಎಂಬ ವಾದ ಹುಟ್ಟುಹಾಕುವ ತಾಕಲಾಟಗಳನ್ನು ನಿವಾರಿಸಲು, ಈಶ್ವರನನ್ನು ಆತ್ಮದ ಸಾಲಿಗೆ ಸೇರಿಸಿ ಅವನು ಒಂಭತ್ತು ಗುಣಗಳನ್ನು (ಇಚ್ಛೆಯನ್ನು ಸೇರಿಸಿ ಕಡೆಯ ಒಂಭತ್ತು, ವಾರ್ತಿಕ 23) ಹೊಂದಿದ್ದಾನೆ ಎಂದು ವೈಶೇಷಿಕರು ಹೇಳಬಹುದು. ಆದರೆ ಕೆಳಗೆ ತಿಳಿಸಿದಂತೆ ಇದು ಇನ್ನೊಂದು ದ್ವಂದ್ವವನ್ನು ಹುಟ್ಟುಹಾಕುತ್ತದೆ.

बुद्ध्यादयो नव गुणाः नित्या एवेश्वरस्य चेत् ।
नित्येच्छावान् जगत्सृष्टौ प्रवर्तेतैव सर्वदा ॥ ५४ ॥

ಬುದ್ಧ್ಯಾದಯೋ ನವ ಗುಣಾಃ ನಿತ್ಯಾ ಏವೇಶ್ವರಸ್ಯ ಚೇತ್ ।
ನಿತ್ಯೇಚ್ಛಾವಾನ್ ಜಗತ್ಸೃಷ್ಟೌ ಪ್ರವರ್ತೇತೈವ ಸರ್ವದಾ ॥ 54 ॥

ಬುದ್ಧಿಯು ಸೇರಿದ ಒಂಭತ್ತು ಗುಣಗಳು ಈಶ್ವರನ ವಿಶೇಷತೆಗಳನ್ನು ಪಡೆದುಕೊಂಡು ಶಾಶ್ವತವಾಗಿದ್ದರೆ, ಶಾಶ್ವತ ಇಚ್ಛೆಯಿಂದಾಗಿ ಅವನು ಯಾವಾಗಲೂ ವಿಶ್ವದ ಸೃಷ್ಟಿಯಲ್ಲಿ ತೊಡಗಿಕೊಂಡಿರಬೇಕಿತ್ತು. [2–54]

ವಿವೃತ್ತಿ

ಭಗವಾನ್ ಈಶ್ವರನು ನಿತ್ಯ ಜ್ಞಾನ, ಇಚ್ಛೆ ಮುಂತಾದವುಗಳಿಂದ ಕೂಡಿದ್ದರೆ, ಶರೀರವೈಲಕ್ಷಣದಿಂದ ಸಿದ್ಧವಾಗುವ ದೋಷಕ್ಕೆ ಅವಕಾಶವಿಲ್ಲ ಎಂದು ತಿಳಿಸಲು **ಬುದ್ಧ್ಯಾದಯ ಇತಿ.** ***ನವಗುಣಾಃ*** ಜೀವಾತ್ಮನ ಅಭಿಪ್ರಾಯದಲ್ಲಿ. ಈಶ್ವರನಿಗೆ ಜಗತ್ತಿನ ಉತ್ಪತ್ತಿಯಲ್ಲಿ ಉಪಾದಾನತ್ವವಿರುವುದರಿಂದ ಅದು ಈಶ್ವರನಿಂದಲೇ ಯುಕ್ತವಾಗಿರುವುದು. ಅಥವಾ ಆಯಾಯ ದ್ರವ್ಯಗಳ ಉಪಾಧಿಗಳು ಯವ ಮುಂತಾದವುಗಳ ಗುಣಗಳಾಗಿರುವುದರಿಂದ ಯಾವ ದ್ರವ್ಯವು ನಿರ್ದಿಷ್ಟವಾಗಿರುವುದೋ ಆ ದ್ರವ್ಯ ವ್ಯಕ್ತವಾಗುವ ಎಲ್ಲವೂ ಸಮಾನವಾಗಿರಬೇಕು. ಪೃಥ್ವೀಗೆ ಹದಿನಾಲ್ಕುಗುಣಗಳಿದ್ದು, ಎಲ್ಲ ಪೃಥ್ವೀತತ್ತ್ವವಿರುವವೆಲ್ಲವೂ ಹದಿನಾಲ್ಕು ಗುಣಗಳಿಂದ ಕೂಡಿರಬೇಕು, ಹೆಚ್ಚೂ ಅಲ್ಲ ಕಡಿಮೆಯೂ ಅಲ್ಲ. ಹಾಗೆಯೇ ಆತ್ಮನಿಂದ ಆವರಿಸಲ್ಪಟ್ಟಿರುವ ಆತ್ಮದ್ರವ್ಯಕ್ಕೆ ಆತ್ಮತ್ವವೇ ಉಪಾಧಿಯಾಗಿರುವುದರಿಂದ, ಸರ್ವತ್ರ ಹದಿನಾಲ್ಕು ಗುಣಗಳು ವಿಶೇಷವಾಗಿ ಕಂಡುಬರಬೇಕು. ಹಾಗೆಯೇ ಈಶ್ವರನು ಆತ್ಮದ್ರವ್ಯದ ಒಳಗೇ ಇರುವುದರಿಂದ ಬುದ್ಧಿ ಮುಂತಾದ ಒಂಬತ್ತು ವಿಶೇಷಗುಣಗಳು ಈಶ್ವರನದೇ ಆಗಿರಬೇಕು ಎಂದು ಈ ವಚನವು ತೋರಿಸುತ್ತದೆ. ಈಶ್ವರನ ನಿತ್ಯ ನಿರಪೇಕ್ಷತೆಯು ಅದರಲ್ಲಿ ದೋಷವನ್ನು ಉತ್ಪತ್ತಿಮಾಡುತ್ತದೆ ಎಂದು ಹೇಳುವ **ನಿತ್ಯೇಚ್ಛಾವಾನಿತಿ.** [2–54]

ಇದು ಆಕ್ಷೇಪಕ್ಕೆ ಉತ್ತರ

प्रवृत्त्युपरमाभावात्संसारो नैव नश्यति ।
मोक्षोपदेशो व्यर्थस्स्यादागमोपि निरर्थकः ॥ ५५ ॥

ಪ್ರವೃತ್ತ್ಯುಪರಮಾಭಾವಾತ್ಸಂಸಾರೋ ನೈವ ನಶ್ಯತಿ ।
ಮೋಕ್ಷೋಪದೇಶೋ ವ್ಯರ್ಥಸ್ಸ್ಯಾದಾಗಮೋಪಿ ನಿರರ್ಥಕಃ ॥ 55 ॥

ಕ್ರಿಯಾಶೀಲ ಪ್ರವೃತ್ತಿಯು ಸದಾ ಇರುವುದಾದರೆ, ಸಂಸಾರವು ಎಂದಿಗೂ ನಾಶವಾಗಲಿಕ್ಕಿಲ್ಲ; ಹಾಗಾಗಿ ಮೋಕ್ಷ ಕಾರಣವಾದ ಅಧ್ಯಯನವು ನಿರರ್ಥಕ ಮತ್ತು ಜ್ಞಾನದ ಸಾಕ್ಷಾತ್ಕಾರದಿಂದ ಉಪಯೋಗವಿಲ್ಲ. [2–55]

ವಿವೃತ್ತಿ

ಒಂಬತ್ತು ಗುಣಗಳು ಈಶ್ವರನದೇ ಆಗಿದ್ದರೆ ಅವನಲ್ಲಿ ಪ್ರವೃತ್ತಿಯು ಸದಾ ಇರಬೇಕಾಗುವುದು; ಅದರಿಂದ ಏನಾಗುವುದು ಎಂದು ತಿಳಿಸುವ **ಪ್ರವೃತ್ತೀತಿ.** ಕ್ರಿಯಾಶೀಲ ಪ್ರವೃತ್ತಿಯಿದ್ದರೆ ಸಂಸಾರ, ಲೋಕದ ನಾಶವಾಗುವುದಿಲ್ಲ. ಅದರಿಂದಾಗಿ **ಮೋಕ್ಷೋಪದೇಶ ಇತಿ.** ಮೋಕ್ಷದ ಕುರಿತಾದ ಉಪದೇಶಗಳು ವ್ಯರ್ಥ ಮಾತ್ರವಲ್ಲದೆ ಶಾಸ್ತ್ರಗಳ ಅಧ್ಯಯನವೂ ನಿರರ್ಥಕ ಎಂದು ಹೇಳುವ **ಆಗಮೋಪಿ ನಿರರ್ಥಕ ಇತಿ.** [2–55]

तस्मान्मायाविलासोयं जगत्कर्तृत्वमीशितुः ।
बन्धमोक्षोपदेशादिव्यवहारोपि मायया ॥ ५६ ॥

ತಸ್ಮಾನ್ಮಾಯಾವಿಲಾಸೋಽಯಂ ಜಗತ್ಕರ್ತೃತ್ವಮೀಶಿತುಃ ।
ಬಂಧಮೋಕ್ಷೋಪದೇಶಾದಿವ್ಯವಹಾರೋಽಪಿ ಮಾಯಯಾ ॥ 56 ॥

ಆದುದರಿಂದ ಈಶ್ವರನ ವಿಶ್ವದ ಸೃಷ್ಟಿಯೆಲ್ಲವೂ ಮಾಯೆಯ ಒಂದು ಪ್ರದರ್ಶನ ಮಾತ್ರ ಹಾಗೂ ವಿಶ್ವವನ್ನು ಕುರಿತ ಎಲ್ಲಾ ಅನುಭವಗಳಿಗೆ, ಬಂಧನ–ಮುಕ್ತಿಯ ಸಾಕ್ಷಾತ್ಕಾರವನ್ನು ಒಡಗೂಡಿಸಿ, ಮಾಯೆಯು ಕಾರಣ. [2–56]

ವಿವೃತ್ತಿ

ಪರಮತಗಳನ್ನು ವಿವರಿಸಿ ಸ್ವಮತವು ಅದರಿಂದ ಬಾಧಿತವಾಗುವುದಿಲ್ಲ ಎಂದು ಸಿದ್ಧಮಾಡಿ ಉಪಸಂಹರಿಸುತ್ತಾ **ತಸ್ಮಾದಿತಿ.** ನಮ್ಮ ಅಭಿಪ್ರಾಯದಂತೆ ಬಂಧ ಮೊದಲಾದವುಗಳು ಮಾಯಿಕವಾಗಿರುವಂತೆ ಮೋಕ್ಷದ ಉಪದೇಶವು ಕೂಡಾ ಮಾಯಿಕ ಎಂದು ತಿಳಿಯಬೇಕು. ಅದರ ಸ್ವರೂಪದಲ್ಲಿಯೇ ಇರುವ ಮಾಯಿಕತ್ವವು ಕೂಡಾ ಸತ್ಯಾರ್ಥ ವಿಷಯವಾದುದರಿಂದ ಮೋಕ್ಷಶಾಸ್ತ್ರಗಳಿಗೆ ಪ್ರಮಾಣ್ಯವನ್ನು ಆರೋಪಿಸಿರುವುದು ವಿರೋಧವಾಗುವುದು ಎಂದು ಎಲ್ಲವಿಚಾರವನ್ನೂ ಅವಗಾಣಿಸಿದೆ. [2–56]

इति श्री दक्षिणामूर्तिस्त्रोत्रार्थप्रतिपादके ।
प्रबन्धे मानसोल्लासे द्वितीयोल्लाससङ्ग्रहः ॥ ५७ ॥

ಇತಿ ಶ್ರೀದಕ್ಷಿಣಾಮೂರ್ತಿಸ್ತ್ರೋತ್ರಾರ್ಥಪ್ರತಿಪಾದಕೇ ।
ಪ್ರಬಂಧೇ ಮಾನಸೋಲ್ಲಾಸೇ ದ್ವಿತೀಯೋಲ್ಲಾಸಸಂಗ್ರಹಃ ॥ 57 ॥

ಶ್ರೀದಕ್ಷಿಣಾಮೂರ್ತಿ ಸ್ತೋತ್ರದ ಅರ್ಥವನ್ನು ಪ್ರತಿಪಾದಿಸುವ ಮಾನಸೋಲ್ಲಾಸವೆಂಬ ಪ್ರಬಂಧದ ದ್ವಿತೀಯ ಉಲ್ಲಾಸದ ವಿವರಣೆಯು ಇಲ್ಲಿಗೆ ಮುಗಿಯಿತು. [2–57]

ವಿವೃತ್ತಿ

ದ್ವಿತೀಯಶ್ಲೋಕದ ವ್ಯಾಖ್ಯೆಯನ್ನು ಉಪಸಂಹರಿಸುವ **ಇತೀತಿ.** [2–57]

ಇತಿ ಶ್ರೀಮಾನಸೋಲ್ಲಾಸವೃತ್ತಾಂತೇ ದ್ವಿತೀಯೋಲ್ಲಾಸಃ ।

ತೃತೀಯೋಲ್ಲಾಸಃ

ಆತ್ಮನ ಏಕತೆ

सत्तास्फुरत्ते भावेषु कुत आगत्य सङ्गते
बिम्बादिदर्पणन्यायादित्यं पृच्छन् प्रबोध्यते ॥ १ ॥

ಸತ್ತಾಸ್ಫುರತ್ತೇ ಭಾವೇಷು ಕುತ ಆಗತ್ಯ ಸಂಗತೇ ।
ಬಿಂಬಾದಿದರ್ಪಣನ್ಯಾಯಾದಿತ್ಯಂ ಪೃಚ್ಛನ್ ಪ್ರಬೋಧ್ಯತೇ ॥ 1 ॥

ಪ್ರಪಂಚದಲ್ಲಿ ಅಸ್ತಿತ್ವವಿರುವ ಎಲ್ಲಾ ವಸ್ತುಗಳೊಡನೆ ಪ್ರಕಾಶ ಮತ್ತು ಆತ್ಮನ ಸಂಬಂಧ ಹೇಗಾಯಿತು? ಹೀಗೆ ದರ್ಪಣ–ಪ್ರತಿಬಿಂಬ ನ್ಯಾಯವನ್ನು ಪ್ರಶ್ನಿಸುವುದರಿಂದ, ಶಿಷ್ಯನು ತನ್ನ ಜ್ಞಾನವನ್ನು ವಿಸ್ತರಿಸುತ್ತಾನೆ. [3–1]

ವಿವೃತ್ತಿ

ಪ್ರತಿಯೊಂದು ಪದಾರ್ಥಗಳು ದೃಷ್ಟವಾಗಲು ಚಿದಾತ್ಮನೇ ಕಾರಣವು, ಸರ್ವ ಜಗತ್ತಿನಲ್ಲಿ ತಾನೇತಾನಾಗಿ, ತನ್ನ ಮಾಯೆಯಿಂದ ತಾನೇ ವಿಶ್ವವಾಗಿ ವಿಜೃಂಭಿಸುತ್ತಾನೆ ಎಂದು ಪ್ರಥಮಶ್ಲೋಕವು ಹೇಳುತ್ತದೆ. ಒಂದು ಚೈತನ್ಯವು ಎಲ್ಲದರಲ್ಲೂ ಇರುವುದೆಂದು ಸಿದ್ಧವಾಗುವುದರಿಂದ ಚಿದಾತ್ಮನೇ ಆ ಪದಾರ್ಥವು ಎಂದು ಎರಡನೆಯ ಶ್ಲೋಕದ ಅರ್ಥವು. ಈ ತಾತ್ಪರ್ಯವನ್ನು ಮುಂದೆ ವರ್ಣಿಸುತ್ತಾ ಇದರಲ್ಲಿ ಆ ಪದಾರ್ಥವು ಒಂದೇ ಆಗಿದೆ ಎಂಬ ವಾಕ್ಯಾರ್ಥವನ್ನು ಪ್ರಕಟಿಸುವ ತೃತೀಯಶ್ಲೋಕವನ್ನು ವ್ಯಾಖ್ಯಾನಿಸಲು ಪ್ರಶ್ನೆಯನ್ನು ಎತ್ತುತ್ತಾರೆ **ಸತ್ತಾಸ್ಫುರತ್ತೇ ಇತಿ.** ಪದಾರ್ಥಗಳಲ್ಲಿರುವ ಸತ್‌ನ ಪ್ರಕಾಶತ್ವವು ದೃಶ್ಯಧರ್ಮವಾಗಿರದೆ ದೃಷ್ಟಧರ್ಮ, ದರ್ಶಿಸುವವನ ಗುಣವಿಶೇಷಗಳಾಗಿವೆ ಎಂದರೆ ಅದನ್ನು ಪ್ರಶ್ನಿಸಬೇಕಾಗುತ್ತದೆ. ಅದು ದೃಶ್ಯವಾಗುವುದರಲ್ಲಿ ಇಲ್ಲದಿದ್ದರೆ ದರ್ಶಿಸುವವನಿಗೆ ಅದರ ಅನುಭವ ಹೇಗಾಗುತ್ತದೆ? ಅದು ದೃಷ್ಟನಿಷ್ಠವೇ ಆಗಿ ಭಾಸವಾಗುವುದಾದರೆ, ಕನ್ನಡಿಯಲ್ಲಿನ ಮುಖ ಮುಂತಾದ ದೃಶ್ಯಗಳಲ್ಲಿನ ಪ್ರತಿಬಿಂಬದಂತಿದೆಯೇ? ಅದಕ್ಕೆ ಉತ್ತರಿಸುತ್ತಾ ಅದು ಅಮೂರ್ತವಾಗಿರುವುದರಿಂದ ಅದಕ್ಕೆ ಪ್ರತಿಬಿಂಬ ಭಾವವು ಇರುವುದಿಲ್ಲ. ಹಾಗಾಗಿಯೇ ಕಾಯಿಸಿದ ಕಬ್ಬಿಣದ ಗುಂಡಿನಲ್ಲಿರುವ ಅಗ್ನಿಯಂತೆ ಅದು ಸಂಕ್ರಮಿಸುವುದಿಲ್ಲ. ಹಾಗೆ ಎಲ್ಲದರ ಸತ್ತಾಸ್ಫುರಣರೂಪವು ಬ್ರಹ್ಮಾತ್ಮವೇ ಎಂದು ಪ್ರಶ್ನಿಸಿದ ಶಿಷ್ಯನಿಗೆ ಮುಂದಿನ ಶ್ಲೋಕದಲ್ಲಿ ಉತ್ತರಿಸುತ್ತಾರೆ. [3–1]

ಪದಾರ್ಥಗಳಲ್ಲಿ ಕಂಡುಬರುವ ಅಸ್ತಿತ್ವ ಮತ್ತು ಪ್ರಕಾಶಗಳು ಅದರೊಳಗಿರದೆ, ಅದನ್ನು ನೋಡುವವನ ಗುಣವಿಶೇಷಣಗಳು ಆಗಿರುತ್ತವೆ ಎಂದು ಹೇಳಲಾಗಿದೆ. ಹಾಗಾದರೆ ಪ್ರಶ್ನೆ ಏಳುತ್ತದೆ: ಅವುಗಳು ನೊಡುವ ವಸ್ತುಗಳೊಳಗಿಲ್ಲದಿದ್ದರೆ, ಅವು ವಸ್ತುಗಳನ್ನು ಅನುಭವಿಸುವವನಿಗೆ, ಆ ವಸ್ತುಗಳಲ್ಲಿ ಯಾವ ಸಂಬಂಧದಿಂದ ಕಂಡುಬರುತ್ತವೆ? ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬದಂತೆ ಯಾ ಬೆಂಕಿಯಲ್ಲಿ ಕಾಯಿಸಿದ ಕಬ್ಬಿಣದಲ್ಲಿ ಬೆಂಕಿಯು ಕಂಡುಬರುವಂತೆ ಅವು ವಸ್ತುಗಳಲ್ಲಿ ಪ್ರಕಟವಾಗಲು ಸಾಧ್ಯವಿಲ್ಲ ಯಾಕೆಂದರೆ ರೂಪರಹಿತವಾಗಿರುವ ಅಸ್ತಿತ್ವ ಮತ್ತು ಜ್ಞಾನಗಳಿಗೆ ಪ್ರತಿಬಿಂಬಗಳು ಇಲ್ಲ ಯಾ ಅವು ವಸ್ತುಗಳೊಡನೆ ಸಂಯೋಗಹೊಂದಲು ಸಾಧ್ಯವಿಲ್ಲ.

ಸ್ತೋತ್ರದ ಮೂರನೆಯ ಚರಣ

यस्यैव स्फुरणं सदात्मकमसत्कल्पार्थगं भासते

साक्षात्तत्त्वमसीति वेदवचसा यो बोधयत्याश्रितान् ।
यत्साक्षात्करणाद्भवेन्न पुनरावृत्तिर्भवाम्भोनिधौ
तस्मै श्रीगुरुमूर्तये नम इदं श्रीदक्षिणामूर्तये ॥ ३ ॥

ಯಸ್ಯೈವ ಸ್ಫುರಣಂ ಸದಾತ್ಮಕಮಸತ್ಕಲ್ಪಾರ್ಥಗಂ ಭಾಸತೇ
ಸಾಕ್ಷಾತ್ತತ್ತ್ವಮಸೀತಿ ವೇದವಚಸಾ ಯೋ ಬೋಧಯತ್ಯಾಶ್ರಿತಾನ್ ।
ಯತ್ಸಾಕ್ಷಾತ್ಕರಣಾದ್ಭವೇನ್ನ ಪುನರಾವೃತ್ತಿರ್ಭವಾಂಭೋನಿಧೌ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ 3 ॥

ಯಾರ ಪ್ರಕಾಶವು ಆತ್ಮವೇ ಆಗಿರುವುದೋ, ಯಾರ ಬೆಳಕು ಪ್ರತಿಯೊಂದು ವಸ್ತುವನ್ನು ಪ್ರವೇಶಿಸಿ ಅದನ್ನು ಬೆಳಗುವುದೋ, ಯಾರು ಗುರುವಾಗಿ ಶಿಷ್ಯರಿಗೆ "ತತ್ತ್ವಮಸಿ" ಯಂತಹ ವೇದವಾಕ್ಯಗಳ ಅರ್ಥವನ್ನು ಬೋಧಿಸುವನೋ, ಯಾರ ಸಾಕ್ಷಾತ್ಕಾರದಿಂದ ಸಂಸಾರ (ಭವ) ಸಾಗರದಲ್ಲಿ ಪುನರ್ಜನ್ಮವೆಂಬುದು ಇಲ್ಲವಾಗುವುದೋ, ಅವನಿಗೆ, ಶ್ರೀ ಗುರುರೂಪದಲ್ಲಿರುವ ಶ್ರೀ ದಕ್ಷಿಣಾಮೂರ್ತಿ ಸ್ವರೂಪನಿಗೆ, ಶಿವನಿಗೆ, ನನ್ನ ಈ ನಮಸ್ಕಾರಗಳು. {3}

ವಿವೃತ್ತಿ

ಯಾವ ಚಿದಾತ್ಮವೇ ಸ್ಫುರಿಸುತ್ತಿರುವುದೋ, ಯಾವುದರ ಸ್ವರೂಪಪ್ರಕಾಶವು ಸತ್‌ರೂಪವಾಗಿ ಪ್ರತಿಯೊಂದು ವಸ್ತುವನ್ನು ಬೆಳಗುತ್ತಿರುವುದು ಭಾಸವಾಗುವುದೋ ಅಂತಹ ಸಚ್ಚಿದಾತ್ಮನಾದ ದಕ್ಷಿಣಾಮೂರ್ತಿಯೇ ನಿನಗೆ ನಮಸ್ಕಾರಗಳು ಎಂದು ಅನ್ವಯವಾಗುವುದು. ಸತ್‌ನ ಸ್ಫುರಣವಿಶೇಷಣವು ಅಸತ್‌ಗೆ ಹೋಲಿಸಿದರೆ ಅತ್ಯಂತ ಹೆಚ್ಚಾಗಿರುವ ಅರ್ಥದಲ್ಲಿ, ಅನಿರ್ವಚನೀಯ ವಿಷಯ ರೂಪದಲ್ಲಿದೆ. ಕಪ್ಪೆಚಿಪ್ಪಿನಲ್ಲಿ ಬೆಳ್ಳಿಯನ್ನು ಕಂಡಂತೆ ಆ ವಿಷಯವು ಆಗಮ ಮುಂತಾದವುಗಳಲ್ಲಿ ಭ್ರಾಮಕವಾಗಿರುವುದು. ಅದು ಅಪರೋಕ್ಷವಾಗಿ ಪ್ರತಿಭಾಸವಾದರೂ ಅದಕ್ಕೆ ಕ್ರಿಯಾಕಾರಿಕತ್ವವಿರುವುದರಿಂದ ಇಂದ್ರಜಾಲಿಕರಿಂದ ನಿರ್ಮಿತವಾದ ನದಿ ಮುಂತಾದವುಗಳಿಂದ ಭಿನ್ನವಾಗಿದೆ. ಚಿದಾತ್ಮನ ವಿಷಯವನ್ನು ಸ್ವರೂಪ ನಿರೂಪಣೆಯಿಂದ, ಮಾಯಾಕಲ್ಪಿತವಾದ ವಿಷಯರೂಪ ಅಲ್ಲದೆ ದೃಗ್‌ದೃಶ್ಯವಿವೇಕಜ್ಞಾನದಿಂದ ಸ್ವಯಂ ಅದ್ವಯ ಅಮಿತ ಮುಂತಾದ ವಿಶೇಷಣಗಳುಳ್ಳದ್ದು ಎಂಬ ಅನುಭವದಿಂದ ತತ್ತ್ವಮಸಿ ಮುಂತಾದ ವೇದವಾಕ್ಯಗಳನ್ನು ಆಶ್ರಯಿಸಿ ಆತ್ಮಜಿಜ್ಞಾಸು ಉಪಾಸಕನಿಗೆ ಸಾಕ್ಷಾತ್ ಬೋಧಿಸುವ ಶ್ರೀಗುರುಮೂರ್ತಿಗೆ ನಮಸ್ಕಾರಗಳು. ಜ್ಞಾನ ಉದಯಿಸುವುದರಿಂದ ಪ್ರಪಂಚರೂಪದ ಬಂಧವು ಅಜ್ಞಾನ ಕಲ್ಪಿತ, ಪರಮಾರ್ಥವಲ್ಲ ಎಂಬ ಅಭಿಪ್ರಾಯವನ್ನು ಹೇಳುವ **ಯತ್ಸಾಕ್ಷಾತ್ಕರಣಾದಿತಿ.** ***ಭವಾಂಭೋನಿಧೌ*** ಆಳವಾದ ಸಾಗರದಂತೆ ಅಗಾಧವಾಗಿ ದುಸ್ತರವಾಗಿರುವ ***ಭವೇ*** ಸಂಸಾರದಲ್ಲಿ ***ನ ಪುನರಾವೃತ್ತಿಃ*** ಪುನಃ ಸಂಸಾರಭಾವವನ್ನು ಹೊಂದುವುದಿಲ್ಲ ಎಂಬ ಅರ್ಥ. {3}

ಶ್ಲೋಕದ ಅರ್ಥವನ್ನು ಹೀಗೆ ವಿವರಿಸಬಹುದು:

ಆತ್ಮನ ಸಂಪೂರ್ಣ ಏಕತೆ

इदमत्राकूतम् –
असत्कल्पेषु भावेषु जडेशु क्षणनाशिषु ।

अस्तित्वं च प्रकाशत्वं नित्यात्सङ्क्रामतिश्वरात् ॥ २ ॥

ಇದಮತ್ರಾಕೂತಮ್ –

ಅಸತ್ಕಲ್ಪೇಷು ಭಾವೇಷು ಜಡೇಶು ಕ್ಷಣನಾಶಿಷು ।

ಅಸ್ತಿತ್ವಂ ಚ ಪ್ರಕಾಶತ್ವಂ ನಿತ್ಯಾತ್ಸಂಕ್ರಾಮತೀಶ್ವರಾತ್ ॥ 2 ॥

ಶ್ಲೋಕದ ವ್ಯಾಖ್ಯಾನವನ್ನು ಆರಂಭಿಸುವ, ಅಭಿಪ್ರಾಯವನ್ನು ತಿಳಿಸುವ ಎಂಬ ಅರ್ಥದಲ್ಲಿ **ಇದಮತ್ರಾಕೂತಮ್**. ಅವಾಸ್ತವಿಕ, ಜಡ ಹಾಗೂ ಕ್ಷಣಿಕವಾಗಿ ಸೃಷ್ಟಿಯಾದ ಎಲ್ಲಾ ವಸ್ತುಗಳು, ನಿತ್ಯವಾಗಿರುವ ಈಶ್ವರನಿಂದ ಉತ್ಪತ್ತಿಯಾಗಿ ಅವನೊಂದಿಗೆ ಸಂಯೋಗಹೊಂದಿರುತ್ತವೆ. [3–2]

ವಿವೃತ್ತಿ

ಸತ್ತಾಸ್ಫುರಣೆಯ ಸಂಯೋಗವು ಯಾವ ಭಾವದಿಂದ ಆಗುವುದು, ಪ್ರತಿಬಿಂಬ ಭಾವದಿಂದಲೋ ಯಾ ಸಂಕ್ರಮಣ ಭಾವದಿಂದಲೋ ಎಂದು ಮುಂದೆ ಹೇಳಿದೆ. ಸಂಯೋಗವು ದರ್ಪಣ ಮುಂತಾದ ಭಾವದಿಂದ ಯಾ ಕಬ್ಬಿಣದ ಗುಂಡಿನ ಭಾವದಿಂದ ಕಂಡುಬರುವುದೋ ಎಂದು ಪ್ರಶ್ನಿಸಲಾಗಿದೆ. ಯಾವ ವಿಧವಾಗಿ ಸ್ವತಃ ಸತ್ತಾಸ್ಫುರಣೆ ಸಂಭವವಾಗುವುದು ಮತ್ತು ಯಾವ ವಿಧವಾಗಿ ಆತ್ಮನ ಸತ್ತಾಸ್ಫುರಣೆ ಸಂಭವವಾಗುವುದು? ಅದಕ್ಕೆ ಮೊದಲ ಪ್ರಶ್ನೆಗೆ ಉತ್ತರವಾಗಿ **ಅಸತ್‌ಕಲ್ಪೇಷ್ವಿತಿ.** ಅಸತ್‌ನ ಕಲ್ಪನೆಗೆ ಜಡತ್ವವೇ ಹೇತುವಾಗಿರುವುದು. ಸತ್‌ನ ಲಕ್ಷಣವು ಅನಿರ್ವಚನೀಯ; ಜಡತ್ವವು ಮುತ್ತಿನಚಿಪ್ಪಿನ ಬೆಳ್ಳಿಯಂತಿದೆ. ಕ್ಷಣಿಕತೆಯು ಜಡತ್ವಕ್ಕೆ ಕಾರಣವಾಗಿದೆ. ಜಡವು ದೃಷ್ಟವಾದರೂ ನಷ್ಟವಾಗುವ ಸ್ವರೂಪದ್ದಾಗಿರುವುದರಿಂದ ಮುತ್ತಿನಚಿಪ್ಪಿನ ಬೆಳ್ಳಿಯಂತೆ ಎಂದು ಹೇಳಿದೆ. ಯಾವ ವಿಧವಾಗಿ ವಿಷಯವಸ್ತುಗಳಲ್ಲಿ ನಿತ್ಯನಾದ ಈಶ್ವರನ ಅಸ್ತಿತ್ವ ಮತ್ತು ಪ್ರಕಾಶತ್ವವು ಸಂಕ್ರಮಣವಾಗಿ ಅವು ಅವಭಾಸವಾಗುವುದೋ, ಅದು ಬೆಳ್ಳಿಯ ರೂಪವಾಗಿ ಮುತ್ತಿನಚಿಪ್ಪಿನಲ್ಲಿ ಸತ್ತಾಸ್ಫುರಣೆ ಆದಂತಿರುವುದು. ಇಲ್ಲಿ ಸಂಕ್ರಮಣ ಶಬ್ದವು ಪ್ರವೇಶಿಸಿರುವ ಎಂಬ ಅಭಿಪ್ರಾಯದಲ್ಲಿ ಅಲ್ಲದೆ ವಿಶೇಷ ಆಕಾರದ ಅವಭಾಸ ಎಂಬ ಅಭಿಪ್ರಾಯದಲ್ಲಿದೆ. ಹಾಗೂ ಮುತ್ತಿನಚಿಪ್ಪಿನಲ್ಲಿ ಆರೋಪಿತವಾಗಿರುವ ಬೆಳ್ಳಿಯು ಪ್ರವೇಶವಾಗಿಲ್ಲ, ಆರೋಪಿತ ಅಧಿಷ್ಠಾನದ ವ್ಯತಿರೇಕ ಸ್ವರೂಪದ ಅಭಾವದಿಂದ ಆ ವಿಧವಾಗಿ ಆಗಿರುವುದು ಎಂಬ ಭಾವ. [3–2]

आत्मसत्तैव सत्तैषां भावनां ततोधिका ।

तथैव स्फुरणं जैषां नात्मस्फुरणतोधिकम् ॥ ३ ॥

ಆತ್ಮಸತ್ತೈವ ಸತ್ತೈಷಾಂ ಭಾವನಾಂ ತತೋಧಿಕಾ ।

ತಥೈವ ಸ್ಫುರಣಂ ಚೈಷಾಂ ನಾತ್ಮಸ್ಫುರಣತೋಧಿಕಮ್ ॥ 3 ॥

ಈ ವಸ್ತುಗಳು ತಮ್ಮ ಇರುವಿಕೆಯನ್ನು ಆತ್ಮದ ಇರುವಿಕೆಯೊಂದಿಗೆ ಗುರುತಿಸಿಕೊಳ್ಳುತ್ತವೆ, ಬೇರೇನಲ್ಲ; ಯಾವ ಪ್ರಕಾಶದಿಂದ ಅವು ಬೆಳಗುತ್ತಿವೆಯೋ, ಅದು ಆತ್ಮದ ಬೆಳಕಲ್ಲದೆ ಬೇರೇನೂ ಅಲ್ಲ. [3–3]

ವಿವೃತ್ತಿ

ಭಾವದ ಮಿಥ್ಯತ್ವವನ್ನು ಸ್ಪಷ್ಟಪಡಿಸುತ್ತಾ **ಆತ್ಮಸತ್ತೈವೇತಿ.** ದರ್ಪಣದಿಂದ ಬೇರೆಯೇ ಆಗಿರುವ ಭಾವದಿಂದ ಪ್ರತಿಬಿಂಬವು ಸಂಕ್ರಮಿಸುತ್ತದೆ ಆದರೆ ಶೀತಲ ಕಬ್ಬಿಣದ ಗುಂಡಿನ ಭಾವದಲ್ಲಿ ಬೆಂಕಿಯು ಕಂಡುಬರುವುದಿಲ್ಲ.

ಅದೇರೀತಿ ಆತ್ಮನ ಸತ್ತಾಸ್ಫುರಣೆಗಿಂತ ಹೆಚ್ಚಿನದಾದ ಪ್ರಕಾಶದ ಅಭಾವದಲ್ಲಿ ಪ್ರತಿಬಿಂಬವೂ ಸಂಕ್ರಮಿಸದು ಯಾ ಅಗ್ನಿಯ ಸಂಯೋಗವೂ ಆಗದು. [3–3]

ವಿಶೇಷ ವಸ್ತುಗಳು ಆತ್ಮದಿಂದ ಬೇರೆಯಾಗಿ, ಕನ್ನಡಿಯು ತಾನು ಪ್ರತಿಬಿಂಬಿಸಿದ ವಸ್ತುಗಳಿಂದ ಬೇರೆಯಾಗಿರುವಂತೆ ಅಥವಾ ತನ್ನದೇ ಆದ ಬೆಳಕಿನಿಂದ ಪ್ರಕಾಶಿಸುವಂತೆ, ಅವುಗಳು ತಮ್ಮ ಇರುವಿಕೆ ಹಾಗೂ ಬೆಳಗುವಿಕೆಗೆ ಆತ್ಮದ ಮೇಲೆ ನಿರ್ಭರವಾಗಿರುವುದಿಲ್ಲ ಎಂಬುದು ಪ್ರಶ್ನಿಸಿದಾತನ ನಿಲುವಾಗಿರಬಹುದು. ಮೊದಲ ಭಾಗಕ್ಕೆ ಗುರುಗಳು ಹೀಗೆ ಉತ್ತರಿಸುತ್ತಾರೆ: ವಿಶೇಷತೆಗಳಿಗೆ ತಮ್ಮದೇ ಆದ ಅಸ್ತಿತ್ವವಿಲ್ಲ; ಅವುಗಳು ಜಡ ಹಾಗೂ ಕ್ಷಣಿಕವಾದುದರಿಂದ ಅವಾಸ್ತವಿಕ, ಒಂದು ತುಂಡು ಹಗ್ಗದಲ್ಲಿ ಹಾವನ್ನು ಕಂಡಂತೆ. ಆತ್ಮದ ಅಸ್ತಿತ್ವ ಮತ್ತು ಪ್ರಕಾಶಗಳು ವಿಶೇಷ ವಸ್ತುಗಳೊಡನೆ ಸಂಯೋಜನೆ ಹೊಂದಿರುವ ವಿಚಾರವನ್ನು ಹೇಳುವಾಗ, ಆತ್ಮವು ಇವುಗಳ ರೂಪಧಾರಣೆಯನ್ನು ಮಾಡುತ್ತದೆಯೆಂದು ತಿಳಿಯಬೇಕು. ಇವುಗಳು ಬೇರೆಯಾಗಿ ಇದ್ದು, ಸ್ವಯಂಪ್ರಕಾಶಿತವಾಗಿದ್ದರೆ, ಕನ್ನಡಿಯು ತಾನು ಬಿಂಬಿಸುವ ವಸ್ತುಗಳಿಂದ ಬೇರೆಯಾಗಿ ಇರುವಂತೆ, ಇವು ಆತ್ಮದಿಂದ ಹೊರತಾಗಿ ಕಾಣುವುದು. ವಿಶೇಷ ವಸ್ತುಗಳಿಗೆ ಈ ರೀತಿಯಾದ ಆತ್ಮದ ಹೊರತಾದ ಭಿನ್ನ ಅಸ್ತಿತ್ವವಿಲ್ಲದಿರುವುದರಿಂದ, ನಾವು ಆತ್ಮದ ಅಸ್ತಿತ್ವ ಮತ್ತು ಪ್ರಕಾಶವು ಇವುಗಳಲ್ಲಿ ಪ್ರತಿಬಿಂಬಿಸುವುದು ಯಾ ಸಂಯೋಗಹೊಂದಿರುವುದು ಎಂದು ಹೇಳಲು ಅಸಾಧ್ಯ.

ಎರಡನೆಯ ವಿಚಾರವನ್ನು ಹೀಗೆ ಉತ್ತರಿಸಬಹುದು:

ज्ञानानि बहुरूपाणि तेषां च विषया अपि ।
अहङ्कारेनुषज्यन्ते सूत्रे मणिगणा इव ॥ ४ ॥

ಜ್ಞಾನಾನಿ ಬಹುರೂಪಾಣಿ ತೇಷಾಂ ಚ ವಿಷಯಾ ಅಪಿ ।
ಅಹಂಕಾರೇನುಷಜ್ಯಂತೇ ಸೂತ್ರೇ ಮಣಿಗಣಾ ಇವ ॥ 4 ॥

ವಿವಿಧ ಜ್ಞಾನರೂಪಗಳು ವಿವರಿಸುವ ವಿಷಯವಸ್ತುಗಳು, ಅಹಂಕಾರದಲ್ಲಿ ಭದ್ರವಾಗಿ ಪೋಣಿಸಲ್ಪಟ್ಟಿವೆ, ದಾರದಲ್ಲಿ ಮುತ್ತಿನಮಣಿಗಳನ್ನು ಕೋದಂತೆ. [3–4]

ವಿವೃತ್ತಿ

ಎರಡನೆಯದನ್ನು ನಿರಾಕರಿಸುತ್ತಾ **ಜ್ಞಾನಾನೀತಿ.** ***ಬಹುರೂಪಾಣಿ*** ಅನೇಕಪ್ರಕಾರದ ಜ್ಞಾನರೂಪಗಳಿಗೆ ವಿಷಯವಾಗಿರುವ ವಸ್ತುಗಳು ಎಲ್ಲವೂ ***ಅಹಂಕಾರೇ*** ಅಂತಃಕರಣದ ವೃತ್ತಿವಿಶೇಷಗಳಾಗಿವೆ, ಮಣಿಗಳನ್ನು ದಾರದಲ್ಲಿ ಪೋಣಿಸಿರುವಂತೆ ಗ್ರಹಿಸಲ್ಪಡುತ್ತವೆ. ಅವುಗಳು ಅಂತಃಕರಣದ ವ್ಯಾಪ್ತಿಯೊಳಗೆ ವಿಷಯವಾಗಿ ಸ್ಫುರಿಸಿದಾಗ ಸಚ್ಚಿದಾತ್ಮನಲ್ಲಿ ಅವುಗಳ ಅಧ್ಯಾಸವು ನಿಷ್ಪನ್ನವಾಗುವುದು, ನೇರವಾಗಿ ಅಲ್ಲ. ಪರಮಾರ್ಥದೃಷ್ಟಿಯನ್ನು ಆಶ್ರಯಿಸಿರುವ ವಿಷಯಗಳೇ ಇಲ್ಲದಿರುವಾಗ, ಅವುಗಳಲ್ಲಿ ಸತ್ತಾಸ್ಫುರಣೆಯ ಸಂಯೋಗವು ಹೇಗಾಗುವುದು? ಎಂಬ ಅಭಿಪ್ರಾಯ. ವ್ಯಾವಹಾರಿಕ ದೃಷ್ಟಿಕೋನದಲ್ಲಿ ಭಾಸವಾಗುವ ಅಂತಃಕರಣಪ್ರಣಾಳಿಕೆಯು ಆತ್ಮದಿಂದ ಬೇರೆಯೇ ಆಗಿರುವುದರಿಂದ ಬ್ರಹ್ಮವಿಷಯಕ್ಕೆ ಅದು ಆಧಾರವಲ್ಲ ಎಂಬುದನ್ನು ವಿಶೇಷವಾಗಿ ಹೇಳಲಾಗಿದೆ. [3–4]

ವಿಶೇಷತೆಗಳ ಅಸ್ತಿತ್ವ ಮತ್ತು ಅವುಗಳ ಬೆಳಗುವಿಕೆಯು ಅಹಂಕಾರಕ್ಕೆ (ಸ್ವಜ್ಞಾನವುಳ್ಳ ಅಸ್ತಿತ್ವ) ಸಂಬಂಧಿಸಿದೆ ಹಾಗೂ ಅವುಗಳನ್ನು ಅಂತಃಕರಣದ ಸಹಾಯದಿಂದ ತಲುಪುತ್ತದೆ; ಅಹಂಕಾರವು ಅಂತಃಕರಣದ ಭಾಗವಾಗಿದೆ.

ಕೇಳಿದ ಪ್ರಶ್ನೆಯನ್ನು ಎರಡು ಭಿನ್ನ ವಿಚಾರಗಳ ಮೂಲಕ ಉತ್ತರಿಸಿದರೂ, ಉತ್ತರಗಳು ಹೀಗೆ ಮಾತ್ರ ಬೇರೆಯಾಗಿವೆ: ನಿರ್ದಿಷ್ಟ ವಾಸ್ತವತೆಯ ದೃಷ್ಟಿಯಿಂದ ಮೊದಲ ವಿಚಾರವನ್ನು ವಿವರಿಸಿದೆ ಹಾಗೂ ವಿಶೇಷತೆಯ ವಾಸ್ತವಿಕೆಯ ದೃಷ್ಟಿಯಿಂದ ಎರಡನೆಯ ವಿಚಾರವನ್ನು ಉತ್ತರಿಸಿದೆ.

प्रकाशाभिन्नमेवैतद्विश्वं सर्वस्य भासते ।
लहरीबुद्बुदादीनां सलिलान्न पृथक्स्थितिः ॥ ५ ॥

ಪ್ರಕಾಶಾಭಿನ್ನಮೇವೈತದ್ವಿಶ್ವಂ ಸರ್ವಸ್ಯ ಭಾಸತೇ ।
ಲಹರೀಬುದ್ಬುದಾದೀನಾಂ ಸಲಿಲಾನ್ನ ಪೃಥಕ್ಸ್ಥಿತಿಃ ॥ 5 ॥

ಎಲ್ಲಾ ಜೀವಿಗಳಿಗೆ ಈ ಜಗತ್ತು ಪ್ರಕಾಶದಿಂದ ಅಭಿನ್ನವಾಗಿರುವಂತೆ ದೃಶ್ಯವಾಗುತ್ತದೆ; ಅಲೆಗಳು ಮತ್ತು ನೀರಿನ ಗುಳ್ಳೆಗಳಿಗೆ, ನೀರನ್ನು ಬಿಟ್ಟು ಬೇರೆ ಅಸ್ತಿತ್ವವಿಲ್ಲ. [3–5]

ವಿವೃತ್ತಿ

ಈ ಜಗತ್ತಿನ ಸ್ಫುರಣೆಯು ಪ್ರಕಾಶತ್ವದ ಅಧೀನವಾಗಿಯೇ ಇದೆಯೆಂದು ಪರಿಕಲ್ಪಿತವಾಗಿದೆ; ನೀರಿನಲ್ಲಿ ಸ್ಫುರಿಸುವ ಅಲೆಗಳು ಯಾ ನೀರಿನ ಗುಳ್ಳೆಗಳು ನೀರಿನಲ್ಲಿಯೇ ಕಲ್ಪಿತವಾಗಿರುವಂತೆ. ಅಂತೆಯೇ ಸಚ್ಚಿದಾತ್ಮನ ಅಧೀನವಾಗಿಯೇ ಸತ್ತಾಸ್ಫುರಣೆಯನ್ನು ಕಲ್ಪಿಸಿಕೊಳ್ಳಬೇಕೆಂಬುದು ಸಿದ್ಧವಾಗುವುದು. ಸಚ್ಚಿದಾತ್ಮನು ಮತ್ತು ಅದರಿಂದ ಉತ್ಪನ್ನವಾದ ಪದಾರ್ಥಗಳು ಎರಡೂ ಒಂದೇ, ಅದುವೇ ಪರಮಾರ್ಥವು ಎಂದು ಉಪಸಂಹರಿಸುತ್ತಾ **ಪ್ರಕಾಶಾಭಿನ್ನಮಿತಿ.** [3–5]

ಯಾವುದು ತನ್ನ ಅಸ್ತಿತ್ವಕ್ಕೋಸ್ಕರ ಹಾಗೂ ದೃಷ್ಟವಾಗಲು ಬೇರೊಂದರ ಮೇಲೆ ಅವಲಂಬಿತವಾಗುತ್ತದೋ, ಅದು ಆ ಬೇರೊಂದು ವಸ್ತುವಿನ ರೂಪಾಂತರವಷ್ಟೇ; ನೀರಿನ ಅಲೆಗಳು ಮತ್ತು ಗುಳ್ಳೆಗಳು ನೀರಿನ ಮೇಲೆ ಅವಲಂಬಿತವಾದಂತೆ. ಹಾಗೆಯೇ ತಮ್ಮ ಅಸ್ತಿತ್ವ ಮತ್ತು ಪ್ರಕಾಶಗಳಿಗೆ ಸ್ವಪ್ರಕಾಶಿತನಾದ ಆತ್ಮವನ್ನು ಅವಲಂಬಿಸಿರುವ ವಿಶೇಷ ವಸ್ತುಗಳು, ಆತ್ಮದ ರೂಪಾಂತರ ಮಾತ್ರವಾಗಿದೆ. ಏಕಮೇವಾದ್ವಿತೀಯವಾಗಿ, ಆತ್ಮವೊಂದೇ ಇರುತ್ತದೆ.

जानमित्येव यज्ज्ञानं भावनाविश्य वर्तते ।
ज्ञातं मयेति तत्पश्चाद्विश्राम्यत्ययन्तरात्मनि ॥ ६ ॥

ಜಾನಾಮಿತ್ಯೇವ ಯಜ್ಜ್ಞಾನಂ ಭಾವಾನಾವಿಶ್ಯ ವರ್ತತೇ ।
ಜ್ಞಾತಂ ಮಯೇತಿ ತತ್ಪಶ್ಚಾದ್ವಿಶ್ರಾಮ್ಯತ್ಯಯಂತರಾತ್ಮನಿ ॥ 6 ॥

ಪ್ರಥಮವಾಗಿ ವಿಶೇಷ ವಸ್ತುಗಳ ಒಳಹೊಕ್ಕ ಅಂತರಾತ್ಮವು, 'ನಾನು ತಿಳಿದಿದ್ದೇನೆ' ಎಂದು ಅಭಿವ್ಯಕ್ತಗೊಳ್ಳುತ್ತದೆ; ಆಮೇಲಿನ ವಿಶ್ರಾಂತ ಸ್ಥಿತಿಯಲ್ಲಿ ಅದು 'ನಾನು ಅದನ್ನು ತಿಳಿದಿದ್ದೇನೆ' ಎಂದು ಅಭಿವ್ಯಕ್ತಿಸಲ್ಪಡುತ್ತದೆ. [3–6]

ವಿವೃತ್ತಿ

ವಿಷಯದ ಸ್ಫುರಣೆಯು ಆತ್ಮಧರ್ಮವು, ವಿಷಯಧರ್ಮವು ಅಲ್ಲ ಎಂದು ಉಪಪಾದಿಸುವ **ಜಾನಾಮೀತಿ.** ಸರ್ವ ವಿಷಯವಸ್ತುಗಳಲ್ಲಿ ಅರಿಯಲ್ಪಡುವ ಕ್ರಿಯೆ ಇರುವುದು ಮತ್ತು ಅದನ್ನು ಅದರ ಜ್ಞಾನವೆಂದು ಭಾವಿಸಲಾಗಿದೆ. ಅದೇ ಜ್ಞಾನವು ಅಂತರಾತ್ಮನ ವಿಶ್ರಾಂತಸ್ಥಿತಿಯಲ್ಲಿ 'ಅದನ್ನು ಅರಿಯಲಾಗಿದೆ' ಎಂದು ಪರ್ಯವಸಾನವಾಗುವುದು. [3–6]

ಮೇಲಿನ ಎರಡೂ ವಾಕ್ಯಗಳಲ್ಲಿ ಗುರುತಿಸಲ್ಪಡುವ ವಸ್ತು ಇದೆ ಎಂಬುದು ನಿಜ. ಆದರೆ ಮೊದಲನೆಯದರಲ್ಲಿ ವಸ್ತುವನ್ನು ಗುರುತಿಸುವ ಕ್ರಿಯೆ ಮಾತ್ರ ಗಮನಕ್ಕೆ ಬರುತ್ತದೆ ಹಾಗೂ ಅಹಂಕಾರದಲ್ಲಿ ಆ ಕ್ರಿಯೆಯು ಸಮ್ಮಿಳಿತವಾಗಿರುವುದನ್ನು ಎರಡನೆಯದು ತೋರಿಸುತ್ತದೆ.

> घटादिकानि कार्याणि विश्राम्यन्ति मृदादिषु ।
> विश्वं प्रकाशाभिन्नत्वाद्विश्राम्येत्परमेश्वरे ॥ ७ ॥
>
> ಘಟಾದಿಕಾನಿ ಕಾರ್ಯಾಣಿ ವಿಶ್ರಾಮ್ಯಂತಿ ಮೃದಾದಿಷು ।
> ವಿಶ್ವಂ ಪ್ರಕಾಶಾಭಿನ್ನತ್ವಾದ್ವಿಶ್ರಾಮ್ಯೇತ್ಪರಮೇಶ್ವರೇ ॥ 7 ॥

ಮಡಕೆಯಂತಹ ಸೃಜಿಸಲಟ್ಟ ಎಲ್ಲಾ ವಸ್ತುಗಳು, ಮಣ್ಣಿನಂತಹ ತಮ್ಮ ಕಾರಣವಸ್ತುವಿನಲ್ಲಿ ವಿಶ್ರಾಂತಿಯನ್ನು ಪಡೆಯುತ್ತವೆ; ಹಾಗೆಯೇ ಪ್ರಕಾಶದಿಂದ ಅಭಿನ್ನವಾಗಿರುವ ವಿಶ್ವವು ಪರಮಾತ್ಮನಲ್ಲಿ ವಿಶ್ರಾಂತಿಯನ್ನು ಪಡೆಯಬೇಕು. [3–7]

ವಿವೃತ್ತಿ

ಅದಕ್ಕೆ ದೃಷ್ಟಾಂತವನ್ನು ನೀಡುತ್ತಾ **ಘಟಾದಿಕಾನೀತಿ** ಮತ್ತು ಉದಾಹರಿಸಲ್ಪಡುವ **ವಿಶ್ವಮಿತಿ.** ಇಲ್ಲಿಯ ಭಾವವು ಹೀಗಿದೆ: ಒಂದುವೇಳೆ ಇದನ್ನು ನಾನು ಅರಿತಿರುವೆನಾದರೆ, ಅರಿಯಲ್ಪಡುವ ವಿಷಯದ ಜ್ಞಾನವು ಸಮಾನವಾಗಿರಬೇಕು. ಹಾಗಾಗಿ ಮೊದಲಿನ ಪ್ರಯೋಗದಲ್ಲಿ ಕರ್ತೃವಿನ ಕ್ರಿಯೆಯ ಕರ್ಮವ್ಯಾಪ್ತಿ ಮಾತ್ರವೇ ಲಕ್ಷಿತವಾಗುತ್ತದೆ. ಎರಡನೆಯದರಲ್ಲಿ ಸಕರ್ಮಕವಾದ ಕ್ರಿಯೆಯು ತನ್ನೊಳಗೇ ಸಮ್ಮಿಳಿತವಾಗಿರುವುದೆಂಬ ಅನುಸಂಧಾನದ ಅನುಭವದಿಂದ ಅದು ಪರಮಾತ್ಮನಲ್ಲಿ ವಿಶ್ರಮಿಸಿದೆ ಎಂದು ಹೇಳಲಾಗಿದೆ. ಯಾವುದೇ ಕಾರ್ಯವು ಸ್ವತಂತ್ರವಾಗಿರುವಂತೆ ಭಾಸವಾದರೂ, ತನ್ನ ಕಾರಣದಲ್ಲಿಯೇ ವಿಶ್ರಮಿಸುತ್ತದೆ; ಕಾರ್ಯವು ಕಾರಣಕ್ಕಿಂತ ಅಭಿನ್ನ ಎಂದು ಉದಾಹರಣೆ ಮತ್ತು ಉದಾಹರಿಸಲ್ಪಟ್ಟ ವಿಷಯಗಳ ಅಭಿಪ್ರಾಯವಾಗಿದೆ. [3–7]

ಯಾವುದೇ ಕಾರ್ಯಕ್ಕೆ ಕಾರಣದ ಹೊರತಾಗಿ ಅಸ್ತಿತ್ವವಿಲ್ಲ; ವಸ್ತು ಕಾರಣವಾದ ಮಣ್ಣಿನ ಹೊರತಾಗಿ, ಮಡಕೆಗೆ ಅಸ್ತಿತ್ವವಿಲ್ಲ. ಅದೇರೀತಿ, ಜಗತ್ತಿನ ವಸ್ತುಕಾರಣವಾದ ಆತ್ಮದ ಹೊರತಾಗಿ, ಆತ್ಮದಲ್ಲಿ ಒಂದಾಗಿ ಬೇರೆ ಸ್ವತಂತ್ರ ಅಸ್ತಿತ್ವವನ್ನು ಅದು ಹೊಂದಿರುವುದಿಲ್ಲ. ವಾಸ್ತವವಾಗಿ ಆತ್ಮವು ಮಾತ್ರವೇ ಇದೆ ಹಾಗೂ ವಿಶ್ವವು ಅದರ ಭ್ರಮಾರೂಪದ ಪ್ರಕಟಣೆ ಮಾತ್ರವಾಗಿದೆ.

ವಿಶೇಷವಸ್ತುಗಳನ್ನು ಬೆಳಗುವ ಪ್ರಕಾಶವು ಆತ್ಮದಿಂದ ಹೊರಡುತ್ತದೆ ಎಂದು ಆರನೆಯ ವಾರ್ತಿಕದಲ್ಲಿ ಹೇಳಲಾಯಿತು; ವಸ್ತುಗಳಿಗೆ ಆತ್ಮದಿಂದ ಹೊರತಾಗಿ ಬೇರೆ ಸ್ವತಂತ್ರ ಅಸ್ತಿತ್ವವಿಲ್ಲವೆಂದು ಏಳನೆಯ ವಾರ್ತಿಕದಲ್ಲಿ ತೋರಿಸಲಾಯಿತು.

ಭ್ರಮೆಯ ಕಾರಣ ಅವಿದ್ಯೆ

स्वगतेनैव काळिम्ना दर्पणं मलिनं यथा ।
अज्ञानेनावृतं ज्ञानं तेन मुह्यन्ति जन्तवः ॥ ८ ॥

ಸ್ವಗತೇನ್ಯೈವ ಕಾಳಿಮ್ನಾ ದರ್ಪಣಂ ಮಲಿನಂ ಯಥಾ ।
ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ ॥ 8 ॥

ಕನ್ನಡಿಯಲ್ಲಿರುವ ಕಲೆಗಳು ಪ್ರತಿಬಿಂಬವನ್ನು ಮಂಕುಮಾಡುವಂತೆ, ಅವಿದ್ಯೆಯು ಜ್ಞಾನವನ್ನು ಮುಸುಕುತ್ತದೆ ಹಾಗೂ ಜೀವಿಗಳು ಭ್ರಮಾಧೀನವಾಗುತ್ತವೆ. [3–8]

ವಿವೃತ್ತಿ

ಆತ್ಮತತ್ತ್ವವು ಅದ್ವಿತೀಯವೇ ಆಗಿದ್ದರೆ, ಅದು ಏಕೆ ಸರ್ವ ಲೋಕದಲ್ಲಿ ಪ್ರತ್ಯಕ್ಷವಾಗಿಲ್ಲ ಎಂಬ ಶಂಕೆಗೆ ಸಹಜದೋಷಗಳೇ ಕಾರಣ ಎಂಬ ಅಭಿಪ್ರಾಯದ ದೃಷ್ಟಾಂತವನ್ನು ಹೇಳುತ್ತಾ **ಸ್ವಗತೇನ್ಯೈವೇತಿ.** ಹೇಗೆ ದರ್ಪಣದಲ್ಲಿರುವ ಕಪ್ಪುಕಲೆಗಳು ದರ್ಪಣದ ನಿಜಸ್ವಭಾವವನ್ನು ಆವರಿಸಿಕೊಳ್ಳುತ್ತವೆಯೋ, ಹಾಗೆಯೇ ತನ್ನಲ್ಲಿರುವ ಅನಾದಿ ಅನಿರ್ವಚನೀಯ ಅಜ್ಞಾನವು ಆತ್ಮನ ಯಥಾರ್ಥಜ್ಞಾನವನ್ನು ಆಚ್ಛಾದಿಸುತ್ತದೆ. ಆದರಿಂದ ಜಂತುಗಳು ***ಮುಹ್ಯಂತಿ*** ಮೋಹವೆಂಬ ಮಿಥ್ಯಾಜ್ಞಾನದಿಂದ ಪರಮಾರ್ಥವಿಷಯಕವಾಗಿ ದ್ರಷ್ಟ–ದೃಶ್ಯ, ಕಾರ್ಯ–ಕಾರಣ ಮುಂತಾದ ವಿಭಾಗಗಳನ್ನು ಹೊಂದುತ್ತಾರೆ. [3–8]

ಕಾರ್ಯಗಳಿಂದ ತುಂಬಿರುವ ಜಗತ್ತಿನಲ್ಲಿ ನೋಡುವವ – ನೋಡಿದ ವಸ್ತು, ಕಾರಣ – ಕಾರ್ಯ ಇತ್ಯಾದಿ ಭೇದಗಳನ್ನು ಪ್ರಕಟಪಡಿಸುವ ಅವಿದ್ಯೆಯು, ಆತ್ಮದ ವಾಸ್ತವಿಕ ಪರಿಚಯವನ್ನು ಮರೆಮಾಡಿ, ಎಲ್ಲಾ ಜೀವಿಗಳನ್ನು ಮರುಳುಮಾಡುತ್ತದೆ.

ದೇಹವು ಜೀವ ಮತ್ತು ಈಶ್ವರನನ್ನು ಪ್ರತ್ಯೇಕಿಸುತ್ತದೆ

घटाकाशो महाकाशो घटोपाधिकृतो यथा ।
देहोपधिकृतो भेदो जीवात्मपरमात्मनोः ॥ ९ ॥

ಘಟಾಕಾಶೋ ಮಹಾಕಾಶೋ ಘಟೋಪಾಧಿಕೃತೋ ಯಥಾ ।
ದೇಹೋಪಾಧಿಕೃತೋ ಭೇದೋ ಜೀವಾತ್ಮಪರಮಾತ್ಮನೋಃ ॥ 9 ॥

ಮಡಕೆಯೊಳಗಿರುವ ಆಕಾಶವು ಮಹಾಕಾಶದಿಂದ (ಹೊರಗಿನ ಆಕಾಶ) ಬೇರೆಯಾಗಿ, ಮಡಕೆಯಿಂದಾಗಿ ಕಾಣುತ್ತದೆ; ಹಾಗೆಯೇ ದೇಹದಿಂದಾಗಿ ಜೀವಾತ್ಮ ಮತ್ತು ಪರಮಾತ್ಮನ ನಡುವೆ ಭಿನ್ನತೆ ಕಂಡುಬರುತ್ತದೆ. [3–9]

ವಿವೃತ್ತಿ

ಎಲ್ಲದರಲ್ಲಿಯೂ ಭೇದವ್ಯವಹಾರ ಮಾಡಲು ಮೂಲವಾದ ಜ್ಞಾನವನ್ನು ಹೇಳಿ, ಜೀವ–ಈಶ್ವರ ಭೇದ ಭಾಸವಾಗುವ ನಿಮಿತ್ತವನ್ನು ದೃಷ್ಟಾಂತದ ಮೂಲಕ ತಿಳಿಸುವ **ಘಟಾಕಾಶ ಇತಿ.** ಹೇಗೆ ಸ್ವಭಾವದಿಂದ ಅಪರಿಮಿತವಾಗಿರುವ ಆಕಾಶವು ಮಡಕೆಯ ಉಪಾಧಿಯು ನಿಮಿತ್ತವಾಗಿ ಮಡಕೆಯೊಳಗೆ ಆಂಶಿಕವಾಗಿ ಕ್ರೋಡೀಕೃತವಾದಂತೆ ಕಲ್ಪಿತವಾಗುವುದರಿಂದ ಘಟಾಕಾಶವೆಂದು ಒಂದು ಭಾಗವಾಗಿ ಕರೆಯಲ್ಪಟ್ಟು ಮಡಕೆಯ

ಹೊರಗಿನ ಆಕಾಶವು ಮಹಾಕಾಶವೆನಿಸಿದರೂ, ಪರಮಾರ್ಥದಲ್ಲಿ ಆಕಾಶದ ಅಮೂರ್ತತೆಯಿಂದ ಪರಿಚ್ಛಿನ್ನತೆಯು ಸ್ವಲ್ಪವೂ ಸಂಭವವಿಲ್ಲವಾಗಿರುವುದು. ಹಾಗೆಯೇ ಜೀವಾತ್ಮ, ಪರಮಾತ್ಮರಲ್ಲಿ ದೇಹವೆಂಬ ಉಪಾಧಿಯ ಕಾರಣದಿಂದ ಭೇದವು ಕಂಡುಬಂದು, ಆಂಶಿಕನಲ್ಲದ ಪರಮಾತ್ಮನ ಪರಮಾರ್ಥತೆಯನ್ನು ಹೇಳಿದೆ. ಹಾಗೆಯೇ ದೇಹದಿಂದಾಗಿ ನಾನು ಮನುಷ್ಯ ಮುಂತಾದ ಪ್ರಕಾರದಿಂದ ವಿಶೇಷ್ಯವಾಗಿರುವ ಆ ಚಿದಾತ್ಮನೇ ಜೀವಾತ್ಮನೆಂದು ಕರೆಯಲ್ಪಟ್ಟರೂ, ಅವನೇ ಆ ವಿಶೇಷ್ಯವಾಗಿರುವ ಈಶ್ವರನು. ದೇಹ ಮೊದಲಾದ ಉಪಾಧಿಗಳಿರುವ ಚಿದಾತ್ಮನಲ್ಲಿ ಸಂಬಂಧ ನಿರೂಪಿಸುವುದರಿಂದ ಜೀವ–ಈಶ್ವರರ ಮಧ್ಯೆ ವಾಸ್ತವದಲ್ಲಿ ಭೇದವು ಸಂಭವಿಸುವುದು ಎಂಬ ಅಭಿಪ್ರಾಯವು. ಪರಮಾತ್ಮನ ಅಂಶತ್ವ, ವಿಕಾರತ್ವಗಳು ಜೀವನಿಗೆ ಅಸ್ವತಂತ್ರವಾಗಿರುವವು. [3–9]

ಆಕಾಶದಂತೆ ಆತ್ಮವೂ ಅವಿಭಾಜಿತ; ಆತ್ಮದ ಮೇಲೆ ಆರೋಪಿಸಲ್ಪಟ್ಟ ಭಿನ್ನತೆಗಳೆಲ್ಲವೂ, ದೇಹಗಳಲ್ಲಿರುವ ಭಿನ್ನತೆಗಳ ಕಾರಣದಿಂದ ಮಾಡಲ್ಪಟ್ಟದ್ದು. ಆತ್ಮದ ಹಾಗೂ ದೇಹದ ನಡುವೆ ಯಾವುದೇ ವಾಸ್ತವಿಕ ಸಂಬಂಧಗಳನ್ನು ಕಲ್ಪಿಸಲು ಅಸಾಧ್ಯ ಮತ್ತು ದೇಹದ ಕಾರಣದಿಂದ ಕಂಡುಬರುವ ಆತ್ಮದ ನ್ಯೂನತೆಗಳೆಲ್ಲವೂ ಅಸತ್ಯ ಹಾಗೂ ಕಲ್ಪಿತ.

ಅವರ ಏಕತೆಯನ್ನು ಶ್ರುತಿಗಳಲ್ಲಿ ಹೇಳಿದೆ

तत्त्वमस्यादिवाक्यैस्तु तयोरैक्यं प्रदर्श्यते ।
सोयं पुरुष इतुक्ते पुमानेको हि दृष्यते ॥ १० ॥

ತತ್ತ್ವಮಸ್ಯಾದಿವಾಕ್ಯೈಸ್ತು ತಯೋರೈಕ್ಯಂ ಪ್ರದರ್ಶ್ಯತೇ ।
ಸೋಽಯಂ ಪುರುಷ ಇತ್ಯುಕ್ತೇ ಪುಮಾನೇಕೋ ಹಿ ದೃಷ್ಯತೇ ॥ 10 ॥

"ತತ್ತ್ವಮಸಿ"ಯಂತಹ ಮಹಾವಾಕ್ಯಗಳಲ್ಲಿ ಜೀವ ಮತ್ತು ಈಶ್ವರನ ಅಭೇದವನ್ನು ಪ್ರದರ್ಶಿಸಿದೆ. "ಅವನು ಈ ವ್ಯಕ್ತಿ" ಎಂದು ಹೇಳುವಾಗ, ಒಬ್ಬನೇ ವ್ಯಕ್ತಿಯ ಕುರಿತು ಸಂಬೋಧಿಸುವುದು. [3–10]

ವಿವೃತ್ತಿ

ಆರೋಪಿತ ದೇಹವೆಂಬ ಉಪಾಧಿಯಿಂದ ಬಂಧಿತವಾಗಿ ಭೇದ ಪ್ರತಿಭಾಸವಾಗಿ, ಅದರ ತಾದಾತ್ಮ್ಯದ ಹೇಳಿಕೆಯು ಜೀವವು ಪರಮಾತ್ಮನ ಅಂಶವೆಂಬ ಭೇದದ ಹೇಳಿಕೆಯನ್ನು ಬಾಧಿಸುವುದು ಎಂದು ಶ್ರುತಿಯು ತಿಳಿಸುತ್ತದೆ ಎಂದು ಹೇಳುವ **ತತ್ತ್ವಮಸ್ಯಾವಾಕ್ಯೈರಿತಿ.** ಪ್ರದರ್ಶಿಸುವನು, ಜ್ಞಾಪಿಸುವನು ಎಂದು ಹೇಳುವಾಗ ಅವನ ಆತ್ಮದ ಕಾರ್ಯವನ್ನೇ ತಿಳಿಸುವುದು. ವಿರುದ್ಧಾಂಶಗಳ ನಾಶದಿಂದ ಐಕ್ಯತೆಯು ಸಿದ್ಧವಾಗಿ ಪ್ರಕಟವಾಗುವುದು ಎಂಬ ಅರ್ಥದಲ್ಲಿ. ಅದಕ್ಕೆ ಲೋಕಪ್ರಸಿದ್ಧವಾದ ದೃಷ್ಟಾಂತವಾಗಿ **ಸೋಽಯಮಿತಿ.** [3–10]

यज्जगत्कारणं तत्त्वं तत्पदार्थस्स उच्यते ।
देहादिभिः परिच्छिन्नो जीवस्तु त्वंपदाभिधः ॥ ११ ॥

ಯಜ್ಜಗತ್ಕಾರಣಂ ತತ್ತ್ವಂ ತತ್ಪದಾರ್ಥಸ್ಸ ಉಚ್ಯತೇ ।
ದೇಹಾದಿಭಿಃ ಪರಿಚ್ಛಿನ್ನೋ ಜೀವಸ್ತು ತ್ವಂಪದಾಭಿಧಃ ॥ 11 ॥

"ತತ್" ಎಂಬ ಪದವು ಜಗತ್ತಿನ ಮೂಲಕಾರಣವನ್ನು ನಿರ್ದೇಶಿಸಿದರೆ, "ತ್ವಮ್" ಪದವು ದೇಹದಿಂದ ಪರಿಚ್ಛಿನ್ನನಾದ (ಆವರಿಸಲ್ಪಟ್ಟ) ಜೀವನನ್ನು ಹೇಳುತ್ತದೆ. [3–11]

ವಿವೃತ್ತಿ

ವಾಕ್ಯದ ಅರ್ಥವನ್ನು ತಿಳಿಸಲು ಅದರ ಉತ್ಪತ್ತಿ ಪ್ರಕಾರವನ್ನು ಹೇಳಲು ಮೊದಲಾಗಿ ವಾಕ್ಯದಲ್ಲಿರುವ ಪದಗಳ ವಾಚ್ಯಾರ್ಥ, ಲಕ್ಷ್ಯಾರ್ಥ ಭೇದಗಳನ್ನು ವಿವರಿಸುತ್ತಾ **ಯಜ್ಜಗದಿತಿ.** ಅಧಿದೈವ ಅವಸ್ಥೆಯಲ್ಲಿ ವಿಕ್ಷೇಪವೇ ಪ್ರಧಾನವಾಗಿರುವ ಮಾಯೆ ಶಬ್ದವಾಚ್ಯವಾದ ಅಜ್ಞಾನವು, ಅದರ ಕಾರ್ಯವಾದ ಭೌತಿಕಪ್ರಪಂಚದಲ್ಲಿ ಪರೋಕ್ಷ ಧರ್ಮವಿಶಿಷ್ಟವಾಗಿರುವ ಚಿದಾತ್ಮನು ತತ್ ಶಬ್ದದ ವಾಚ್ಯಾರ್ಥವು. ತ್ವಂ ಪದದ ವಾಚ್ಯಾರ್ಥವನ್ನು ಹೇಳಲು **ದೇಹಾದಿಭಿರಿತಿ.** ಅಧ್ಯಾತ್ಮ ಅವಸ್ಥೆಯಲ್ಲಿ ಆವರಣಶಕ್ತಿ ಪ್ರಧಾನವಾಗಿ ಅವಿದ್ಯೆ ಶಬ್ದವಾಚ್ಯವಾದ ಅಜ್ಞಾನವು ಅದರ ಕಾರ್ಯವಾದ ದೇಹಯುಕ್ತ ಪ್ರಪಂಚದಲ್ಲಿ ಅಪರೋಕ್ಷ ಧರ್ಮವಿಶಿಷ್ಟವಾಗಿರುವ ಚಿದಾತ್ಮನು ತ್ವಂ ಪದದ ವಾಚ್ಯಾರ್ಥವು. [3–11]

ಅಹಂಕಾರವು ತನಗೆ ಬಾಹ್ಯವೆಂದು ಭಾವಿಸುವ, ಮಾಯೆ ಯಾ ಅಜ್ಞಾನದಿಂದ ಹುಟ್ಟಿರುವ ವಿಶ್ವದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿರುವ ಈಶ್ವರನನ್ನು, ಸ್ವಪ್ರಕಾಶಿತನಾದ ಆತ್ಮವನ್ನು, 'ತತ್' (ಅದು) ಪದವು ತೋರಿಸುತ್ತದೆ. ಮಾಯೆಯ ಪ್ರಧಾನ ಕಾರ್ಯವು ವಿಕ್ಷೇಪವಾಗಿರುತ್ತದೆ (ಭ್ರಾಮಕವಾಗಿ ಪ್ರಕಟವಾಗುವುದು) ಹಾಗೂ ತನ್ನನ್ನು ಬಾಹ್ಯ ಪ್ರಪಂಚದಂತೆ ತೋರಿಸಿಕೊಳ್ಳುತ್ತದೆ. ಅಂತಃಕರಣವನ್ನು, ಅಜ್ಞಾನ ಯಾ ಅವಿದ್ಯೆಯಿಂದ ಜನಿಸಿದ ಸ್ಥೂಲ – ಸೂಕ್ಷ್ಮ ದೇಹಗಳ ಜೊತೆಗೆ ಕಾಣುವ ಅದೇ ಸ್ವಪ್ರಕಾಶಿತ ಆತ್ಮ, ಜೀವನನ್ನು 'ತ್ವಮ್' (ನೀನು) ಪದವು ಸೂಚಿಸುತ್ತದೆ. ತನ್ನ ನಿಜಸ್ವರೂಪವನ್ನು ಮರೆಮಾಚುವ ಆವರಣವು (ಮುಸುಕು) ಅವಿದ್ಯೆಯ ಪ್ರಧಾನ ಕಾರ್ಯವಾಗಿದೆ.

"ಅವನು ಈ ವ್ಯಕ್ತಿ" ಎಂಬ ವಾಕ್ಯದಲ್ಲಿ,

तद्देशकालावस्थादौ दृष्टस्स इति कथ्यते ।
तथैतद्देशकलादौ दृष्टोयमिति कीर्त्यते ॥ १२ ॥

ತದ್ದೇಶಕಾಲಾವಸ್ಥಾದೌ ದೃಷ್ಟಸ್ಸ ಇತಿ ಕಥ್ಯತೇ ।
ತಥೈತದ್ದೇಶಕಾಲಾದೌ ದೃಷ್ಟೋಯಮಿತಿ ಕೀರ್ತ್ಯತೇ ॥ 12 ॥

ಕೆಲಸಮಯದ ಹಿಂದೆ, ಯಾವುದೋ ಒಂದು ಸ್ಥಳದಲ್ಲಿ, ಆಗಿನ ಸ್ಥಿತಿಯಲ್ಲಿ ಕಾಣಸಿಕ್ಕಿದ ವ್ಯಕ್ತಿಯನ್ನು 'ಅವನು' ಎಂದು ಸಂಬೋಧಿಸಿ, ಅದೇ ವ್ಯಕ್ತಿಯನ್ನು ಈಗ, ಇಲ್ಲಿ, ಈಗಿನ ಸ್ಥಿತಿಯಲ್ಲಿ ಕಂಡಾಗ 'ಇವನು' ಎಂದು ಹೇಳಲಾಗಿದೆ. [3–12]

ವಿವೃತ್ತಿ

ಉಪಾಧಿವಿಶಿಷ್ಟನಾದವನ ಸಂಬೋಧನೆಯಲ್ಲಿರುವ ವಾಚ್ಯಾರ್ಥಕ್ಕೆ ನಿಡಿರುವ ದೃಷ್ಟಾಂತವನ್ನು ಸ್ಪಷ್ಟಪಡಿಸುವ **ತದ್ದೇಶಕಾಲೇತಿ.** [3–12]

मुख्यं तदेतद्वैशिष्ट्यं विसृज्य पदयोद्वयोः ।
पुम्मात्रं लक्षयत्येकं यथा सोयंपुमान्वचः ॥ १३ ॥
प्रत्यक्त्वं च पराक्त्वं च त्यक्त्वा तत्त्वमसीति वाक् ।
तथैव लक्षयत्यैक्यं जीवात्मपरमात्मनोः ॥ १४ ॥

ಮುಖ್ಯಂ ತದೇತದ್ವೈಶಿಷ್ಟ್ಯಂ ವಿಸೃಜ್ಯ ಪದಯೋದ್ವಯೋಃ ।
ಪುಮ್ಮಾತ್ರಂ ಲಕ್ಷಯತ್ಯೇಕಂ ಯಥಾ ಸೋಯಂಪುಮಾನ್ವಚಃ ॥ 13 ॥
ಪ್ರತ್ಯಕ್ತ್ವಂ ಚ ಪರಾಕ್ತ್ವಂ ಚ ತ್ಯಕ್ತ್ವಾ ತತ್ತ್ವಮಸೀತಿ ವಾಕ್ ।
ತಥೈವ ಲಕ್ಷಯತ್ಯೈಕ್ಯಂ ಜೀವಾತ್ಮಪರಮಾತ್ಮನೋಃ ॥ 14 ॥

"ಅವನು ಈ ವ್ಯಕ್ತಿಯೇ" ಎಂಬ ವಾಕ್ಯವು "ಅವನು" ಮತ್ತು "ಇವನು" ನಿರ್ದೇಶಿಸುವ ನಿರ್ದಿಷ್ಟ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಳ್ಳದೇ ಹೇಗೆ ಒಬ್ಬ ಸಮಾನ ವ್ಯಕ್ತಿಯನ್ನು ಗುರುತಿಸುವುದೋ, ಅಂತೆಯೇ ಅಂತರ್ಮುಖತೆ ಮತ್ತು ಬಹಿರ್ಮುಖತೆಗಳನ್ನು ಗಣನೆಗೆ ತೆಗೆದುಕೊಳ್ಳದೇ "ತತ್ತ್ವಮಸಿ" ಎಂಬ ವಾಕ್ಯವು ಜೀವಾತ್ಮ ಮತ್ತು ಪರಮಾತ್ಮನ ಸಂಬಂಧವನ್ನು ಹೇಳುವುದು. [3–13..14]

ವಿವೃತ್ತಿ

ವಾಚ್ಯಾಂಶಗಳ ವಿರುದ್ಧಾಂಶಗಳನ್ನು ತ್ಯಜಿಸಿದಾಗ ಎರಡರಲ್ಲಿಯೂ ಇರುವ ಸಮಾನ ಅಂಶಗಳು ಅವೆರಡರ ಲಕ್ಷ್ಯಾರ್ಥವಾಗಿರುವುದು ಎಂಬ ಲಕ್ಷಣದಿಂದ ಅಖಂಡವಾಕ್ಯದ ಅರ್ಥಬೋಧನೆಯಾಗುವುದು. "ಅವನೇ ಈ ದೇವದತ್ತ" ಎಂಬ ವಾಕ್ಯ ದೃಷ್ಟಾಂತದ ಮೂಲಕ ಉಪಪಾದಿಸುವ **ಮುಖ್ಯಮಿತಿ.** ***ತದ್ವೈಶಿಷ್ಟ್ಯಂ*** ಇದು ಎಂಬ ಪದ ಅಪರೋಕ್ಷವಾಗಿ ನಿರ್ದಿಷ್ಟಮಾಡುವ ದೇಶ–ಕಾಲ ಮುಂತಾದ ವೈಶಿಷ್ಟ್ಯಗಳು. ಮುಖ್ಯವಾಗಿ ವಾಚ್ಯವಾಗುವ ವಿವರಣೆಯಂತೆ ಎರಡು ವ್ಯಕ್ತಿಗಳೂ ಒಬ್ಬನೇ ಆಗಿದ್ದಾರೆ. ಹೇಗೆ "ಅವನೇ ಈ ದೇವದತ್ತ" ಎಂಬ ವಾಕ್ಯದ ಅಖಂಡವಾಗಿ ಲಕ್ಷಿಸಿದಾಗ ಸಿಗುವುದು ಒಬ್ಬನೇ ವ್ಯಕ್ತಿಯೋ, ಹಾಗೆಯೇ "ತತ್ ತ್ವಂ ಅಸಿ" ವಾಕ್ಯದಲ್ಲಿಯೂ ಕೂಡ ಆಯಾಯ ಪದಾರ್ಥಗಳಲ್ಲಿರುವ ವಿರುದ್ಧಾಂಶಗಳನ್ನು ತ್ಯಜಿಸಿದಾಗ ಚಿದ್ರೂಪದ ಅಖಂಡತತ್ತ್ವವು ಲಕ್ಷಿಸಲ್ಪಡುತ್ತದೆ ಎಂದು ಹೇಳಲು **ಪ್ರತ್ಯಕ್ತ್ವಂ ಚೇತಿ.** [3–13..14]

ಸ್ವಪ್ರಕಾಶಿತ ಜ್ಞಾನದ ರೂಪದಲ್ಲಿ ಅವೆರಡೂ ಸಮಾನವಾಗಿವೆ.

सामानाधिकरण्याख्यस्सम्बन्धः पदयोरिह ।
विशेषणविशेष्यत्वं सम्बन्धस्स्यात्पदार्थयोः ॥ १५ ॥

ಸಾಮಾನಾಧಿಕರಣ್ಯಾಖ್ಯಸ್ಸಂಬಂಧಃ ಪದಯೋರಿಹ ।
ವಿಶೇಷಣವಿಶೇಷ್ಯತ್ವಂ ಸಂಬಂಧಸ್ಸ್ಯಾತ್ಪದಾರ್ಥಯೋಃ ॥ 15 ॥

"ಅದು" ಮತ್ತು "ನೀನು" ಎಂಬ ಪದಗಳು ಸಾಮಾನಾಧಿಕರಣ್ಯವೆಂಬ (ಒಟ್ಟಿಗೆ ಬಂದಾಗ, ಒಂದು ಶಬ್ದವು ಇನ್ನೊಂದರ ವಿಶೇಷಣದಂತೆ ವರ್ತಿಸುವುದು) ಸಂಬಂಧವನ್ನು ಹೊಂದಿವೆ; ಮತ್ತು ಅವುಗಳು ಸೂಚಿಸುವ ವಸ್ತುಗಳು ವಿಶೇಷಣ – ವಿಶೇಷ್ಯ ಭಾವದಿಂದ ತಮ್ಮೊಳಗೆ ವರ್ತಿಸುವವು. [3–15]

ವಿವೃತ್ತಿ

ಸಂಬಂಧತ್ರಯಗಳಿರುವ ವಾಕ್ಯಗಳ ಅರ್ಥವನ್ನು ಬೋಧಿಸುತ್ತಾ, ಸಂಬಂಧತ್ರಯಗಳನ್ನು ತಿಳಿಸುವ **ಸಾಮಾನಾಧಿಕರಣ್ಯಾಖ್ಯ ಇತಿ.** ಪದಗಳಿಗೆ ಸಾಮಾನಾಧಿಕರಣ್ಯವೆಂಬ ಸಂಬಂಧವಿರುವುದು. ಅದರ ಲಕ್ಷಣವನ್ನು ಹೇಳುತ್ತಾ ಅದು ವಿಶೇಷಣ–ವಿಶೇಷ್ಯವೆಂಬ ಸಂಬಂಧವು. ಹೇಗೆ 'ಅವನೇ ಇವನು' ಅನ್ನುವಾಗ ಪರಸ್ಪರ ಭೇದವನ್ನು ಭ್ರಮಿಸಿದರೂ, ಅವುಗಳಿಗೆ ವಿಶೇಷಣ–ವಿಶೇಷ್ಯ ಭಾವವಿದೆಯೋ ಹಾಗೆಯೇ ತತ್ ತ್ವಂ ಪದಾರ್ಥಗಳಿಗೂ ಇದೆ ಎಂಬ ಅರ್ಥವು. [3–15]

लक्ष्यलक्षणसंयोगद्वाक्यमैक्यं च बोधयेत् ।

ಲಕ್ಷ್ಯಲಕ್ಷಣಸಂಯೋಗದ್ವಾಕ್ಯಮೈಕ್ಯಂ ಚ ಬೋಧಯೇತ್ ।

ಈ ವಾಕ್ಯವು ಪೂರ್ಣಾರ್ಥದಲ್ಲಿ ಗುರುತನ್ನು ಸೂಚಿಸಿದರೂ, ಶಬ್ದಾರ್ಥದಲ್ಲಿ ಎರಡನೆಯ ರೀತಿಯಲ್ಲಿ ತಿಳಿಯಲ್ಪಡುತ್ತವೆ (ಲಕ್ಷ್ಯ – ಲಕ್ಷಣ). [3–16]

ವಿವೃತ್ತಿ

ವಾಚ್ಯಾಂಶದಲ್ಲಿ ವಿರುದ್ಧಾರ್ಥಕವಾಗಿರುವ ಪದಗಳಲ್ಲಿ ಸಾಮಾನಾಧಿಕರಣ್ಯವು ಕೇಳಿಬರದಿದ್ದರೆ ಆಗ ಲಕ್ಷಣದಿಂದ ವಾಚ್ಯಾರ್ಥದ ಒಂದು ಅರ್ಥವನ್ನು ಮಾತ್ರ ಗಮನಿಸಿ ಖಂಡಾರ್ಥವು ಲಭಿಸುವುದರಿಂದ ಸಾಮಾನಾಧಿಕರಣ್ಯ ಸಿದ್ಧಿಸುವುದು ಎಂದು ಹೇಳಲು **ಲಕ್ಷ್ಯಲಕ್ಷಣಸಂಯೋಗಾದಿತಿ.** ಪ್ರತ್ಯೇಕ ಚೈತನ್ಯಯುತ ಪದಗಳಲ್ಲಿ ಲಕ್ಷಿತವಾಗುವ ಲಕ್ಷಣಭಾವದ ಸಂಬಂಧವು ಲಕ್ಷ್ಯಲಕ್ಷಣಸಂಯೋಗ ಎಂಬ ಶಬ್ದದ ಅರ್ಥವು. [3–16]

ಒಂದು ವಾಕ್ಯದಲ್ಲಿ ಎರಡು ಶಬ್ದಗಳು ಸಾಮಾನಾಧಿಕರಣಸಂಬಂಧವನ್ನು ಹೊಂದಿದಾಗ, ಅವುಗಳು ಸೂಚಿಸುವ ವಸ್ತುಗಳು ತಮ್ಮೊಳಗೆ ವಿಶೇಷಣ–ವಿಶೇಷ್ಯ ಸಂಬಂಧವನ್ನು ಹೊಂದಿರುತ್ತವೆ. ಆದರೆ 'ಅದು' ಮತ್ತು 'ನೀನು' ಶಬ್ದಗಳು ಸೂಚಿಸುವ 'ಈಶ್ವರ' ಮತ್ತು 'ಜೀವ' ಪರಸ್ಪರ ವಿರುದ್ಧಾರ್ಥಕಗಳಾಗಿರುವುದರಿಂದ, ತಮ್ಮೊಳಗೆ ವಿಶೇಷಣ–ವಿಶೇಷ್ಯ ಸಂಬಂಧವನ್ನು ಹೊಂದಿಲ್ಲ. ಪ್ರತಿಯೊಂದರಿಂದ ವಿರುದ್ಧಾರ್ಥಕ ಗುಣವಿಶೇಷಣಗಳನ್ನು ಹೊರತೆಗೆದಾಗ ಅಂದರೆ ವಾಕ್ಯಾರ್ಥವನ್ನು ನಿರಾಕರಿಸಿ ಎರಡನೇ ರೀತಿಯ ಶಬ್ದಾರ್ಥವನ್ನು ಮಾತ್ರ ಗ್ರಹಿಸಿದಾಗ ಮಾತ್ರ ಶ್ರುತಿಯಲ್ಲಿ ತಿಳಿಸಿದಂತಹ ಜೀವ ಮತ್ತು ಈಶ್ವರನ ಐಕ್ಯ ಸಾಧಿಸುವುದು.

ಎರಡನೆಯ ರೀತಿಯ ಶಬ್ದಾರ್ಥವು ಪ್ರಾಥಮಿಕ ಅರ್ಥವನ್ನು ಒಳಗೊಂಡಿರಬಹುದು ಯಾ ಹೊರತುಪಡಿಸಿರಬಹುದು; ಅಥವಾ ಪ್ರಾಥಮಿಕ ಅರ್ಥದ ಒಂದು ಭಾಗವನ್ನು ಒಳಗೊಂಡು, ಇನ್ನೊಂದು ಭಾಗವನ್ನು ಹೊರತುಪಡಿಸಿರಬಹುದು. 'ತತ್ತ್ವಮಸಿ' ಎಂಬ ವಾಕ್ಯದಲ್ಲಿ

गङ्गायां घोष इतिवन्न जहल्लक्षणा भवेत् ॥ १६ ॥

नाजहल्लक्षणापि स्याच्छवेतोधावतिवाक्यवत् ।

ಗಂಗಾಯಾಂ ಘೋಷ ಇತಿವನ್ನ ಜಹಲ್ಲಕ್ಷಣಾ ಭವೇತ್ ॥ 16 ॥
ನಾಜಹಲ್ಲಕ್ಷಣಾಪಿ ಸ್ಯಾಚ್ಛ್ವೇತೋಧಾವತಿವಾಕ್ಯವತ್ ।

ಪ್ರಾಥಮಿಕ ಅರ್ಥದಿಂದ ಎರಡನೆಯ ಅರ್ಥವು ಸಂಪೂರ್ಣವಾಗಿ ಬೇರೆಯಾಗಿಲ್ಲ, "ಗಂಗಾನದಿಯ ಮೇಲಿನ ಒಂದು ಗ್ರಾಮ" ಎಂಬ ವಾಕ್ಯದಲ್ಲಿದ್ದಂತೆ; ಅಥವಾ "ಒಂದು ಬಿಳಿ (ಕುದುರೆ) ಓಡುತ್ತದೆ" ಎಂಬ ವಾಕ್ಯದಲ್ಲಿದ್ದಂತೆ ಪ್ರಾಥಮಿಕ ಅರ್ಥವನ್ನು ಸಂಪೂರ್ಣವಾಗಿ ಒಳಗೊಂಡಿಲ್ಲ. [3–16..17]

ವಿವೃತ್ತಿ

ಜಹಲ್ಲಕ್ಷಣಾ, ಅಜಹಲ್ಲಕ್ಷಣಾ ಮತ್ತು ಜಹದಜಹಲ್ಲಕ್ಷಣಾ ಎಂದು ಲಕ್ಷಣವು ಮೂರು ವಿಧವಾಗಿ ಪ್ರಸಿದ್ಧವಾಗಿದೆ. ಅಲ್ಲಿ ಯಾವ ಲಕ್ಷಣದಿಂದ ವಾಕ್ಯಾಥವು ಬೋಧವಾಗಿ ಗ್ರಾಹ್ಯವಾಗುವುದು ಎನ್ನುವ ಆಕಾಂಕ್ಷೆಗೆ ಮೂರನೆಯದನ್ನು ಪರಿಶೋಧಿಸಿ, ಇತರ ಎರಡು ನಿರಸ್ತವಾಗುವುದು ಎಂದು ತಿಳಿಸಲು **ಗಂಗಾಯಾಂ ಘೋಷ ಇತಿ.** ವಾಚ್ಯಾರ್ಥವನ್ನು ಸಂಪೂರ್ಣವಾಗಿ ಪರಿತ್ಯಜಿಸಿ, ಅದರ ಸಂಬಂಧವಿರುವ ಇನ್ನೊಂದು ಅರ್ಥವನ್ನು ಹೇಳುವ ವೃತ್ತಿಯನ್ನು ಜಹಲ್ಲಕ್ಷಣ ಎಂದು ಹೇಳುತ್ತಾರೆ; ಗಂಗಾ ಪದಕ್ಕೆ ಸ್ವವಾಚ್ಯವಾದ ಪ್ರವಾಹ ಎಂಬ ಅರ್ಥವನ್ನು ತ್ಯಜಿಸಿ, ಅದಕ್ಕೆ ಸಂಬಂಧವಿರುವ ತೀರ ಎಂಬ ಅರ್ಥವನ್ನು ಲಕ್ಷಿಸುವುದು. ಅದೇರೀತಿ ಲಕ್ಷಣಗಳು ಸಂಯೋಗವಾಗದಿರುವಾಗ, ಜಡ ಜಡಾತ್ಮ ಎಂಬ ಭೇದರೂಪದ ವಾಚ್ಯಾರ್ಥವನ್ನು ಸಂಪೂರ್ಣ ತ್ಯಜಿಸಿ, ಅದಕ್ಕೆ ಸಂಬಂಧಿಸಿದ ಅನ್ಯ ಪದಾರ್ಥದ ಲಕ್ಷಣದ ಅಭಾವದಿಂದ ವಾಕ್ಯಾರ್ಥವು ಶೂನ್ಯವಾಗುವುದು. ಹಾಗೆ ಸತ್ ವಾಚಕವಾಗಿರುವ ಅಸಿ ಪದದಿಂದ ಸಮನಾದ ವ್ಯವಹಾರಕ್ಕೂ ವಿರೋಧವಾಗುವುದು ಎಂಬ ಅಭಿಪ್ರಾಯ. ಇಲ್ಲಿ ಅಜಹಲ್ಲಕ್ಷಣವೂ ಇರುವುದಿಲ್ಲ. 'ಬಿಳಿ ಓಡುತ್ತದೆ' ಎಂಬ ವಾಕ್ಯದಲ್ಲಿದ್ದಂತೆ ಗುಣವಾಚಕವಾದ ಶ್ವೇತ ಶಬ್ದವು ಅದು ಆಶ್ರಯಿಸಿರುವ ದ್ರವ್ಯದ ವಾಚ್ಯಾರ್ಥಕ ಗುಣದೊಂದಿಗೆ ಲಕ್ಷಿತವಾಗುತ್ತದೆ. ವಾಚ್ಯಾರ್ಥವನ್ನು ತ್ಯಜಿಸದೆ ಅದರ ಸಂಬಂಧವುಳ್ಳ ವೃತ್ತಿಯ ಲಕ್ಷಣವನ್ನು ಹೇಳುವುದು ಸ್ವ ಅರ್ಥದಲ್ಲಿ ಅಜಹ ಎಂದೆನಿಸಿದೆ. ಪರಸ್ಪರ ವಿರೋಧವಿರುವ ಅರ್ಥಗಳಿರುವುವಾಗ ಐಕ್ಯತೆಯ ವಾಕ್ಯಾರ್ಥವನ್ನು ಸಿದ್ಧಮಾಡುವಲ್ಲಿ ಸಾಮಾನಾಧಿಕರಣ್ಯಕ್ಕೆ ಬಾಧಕವಾಗುವುದು ಎಂಬ ಅಭಿಪ್ರಾಯವನ್ನು ತಿಳಿಸಲು **ನಾಜಹಲ್ಲಕ್ಷಣಾಪೀತಿ.** [3–16..17]

तत्त्वमस्यादिवाक्यानां लक्षणा भागलक्षणा ॥ १७ ॥
सोयं पुरुष इत्यादिवाक्यानामिव कीर्तिता ।

ತತ್ತ್ವಮಸ್ಯಾದಿವಾಕ್ಯಾನಾಂ ಲಕ್ಷಣಾ ಭಾಗಲಕ್ಷಣಾ ॥ 17 ॥
ಸೋಽಯಂ ಪುರುಷ ಇತ್ಯಾದಿವಾಕ್ಯಾನಾಮಿವ ಕೀರ್ತಿತಾ ।

"ತತ್ತ್ವಮಸಿ" ಇತ್ಯಾದಿ ವಾಕ್ಯಗಳ ದ್ವಿತೀಯಾರ್ಥವು "ಅವನು ಇದೇ ವ್ಯಕ್ತಿ" ಎಂಬ ವಾಕ್ಯದಂತೆ, ಪ್ರಾಥಮಿಕ ಅರ್ಥವನ್ನು ಭಾಗಶಃ ಒಳಗೊಂಡಿರುತ್ತದೆ. [3–17..18]

ವಿವೃತ್ತಿ

ಉಳಿದಿರುವ ಜಹದಜಹಲ್ಲಕ್ಷಣಕ್ಕೆ ಉಚಿತವಾದ ದೃಷ್ಟಾಂತವಾಗಿ **ತತ್ತ್ವಮಸೀತಿ.** ಉಭಯ ಪದಾರ್ಥಗಳಲ್ಲಿ ಜಡಾಂಶಗಳನ್ನು ಪರಿತ್ಯಜಿಸಿ ಸರ್ವರಲ್ಲಿರುವ ಚಿನ್ಮಾತ್ರೆಯ ಲಕ್ಷಣದಿಂದ ಅಖಂಡವಾಕ್ಯದ ಅರ್ಥವನ್ನು ಬೋಧಿಸುತ್ತದೆ ತತ್ತ್ವಮಸಿ ಎಂಬ ವಾಕ್ಯವು. 'ಅವನೇ ಈ ವ್ಯಕಿಯು' ಎಂಬ ವಾಕ್ಯದಲ್ಲಿ ದೇಶ ಕಾಲ ಶಬ್ದಗಳ ಅಂಶವನ್ನು ತ್ಯಜಿಸಿ, ಉಭಯರ ಅವಸ್ಥೆಗಳನ್ನು ಸೂಚಿಸುವ ಪುರುಷಸ್ವರೂಪಮಾತ್ರವನ್ನು ಪರಿಗಣಿಸಿ ಅಖಂಡ ಅರ್ಥವನ್ನು ಬೋಧಿಸುವುದು ಎಂಬ ಅರ್ಥದಲ್ಲಿ. [3–17..18]

ಮೇಲಿನ ಒಂದು ವಾಕ್ಯದಲ್ಲಿ 'ಗಂಗೆ' ಎಂಬ ಪದವು ನೀರಿನ ಹರಿವನ್ನು ಸೂಚಿಸಿದರೂ, 'ಗಂಗೆಯ ತೀರ' ಎಂದು ಅರ್ಥೈಸಿಕೊಳ್ಳಬೇಕು, ಅಂದರೆ ಸಂಪೂರ್ಣ ಪ್ರಾಥಮಿಕ ಅರ್ಥವು ದ್ವಿತೀಯಾರ್ಥದಿಂದ ಹೊರತಾಗಿದೆ. ಇನ್ನೊಂದು ವಾಕ್ಯದಲ್ಲಿ 'ಬಿಳಿ' ಎಂಬ ಪದವು 'ಬಿಳಿ ಬಣ್ಣ'ವನ್ನು ಪ್ರಾಥಮಿಕ ಅರ್ಥದಲ್ಲಿ ಬಿಂಬಿಸಿ, 'ಆ ಬಿಳಿ ಕುದುರೆ' ಎನ್ನುವಾಗ ಎರಡನೆಯ ಅರ್ಥದಲ್ಲಿ ಪ್ರಾಥಮಿಕ ಅರ್ಥವು ಪೂರ್ತಿಯಾಗಿ ಸೇರಿಕೊಂಡಿದೆ. ಆದರೆ 'ಅದು' ಮತ್ತು 'ನೀನು' ಪದಗಳನ್ನು ಈ ಎರಡೂ ರೀತಿಯಲ್ಲಿ ಅರ್ಥೈಸಲು ಸಾಧ್ಯವಿಲ್ಲ. ಪ್ರಾಥಮಿಕ ಅರ್ಥವನ್ನು ಸಂಪೂರ್ಣವಾಗಿ ಹೊರಗಿಡಲು ಅಸಾಧ್ಯ, ಒಂದು ವೇಳೆ ಹಾಗಾದರೆ ಅವುಗಳ ಏಕತೆಯನ್ನು ಪ್ರತಿಪಾದಿಸಲು ಯಾವ ಸಾಧ್ಯತೆಯೂ ಇಲ್ಲವಾಗುತ್ತದೆ. ಪ್ರಾಥಮಿಕ ಅರ್ಥವು ಸಂಪೂರ್ಣವಾಗಿ ದ್ವಿತೀಯಾರ್ಥದೊಡನೆ ಸೇರಿರಲೂ ಸಾಧ್ಯವಿಲ್ಲ, ಹಾಗಾದರೆ ಪರಸ್ಪರ ವೈರುದ್ಧ್ಯವಿರುವ ಈಶ್ವರ ಮತ್ತು ಜೀವರ ನಡುವೆ ಏಕತೆಯ ಸಂಬಂಧವನ್ನು ಸ್ಥಾಪಿಸಲಸಾಧ್ಯವಾಗುತ್ತದೆ. ಪ್ರಾಥಮಿಕ ಅರ್ಥದಿಂದ ಅವರಿಬ್ಬರಿಗೂ ಸಮಾನವಾಗಿರುವ ಚೈತನ್ಯಕ್ಕೆ ಸಂಬಂಧಿಸದ ಗುಣವಿಶೇಷಣಗಳನ್ನು ಹೊರತುಪಡಿಸಿದರೆ, ಜ್ಞಾನವು ಮಾತ್ರ ಉಳಿದುಕೊಳ್ಳುತ್ತದೆ; ಹೀಗೆ 'ತತ್ತ್ವಮಸಿ' ವಾಕ್ಯವು ಜೀವ ಮತ್ತು ಈಶ್ವರನ ಗುರುತನ್ನು ಭಾಗಮಾಡಲಾಗದ, ಬಣ್ಣವಿಲ್ಲದ ಸ್ವಪ್ರಕಾಶಿತ ಆತ್ಮವೆಂದು ತಿಳಿಸಿಕೊಡುತ್ತದೆ.

भिन्नवृत्तिनिमित्तानां शब्दानामेकवस्तुनि ॥ १८ ॥
प्रवृत्तिस्तु समानाधिकरणत्वमिहोच्यते ।

ಭಿನ್ನವೃತ್ತಿನಿಮಿತ್ತಾನಾಂ ಶಬ್ದಾನಾಮೇಕವಸ್ತುನಿ ॥ 18 ॥
ಪ್ರವೃತ್ತಿಸ್ತು ಸಮಾನಾಧಿಕರಣತ್ವಮಿಹೋಚ್ಯತೇ ।

ಇಲ್ಲಿ ಹೇಳಿರುವ ಸಮಾನಾಧಿಕರಣದ ಸಂಬಂಧವು ಭಿನ್ನ ಮೂಲಗಳ ಶಬ್ದಗಳು ಒಂದೇ ವಸ್ತುವನ್ನು ನಿರ್ದೇಶಿಸುವುದನ್ನು ಒಳಗೊಂಡಿದೆ. [3–18..19]

ವಿವೃತ್ತಿ

ಸಾಮಾನಾಧಿಕರಣ್ಯ ಶಬ್ದವು ಸಂಬಂಧವನ್ನು ತಿಳಿಸುವಂತಹದಾಗಿದ್ದು ಅದರ ಲಕ್ಷಣವನ್ನುತಿಳಿಸುತ್ತಾ **ಭಿನ್ನವೃತ್ತೀತಿ.** ಅದಕ್ಕೆ ಪರ್ಯಾಯ ಶಬ್ದವಾಗಿ ಭಿನ್ನವೃತ್ತಿ ನಿಮಿತ್ತವಾಗಿ ಎಂದು ಹೇಳಿದೆ. ವೃತ್ತಿ ಅಂದರೆ ಪ್ರವೃತ್ತಿ. ಘಟ, ಪಟ, ಸ್ತಂಭ ಇತ್ಯಾದಿ ಅನೇಕ ಅರ್ಥಗಳನ್ನು ನೀಡುವ ಶಬ್ದಗಳು ವಿವೇಚನೆಯಲ್ಲಿ ಒಂದೇ ವಸ್ತುವನ್ನು ಸೂಚಿಸುತ್ತವೆ ಎಂದು ಹೇಳಿದೆ. [3–18..19]

ಜೀವ ಮತ್ತು ಈಶ್ವರನ ನಡುವೆ ಶ್ರುತಿಗಳು ವ್ಯತ್ಯಾಸವನ್ನು ಗುರುತಿಸಿಲ್ಲ

परस्यांशो विकारो वा जीवो वाक्येन नोच्यते ॥ १९ ॥

जीवात्मना प्रविष्टत्वात्स्वमायासृष्टमूर्तिषु ।
निरंशो निर्विकारोसौ श्रुत्या युक्त्या च गम्यते ॥ २० ॥
घटाकाशो विकारो वा नांशो वा वियतो यथा ।

ಪರಸ್ಯಾಂಶೋ ವಿಕಾರೋ ವಾ ಜೀವೋ ವಾಕ್ಯೇನ ನೋಚ್ಯತೇ ॥ 19 ॥
ಜೀವಾತ್ಮನಾ ಪ್ರವಿಷ್ಟತ್ವಾತ್ಸ್ವಮಾಯಾಸೃಷ್ಟಮೂರ್ತಿಷು ।
ನಿರಂಶೋ ನಿರ್ವಿಕಾರೋಸೌ ಶ್ರುತ್ಯಾ ಯುಕ್ತ್ಯಾ ಚ ಗಮ್ಯತೇ ॥ 20 ॥
ಘಟಾಕಾಶೋ ವಿಕಾರೋ ವಾ ನಾಂಶೋ ವಾ ವಿಯತೋ ಯಥಾ ।

ತನ್ನ ಮಾಯೆಯಿಂದ ತಾನು ಸೃಷ್ಟಿಸಿದ ಜೀವನಲ್ಲಿ ಈಶ್ವರನು ಸ್ವತಃ ಪ್ರವೇಶಿಸಿರುವುದರಿಂದ, ಜೀವನನ್ನು ಈಶ್ವರನ ಅಂಗವಾಗಿಯೋ ಯಾ ಬದಲಾವಣೆಯಾಗಿಯೋ ಎಂದು ಈ ವಾಕ್ಯವು ಅರ್ಥೈಸುವುದಿಲ್ಲ. ಶ್ರುತಿಗಳು ಹೇಳುವಂತೆ ಮತ್ತು ತರ್ಕದಿಂದ ನಾವು ಅವನನ್ನು ತುಂಡುಮಾಡಲಸಾಧ್ಯವಾದ ಹಾಗೂ ಬದಲಾವಣೆಯಿಲ್ಲದವನಾಗಿ ತಿಳಿದುಕೊಂಡಿದ್ದೇವೆ; ಮಡಕೆಯೊಳಗಿರುವ ಆಕಾಶವು ಮಹಾಕಾಶದ ಭಾಗವೂ ಅಲ್ಲ, ಬದಲಾವಣೆಯೂ ಅಲ್ಲ ಎಂಬಂತೆ. [3–19..21]

ವಿವೃತ್ತಿ

ತತ್ ಪದಕ್ಕೆ ಸಾಮಾನಾಧಿಕರಣ್ಯದಿಂದ ಸಂಸೃಷ್ಟಿಯ ಅರ್ಥ ಪರವಾಗಿ ಸಂಯೋಗವಾಗುವುದರಿಂದ, ಪ್ರಸಿದ್ಧವಾಗಿರದ ಅಖಂಡಾರ್ಥ ಪರವಾಗಿ ಹೇಗೆ ಇರುವುದು ಎಂದು ಹೇಳುತ್ತಾ, ತತ್ ತ್ವಂ ಪದಾರ್ಥವು ಕೈಯ ಬೆರಳುಗಳಂತೆ ಅಂಶಾಂಶೀ ಭಾವದಿಂದ ಸಂಸರ್ಗವಾಗುವುದೋ, ಯಾ ಭೂಮಿಯಲ್ಲಿರುವ ಬರಡುಭೂಮಿಯಂತೆ ವಿಕಾರ–ವಿಕಾರಿತ್ವವಾಗಿಯೋ, ಯಾ ಹೇಳುವ ಕೇಳುವ ಭೇದದಂತೆ ಸ್ತೋತೃ–ಸ್ತುತ್ಯ ಭಾವದಿಂದಲೋ, ಯಾ ಗುಣ–ಗುಣಿತ್ವ ಲಕ್ಷಣದಿಂದಲೋ, ಉಪಾಸಕ–ಉಪಾಸನೆಯೆಂಬ ಕರ್ಮದಂತೆಯೋ, ಬೇರೆ ಬೇರೆಯಾಗಿರುವ ಭಾವಕಲ್ಪನೆಯ ವಿಷಯವಾಗಿಯೋ? ಅದನ್ನು ವಿವರಿಸಲು **ಪರಸ್ಯಾಂಶ ಇತಿ.** ಯಾಕೆ ಜೀವನು ಪರಮಾತ್ಮನ ಅಂಶ ಯಾ ವಿಕಾರವಾಗಲು ಸಾಧ್ಯವಿಲ್ಲ? 'ಮಮೈವಾಂಶೋ ಜೀವಲೋಕೇ ಜೀವಭೂತಸ್ಸನಾತನಃ' (ಭ.ಗೀ.15–7) ಎಂಬ ಸ್ಮೃತಿಯಲ್ಲಿ ಜೀವನಿಗೆ ಪರಮಾತ್ಮನ ಅಂಶತ್ವವನ್ನು ನಿರಾಕರಿಸಿದೆ. 'ಸರ್ವ ಏತ ಆತ್ಮನೋ ವ್ಯುಚ್ಚರಂತಿ' (ಬೃ.ಉ.4–1–20 ಮಾಧ್ಯಂದಿನಪಾಠ) ಎಂಬ ಶ್ರುತಿಯು ವಿಕಾರತ್ವವೂ ನಿರಾಕರಿಸಲ್ಪಟ್ಟಿದೆ. ಪ್ರವೇಶಿಸುವುದು ಶ್ರುತಿಗೆ ಅವಿರೋಧವೆಂದು ಹೇಳಲು **ಜೀವಾತ್ಮನೇತಿ.** 'ತತ್ಸೃಷ್ಟ್ವಾ । ತದೇವಾನುಪ್ರವಿಶತ್' (ತೈ.ಉ.2–7), 'ಅನೇನ ಜೀವೇನಾತ್ಮನಾನುಪ್ರವಿಶ್ಯ' (ಛಾ.ಉ.6–3–2), 'ಸ ಏಷ ಇಹ ಪ್ರವಿಷ್ಟ ಆನಖಾಗ್ರೇಭ್ಯಃ' (ಬೃ.ಉ.3–4–7), 'ಸ ಏತಮೇವ ಸೀಮಾನಾಂ ವಿದಾರ್ಯ ಏತಯಾ ದ್ವಾರಾ ಪ್ರಾಪದ್ಯತ' (ಐ.ಉ.1–3–12), 'ಅಂತಃ ಪ್ರವಿಷ್ಟಃ ಶಾಸ್ತಾ ಜನಾನಾಮ್', 'ಅಂತಃ ಪ್ರವಿಷ್ಟಂ ಕರ್ತಾರಮೇತಮ್' (ತೈ.ಆ.3–11) ಇತ್ಯಾದಿ ಅನೇಕ ಶ್ರುತಿಗಳು ಸ್ಪಷ್ಟವಾಗಿ ಈಶ್ವರನು ತನ್ನ ಸೃಷ್ಟಿಯಲ್ಲಿ, ಸಂಘಾತವೋ ವಿಕೃತವೋ, ಪ್ರವೇಶಿಸುವುದನ್ನು ಹೇಳಿದೆ. ಹಾಗಾಗಿ ಪ್ರವೇಶ ವಾಕ್ಯಕ್ಕೆ ವಿರೋಧವಿಲ್ಲದಾಗಿ, ಮಾಯೆಯ ಕಾರ್ಯವಾದ ಉಪಾಧಿಕಲ್ಪಿತ ಭೇದ–ಭೇದಗಳನ್ನು ಆಶ್ರಯಿಸಿ ಅಂಶತ್ವ–ವಿಕಾರತ್ವಗಳನ್ನು ಹೇಳುವುದು ಔಪಚಾರಿಕ ವ್ಯಾಖ್ಯೆಯು ಎಂಬ ಅಭಿಪ್ರಾಯ.

ಇನ್ನು ಪ್ರವೇಶವನ್ನು ಹೇಳುವ ಶ್ರುತಿಗಳು ಮಡಕೆಯಲ್ಲಿರುವ ಮಣ್ಣಿನಹುಡಿಯಂತೆಯೋ, ಯಾ ಹಣ್ಣಿನಲ್ಲಿರುವ ಬೀಜದಂತೆಯೋ ಈಶ್ವರನು ತನ್ನ ಸೃಷ್ಟಿಯಲ್ಲಿ ಪ್ರವೇಶಿಸುತ್ತಾನೆ ಎಂದು ಅಂಗೀಕರಿಸಿದರೆ ಅದು ಅಂಶ ಮುಂತಾದ ಪ್ರಮಾಣಗಳಿಗೆ ಅವಿರೋಧವಾಗುವುದು ಎಂದು ಹೇಳಬಹುದು. ಅದನ್ನು ನಿರಾಕರಿಸುತ್ತಾ ನಿರಂಶತ್ವ ನಿರ್ವಿಕಾರತ್ವವನ್ನು ಹೇಳುವ ಶ್ರುತಿಗಳ ಯುಕ್ತಿಗೆ ವಿರೋಧವೆಂದು ಹೇಳಲು **ನಿರಂಶ ಇತಿ**. 'ನಿಷ್ಕಲಂ ನಿಷ್ಕ್ರಿಯಂ ಶಾಂತಂ ನಿರವದ್ಯಂ ನಿರಂಜನಮ್' (ಶ್ವೇ.ಉ.6–19), 'ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ ತದವ್ಯಯಮ್' (ಮು.ಉ.1–1–6) ಮುಂತಾದ ಶ್ರುತಿಗಳು, 'ಅಚ್ಛೇದ್ಯೋಽಯಮದಾಹ್ಯೋಽಯಮವಿಕಾರ್ಯೋಽ–ಯಮುಚ್ಯತೇ' (ಭ.ಗೀ.2–24) ಎಂಬ ಸ್ಮೃತಿಯಂತೆಯು ಕೂಡ ನಿರಂಶ ನಿರ್ವಿಕಾರನಾದ ಈಶ್ವರನು ಆತ್ಮವನ್ನು ಹೊಗುವುದನ್ನು ತಿಳಿಯಬಹುದು. ಹೆಚ್ಚಾಗಿ ಯುಕ್ತಿಯಿಂದಲೂ ನಿರಂಶ ನಿರ್ವಿಕಾರನಾದವನು ಅದನ್ನು ಪ್ರವೇಶಿಸುವನು ಎಂದು ಹೇಳಬಹುದು. ಜಗದ್ಕರ್ತೃವು ಅವಯವಗಳಿಂದ ಕೂಡಿದವನಾಗಿದ್ದರೆ, ನ್ಯಾಯನಿಯಮದಂತೆ ಅವಯವಗಳು ಅವನಿಗಿಂತ ಮೊದಲು ಇದ್ದಿರಬೇಕು; ಆಗ ಅವನು ಅವಯವಗಳ ಕಾರ್ಯವಾಗುತ್ತಾನೆ ಮತು ಜಗದ್ಕರ್ತೃತ್ವವು ಬಾಧಿತವಾಗುತ್ತದೆ, ಸರ್ವಜ್ಞತ್ವ ಸರ್ವಶಕ್ತಿತ್ವಗಳೂ ಇಲ್ಲವಾಗಿ ಅನೀಶ್ವರತ್ವದ ಆಪತ್ತು ಎದುರಾಗುವುದು. 'ಸ ಕಾರಣಂಕರಣಾಧಿಪಾಧಿಪೋ ನ ಚಾಸ್ಯ ಕಶ್ಚಿಜ್ಜನಿತಾ ನ ಚಾಧಿಪಃ' (ಶ್ವೇ.ಉ.6–9) ಎಂಬುದರಿಂದ ಈಶ್ವರ ವಿಷಯವಾಗಿ ಶ್ರುತಿಯ ಹೇಳಿಕೆಗೆ ಬಾಧೆಯಾಗುವುದು. ಹಾಗೆಯೇ ವಿಕಾರವೂ ಈಶ್ವರನಿಗೆ ಹೊಂದಿಕೆಯಾಗುವುದಿಲ್ಲ. ವಿಕಾರ ಅಂದರೆ ಪರಿಣಾಮ, ಪರಿಸ್ಪಂದನೆ ಯಾ ಪರಸ್ಪರ ಸಂಬಂಧದಿಂದಾಗುವ ಅತಿಶಯಯೋಗ ಎಂದು ಹೇಳಬಹುದು. ಅಮೂರ್ತ, ನಿರವಯವ, ಸತ್ ಸರ್ವಪ್ರಕಾರವಾಗಿಯೂ ವಿಕಾರಹೊಂದಲು ಸಾಧ್ಯವಿಲ್ಲ. ವಿಭುವಿಗೆ ಅಂಶ, ವಿಕಾರಗಳ ಅಭಾವದ ದೃಷ್ಟಾಂತವಾಗಿ **ಘಟಾಕಾಶ ಇತಿ.** ಆಕಾಶದಂತೆ ವಿಭುವು ಅಂಶರಹಿತನೂ, ನಿರ್ವಿಕಾರಿಯೂ ಆಗಿರುವನು ಎಂಬ ಅರ್ಥದಲ್ಲಿ. [3–19..21]

ತರ್ಕದ ವಿಚಾರಗಳನ್ನು ಹೀಗೆ ಮುಂದಿಡಬಹುದು: ಮೂಲ ಕಾರಣನಾದ ಈಶ್ವರನು ಭಿನ್ನ ಭಾಗಗಳಿಂದ ಮಾಡಲ್ಪಟ್ಟಿದ್ದರೆ, ಅವನಿಗಿಂತ ಮೊದಲು ಅವನನ್ನು ಉಂಟುಮಾಡಿದ ಭಾಗಗಳಿರಬೇಕು. ಆಗ ಅವನು ಭಾಗಗಳ ಕಾರ್ಯವಾಗುತ್ತಾನೆ ಹಾಗೂ ಸರ್ವವ್ಯಾಪಕನಾದ ಮತ್ತು ಸರ್ವಜ್ಞನಾದ ಸೃಷ್ಟಿಕರ್ತನಾಗಲು ಸಾಧ್ಯವಿಲ್ಲ. ಅದೂ ಅಲ್ಲದೆ ಅವನು ಭಾಗಗಳ ಕಾರ್ಯವಾಗುವುದರಿಂದ, ಅವನಿಗಿಂತ ಮೊದಲು ಇನ್ನೊಬ್ಬ ಸೃಷ್ಟಿಕರ್ತನಿರಬೇಕು, ಆ ಸೃಷ್ಟಿಕರ್ತನಿಗೆ ಮೊದಲು ಇನ್ನೊಬ್ಬ ಸೃಷ್ಟಿಕರ್ತನಿರಬೇಕು, ಇತ್ಯಾದಿ.

त्वमिन्द्रोसीतिवद्वाक्यं न खलु स्तुतितत्परम् ॥ २१ ॥

ತ್ವಮಿಂದ್ರೋಽಸೀತಿವದ್ವಾಕ್ಯಂ ನ ಖಲು ಸ್ತುತಿತತ್ಪರಮ್ ॥ 21 ॥

"ನೀನು ಇಂದ್ರನಾಗಿದ್ದೀಯ" ಎಂಬ ವಾಕ್ಯದಂತೆ, ಅದು ಬರಿಯ ಹೊಗಳಿಕೆಯಾಗಿರದು. [3–21]

ವಿವೃತ್ತಿ

ಇದರಲ್ಲಿ ಮೂರನೆಯ ವಿಕಲ್ಪವನ್ನು ತಳ್ಳಿಹಾಕುತ್ತಾ **ತ್ವಮಿಂದ್ರೋಽಸೀತಿ.** ಇಂದ್ರನಾಗಿರದವನಿಗೆ ಇಂದ್ರತ್ವದ ಆರೋಪದಿಂದ ಸ್ತುತಿಸಿದ ಹಾಗೆಯೇ ಅನೀಶ್ವರನಾದ ಜೀವನಿಗೆ ಈಶ್ವರತ್ವದ ಆರೋಪವನ್ನು ಮಾಡಿ ಸ್ತುತಿಸುವುದು ತತ್ತ್ವಮಸಿ ವಾಕ್ಯದ ಉದ್ದೇಶವಲ್ಲ. ಆ ವಾಕ್ಯವು ಸ್ತುತಿಪರವಾಗಿರದೆ, ನಿಜವಾದ ಹೇಳಿಕೆಯಾಗಿದೆ. 'ಸದೇವ ಸೌಮಯೇದಮಗ್ರ ಆಸೀದೇಕಮೇವಾದ್ವಿತೀಯಂ' (ಛಾ.ಉ.6–2–1), 'ಏತದಾತ್ಮ್ಯಮಿದಂ ಸರ್ವಮ್' (ಛಾ.ಉ.6–8–7) ಎಂಬ ಶ್ರುತಿಗಳಂತೆ ಆರಂಭಿಸಿದುದನ್ನು ಉಪಸಂಹರಿಸುತ್ತಾ ನಿರಂಕುಶತೆ ಅದ್ವಿತೀಯತ್ವಗಳು

ಕೇಳಿಬರುವ ವಿರೋಧಗಳಿಗೆ ಉತ್ತರಿಸಿ, ಜೀವ–ಈಶ್ವರ ಭೇದದ ಅಭಾವದಲ್ಲಿ ಸ್ತುತಿಯ ಕಲ್ಪನೆಗೆ ಅವಕಾಶವಿಲ್ಲ ಎಂಬ ಅರ್ಥವಾಗುವುದು. [3–21]

ಯಾವನು ಇಂದ್ರನಲ್ಲವೋ, ಅವನನ್ನು 'ನೀನು ಇಂದ್ರನಾಗಿದ್ದೀಯ' ಎಂದರೆ ಅದು ಬರೀ ಹೊಗಳಿಕೆಯ ಮಾತಾದೀತು. 'ತತ್ತ್ವಮಸಿ' ಎಂಬ ವಾಕ್ಯವು ಹೊಗಳಿಕೆಯಲ್ಲ ಯಾಕೆಂದರೆ ರಚನೆಯ ನಿಯಮಗಳಿಗೆ ಒಳಪಟ್ಟು ರಚಿಸಲಾದ, ಜೀವ ಹಾಗೂ ಈಶ್ವರನ ನಿಶ್ಚಿತ ಏಕತೆಯನ್ನು ಸೂಚಿಸುವ ಭಾಗದಲ್ಲಿ ಈ ವಾಕ್ಯವು ಬಂದಿದ್ದು, ತಪ್ಪು ಅರ್ಥವನ್ನು ಕಲ್ಪಿಸುವ ಹೇಳಿಕೆಯೆನ್ನಲಾಗದು.

न सादृष्यपरं वाक्यमग्निर्माणवकादिवत् ।
न कार्यकारणत्वस्य साधनं मृद्घटादिवत् ॥ २२ ॥

ನ ಸಾದೃಶ್ಯಪರಂ ವಾಕ್ಯಮಗ್ನಿರ್ಮಾಣವಕಾದಿವತ್ ।
ನ ಕಾರ್ಯಕಾರಣತ್ವಸ್ಯ ಸಾಧನಂ ಮೃದ್ಘಟಾದಿವತ್ ॥ 22 ॥

'ಈ ವಿದ್ಯಾರ್ಥಿಯು ಬೆಂಕಿ' ಎಂಬ ವಾಕ್ಯದಂತೆ ಬರಿಯ ಸಾದೃಶ್ಯತೆಯನ್ನು ಈ ವಾಕ್ಯವು ಸೂಚಿಸುವುದಿಲ್ಲ; ಅಥವಾ 'ಒಂದು ಮಡಕೆಯು ಮಣ್ಣೇ' ವಾಕ್ಯದಂತೆ ಕಾರ್ಯ–ಕಾರಣ ಸಂಬಂಧವನ್ನೂ ಹೇಳುವುದಿಲ್ಲ. [3–22]

ವಿವೃತ್ತಿ

ನಾಲ್ಕನೆಯ ಪಕ್ಷವನ್ನೂ ಕ್ಷೀಣಗೊಳಿಸುತ್ತಾ **ನ ಸಾದೃಶ್ಯಪರಮಿತಿ.** ಗುಣ, ಅವಯವ, ಕ್ರಿಯೆ ಇತ್ಯಾದಿಗಳಲ್ಲಿ ಸಾಮಾನ್ಯವಾಗಿರುವ ಸಾದೃಶ್ಯವು ನಿರ್ಗುಣ, ನಿರವಯವ, ನಿಷ್ಕ್ರಿಯನಾಗಿರುವ ಈಶ್ವರನಲ್ಲಿ ಹೇಗೆ ಇರುವುದು? ಇಲ್ಲಿ ಅಗ್ನಿಯ ಹಾಗೆ ಇರುವ ಇತ್ಯಾದಿಯಾಗಿ ಸಾದೃಶ್ಯಪರತೆಯನ್ನು ತಿಳಿಸುವ ವಾಕ್ಯವಿದಲ್ಲ.

ಐದನೆಯ ಪಕ್ಷವನ್ನು ತಿರಸ್ಕರಿಸುತ್ತಾ **ನ ಕಾರ್ಯಕಾರಣತ್ವಸ್ಯೇತಿ.** ಇದರ ಅರ್ಥವು ಹೀಗಿದೆ: ನಿರವಯವತ್ವವು ಒಂದೇ ದ್ರವ್ಯವಾಚ್ಯವಾಗಿ ಆರಂಭವನ್ನು ಹೇಳಲಾಗುವುದಿಲ್ಲ. ಒಂದು ಭಾಗದ ಅವಿಕಲ್ಪತೆಯಿಂದ ಪರಿಣಾಮವನ್ನೂ ಹೊಂದುವುದಿಲ್ಲ. ಸಂಘಾತ ಮೊದಲಾದ ವಾದಗಳನ್ನು ದೂರದಿಂದಲೇ ತಿರಸ್ಕರಿಸಲಾಗಿದೆ. ಮತ್ತು ಮಣ್ಣಿನ ಮಡಕೆಯಂತೆ ಕಾರ್ಯ–ಕಾರಣ ಭಾವವೂ ಜೀವ–ಈಶ್ವರರಲ್ಲಿ ಇಲ್ಲ. ಅವರ ನಡುವೆ ಸಾಮಾನಾಧಿಕರಣ್ಯವು ಮಾತ್ರ ಇದೆ. [3–22]

'ಈ ವಿದ್ಯಾರ್ಥಿಯು ಬೆಂಕಿ' ವಾಕ್ಯವು ವಿದ್ಯಾರ್ಥಿಯ ಶುದ್ಧತೆಯನ್ನು ಬೆಂಕಿಯ ಶುದ್ಧತೆಯೊಡನೆ ಹೋಲಿಸುತ್ತದೆ ಹಾಗೂ ಶುದ್ಧತೆಯ ವಿಷಯದಲ್ಲಿ ವಿದ್ಯಾರ್ಥಿ ಮತ್ತು ಬೆಂಕಿಯ ಸಾದೃಶ್ಯತೆಯನ್ನು ಗುರುತಿಸುತ್ತದೆ. ಒಂದು ವಸ್ತುವಿನಲ್ಲಿರುವ ಅಂಗಗಳು ಹಾಗೂ ಗುಣವಿಶೇಷಗಳು, ಇನ್ನೊಂದರಲ್ಲಿಯೂ ಸಮಾನವಾಗಿ ಕಂಡುಬಂದರೆ, ಅಲ್ಲಿ ಹೋಲಿಕೆ ಉಂಟಾಗುತ್ತದೆ. ಈಶ್ವರನಲ್ಲಿ ಅಂಗಗಳು ಮತ್ತು ಗುಣವಿಶೇಷಗಳು ಇಲ್ಲದಿರುವುದರಿಂದ, ಅವನಿಗೆ ಜೀವನೊಡನೆ ಸಾದೃಶ್ಯತೆ ಇಲ್ಲ.

ಅಂಗಗಳು ಇಲ್ಲದಿರುವುದರಿಂದ, ಈಶ್ವರನನ್ನು ಯಾವುದೇ ಸೃಷ್ಟಿವಾದಗಳ ಅನುಸಾರ ಹೇಳಲ್ಪಡುವ ಕಾರ್ಯಗಳ ಜನಕನೆಂದು ಭಾವಿಸಲಾಗದು.

न जातिव्यक्तिगमकं गौः खण्ड इतिवद्वचः ।
गुणगुण्यात्मकं वाक्यं नैतन्नीलोत्पलादिवत् ॥ २३ ॥

ನ ಜಾತಿವ್ಯಕ್ತಿಗಮಕಂ ಗೌಃ ಖಂಡ ಇತಿವದ್ವಚಃ ।
ಗುಣಗುಣ್ಯಾತ್ಮಕಂ ವಾಕ್ಯಂ ನೈತನ್ನೀಲೋತ್ಪಲಾದಿವತ್ ॥ 23 ॥

'ಈ ಕುಂಟ (ಪ್ರಾಣಿಯು) ಒಂದು ದನವಾಗಿದೆ' ಎಂಬ ವಾಕ್ಯದಂತೆ, ಮಹಾವಾಕ್ಯವು ಒಂದು ಜಾತಿ (ಗುಂಪು) ಮತ್ತು ಒಂದು ವ್ಯಕ್ತಿಯ ಸಂಬಂಧವನ್ನು ಸೂಚಿಸುವುದಿಲ್ಲ. ಅಥವಾ 'ನೀಲಿ ನೈದಿಲೆ'ಯಂತೆ ಗುಣ ಮತ್ತು ಗುಣವಿಶೇಷಣಗಳ ರೀತಿಯ ಸಂಬಂಧವನ್ನೂ ಹೇಳುವುದಿಲ್ಲ. [3–23]

ವಿವೃತ್ತಿ

ಆರನೆಯ ಪಕ್ಷವನ್ನು ನಿರಾಕರಿಸುವ **ನ ಜಾತೀತಿ.** ಗೋವು ಮುಂತಾದ ರೂಪದಲ್ಲಿರುವ ಚೇತನದಂತೆ, ಜೀವರೂಪದ ವ್ಯಕ್ತಿಯೆಂಬ ಈಶ್ವರನು ಒಂದು ಪಂಗಡ ಯಾ ಗುಂಪಿಗೆ ಸೇರಿದವನು ಎಂದು ಕಲ್ಪಿಸಿದರೆ, ಆಗ ಅನೀಶ್ವರತ್ವದ ಆಪತ್ತಿದೆ. ಈಶ್ವರನೇ ಸಕಲ ವಿಷಯಜ್ಞಾನ ಇಚ್ಛೆ ಪ್ರಯತ್ನಗಳಿರುವವನು ಎಂದು ಶ್ರುತಿ ಪ್ರಮಾಣಗಳಿಂದ ಸಿದ್ಧವಾಗಿದೆ. ಹಾಗಾಗಿ ಈ ವಾಕ್ಯವು ಜಾತಿ–ವ್ಯಕ್ತಿ ಪರವಾಗಿಯೂ ಇಲ್ಲ ಎಂಬ ಅರ್ಥವು.

ಏಳನೆಯದೂ ಅಲ್ಲ ಎಂದು ಹೇಳಲು **ಗುಣಗುಣ್ಯಾತ್ಮಕಮಿತಿ.** ಈಶ್ವರನಿಗೆ ಜೀವನು ಗುಣವಾಗಿದ್ದರೆ, ಅವನ ವಿಶೇಷಣವಾದಾಗ ಸಂಸಾರಿತ್ವದ ಆಪತ್ತಿದೆ ಮತ್ತು ಸರ್ವಜ್ಞತ್ವ ಮೊದಲಾದ ಸಾಧಕಪ್ರಮಾಣಗಳಿಗೆ ವಿರುದ್ಧವಾಗಿದೆ. ಜೀವನಿಗೆ ಈಶ್ವರನು ಗುಣವಾಗಿದ್ದರೆ ಸಂಸಾರಿತ್ವವು ಬಾಧೆಗೊಳಗಾಗುವುದು ನಿತ್ಯಮುಕ್ತತ್ವವೂ ಬಾಧೆಗೊಳಗಾಗಿ ಶ್ರೇಯಸಾಧನವಾಗಿರುವ ಶಾಸ್ತ್ರಗಳೂ ಅರ್ಥಹೀನವಾಗುವವು ಎಂಬ ಅರ್ಥವು. [3–23]

ಜಾತಿಯು ಜಡವೆಂದು ತಿಳಿದಿರುವುದರಿಂದ, ಚೈತನ್ಯಯುತನಾದ ಈಶ್ವರನು ಜಾತಿಯಲ್ಲ.

ಜೀವನು ಈಶ್ವರನ ಗುಣವಿಶೇಷಣನಾಗಿದ್ದರೆ, ಈಶ್ವರನು ಸಂಸಾರಿಯಾಗಿ, ಸೀಮಿತ ಜ್ಞಾನ ಮತ್ತು ಶಕ್ತಿಯುಳ್ಳವನಾಗಿ, ಸುಖ–ದುಃಖಗಳಿಗೆ ಭಾಗಿಯಾಗಬೇಕು; ಇದು ಅವನು ಸರ್ವಜ್ಞನೆಂಬ ಶ್ರುತಿಗಳ ಹೇಳಿಕೆಗೆ ವಿರುದ್ಧವಾಗಿದೆ. ಅದಲ್ಲದೆ ಈಶ್ವರನು ಜೀವನ ಗುಣವಿಶೇಷಣವಾಗಿದ್ದರೆ, ಜೀವನು ಸಂಸಾರಿಯಾಗಿರಲಾರ ಹಾಗೂ ಬಂಧನ ಮತ್ತು ಮುಕ್ತಿಯ ಕುರಿತ ಯಾವುದೇ ಬೋಧನೆಗಳು ಪ್ರಯೋಜನಕಾರಿಯಲ್ಲ.

नोपासनापरं वाक्यं प्रतिमास्वीशबुद्धिवत् ।
न चौपचारिकं वाक्यं राजवद्राजपूरुषे ॥ २४ ॥
जिवात्मना प्रविष्टोसावीश्वरश्श्रूयते यतः ।

ನೋಪಾಸನಾಪರಂ ವಾಕ್ಯಂ ಪ್ರತಿಮಾಸ್ವೀಶಬುದ್ಧಿವತ್ ।
ನ ಚೌಪಚಾರಿಕಂ ವಾಕ್ಯಂ ರಾಜವದ್ರಾಜಪೂರುಷೇ ॥ 24 ॥
ಜೀವಾತ್ಮನಾ ಪ್ರವಿಷ್ಟೋಽಸಾವೀಶ್ವರಶ್ಶ್ರೂಯತೇ ಯತಃ ।

ಮೂರ್ತಿಗಳಲ್ಲಿ ದೇವರೆಂಬ ಭಾವವನ್ನು ಬುದ್ಧಿಪೂರ್ವಕವಾಗಿ ತುಂಬಿ ಪೂಜಿಸುವಂತೆ ಈ ವಾಕ್ಯವು ಭಾವುಕ ಉಪಾಸನೆಯನ್ನು ಹೇಳುವುದಿಲ್ಲ; ಅಥವಾ ರಾಜನ ಸೇವಕನನ್ನು ಔಪಚಾರಿಕವಾಗಿ ರಾಜನೆಂದು ಕರೆದಂತೆ ಈ ವಾಕ್ಯವು ಉಪಚಾರವನ್ನೂ ಸೂಚಿಸುವುದಿಲ್ಲ. [3–24]

ಬೇರೆ ಯಾವುದೇ ರೀತಿಯಿಂದ ಈ ವಾಕ್ಯವನ್ನು ಅರ್ಥೈಸುವುದು ಸಾಧ್ಯವಿಲ್ಲವೆಂದು ಕಾರಣವನ್ನು ಹೀಗೆ ಹೇಳಿದೆ: ಏಕೆಂದರೆ ಈಶ್ವರನು ವಿಶ್ವವನ್ನು ಜೀವನಾಗಿ ಪ್ರವೇಶಿಸಿದನು ಎಂದು ಶ್ರುತಿಗಳಲ್ಲಿ ಹೇಳಲಾಗಿದೆ. [3–25]

ವಿವೃತ್ತಿ

ಎಂಟನೆಯ ಪಕ್ಷವನ್ನು ನಿರಾಕರಿಸುತ್ತಾ **ನೋಪಾಸನಾಪರಮಿತಿ.** ವೇದಗಳಲ್ಲಿ ಉಪಾಸಿತನಾಗಿ, ಅದರ ಕ್ರಿಯೆಗಳು ಅನ್ವಯವಾಗುವ ಉಪಾಸನೆಯ ಪಾಠಗಳ ಅಭಾವವಿರುವುದರಿಂದ, ಅಸಿ ಎಂಬ ಶಬ್ದವು ವ್ಯವಹಾರದಲ್ಲಿ ಸ್ವರೂಪಮಾತ್ರವನ್ನು ತಿಳಿಸುವುದೆಂದು ನಿಶ್ಚಯವಾಗಿರುವುದರಿಂದ, ಬೇರೆಯೇ ಕ್ರಿಯೆಯನ್ನು ಅಧ್ಯಾಹಾರಮಾಡುವುದು ತಪ್ಪಾಗುವುದು ಎಂಬ ಕಾರಣದಿಂದಲೂ, ಈ ವಾಕ್ಯವು ಉಪಾಸನೆಯ ಪರವಾಗಿಲ್ಲ.

ಒಂಬತ್ತನೆಯ ಉಪಚಾರ ಪಕ್ಷವನ್ನು ಕ್ಷೀಣಗೊಳಿಸುತ್ತಾ **ನ ಚೌಪಚಾರಿಕಮಿತಿ.** ಉಪಚಾರಕ್ಕಾಗಿ ಹೇಳುವಂತಹ ವಾಕ್ಯವೆನ್ನಲು ಅಸಂಗತವೆನಿಸುವುದು ಹಾಗೂ ಉಪಚಾರದ ಪ್ರಯೋಗಕ್ಕೆ ಅವಕಾಶವಿದೆ ಎನ್ನಲೂ ಸಾಧ್ಯವಿಲ್ಲ.

ಸಮಸ್ತ ಪಕ್ಷಗಳನ್ನೂ ನಿರಾಕರಿಸಿ ದೂರಮಾಡುತ್ತಾ **ಜೀವಾತ್ಮನೇತಿ.** ಈಶ್ವರನು ಜೀವನಾಗಿ ಪ್ರವೇಶಿಸಿರುವನು ಎಂದು ತಿಳಿಸುವ ಶ್ರುತಿಗಳು ಅನೇಕವಿದ್ದು, ವಿಶ್ವವನ್ನು ಪ್ರವೇಶಿಸಿರುವುದರಿಂದ ಈಶ್ವರನಿಗೆ ಜೀವತ್ವವಿದೆ ಎಂದು ಅರ್ಥೈಸಿ, ಇತರ ಅರ್ಥಗಳನ್ನು ಜೀವನಿಗೆ ಹೇಳುವುದಲ್ಲ ಎಂಬುದು ನಿಶ್ಚಯ. ಸ್ತೋತೃ–ಸ್ತೋತವ್ಯತ್ವ ಮುಂತಾದ ಭೇದಕಲ್ಪನೆಗಳಿಗೆ ಅವಕಾಶವಿಲ್ಲದೆ ಬೇರೊಂದು ವಿಧವಾಗಿ ಜೀವತ್ವವನ್ನು ಹೇಳುವುದು ಅಸಾಧ್ಯ. ಹಾಗಾಗಿ ಆತ್ಮನಿಗೆ ಉಪಾಧಿಯಿಂದಾಗಿ ಜೀವತ್ವವು ಲಭಿಸಿರುವುದರಿಂದ ಈ ವಾಕ್ಯವು ಸ್ವಾಭಾವಿಕವಾಗಿ ಬ್ರಹ್ಮತ್ವ ಬೋಧಕವಾಗಿರುವುದು ಎಂದು ತಿಳಿದುಬರುತ್ತದೆ. [3–24..25]

'ತತ್ತ್ವಮಸಿ' ಎಂಬ ವಾಕ್ಯವು ಜೀವನನ್ನು ಈಶ್ವರನಾಗಿ ಯಾ ಈಶ್ವರನನ್ನು ಜೀವನಾಗಿ ಭಾವಿಸಲು ಅವಕಾಶ ಕೊಡುವುದಿಲ್ಲ ಯಾಕೆಂದರೆ ವಾಕ್ಯದಲ್ಲಿ ಹಾಗೆ ಮಾಡಲು ನಿರ್ದೇಶಿಸುವ ಶಬ್ದವಾಗಲೀ, ವಸ್ತುವಾಗಲೀ ಇಲ್ಲ. ಅದಲ್ಲದೆ, 'ಆಗಿದ್ದೀಯ' ಎಂಬ ಪದವು, ಅಧಿಕಾರಯುತವಾಗಿ ಹೇಳದೆ, ಇದಮಿತ್ಥಂ (ಇದೇ ಸರಿ) ಎಂದು ಸಹಜತೆಯಿಂದ ಸೂಚಿಸುತ್ತದೆ.

ಉಪಚಾರಕ್ಕೋಸ್ಕರ ಜೀವನ ಏಕತೆಯನ್ನು ಈಶ್ವರನೊಡನೆ ಹೇಳಿದರೆ, ಉಪನಿಷತ್ತುಗಳಲ್ಲಿ (ಛಾಂದೋಗ್ಯ 6) ಒಂಭತ್ತು ಅಧ್ಯಾಯಗಳಲ್ಲಿ, ಬೇರೆ ಬೇರೆ ದೃಷ್ಟಿಕೋನದಿಂದ ಅದನ್ನು ಬಾರಿ ಬಾರಿ ಪುನರಾವರ್ತಿಸುವ ಆವಶ್ಯಕತೆಯಿಲ್ಲ. ಉಪಚಾರಕ್ಕೆಂದು ಮಾಡಿದ ಹೇಳಿಕೆಗಳು, ಪುನಾರಾವರ್ತನೆಯಿಂದ ಮಹತ್ವವನ್ನು ಪಡೆಯುವುದಿಲ್ಲ.

ಆದುದರಿಂದ, ಉಪಾಧಿಗಳೊಡನೆ ದೃಷ್ಟಿಸಿದಾಗ ಮಾತ್ರ ಆತ್ಮವು ಜೀವನಾಗುವುದು ಮತ್ತು ವಾಸ್ತವಿಕವಾಗಿ ಬ್ರಹ್ಮವೇ ಆಗಿರುವುದು ಎಂದು 'ತತ್ತ್ವಮಸಿ' ಎಂಬ ವಾಕ್ಯವು ಉಪದೇಶಿಸುತ್ತದೆ.

ಅಜ್ಞಾನದಿಂದ ಆತ್ಮನನ್ನು ದೇಹ ಇತ್ಯಾದಿಗಳೊಂದಿಗೆ ಗುರುತಿಸಿರುವುದು

देहेन्द्रियमनोबुद्धिप्राणाहङ्कारसंहतौ ॥ २५ ॥

आत्म सङ्कलनादज्ञैरात्मत्वं प्रतिपाद्यते ।
वह्निधीः काष्ठलोहादौ वह्निसङ्कलनादिव ॥ २६ ॥

ದೇಹೇಂದ್ರಿಯಮನೋಬುದ್ಧಿಪ್ರಾಣಾಹಂಕಾರಸಂಹತೌ ॥ 25 ॥
ಆತ್ಮ ಸಂಕಲನಾದಜ್ಞೈರಾತ್ಮತ್ವಂ ಪ್ರತಿಪಾದ್ಯತೇ ।
ವಹ್ನಿಧೀಃ ಕಾಷ್ಠಲೋಹಾದೌ ವಹ್ನಿಸಂಕಲನಾದಿವ ॥ 26 ॥

ದೇಹ, ಇಂದ್ರಿಯಗಳು, ಮನಸು, ಬುದ್ಧಿ, ಪ್ರಾಣ ಮತ್ತು ಅಹಂಕಾರಗಳ ಮೊತ್ತದೊಡನೆ ಆತ್ಮನು ಸಂಯೋಗವಾಗಿ ಪ್ರಕಟವಾದಾಗ, ಅಜ್ಞಾನಿಗಳು ಈ ಸಂಯುಕ್ತವನ್ನೇ ಆತ್ಮವೆಂದು ತಿಳಿಯುತ್ತಾರೆ, ಕಟ್ಟಿಗೆ ಯಾ ಕಬ್ಬಿಣವು ಬೆಂಕಿಯೊಡನೆ ಪ್ರವರ್ತಿಸಿ, ಬೆಂಕಿಯೆಂದೇ ಕರೆಯಲ್ಪಡುವ ಹಾಗೆ. [3–25..26]

ವಿವೃತ್ತಿ

ಮುಂದೆ ಬ್ರಹ್ಮನೇ ಸರ್ವರಲ್ಲಿರುವ ಆತ್ಮನಾದರೆ ನಾನೇ ಬ್ರಹ್ಮ, ನಿತ್ಯಾತ್ಮನು ಎಂದು ಯಾಕೆ ಸದಾ ಪ್ರತಿಭಾಸವಾಗುವುದಿಲ್ಲ? ನಾನು ಮನುಷ್ಯನೇ, ಆತ್ಮನಲ್ಲ ಎಂದು ಮುಂತಾಗಿ ಯಾಕೆ ಪ್ರತಿಭಾಸವಾಗುತ್ತದೆ? ಎಂಬ ಆಶಂಕೆಗಳಿಗೆ ಉಪಾಧಿಯೆಂಬ ಅವಿವೇಕದಿಂದ ಬಂಧಿತವಾದ ಭ್ರಮೆಯ ವಶವಾಗಿ ಎಂಬ ಅಭಿಪ್ರಾಯವನ್ನು ಹೇಳಿದೆ. ಉಪಾಧಿಯ ನಾಶದಿಂದ ತ್ವಂ ಪದಾರ್ಥದ ಶೋಧನೆಯನ್ನು ಆರಂಭಿಸುತ್ತಾ **ದೇಹೇಂದ್ರಿಯೇತ್ಯಾದಿನಾ.** ***ಅಜ್ಞೈ*** ಅಜ್ಞಾನದಿಂದ ಆವೃತರಾದವರು ದೇಹ ಮುಂತಾದವುಗಳಿಂದ ಕೂಡಿರುವ ಸಂಯುಕ್ತ ಜೀವನನ್ನೇ ಆತ್ಮಚೈತನ್ಯವೆಂದು ತಿಳಿಯುವರು. ಆತ್ಮತ್ವವನ್ನು ಪ್ರತಿಪಾದಿಸಿರುವ ಸಂಯುಕ್ತವನ್ನು ಆತ್ಮನೆಂದೇ ತಿಳಿದಿರುವರು, ಅದು ಬ್ರಹ್ಮನಲ್ಲ ಎಂಬ ಅರ್ಥದಲ್ಲಿ. ಹೇಳಿರುವ ಅರ್ಥಕ್ಕೆ ಬುದ್ಧಿಸಾಮರ್ಥ್ಯದ ದೃಷ್ಟಾಂತವನ್ನು ನೀಡುತ್ತಾ **ವಹ್ನಿಧೀರಿತಿ.** [3–25..26]

ಪಂಚಕೋಶಗಳ ಮೂಲಕ ಆತ್ಮದ ಪ್ರಕಟ

ಜೀವ ಮತ್ತು ಈಶ್ವರನ ಕುರಿತಾದ ಅಪೇಕ್ಷಿತ ಮತ್ತು ಅನಪೇಕ್ಷಿತ ವಿಷಯಗಳ ವ್ಯತ್ಯಾಸವನ್ನು ಎತ್ತಿತೋರಿಸುವುದರ ಮೂಲಕ, ವಾರ್ತಿಕಕಾರರು ಶ್ರುತಿಗಳು ತಿಳಿಸಿದ ವಿವರಗಳು ಸತ್ಯಾಧಾರಿತವಾಗಿವೆ ಎಂದು ಹೇಳುತ್ತಾರೆ.

देहमन्नमयं कोशमाविश्यात्मा प्रकाशते ।
स्थूलो बालः कृष्णो वर्णाश्रमविकल्पवान् ॥ २७ ॥
प्राणकोशेपि जीवामि क्षुधितोस्मि पिपासितः ।
संशितो निश्चितो मन्ये इति कोशे मनोमये ॥ २८ ॥
विज्ञानमयकोशस्थो विज्ञानमीति तिष्ठति ।
आनन्दमयकोशाख्ये त्वहङ्कारे पुराकृतैः ॥ २९ ॥
पुणैरूपासनाभिश्च सुखितोस्मीति मोदते ।

ದೇಹಮನ್ನಮಯಂ ಕೋಶಮಾವಿಶ್ಯಾತ್ಮಾ ಪ್ರಕಾಶತೇ ।
ಸ್ಥೂಲೋ ಬಾಲಃ ಕೃಷ್ಣೋ ವರ್ಣಾಶ್ರಮವಿಕಲ್ಪವಾನ್ ॥ 27 ॥
ಪ್ರಾಣಕೋಶೇಪಿ ಜೀವಾಮಿ ಕ್ಷುಧಿತೋಸ್ಮಿ ಪಿಪಾಸಿತಃ ।
ಸಂಶಿತೋ ನಿಶ್ಚಿತೋ ಮನ್ಯೇ ಇತಿ ಕೋಶೇ ಮನೋಮಯೇ ॥ 28 ॥
ವಿಜ್ಞಾನಮಯಕೋಶಸ್ಥೋ ವಿಜ್ಞಾನಮೀತಿ ತಿಷ್ಠತಿ ।
ಆನಂದಮಯಕೋಶಾಖ್ಯೇ ತ್ವಹಂಕಾರೇ ಪುರಾಕೃತೈಃ ॥ 29 ॥
ಪುಣ್ಯೈರೂಪಾಸನಾಭಿಶ್ಚ ಸುಖಿತೋಸ್ಮೀತಿ ಮೋದತೇ ।

ಅನ್ನಮಯಕೋಶವನ್ನು (ಭೌತಿಕ ದೇಹ) ಪ್ರವೇಶಿಸಿ, ಆತ್ಮನು ಸ್ಥೂಲಕಾಯ (ಭಾರೀ ದೇಹವುಳ್ಳ), ಬಾಲಕ, ಕೃಶಕಾಯ, ಕೃಷ್ಣವರ್ಣದ, ನಿರ್ದಿಷ್ಟ ಜಾತಿಗೆ ಸೇರಿದ, ನಿರ್ದಿಷ್ಟ ಮತಕ್ಕೆ ಸೇರಿದ ಇತ್ಯಾದಿಯಾಗಿ ಪ್ರಕಾಶಿಸುತ್ತಾನೆ. ನಾನು ಜೀವಂತವಾಗಿದ್ದೇನೆ, ನನಗೆ ಹಸಿವಾಗುತ್ತಿದೆ, ನಾನು ಬಾಯಾರಿದ್ದೇನೆ ಇತ್ಯಾದಿಯಾಗಿ ಪ್ರಾಣಮಯ ಕೋಶದಲ್ಲಿ ಅನುಭವಿಸುತ್ತಾನೆ. ಸಂಶಯವಿದೆ, ನಿಶ್ಚಯವಿದೆ, ಯೋಚನೆಯಿದೆ ಇತ್ಯಾದಿಯಾಗಿ ಮನೋಮಯ ಕೋಶದಲ್ಲಿ ಭಾವಿಸುತ್ತಾನೆ. ವಿಜ್ಞಾನಮಯ ಕೋಶವನ್ನು ಪ್ರವೇಶಿಸಿ, 'ನಾನು ತಿಳಿದಿದ್ದೇನೆ' ಎಂದು ಅಂತಃಕರಣದಲ್ಲಿ ನೆಲೆಸುತ್ತಾನೆ. ಹಿಂದಿನ ಕರ್ಮಗಳ, ಉಪಾಸನೆಗಳ ಪುಣ್ಯಫಲವನ್ನು ಅನುಭವಿಸಿ, 'ನಾನು ಸಂತೋಷವಾಗಿದ್ದೇನೆ' ಎಂದು ತಿಳಿದು, ಆನಂದಮಯ ಕೋಶದಲ್ಲಿ (ಅಹಂಕಾರ) ಇರುತ್ತಾನೆ. [3–27..30]

ವಿವೃತ್ತಿ

ಇದರಲ್ಲಿ ಸ್ಥೂಲಅರುಂಧತೀದರ್ಶನ ನ್ಯಾಯದಂತೆ ಮತ್ತು ದರ್ಭೆಹುಲ್ಲನ್ನು ಬಾಣವೆಂದು ತಿಳಿಯುವ ನ್ಯಾಯದಂತೆ ಅಂತರಾತ್ಮನು ಸೂಕ್ಷ್ಮಪ್ರಕಾರವಾಗಿರುವನು ಎಂದು ಹೇಳಲು **ದೇಹಮನ್ನಮಯಂ ಕೋಶಮಿತಿ.** ಇದರ ಅರ್ಥವು ಹೀಗಿದೆ: ಅಹಂ ಎಂದು ಭಾಸವಾಗುವ ಪ್ರತ್ಯಗಾತ್ಮನು ಗ್ರಹಿಸಲ್ಪಡುತ್ತಾನೆ ಎಂಬುದು ಇಲ್ಲಿ ಅವಿವಾದಿತ. ಸ್ಥೂಲತ್ವ ಮುಂತಾದ ದೃಶ್ಯಧರ್ಮವಿಶಿಷ್ಟ ವಿಷಯವಾಗಿರುವವನು ಶುದ್ಧ ಆತ್ಮನಲ್ಲ ಎಂದು ತಿಳಿಯಬೇಕು. ಹಾಗೆ ಪರಿಚ್ಛಿನ್ನನಾದ ಜೀವಾತ್ಮನು ವ್ಯಾಪಕನಾದ ಪರಮಾತ್ಮನಾಗುವ ಸಂಭಾವನೆಯು ಹೇಗೆ ಆಗುವುದು? ಅಂಶವಿಶಿಷ್ಟವಾಗಿರುವ ಅಹಂಕಾರದಿಂದ ಗೃಹೀತನಾಗಿ ಅಹಂಕಾರದ ಸಾಕ್ಷಿತ್ವದಿಂದ ಅಂಶವುಳ್ಳವನಾಗಿ ಕಂಡುಬರುವ ಆತ್ಮನು ಅಹಂಕಾರ ನಿರಪೇಕ್ಷನಾಗಿ ಸ್ವಯಂ ಪ್ರಕಾಶಮಾನನಾಗಿ, ಶುದ್ಧ ಪರಿಪೂರ್ಣ ಪರಮಾತ್ಮತ್ವದಿಂದಲೇ ಅರಿಯಲ್ಪಡಲು ಶಕ್ಯನಾಗಿರುವನು. ಅದರಲ್ಲಿ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಎಂಬ ಪಂಚಕೋಶಗಳಲ್ಲಿ ಅಹಂ ಭಾಸವಾಗುವ ವಿಷಯವಾಗಿರುವುದು ಪ್ರಸಿದ್ಧವಾಗಿದೆ. ಅದರಿಂದ ಬೇರೆಯಾಗಿ ಅದರ ಸಾಕ್ಷಿಯಾಗಿರುವ ಪ್ರತ್ಯಗಾತ್ಮನು ಶುದ್ಧ ಆತ್ಮನಾಗಿರುವನು ಎಂಬುದು ಸಿದ್ಧವಾಗಿದೆ. ಹೇಗೆ? ನಾನು ಸ್ಥೂಲನಾಗಿರುವೆನು, ನಾನು ಬ್ರಾಹ್ಮಣ, ನಾನು ಬ್ರಹ್ಮಚಾರಿ ಮುಂತಾದ ವಿಶಿಷ್ಟತೆಗಳು ಅಹಂಕಾರದ ಹೊರಗೆ ದೇಹಕ್ಕೆ ಸೇರಿದವು. ನಾನು ಹಸಿದಿದ್ದೇನೆ, ನಾನು ಬಾಯಾರಿದ್ದೇನೆ ಎಂದು ಮುಂತಾದ ಪ್ರಾಣಧರ್ಮವಿಶೇಷ ವಿಷಯಗಳು ಅದರ ಒಳಗಿರುವವು. ಉಪಲಕ್ಷಣವಾಗಿ ನೋಡುತ್ತೇನೆ, ಕೇಳುತ್ತೇನೆ ಇತ್ಯಾದಿ ಇಂದ್ರಿಯಧರ್ಮ ವೈಶಿಷ್ಟ್ಯತೆಗಳು. ಸಂಶಯಿಸುವೆನು, ನಿಶ್ಚಯಿಸುವೆನು ಮುಂತಾಗಿ ಭಾವಿಸುವುದು ಮನೋಧರ್ಮವಿಶಿಷ್ಟ ವಿಷಯಗಳು ಪ್ರಾಣಮಯದ ಒಳಗಿರುವ ಮನೋಮಯಕೋಶದಲ್ಲಿರುವುದು. ನಾನು ಇದನ್ನು ತಿಳಿದಿದ್ದೇನೆ, ಮಾಡುತ್ತೇನೆ ಮುಂತಾದವುಗಳು ಮನೋಮಯದ ಒಳಗಿರುವ ವಿಜ್ಞಾನಮಯಕೋಶದ ವಿಷಯಗಳಾಗಿವೆ. ಅಹಂಕಾರದಿಂದ ಆತ್ಮಚೈತನ್ಯ ಖಚಿತನಾಗಿರುವೆನು ಎಂದು ಭಾಸವಾಗುವ ಕೋಶವಾಗಿ

ಭಾಸವಾಗುವ ಆನಂದಮಯಕೋಶವು ಅಹಂಕಾರವೇ ಆಗಿದೆ. ಅದು ವಿಜ್ಞಾನಮಯ ಕೋಶದ ಒಳಗಿದ್ದು ಅದರ ಆನಂದಮಯತ್ವದಿಂದ ಸುಖ, ವಿಶೇಷ ಅವಯವತ್ವಗಳಿಗೆ ನಿಮಿತ್ತವಾಗಿದೆ ಎಂದು ಹೇಳಲು **ಪುರಾಕೃತ್ತೈಃ ಪುಣ್ಯೈರೂಪಾಸನಾಭಿಶ್ಚೇತಿ.** [3–27..30]

एवं कञ्चुकितः कोशैः कञ्चुकैरिव पञ्चभिः ॥ ३० ॥
परिच्छिन्न इवाभाति व्याप्तोपि परमेश्वरः ।

ಏವಂ ಕಂಚುಕಿತಃ ಕೋಶೈಃ ಕಂಚುಕೈರಿವ ಪಂಚಭಿಃ ॥ 30 ॥
ಪರಿಚ್ಛಿನ್ನ ಇವಾಭಾತಿ ವ್ಯಾಪ್ತೋಪಿ ಪರಮೇಶ್ವರ: ।

ಹೀಗೆ ಐದು ಕೋಶಗಳಿಂದ ಆವೃತನಾಗಿ, ಪರಮೇಶ್ವರನು, ಸರ್ವವ್ಯಾಪಿಯಾಗಿದ್ದರೂ ಅವುಗಳಿಂದ ಸೀಮಿತನಾಗಿ ಕಾಣುತ್ತಾನೆ. [3–30..31]

ವಿವೃತ್ತಿ

ಹೀಗೆ ಪಂಚಕೋಶಗಳಿಂದ ಕೂಡಿ ಅದರಿಂದಾದ ಆವರಣದಿಂದ ಮರೆಮಾಚಲ್ಪಟ್ಟಿರುವ ಸಾಕ್ಷಿರೂಪದ ಆತ್ಮನು ಸ್ವಯಂ ಪರಿಪೂರ್ಣನಾದ ಈಶ್ವರನೇ ಎಂಬ ಆತ್ಮತತ್ತ್ವವನ್ನು ಹೇಳುವ **ಏವಂ ಕಂಚುಕಿತ ಇತಿ.** [3–30..31]

यथासलिलमाविश्य बहुधा भति भास्करः ॥ ३१ ॥
तथा शरीराण्याविश्य बहुधा स्फुरतीश्वरः ।

ಯಥಾಸಲಿಲಮಾವಿಶ್ಯ ಬಹುಧಾ ಭಾತಿ ಭಾಸ್ಕರಃ ॥ 31 ।
ತಥಾ ಶರೀರಾಣ್ಯಾವಿಶ್ಯ ಬಹುಧಾ ಸ್ಫುರತೀಶ್ವರಃ ।

ನೀರಿನಲ್ಲಿ ಪ್ರತಿಬಿಂಬಿಸಿದ ಸೂರ್ಯನು ಬಹುವಾಗಿ ಕಾಣುವಂತೆ, ಶರೀರಗಳನ್ನು ಪ್ರವೇಶಿಸಿದ ಈಶ್ವರನು ಅನೇಕನಾಗಿ ಕಾಣುತ್ತಾನೆ. [3–31..32]

ವಿವೃತ್ತಿ

ಉಪಾಧಿ ಬಂಧನಕ್ಕೊಳಗಾಗಿ ಆವರಿಸಲ್ಪಟ್ಟವನಂತೆ ಭಾಸವಾಗುವ ಅದೇ ಆತ್ಮನು ಸ್ವತಃ ಅಪರಿಚ್ಛಿನ್ನ ಪರಮಾತ್ಮನೇ ಎಂದು ಪ್ರತಿಪಾದಿಸುತ್ತಾ ಉಪಾಧಿಭೇಧದಿಂದಾಗಿ ಅವನ ಪ್ರತ್ಯೇಕ ಶರೀರ ಭೇಧಗಳು ಪ್ರತಿಭಾಸವಾಗುವುವು, ಸ್ವತಃ ಅವನಿಂದಾಗಿ ಅಲ್ಲ ಎಂದು ಹೇಳಲು ದೃಷ್ಟಾಂತವಾಗಿ **ಯಥಾ ಸಲಿಲಮಿತಿ.** ಹೇಗೆ ಅನೇಕ ಪಾತ್ರೆಗಳಲ್ಲಿರುವ ನೀರಿನಲ್ಲಿ ಪ್ರತೀತವಾಗುವ ಸೂರ್ಯಬಿಂಬಕ್ಕೆ ನೀರಿನ ಉಪಾಧಿಯ ಪರಾಮರ್ಶೆಯ ಬಳಿಕ ಭೇದವನ್ನು ನಿರೂಪಿಸಲು ಅಸಾಧ್ಯವಾಗುವುದೋ, ಹಾಗೆ ಅನೇಕ ದೇಹಗಳಲ್ಲಿ ಸ್ಫುರಿಸುವ ಆತ್ಮಬಿಂಬಕ್ಕೆ ಕೂಡ ದೇಹದ ಉಪಾಧಿ ಪರಾಮರ್ಶೆಯ ಬಳಿಕ ಭೇದವನ್ನು ನಿರೂಪಿಸಲು ಆಗುವುದಿಲ್ಲ. ಹಾಗಾಗಿ ಪರಮಾರ್ಥವಾಗಿ ಸರ್ವ ಶರೀರಗಳಲ್ಲಿ ಒಂದೇ ಆಗಿರುವ ಪರಿಪೂರ್ಣ ಆತ್ಮನು ಇರುವನು ಎಂದು ಸಿದ್ಧವಾಗುವುದು. ಈ ವಾದಕ್ಕೆ ಸಂಶಯವನ್ನು ವ್ಯಕ್ತಪಡಿಸುತ್ತಾ ಒಂದೇ ಆತ್ಮವು ಎಲ್ಲ ಜೀವಿಗಳಲ್ಲಿಯೂ ಇರುವುದಾದರೆ, ಒಂದು ಜೀವಿಯು ಸುಖಪಡುವಾಗ ಎಲ್ಲ ಜೀವಿಗಳೂ ಸುಖವನ್ನು ಅನುಭವಿಸಬೇಕು ಎಂಬ ಪ್ರಶ್ನೆ

ಏಳುವುದು. ನೀರಿನಲ್ಲಿರುವ ಪ್ರತಿಬಿಂಬವು ನೀರಿಗಿಂತ ಬೇರೆಯಾಗಿದೆ ಎಂಬುದು ಕಲ್ಪನೆಯಾಗಿ ಭಾವಿಸಿದರೆ, ಅದರಂತಿರುವ ಇತರ ಬಿಂಬಗಳೂ ಇಲ್ಲವಾಗುವುವು. ಪ್ರತಿಯೊಂದು ಜೀವಿಗೂ ಅದರದ್ದೇ ಆದ ಧರ್ಮವ್ಯವಸ್ಥೆ ಇದೆ. ಅದಕ್ಕೆ ಉತ್ತರವಾಗಿ ಜೀವ–ಈಶ್ವರರ ಐಕ್ಯತೆಯನ್ನೇ ತಿಳಿಸುತ್ತದೆ ಧರ್ಮಭೇದವ್ಯವಸ್ಥೆಯು ಎಂಬುದಕ್ಕೆ ಇದೇ ದೃಷ್ಟಾಂತವು ಎಂದು ಹೇಳುತ್ತಾ ಹೇಗೆ ಪ್ರತಿಬಿಂಬದ ಚಲನೆ ಮುಂತಾದವುಗಳು ಸೂರ್ಯನ ಚಲನೆಯಾಗಿ ಪರಿವರ್ತಿತವಾಗುವುದಿಲ್ಲವೋ, ಹಾಗೆ ಜೀವನಲ್ಲಿ ಭಾಸವಾಗುವ ಕರ್ತೃತ್ವ ಇತ್ಯಾದಿ ಸಂಸಾರಧರ್ಮಗಳಿಂದ ಪರಮಾತ್ಮನು ಆ ಧರ್ಮಗಳನ್ನು ಹೊಂದಿರುವನು ಎಂದು ಹೇಳಲಾಗುವುದಿಲ್ಲ. [3–31..32]

ಜೀವ ಮತ್ತು ಈಶ್ವರನ ಏಕತೆ

कारणत्वं च कार्यत्वं तटस्थं लक्षणं तयोः ॥ ३२ ॥
शाखायां चन्द्र इतिवन्नैव मुख्यमिदं मतम् ।

ಕಾರಣತ್ವಂ ಚ ಕಾರ್ಯತ್ವಂ ತಟಸ್ಥಂ ಲಕ್ಷಣಂ ತಯೋಃ ॥ 32 ॥
ಶಾಖಾಯಾಂ ಚಂದ್ರ ಇತಿವನ್ನೈವ ಮುಖ್ಯಮಿದಂ ಮತಮ್ ।

ಸಾಂದರ್ಭಿಕ ವಿಶೇಷಣಗಳಿಂದ ಅವರನ್ನು ವಿವರಿಸಿದರೆ ಅವರನ್ನು ಕಾರ್ಯ ಮತ್ತು ಕಾರಣವೆಂದು ಹೇಳಬಹುದು, ಚಂದ್ರನು ಮರದ ಕೊಂಬೆಯ ಮೇಲೆ ಇದ್ದಾನೆ ಎಂದು ಹೇಳಿದ ಹಾಗೆ. ಇದು ಮುಖ್ಯವಾದ ವಿವರಣೆಯೆಂದು ಪರಿಗಣಿಸಲಾಗುವುದಿಲ್ಲ. [3–32..33]

ವಿವೃತ್ತಿ

ಅಂತೆಯೇ ಪರಿಚ್ಛಿನ್ನತೆ ಮತ್ತು ಅನೇಕತೆಗಳು ಈಶ್ವರನಿಗೆ ಹೊರತಾಗಿರುವುದು ಮತ್ತು ಉಪಾಧಿವಶವಾಗಿ ಭಾಸವಾಗುವುದು, ವಸ್ತುತಃ ಅದು ಅವನ ಧರ್ಮವಲ್ಲ ಎಂದು ಪ್ರತಿಪಾದಿಸಿದ ಬಳಿಕ ಜೀವ–ಈಶ್ವರರ ತಟಸ್ಥ ಸ್ವರೂಪಲಕ್ಷಣವನ್ನು ತಿಳಿಸುವುದರ ಮೂಲಕ ಅವರ ಐಕ್ಯತೆಯೇ ವಾಕ್ಯಾರ್ಥವಾಗಿ ಸಂಭಾವ್ಯವಾಗಿದೆ ಎಂದು ಹೇಳಲು **ಕಾರಣತ್ವಮಿತ್ಯಾದಿನಾ.** ಕಾರಣತ್ವವು ತತ್ ಪದಾರ್ಥದ ತಟಸ್ಥಲಕ್ಷಣವಾಗಿದ್ದರೆ, ಕಾರ್ಯತ್ವವು ತ್ವಂ ಪದಾರ್ಥದ ತಟಸ್ಥಲಕ್ಷಣವಾಗಿದೆ. ಹಾಗೆಂದು ಶ್ರುತಿಯಲ್ಲಿ 'ಕಾರ್ಯೋಪಾಧಿರಯಂ ಜೀವಃ ಕಾರಣೋಪಾಧಿರೀಶ್ವರಃ' (ಮಹಾನಾರಾಯಣೋಪನಿಷತ್, 4ನೆಯ ಅಧ್ಯಾಯ) ಎಂದು ಹೇಳಿದೆ. ಭೂತಭೌತಿಕ ಪ್ರಪಂಚದ ಕಾರಣತ್ವವು ತತ್ ಪದಾರ್ಥದ ಉಪಲಕ್ಷಣವು, ದೇಹ ಇಂದ್ರಿಯ ಮುಂತಾದವುಗಳ ಸಂಯುಕ್ತರೂಪದ ಕಾರ್ಯದ ಅಧ್ಯಕ್ಷತ್ವವು ತ್ವಂ ಪದಾರ್ಥದ ಉಪಲಕ್ಷಣವು ಎಂದು ಅರ್ಥ. ಹೀಗೆ ಹೇಳಿರುವ ಲಕ್ಷಣಗಳು ಉಭಯರಲ್ಲಿ ಸತ್‌ನ ಭಾವಸಂಭಾವನೆಯನ್ನು ಹೇಳಲು ಮಾತ್ರವಾಗಿದೆ, ಅವುಗಳ ಸ್ವರೂಪದಲ್ಲಿ ಪರ್ಯವಸಾನವಾಗುವುದು ಎಂಬ ಅರ್ಥದಲ್ಲಿ ಅಲ್ಲ ಎಂದು ದೃಷ್ಟಾಂತದ ಮೂಲಕ ಸ್ಪಷ್ಟಪಡಿಸಲು **ಶಾಖಾಯಾಮಿತಿ.** [3–32..33]

महाप्रकाशमित्युक्तं स्वरूपं चन्द्रलक्षणम् ॥ ३३ ॥
सच्चिदानन्दरूपत्वं स्वरूपं लक्षणं तयोः ।

ಮಹಾಪ್ರಕಾಶಮಿತ್ಯುಕ್ತಂ ಸ್ವರೂಪಂ ಚಂದ್ರಲಕ್ಷಣಮ್ ॥ 33 ॥

ಸಚ್ಚಿದಾನಂದರೂಪತ್ವಂ ಸ್ವರೂಪಂ ಲಕ್ಷಣಂ ತಯೋಃ ।

ರಾತ್ರಿಕಾಲದಲ್ಲಿ ಬೆಳಕು ಕೊಡುವುದು ಚಂದ್ರನ ಲಕ್ಷಣ. ಹಾಗೆಯೇ ಸತ್-ಚಿತ್-ಆನಂದ, ಅಸ್ತಿತ್ವ, ಚಿತ್ತ ಮತ್ತು ಆನಂದವು ಜೀವ ಮತ್ತು ಈಶ್ವರನ ಲಕ್ಷಣಗಳು. [3-33..34]

ವಿವೃತ್ತಿ

ಸ್ವರೂಪದಲ್ಲಿ ಪರ್ಯವಸಾನವಾಗುವ ಲಕ್ಷಣಕ್ಕೆ ಉದಾಹರಣೆಯಾಗಿ **ಮಹಾಪ್ರಕಾಶಮಿತಿ.** ರಾತ್ರಿಯಲ್ಲಿ ಚೆನ್ನಾಗಿ ಬೆಳಕು ನೀಡುವುದು ಚಂದ್ರನ ಸ್ವರೂಪಲಕ್ಷಣವು, 'ಪ್ರಕೃಷ್ಟಪ್ರಕಾಶಶ್ಚಂದ್ರ' ಎಂಬಂತೆ ಅದಕ್ಕೆ ಯಾವ ವಿಶೇಷ ಅರ್ಥವೂ ಇಲ್ಲ. ಚಂದ್ರನನ್ನು ಪ್ರತಿಪಾದಿಸುವ ಅರ್ಥದಲ್ಲಿ ಮಾತ್ರ ಉತ್ಸುಕನಾಗಿರುವವನು ಕೇಳಿದ ಪ್ರಶ್ನೆಗೆ ಈ ಉತ್ತರವು ಸರಿಯಾಗಿದೆ. ವೈಶಿಷ್ಟ್ಯತೆಯಲ್ಲಿ ಇಚ್ಛೆಯಿಲ್ಲದವರಿಗೆ ಅರ್ಥವು ವಿಷಯಪರವಾಗಿರುವುದು ಸಮಾಧಾನಕರವಾಗಿದೆ. 'ಯಃ ಪ್ರಕೃಷ್ಟಃ ಪ್ರಕಾಶಃ ಸ ಚಂದ್ರ' ಎಂಬ ನಿರ್ದೇಶನವು ಆ ಶಬ್ದಗಳಲ್ಲಿರುವ ಸಾಮಾನಾಧಿಕರಣ್ಯದಿಂದ ಒಂದೇ ಅರ್ಥವನ್ನು ಹೇಳುವ ನಿಯಮದಂತೆ ಪ್ರಕೃಷ್ಟಪ್ರಕಾಶಚಂದ್ರ ಪದವು ಸ್ವರೂಪಮಾತ್ರದಲ್ಲಿ ಪರ್ಯವಸಾನವಾಗಿ ಚಂದ್ರನ ಸ್ವರೂಪಲಕ್ಷಣವು ಅಖಂಡಚಂದ್ರನ ಪ್ರತಿಪಾದಕವಾದ ಅರ್ಥಮಾತ್ರವನ್ನು ಬೋಧಿಸುತ್ತದೆ. ಹಾಗೆಯೇ ತತ್ ಮತ್ತು ತ್ವಂ ಪದಾರ್ಥಗಳ ಸಚ್ಚಿದಾನಂದ ರೂಪತ್ವವು ಅವುಗಳ ಸ್ವರೂಪಲಕ್ಷಣವಾಗಿದೆ. ಸುಳ್ಳು, ಜಡ, ದುಃಖ, ಪರಿಚ್ಛಿನ್ನ ಮುಂತಾದವುಗಳ ವಿರೋಧಿಯಾದ ಸತ್, ಚಿತ್, ಆನಂದ, ಅನಂತ ರೂಪವಾಗಿರುವುದು ತತ್ ತ್ವಂ ಪದಾರ್ಥಗಳ ಸ್ವರೂಪವು ಎಂಬ ಅರ್ಥ. [3-33..34]

एकलक्षणयोरैक्यं वाक्येन प्रतिपाद्यते ।
तस्मादेकप्रकाशत्वं सर्वात्मत्वमिति स्थितम् ।

ಏಕಲಕ್ಷಣಯೋರೈಕ್ಯಂ ವಾಕ್ಯೇನ ಪ್ರತಿಪಾದ್ಯತೇ ॥ 34 ॥
ತಸ್ಮಾದೇಕಪ್ರಕಾಶತ್ವಂ ಸರ್ವಾತ್ಮತ್ವಮಿತಿ ಸ್ಥಿತಮ್ ।

'ತತ್ತ್ವಮಸಿ' ವಾಕ್ಯವು ಜೀವ ಮತ್ತು ಈಶ್ವರನ ಏಕತೆಯನ್ನು ಅವರ ಜ್ಞಾನವೆಂಬ ಏಕಲಕ್ಷಣದ ಸಮಾನತೆಯಿಂದ ಪ್ರತಿಪಾದಿಸುತ್ತದೆ. ಆದುದರಿಂದ ಆ ಒಂದೇ ಬೆಳಕು ಎಲ್ಲರಲ್ಲಿ ಆತ್ಮವಾಗಿ ಸ್ಥಿತವಾಗಿದೆ ಎಂಬುದು ಸಾರ್ವಕಾಲಿಕ ಸತ್ಯವಾಗಿದೆ. [3-34..35]

ವಿವೃತ್ತಿ

ಹಾಗೆ ಕಾರ್ಯ-ಕಾರಣ ಲಕ್ಷಣವನ್ನು ಉಪಾಧಿಗಳು ಬಾಧಿಸುವುದರಿಂದ ವಿರೋಧಾಭಾಸವಾಗಿ, ಸಚ್ಚಿದಾನಂದ ಅನಂತ ಸ್ವಭಾವಮಾತ್ರದಲ್ಲಿ ಲೇಶ ಭೇದವೂ ಇಲ್ಲದಿರುವುದರಿಂದ ಏಕಲಕ್ಷಣದ ಯೋಗವು ಒಂದೇ ಆಗಿರುವ ವಾಕ್ಯಾರ್ಥವನ್ನು ಪ್ರಕಟಿಸುವುದು ಯೋಗ್ಯವೂ, ಯುಕ್ತವೂ ಆಗಿದೆ ಎಂದು ವಾಕ್ಯಾರ್ಥಕ್ಕೆ **ಏಕಲಕ್ಷಣಯೋರಿತಿ.**

ಹೀಗೆ 'ಸಾಕ್ಷಾತ್ತತ್ತ್ವಮಸೀತಿ ವೇದವಚಸಾ' ಎಂಬ ದ್ವಿತೀಯ ಪಾದವನ್ನು ವ್ಯಾಖ್ಯಾನಿಸಲಾಯಿತು. ಇದರಲ್ಲಿ ಹೇಳಿರುವ ವಾಕ್ಯಾರ್ಥದ ತತ್ತ್ವವನ್ನು ವಿಸ್ತರಿಸಲು ಮೂರನೆಯ ಪಾದವನ್ನು ಹೇಳುತ್ತಾ **ತಸ್ಮಾದಿತ್ಯಾದಿನಾ.** ***ಏಕಪ್ರಕಾಶತ್ವಂ*** ಏಕತ್ವವು ಮತ್ತು ಪ್ರಕಾಶತ್ವವು ಎಂದಾಗಬಹುದು ಯಾ ಏಕರೂಪದ ಪ್ರಕಾಶತ್ವವು ಎಂದೂ ಆಗಬಹುದು. ಇದೇ ಸರ್ವಾತ್ಮತ್ವವನ್ನು 'ತದಾತ್ಮಾನಮೇವಾವೈದಹಂ ಬ್ರಹ್ಮಾಸ್ಮೀತಿ ತಸ್ಮಾತ್ತತ್ಸರ್ವಮಭವತ್'

(ಬೃ.ಉ.3–4–10) ಎಂಬ ಶ್ರುತಿಯಲ್ಲಿಯೂ ಹೇಳಲಾಗಿದ್ದು, ಅನೇಕ ರೂಪಗಳ ಆಪತ್ತು ಇಲ್ಲ. ***ಇತಿ ಸ್ಥಿತಮ್*** ನಿಶ್ಚಿತವಾಗಿಯೂ ಎಂಬ ಅರ್ಥದಲ್ಲಿ. [3–34..35]

देवतिर्यङ्मनुष्याणां प्रकाशान्न पृथक्स्थितिः ॥ ३५ ॥
जीवप्रकाशाभिन्नत्वात्सर्वात्मेत्यभिधीयते ।

ದೇವತಿರ್ಯಙ್ಮನುಷ್ಯಾಣಾಂ ಪ್ರಕಾಶಾನ್ನ ಪೃಥಕ್ಸ್ಥಿತಿಃ ॥ 35 ॥
ಜೀವಪ್ರಕಾಶಾಭಿನ್ನತ್ವಾತ್ಸರ್ವಾತ್ಮೇತ್ಯಭಿಧೀಯತೇ ।

ದೇವತೆಗಳು, ಪ್ರಾಣಿಗಳು ಮತ್ತು ಮನುಷ್ಯರಿಗೆ ಈ ಬೆಳಕಿನ ಹೊರತಾಗಿ ಬೇರೆ ಯಾವ ಅಸ್ತಿತ್ವವೂ ಇಲ್ಲ; ಬೆಳಕಿನೊಂದಿಗೆ ಒಂದಾಗಿ ಜೀವನು ಸರ್ವಾತ್ಮನೆಂದು ಕರೆಸಿಕೊಳ್ಳುತ್ತಾನೆ. [3–35..36]

ವಿವೃತ್ತಿ

ದೇವ ಮನುಷ್ಯ ಮುಂತಾದ ಭೇದಗಳು ಕಂಡುಬರುವಾಗ ಅದನ್ನು ಹೇಗೆ ನಿಶ್ಚಯವಾಗಿ ಹೇಳುವುದು ಎಂಬ ಶಂಕೆಗೆ ಹಿಂದೆ ಪ್ರತಿಪಾದಿತ ಅರ್ಥವನ್ನು ಜ್ಞಾಪಿಸುವ **ದೇವೇತಿ.** ಜೀವನಿಗೆ ಪರಮೇಶ್ವರ ಪ್ರಕಾಶರೂಪದಿಂದ ಹೊರತಾದ ಸ್ವರೂಪವಿಲ್ಲದಿರುವುದರಿಂದ ಅವನೇ ಸರ್ವಾತ್ಮನು ಎಂದು ಹೇಳಲು **ಜೀವ ಇತಿ.** [3–35..36]

ಏಕತೆಯ ಜ್ಞಾನದಿಂದ ಮುಕ್ತಿಯೆಡೆಗೆ

एवं प्रकाशरूपत्वपरिज्ञाने दृढीकृते ॥ ३६ ॥
पुनरावृत्तिरहितं कैवल्यं पदमश्नुते ।

ಏವಂ ಪ್ರಕಾಶರೂಪತ್ವಪರಿಜ್ಞಾನೇ ದೃಢೀಕೃತೇ ॥ 36 ॥
ಪುನರಾವೃತ್ತಿರಹಿತಂ ಕೈವಲ್ಯಂ ಪದಮಶ್ನುತೇ ।

ಬೆಳಕಿನೊಂದಿಗೆ ಒಂದಾಗಿರುವ ಭಾವನೆಯು ದೃಢೀಕರಣಗೊಂಡಾಗ, ಪುನರ್ಜನ್ಮವಿಲ್ಲದ, ಮೋಕ್ಷವೆಂದು ಕರೆಯಲ್ಪಡುವ ಕೈವಲ್ಯ ಪ್ರಾಪ್ತಿಯಾಗುತ್ತದೆ. [3–36..37]

ವಿವೃತ್ತಿ

ಹೀಗೆ ಈ ವಾಕ್ಯದ ಅರ್ಥವನ್ನು ವಿಶ್ಲೇಷಿಸಿ, ಅದರಿಂದ ಲಭಿಸುವ ಜ್ಞಾನದ ಫಲವನ್ನು ತಿಳಿಸಲು **ಏವಂ ಪ್ರಕಾಶೇತಿ.** [3–36..37]

सकृत्प्रसक्तमात्रोपि सर्वात्मत्वे यदृच्छया ॥ ३७ ॥
सर्वपापविनिर्मुक्तः शिवलोके महीयते ।

ಸಕೃತ್ಪ್ರಸಕ್ತಮಾತ್ರೋಽಪಿ ಸರ್ವಾತ್ಮತ್ವೇ ಯದೃಚ್ಛಯಾ ॥ 37 ॥
ಸರ್ವಪಾಪವಿನಿರ್ಮುಕ್ತಃ ಶಿವಲೋಕೇ ಮಹೀಯತೇ ।

ಯಾವನು ಅದೃಷ್ಟವಶಾತ್ ಒಮ್ಮೆಯಾದರೂ ತಾನು ಸರ್ವಾತ್ಮನೆಂದು ಭಾವಿಸಿಕೊಳ್ಳುತ್ತಾನೋ, ಅವನು ಸರ್ವ ಪಾಪಗಳಿಂದ ಮುಕ್ತನಾಗಿ, ಶಿವಲೋಕವನ್ನು ಸೇರುತ್ತಾನೆ ಹಾಗೂ ಶಿವನೇ ಆಗುತ್ತಾನೆ. [3–37..38]

ವಿವೃತ್ತಿ

ಹೀಗೆ ಜೀವ–ಬ್ರಹ್ಮನ ಐಕ್ಯತೆಯ ಜ್ಞಾನದ ಮಹಾತ್ಮ್ಯೆಯನ್ನು ಘಂಟಾಘೋಷವಾಗಿ ಹೇಳುತ್ತಾ **ಸಕೃದಿತಿ.** ***ಯದೃಚ್ಛಯಾ*** ಪ್ರಾಚೀನ ಪುಣ್ಯಯೋಗವು ಪ್ರಬಲವಾಗಿ ಬಯಸದೇ ಲಭಿಸಿದ ಭಾಗ್ಯದಂತೆ ಸರ್ವಾತ್ಮತ್ವವನ್ನು ಒಮ್ಮೆಯಾದರೂ ಭಾವಿಸಿದ ವ್ಯಕ್ತಿಯು ಸರ್ವಪಾಪಗಳಿಂದ ಮುಕ್ತನಾಗಿ ***ಶಿವಲೋಕೇ ಮಹೀಯತೇ*** ಶಿವನಂತೆ ಪೂಜ್ಯನಾಗುತ್ತಾನೆ. *ಸರ್ವಭಾವವಿನಿರ್ಮುಕ್ತಃ* ಪಾಠದಂತೆ ಸರ್ವ ವಿಷಯಭಾವನೆಗಳಿಂದ ಮುಕ್ತನಾಗುವನು ಎಂದು ಅರ್ಥವಾಗುವುದು. [3–37..38]

सर्वात्मभावना यस्य परिपक्वा महात्मनः ॥ ३८ ॥
संसारतारकस्साक्षात्स एव परमेश्वरः ।

ಸರ್ವಾತ್ಮಭಾವನಾ ಯಸ್ಯ ಪರಿಪಕ್ವಾ ಮಹಾತ್ಮನಃ ॥ 38 ॥
ಸಂಸಾರತಾರಕಸ್ಸಾಕ್ಷಾತ್ಸ ಏವ ಪರಮೇಶ್ವರಃ ।

ಸರ್ವಾತ್ಮ ಭಾವನೆಯು ಪರಿಪಕ್ವವಾದ ಮಹಾತ್ಮನು ಸಂಸಾರದಿಂದ ಮುಕ್ತಿಯನ್ನು ಕೊಡುವವನಾಗುತ್ತಾನೆ; ಅವನು ಸಾಕ್ಷಾತ್ ಪರಮೇಶ್ವರನೇ ಆಗುತ್ತಾನೆ. [3–38..39]

ವಿವೃತ್ತಿ

ಒಮ್ಮೆಯಾದರೂ ಸರ್ವಾತ್ಮ, ಈಶ್ವರ ಭಾವದಲ್ಲಿರುವವನಿಗೆ ಲಭಿಸುವ ಫಲವನ್ನು ಹೇಳಿ, ಅದರ ದೃಢತರ ಅಭ್ಯಾಸದಿಂದ ಸಂಸಾರಭಾವದ ನಾಶಕ್ಕೆ ಕಾರಣನಾಗುವನು ಎನ್ನಲು **ಸರ್ವಾತ್ಮಭಾವನಾ ಯಸ್ಯೇತಿ.** [3–38..39]

इति श्रीदक्षिणामूर्तिस्त्रोत्रार्थप्रतिपादके ॥ ३९ ॥
प्रबन्धे मानसोल्लासे तृतीयोल्लाससङ्ग्रहः ॥ ४० ॥

ಇತಿ ಶ್ರೀದಕ್ಷಿಣಾಮೂರ್ತಿಸ್ತ್ರೋತ್ರಾರ್ಥಪ್ರತಿಪಾದಕೇ ॥ 39 ॥
ಪ್ರಬಂಧೇ ಮಾನಸೋಲ್ಲಾಸೇ ತೃತೀಯೋಲ್ಲಾಸಸಂಗ್ರಹಃ ॥ 40 ॥

ಶ್ರೀದಕ್ಷಿಣಾಮೂರ್ತಿ ಸ್ತ್ರೋತ್ರದ ಅರ್ಥವನ್ನು ಪ್ರತಿಪಾದಿಸುವ ಮಾನಸೋಲ್ಲಾಸವೆಂಬ ಪ್ರಬಂಧದ ತೃತೀಯ ಉಲ್ಲಾಸದ ವಿವರಣೆಯು ಇಲ್ಲಿಗೆ ಮುಗಿಯಿತು. [3–39..40]

ವಿವೃತ್ತಿ

ಮೂರನೆಯ ಶ್ಲೋಕದ ವ್ಯಾಖ್ಯೆಯನ್ನು ಉಪಸಂಹರಿಸುವ **ಇತೀತಿ.** [3–39..40]

ಇತಿ ಶ್ರೀಮಾನಸೋಲ್ಲಾಸವೃತ್ತಾಂತೇ ತೃತೀಯೋಲ್ಲಾಸಃ ಸಮಾಪ್ತಃ ।

ಚತುರ್ಥೋಲ್ಲಾಸಃ

ಆತ್ಮ – ಒಂದು ಅಸ್ತಿತ್ವ ಮತ್ತು ಪ್ರಕಾಶ

ವೇದ ಪ್ರತಿಪಾದನೆಯಾದ ಅಸ್ತಿತ್ವ ಮತ್ತು ಪ್ರಕಾಶದ ವಿರೋಧ

ಇಲ್ಲಿಯವರೆಗೆ ವೇದಗಳು ಪ್ರತಿಪಾದಿಸಿದ ಜೀವ ಮತ್ತು ಬ್ರಹ್ಮರ ಸ್ವರೂಪವನ್ನು, ಪ್ರತ್ಯಕ್ಷ ಮತ್ತಿತರ ಸರಿಯಾದ ವಿಚಾರಗಳ ವಾದಗಳು ಪ್ರಮಾಣೀಕರಿಸುವುದಿಲ್ಲ ಎಂದು ಕೆಲವರು ಆಕ್ಷೇಪಿಸುತ್ತಾರೆ. ಇದಕ್ಕೆ ಉತ್ತರವಾಗಿ ಜೀವ ಮತ್ತು ಬ್ರಹ್ಮರ ಸ್ವರೂಪ ಜ್ಞಾನವನ್ನು ಇನ್ನಷ್ಟು ಬಲವಾಗಿ, ಈ ಅಧ್ಯಾಯ ಮತ್ತು ಮುಂದಿನ ಎರಡು ಅಧ್ಯಾಯಗಳಲ್ಲಿ ಮಂಡಿಸಲಾಗಿದೆ.

स्वतस्सन्तः प्रकाशन्ते भावा घटपटादयः
नेश्वरस्य समावेशादित्यस्योत्तरमुच्यते ॥ १ ॥

ಸ್ವತಸ್ಸಂತಃ ಪ್ರಕಾಶಂತೇ ಭಾವಾ ಘಟಪಟಾದಯ: ।
ನೇಶ್ವರಸ್ಯ ಸಮಾವೇಶಾದಿತ್ಯಸ್ಯೋತ್ತರಮುಚ್ಯತೇ ॥ 1 ॥

‘ಮಡಕೆ, ವಸ್ತ್ರ ಇತ್ಯಾದಿ ವಸ್ತುಗಳು ಸ್ವಪ್ರಕಾಶದಿಂದ ಬೆಳಗುತ್ತವೆ, ಈಶ್ವರನು ಅವುಗಳಲ್ಲಿ ಇದ್ದಾನೆ ಎಂಬ ಕಾರಣಕ್ಕೆ ಅಲ್ಲ’ ಎಂದು ಹೇಳಿದರೆ, ಅದಕ್ಕೆ ಉತ್ತರವಾಗಿ (ನಾಲ್ಕನೆಯ ಚರಣವನ್ನು) ಹೇಳುತ್ತಾರೆ. [4–1]

ವಿವೃತ್ತಿ

ಮೂರನೆಯ ಶ್ಲೋಕದಲ್ಲಿ ತತ್ ತ್ವಂ ಪದಾರ್ಥಗಳ ವಿಶ್ಲೇಷಣೆಯಾಗಿ, ಅವುಗಳ ಏಕತೆಯು ಆ ವಾಕ್ಯದ ಅರ್ಥವಾಗಿದೆ ಎಂಬುದು ಪ್ರತಿಪಾದಿತವಾಯಿತು. ಹಾಗೆಯೇ ಸರ್ವ ವೇದಾಂತಗಳಲ್ಲಿರುವ ಸಮನ್ವಯತೆಯನ್ನು ಮೊದಲ ಶಾಸ್ತ್ರಾರ್ಥದಲ್ಲಿ ದರ್ಶಿಸಲಾಯಿತು. ಹೇಳಿರುವ ಸಮನ್ವಯಾರ್ಥಕ್ಕೆ ಬ್ರಹ್ಮ–ಆತ್ಮಗಳ ಅದ್ವೈತ ತತ್ತ್ವವು ವಿರೋಧವಾಗುವುದೋ ಎಂಬ ಆಶಂಕೆಗೆ ಪ್ರತ್ಯಕ್ಷ ಮೊದಲಾದ ಪ್ರಮಾಣಗಳಿಂದ ಭಾಸವಾಗುವ ನಿಬಂಧನೆಯು ಅಕ್ಷೀಣವಾಗಿರದೆ, ಅವುಗಳಲ್ಲಿರುವ ಸಮನ್ವಯಾರ್ಥವನ್ನು ದೃಢೀಕರಿಸುತ್ತವೆ ಎಂದು ಮುಂದಿನ ಮೂರು ಶ್ಲೋಕಗಳಲ್ಲಿ ಮಂಡನೆಮಾಡಿದೆ. ಹಾಗೆ ‘ಆತ್ಮಸತ್ತೈವ ಸತ್ತೇಷಾಂ ಭಾವನಾಂ ನ ತತೋಧಿಕಾ । ತಥೈವ ಸ್ಫುರಣಂ ಚೈಷಾಂ ನಾತ್ಮಸ್ಫುರಣತೋಧಿಕಮ್ ॥’ (ಮಾ.ಉ.3–3) ಎಂದು ಹೇಳಿದೆ. ಹಿಂದೆ ತಿಳಿಸಿರುವ ಸ್ವತಃ ಸತ್ತಾಸ್ಫುರಣೆ ರಹಿತವಾಗಿರುವುದು ಅನುಭವಕ್ಕೆ ವಿರೋಧವಾಗಿದೆ, ಮಡಕೆಯಲ್ಲಿ ಮಡಕೆಯ ಸ್ಫುರಣೆ ಇದೆ ಎಂಬುದು ಅನುಭವಕ್ಕೆ ಬಾಧೆಯುಂಟಾದಂತೆ ಎಂಬ ಪ್ರಥಮ ಶಂಕೆಯನ್ನು ತೀಳಿಸುವ **ಸ್ವತಃ ಸಂತ ಇತಿ.** ಮಡಕೆ, ವಸ್ತ್ರ ಮೊದಲಾದವುಗಳು ಈಶ್ವರನ ಸಮಾವೇಶವಿಲ್ಲದೆ ಸ್ವತಃ ಪ್ರಕಾಶಿಸುತ್ತವೆ, ಅವುಗಳಲ್ಲಿ ಅವನ ದರ್ಶನವಾಗುವುದಿಲ್ಲ, ಅವನ ಕಲ್ಪನೆಗೆ ಪ್ರಮಾಣವೂ ಇಲ್ಲ ಎಂಬ ಆಕ್ಷೇಪಕ್ಕೆ ಉತ್ತರವಾಗಿ ಮುಂದಿನ ಶ್ಲೋಕವನ್ನು ತಿಳಿಸುವ **ಅಸ್ಯೋತ್ತರಮುಚ್ಯತ ಇತಿ.** [4–1]

ಒಂದೇ ಒಂದು ಸತ್ ಮತ್ತು ಪ್ರಕಾಶ ಇದೆ ಹಾಗೂ ಅದು ಆತ್ಮವಾಗಿದೆ ಎಂಬ ವೇದ ವಿಚಾರವನ್ನು (ಅಧ್ಯಾಯ 3–3), ಅದು ನಮ್ಮ ಪ್ರತ್ಯಕ್ಷ ಅನುಭವಕ್ಕೆ ವಿರೋಧವಾಗಿದೆಯೆಂದು ಆಕ್ಷೇಪಿಸುತ್ತಾರೆ. ಒಂದು ಮಡಕೆಯ ಅಸ್ತಿತ್ವ ಮತ್ತು ಕಂಡುಬರುವಿಕೆಯು, ವಿರೋಧವಿಲ್ಲದ ಅನುಭವ ಜನ್ಯವಾಗಿದ್ದು ಈಶ್ವರನು ಅದನ್ನು ಪ್ರವೇಶಿಸಿದ್ದಾನೆ ಮತ್ತು ಅದನ್ನು ಬೆಳಗುತ್ತಾನೆ ಎಂಬುದಕ್ಕೆ ಯಾವುದೇ ಪ್ರಮಾಣಗಳಿಲ್ಲ ಎಂಬುದಾಗಿ ಕೆಲವರು ಹೇಳುತ್ತಾರೆ.

ಸ್ತೋತ್ರದ ನಾಲ್ಕನೆಯ ಚರಣ

नानाच्छिद्रघटोदरस्थितमहादीपप्रभाभास्वरं
ज्ञानं यस्य तु चक्षुरादिकरणद्वारा बहिस्स्पन्दते ।
जानामीति तमेव भान्तमनुभात्येतत्समस्तं जगत्
तस्मै श्रीगुरुमूर्तये नम इदं श्रीदक्षिणामूर्तये ॥ ४ ॥

ನಾನಾಚ್ಛಿದ್ರಘಟೋದರಸ್ಥಿತಮಹಾದೀಪಪ್ರಭಾಭಾಸ್ವರಂ
ಜ್ಞಾನಂ ಯಸ್ಯ ತು ಚಕ್ಷುರಾದಿಕರಣದ್ವಾರಾ ಬಹಿಸ್ಸ್ಪಂದತೇ ।
ಜಾನಾಮೀತಿ ತಮೇವ ಭಾಂತಮನುಭಾತ್ಯೇತತ್ಸಮಸ್ತಂ ಜಗತ್
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ 4 ॥

ಒಂದು ಬೃಹತ್ತಾದ ದೀಪವು ಬಹುರಂಧ್ರಗಳಿರುವ ಪಾತ್ರೆಯಲ್ಲಿ ಬೆಳಗಿದಾಗ ಬೆಳಕು ಅದರ ರಂಧ್ರಗಳಿಂದ ಹೊರಬಂದಂತೆ, ಅವನ ಜ್ಞಾನವು ಕಣ್ಣಿನಂತಹ ಇಂದ್ರಿಯಗಳಿಂದ ಹೊರಬಂದು ಜಗತ್ತನ್ನು ಬೆಳಗುವಂತೆ ಭಾಸವಾದಾಗ 'ನಾನು ತಿಳಿದಿದ್ದೇನೆ' ಎಂಬ ಜ್ಞಾನದಲ್ಲಿ ಹೊಳೆಯುವ ಅವನಿಗೆ, ಶ್ರೀ ಗುರುರೂಪದಲ್ಲಿರುವ ಶ್ರೀ ದಕ್ಷಿಣಾಮೂರ್ತಿ ಸ್ವರೂಪನಿಗೆ, ಶಿವನಿಗೆ, ನನ್ನ ಈ ನಮಸ್ಕಾರಗಳು. {4}

ವಿವೃತ್ತಿ

ನಾನಾಛಿದ್ರಃ ಘಟ ಅನೇಕ ಛಿದ್ರಗಳಿರುವ ಮಡಕೆಯ ***ಉದರ ಸ್ಥಿತ*** ಮಧ್ಯದಲ್ಲಿ ಇರುವ ***ಮಹಾದೀಪ*** ಒಂದು ದೊಡ್ಡದಾದ ದೀಪದ ***ಪ್ರಭಾವತ್ ಭಾಸ್ವರಂ*** ಅನನ್ಯ ಸ್ವತಂತ್ರವಾಗಿ ಬೆಳಗುತ್ತಿರುವ ಪ್ರಕಾಶಸ್ವರೂಪದಂತಿರುವ ಚಿದಾತ್ಮನು ಅನೇಕ ಛಿದ್ರಗಳಿರುವ ದೇಹದಲ್ಲಿ ಜ್ಞಾನಸ್ವರೂಪನಾಗಿ ***ಚಕ್ಷುರಾದಿ ಕರಣದ್ವಾರಾ*** ಆಯಾಯ ಇಂದ್ರಿಯಗಳೆಂಬ ರಂಧ್ರಗಳ ಮಾರ್ಗವಾಗಿ ***ಬಹಿಃ ಸ್ಪಂದತೇ*** ವಿಷಯ ರೂಪಗಳಲ್ಲಿ ಚಲಿಸುತ್ತಾನೆ. ಹೇಗೆ ಮಡಕೆಯ ರಂಧ್ರಗಳಿಂದ ಹರಡಿಕೊಂಡಿರುವ ದೀಪಪ್ರಭೆಯು ಅದು ಬೆಳಗುವ ವಿಷಯಗಳನ್ನು ಗಳಿಸಿಕೊಂಡು ಅದರಲ್ಲಿರುವ ಕತ್ತಲೆಯನ್ನು ದೂರಮಾಡಿ ಅದರ ಆಕಾರ, ಸತ್ಯತೆ ಮುಂತಾದವುಗಳನ್ನು ಪ್ರಕಾಶಿಸುವುದು. ಹಾಗೆಯೇ ದೇಹರಂಧ್ರಗಳಲ್ಲಿರುವ ಇಂದ್ರಿಯಗಳ ಮೂಲಕ ಪ್ರಸರಣವಾಗುವ ಮನೋವೃತ್ತಿಯು ಭಾಸಮಾಡುವ ಅದರ ಸ್ವರೂಪವು ಚಿದಾತ್ಮಸ್ವರೂಪವೇ ಆಗಿದೆ ಎಂಬ ಜ್ಞಾನದ ಸ್ಫುರಣೆಯು ಸ್ವಭಾವದಿಂದ ಆಯಾಯ ಅರ್ಥಗಳನ್ನು ಹೊಂದಿರುವ ಆಯಾಯ ಆಕಾರಗಳ ವಿಷಯಗಳಲ್ಲಿರುವ ಅಜ್ಞಾತತೆಯನ್ನು ದರ್ಶಿಸುವುದು ಎಂಬುದು ವಿಷಯಪ್ರಕಾಶ ಶಬ್ದವಾಚ್ಯವಾಗಿದೆ ಎಂಬ ಅರ್ಥವು. ಇಂತಹ ಜ್ಞಾನವು ಒಂದೇ ಪ್ರಕಾರವಾಗಿ ಅದರಿಂದ ಹೊರಸ್ಪಂದಿಸುತ್ತದೆ ಎಂಬುದು ಸಂಬಂಧವು. ಹೇಳಿರುವ ಅರ್ಥವನ್ನು ಶ್ರುತಿಯ ಮೂಲಕ ದೃಢೀಕರಿಸುವ **ಜಾನಾಮೀತಿ.** ನಾನು ಇದನ್ನು ತಿಳಿದಿದ್ದೇನೆ ಎಂಬ ಸ್ವಗತವು ನಿರಪೇಕ್ಷ ಪ್ರಕಾಶರೂಪವಾಗಿ ಭಾಸವಾಗುವ

ವಿಷಯವು ಅದರೊಳಗಿರುವ ತಾನೇತಾನಾಗಿ ಪ್ರಕಾಶಮಾನವಾದ ತತ್ತ್ವದಿಂದಾಗಿ ಭಾಸವಾಗುತ್ತಿದೆಯೆಂಬ ಅರಿವಿನ ಲಕ್ಷಣವಾಗಿದೆ. ಅದೇರೀತಿ ಈ ಸಮಸ್ತ ಜಗತ್ತು ಕೂಡ ಸ್ವತಃ ಬೆಳಗದೆ ಒಳಗಿರುವ ಆತ್ಮತತ್ತ್ವದಿಂದಾಗಿ ಬೆಳಗುತ್ತಿದೆ ಎಂದು ಯೋಜಿಸಿಕೊಳ್ಳುವುದು. ಹಾಗೆಂದು ಶ್ರುತಿಯು 'ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ ನೇಮಾ ವಿದ್ಯುತೋ ಭಾಂತಿ ಕುತೋಯಮಗ್ನಿಃ' (ಮು.ಉ.2–2–10) ಎಂದು ಸರ್ವಪ್ರಕಾರದ ಪ್ರಕಾಶಗಳ ವಿಷಯವಾಗಿ ಹೇಳುತ್ತದೆ. ಎಲ್ಲದರ ಪ್ರಕಾಶತ್ವವು ಪತ್ಯೇಕನಾದ ಬ್ರಹ್ಮನನ್ನು ಉಪಪಾದಿಸಿ 'ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ' (ಮು.ಉ.2–2–10) ಎಂಬಂತೆ ಕಂಡುಬರುವ ಆತ್ಮಪ್ರಕಾಶದ ಬೆಳಕಿನಲ್ಲಿಯೇ ಎಲ್ಲಾ ಜಗತ್ತಿನ ಅವಭಾಸವಾಗುವುದು ಎಂದು ನಿರ್ಧರಿಸಬಹುದು. ಜಗತ್ತಿನಲ್ಲಿರುವ ವಸ್ತುಗಳೆಲ್ಲವೂ ಅಗ್ನಿಯಿಂದ ದಹಿಸಲ್ಪಡುವುದು ಅವುಗಳಲ್ಲಿರುವ ದಾಹಕತ್ವದಿಂದಾಗಿ ಎಂಬ ಅರಿವಾಗುವಂತೆ ಎಲ್ಲ ವಿಷಯಗಳೂ ಅವುಗಳಲ್ಲಿರುವ ಆತ್ಮತತ್ತ್ವದಿಂದ ಬೆಳಗುತ್ತವೆ, ಅದರ ಹೊರತಾಗಿ ಅಲ್ಲ ಎಂಬ ಅರಿವಾಗುವುದು ಎಂದು ತಾತ್ಪರ್ಯವು. {4}

ನಾಲ್ಕನೆಯ ಚರಣದ ಅರ್ಥವನ್ನು ಈ ರೀತಿಯಲ್ಲಿ ವಿವರಿಸಬಹುದು:

ಬಾಹ್ಯವಸ್ತುಗಳಿಗೆ ಸ್ವಂತ ಅಸ್ತಿತ್ವ ಮತ್ತು ಪ್ರಕಾಶ ಇಲ್ಲ

अस्यायं भावः –
अहमित्यनुसन्धाता जानामीति न चेत्स्फुरेत् ।
कस्य को वा प्रकाशेत जगच्च स्यात्सुषुप्तवत् ॥ २ ॥

ಅಸ್ಯಾಯಂ ಭಾವಃ –
ಅಹಮಿತ್ಯನುಸಂಧಾತಾ ಜಾನಾಮೀತಿ ನ ಚೇತ್ಸ್ಫುರೇತ್ ।
ಕಸ್ಯ ಕೋ ವಾ ಪ್ರಕಾಶೇತ ಜಗಚ್ಚ ಸ್ಯಾತ್ಸುಷುಪ್ತವತ್ ॥ 2 ॥

'ನಾನು ತಿಳಿದಿದ್ದೇನೆ' ಎಂಬ ವಸ್ತುಗತ ಜ್ಞಾನದಲ್ಲಿ, ತನ್ನಲ್ಲಿ 'ನಾನು' ಎಂಬ ಭಾವನೆ ಜನಿಸಿಕೊಳ್ಳದಿದ್ದರೆ, ಯಾರನ್ನು ಬೆಳಗುವುದು ಯಾ ಬೆಳಗಲು ಏನಿದೆ? ಮತ್ತು ಸಂಪೂರ್ಣ ವಿಶ್ವವು ಗಾಢನಿದ್ರಾವಸ್ಥೆಯಲ್ಲಿ ಇರುವಂತಿರುತ್ತದೆ. [4–2]

ವಿವೃತ್ತಿ

ಶ್ಲೋಕದಲ್ಲಿರುವ *ಜಾನಾಮೀತಿ ತಮೇವ ಭಾಂತಮ್* ಎಂಬ ಮೂರನೆಯ ಪಾದದ ಭಾವಾರ್ಥವನ್ನು ವರ್ಣಿಸುತ್ತಾ, ಈಶನ ಸಂಸರ್ಗವಿಲ್ಲದೆ ವಿಷಯದ ಸತ್ತಾಸ್ಫುರಣೆಯಾಗುವುದನ್ನು ಅಂಗೀಕರಿಸಲು ಅಸಾಧ್ಯವಾಗಿ ಈಶನ ಸ್ವಪ್ರಕಾಶ ಸತ್‌ರೂಪತೆಯನ್ನು ಸಾಧಿಸುವ **ಅಹಮಿತ್ಯನುಸಂಧಾತೇತಿ. *ಜಾನಾಮೀತಿ ಅನುಸಂಧಾತಾ ಅಹಮಿತಿ ನ ಚೇತ್ ಸ್ಫುರೇತ್*** ನಾನು ತಿಳಿದಿದ್ದೇನೆ ಎಂಬ ಅರಿವಿನಲ್ಲಿ ನಾನು ಎಂಬುದು ಸ್ಫುರಿಸದಿದ್ದರೆ ಎಂಬ ಅರ್ಥದಲ್ಲಿ. ಅಥವಾ ತಿಳಿದಿರುವವನು ನಾನು ಎಂಬ ಅವಭಾಸದಲ್ಲಿ ನಾನು ಎಂಬ ಅನುಸಂಧಾನವು ಸ್ಫುರಿಸದಿದ್ದರೆ ಎಂದೂ ಆಗಬಹುದು. ಉತ್ತರಾರ್ಧವನ್ನು ಜಗತ್ತಿಗೆ ಅನ್ವಯವಾಗುವಂತೆ ಪ್ರಯೋಗಿಸಲಾಗಿದೆ. ವಿಷಯವು ಸ್ವತಃ ಪ್ರಕಾಶಿಸುವುದಾದರೆ ಆಗ ನಾನು ತಿಳಿದಿದ್ದೇನೆ ಎಂಬ ಜ್ಞಾನದ ಆಶ್ರಯದಲ್ಲಿ ವಿಷಯಾನುಸಂಧಾನದ ಸ್ಫುರಣೆಯು ಆಗುವುದಿಲ್ಲ; ಮುಚ್ಚಿರುವ ಕಲ್ಲಿನ ಗುಹೆಯಲ್ಲಿ ದೀಪಹಚ್ಚಿದ್ದರೂ ಅಲ್ಲಿರುವ ವಿಷಯಗಳು ಯಾರಿಗೂ

ವಿದಿತವಾಗದಿರುವಂತೆ. ಹಾಗೆಯೇ ಸುಷುಪ್ತಿಯಲ್ಲಿರುವವನಿಗೆ ಪ್ರಕಾಶಿಸುತ್ತಿರುವ ವಿಶ್ವದ ಸ್ಫುರಣೆಯು ಆಗದಿರುವುದರಿಂದ ಅದರೊಡನೆ ವ್ಯವಹರಿಸುವ ಪ್ರಸಂಗವೇ ಬರುವುದಿಲ್ಲ. ಹಾಗಾಗಿ ಜಗತ್ತು ತಾನು ಬೆಳಗಲು ತನಗೆ ಬಾಹ್ಯವಾಗಿರುವ ಪ್ರಕಾಶದ ಸ್ಫುರಣೆಯನ್ನು ಅವಲಂಬಿತವಾಗಿದೆ. ಅದು ಅಧೀನವಾಗಿರುವ ಪ್ರಕಾಶವು ನಿತ್ಯಪ್ರಕಾಶರೂಪವಾಗಿರುವುದರಿಂದ ಅದು ಅಪ್ರಕಾಶಿತವಾಗಿವ ಅವಸ್ಥೆಯು ಉದ್ಭವಿಸುವುದೇ ಇಲ್ಲ. [4–2]

ಒಂದು ವಸ್ತುವು ತನ್ನನ್ನು ತಾನು ಬೆಳಗುತ್ತಿದ್ದರೆ, 'ನಾನು ಅದನ್ನು ತಿಳಿದಿದ್ದೇನೆ' ಎಂದು ಹೇಳುವವನ ಅಗತ್ಯವಿಲ್ಲ. ನಾಲ್ಕು ಬದಿಗಳಿಂದ ಮುಚ್ಚಲ್ಪಟ್ಟಿರುವ ಗುಹೆಯಲ್ಲಿ ದೀಪವನ್ನು ಹಚ್ಚಿಟ್ಟರೂ, ಯಾವುದೇ ವಸ್ತುಗಳ ಜ್ಞಾನವು ಹೊರಗಿರುವವರಿಗೆ ಆಗುವುದಿಲ್ಲ. ಆಗ ವ್ಯಕ್ತಿಯು ಸುಷುಪ್ತಿಯಲ್ಲಿದ್ದಂತೆ ವಿಶ್ವದ ಕುರಿತು ಸುಪ್ತನಾಗಿದ್ದು, ನಿದ್ರಾವಸ್ಥೆಯಲ್ಲಿದ್ದಂತೆ ಜಡನಾಗಿಯೂ, ನಿರ್ಲಿಪ್ತನಾಗಿಯೂ ಇರುತ್ತಾನೆ. ಆದುದರಿಂದ ವಿಶ್ವವು (ಅದರಲ್ಲಿರುವ ವಸ್ತುಗಳು) ತನ್ನನ್ನು ಬೆಳಗಲು ಬಾಹ್ಯವಾಗಿರುವ ಒಂದು ಪ್ರಕಾಶವನ್ನು ಅವಲಂಬಿಸಿದೆ; ಆ ಪ್ರಕಾಶವು ಸ್ವತಂತ್ರವಾಗಿಯೂ, ನಾಶವಿಲ್ಲದ್ದಾಗಿಯೂ, ತನ್ನನ್ನು ಪ್ರಕಟಿಸಲು ಇನ್ನೊಂದರ ಮೇಲೆ ಅವಲಂಬನೆಯಿಲ್ಲದ್ದಾಗಿಯೂ ಇರಬೇಕು.

ವಿಶ್ವವು ತನ್ನನ್ನು ಬೆಳಗಲು ತನ್ನ ಹೊರತಾದ ಬಾಹ್ಯ ಪ್ರಕಾಶವನ್ನು ಅವಲಂಬಿಸಿರುವಂತೆ, ಅದು ತನ್ನ ಅಸ್ತಿತ್ವಕ್ಕೋಸ್ಕರ ತನ್ನ ಹೊರತಾದ ಇನ್ನೊಂದನ್ನು ಅವಲಂಬಿಸಿದೆ. ಹಾಗಾಗಿ ವಾರ್ತಿಕಕಾರರು ಹೇಳುತ್ತಾರೆ:

> प्रागूर्ध्वं चासतां सत्यं वर्तमानोपि न स्वतः ।
> तस्मादीशो स्थितं सत्त्वं प्रागूर्ध्वत्वविवर्जिते ॥ ३ ॥

> ಪ್ರಾಗೂರ್ಧ್ವಂ ಚಾಸತಾಂ ಸತ್ತ್ವಂ ವರ್ತಮಾನೋಽಪಿ ನ ಸ್ವತಃ ।
> ತಸ್ಮಾದೀಶೋ ಸ್ಥಿತಂ ಸತ್ತ್ವಂ ಪ್ರಾಗೂರ್ಧ್ವತ್ವವಿವರ್ಜಿತೇ ॥ 3 ॥

ಹಿಂದೆ ಇಲ್ಲದಿರುವ, ಭವಿಷ್ಯದಲ್ಲಿ ಇರಲು ಸಾಧ್ಯವಿರದ ವಸ್ತುಗಳಿಗೆ ವರ್ತಮಾನ ಸಮಯದಲ್ಲಿಯೂ ಸ್ವತಂತ್ರ ಅಸ್ತಿತ್ವವಿಲ್ಲ; ಹಾಗಾಗಿ ಅವುಗಳು ತಮ್ಮ ಅಸ್ತಿತ್ವಕ್ಕೆಂದು, ಪೂರ್ವೋತ್ತರಗಳಿಲ್ಲದ ಈಶ್ವರನಲ್ಲಿ ಆಶ್ರಯವನ್ನು ಪಡೆಯುತ್ತವೆ. [4–3]

ವಿವೃತ್ತಿ

ವಿಷಯಗಳ ಪ್ರಕಾಶದಂತೆ ಸತ್, ಅಸ್ತಿತ್ವವು ಕೂಡ ಪರಾಧೀನವಾಗಿದೆ ಎಂದು ಯುಕ್ತಿಯಿಂದ ತಿಳಿಸುವುದು. ಅಥವಾ ವಿಷಯಗಳ ಅನ್ಯಾಧೀನ ಪ್ರಕಾಶತ್ವದಂತೆ ವಿಷಯತ್ವವೂ ಅನ್ಯಾಧೀನ ಸತ್‌ನನ್ನು ಅವಲಂಬಿಸಿದೆ ಎಂದು ಆಪಾದಿಸುವ **ಪ್ರಾಗೂರ್ಧ್ವಂ ಇತಿ.** ಹೇಗೊ ಉಪಲಬ್ಧವಾದರೂ ವಿಷಯಗಳಿಗೆ ಸ್ವತಃ ಅಸ್ತಿತ್ವವಿಲ್ಲ, ಕಪ್ಪೆಚಿಪ್ಪಿನಲ್ಲಿರುವ ಬೆಳ್ಳಿಯಂತೆ ಎಂಬ ಅರ್ಥ. ಹಾಗೆಯೇ ಪ್ರಕಾಶದಂತೆ ಸತ್ ಕೂಡಾ ಅನ್ಯಾಧೀನವಾಗಿರುವ ಭಾವವನ್ನು ಸಿದ್ಧಮಾಡಲು **ತಸ್ಮಾದಿತಿ.** ಅನ್ಯಾಧೀನವಾಗಿರುವ ಪ್ರಕಾಶತ್ವದಂತೆ ಅನ್ಯಾಧೀನವಾಗಿರುವ ಅಸ್ತಿತ್ವದ ವಸ್ತುರೂಪಗಳು ಇವೆ ಎಂಬ ವಿಷಯವನ್ನು ಮಂಡಿಸಲಾಗಿದೆ. ಈಶ್ವರನಿಗೆ ಅನಸ್ತಿತ್ವ, ಅಪ್ರಕಾಶತ್ವಗಳಿರುವ ಶಂಕೆಯು ಇಲ್ಲದಿರುವುದರಿಂದ ಆಗಮಗಳು ನಿರೂಪಿಸಿರುವ ಸರ್ವ ಭಾವಗಳಲ್ಲಿ ಅವನು ಸದಾ ಅಸ್ತಿತ್ವ ಇರುವವನಾಗಿ ಸರ್ವ ಅವಸ್ಥೆಗಳ ಸಾಕ್ಷಿಯಾದ ಪ್ರತ್ಯಗಾತ್ಮರೂಪದಿಂದ ಸದಾ ಪ್ರಕಾಶಮಾನನಾಗಿರುವನು. [4–3]

ಒಂದು ಹಗ್ಗದಲ್ಲಿ ಹಾವನ್ನು ಕಂಡಂತೆ (ಅದು ಸಾಂದರ್ಭಿಕವಾಗಿ ಮಾತ್ರ ಅನುಭವಕ್ಕೆ ಬರುವುದು), ಬಾಹ್ಯ ವಸ್ತುಗಳಿಗೆ ತನ್ನದೇ ಆದ ಅಸ್ತಿತ್ವವಿರುವುದಿಲ್ಲ. ಅವುಗಳಿಗೆ ಸ್ವತಂತ್ರ ಅಸ್ತಿತ್ವವಿದ್ದಿದ್ದರೆ, ಅವುಗಳು ಆತ್ಮದಂತೆ ಪ್ರಕಟವಾಗಲು ಸಾಧ್ಯವಿತ್ತು ಹಾಗೂ ಈಗ ಆಗಿರುವಂತೆ ಅವು ವ್ಯಕ್ತಿಯ ಜ್ಞಾನದ ವಿಷಯವಾಗುತ್ತಿರಲಿಲ್ಲ.

ಹುಟ್ಟುವಾಗ ಎಲ್ಲವನ್ನೂ ಪಡೆದು, ಅಂತ್ಯದಲ್ಲಿ ಎಲ್ಲವನ್ನೂ ತೊರೆಯುವ ಜೀವಿಯ ಎಲ್ಲಾ ಸ್ಥಿತಿಗಳನ್ನು ತನ್ನದೇ ಆದ ಸ್ವತಂತ್ರವಾದ ಬೆಳಕಿನಲ್ಲಿ ವೀಕ್ಷಿಸುವ ಈಶ್ವರನ ಅಸ್ತಿತ್ವ ಮತ್ತು ಜ್ಞಾನಕ್ಕೆ ನಿಶ್ಚಯವಾಗಿಯೂ ನಾಶವಿಲ್ಲ. ಅವನು ಬೆಳಗಲಿಲ್ಲ, ಹೊಳೆಯಲಿಲ್ಲ ಎಂದು ಹಿಂದೆಯೂ ಆಗಲಿಲ್ಲ ಹಾಗೂ ಅವನು ಹೊಳೆಯುವುದಿಲ್ಲ, ಬೆಳಗುವುದಿಲ್ಲ ಎಂಬುದು ಮುಂದೆಯೂ ಸಾಧ್ಯವಿಲ್ಲ.

स्वयमेव प्रकाशेरन् जडा यदि विनेश्वरम् ।
सर्वं सर्वस्यस् भासेत नावभासेत किञ्चन ॥ ४ ॥

ಸ್ವಯಮೇವ ಪ್ರಕಾಶೇರನ್ ಜಡಾ ಯದಿ ವಿನೇಶ್ವರಮ್ ।
ಸರ್ವಂ ಸರ್ವಸ್ಯ ಭಾಸೇತ ನಾವಭಾಸೇತ ಕಿಂಚನ ॥ 4 ॥

ಜಡವಸ್ತುಗಳು ಈಶ್ವರನಿಂದ ಸ್ವತಂತ್ರವಾಗಿ ತಮ್ಮನ್ನು ತಾವು ಬೆಳಗಲು ಸಾಧ್ಯವಿದ್ದಿದ್ದರೆ, ಅವುಗಳು ಪ್ರತಿಯೊಬ್ಬರ ಜ್ಞಾನದಲ್ಲಿ ಕಂಡುಬರಬೇಕು ಇಲ್ಲದಿದ್ದರೆ ಯಾರೊಬ್ಬರ ಜ್ಞಾನದಲ್ಲಿಯೂ ಕಂಡುಬರಬಾರದು. [4–4]

ವಿವೃತ್ತಿ

ವಿಷಯವನ್ನು ಅನ್ಯಥಾಜ್ಞಾನವಾಗಿ, ಬೇರೆಯೇ ರೀತಿಯಲ್ಲಿ ಅರ್ಥೈಸುವಂತೆ ಈಶ್ವರನ ಅಧೀನವಾಗಿರುವ ಸತ್ತಾಸ್ಫುರಣೆಯನ್ನು ವಿಷಯದ ಸ್ಫುರಣೆ ಎಂದು ಹೇಳಲಾಗಿದೆ. ಅದನ್ನು ಹಾಗೆಯೇ ಸ್ಫುಟಗೊಳಿಸುತ್ತಾ **ಸ್ವಯಮೇವೇತಿ.** ***ವಿನೇಶ್ವರಮ್*** ಸ್ವತಃ ಸಿದ್ಧವಾದ ಪ್ರಕಾಶದಿಂದ ತನ್ನನ್ನು ಗ್ರಹಿಸುವ ಅಪೇಕ್ಷೆಯಿಲ್ಲದಿರುವಿಕೆ ಎಂಬ ಅರ್ಥ. [4–4]

ಈಶ್ವರನಿಂದ ಸ್ವತಂತ್ರವಾಗಿ: ಆತ್ಮನ ಪ್ರಚೋದನೆಯಿಲ್ಲದೆ. ಬಾಹ್ಯ ವಸ್ತುಗಳು ಸ್ವಪ್ರಕಾಶದಿಂದ ಹೊಳೆಯುತ್ತಿದ್ದರೆ, ಅವುಗಳು ಎಲ್ಲಾ ವ್ಯಕ್ತಿಗಳಿಗೂ ಸಮಾನವಾಗಿ ಜ್ಞಾನದ ವಿಷಯಗಳಾಗಿ ಕಾಣಬೇಕಿತ್ತು. ಅವುಗಳಿಗೆ ಜ್ಞಾನದ ವಿಷಯಗಳಾಗುವ ಸ್ವಭಾವವಿಲ್ಲದಿದ್ದರೆ, ಯಾವನೂ ಅವುಗಳನ್ನು ಅರಿಯುತ್ತಿರಲಿಲ್ಲ. ಪ್ರತೀ ವ್ಯಕ್ತಿಯು ಹೀಗೆ ಬಾಹ್ಯ ವಸ್ತುಗಳ ಸಮಾನ ಜ್ಞಾನವನ್ನು ಹೊಂದುವುದರಿಂದ, ವಿವಿಧ ವ್ಯಕ್ತಿಗಳ ಭಿನ್ನ ತಿಳುವಳಿಕೆಯ ಮಟ್ಟವನ್ನು ಸಮರ್ಥಿಸುವುದು ಕಷ್ಟಸಾಧ್ಯವಾಗುತ್ತದೆ. ಅದರ ಪರಿಣಾಮವೇನೆಂದರೆ:

तस्मात्सर्वज्ञमज्ञं वा जगत्स्यादेकरूपकम् ।
तुल्ये स्वयंप्रकाशत्वे जडचेतनयोर्मिथः ॥ ५ ॥
तुल्यमेव प्रसज्येरन् ग्राह्यग्राहकतादयः ।
इन्द्रियाणामनियमाच्चाक्षुषाः स्यू रसादयः ॥ ६ ॥

ತಸ್ಮಾತ್ಸರ್ವಜ್ಞಮಜ್ಞಂ ವಾ ಜಗತ್ಸ್ಯಾದೇಕರೂಪಕಮ್ ।
ತುಲ್ಯೇ ಸ್ವಯಂಪ್ರಕಾಶತ್ವೇ ಜಡಚೇತನಯೋರ್ಮಿಥಃ ॥ 5 ॥

ತುಲ್ಯಮೇವ ಪ್ರಸಜ್ಯೇರನ್ ಗ್ರಾಹ್ಯಗ್ರಾಹಕತಾದಯಃ ।
ಇಂದ್ರಿಯಾಣಾಮನಿಯಮಾಚ್ಚಾಕ್ಷುಷಾಃ ಸ್ಯ್ಯೂ ರಸಾದಯಃ ॥ 6 ॥

ಹಾಗಿದ್ದಿದ್ದರೆ, ಸಂಪೂರ್ಣ ವಿಶ್ವವು, ಎಲ್ಲವೂ ತಿಳಿದಿದೆ ಅಥವಾ ಯಾವುದೂ ತಿಳಿದಿಲ್ಲ ಎನ್ನುವ ಒಂದೇ ಸ್ಥಿತಿಯಲ್ಲಿ ಇರುತ್ತಿತ್ತು. ಜಡ ಮತ್ತು ಚೇತನಗಳು ಸಮಾನವಾಗಿ ಸ್ವಪ್ರಕಾಶಿತವಾಗಿದ್ದರೆ, ಆಗ ಅವೆರಡೂ ಸಮಾನವಾಗಿ ಅನುಭವಿಸುತ್ತದೆ ಮತ್ತುಬೇರೆಯದರಿಂದ ಅನುಭವಿಸಲ್ಪಡುತ್ತದೆ; ರುಚಿ ಇತ್ಯಾದಿಗಳನ್ನು ಕಣ್ಣಿನಿಂದ ಗ್ರಹಿಸಲ್ಪಡಬಹುದು ಎಂಬಂತೆ ಜ್ಞಾನೇಂದ್ರಿಯಗಳು ಮಿತಿಯಿಲ್ಲದ ಅನುಭವವನ್ನು ಪಡೆಯಬಹುದು. [4–5..6]

ವಿವೃತ್ತಿ

ಎಲ್ಲವೂ ಎಲ್ಲರಿಗೂ ತಿಳಿಯಬಹುದು ಯಾ ತಿಳಿಯದಿರಬಹುದು, ಅದು ಹೇಗೆ? ಎಂದು ಕೇಳುತ್ತಾ **ತಸ್ಮಾತ್ಸರ್ವಜ್ಞಮಿತಿ.** ಒಂದುವೇಳೆ ಎಲ್ಲವೂ ಎಲ್ಲರಿಗೂ ಭಾಸವಾಗಿರುವುದಾದರೆ ಆಗ ಎಲ್ಲರೂ ಸರ್ವಜ್ಞರಾಗಿರಬೇಕಿತ್ತು, ಭಾಸವಾಗುವುದಿಲ್ಲವಾದರೆ ಎಲ್ಲರೂ ಅಜ್ಞರಾಗಿರಾಗಿರಬೇಕಿತ್ತು. ವಿಷಯಗಳಿಗೆ ಆತ್ಮದಂತೆ ಸ್ವಯಂಪ್ರಕಾಶತ್ವವನ್ನು ದೂರೀಕರಿಸುತ್ತಾ **ತುಲ್ಯ ಇತಿ.**

ಗ್ರಾಹ್ಯ–ಗ್ರಾಹಕ ವ್ಯವಸ್ಥೆಯನ್ನು ಅಂಗೀಕರಿಸುವಲ್ಲಿನ ದೋಷವನ್ನು ಹೇಳಲು **ಇಂದ್ರಿಯಾಣಾಮಿತಿ.** ಎಲ್ಲದರ ಸರ್ವಗ್ರಾಹ್ಯತ್ವ ಸರ್ವಗ್ರಾಹಕತ್ವದಿಂದ ಕಣ್ಣುಗಳು ರುಚಿ ಮುಂತಾದವುಗಳ ಗ್ರಾಹಕವಾಗಬಹುದು, ರುಚಿಯು ಕಣ್ಣು ಮುಂತಾದವುಗಳ ಗ್ರಾಹಕವಾಗಬಹುದು ಎಂಬ ಅರ್ಥ. ಅವುಗಳ ವಿಷಯ–ವಿಷಯಿ ವ್ಯವಹಾರದ ನಿಯಮಕ್ಕೆ ಸರ್ವಪ್ರಕಾಶತ್ವದ ವಾದವು ವಿರೋಧವಾಗುವುದರಿಂದ ಸ್ವತಃ ಸತ್ ಆಗಿರುವ ವಿಷಯದ ಸ್ವರೂಪಕ್ಕೆ ವ್ಯಭಿಚರಿಸುವ ಪ್ರಸಂಗವು ಉದ್ಭವಿಸುವುದರಿಂದ, ಅನ್ಯಾಧೀನ ಸತ್ತಾಸ್ಫೂರ್ತಿಯ ವಿಷಯದಿಂದ ಬೇರೆಯೇ ಆಗಿರುವ ಸ್ವತಃ ಸತ್ತಾಸ್ಫುರಣೆಯಾಗಿರುವ ಈಶ್ವರನಿಂದಲೇ ಎಲ್ಲಾ ವಸ್ತು–ವಿಷಯಗಳು ಸ್ಫುರಿಸಲ್ಪಡುವುದು, ಬೇರೆ ಯಾವುದರಿಂದಲೂ ಅಲ್ಲ ಎಂದು ಸಿದ್ಧವಾಗುವುದು. [4–5..6]

ಹೀಗೆ ಬಾಹ್ಯ ವಸ್ತುಗಳು ಸ್ವಪ್ರಕಾಶಿತ ಮತ್ತು ಸ್ವತಂತ್ರ ಎಂಬ ತರ್ಕವು ವಸ್ತು–ವಿಷಯಗಳ ಕುರಿತು ನಮ್ಮ ನಿರಾಕರಿಸಲಾಗದ ಅನುಭವಗಳನ್ನು ವಿರೋಧಿಸುತ್ತದೆ; ಹಾಗೂ ಬಾಹ್ಯ ವಸ್ತುಗಳು ತಾತ್ಕಾಲಿಕ ಅಸ್ತಿತ್ವವನ್ನು ಪಡೆದಿವೆಯೆಂಬುದು ಸತ್ಯವಾಗಿದೆ.

ಈಶ್ವರನು ಉಪಾಧಿಗಳಮೂಲಕ ಕಾರ್ಯತತ್ಪರನಾಗುತ್ತಾನೆ

मलिनामलिनादर्शपश्चात्प्राग्भागतुल्ययोः ।
क्रियाशक्तिज्ञानशक्त्योरन्तःकरणभागयोः ॥ ७ ॥
प्रतिबिम्बे स्फुरन्नीशः कर्ता ज्ञातेति कथ्यते ।

ಮಲಿನಾಮಲಿನಾದರ್ಶಪಶ್ಚಾತ್ಪ್ರಾಗ್ಭಾಗತುಲ್ಯಯೋಃ ।
ಕ್ರಿಯಾಶಕ್ತಿಜ್ಞಾನಶಕ್ತ್ಯೋರಂತಃಕರಣಭಾಗಯೋಃ ॥ 7 ॥
ಪ್ರತಿಬಿಂಬೇ ಸ್ಫುರನ್ನೀಶಃ ಕರ್ತಾ ಜ್ಞಾತೇತಿ ಕಥ್ಯತೇ ।

ದರ್ಪಣದ ಮಲಿನಭಾಗದಲ್ಲಿ ಮಂದವಾಗಿಯೂ, ಶುದ್ಧಭಾಗದಲ್ಲಿ ಸ್ಫುಟವಾಗಿಯೂ ಕಾಣುವಂತೆ, ಅಂತಃಕರಣದ ಭಾಗಗಳಾದ ಕ್ರಿಯಾಶಕ್ತಿ ಮತ್ತು ಜ್ಞಾನಶಕ್ತಿಗಳಲ್ಲಿ ಪ್ರತಿಬಿಂಬಿಸುವುದರ ಮೂಲಕ ಪ್ರಕಟವಾಗುವ ಈಶ್ವರನು ಕರ್ತೃವಾಗಿಯೂ (ಮಾಡುವವನು), ಜ್ಞಾತೃವಾಗಿಯೂ (ತಿಳಿಯುವವನು) ಹೇಳಲ್ಪಡುತ್ತಾನೆ. [4–7..8]

ವಿವೃತ್ತಿ

ಇನ್ನು ಈಶ್ವರನು ಭಾವದಿಂದ ಸತ್ತಾಪ್ರಕಾಶಕನಾಗಿ ತೊಡಗಿಕೊಳ್ಳುವನೋ ಇಲ್ಲವೋ? ಇಲ್ಲವಾದರೆ ಸತ್ ಭಾವನೆಯು ಇಲ್ಲದಾಗಿ ಆಕಾಶದಲ್ಲಿ ಇರುವವನಂತೆ ಅಲ್ಪಕಾರಕನಾಗಿರುವನು. ತೊಡಗಿಕೊಳ್ಳುವನಾದರೆ ವಿಕಾರಿತ್ವದ ಆಪತ್ತಿನಿಂದ ಅನಿತ್ಯತ್ವ, ಅನೀಶ್ವರತ್ವದ ಪ್ರಸಂಗವು ಎದುರಾಗುವುದು. ಉತ್ತರವಾಗಿ ಇದು ದೋಷವಲ್ಲ; ಸ್ವತಃ ನಿರ್ವ್ಯಾಪಾರತ್ವವಿರುವವನಾದರೂ ಉಪಾಧಿಗಳಿಂದಾಗಿ ವ್ಯವಹರಿಸುವಂತೆ ಕಂಡುಬರುವ ಈಶ್ವರನಿಗೆ ಕರ್ತೃತ್ವ ಜ್ಞಾತೃತ್ವಗಳನ್ನು ಹೇಳಿದೆ ಎಂದು ಉಪಪಾದಿಸುವ **ಮಲಿನಾಮಲಿನೇತಿ.** ಮಲಿನ ಮತ್ತು ಅಮಲಿನ, ಶುದ್ಧವಾಗಿರುವ ಭಾಗಗಳನ್ನು ಹೊಂದಿರುವ ಕನ್ನಡಿಯಲ್ಲಿ ಮಲಿನ–ಶುದ್ಧಭಾಗಗಳ ಪ್ರತಿಬಿಂಬವನ್ನು ಹೋಲಿಸಿದಂತೆ. ಅದೇರೀತಿ ಕ್ರಿಯಾಶಕ್ತಿ ಜ್ಞಾನಶಕ್ತಿಗಳು ಅಂತಃಕರಣದ ಭಾಗಗಳಾಗಿದ್ದು, ಕ್ರಿಯಾಶಕ್ತಿರೂಪದ ಭಾಗವು ಪ್ರಾಣವಾಗಿ ದರ್ಪಣದ ಮಲಿನಭಾಗಕ್ಕೆ ಸಮನಾಗಿದೆ; ಜ್ಞಾನಶಕ್ತಿಯು ಮನಃ–ಬುದ್ಧಿರೂಪದ ಭಾಗವಾಗಿ ದರ್ಪಣದ ಶುದ್ಧಭಾಗದಂತಿದೆ ಎಂದು ವಿವೇಚನೆಯು. ಅವುಗಳಲ್ಲಿರುವ ಪ್ರತಿಬಿಂಬವು ಪ್ರತ್ಯಗಾತ್ಮನ ಪ್ರತಿಛಾಯೆಯಾಗಿರುವುದು. ***ಪ್ರತಿಬಿಂಬೇ ಸ್ಫುರನ್*** ಅದರಲ್ಲಿರುವ ಪ್ರತಿಬಿಂಬಗಳಲ್ಲಿ ಅಭೇದನಾಗಿ ***ಸ್ಫುರನ್ನೀಶಃ*** ಕಂಡುಬರುವ ಆತ್ಮನು ಕರ್ತನಾಗಿ, ಜ್ಞಾನಿಯಾಗಿ ಇರುವನು ಎಂದು ಹೇಳಿದೆ. ಪ್ರಾಣವೆಂಬ ಉಪಾಧಿಯ ವ್ಯವಹಾರದಿಂದ ಸತ್ತಾಸ್ಫೂರ್ತಿಯಲ್ಲಿ ತೊಡಗಿರುವಾಗ ಚಿದಾತ್ಮನು 'ಮಾಡುವವನು' ಎಂದು ಹೇಳಲ್ಪಡುವನು. ಮನಃ–ಬುದ್ಧಿ ಉಪಾಧಿಯ ಪರಿಣಾಮವಾಗಿ ಸತ್ತಾಸ್ಫೂರ್ತಿಯಲ್ಲಿ ತೊಡಗಿರುವಾಗ ಅವನು 'ತಿಳಿಯುವವನು' ಎಂದು ಹೇಳಲ್ಪಡುವನು ಎಂಬ ಅರ್ಥದಲ್ಲಿದೆ. [4–7..8]

ಅಂತಃಕರಣದ ಭಾಗವಾಗಿರುವ ಕ್ರಿಯಾಶಕ್ತಿಯಲ್ಲಿ ಪ್ರಾಣವು ಚಲಿಸಿ ಈಶ್ವರನು ವಿವಿಧ ಕ್ರಿಯೆಗಳ ರೂಪದಲ್ಲಿ ಪ್ರಕಟವಾಗುತ್ತಾನೆ; ಅದನ್ನು ಮಲಿನವಾಗಿರುವ ದರ್ಪಣದ ಭಾಗಕ್ಕೆ ಹೋಲಿಸಿದೆ. ಅಂತಃಕರಣದ ಇನ್ನೊಂದು ಭಾಗವಾಗಿರುವ ಜ್ಞಾನಶಕ್ತಿಯಲ್ಲಿ ಮನಸು–ಬುದ್ಧಿಗಳು ಚಲಿಸಿ ಈಶ್ವರನು ಜ್ಞಾತೃವಿನ ರೂಪದಲ್ಲಿ ಪ್ರಕಟವಾಗುತ್ತಾನೆ; ಅದನ್ನು ಶುದ್ಧವಾಗಿರುವ ದರ್ಪಣದ ಭಾಗಕ್ಕೆ ಹೋಲಿಸಲಾಗಿದೆ. ಪ್ರಾಣವೆಂಬ ಉಪಾಧಿಯನ್ನು ಸ್ವಪ್ರಕಾಶಿತ ಆತ್ಮದೊಡನೆ ಸೇರಿಸಿದಾಗ ಕ್ರಿಯೆಗಳು ಉತ್ಪತ್ತಿಯಾಗುತ್ತವೆ ಹಾಗೂ ಅವನನ್ನು ಕರ್ತೃ, ಮಾಡುವವನು ಎನ್ನುತ್ತಾರೆ. ಹಾಗೆಯೇ ಅಸ್ಥಿರವಾಗಿರುವ ಮನಸು–ಬುದ್ಧಿಗಳೆಂಬ ಉಪಾಧಿಗಳನ್ನು ಆತ್ಮದೊಡನೆ ಸೇರಿಸಿದಾಗ ಅವನನ್ನು ಜ್ಞಾತೃ, ತಿಳಿಯುವವನು ಎನ್ನುತ್ತಾರೆ.

ಜ್ಞಾನದ ಕರಣಗಳು

बुद्धिस्सत्त्वगुणोत्कर्षान्निर्मलो दर्पणो यथा ॥ ८ ॥
गृह्णाति विषयच्छायामात्मच्छायानुभावतः ।

ಬುದ್ಧಿಸ್ಸತ್ತ್ವಗುಣೋತ್ಕರ್ಷಾನ್ನಿರ್ಮಲೋ ದರ್ಪಣೋ ಯಥಾ ॥ 8 ॥
ಗೃಹ್ಣಾತಿ ವಿಷಯಚ್ಛಾಯಾಮಾತ್ಮಚ್ಛಾಯನುಭಾವತಃ ।

ಬುದ್ಧಿಯಲ್ಲಿ ಸತ್ತ್ವಗುಣದ ಪ್ರಧಾನತೆಯಿಂದ ಹಾಗೂ ಅದರಲ್ಲಿ ನಿರ್ಮಲವಾಗಿರುವ ಕನ್ನಡಿಯಲ್ಲಿ ಪ್ರತಿಬಿಂಬಿಸಿದಂತೆ ಆತ್ಮದ ಪ್ರತಿಫಲನವಾಗುವುದರಿಂದ, ಅದು ಬಾಹ್ಯ ವಸ್ತು-ವಿಷಯಗಳ ಚಿತ್ರಣವನ್ನು ಪಡೆಯುತ್ತದೆ. [4–8..9]

ವಿವೃತ್ತಿ

ಆತ್ಮನು ಅಂತಃಕರಣದಲ್ಲಿರುವ ಜ್ಞಾನಶಕ್ತಿಯಿಂದ ಒಡಗೂಡಿದಾಗ ಜ್ಞಾತೃವೆಂಬ ಉಪಾಧಿಯನ್ನು ಹೊಂದುವವನು ಎಂದು ವಿಷದೀಕರಿಸುತ್ತಾ **ಬುದ್ಧಿರಿತಿ.** ಬುದ್ಧಿಯು ತನ್ನಲ್ಲಿರುವ ಆತ್ಮಛಾಯೆಯಿಂದ ವಿಷಯಛಾಯೆಯನ್ನು ಗ್ರಹಿಸುವುದು ಎಂಬ ಸಂಬಂಧವು. ಅದಕ್ಕೆ ಕಾರಣವಾಗಿ **ಸತ್ತ್ವಗುಣೋತ್ಕರ್ಷಾದಿತಿ.** ರಜಃ, ತಮಃ ಗುಣಗಳ ಉತ್ಕರ್ಷತೆಯಿಂದಾಗಿ ಲೋಭ, ಮೋಹ ಇತ್ಯಾದಿಗಳು ಪ್ರಬಲವಾಗುವುದರಿಂದ, ಅವುಗಳನ್ನು ಮೀರಲು ಸತ್ತ್ವಗುಣದ ಉತ್ಕರ್ಷವು ವಿಷಯಜ್ಞಾನವನ್ನು ಪ್ರಕಟಿಸಲು ಅಗತ್ಯವಾಗಿದೆ. ಹಾಗೆ ಭಗವಾನ್ ಶ್ರೀಕೃಷ್ಣನು ಹೇಳಿದ್ದಾನೆ: 'ಸತ್ತ್ವಾತ್ಸಂಜಾಯತೇ ಜ್ಞಾನಂ ರಜಸೋ ಲೋಭ ಏವ ಚ । ಪ್ರಮಾದಮೋಹೌ ತಮಸೋ ಭವತೋಽಜ್ಞಾನಮೇವ ಚೇತಿ ॥' (ಭ.ಗೀ.14–17). [4–8..9]

ರಜಃ ಮತ್ತು ತಮೋಗುಣಗಳು ಬಯಕೆಗಳನ್ನು ಮತ್ತು ಮರೆಯುವಿಕೆಯನ್ನು ಉಂಟುಮಾಡುವುದರಿಂದ, ಸತ್ತ್ವಗುಣದ ಪ್ರಧಾನತೆ ಅಗತ್ಯವಾಗಿದೆ.

अन्तःकरणसम्बन्धान्निखिलानीन्द्रियाण्यापि ॥ ९ ॥
रथाङ्गनेमिवलये कीलिता इव कीलिकाः ।

ಅಂತಃಕರಣಸಂಬಂಧಾನ್ನಿಖಿಲಾನೀಂದ್ರಿಯಾಣ್ಯಾಪಿ ॥ 9 ॥
ರಥಾಂಗನೇಮಿವಲಯೇ ಕೀಲಿತಾ ಇವ ಕೀಲಿಕಾಃ ।

ಹಾಗೆಯೇ ಅಂತಃಕರಣದೊಡನೆ ಸಂಬಂಧವಿರುವುದರಿಂದ ಎಲ್ಲಾ ಇಂದ್ರಿಯಗಳು ಕೂಡಾ; ರಥದ ಚಕ್ರದಲ್ಲಿ ಕೀಲಿಸಿರುವ ಅರೆಗಳಂತೆ. [4–9..10]

ವಿವೃತ್ತಿ

ಇಂದ್ರಿಯಗಳಿಗೆ ವಿಷಯಗ್ರಹಣವೆಂಬ ಉಪಾಧಿಯಿದ್ದು, ಬುದ್ಧಿಗೆ ಹೇಗೆ? ಎಂಬ ಶಂಕೆಗೆ, ಇಂದ್ರಿಯಗಳೆಲ್ಲವೂ ಬುದ್ಧಿಯೆಂಬ ಸಾಧನವಿಲ್ಲದೆ ತಮ್ಮ ಕಾರ್ಯಮಾಡುವುದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಲು **ಅಂತಃಕರಣ ಸಂಬಂಧಾದಿತಿ.** ಸ್ವಭಾವದಿಂದಲೇ ಬಹಿರ್ಮುಖ ಪ್ರವೃತ್ತವಾಗಿರುವ ಇಂದ್ರಿಯಗಳಲ್ಲಿ ಪ್ರವರ್ತಕತೆಯ ಅಭಾವವಿರುವುದರಿಂದ ವಿಷಯನಿಯಮಭಾವದ ಅಂತಃಕರಣವೃತ್ತಿಯು ಅವುಗಳ ನಿಯಾಮಕವಾಗಿರುವುದು ಎಂದು ಹೇಳಲಾಗಿದೆ. ರಥದ ಭಾಗವಾಗಿರುವ ರಥಚಕ್ರದಲ್ಲಿ ಕೀಲಿಸಿರುವ ಅರೆಗಳಂತೆ ಇಂದ್ರಿಯಗಳು ಅವುಗಳ ಸ್ವವಿಷಯದಲ್ಲಿ ಹೆಚ್ಚಿನ ಪ್ರಾಧಾನ್ಯತೆಯನ್ನು ಹೊಂದಿರುತ್ತವಾದರೂ ಅಂತಃಕರಣವನ್ನು ಮೀರದಿರುವುದರಿಂದ, ನಿಯಾಮಕ ಸಂಬಂಧಕ್ಕೆ ಒಳಗಾಗಿರುವುದು ಎಂಬ ಅರ್ಥವು. [4–9..10]

ಅಂದರೆ, ಇಂದ್ರಿಯಗಳು ಸಹಜವಾಗಿ ತಮ್ಮ ತಮ್ಮ ವಸ್ತು–ವಿಷಯಗಳ ಕಡೆಗೆ ಚಲಿಸಿದರೂ, ಅವುಗಳ ಕ್ರಿಯೆಗಳು ಬುದ್ಧಿಯ ನಿಯಂತ್ರಣದಲ್ಲಿದ್ದು ಸೀಮಿತಗೊಂಡಿರುತ್ತವೆ; ಇಂದ್ರಿಯಗಳ ಗ್ರಹಣ – ಅಗ್ರಹಣ – ತಪ್ಪು ಗ್ರಹಣದ ಕ್ರಿಯೆಗಳು, ಯಾವುದೇ ಸಮಯದಲ್ಲಿ ಅಂತಃಕರಣದ ಸ್ಥಿತಿಯ ಮೇಲೆ ಅವಲಂಬಿಸಿರುತ್ತವೆ.

ಇಂದ್ರಿಯವಾಹಕ ನಾಡಿಗಳು

नाड्योन्तःकरणे स्यूता जालसंस्युतसूत्रवत् ॥ १० ॥
ताभिस्तु गोळकान्ताभिः प्रसर्पन्ति स्फुलिङ्गवत् ।
करणानि समस्थानि यथास्वं विषयं प्रति ॥ ११ ॥

ನಾಡ್ಯೋಂತಃಕರಣೇ ಸ್ಯೂತಾ ಜಾಲಸಂಸ್ಯೂತಸೂತ್ರವತ್ ॥ 10 ॥
ತಾಭಿಸ್ತು ಗೋಳಕಾಂತಾಭಿಃ ಪ್ರಸರ್ಪಂತಿ ಸ್ಫುಲಿಂಗವತ್ ।
ಕರಣಾನಿ ಸಮಸ್ತಾನಿ ಯಥಾಸ್ವಂ ವಿಷಯಂ ಪ್ರತಿ ॥ 11 ॥

ಬಲೆಯಲ್ಲಿ ದಾರಗಳನ್ನು ನೇಯ್ದಂತೆ, ನಾಡಿಗಳು ಅಂತಃಕರಣದಲ್ಲಿ ನೇಯಲ್ಪಟ್ಟಿವೆ. ಅವುಗಳ ಮೂಲಕ ಭೌತಿಕ ಸಂವೇದನೆಗಳ (ಲಿಂಗ ಶರೀರ) ವಲಯದಲ್ಲಿ ತಮ್ಮ ತಮ್ಮ ವಿಷಯಗಳ ಕಡೆಗೆ ಇಂದ್ರಿಯಗಳು ಚಲಿಸುತ್ತವೆ, ಬೆಂಕಿಯ ಕಿಡಿಗಳು ಪಸರಿಸಿದಂತೆ. [4–10..11]

ವಿವೃತ್ತಿ

ಇದರಲ್ಲಿ ಶರೀರದೊಳಗೆ ಪ್ರವೇಶಿಸಿ ಜೀವಭಾವದಲ್ಲಿರುವ ಈಶ್ವರನು ಉಪಾಧಿವಶನಾಗಿ ಹೊಂದುವ ಅವಸ್ಥಾತ್ರಯಗಳನ್ನು ಹೇಳಿ, ಅನುಭವಗಳು ಚಲಿಸುವ ವಿಧಾನವನ್ನು ತೋರಿಸುವ **ನಾಡ್ಯ ಇತ್ಯಾದಿನಾ.** ***ನಾಡ್ಯೋ*** ದೇಹದೊಳಗೆ ಸಂವೇದನೆಗಳನ್ನು ಸಾಗಿಸುವ ನರದಂತಹ ನಾಳಗಳು. ಅವು ಅಂತಃಕರಣದ ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳಿರುವ ಲಿಂಗಶರೀರದಲ್ಲಿವೆ ಎಂದು ಗ್ರಹಿಸಲಾಗಿದೆ. ಅದಕ್ಕೆ ದೃಷ್ಟಾಂತವಾಗಿ **ಜಾಲಸಂಸ್ಯೂತಸೂತ್ರವದಿತಿ.** ಮೀನು ಹಿಡಿಯುವ ಬಲೆಯಂತೆ ಅದರ ನಾಳಗಳು ಪರಸ್ಪರ ಅವಿನಾಭೂತವಾಗಿ ಹೆಣೆದುಕೊಂಡಿವೆ ಮತ್ತು ಎಲ್ಲಾ ವಿಷಯವೃತ್ತಿಗಳನ್ನು ಸೆರೆಹಿಡಿಯುವ ಸಾಧನದಂತೆ ನಾಡೀಗಳು ಅಂತಃಕರಣದೊಡನೆ ವರ್ತಿಸುತ್ತವೆ. ಆ ನಾಡೀಗಳ ಮೂಲಕ ಹಿಂದೆ ತಿಳಿಸಿರುವ ***ಕರಣಾನಿ ಸಮಸ್ತಾನಿ*** ಮನೋವೃತ್ತಿಗಳು ಮತ್ತು ಇಂದ್ರಿಯಗಳು ತಮ್ಮ ತಮ್ಮ ವಿಷಯಗಳ ಕಡೆಗೆ ಸಂಚರಿಸುವುವು. ಎಲ್ಲಿಯವರೆಗೆ ಎಂದು ಹೇಳಲು **ಗೋಳಕಾಂತಾದಿಭಿರಿತಿ.** ಇಂದ್ರಿಯಗಳಿಗೆ ಆಶ್ರಯವಾಗಿ ಇಂದ್ರಿಯಗಳು ಅಭಿವ್ಯಕ್ತವಾಗುವ ದೇಹದೇಶವು ವಿಶೇಷರೂಪದ ಗೋಳಕವಾಗಿರುವುದು, ಅದರವರೆಗೆ ಸಂಚರಿಸುವುದು. ***ಸ್ಫುಲಿಂಗವತ್*** ದೃಷ್ಟಾಂತವು ಸ್ಪಷ್ಟವಾಗಿದೆ. *ಗೋಳಕಾಂತಾನಿ* ಎಂಬ ಪಾಠದಂತೆ ಕರಣವಿಶೇಷಣವಾಗಿ, ಸುಷುಪ್ತಿಯಿಂದ ಜಾಗ್ರತ ಅವಸ್ಥೆಗೆ ಸಾಗುವಿಕೆಯು ಗೋಳಕದ ಒಳಗಿನವರೆಗೆ ಆಗಿರುವುದು ಎಂಬ ಅರ್ಥ. [4–10..11]

ತಿಳಿಯುವಿಕೆ ಮತ್ತು ಮಾಡುವಿಕೆಯನ್ನು ಪ್ರತಿನಿಧಿಸುವ ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳು ಇರುವ ಲಿಂಗಶರೀರವನ್ನು ಅಂತಃಕರಣವೆನ್ನುತ್ತಾರೆ. ನಾಡಿಗಳು ಕೊಳವೆಯಂತಹ ಅವಕಾಶಗಳಾಗಿದ್ದು, ಇವುಗಳ ಮೂಲಕ ಮನಸು ಮತ್ತು ಇಂದ್ರಿಯಗಳು ಭಿನ್ನ ರೂಪಗಳಲ್ಲಿ ತಮ್ಮ ತಮ್ಮ ಬಾಹ್ಯ ಜಗತ್ತಿನ ವಿಷಯಗಳ ಕಡೆಗೆ

ಚಲಿಸುತ್ತವೆ. ಸುಷುಪ್ತಿಯಿಂದ ಜಾಗೃತ (ಎಚ್ಚರದ) ಸ್ಥಿತಿಗೆ ಬರುವಾಗ, ಈ ಇಂದ್ರಿಯಗಳು ಕಣ್ಣು, ಕಿವಿ ಮುಂತಾದ ತಮ್ಮ ತಮ್ಮ ಭೌತಿಕ ಅಂಗಗಳಕಡೆಗೆ ಹೋಗುತ್ತವೆ.

देहस्य मध्यमं स्थानं मूलाधारमितीर्यते ।
गुदात्तु द्व्यङ्गुलादूर्ध्वं मेढ्रात्तु द्व्यङ्गुलादधः ॥ १२ ॥

ದೇಹಸ್ಯ ಮಧ್ಯಮಂ ಸ್ಥಾನಂ ಮೂಲಾಧಾರಮಿತೀರ್ಯತೇ ।
ಗುದಾತ್ತು ದ್ವ್ಯಂಗುಲಾದೂರ್ಧ್ವಂ ಮೇಢ್ರಾತ್ತು ದ್ವ್ಯಂಗುಲಾದಧಃ ॥ 12 ॥

ಮೂಲಾಧಾರವನ್ನು ದೇಹದ ಮಧ್ಯಭಾಗವೆಂದು ಹೇಳುತ್ತಾರೆ; ಅದು ಗುದದಿಂದ ಎರಡು ಅಂಗುಲದಷ್ಟು ಮೇಲಿದ್ದು, ಶಿಶ್ನದಿಂದ ಎರಡು ಅಂಗುಲದಷ್ಟು ಕೆಳಗಿದೆ. [4–12]

ವಿವೃತ್ತಿ

ನಾಡೀಗಳ ಮೂಲಕ ಇಂದ್ರಿಯಗಳು ಸಂಚರಿಸುತ್ತವೆ ಎಂದು ಹೇಳಿದೆ; ಅವುಗಳಲ್ಲಿ ಯಾವ ನಾಡೀಗಳು ಎಲ್ಲಿಯವರೆಗೆ ಸಾಗುತ್ತವೆ, ಏನು ಪರಿಣಾಮವನ್ನು ಬೀರುತ್ತವೆ ಎಂಬ ಜಿಜ್ಞಾಸೆಗೆ **ದೇಹಸ್ಯೇತಿ.** ಮನ್ಮಥ ಸ್ಥಾನವು ದೇಹದೇಶದ ಮಧ್ಯಸ್ಥಾನವಾಗಿದೆ. ಅದರ ವಿಶೇಷತೆಯನ್ನು ನಿರ್ದೇಶಿಸುತ್ತಾ **ಗುದಾದಿತಿ.** ***ಗುದಂ*** ಪಾಯು, ವಿಸರ್ಜಕ. ***ಮೇಢ್ರಂ*** ಶಿಶ್ನ. [4–12]

त्रिकोणोधोमुखाग्रश्च कन्यकायोनिसन्निभः ।
यत्र कुण्डलिनी नाम परा शक्तिः प्रतिष्ठिता ॥ १३ ॥
प्राणाग्निबिन्दुनादानां सावित्री सा सरस्वती ।

ತ್ರಿಕೋಣೋಧೋಮುಖಾಗ್ರಶ್ಚ ಕನ್ಯಕಾಯೋನಿಸನ್ನಿಭಃ ।
ಯತ್ರ ಕುಂಡಲಿನೀ ನಾಮ ಪರಾ ಶಕ್ತಿಃ ಪ್ರತಿಷ್ಠಿತಾ ॥ 13 ॥
ಪ್ರಾಣಾಗ್ನಿಬಿಂದುನಾದಾನಾಂ ಸಾವಿತ್ರೀ ಸಾ ಸರಸ್ವತೀ ।

ಅದು ಅಧೋಮುಖ ತ್ರಿಕೋಣಾಕಾರವಾಗಿದ್ದು, ಕನ್ಯೆಯ ಯೋನಿಯಂತೆ ಇದೆ; ಕುಂಡಲಿನೀ ಎಂದು ಕರೆಯಲ್ಪಡುವ ಪರಾಶಕ್ತಿಯು ಅಲ್ಲಿ ನೆಲೆಸಿದ್ದಾಳೆ, ಅವಳು ಪ್ರಾಣ, ಅಗ್ನಿ, ಬಿಂದು ಮತ್ತು ನಾದದ ಮಾತೆಯಾಗಿದ್ದಾಳೆ; ಅವಳನ್ನು ಸಾವಿತ್ರಿಯೆಂದೂ, ಸರಸ್ವತಿಯೆಂದೂ ಕರೆಯುತ್ತಾರೆ. [4–13..14]

ವಿವೃತ್ತಿ

ಮೂಲಾಧಾರದ ಲಕ್ಷಣವನ್ನು ತಿಳಿಸಲು **ತ್ರಿಕೋಣ ಇತಿ.** ಅದರ ಸಾದೃಶ್ಯತೆಯನ್ನು ಹೇಳಲು **ಕನ್ಯಕೇತಿ.** ಅದರ ಅಧಿಷ್ಠಾತ್ರಿಯಾದ ದೇವತೆಯ ನಾಮ, ಗುಣಗಳನ್ನು ನಿರೂಪಿಸಲು **ಯತ್ರೇತಿ.** ***ಪರಾಶಕ್ತಿಃ*** ಮೂಲಪ್ರಕೃತಿ. ಅವಳು ಅಲ್ಲಿ ಸರ್ಪವು ಸುತ್ತುವರೆದಿರುವಂತಹ ಆಕಾರದಲ್ಲಿ ಕುಂಡಲಿನೀ ಎಂದು ಸಂಜ್ಞಿತಳಾಗಿ ಪರಾತ್ಮ ತೇಜಸ್ಸಿನ ದೀಪ್ತಿಯುಳ್ಳವಳಾಗಿ ಪ್ರಾಣ ಮುಂತಾದವುಗಳನ್ನು ಸಾವಿತ್ರೀ ರೂಪದಿಂದ ಪ್ರಸವಿಸುತ್ತಾಳೆ. ***ಪ್ರಾಣ*** ಐದು ವೃತ್ತಿಗಳಿಂದ ದೇಹದೊಳಗೆ ಸಂಚರಿಸುವ ಪ್ರಾಣವು ವಾಯುವಿಶೇಷವಾಗಿದೆ. ***ಅಗ್ನಿಃ*** ಜಠರವನ್ನು ಸೇರಿರುವ ಅನ್ನ,

ರಸ ಇತ್ಯಾದಿಗಳ ಪಾಚಕವಾಗಿದೆ. ಈ ಪ್ರಾಣಾಗ್ನಿಗಳು ಅಗ್ನಿಷೋಮೌ, ಸೂರ್ಯಚಂದ್ರರಂತೆ ಎಂದು ಯೋಗಶಾಸ್ತ್ರದಲ್ಲಿ ಪ್ರಸಿದ್ಧವಾಗಿದೆ. ಅದರಲ್ಲಿ ಪ್ರಾಣವು ಚಂದ್ರ, ಸೋಮನು ಮತ್ತು ಅಗ್ನಿಯು ಸೂರ್ಯನು ಎನ್ನಲಾಗಿದೆ. ಅವರೇ ಇಡಾ ಪಿಂಗಳ ನಾಡೀಗಳ ಅಧಿದೇವತೆಗಳಾಗಿ ಕಂಡುಬರುವರು. ***ಬಿಂದುಃ*** ಅವ್ಯಕ್ತ ರೂಪದ ಧ್ವನಿಯ ಅವಸ್ಥಾವಿಶೇಷವು. ***ನಾದಃ*** ಸರ್ವ ವರ್ಣಗಳಿಗೆ ಸಾಮಾನ್ಯವಾಗಿ, ಓಂಕಾರ ಘೋಷ ರೂಪವಾಗಿ, ಕಿವಿಗಳನ್ನು ಮುಚ್ಚಿಕೊಂಡಾಗ ಕೇಳಿಬರುತ್ತದೆ. ಇವೆಲ್ಲವೂ ಉತ್ಪತ್ತಿಯಾಗಿ ದೇಹದಲ್ಲಿ ಪ್ರಸಾರವಾಗುತ್ತವೆ. ಪರಾಶಕ್ತಿಯು ಅವುಗಳ ಸೃಷ್ಟಿಕರ್ತ್ರಿಯಾಗಿ ದೇಹಮಧ್ಯದಲ್ಲಿರುವ ಕುಂಡಲಿನೀ ಆಗಿರುವಳು ಎಂಬ ಅರ್ಥವು. ಅವಳೇ ಪ್ರಾಣದಲ್ಲಿ ನಾದರೂಪವನ್ನು ತಳೆದು ವರ್ಣಗಳ ರೂಪದಲ್ಲಿ ವ್ಯಕ್ತವಾಗಿ ಸರಸ್ವತೀ ಎನಿಸಿದ್ದಾಳೆ. [4–13..14]

ಕುಂಡಲಿನಿಯು ಮೂಲಾಧಾರದಲ್ಲಿರುವ ಶಕ್ತಿಯಾಗಿದ್ದಾಳೆ; ಅವಳು ಸರ್ಪದ ರೂಪದಲ್ಲಿ ಪ್ರಕಟವಾಗುವುದರಿಂದ, ಅವಳಿಗೆ ಆ ಹೆಸರು ಬಂದಿದೆ. ಮೂಲಪ್ರಕೃತಿಯೆಂದೂ ಕರೆಯಲ್ಪಡುವ ಪರಾಶಕ್ತಿಯು ಪರಮಾತ್ಮನಿಂದ ಬೆಳಗಲ್ಪಟ್ಟು ಪ್ರಾಣ ಇತ್ಯಾದಿಗಳನ್ನು ಉತ್ಪತ್ತಿ ಮಾಡುತ್ತಾಳೆ. ಸಾರ್ವತ್ರಿಕ ಕ್ರಿಯಾಶಕ್ತಿಯಾಗಿರುವ ಪ್ರಾಣವು ಪ್ರತಿ ವ್ಯಕ್ತಿಯನ್ನು ಪ್ರವೇಶಿಸಿ, ವಾಯುವಿನ ಐದು ಪ್ರಧಾನ ಕ್ರಿಯೆಗಳಲ್ಲಿ ದರ್ಶಿತವಾಗುತ್ತದೆ. ಜಠರಾಗ್ನಿಯು (ಜೀರ್ಣಶಕ್ತಿ) ಅಗ್ನಿಯ ಒಂದು ರೂಪವಾಗಿದೆ. ಯೋಗಶಾಸ್ತ್ರದಲ್ಲಿ ಅಗ್ನಿ ಮತ್ತು ಪ್ರಾಣವನ್ನು, ಪಿಂಗಳಾ ಮತ್ತು ಇಡಾ ನಾಡಿಗಳ ಅಧಿದೇವತೆಗಳಾಗಿರುವ ಸೂರ್ಯ ಮತ್ತು ಚಂದ್ರನಿಗೆ ಹೋಲಿಸಿದ್ದಾರೆ. ಬಿಂದುವು ಅಪ್ರಕಟಿತ ಶಬ್ದ ಹಾಗೂ ನಾದವು ಸಾಮಾನ್ಯಾರ್ಥದಲ್ಲಿ ಪ್ರಕಟವಾದ ಶಬ್ದವೆಂದೂ, ವಿಶಿಷ್ಟಾರ್ಥದಲ್ಲಿ ಎಲ್ಲಾ ಪ್ರಕಟ ಶಬ್ದಗಳಲ್ಲಿ ಸಮಾನವಾಗಿರುವ, ಕೆಲವು ಬಾರಿ ಕಿವಿಗಳನ್ನು ಮುಚ್ಚಿಕೊಂಡಾಗ ಕೇಳಿಬರುವಂತಹ ಓಂಕಾರವೆಂದೂ ಹೇಳಿದ್ದಾರೆ. ಇವೆಲ್ಲವನ್ನು ಕುಂಡಲಿನಿಯು ಉತ್ಪತ್ತಿಮಾಡಿ ದೇಹದಲ್ಲಿ ಪ್ರಸಾರಮಾಡುತ್ತಾಳೆ. ಪ್ರಾಣರೂಪೀಯಾಗಿ ನಾದದಲ್ಲಿ ಪ್ರಕಟವಾದಾಗ ಸಂವಹನೆಯ ಶಬ್ದಗಳ ಉತ್ಪತ್ತಿಯಾಗಿ, ಅವಳು ಸರಸ್ವತಿಯೆನಿಸಿಕೊಳ್ಳುತ್ತಾಳೆ.

ಮೂಲಾಧಾರವು ಮೂರು ಪ್ರಮುಖ ನಾಡಿಗಳ ಮೂಲಸ್ಥಾನವಾಗಿದೆ; ಸಾಧಕರ ಸಹಾಯಕ್ಕೆಂದು ಅವುಗಳ ಅಲ್ಪ ವಿವರಣೆಯನ್ನು ಕೊಟ್ಟಿದೆ.

मूलाधाराग्रकोणस्था सुषुम्ना ब्रहमरन्द्रगा ॥ १४ ॥
मूलेर्धच्छिन्नवंशाभा षडाधारसमन्विता ।

ಮೂಲಾಧಾರಾಗ್ರಕೋಣಸ್ಥಾ ಸುಷುಮ್ನಾ ಬ್ರಹ್ಮರಂಧ್ರಗಾ ॥ 14 ॥
ಮೂಲೇರ್ಧಚ್ಛಿನ್ನವಂಶಾಭಾ ಷಡಾಧಾರಸಮನ್ವಿತಾ ।

ಮೂಲಾಧಾರದ ಅಗ್ರದಿಂದ ಹುಟ್ಟುವ ಸುಷುಮ್ನಾವು ಬ್ರಹ್ಮರಂಧ್ರವನ್ನು ತಲುಪುತ್ತದೆ; ಅರ್ಧ ತುಂಡುಮಾಡಿದ ಬಿದಿರಿನಂತೆ ಬುಡದಲ್ಲಿದ್ದು, ಆರು ಆಧಾರಗಳನ್ನು (ಗಿಣ್ಣು) ಹೊಂದಿದೆ. [4–14..15]

ವಿವೃತ್ತಿ

ಹೀಗೆ ಕಂಡುಬರುವ ಮೂರು ಮಹಾನಾಡೀಗಳು ಮೂಲಾಧಾರದಿಂದ ಹೊರಟಿರುವುದನ್ನು ಧ್ಯಾನಾವಸ್ಥೆಯಲ್ಲಿ ಕಾಣಬಹುದು ಎಂದು ಅವುಗಳಲ್ಲಿ ಮಧ್ಯಮಹಾನಾಡೀಯ ನಿರ್ಗಮನವನ್ನು ತಿಳಿಸುವ **ಮೂಲಾಧಾರಾಗ್ರ–ಕೋಣಸ್ಥೇತಿ.** ಮೂಲಾಧಾರವು ತ್ರಿಕೋಣರೂಪವಾಗಿ ಇದೆ. ***ಅಗ್ರಕೋಣಃ*** ಕೆಳಗಿನ ಕೋಣಮುಖದಿಂದ ಸುಷುಮ್ನಾ ಹೆಸರಿನ ನಾಡೀಯು ***ಬ್ರಹ್ಮರಂಧ್ರಗಾ*** ಶಿರಕಪಾಲದಲ್ಲಿರುವ ಛಿದ್ರದವರೆಗೆ ಸಾಗುತ್ತದೆ, ಏಕರೂಪವಾಗಿ

ಅತೀದೀರ್ಘವಾಗಿದೆ ಎಂಬ ಅರ್ಥ. ಯೋಗಿಗಳು ತಿಳಿದಿರುವಂತೆ ಅದರ ಲಕ್ಷಣವು **ಮೂಲ ಇತಿ.** ಅರ್ಧ ಭಾಗಮಾಡಿರುವ ಬಿದಿರಿನಂತೆ ಭಾಸವಾಗುವ ಅದು ಸೂಕ್ಷ್ಮರಂಧ್ರವನ್ನು ಹೊಂದಿ ಆರು ಗಂಟುಗಳಿಂದ ಕೂಡಿರುವುದು. ನಾಲ್ಕು, ಆರು, ಹತ್ತು, ಹನ್ನೆರಡು, ಹದಿನಾರು ಮತ್ತು ಎರಡು ದಳಗಳ ಕಮಲದಂತಿರುವ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧಿ, ಆಜ್ಞಾ ಎಂಬ ಆಧಾರಗಳು ಮೂಲಾಧಾರ, ಲಿಂಗ, ನಾಭಿ, ಹೃದಯ, ಕಂಠ, ಭ್ರೂಮಧ್ಯ ಪ್ರದೇಶಗಳಲ್ಲಿ ಸಮನ್ವಿತವಾಗಿವೆ. [4–14..15]

ಮೂಲಾಧಾರದ ತುದಿಯಲ್ಲಿ ಪ್ರಕಟವಾಗಿ ತಲೆಯಲ್ಲಿರುವ ಬ್ರಹ್ಮರಂಧ್ರದಲ್ಲಿ ಸುಷುಮ್ನಾವು ಅಂತ್ಯವಾಗುತ್ತದೆ. ಅದು ಆದಿಯಿಂದ ಅಂತ್ಯದವರೆಗೆ ಸಮಾನವಾಗಿದ್ದು, ಉದ್ದ ಹಾಗೂ ನೇರವಾಗಿ ಮತ್ತು ಯೋಗಿಗಳಿಗೆ ದೃಷ್ಟಿಗೋಚರವಾಗಿದೆ; ಚಕ್ರಗಳೆಂದು ಕರೆಯಲ್ಪಡುವ ತಮ್ಮದೇ ಆದ ರೂಪ ಮತ್ತು ಸ್ಥಾನವನ್ನು ಹೊಂದಿರುವ ಆರು ಆಧಾರಗಳನ್ನು ಹೊಂದಿದೆ.

ಚಕ್ರ	ರೂಪ	ಸ್ಥಾನ
ಮೂಲಾಧಾರ	ನಾಲ್ಕುದಳ ಪದ್ಮ	ಜನನಾಂಗದ ಕೆಳಗೆ, ಗುದದ್ವಾರದ ಮೇಲೆ
ಸ್ವಾಧಿಷ್ಠಾನ	ಆರುದಳ ಪದ್ಮ	ಜನನಾಂಗದ ಬುಡದಲ್ಲಿ
ಮಣಿಪೂರ	ಹತ್ತುದಳ ಪದ್ಮ	ಹೊಕ್ಕಳಿನಲ್ಲಿ
ಅನಾಹತ	ಹನ್ನೆರಡುದಳ ಪದ್ಮ	ಹೃದಯಭಾಗ
ವಿಶುದ್ಧ	ಹದಿನಾರುದಳ ಪದ್ಮ	ಗಂಟಲು
ಆಜ್ಞಾ	ಎರಡುದಳ ಪದ್ಮ	ಭ್ರೂಮಧ್ಯ

तत्पार्श्वकोणयोर्जाते द्वे इडापिङ्गले स्थिते ॥ १५ ॥
नाडीचक्रमिति प्राहुस्तस्मान्नाड्यस्समुद्गताः ।

ತತ್ಪಾರ್ಶ್ವಕೋಣಯೋರ್ಜಾತೇ ದ್ವೇ ಇಡಾಪಿಂಗಲೇ ಸ್ಥಿತೇ ॥ 15 ॥
ನಾಡೀಚಕ್ರಮಿತಿ ಪ್ರಾಹುಸ್ತಸ್ಮಾನ್ನಾಡ್ಯಸ್ಸಮುದ್ಗತಾಃ ।

ಎರಡು ನಾಡಿಗಳು, ಇಡಾ ಮತ್ತು ಪಿಂಗಳಾ, ಅದರ ಬದಿಗಳಿಂದ ಹೊರಡುತ್ತವೆ. ಯೋಗಿಗಳು ತಿಳಿಸಿದಂತೆ, ಇದು ನಾಡೀಚಕ್ರವೆನಿಸಿಕೊಳ್ಳುತ್ತದೆ. ಇದರಿಂದ ಎಲ್ಲಾ ನಾಡಿಗಳು ಆರಂಭವಾಗುತ್ತವೆ. [4–15..16]

ವಿವೃತ್ತಿ

ಸುಷುಮ್ನಾದ ಜೊತೆಗಿರುವ ಇನ್ನೆರಡು ನಾಡೀಗಳನ್ನು ತಿಳಿಸುವ **ತತ್ಪಾರ್ಶ್ವೇತಿ.** ಸುಷುಮ್ನಾದ ಬದಿಯಲ್ಲಿ, ಮೂಲತ್ರಿಕೋಣದ ದಕ್ಷಿಣ–ಉತ್ತರ ಪಾರ್ಶ್ವಕೋಣಗಳಿಂದ ಇಡಾ ಮತ್ತು ಪಿಂಗಳ ಎಂಬ ಎರಡುನಾಡೀಗಳು ಹೊರಡುತ್ತವೆ. ವಾಮಪಾರ್ಶ್ವದಿಂದ ಇಡಾ ಮತ್ತು ದಕ್ಷಿಣಪಾರ್ಶ್ವದಿಂದ ಪಿಂಗಳವು ನಿರ್ಗಮಿಸುತ್ತವೆ. ಅವು ಲಲಾಟಮೂಲದವರೆಗೆ ಸಾಗುತ್ತವೆ ಎಂದು ತಿಳಿಯುವುದು. ನಾಡೀತ್ರಯಗಳ ಒಗ್ಗೂಡುವಿಕೆಯ ಲಕ್ಷಣವನ್ನು ತಿಳಿಸಲು **ನಾಡೀಚಕ್ರಮಿತಿ.** ಯೋಗಶಾಸ್ತ್ರವಿದರು ಹೇಳುವಂತೆ ಈ ನಾಡೀಗಳು ***ಸಮುದ್ಗತಾಃ*** ವಿಭಕ್ತವಾಗಿ ಸಾಗುತ್ತವೆ ಎಂಬ ಅರ್ಥವು. [4–15..16]

ಇಡಾವು ಸುಷುಮ್ನಾದ ಎಡಭಾಗದಲ್ಲಿಯೂ, ಪಿಂಗಾಳಾವು ಬಲಭಾಗದಲ್ಲಿಯೂ ಇದ್ದು ಹಣೆಯವರೆಗೆ ಸಾಗುತ್ತವೆ.

गान्धारी हस्तिजिह्वा च नयनान्तं पधावतः ॥ १६ ॥
नाडीचक्रेण संस्यूते नासिकान्तमुभे गते ।
नाभिमण्डलमाश्रित्य कुक्कुटाण्डमिव स्थितम् ॥ १७ ॥
पूषाचालम्बुषा नाडी कर्णद्वयमुपाश्रिते ।
नाडी शुक्लाह्वया तस्माद्भ्रूमध्यमुपसर्पति ॥ १८ ॥
सस्वत्याह्वया नाडी जिह्वान्ता वाक्प्रसारिणी ।
नाडी विश्वोदरी नाम भुङ्क्तेन्नं सा चतुर्विधम् ॥ १९ ॥
पीत्वा पयस्विनी तोयं कण्ठस्था कुरुते क्षुतम् ।
नाडीचक्रात्समुद्भूता नाड्यस्तिस्रस्त्वधोमुखाः ॥ २० ॥
राका शुक्लं सिनीवाली मूत्रं मुञ्चेत्कुहूर्मलम् ।
भुक्तान्नरसमादाय शङ्खिनी धमनी पुनः ॥ २१ ॥
कपालकुहरं गत्वा मूर्ध्नि सञ्चिनुते सुधाम् ।

ಗಾಂಧಾರೀ ಹಸ್ತಿಜಿಹ್ವಾ ಚ ನಯನಾಂತಂ ಪ್ರಧಾವತಃ ॥ 16 ॥
ನಾಡೀಚಕ್ರೇಣ ಸಂಸ್ಯೂತೇ ನಾಸಿಕಾಂತಮುಭೇ ಗತೇ ।
ನಾಭಿಮಂಡಲಮಾಶ್ರಿತ್ಯ ಕುಕ್ಕುಟಾಂಡಮಿವ ಸ್ಥಿತಮ್ ॥ 17 ॥
ಪೂಷಾಚಾಲಂಬುಷಾ ನಾಡೀ ಕರ್ಣದ್ವಯಮುಪಾಶ್ರಿತೇ ।
ನಾಡೀ ಶುಕ್ಲಾಹ್ವಯಾ ತಸ್ಮಾದ್ಭ್ರೂಮಧ್ಯಮುಪಸರ್ಪತಿ ॥ 18 ॥
ಸರಸ್ವತ್ಯಾಹ್ವಯಾ ನಾಡೀ ಜಿಹ್ವಾಂತಾ ವಾಕ್ಪ್ರಸಾರಿಣೀ ।
ನಾಡೀ ವಿಶ್ವೋದರೀ ನಾಮ ಭುಂಕ್ತೇನ್ನಂ ಸಾ ಚತುರ್ವಿಧಮ್ ॥ 19 ॥
ಪೀತ್ವಾ ಪಯಸ್ವಿನೀ ತೋಯಂ ಕಂಠಸ್ಥಾ ಕುರುತೇ ಕ್ಷುತಮ್ ।
ನಾಡೀಚಕ್ರಾತ್ಸಮುದ್ಭೂತಾ ನಾಡ್ಯಸ್ತಿಸ್ರಸ್ತ್ವಧೋಮುಖಾಃ ॥ 20 ॥
ರಾಕಾ ಶುಕ್ಲಂ ಸಿನೀವಾಲೀ ಮೂತ್ರಂ ಮುಂಚೇತ್ಕುಹೂರ್ಮಲಮ್ ।
ಭುಕ್ತಾನ್ನರಸಮಾದಾಯ ಶಂಖಿನೀ ಧಮನೀ ಪುನಃ ॥ 21 ॥
ಕಪಾಲಕುಹರಂ ಗತ್ವಾ ಮೂರ್ಧ್ನಿ ಸಂಚಿನುತೇ ಸುಧಾಮ್ ।

ಗಾಂಧಾರೀ ಮತ್ತು ಹಸ್ತಿಜಿಹ್ವಾ ನಾಡೀಗಳು ಕಣ್ಣಿನವರೆಗೆ ಹೋಗುತ್ತವೆ. ನಾಡೀಚಕ್ರಕ್ಕೆ ಸೇರಿಕೊಂಡ ಎರಡು ನಾಡೀಗಳು (ಇಡಾ, ಪಿಂಗಳಾ) ಮೂಗನ್ನು ತಲುಪುತ್ತವೆ. ಕೋಳಿಯ ಮೊಟ್ಟೆಯಂತೆ ಇರುವ ನಾಭಿಮಂಡಲದಿಂದ ಆರಂಭವಾಗಿ ಪೂಷಾ ಮತ್ತು ಅಲಂಬುಷಾಗಳು ಕಿವಿಯನ್ನು ಸೇರುತ್ತವೆ. ಶುಕ್ಲಾಹ್ವಯಾ ನಾಡೀಯು ಅಲ್ಲಿಂದಲೇ ಆರಂಭವಾಗಿ ಭ್ರೂಮಧ್ಯದವರೆಗೆ (ಎರಡು ಹುಬ್ಬುಗಳ ನಡುವಿನ ಪ್ರದೇಶ) ಹೋಗುತ್ತದೆ. ಸರಸ್ವತ್ಯಾಹ್ವಯಾ ಹೆಸರಿನ ನಾಡೀಯು ನಾಲಗೆಯ ತುದಿಯವರೆಗಿದೆ ಹಾಗೂ ಮಾತಿಗೆ ಕಾರಣವಾಗುತ್ತದೆ. ಹೊಟ್ಟೆಯಲ್ಲಿರುವ

ವಿಶ್ವೋದರೀ ನಾಡೀಯು ನಾಲ್ಕು ವಿಧದ ಆಹಾರವನ್ನು ಸೇವಿಸುತ್ತದೆ. ಕಂಠದಲ್ಲಿರುವ ಪಯಸ್ವಿನೀ ನಾಡೀಯು ನೀರನ್ನು ಸೇವಿಸುತ್ತದೆ ಮತ್ತು ಸೀನು ಬರುವಂತೆ ಮಾಡುತ್ತದೆ. ನಾಡೀಚಕ್ರದಿಂದ ಮೂರು ನಾಡೀಗಳು ಕೆಳಮುಖವಾಗಿ ಆರಂಭವಾಗುತ್ತವೆ: ರಾಕಾ ಶುಕ್ಲವನ್ನು, ಸಿನಿವಾಲೀ ಮೂತ್ರವನ್ನು ಮತ್ತು ಕುಹೂ ಮಲವನ್ನು ವಿಸರ್ಜಿಸುತ್ತದೆ. ಶಂಖಿನಿ ನಾಡೀಯು, ಜೀರ್ಣಿಸಿದ ಆಹಾರದ ಸತ್ತ್ವವನ್ನು ಹೀರಿಕೊಂಡು, ಕಪಾಲಕುಹರವನ್ನು ಸೇರಿ (ತಲೆಬುರುಡೆಯೊಳಗಿರುವ ಆವಕಾಶ), ಸುಧೆಯನ್ನು (ಅಮೃತ) ಸಂಗ್ರಹಿಸುತ್ತದೆ. [4–16..22]

ವಿವೃತ್ತಿ

ಅದೇರೀತಿ ಇತರ ಪ್ರಧಾನ ನಾಡೀಗಳನ್ನು ಹೆಸರಿಸುತ್ತಾ **ಗಾಂಧಾರೀತ್ಯಾದಿನಾ.** ಗಾಂಧಾರೀ, ಹಸ್ತಿಜಿಹ್ವಾ ಹೆಸರಿನ ನಾಡೀಗಳು ಆಧಾರಚಕ್ರದಿಂದ ಹೊರಟು ಕಣ್ಣುಗಳ ಗೋಳಕದವರೆಗೆ ಸಾಗುತ್ತವೆ. ಪೂರ್ವೋಕ್ತ ಇಡಾ, ಪಿಂಗಳಗಳು ಮೂಗಿನ ಒಳಗಿನವರೆಗೆ ಚಲಿಸಿವೆ. ಅಥವಾ ಗಾಂಧಾರೀ, ಹಸ್ತಿಜಿಹ್ವಾ ಎಂಬ ಎರಡು ನಾಡೀಗಳು ಸ್ವಾಧಿಷ್ಠಾನಚಕ್ರದಲ್ಲಿ ಉಗಮಿಸಿ ನಾಡೀಚಕ್ರದಲ್ಲಿ ಒಂದಾಗಿ ಸ್ವಾಭಾವಿಕವಾಗಿ ಮೂಗಿನ ಕೊನೆಯವರೆಗೆ ಹೋಗಿವೆ, ತಲೆ ಎತ್ತಿರುವ ಸ್ಥಿತಿಯಲ್ಲಿ ಕಣ್ಣುಗಳವರೆಗೆ ಸಾಗಿವೆ ಎಂಬ ಯೋಜನೆಯು.

ಮುಂದೆ ಇತರ ನಾಡೀಉಗಮಸ್ಥಾನವನ್ನು ಹೇಳುವ **ನಾಭಿಮಂಡಲಮಿತಿ.** ಮಣಿಪೂರಚಕ್ರಸ್ಥಾನ ಎಂಬ ಅರ್ಥದಲ್ಲಿ. ನಾಭಿಮಂಡಲಕ್ಕೆ ಉಪಮೆಯಾಗಿ **ಕುಕ್ಕುಟಾಂಡಮಿವೇತಿ.** ನಾಭಿಮಂಡಲವನ್ನು ಆಶ್ರಯಿಸಿ ಅದರ ಪಾರ್ಶ್ವಗಳಿಂದ ಪೂಷಾ, ಅಲಂಬುಸಾ ಎಂದು ಪ್ರಸಿದ್ಧವಾದ ಎರಡು ನಾಡೀಗಳು ಕಿವಿಗಳವರೆ ಸಾಗುತ್ತವೆ. ಅವುಗಳಂತೆ ನಾಭಿಮಂಡಲದಿಂದ ಉಗಮಿಸುವ ಶುಕ್ಲಾಹ್ವಯಾ ಎಂಬ ಶುಕ್ಲವರ್ಣದ ನಾಡೀಯು ಭ್ರೂಮಧ್ಯದವರೆಗೆ ಸಾಗಿದೆ. ಅದರಂತೆಯೇ ಸರಸ್ವತ್ಯಾಹ್ವಯಾ ನಾಡೀಯು ನಾಲಗೆಯ ಕೊನೆಯವರೆಗೆ ಪ್ರಸಾರವಾಗಿ ಮಾತಿನ ಪ್ರಸಾರಕ್ಕೆ ಕಾರಣವಾಗಿದೆ. ಅವುಗಳ ಹೊರತಾಗಿ ವಿಶ್ವೋದರೀ ಹೆಸರಿನ ನಾಡೀಯು ಇರುವುದು ಮತ್ತು ಅದು ಲೇಹ್ಯ, ಚೋಷ್ಯ, ಭೋಜ್ಯ, ಭಕ್ಷ್ಯ ಎಂಬ ನಾಲ್ಕುವಿಧದ ಅನ್ನಗಳನ್ನು ಜಠರಾಗ್ನಿಯು ಪಚನಮಾಡಲು ಪಾಚಕರಸವನ್ನು ಸುರಿಸುವುದು. ಪಯಸ್ವಿನೀ ಎಂಬ ಇನ್ನೊಂದು ನಾಡೀಯು ಪೇಯ, ನೀರು ಕುಡಿಯಲು ಕಂಠಸ್ಥಾನದಲ್ಲಿದ್ದು ಬಾಯಾರಿಕೆಯನ್ನು ಉಂಟುಮಾಡುತ್ತದೆ. ವಿಶ್ವೋದರೀಯು ಜಠರದಲ್ಲಿಯೂ, ಪಯಸ್ವಿನೀಯು ಕಂಠದಲ್ಲಿಯೂ ಇರುವ ನಾಡೀಗಳು ಎಂದು ತಿಳಿಯುವುದು.

ಇವೆಲ್ಲವೂ ಊರ್ಧ್ವಮುಖವಾದ ನಾಡೀಗಳಾದರೆ, ಅಧೋಮುಖವಾಗಿ ಉಪಕ್ರಮಿಸುವ ನಾಡೀಗಳನ್ನು ತಿಳಿಸುವ **ನಾಡೀಚಕ್ರಾದಿತಿ.** ಅರ್ಥವು ಸ್ಪಷ್ಟವಾಗಿದೆ. ಇತರ ನಾಡೀಗಳಲ್ಲಿ ಶಂಖಿನೀ ಹೆಸರಿನ ನಾಡೀ ನಾಡೀಚಕ್ರದಲ್ಲಿಯೇ ಉಗಮಿಸಿ ಜೀರ್ಣಿಸಿದ ಅನ್ನರಸಸಾರವನ್ನು ಸ್ವೀಕರಿಸಿ ಮಸ್ತಕದಲ್ಲಿರುವ ಸಹಸ್ರಾರಪದ್ಮದ ಸ್ಥಾನದಲ್ಲಿ (ಕಪಾಲಕುಹರ) ಅಮೃತವನ್ನು ಸಂಗ್ರಹಣೆಮಾಡುತ್ತದೆ. ಅದನ್ನು ಲಂಬಿಕಾಯೋಗವನ್ನವಲಂಬಿಸಿ ಪಡೆಯಬಹುದು ಎಂದು ಯೋಗಿಗಳು ತಿಳಿದಿದ್ದಾರೆ. ಏನು ಮಾಡಿ? ಶಿರದಲ್ಲಿರುವ ಕಪಾಲದ ಅವಕಾಶಕ್ಕೆ ಪ್ರವೇಶಿಸಿ ಪಡೆಯಬಹುದು. [4–16..22]

ಯೋಗಿಗಳು ಹೇಳುವಂತೆ, ಅಮೃತರಸವನ್ನು ಶಿರೋಭಾಗದಲ್ಲಿರುವ ಸಹಸ್ರಾರ ಪದ್ಮದಲ್ಲಿ ಲಂಬಿಕಾಯೋಗದ ಸಹಾಯದಿಂದ ಪಡೆಯಬಹುದು (ಅಧ್ಯಾಯ 9–32).

शतं चैका च नाडस्स्युस्तासामेका शिरोगता ॥ २२ ॥
तयोर्ध्वमायन्मुक्तस्स्यादिति वेदांतशासनम् ।

ಶತಂ ಚೈಕಾ ಚ ನಾಡ್ಯಸ್ಸ್ಯಸ್ತಾಸಾಮೇಕಾ ಶಿರೋಗತಾ ॥ 22 ॥
ತಯೋರ್ಧ್ವಮಾಯನ್ಮುಕ್ತಸ್ಸ್ಯಾದಿತಿ ವೇದಾಂತಶಾಸನಮ್ ।

ನೂರಾ ಒಂದು ನಾಡಿಗಳಿವೆ. ಅವುಗಳಲ್ಲಿ ಒಂದು ಊರ್ಧ್ವಮುಖವಾಗಿ ಚಲಿಸಿ ಶಿರವನ್ನು ಸೇರುತ್ತದೆ. ಅದರ ಮೂಲಕ ಮೇಲೆ ಹೋದವನು ಮುಕ್ತನಾಗುತ್ತಾನೆ ಎಂದು ವೇದಾಂತವು ಕಲಿಸುತ್ತದೆ. [4–22..23]

ವಿವೃತ್ತಿ

ಇನ್ನೂ ಎಷ್ಟಿವೆ? ಪ್ರಾಣ, ಇಂದ್ರಿಯ, ಮನಃ ಪ್ರಸಾರವಾಗುವ ಮಾರ್ಗದಂತಿರುವ ನೂರಾರು ನಾಡಿಗಳಿವೆ ಎಂದು ಉಪಸಂಹರಿಸುವ **ಶತಂ ಚೈಕಾ ಚೇತಿ.** ಅವುಗಳಲ್ಲಿ ನೂರೊಂದು ನಾಡೀಗಳ ಮಧ್ಯದಲ್ಲಿ ಒಂದಾದ ಸುಷುಮ್ನಾ ಹೆಸರಿನ ನಾಡೀಯು ಬ್ರಹ್ಮರಂಧ್ರವನ್ನು ಸೇರುತ್ತದೆ. ಅದರ ಕಾರ್ಯವನ್ನು ತಿಳಿಸಲು **ತಯೋತಿ.** ಆ ನಾಡೀಯು ಊರ್ಧವಾಗಿ ಅರ್ಚಿರಾದಿ ಮಾರ್ಗದಲ್ಲಿ ಬ್ರಹ್ಮಲೋಕದ ಕಡೆಗೆ ಯಾನಮಾಡಿ ***ಮುಕ್ತಸ್ಸ್ಯಾತ್*** ಸಂಸಾರಬಂಧನದಿಂದ ಮುಕ್ತನಾದವನನ್ನು ಕೊಂಡೊಯ್ಯುವುದು ಎಂದು ***ವೇದಾಂತಶಾಸನಮ್*** ವೇದಾಂತಗಳಲ್ಲಿ ಹೇಳಲಾಗಿದೆ. ಹಾಗೆಂದಿರುವ ವೇದಾಂತವಾಕ್ಯವು: 'ಶತಂ ಚೈಕಾ ಚ ಹೃದಯಸ್ಯ ನಾಡ್ಯಸ್ತಾಸಾಂ ಮೂರ್ಧಾನಮಭಿನಿಸ್ಸೃತೈಕಾ । ತಯೋರ್ಧ್ವಾಯನ್ನಮೃತತ್ವಮೇತಿ ವಿಷ್ವಂಗನ್ಯಾ ಉತ್ಕ್ರಮಣೇ ಭವಂತಿ ॥ (ಕಠ ಉ.6–16). [4–22..23]

ಕಠೋಪನಿಷತ್ತಿನ 6 – 16ನೇ ಅಧ್ಯಾಯದಲ್ಲಿ ಈ ವಿಷಯ ಬಂದಿದೆ.

ಜಾಗ್ರತ ಅವಸ್ಥೆ

यदा बुद्धिगतैः पुण्यैः प्रेरितेंद्रियमार्गतः ॥ २३ ॥
शब्दादीन् विषयवान् भुङ्क्ते तदा जागरितं भवेत् ।

ಯದಾ ಬುದ್ಧಿಗತೈಃ ಪುಣ್ಯೈಃ ಪ್ರೇರಿತೇಂದ್ರಿಯಮಾರ್ಗತಃ ॥ 23 ॥
ಶಬ್ದಾದೀನ್ ವಿಷಯಾನ್ ಭುಂಕ್ತೇ ತದಾ ಜಾಗರಿತಂ ಭವೇತ್ ।

ಆತ್ಮನು, ಬುದ್ಧಿಯಲ್ಲಿ ಅಂತರ್ಗತವಾಗಿರುವ ಪುಣ್ಯ – ಪಾಪಗಳ ದೆಸೆಯಿಂದ ವರ್ತಿಸುವ ಇಂದ್ರಿಯಗಳ ಮೂಲಕ ಶಬ್ದ ಮುಂತಾದ ಸಂವೇದನೆಗಳನ್ನು ಪಡೆದಾಗ, ಅದು ಜಾಗ್ರತ ಅಥವಾ ಎಚ್ಚರದ ಸ್ಥಿತಿ. [4–23–24]

ವಿವೃತ್ತಿ

ಇಲ್ಲಿ ನಾಡೀಭೇದಗಳನ್ನು ಮತ್ತು ಅವುಗಳ ಸ್ವಾಭಾವಿಕ ಕಾರ್ಯಗಳ ಪ್ರಯೋಜನಗಳನ್ನು ತಿಳಿಸಿ ಚಿದಾತ್ಮನ ಮೂರು ಅವಸ್ಥೆಗಳ ಯೋಗವನ್ನು ವಿವರಿಸಲು **ಯದಾ ಬುದ್ಧಿಗತೈರಿತಿ.** ಇದರ ಅರ್ಥವು ಹೀಗಿದೆ: ಯಾವುದೇ ಕರ್ಮಗಳನ್ನು ಆಚರಿಸುವ ಜೀವನು, ಬುದ್ಧಿಯ ಮೂಲಕ ಪ್ರಕಟವಾದ ತನ್ನ ಚಿದಾಭಾಸದಿಂದಲೇ, ಅದರಿಂದ ಹೊರತಾಗಿರದೇ ಮಾಡುವನು, ಸ್ವತಃ ಅಲ್ಲ. ಮತ್ತು ಮಾಡಿರುವ ಎಲ್ಲಾ ಕರ್ಮಗಳಿಂದಾದ ಅತಿಶಯಗಳು ಬುದ್ಧಿಯಲ್ಲಿಯೇ ಇರುವುದಾಗಿ, ಅವುಗಳನ್ನೇ ಪುಣ್ಯ ಎಂದು ಹೇಳಿದೆ. ಹಾಗೆ ಬುದ್ದಿಯಲ್ಲಿರುವ ಪುಣ್ಯದಿಂದ ಪ್ರೇರಿತವಾಗುವುವು ಇಂದ್ರಿಯಗಳು. ಪುಣ್ಯಗ್ರಹಣವು ಶ್ರೇಷ್ಠವೆಂಬ ಅಭಿಪ್ರಾಯವಿದೆ ಆದರೆ ಪಾಪ ವಿವರಣೆಯು ಅಕಲ್ಯಾಣಕಾರಕ ಎಂದು ಕಂಡುಬರುವುದು, 'ತಸ್ಮಾತ್ತೇನೋಭಯಂ ಪಶ್ಯತಿ' (ಛಾ.ಉ.1–2–4) ಮುಂತಾದ

ಶ್ರುತಿಯಂತೆ. ಪೂರ್ವೋಕ್ತ ನಾಡೀಗಳು ಇಂದ್ರಿಯಗೋಳಕ ಸ್ಥಾನಗಳಲ್ಲಿ ಪಸರಿಸಿದ್ದು, ದೇಶಕಾಲ ನಿಮಿತ್ತವಾಗಿ ಉದ್ಭವಿಸಿದ ಪುಣ್ಯ-ಪಾಪಗಳಿಂದ ಪ್ರೇರಿತವಾದ ಇಂದ್ರಿಯಮಾರ್ಗದಲ್ಲಿ ದೇಹಾವಕಾಶದಿಂದ ಹೊರಗೆ ಪ್ರಕಟವಾದಾಗ ಚಿದಾತ್ಮನು ಶಬ್ದ ಮುಂತಾದ ದೇಹಬಾಹ್ಯ ವಿಷಯಗಳ ***ಭುಂಕ್ತೇ*** ಪ್ರತ್ಯಕ್ಷ ಮುಂತಾದ ಪ್ರಮಾಣಗಳನ್ನು ಅನುಭವಿಸುವುದು ಅವನ ಜಾಗ್ರತ ಅವಸ್ಥೆಯಾಗಿರುವುದು ಎಂಬ ಅರ್ಥವು. ಹಾಗಾಗಿ 'ಇಂದ್ರಿಯೈರರ್ಥೋಪಲಬ್ಧಿರ್ಜಾಗರಿತಮ್' ಎಂದು ಹೇಳಿದೆ. [4–23..24]

ಜೀವನು ನಿಷ್ಕ್ರಿಯನಾಗಿರುವಾಗ ಅವನು ಸ್ವಯಂ ಹಾಗೆ ಮಾಡುವುದಿಲ್ಲ; ಬುದ್ಧಿಯಲ್ಲಿ ಪ್ರತಿಬಿಂಬದ ರೀತಿಯಲ್ಲಿ ಪ್ರವೇಶಿಸಿ ತನ್ನನ್ನು ತಾನು ಅದರೊಂದಿಗೆ ಗುರುತಿಸಿಕೊಂಡಾಗ ಮಾತ್ರ ಎಂಬುದು ನಿಶ್ಚಯ. ಹಾಗಾಗಿ ಬುದ್ಧಿಯು ಒಳ್ಳೆಯ ಯಾ ಕೆಟ್ಟ ಕಾರ್ಯಗಳಿಂದ ಪ್ರಭಾವಿತವಾಗುತ್ತದೆ ಮತ್ತು ಅದಕ್ಕೆ ತಕ್ಕಂತೆ ಅದರ ಸ್ವಭಾವ ಬದಲಾಗುತ್ತದೆ. ಸೂಕ್ತ ಸಮಯ, ಪರಿಸರ ಮತ್ತಿತರ ವಿಷಯಗಳು ಪುಣ್ಯ ಯಾ ಪಾಪದ ಫಲವನ್ನು ನೀಡಲು ತಯಾರಾಗಿದ್ದರೆ, ಆಗ ಅಂತಃಕರಣವು ಇಂದ್ರಿಯಗಳನ್ನು ಪ್ರಚೋದಿಸುತ್ತದೆ. ಇಂದ್ರಿಯಗಳು, ಅಂತಃಕರಣದ ಆವಾಸವಾದ ಹೃದಯದಿಂದ ಆರಂಭವಾಗಿ ಭೌತಿಕ ಇಂದ್ರಿಯಗಳನ್ನು ತಲುಪಿದಾಗ, ಆತ್ಮವು ಶಬ್ದ ಮುಂತಾದ ಸಂವೇದನೆಗಳನ್ನು, ದೇಹದೊಂದಿಗೆ ಯಾ ದೇಹದ ಸಹಾಯವಿಲ್ಲದೆ ಗ್ರಹಿಸುತ್ತದೆ. ಇದನ್ನು ಜೀವನ ಜಾಗ್ರತ ಅವಸ್ಥೆ ಎನ್ನುತ್ತಾರೆ. ಹೀಗೆ ಜಾಗ್ರತ ಅವಸ್ಥೆಯಲ್ಲಿ ಇಂದ್ರಿಯಗಳ ವಿಷಯಗಳನ್ನು ಇಂದ್ರಿಯಗಳ ಮೂಲಕ ಅರಿತುಕೊಳ್ಳುವ ಕಾರ್ಯ ಜರಗುತ್ತದೆ.

ಸ್ವಪ್ನಾವಸ್ಥೆ

संहृतेष्विंद्रियेष्वेषु जाग्रत्संस्कारजान्पुमान् ॥ २४ ॥
मानसान्विषयान्भुङ्क्ते स्वप्नावस्था तदा भवेत् ।

ಸಂಹೃತೇಷ್ವಿಂದ್ರಿಯೇಷ್ವೇಷು ಜಾಗ್ರತ್ಸಂಸ್ಕಾರಜಾನ್ಪುಮಾನ್ ॥ 24 ॥
ಮಾನಸಾನ್ವಿಷಯಾನ್ಭುಂಕ್ತೇ ಸ್ವಪ್ನಾವಸ್ಥಾ ತದಾ ಭವೇತ್ ।

ಜ್ಞಾನೇಂದ್ರಿಯಗಳನ್ನು ಬಾಹ್ಯ ಪ್ರಪಂಚದಿಂದ ಹಿಂತೆಗೆದುಕೊಂಡಾಗ, ಜಾಗ್ರತ ಅವಸ್ಥೆಯಲ್ಲಿ ಪಡೆದ ಅನುಭವಗಳ ಮಾನಸಿಕ ಛಾಯೆಗಳು ಆತ್ಮನ ಅರಿವಿನಲ್ಲಿರುತ್ತದೆ. ಇದನ್ನು ಸ್ವಪ್ನ ಅವಸ್ಥೆ (ಕನಸು) ಎನ್ನುತ್ತಾರೆ. [4–24..25]

ವಿವೃತ್ತಿ

ಸ್ವಪ್ನಾವಸ್ಥೆಯ ಪ್ರಾಪ್ತಿಯನ್ನು ತಿಳಿಸಲು **ಸಂಹೃತೇಷ್ವಿತಿ.** ಈ ಇಂದ್ರಿಯಗಳು ದೇಹದಲ್ಲಿರುವ ನಾಡೀಗಳಲ್ಲಿ ಉಪಸಂಹರಿಸಲ್ಪಟ್ಟಾಗ ನಾಡೀಜಾಲದ ಸೂತ್ರವಾದ ಅಂತಃಕರಣವು, ಪ್ರಾಣ ಸಹಿತವಾಗಿ ಆಯಾಯ ಗೋಳಕಸ್ಥಾನಗಳ ಒಳಗೆ ಇರುವುದು ಎಂಬ ಅರ್ಥ. ಆಗ ಆ ವ್ಯಕ್ತಿಯ ಆತ್ಮವು ಮನಸಿನಲ್ಲಿರುವ ಜಾಗ್ರದಾವಸ್ಥೆಯ ಸಂಸ್ಕಾರ ಪರಿಣಾಮ ರೂಪದ ವಿಷಯಗಳನ್ನು ಅನುಭವಿಸಿದರೆ, ಅದು ಸ್ವಪ್ನಾವಸ್ಥೆ ಆಗುವುದು. ಹಾಗಾಗಿ 'ಕರಣೇಷೂಪಸಂಹೃತೇಷು ಜಾಗರಿತಸಂಸ್ಕಾರಜಃ ಪ್ರತ್ಯಯಃ ಸವಿಷಯಃ ಸ್ವಪ್ನಃ' ಎಂದು ಹೇಳಿರುವುದು. [4–24..25]

ಇಂದ್ರಿಯಗಳನ್ನು ನಾಡೀಗಳ ಅವಕಾಶದೊಳಗೆ ಹಿಂತೆಗೆದುಕೋಂಡಾಗ, ಅಂದರೆ ಇಂದ್ರಿಯಗಳು ಸಂವಹಿಸುವ ನಾಡೀಗಳನ್ನು ಭೌತಿಕ ಇಂದ್ರಿಯಗಳ ಸಂಪರ್ಕದಿಂದ ಅಂತಃಕರಣದ (ಪ್ರಾಣವನ್ನು ಸೇರಿಸಿಕೊಂಡು) ಸಹಾಯದಿಂದ

ಹಿಂದೆಳೆದುಕೊಂಡರೆ, ಆತ್ಮನಿಗೆ ಬಾಹ್ಯ ವಸ್ತುಗಳ ಸಂವೇದನೆ ಇಲ್ಲವಾಗುತ್ತದೆ. ಆದರೆ ಅವನು ಜಾಗ್ರತ ಮನಸು ಪಡೆದ ನೆನಪುಗಳನ್ನು ಅನುಭವಿಸುತ್ತಾನೆ. ಇಂದ್ರಿಯಗಳನ್ನು ಹಿಂತೆಗೆದುಕೊಂಡಾಗ, ಜಾಗ್ರತ ಸ್ಥಿತಿಯ ಮನಸಿನ ಅನುಭವಗಳ ನೆನಪುಗಳು, ಸ್ವಪ್ನಾವಸ್ಥೆಯನ್ನು ಉಂಟುಮಾಡುತ್ತವೆ.

ಸುಷುಪ್ತಿ

मनसोप्युपसंहारस्सुषुप्तिरिति कथ्यते ॥ २५ ॥

ಮನಸೋಪ್ಯುಪಸಂಹಾರಸ್ಸುಷುಪ್ತಿರಿತಿ ಕಥ್ಯತೇ ॥ 25 ॥

ಮನಸನ್ನು ಕೂಡಾ ಬಾಹ್ಯ ಜಗತ್ತಿನಿಂದ ಹಿಂತೆಗೆದುಕೋಂಡರೆ, ಆಗ ಆ ಸ್ಥಿತಿಯನ್ನು ಸುಷುಪ್ತಿ ಎಂದು ಕರೆಯುತ್ತಾರೆ. [4–25]

ವಿವೃತ್ತಿ

ಸುಷುಪ್ತಿ ಅವಸ್ಥೆಯನ್ನು ವಿವರಿಸುತ್ತಾ **ಮನಸ ಇತಿ.** ವಾಸನೆಗಳಿಂದ ಕೂಡಿರುವ ಮನಸ್ಸಿನ ಕಾರಣರೂಪದ ಸ್ಥಿತಿಯನ್ನು ಉಪಸಂಹರಿಸುವುದು. ಅದು ಯಾವಾಗ ಸಾಧ್ಯವಾಗುವುದೋ, ಆಗ ಅಂತಹ ಆತ್ಮನು ಸುಷುಪ್ತಿಯಲ್ಲಿರುವನು ಎಂದು ಹೇಳಲಾಗಿದೆ. ಅಂತೆಯೇ 'ಸರ್ವಪ್ರಕಾರಜ್ಞಾನೋಪಸಂಹಾರೋ ಬುದ್ಧೇಃ ಕಾರಣಾತ್ಮನಾವಸ್ಥಾನಂ ಸುಷುಪ್ತಿಃ' ಎಂದು ಹೇಳಿರುವುದು. [4–25]

ಮನಸಿನ ವಾಸನೆಗಳು ಅಂದರೆ ಪಡೆದ ಅನುಭವಗಳು ಕಾರಣದ ಸ್ಥಿತಿಯನ್ನು ಪಡೆದಾಗ, ಅದು ಅವಿದ್ಯೆಯ ಸ್ಥಿತಿಯನ್ನು ಹೊಂದುತ್ತದೆ. ಅಂದರೆ ಬುದ್ಧಿಯು ಮನಸಿನ ಕಾರಣವಾದರೆ, ಎಲ್ಲಾ ರೀತಿಯ ಸಂವೇದನೆಗಳು ನಶಿಸುತ್ತವೆ ಹಾಗೂ ಈ ಸ್ಥಿತಿಯು ಸುಷುಪ್ತಿ ಎಂದೆನಿಸಿಕೊಳ್ಳುತ್ತದೆ.

ಹೀಗೆ ಆತ್ಮದ ಮೂರು ಅವಸ್ಥೆಗಳು, ಸ್ಥಿತಿ ಬದಲಾವಣೆಗೆ ಒಳಪಟ್ಟಿರುವ ಉಪಾಧಿಗಳ ದೆಸೆಯಿಂದ ಉಂಟಾಗುತ್ತವೆ; ಈ ಉಪಾಧಿಗಳು ಮಾಯೆಯಿಂದಾಗಿ ಸ್ವಪ್ರಕಾಶಿತ ಆತ್ಮನ ಸಂಪರ್ಕಕ್ಕೆ ಬರುತ್ತವೆ.

ಸತ್‌ಚಿತ್‌ಆನಂದರೂಪೀ ಆತ್ಮ

तस्मान्मायासमाच्छन्नस्सन्मात्रो वर्तते पुमान् ।
मूढो मत्तोज्ञ इत्येवं मायावेशात्प्रकाशते ॥ २६ ॥

ತಸ್ಮಾನ್ಮಾಯಾಸಮಾಚ್ಛನ್ನಸ್ಸನ್ಮಾತ್ರೋ ವರ್ತತೇ ಪುಮಾನ್ ।
ಮೂಢೋ ಮತ್ತೋಜ್ಞ ಇತ್ಯೇವಂ ಮಾಯಾವೇಶಾತ್ಪ್ರಕಾಶತೇ ॥ 26 ॥

ಆಗ ಪುರುಷನು ಮಾಯೆಯಿಂದ ಆವೃತನಾಗಿದ್ದರೂ, ಅವನ ಅಸ್ತಿತ್ವವು ಶುದ್ಧವಾಗಿರುತ್ತದೆ; ಅವನು ಮೂಢ, ಜಡ, ಮತ್ತ, ಅಜ್ಞ ಇತ್ಯಾದಿಯಾಗಿ ಬಾಹ್ಯ ಜಗತ್ತಿಗೆ ಮಾಯೆಯಿಂದಾಗಿ ಕಾಣುತ್ತಾನೆ. [4–26]

ವಿವೃತ್ತಿ

ಇವೆಲ್ಲವೂ ಉಪಾಧಿಗಳಿಂದಾಗಿರುವ ವಿಶೇಷಾವಸ್ಥೆಗಳೇ ಆಗಿದ್ದು, ಅಂತಹ ಉಪಾಧಿವಂತನಾದ ಚಿದಾತ್ಮನು ಜಾಗ್ರತ್ ಮುಂತಾದ ಆವಸ್ಥೆಗಳಲ್ಲಿದ್ದು, ಅಂತಹ ಪುರುಷನು ಮಾಯೆಯಿಂದ ಸಮಾವೃತ ಬ್ರಹ್ಮಭಾವದಲ್ಲಿದ್ದು ಸತ್ ಎಂದೇ ವ್ಯವಹಾರ ಯೋಗ್ಯನಾಗಿರುವನು. ಅಥವಾ ***ಸನ್ಮಾತ್ರೋ*** ನಿರ್ವಿಕಲ್ಪಕ ಸತ್ ಮಾತ್ರನಾಗಿರುವ ಪುರುಷನು ಮಾಯೆಯಿಂದ ಆವರಿಸಲ್ಪಟ್ಟು ವರ್ತಿಸುವನು ಎಂದು ಯೋಜನೆಯು. ಅದರ ಪರಿಣಾಮವನ್ನು ತಿಳಿಸಲು **ಮೂಢ ಇತಿ.** ಸ್ವಭಾವದಿಂದ ಚಿದಾನಂದರೂಪನಾಗಿದ್ದರೂ ಸಂದೇಹ, ವಿಪರ್ಯಾಸ, ಅಜ್ಞಾನ ಇತ್ಯಾದಿ ವಿಷಯಗಳಿಂದ ಅನ್ಯಥಾಭಾವದಿಂದ ಮೂಢತ್ವ ಮುಂತಾದವುಗಳ ಅವತಾರವಾಗುವುದು ಎಂಬ ಭಾವವು. [4–26]

ಆತ್ಮನು ಯಾವಾಗಲೂ ಮೂಲ ಅಸ್ತಿತ್ವವಾಗಿರುವ ಬ್ರಹ್ಮನೊಡನೆ ಒಂದಾಗಿರುತ್ತಾನೆ; ಮಾಯೆಯು ಅವನನ್ನು ಆವರಿಸಿ ಅವನ ನಿಜ ಸ್ವರೂಪವನ್ನು ಮುಚ್ಚುವುದರಿಂದ, ನಮ್ಮ ಅಸ್ತಿತ್ವವನ್ನು ನಾವು ತಿಳಿದುಕೊಂಡರೂ ನಾವು ವಾಸ್ತವವನ್ನು ಅರಿತಿರುವುದಿಲ್ಲ.

सुखमस्वाप्समित्येवं प्रबोधसाये पुमान् ।
सच्चिदानन्दरूपं च सम्यगेव प्रकाशते ॥ २७ ॥

ಸುಖಮಸ್ವಾಪ್ಸಮಿತ್ಯೇವಂ ಪ್ರಬೋಧಸಮಯೇ ಪುಮಾನ್ ।
ಸಚ್ಚಿದಾನಾಂದರೂಪಂ ಚ ಸಮ್ಯಗೇವ ಪ್ರಕಾಶತೇ ॥ 27 ॥

'ನಾನು ಸುಖವಾಗಿ ನಿದ್ದೆಮಾಡಿದೆ' ಹೀಗೆ ಯೋಚಿಸುವ ಪುರುಷನು ಎಚ್ಚರವಾಗುವಾಗ ಸತ್ ಚಿತ್ ಆನಂದ ರೂಪನಾಗಿ (ಅಸ್ತಿತ್ವವುಳ್ಳ ಸಂತೋಷಮಯ ಚಿತ್ತ) ಶುದ್ಧತೆಯಿಂದ ಪ್ರಕಟವಾಗುತ್ತಾನೆ. [4–27]

ವಿವೃತ್ತಿ

ಸರ್ವದಾ ಸ್ವಪ್ರಕಾಶಿತ ಚಿತ್ ಸದಾನಂದ ಸ್ವರೂಪನಾಗಿರುವನು ಈ ಆತ್ಮನು ಎಂದು ಅವನ ಲಕ್ಷಣವನ್ನು ತಿಳಿಸಲು **ಸುಖಮಸ್ವಾಪ್ಸಮಿತಿ.** ಸುಖವಾಗಿರುವೆನು ಎಂಬ ಸ್ವರೂಪವನ್ನು, ಪರಿಚಯವಿಲ್ಲದ ಸ್ವಪ್ರಕಾಶಿತ ಸದಾನಂದ ರೂಪವನ್ನು ಪರಾಮರ್ಶಿಸಿದೆ. ಸುಷುಪ್ತಿಯು ಪರಿಚಯವಿಲ್ಲದ ಸುಖವಾಗಿಲ್ಲ, ಅದು ಅದರ ಸಾಧನವಾಗಿರದಿರುವುದರಿಂದ. ಉಪಾಧಿಯಿಂದಾದ ವ್ಯವಹಾರವನ್ನು ಶಮನಗೊಳಿಸುವ ಸುಖಸಾಧನವೂ ಅಲ್ಲ, ಇತರ ನಿವೃತ್ತಿಗಳಲ್ಲಿ, ಇತರ ಉತ್ಪತ್ತಿಗಳಲ್ಲಿ ಕಾಣದಿರುವ ಅಸ್ಥಿರತೆ ಇರುವುದರಿಂದ. ದುಃಖದ ಅಭಾವವೇ ಸುಖ ಶಬ್ದದಿಂದ ಹೇಳುವುದು ಎಂದೂ ಅಲ್ಲ ಏಕೆಂದರೆ ಸುಷುಪ್ತಿಯು ಅನುಭವಸಾಧನವಾಗದಿರುವುದರಿಂದ, ಅನುಭವಿಸಿರದುದನ್ನು ಪರಾಮರ್ಶಿಸಲು ಆಗುವುದಿಲ್ಲ. ಸುಷುಪ್ತಿಯು ದುಃಖದ ಅಭಾವ ಸ್ಥಿತಿ ಎಂಬ ಅನುಮಾನ, ನೆನಪು ಆಗಿರಲೂ ಸಾಧ್ಯವಿಲ್ಲ, ಅದರ ಅರ್ಥವ್ಯಾಪ್ತಿಯನ್ನು ಸೀಮಿತಗೊಳಿಸುವುದರಿಂದ. ಹಾಗಿರುವಾಗ ಅವನ ಸ್ವಾಭಾವಿಕವಾದ ಸ್ವರೂಪವು ಸುಖಸ್ವರೂಪವಾಗಿದೆ. ಹೇಗೆ ನಿಷ್ಕ್ರಿಯ, ನಿರಂಶ ಚಿದಾತ್ಮನಿಗೆ ಶಯನ, ಗಮನ ಯಾ ಸ್ವ ಪ್ರಬೋಧಗಳು ಸ್ವತಃ ಸಂಭವಿಸುವುದಿಲ್ಲವೋ, ಹಾಗೆಯೇ ಉಪಾಧಿಗಳಿಂದ ಆಗಿರುವ ಇವೆಲ್ಲವೂ ಉಪಾಧಿಗಳ ಉಪಶಮನವಾದಾಗ ಇರುವುದೇ ನಿದ್ರಾವಸ್ಥೆಯು ಎಂದು ಉಲ್ಲೇಖಿಸಿದೆ. ಹಾಗಾಗಿ ಎಲ್ಲರೂ ನಿದ್ರಾವಸ್ಥೆಯಲ್ಲಿ ಸಚ್ಚಿದಾನಂದರೂಪದ ಆತ್ಮವೇ ಆಗಿರುವರು ಎಂಬ ಅರ್ಥ. [4–27]

'ಸುಖವಾಗಿ' ಎಂಬ ಶಬ್ದವು ಆತ್ಮದ ಸಹಜ ಸ್ಥಿತಿಯಾದ ಸ್ವಯಮ್ ಅಸ್ತಿತ್ವ ಮತ್ತು ಸಂತೋಷವನ್ನು ಸೂಚಿಸುತ್ತದೆ. 'ನಿದ್ದೆಮಾಡಿದೆ' ಶಬ್ದವು ಉಪಾಧಿಗಳ ಕ್ರಿಯಾಹೀನ ಸ್ಥಿತಿಯನ್ನು ಹೇಳುತ್ತದೆ. ಸುಷುಪ್ತಿಯಲ್ಲಿ

ಅನುಭವಿಸಿದ ಆನಂದವು ಅಪ್ರಯತ್ನಕ; ಅದು ಬಾಹ್ಯ ವಸ್ತುಗಳ ಪ್ರಚೋದನೆಯಿಂದ ಉಂಟಾಗುವುದಲ್ಲ, ಆಗ ಬಾಹ್ಯ ವಸ್ತುಗಳನ್ನು ಅನುಭವಿಸುವ ಇಂದ್ರಿಯಗಳು ಕ್ರಿಯಾಹೀನವಾಗಿರುತ್ತವೆ. ಜೀವನದ ಎಲ್ಲಾ ಕ್ರಿಯೆಗಳನ್ನು ಮತ್ತು ಸ್ವಜ್ಞಾನವನ್ನು ಬರೀ ನಿಲ್ಲಿಸಿಬಿಡುವುದರಿಂದ ಸಂತೋಷದ ಪ್ರಾಪ್ತಿಯಾಗುವುದಿಲ್ಲ; ಋಣಾತ್ಮಕ ಪರಿಸರಗಳಿಂದ ಧನಾತ್ಮಕ ಫಲಗಳುಂಟಾಗುವುದು ನಮ್ಮ ಅನುಭವದಲ್ಲಿಲ್ಲ. ಇಲ್ಲಿ ಅನುಭವಿಸಿದ ಸಂತೋಷವು, ನೋವಿನ ಸಂವೇದನೆಗಳು ಇಲ್ಲದಿರುವುದರಿಂದಾಗಿ ಋಣಾತ್ಮಕವೆಂದೂ ಭಾವಿಸಬಾರದು; ಯಾಕೆಂದರೆ ಆಗ ನೋವನ್ನು ಅನುಭವಿಸುವ ಅಂಗಗಳು ಇರುವುದಿಲ್ಲ ಹಾಗೂ ಯಾವುದನ್ನು ಅನುಭವಿಸಿಲ್ಲವೋ ಅದನ್ನು ನೆನಪಿಸಿಕೊಳ್ಳಲಾಗುವುದಿಲ್ಲ. 'ನಾನು ಸುಖವಾಗಿ ನಿದ್ರೆಮಾಡಿದೆ' ಎಂಬ ಭಾವನೆಯು ನಾವು ಅನುಭವಿಸಿದ್ದನ್ನು ನೆನಪಿಸಿಕೊಳ್ಳುವುದು. ಹೀಗೆ ನಿದ್ದೆಯಲ್ಲಿ ಸಂತೋಷದ ಅನುಭವಗಳು ಆತ್ಮದ ಸ್ವಪ್ರಕಾಶಿತ ಆನಂದ ಸ್ಥಿತಿಯನ್ನು ತೋರಿಸುತ್ತದೆ. ಬದಲಾವಣೆಯಿಲ್ಲದ, ಅಂಗಗಳಿಲ್ಲದ ಸ್ವಜ್ಞಾನವುಳ್ಳ ಆತ್ಮವನ್ನು ತನ್ನಲ್ಲಿ ತಾನೇ ಮಲಗಿರುವಂತೆ ಯಾ ಚಲಿಸುವಂತೆ ಯಾ ಬಿದ್ದು ಕೊಂಡಿರುವಂತೆ ಹೇಳಲಾಗದು. ಈ ಸ್ಥಿತಿಗಳಿರುವ ಉಪಾಧಿಗಳೊಂದಿಗಿನ ಅದರ ಸಂಪರ್ಕದಿಂದ ಇವೆಲ್ಲವೂ ಕಂಡುಬರುತ್ತವೆ. ಆದುದರಿಂದ, 'ನಾನು ಮಲಗಿದೆ' ಎಂಬುದು ಸುಷುಪ್ತಿಯಲ್ಲಿ ಉಪಾಧಿಗಳ ನಿಷ್ಕ್ರಿಯತೆಯನ್ನು ಸೂಚಿಸುತ್ತದೆ; ಆತ್ಮವು ಮಾತ್ರ ಮೊದಲಿನಂತೆಯೇ ಸತ್–ಚಿತ್–ಆನಂದ ರೂಪದಲ್ಲಿಯೇ ಇರುತ್ತದೆ.

ಈಶ್ವರ, ಪ್ರಕಾಶ ಮತ್ತು ಅಸ್ತಿತ್ವ

इत्थं जगत्समाविश्य भासमाने महेश्वरे ।
सूर्यादयोपि भासन्ते किमुतान्ये घटादयः ॥ २८ ॥

ಇತ್ಥಂ ಜಗತ್ಸಮಾವಿಶ್ಯ ಭಾಸಮಾನೇ ಮಹೇಶ್ವರೇ ।
ಸೂರ್ಯಾದಯೋಽಪಿ ಭಾಸಂತೇ ಕಿಮುತಾನ್ಯೇ ಘಟಾದಯಃ ॥ 28 ॥

ಸಂಪೂರ್ಣ ವಿಶ್ವವನ್ನು ಪ್ರವೇಶಿಸಿ ತನ್ನನ್ನು ಪ್ರಕಟಗೊಳಿಸಿದ ಮಹೇಶ್ವರನಿಂದ, ಸೂರ್ಯ ಮತ್ತಿತರ ಬೆಳಕಿನ ಆಕರಗಳು ಹೊಳೆಯುತ್ತವೆ; ಮತ್ತೆ ಮಡಕೆ ಮತ್ತಿತರ ವಸ್ತುಗಳ ಕಥೆಯೇನು? [4–28]

ವಿವೃತ್ತಿ

ಇಂತು ವರ್ಣಿಸಿರುವ ಮೂಲ ವಿಷಯಗಳನ್ನು ವಿಶದಪಡಿಸುವ **ಇತ್ಥಮಿತಿ.** ಜಗತ್ಕಾರಣನ ಕಾರ್ಯವು ಅಜ್ಞಾನದಿಂದ ಎರಡು ರೂಪವಾಗಿ ದೃಷ್ಟವಾಗುವುದು. ಅಧ್ಯಾತ್ಮಿಕವಾಗಿ ವಿಶ್ವ, ತೈಜಸ, ಪ್ರಾಜ್ಞ ರೂಪದಲ್ಲಿಯೂ, ಅಧಿದೈವಿಕವಾಗಿ ವೈಶ್ವಾನರ, ಹಿರಣ್ಯಗರ್ಭ, ಅವ್ಯಾಕೃತ ರೂಪದಲ್ಲಿಯೂ ಭಾಸವಾಗುವ ಮಹೇಶ್ವರನೇ ನಿಜವಾಗಿ ಸೂರ್ಯ ಮುಂತಾದವರ ಸರ್ವಾರ್ಥಪ್ರಕಾಶಕವಾದ ಪ್ರಕಾಶಸ್ವಭಾವವಾಗಿ ಭಾಸವಾಗುವನು, ಅವರಿಗೆ ಸ್ವತಃ ಆ ಮಹಿಮೆಯಿಲ್ಲ. ಅವರುಗಳ ಅಪ್ರಕಾಶತೆಯು ಸ್ವಾಭಾವಿಕವಾಗಿಯೇ ಪ್ರಸಿದ್ಧವಾಗಿರುವಾಗ, ಮಡಕೆ ಮುಂತಾದವುಗಳ ವಿಷಯವಾಗಿ ಅವು ಹೇಗೆ ಸ್ವಾಭಾವಿಕವಾಗಿ ಪ್ರಕಾಶಿಸಲು ಸಾಧ್ಯ ಎಂಬ ಶಂಕೆ ಏಳುವುದು. [4–28]

ಬ್ರಹ್ಮಾಂಡದ ಮತ್ತು ವ್ಯಕ್ತಿಯ ಉಪಾಧಿಗಳಲ್ಲಿ ಬ್ರಹ್ಮನ ಪ್ರಕಟ ರೂಪವನ್ನು ಈ ರೀತಿ ಪಟ್ಟಿ ಮಾಡಬಹುದು:

ಸಮಷ್ಟಿ (ಅಧಿದೈವ, ಕಾರಣ)		ವ್ಯಷ್ಟಿ (ಅಧ್ಯಾತ್ಮ, ಕಾರ್ಯ)		ಸ್ಥಿತಿ
ಉಪಾಧಿ	ಪ್ರಕಟ ರೂಪ	ಉಪಾಧಿ	ಪ್ರಕಟ ರೂಪ	

ಅವ್ಯಾಕೃತ ಯಾ ಅವ್ಯಕ್ತ	*ಈಶ್ವರ ಯಾ ಅಕ್ಷರ	ಕಾರಣ ಶರೀರ	ಪ್ರಾಜ್ಞ	ಸುಷುಪ್ತಿ
ಹಿರಣ್ಯಗರ್ಭ	ಸೂತ್ರಾತ್ಮ	ಲಿಂಗ ಶರೀರ	ತೈಜಸ	ಸ್ವಪ್ನ
ವಿರಾಟ್	ವೈಶ್ವಾನರ	ಸ್ಥೂಲ ಶರೀರ	ವಿಶ್ವ	ಜಾಗ್ರತ

*ಟಿಪ್ಪಣಿ * – ಅವ್ಯಾಕೃತ ಎಂಬ ಉಪಾಧಿಯ ಮೂಲಕ ಬ್ರಹ್ಮನು ಪ್ರಕಟವಾದಾಗ ಮತ್ತು ಉಪಾಧಿಗಳನ್ನು ಮೀರಿಯೂ ಕೂಡಾ, ಅವನನ್ನು ಈಶ್ವರನೆನ್ನುತ್ತಾರೆ.*

तस्मात्सत्ता च भावानामीश्वराश्रयणाश्रया ।
सत्यं ज्ञानमनन्तं च श्रुत्या बह्मोपदिश्यते ॥ २९ ॥

ತಸ್ಮಾತ್ಸತ್ತಾ ಚ ಭಾವಾನಾಮೀಶ್ವರಾಶ್ರಯಣಾಶ್ರಯಾ ।
ಸತ್ಯಂ ಜ್ಞಾನಮನಂತಂ ಚ ಶ್ರುತ್ಯಾ ಬ್ರಹ್ಮೋಪದಿಶ್ಯತೇ ॥ 29 ॥

ಆದುದರಿಂದ ಎಲ್ಲಾ ವಸ್ತುಗಳು ಈಶ್ವರನನ್ನು ಆಶ್ರಯಿಸಿ, ಅವನಿಂದ ಅಸ್ತಿತ್ವ ಮತ್ತು ಬೆಳಕನ್ನು ಪಡೆಯುತ್ತವೆ. ಬ್ರಹ್ಮನು ನಿತ್ಯ ಸತ್ಯನು, ಜ್ಞಾನ ಸ್ವರೂಪನು ಹಾಗೂ ಅನಂತನು ಎಂದು ಶ್ರುತಿಗಳು ಘೋಷಿಸಿವೆ. [4–29]

ವಿವೃತ್ತಿ

ಆದುದರಿಂದ ಈಶ್ವರನೇ ಸತ್ತಾಸ್ಫುರಣೆಯಾಗುವವನು ಎಂದು ನಿಶ್ಚಯಿಸಿ, ಬೇರಾವ ಕಾರಣದಿಂದಲೂ ಅಲ್ಲದೆ ಅವನ ಸಂಪರ್ಕದಿಂದ ಮಾತ್ರವೇ ಅದು ಆಗುವುದು ಎಂಬುದು ಸಿದ್ಧವಾಗಿದೆ ಎಂದು ಹೇಳಿ ಉಪಸಂಹರಿಸಲು **ತಸ್ಮಾದಿತಿ.** ಈಶ್ವರನನ್ನು ಆಶ್ರಯಿಸಿರುವುದು *ಈಶ್ವರಾಶ್ರಯಣಾ,* ಈಶ್ವರನ ವ್ಯಾಪ್ತಿಯನ್ನು ಆಶ್ರಯಿಸಿರುವುದು *ಈಶ್ವರಾಶ್ರಯಣಾಶ್ರಯಾ,* ಈಶ್ವರನಲ್ಲಿ ಅಧ್ಯಸ್ತವಾಗಿರುವ ವಿಷಯವನ್ನು ಆಶ್ರಯಿಸಿರುವುದು, ತನ್ನ ಸ್ವರೂಪದಲ್ಲಿರುವ ಸತ್ ವಿಷಯದಲ್ಲಿರುವ ಎಂದು ಅಲ್ಲ. ಈಶ್ವರನು ಸತ್ ಜ್ಞಾನ ಸ್ವರೂಪನಾಗಿರುವುದಕ್ಕೆ ಪ್ರಮಾಣವಾಗಿ **ಸತ್ಯಂ ಜ್ಞಾನಮಿತಿ.** ***ಸತ್ಯಂ ಜ್ಞಾನಂ ಅನಂತಂ*** ಶಬ್ದಗಳು ಬ್ರಹ್ಮನ ಲಕ್ಷಣವನ್ನು ಹೇಳುತ್ತವೆ, 'ಸತ್ಯಂ ಜ್ಞಾನಮನಂತಂ ಬ್ರಹ್ಮ' (ತೈ.ಉ.2–1) ಎಂಬ ವಚನದಂತೆ. ಲಕ್ಷಣವನ್ನು ಸಜಾತೀಯ–ವಿಜಾತೀಯ ಎಂದು ವಿವರಿಸಿದರೂ ಅದು ಸತ್‌ಸ್ವರೂಪಮಾತ್ರವಾಗಿ ಪರ್ಯವಸಾನವಾಗುವುದು ಎಂದು ನ್ಯಾಯಿಕರು ಹೇಳುತ್ತಾರೆ, 'ಅಸಾಧಾರಣೋ ಧರ್ಮೋ ಲಕ್ಷಣಮ್' ಎಂದು. 'ಯತೋ ವಾ ಇಮಾನಿ ಭೂತಾನಿ ಜಾಯಂತೇ' (ತೈ.ಉ.3–1) ಮುಂತಾದ ವಾಕ್ಯಗಳಿಂದ ಬ್ರಹ್ಮನ ಉಪಲಕ್ಷಣಗಳಲ್ಲಿ ಜಗತ್ಕಾರಣತ್ವವು ಉಪಲಕ್ಷಿತವಾಗಿ ವಾದಿಗಳಿಂದ ಪರಿಕಲ್ಪಿತವಾದ ಪರಮಾಣುಪ್ರಧಾನವಾಗಿರುವುದು ಎಂಬುದು ಜಗತ್ಕಾರಣತ್ವವು ಬ್ರಹ್ಮನ ಸಜಾತೀಯ ಪ್ರಧಾನಲಕ್ಷಣವಾಗಿರುವುದು; ಭೂತ ಭೌತಿಕ ರೂಪದ ಕಾರ್ಯವರ್ಗಗಳು ವಿಜಾತೀಯ ಲಕ್ಷಣಗಳು. ಅವನ ಉಭಯವಿಧದ ರೂಪಗಳಲ್ಲಿಯೂ ಅನೃತ, ಜಡ, ಪರಿಚ್ಛಿನ್ನ ಸ್ವಭಾವದ ವಿವರಣೆಗಳು ಬ್ರಹ್ಮಸ್ವರೂಪದ ಬೋಧಕವಾದ ವಾಕ್ಯವಾಗಿಯೇ ಇರುವುದರಿಂದ, ಸತ್ಯ ಜ್ಞಾನದ ಸತ್ತಾಸ್ಫುರಣೆಯ ರೂಪವು ಬ್ರಹ್ಮನ ಅಸಾಧಾರಣ ಧರ್ಮವಾಗಿರುವುದು, ಹೊರತಾಗಿ ಇತರ ಯಾವುದೂ ಅಲ್ಲ ಎಂದು ನಿಶ್ಚಯಿಸಬಹುದು ಎಂಬ ಅಭಿಪ್ರಾಯವು. [4–29]

ಅಂದರೆ ವಸ್ತುಗಳಿಗೆ ತಮ್ಮದೇ ಆದ ಸ್ವಂತ ಅಸ್ತಿತ್ವವಿಲ್ಲ; ಅವು ಒಂದೇ ಅಸ್ತಿತ್ವವಾಗಿರುವ ಈಶ್ವರನ ಭ್ರಾಮಕ ಭಾವನೆಗಳ ಪ್ರಕಟ ರೂಪವಾಗಿವೆ.

जाग्रत्स्वप्नोद्भवं सर्वमसत्यं जडमन्धवत् ।

ಜಾಗ್ರತ್ಸ್ವಪ್ನೋದ್ಭವಂ ಸರ್ವಮಸತ್ಯಂ ಜಡಮಂಧವತ್ ।

ಜಾಗ್ರತ ಮತ್ತು ಸ್ವಪ್ನ ಸ್ಥಿತಿಯಲ್ಲಿ ಕಂಡುಬರುವ ಎಲ್ಲವೂ ಅಸತ್ಯ ಮತ್ತು ಜಡವಾಗಿವೆ, ಅಂಧನಂತೆ. [4–30]

ವಿವೃತ್ತಿ

ಅದನ್ನು ಶ್ರುತಿಯ ಬಲದಲ್ಲಿ ಸಿದ್ಧಗೊಳಿಸಲು **ಜಾಗ್ರದಿತಿ.** ಅಥವಾ ಶ್ರುತಿಯಲ್ಲಿ ಬ್ರಹ್ಮನು ಸತ್ಯ ಮುಂತಾಗಿ ಅವಧಾರಣೆಯ ಅರ್ಥ ಸಿದ್ಧಗೊಳಿಸಲು **ಜಾಗ್ರದಿತಿ.** ಅದಕ್ಕೆ ವಿರುದ್ಧವಾಗಿ ಜಾಗ್ರತ್ ಮತ್ತು ಸ್ವಪ್ನ ಸ್ಥಿತಿಯ ವಿಷಯಗಳು ಅಸತ್ಯ, ಜಡತ್ವಗಳಿಂದ ಕೂಡಿ ಮೃಗತೃಷ್ಣೆಯ ನೀರಿನಂತಿದೆ. ***ಜಡಂ*** ಪರಾಧೀನತೆ ಇರುವುದರಿಂದ ***ಅಂಧವತ್*** ಅಂಧ, ಹೆಳವ ಮುಂತಾದವರಂತೆ. [4–30]

ಅಹಂಕಾರದಂತೆ ಈಶ್ವರ

ईश्वरश्चाहमित्येवं भासते सर्वजन्तुषु ॥ ३० ॥

ಈಶ್ವರಶ್ಚಾಹಮಿತ್ಯೇವಂ ಭಾಸತೇ ಸರ್ವಜಂತುಷು ॥ 30 ॥

ಈಶ್ವರನು ಅಹಂಕಾರ ರೂಪದಿಂದ ಎಲ್ಲಾ ಜಂತುಗಳಲ್ಲಿ ಭಾಸವಾಗುತ್ತಾನೆ. [4–30]

ವಿವೃತ್ತಿ

ಹೀಗೆ ಸರ್ವ ಜಗತ್ತಿನ ಅಧಿಷ್ಠಾನರೂಪವಾಗಿರುವ ಎಲ್ಲರಲ್ಲಿಯೂ ಕಂಡುಬರುವ ಈಶ್ವರನನ್ನು ಸರ್ವ ಸತ್ತಾಸ್ಫುರತೆಯುಳ್ಳ ರೂಪನಾಗಿ ಉಪಪಾದಿಸಿ, ಹಿಂದಿನ ಶ್ಲೋಕದಲ್ಲಿ ಹೇಳಿರುವ ಅವನ ಪ್ರತ್ಯಗಾತ್ಮತ್ವವನ್ನು ತಿಳಿಸಲು **ಈಶ್ವರಶ್ಚಾಹಮಿತಿ.** ಎಲ್ಲಾ ಜಂತುಗಳಲ್ಲಿಯೂ 'ಅಹಂ ಇತಿ' ನಾನೇ ಇರುವುದು ಎಂದು ಈಶ್ವರನು ಭಾಸವಾಗುವನು. [4–30]

निर्विकल्पश्च शुद्धश्च मलिनश्चेत्यहं त्रिधा ।
निर्विकल्पं परं ब्रह्म निर्धूताखिलकल्पनम् ॥ ३१ ॥
धूळ्यान्धकारधूमाभ्रनिर्मुक्तगगनोपमम् ।

ನಿರ್ವಿಕಲ್ಪಶ್ಚ ಶುದ್ಧಶ್ಚ ಮಲಿನಶ್ಚೇತ್ಯಹಂ ತ್ರಿಧಾ ।
ನಿರ್ವಿಕಲ್ಪಂ ಪರಂ ಬ್ರಹ್ಮ ನಿರ್ಧೂತಾಖಿಲಕಲ್ಪನಮ್ ॥ 31 ॥
ಧೂಳ್ಯಾಂಧಕಾರಧೂಮಾಭ್ರನಿರ್ಮುಕ್ತಗಗನೋಪಮಮ್ ।

ವಿಕಲ್ಪಗಳಿಲ್ಲದ ಯಾ ಸಾರ್ವತ್ರಿಕ, ಶುದ್ಧ ಹಾಗೂ ಅಶುದ್ಧ ಎಂದು ಅಹಂಕಾರವು ಮೂರು ವಿಧವಾಗಿದೆ. ಸಾರ್ವತ್ರಿಕ ಅಹಂಕಾರವು ವಿಕಲ್ಪಗಳಿಲ್ಲದ ಪರಬ್ರಹ್ಮನೇ ಆಗಿದೆ; ಧೂಳು, ಕತ್ತಲೆ, ಹೊಗೆ ಮತ್ತು ಮೋಡಗಳಿಲ್ಲದ ಆಕಾಶದಂತೆ. [4–31..32]

ವಿವೃತ್ತಿ

ಅಹಂಕಾರದ ಭೇದಗಳನ್ನು ತಿಳಿಸಲು **ನಿರ್ವಿಕಲ್ಪಶ್ಚೇತಿ.** ಅದರಲ್ಲಿ ನಿರ್ವಿಕಲ್ಪನಾಗಿ ಅವಭಾಸವಾಗುವ ಈಶ್ವರ ವಿಷಯವನ್ನು ತಿಳಿಸಲು **ನಿರ್ವಿಕಲ್ಪಂ ಪರಂ ಬ್ರಹ್ಮೇತಿ.** ಬ್ರಹ್ಮನ ನಿರ್ವಿಕಲ್ಪತ್ವವನ್ನು ವಿಶದಗೊಳಿಸುವ **ನಿರ್ಧೂತಾಖಿಲಕಲ್ಪನಮಿತಿ.** ಸಮಸ್ತ ವಿಶೇಷತೆಗಳನ್ನು ನಿರಸ್ತಗೊಳಿಸಿ ನಾನೇ ಎಂದು ಭಾಸವಾಗುವ ಆತ್ಮನು ಬ್ರಹ್ಮನೇ ಎಂಬ ಅರ್ಥದಲ್ಲಿ. ಅದನ್ನು ದೃಷ್ಟಾಂತದ ಮೂಲಕ ಸ್ಪಷ್ಟಪಡಿಸಲು **ಧೂಳ್ಯಂಧಕಾರೇತಿ.** [4–31..32]

विवेकसमये शुद्धं देहादीनां व्यपोहनात् ॥ ३२ ॥
यथान्तरिक्षं संक्षिप्तनक्षत्रैः किंचिदीक्ष्यते ।

ವಿವೇಕಸಮಯೇ ಶುದ್ಧಂ ದೇಹಾದೀನಾಂ ವ್ಯಪೋಹನಾತ್ ॥ 32 ॥
ಯಥಾಂತರಿಕ್ಷಂ ಸಂಕ್ಷಿಪ್ತನಕ್ಷತ್ರೈಃ ಕಿಂಚಿದೀಕ್ಷ್ಯತೇ ।

ವಿವೇಕವು ಪ್ರಾಧಾನ್ಯತೆ ಹೊಂದಿರುವಾಗ, ದೇಹ ಮುಂತಾದ ಉಪಾಧಿಗಳಿಲ್ಲದ ಶುದ್ಧ ಅಹಂಕಾರವು ಕಂಡುಬರುತ್ತದೆ; ನಕ್ಷತ್ರಗಳ ಬೆಳಕಿನಲ್ಲಿ ಸೀಮಿತ ಆಕಾಶವನ್ನು ವೀಕ್ಷಿಸಿದಂತೆ. [4–32..33]

ವಿವೃತ್ತಿ

ಆತ್ಮವು ಎಂದಿಗೂ ಭಾಸವಾಗುವುದಿಲ್ಲವೋ ಎಂಬ ಶಂಕೆಗೆ, ಎಲ್ಲರಲ್ಲಿಯೂ ಭಾಸವಾಗಿ, ಚರ್ಚಿಸಲ್ಪಟ್ಟ ತ್ವಂ ಪದಾರ್ಥದ ತತ್ತ್ವವು ಕದಾಚಿತ್ ಭಾಸವಾಗುವುದು ಎಂದು ಅಭಿಪ್ರಯಿಸಿ, ಅದರ ಸಾಧನವಾದ ಶುದ್ಧ ಅಹಂಕಾರವನ್ನು ಉದಾಹರಿಸುವ **ವಿವೇಕಸಮಯ ಇತಿ.** ***ವಿವೇಕಸಮಯೇ*** ದೇಹ ಮುಂತಾದವುಗಳಲ್ಲಿ ಅನಾತ್ಮತ್ವವಿರುವ ಅಹಂಭಾವವು ಅವಭಾಸವಾದಾಗ, ಪರಿಚ್ಛೇದಕ ಭಾವದಲ್ಲಿರುವ ಶುದ್ಧ ಆತ್ಮತತ್ತ್ವವೇ ಬ್ರಹ್ಮ ಎಂದು ಭಾಸವಾಗುವುದು ಎಂಬ ಅರ್ಥ. ಹಾಗೆ ಭಾಸವಾಗುವ ಅಹಂಕಾರವನ್ನು ದೃಷ್ಟಾಂತದಿಂದ ಸ್ಪಷ್ಟಪಡಿಸಿ, ಅದರ ಸಾಕ್ಷಾತ್ ಬ್ರಹ್ಮಭಾವದ ವಿಶೇಷತೆಯನ್ನು ತಿಳಿಸುವ **ಯಥಾಂತರಿಕ್ಷಮಿತಿ.** ***ಸಂಕ್ಷಿಪ್ತನಕ್ಷತ್ರೈಃ*** ಶಾಂತವಾಗಿರುವ ನಕ್ಷತ್ರಗಳ ಪ್ರಕಾಶದಲ್ಲಿ ಆಕಾಶವನ್ನು ನೋಡಿದರೆ ಅದು ಸ್ವಲ್ಪವೇ ನಮ್ಮ ದೃಷ್ಟಿಗೆ ನಿಲುಕುವುದು, ವೀಕ್ಷಿಸುವ ಕಾಲವೂ ಅಲ್ಪವಾಗಿರುವುದು ಎಂಬ ಅಭಿಪ್ರಾಯದಲ್ಲಿ. [4–32..33]

ಸಾಧಾರಣ ಪರಿಸ್ಥಿತಿಯಲ್ಲಿ ಈಶ್ವರನು ಎಲ್ಲರಿಗೂ ದರ್ಶನವನ್ನು ನೀಡದಿದ್ದರೂ, ಕೆಲವು ಸಮಯಗಳಲ್ಲಿ ಅವನು ಜೀವ ಮತ್ತು ಈಶ್ವರನ ಸ್ವರೂಪವನ್ನು ಗಾಢವಾಗಿ ಪರಿಶೀಲಿಸಿದ, ಭೌತಿಕ ದೇಹ ಮತ್ತಿತರ ಉಪಾಧಿಗಳು ಅಹಂಕಾರವಲ್ಲ ಎಂದು ನಂಬಿದ ಹಾಗೂ ಆದರಂತೆಯೇ ತನ್ನ ಅಹಂಕಾರದ ಸೀಮಿತ ಪರಿಧಿಗಳನ್ನು ಮೀರಿದ ಕೆಲವರಿಗೆ ತನ್ನ ಸ್ವರೂಪವನ್ನು ಪ್ರಕಟಗೊಳಿಸುತ್ತಾನೆ. ವಿವೇಕ ಸಮಯದಲ್ಲಿ ಹುಟ್ಟುವ ಈ ಶುದ್ಧ ಅಹಂಕಾರವು ತಾತ್ಕಾಲಿಕವಾಗಿದ್ದು, ಸಾರ್ವತ್ರಿಕ ಅಹಂಕಾರದಿಂದ ಬೇರೆಯಾಗಿದೆ.

देहेन्द्रियादिसंसर्गान्मलिनं कलुषीकृतम् ॥ ३३ ॥

यथाकाशं तमोरूढं स्फुरत्यनवकाशवत् ।

ದೇಹೇಂದ್ರಿಯಾದಿಸಂಸರ್ಗಾನ್ಮಲಿನಂ ಕಲುಷೀಕೃತಮ್ ॥ 33 ॥
ಯಥಾಕಾಶಂ ತಮೋರೂಢಂ ಸ್ಫುರತ್ಯನವಕಾಶವತ್ ।

ಅಹಂಕಾರವು ದೇಹ, ಇಂದ್ರಿಯ ಮತ್ತು ಇತರ ಉಪಾಧಿಗಳೊಡನೆ ಭಾವನಾಯುಕ್ತ ಸಂಬಂಧವನ್ನು ಬೆಳೆಸಿಕೊಂಡಾಗ ಅದು ಅಶುದ್ಧವೆನಿಸುತ್ತದೆ; ಕತ್ತಲೆಯಿಂದ ಕೂಡಿದ ಆಕಾಶವು ಅದರಲ್ಲಿ ಅವಕಾಶವಿಲ್ಲದ ಹಾಗೆ ಕಾಣುವಂತೆ. [4–33..34]

ವಿವೃತ್ತಿ

ಮೂರನೆಯ ವಿಧದ ಅಹಂಕಾರವು ಸರ್ವ ಪ್ರಾಣಿಗಳಿಗೂ ಸಾಮಾನ್ಯವಾಗಿರುವಂತಹದು ಎಂದು ತಿಳಿಸಲು **ದೇಹೇಂದ್ರಿಯಾದೀತಿ.** ***ಸಂಸರ್ಗ*** ಅಧ್ಯಾಸವು. ***ಅನವಕಾಶವತ್*** ಪರಿಚ್ಛಿನ್ನವಾಗಿರುವಂತೆ. [4–33..34]

अहमित्यैश्वरं भावं यदा जीवः प्रबुध्यते ॥ ३४ ॥
सर्वज्ञस्सर्वकर्ता च तदा जीवो भविष्यति ।

ಅಹಮಿತ್ಯೈಶ್ವರಂ ಭಾವಂ ಯದಾ ಜೀವಃ ಪ್ರಬುಧ್ಯತೇ ॥ 34 ॥
ಸರ್ವಜ್ಞಸ್ಸರ್ವಕರ್ತಾ ಚ ತದಾ ಜೀವೋ ಭವಿಷ್ಯತಿ ।

ಅಹಂಕಾರವು ಈಶ್ವರನೊಡನೆ ಏಕತೆಯನ್ನು ಹೊಂದಿದೆ ಎಂದು ತಿಳಿದುಕೊಂಡ ಜೀವನು ಎಲ್ಲವನ್ನು ತಿಳಿದವನು ಮತ್ತು ಎಲ್ಲವನ್ನು ಮಾಡುವವನು ಆಗಬಹುದು. [4–34..35]

ವಿವೃತ್ತಿ

ಮೂರುವಿಧದ ಅಹಂಕಾರಗಳ ವಿವರಣೆಯ ಪ್ರಯೋಜನವನ್ನು ತಿಳಿಯಲು **ಅಹಮಿತ್ಯೈಶ್ವರಂ ಭಾವಮಿತಿ.** ***ಯದಾ*** ಶಬ್ದವು ಪ್ರಬೋಧದ ಉತ್ಪತ್ತಿಯಾಗುವುದು ದುರ್ಲಭವೆಂದು ಸೂಚಿಸುತ್ತದೆ. ಇಲ್ಲಿ ಜೀವನಿಗೆ ಸರ್ವಜ್ಞತ್ವ ಮುಂತಾದವುಗಳನ್ನು ವಿಧಿಸುವುದಿಲ್ಲ, ಆದರೆ ಸರ್ವಜ್ಞತ್ವ ಮುಂತಾದವುಗಳಿಂದ ಉಪಲಕ್ಷಿತನಾದ ಈಶ್ವರಸ್ವರೂಪನಾಗಿ ಅಭಿವ್ಯಕ್ತನಾಗುವಾಗುವನು ಎಂಬ ಅರ್ಥವನ್ನು ಹೇಳಿದೆ. [4–34..35]

माययाधिकसम्मूढो विद्ययेशः प्रकाशते ॥ ३५ ॥
निर्विकल्पानुसन्धाने सम्यगात्मा प्रकाशते ।

ಮಾಯಯಾಧಿಕಸಮ್ಮೂಢೋ ವಿದ್ಯಯೇಶಃ ಪ್ರಕಾಶತೇ ॥ 35 ॥
ನಿರ್ವಿಕಲ್ಪಾನುಸಂಧಾನೇ ಸಮ್ಯಗಾತ್ಮಾ ಪ್ರಕಾಶತೇ ।

ಮಾಯೆಯಿಂದ ಆವೃತನಾದಾಗ ಈಶ್ವರನು ಮಂಕಾದರೆ, ವಿದ್ಯೆಯಿಂದ ಬೆಳಗುತ್ತಾನೆ; ವಿಕಲ್ಪಗಳಿಲ್ಲದ ಅಹಂಕಾರವನ್ನು ಅನುಸಂಧಾನ ಮಾಡುವುದರಿಂದ, ಆತ್ಮವು ಪೂರ್ಣವಾಗಿ ಪ್ರಕಾಶಿಸುತ್ತದೆ. [4–35..36]

ವಿವೃತ್ತಿ

ಇತರರು ಅನ್ಯಾತ್ಮರಂತೆ ಅಭಿವ್ಯಕ್ತವಾಗುವುದು ತಾತ್ವಿಕವಾಗಿ ಹೇಗೆ ಸರಿ ಎಂದು ಶಂಕಿಸಬಾರದು, ಅದಕ್ಕೆ ಅನ್ಯತ್ವವಿರುವ ಜೀವರ ಈಶ್ವರನಿಗೆ ಮಾಯೆಯಿಂದಾದ ನಿಬಂಧನ, ಸೀಮಿತತೆಯು ಕಾರಣವಾಗಿದೆ ಎಂಬ ಅಭಿಪ್ರಾಯವನ್ನು ಹೇಳುವ **ಮಾಯಯೇತಿ.** ಅವರ ಮಾಯೆಯ ನಿವೃತ್ತಿಗಾಗಿ ಯತ್ನಿಸುವುದರಿಂದ ನಿರ್ವಿಕಲ್ಪ ಆತ್ಮವು ಅವಭಾಸವಾಗುವುದು ಎಂದು ಹೇಳಿವ **ನಿರ್ವಿಕಲ್ಪಾನುಸಂಧಾನ ಇತಿ.** [4–35..36]

अविद्याख्यतिरोधानव्यपाये परमेश्वरः ॥ ३६ ॥
दक्षिणामूर्तिरूपोसौ स्वयमेव प्रकाशते ।

ಅವಿದ್ಯಾಖ್ಯತಿರೋಧಾನವ್ಯಪಾಯೇ ಪರಮೇಶ್ವರ: ॥ 36 ॥
ದಕ್ಷಿಣಾಮೂರ್ತಿರೂಪೋಸೌ ಸ್ವಯಮೇವ ಪ್ರಕಾಶತೇ ।

ಅವಿದ್ಯೆಯ ತೆರೆಯನ್ನು ಸರಿಸಿದಾಗ, ದಕ್ಷಿಣಾಮೂರ್ತಿ ರೂಪದಲ್ಲಿರುವ ಪರಮೇಶ್ವರನು ಸ್ವತಃ ಪೂರ್ಣವಾಗಿ ಪ್ರಕಾಶಿಸುತ್ತಾನೆ. [4–36..37]

ವಿವೃತ್ತಿ

ಪ್ರಕರಣದ ಅರ್ಥವನ್ನು ಉಪಸಂಹರಿಸುತ್ತಾ **ಅವಿದ್ಯಾಖ್ಯೇತಿ.** [4–36..37]

इति श्रीदक्षिणामूर्तिस्त्रोत्रार्थप्रतिपादके ॥ ३७ ॥
प्रबन्धे मानसोल्लासे चतुर्थोल्लाससङ्ग्रहः ॥ ३८ ॥

ಇತಿ ಶ್ರೀದಕ್ಷಿಣಾಮೂರ್ತಿಸ್ತ್ರೋತ್ರಾರ್ಥಪ್ರತಿಪಾದಕೇ ॥ 37 ॥
ಪ್ರಬಂಧೇ ಮಾನಸೋಲ್ಲಾಸೇ ಚತುರ್ಥೋಲ್ಲಾಸಸಂಗ್ರಹಃ ॥ 38 ॥

ದಕ್ಷಿಣಾಮೂರ್ತಿ ಸ್ತೋತ್ರದ ಅರ್ಥವನ್ನು ಪ್ರತಿಪಾದಿಸುವ ಮಾನಸೋಲ್ಲಾಸವೆಂಬ ಪ್ರಬಂಧದ ಚತುರ್ಥ ಉಲ್ಲಾಸದ ವಿವರಣೆಯು ಇಲ್ಲಿಗೆ ಮುಗಿಯಿತು. [4–37..38]

ವಿವೃತ್ತಿ

ನಾಲ್ಕನೆಯ ಶ್ಲೋಕದ ವ್ಯಾಖ್ಯೆಯನ್ನು ಉಪಸಂಹರಿಸುವ **ಇತೀತಿ.** [4–37..38]

ಇತಿ ಶ್ರೀಮಾನಸೋಲ್ಲಾಸವೃತ್ತಾಂತೇ ಚತುರ್ಥೋಲ್ಲಾಸಃ ಸಮಾಪ್ತಃ ।

ಪಂಚಮೋಲ್ಲಾಸಃ

ಆತ್ಮದ ತಪ್ಪು ಕಲ್ಪನೆಗಳು

ದೇಹವು ಆತ್ಮ

प्रमाणमेकं प्रत्यक्षं तत्त्वं भूतचतुष्टयम् ।
मोक्षश्च मरणान्नान्यः कमार्थौ पुरुषार्थकौ ॥ १ ॥

ಪ್ರಮಾಣಮೇಕಂ ಪ್ರತ್ಯಕ್ಷಂ ತತ್ತ್ವಂ ಭೂತಚತುಷ್ಟಯಮ್ ।
ಮೋಕ್ಷಶ್ಚ ಮರಣಾನ್ನಾನ್ಯಃ ಕಾಮಾರ್ಥೌ ಪುರುಷಾರ್ಥಕೌ ॥ 1 ॥

ಪ್ರತ್ಯಕ್ಷವೊಂದೇ ಪ್ರಮಾಣ; ನಾಲ್ಕು ಭೂತಗಳು (ಮೂಲವಸ್ತುಗಳು) ಮಾತ್ರ ಸತ್ಯವಾಗಿವೆ; ಮರಣವನ್ನು ಬಿಟ್ಟರೆ ಬೇರೆ ಮೋಕ್ಷವಿಲ್ಲ; ಬಯಕೆಗಳು ಮತ್ತು ಸಂಪತ್ತು ಪುರುಷಾರ್ಥಗಳು. [5–1]

ವಿವೃತ್ತಿ

ಹಿಂದಿನ ಶ್ಲೋಕದ ವ್ಯಾಖ್ಯಾನದಲ್ಲಿ ಪ್ರತ್ಯಕ್ಷ ಮುಂತಾದ ಪ್ರಮಾಣಗಳಿಂದ ತೋರಿಬರುವ ನಿಯಮಗಳಂತೆ ಬ್ರಹ್ಮ-ಆತ್ಮರ ಏಕತ್ವವೇ ವಾಕ್ಯಾರ್ಥವು ಎಂಬುದಕ್ಕೆ ವಿರೋಧವಾಗಿರುವ ಶಂಕೆಗಳನ್ನು ಪರಿಹರಿಸಲಾಯಿತು. ಇದರ ಐದನೆಯ ಶ್ಲೋಕದಲ್ಲಿ ವಾದಿಗಳ ಬುದ್ಧಿಯ ವಿಲಾಸದಿಂದ ಕಲ್ಪಿಸಿಕೊಂಡ ನಿಯಮಗಳಿಂದ ಉದ್ಭವಿಸಿದ ಶಂಕಾ ರೂಪದ ವಿರೋಧವನ್ನು ಪರಿಹರಿಸಲು ಅವರ ಮತವನ್ನು ಪ್ರಸ್ತುತಪಡಿಸುವ **ಪ್ರಮಾಣಮೇಕಮಿತ್ಯಾದಿನಾ.** ಪರಮ ನಾಸ್ತಿಕರಾದ ಚಾರ್ವಾಕರು ಹೇಳುತ್ತಾರೆ: ಪ್ರತ್ಯಕ್ಷವು ಒಂದೇ ಪ್ರಮಾಣವು, ಅನುಮಾನ ಇತ್ಯಾದಿಗಳಲ್ಲ. ಅವರ ಅಭಿಪ್ರಾಯದಂತೆ ಪ್ರತ್ಯಕ್ಷದ ಹೊರತಾದ ಪ್ರಮಾಣಗಳು ಇದ್ದರೆ, ಗ್ರಹಿಸಲ್ಪಟ್ಟರೆ ಮತ್ತು ಅವುಗಳು ಪ್ರತ್ಯಕ್ಷದೊಡನೆ ಸಂವಾದಿಯಾಗಿರದಿದ್ದರೆ, ಅವು ವಿಶ್ವಾಸಾರ್ಹವಾಗುವುದಿಲ್ಲ; ಅವು ಕೆಲವು ಸ್ಥಳಗಳಲ್ಲಿ ಅರ್ಥವನ್ನು ಅತಿಕ್ರಮಿಸಬಹುದು ಆದರೆ ಪ್ರತ್ಯಕ್ಷ ದೃಷ್ಟವು ಹಾಗೆ ಅತಿಕ್ರಮಿಸುವುದಿಲ್ಲ. ಹಾಗಾಗಿ ಪ್ರತ್ಯಕ್ಷವೇ ಪ್ರಮಾಣವು. ಭೂತ ಚತುಷ್ಟಯಗಳಾದ ಪೃಥ್ವೀ, ನೀರು, ತೇಜಸ್ ಮತ್ತು ವಾಯುಗಳು ಮಾತ್ರವೇ ತತ್ತ್ವಪದಾರ್ಥಗಳು. ಆಕಾಶ ಮತ್ತಿತರವು ಪದಾರ್ಥಗಳಾಗುವುದಿಲ್ಲ, ಅವುಗಳ ಅಪ್ರತ್ಯಕ್ಷತೆಯಿಂದ. ವಾಯುವು ಇಲ್ಲಿ ಪ್ರತ್ಯಕ್ಷ ಎಂಬ ಅಭಿಪ್ರಾಯ. ಪ್ರಮಾಣಗಳಿಗೆ ಪ್ರಮೇಯವನ್ನು ಹೇಳುತ್ತಾ ಪುರುಷಾರ್ಥ ತತ್ತ್ವಗಳನ್ನು ತಿಳಿಸಲು **ಮೋಕ್ಷಶ್ಚೇತಿ.** ಮೋಕ್ಷವೆಂಬ ಪುರುಷಾರ್ಥಕ್ಕೆ ಮರಣದಿಂದ ಹೊರತಾದುದು ಇಲ್ಲ ಎಂಬ ಅರ್ಥ. ಚಕಾರವು ಧರ್ಮವು ಪುರುಷಾರ್ಥವಲ್ಲ ಎಂಬುದನ್ನು ಸಮುಚ್ಚಯಗೊಳಿಸುತ್ತದೆ. ಉಳಿದ ಕಾಮ ಮತ್ತು ಅರ್ಥ ಎಂದು ಪ್ರಸಿದ್ಧವಾದ ಎರಡು ಪುರುಷಾರ್ಥಗಳು ಪುರುಷನು ಅಭಿಲಾಷಿಸಿ ಸಂಪಾದಿಸುವಂತಹದು. ಅವುಗಳಲ್ಲಿ ಅರ್ಥವು ಕಾಮಸಾಧನಾಗಿ ಅಭಿಲಾಷೆಗೆ ಗೋಚರವಾಗುವುದು, ಕಾಮವಂತೂ ಸಾಕ್ಷಾತ್ ಗೋಚರವಾಗಿರುವುದು ಎಂಬ ತಿಳುವಳಿಕೆಯು. [5–1]

ಅನುಮಾನ ಯಾ ತಾರ್ಕಿಕ ವಿಚಾರಗಳನ್ನು ಅವಲಂಬಿಸಲು ಸಾಧ್ಯವಿಲ್ಲ, ಅವು ನಮ್ಮ ಅನುಭವಕ್ಕೆ ಬರದ ಹೊರತು. ನಮ್ಮ ಅನುಭವಕ್ಕೆ ಬರದ ಕೆಲವು ವಸ್ತುಗಳಿಗೆ, ಆಕಾಶದಂತೆ, ಅಸ್ತಿತ್ವವಿಲ್ಲ. ಬಯಕೆಗಳನ್ನು ಪೂರೈಸಿಕೊಳ್ಳುವುದು ಮಾನವನ ಪ್ರಾಥಮಿಕ ಅಗತ್ಯ ಹಾಗೂ ಈ ಕಾರ್ಯಕ್ಕೆ ಪೂರಕವಾಗಿರುವ ಸಂಪತ್ತು ಅವನ ಎರಡನೆಯ ಅಗತ್ಯ.

न हि खल्वीश्वरः कर्ता परलोककथा वृथा ।

ನ ಹಿ ಖಲ್ವೀಶ್ವರಃ ಕರ್ತಾ ಪರಲೋಕಕಥಾ ವೃಥಾ ।

ನಿಜವಾಗಿಯೂ ಈಶ್ವರನೆಂಬವನು ಇಲ್ಲ; ಪರಲೋಕದ ಕುರಿತು ಆಡುವ ಮಾತುಗಳು ವ್ಯರ್ಥ. [5–2]

ವಿವೃತ್ತಿ

ಇನ್ನು ಭೂತ ಚತುಷ್ಟಯಗಳೇ ಪ್ರಮೇಯವು ಎಂಬುದು ಹೇಗೆ? ಅವುಗಳು ಈಶ್ವರನಿಂದ ಪರಿಣಮಿಸಿದ್ದು, ಅವುಗಳ ವಿಲಕ್ಷಣತೆಯು ಅಂಗೀಕಾರ್ಹವಾಗಿರುವುದು. ಮತ್ತು ಜನ್ಮದಿಂದಲೇ ಪ್ರಾಣಿಗಳಲ್ಲಿ ಸುಖ–ದುಃಖಗಳೆಂಬ ವೈಚಿತ್ರ್ಯವು ಕಂಡುಬರುವುದು ಅವುಗಳಿಗೆ ಕಾರಣವಾದ ಪೂರ್ವಕೃತ ಧರ್ಮ–ಅಧರ್ಮಗಳ ಆಚರಣೆಯಿಂದ ಎಂಬುದೂ ಅಂಗೀಕಾರವಾಗಿರುವುದರಿಂದ, ಕಾರಣವೈಚಿತ್ರ್ಯದಿಂದ ಕಾರ್ಯವೈಚಿತ್ರ್ಯವು ಬೇರೆಯಾಗಿರುವುದು ಎಂಬ ಶಂಕೆಗಳಿಗೆ **ನ ಹಿ ಖಲ್ವಿತಿ.** ಭಾವಗಳು ಸ್ವಾಭಾವಿಕವಾಗಿಯೇ ಪರಿಣಾಮವನ್ನು ಉಂಟುಮಾಡುತ್ತವೆ, ಪ್ರತಿ ವ್ಯಕ್ತಿಯು ಅನ್ಯರ ಗಳಿಸಿಕೊಳ್ಳುವ ಭಾವದಿಂದ ಪರಿಣಮಿಸಿರುವನು. ಬಿಲ್ಲಿನಿಂದ ಹೊರಟ ಬಾಣವು ಏನನ್ನೋ ಗಳಿಸಿಕೊಳ್ಳಬಹುದು ಎಂಬಂತಲ್ಲದೆ, ಕೃಷಿಯಲ್ಲಿ ತೊಡಗಿರುವವನಿಗೆ ಪರಿಣಾಮವಾಗಿ ಬೀಜವು ದೊರೆಯುತ್ತದೆ ಎಂಬ ಹಾಗೆ. ಯಾವುದು ಇದೆಯೋ, ಅದರಿಂದ ಅದುವೇ ದೊರೆಯುತ್ತದೆ, ಅದು ಇಲ್ಲದಿದ್ದರೆ ದೊರೆಯುವುದೂ ಇಲ್ಲ ಎಂಬುದು ಪ್ರತ್ಯಕ್ಷವಾಗಿದೆ. ಹಾಗಾಗಿ ಈಶ್ವರನ ಕಲ್ಪನೆಗೆ ಅವಕಾಶವೆಲ್ಲಿದೆ? ಮತ್ತು ಸುಖ ಮುಂತಾದ ವೈಚಿತ್ರ್ಯಗಳು ಅವುಗಳಲ್ಲಿ ಸ್ವಾಭಾವಿಕವಾಗಿಯೇ ಉತ್ಪತ್ತಿಯಾಗುವುವು, ಲೌಕಿಕದ ಕಾರಣವಾಗಿ ಅಲ್ಲ. ಹಾಗೆಂದು 'ಸ್ವರ್ಗಃ ಕರ್ತೃಕ್ರಿಯಾದ್ರವ್ಯನಾಶೇಪಿ ಯದಿ ಯಜ್ವನಾಮ್ । ಭವೇತ್ ದಾವಾಗ್ನಿದಗ್ಧಾನಾಂ ಫಲಂ ಸ್ಯಾದ್ಭೂರಿ ಭೂರುಹಾಮ್ ॥ ಎಂದು ಹೇಳಿದೆ. [5–2]

ವಸ್ತುಗಳ ಬೆಳವಣಿಗೆ ಮತ್ತು ಸ್ವರೂಪ ಬದಲಾವಣೆಯು ಅವುಗಳಿಗೆ ಸ್ವಾಭಾವಿಕವಾಗಿ ಬಂದಿರುವಂತಹದು. ಪ್ರತಿಯೊಂದು ವಸ್ತುಗಳ ಹಿಂದೆ ಅವುಗಳನ್ನು ಬದಲಾಯಿಸಲು ಪ್ರೇರೇಪಿಸುವ ಶಕ್ತಿಯನ್ನು ನಾವು ಕಾಣುವುದಿಲ್ಲ; ಬಾಣವನ್ನು ಪ್ರಯೋಗಿಸಿದ ನಂತರ ಯಾರೂ ಅದನ್ನು ಮುಂದೆ ದೂಡುವುದಿಲ್ಲ; ಬೀಜವನ್ನು ಬಿತ್ತಿದ ಬಳಿಕ ಯಾರೂ ಅದಕ್ಕೆ ಮರವಾಗಲು ಸಹಾಯಮಾಡುವುದಿಲ್ಲ. ಇದು ನಮ್ಮ ನಿಜ ಜೀವನದ ಅನುಭವಗಳು. ಹಾಗಾಗಿ ಈಶ್ವರನಿದ್ದಾನೆ ಎಂಬ ವಾದವನ್ನು ಹುಟ್ಟುಹಾಕುವ ಅಗತ್ಯವೇತಕೆ? ವಿವಿಧ ಸ್ತರಗಳ ಸಂತೋಷವನ್ನು ಅನುಭವಿಸುವುದು, ಜೀವಿಗಳ ಸ್ವಭಾವ; ಧರ್ಮವೆಂಬ ಅತಿಸಂವೇದನೆಯ ಕಾರಣವನ್ನು ಆಲೋಚಿಸುವ ಅಗತ್ಯವಿಲ್ಲ.

देहं विनास्ति चेदात्मा कुंभवद्दृश्यतां पुरः ॥ २ ॥
ह्रस्वो दीर्घो युवा बाल इति देहोभिदृश्यते ।

ದೇಹಂ ವಿನಾಸ್ತಿ ಚೇದಾತ್ಮಾ ಕುಂಭವದ್ದೃಶ್ಯತಾಂ ಪುರಃ ॥ 2 ॥
ಹ್ರಸ್ವೋ ದೀರ್ಘೋ ಯುವಾ ಬಾಲ ಇತಿ ದೇಹೋಭಿದೃಶ್ಯತೇ ।

ಮಡಕೆಯನ್ನು ನಾವು ಕಾಣುವಂತೆ, ದೇಹದಲ್ಲಿ ಪ್ರತ್ಯೇಕವಾಗಿ ಆತ್ಮವೆಂಬುದೊಂದಿದ್ದರೆ ಅದು ನಮ್ಮೆದುರಿಗೆ ಕಾಣಿಸಿಕೊಳ್ಳಲಿ. ಕುಳ್ಳ, ಎತ್ತರದ, ಬಾಲಕ ಅಥವಾ ಯುವಕ ಎಂದು ಕಾಣಿಸಿಕೊಳ್ಳುವುದು ಈ ದೇಹ ಮಾತ್ರ. [5–2..3]

ವಿವೃತ್ತಿ

ಮತ್ತು ದೇಹದಿಂದ ಅತಿರಿಕ್ತವಾದ ಆತ್ಮದ ಕಲ್ಪನೆಯು ಪ್ರತ್ಯಕ್ಷಕ್ಕೆ ವಿರೋಧವಾಗಿದೆ ಎಂದು ತಿಳಿಸಲು **ದೇಹಂ ವಿನೇತಿ.** ಅಮೂರ್ತ ದ್ರವ್ಯವು ಸತ್ ಭಾವಸಾಧನವಾಗಲು ಸಾಧ್ಯವಿಲ್ಲ ಎಂಬ ಭಾವ. ದೇಹವೇ ಆತ್ಮವಾಗಿದೆ ಎಂಬುದಕ್ಕೆ ಪ್ರತ್ಯಕ್ಷಾನುಭವವೇ ಪ್ರಮಾಣವು ಎಂದು ಹೇಳಲು **ಹ್ರಸ್ವೋ ದೀರ್ಘ ಇತಿ.** [5–2..3]

ಎಲ್ಲಾ ಸಾಕ್ಷ್ಯಗಳು ದೇಹವೇ ನಾವು ಎಂಬುದನ್ನು ತಿಳಿಸುತ್ತವೆ ಆದರೆ ದೇಹ ಸಂಬಂಧವಿಲ್ಲದ 'ನಾವು' ಇದ್ದೇವೆಯೆಂಬುದಕ್ಕೆ ಯಾವುದೂ ಇಲ್ಲ.

अस्ति जातः परिणतो वृद्धः क्षीणो जरन्मृतः ॥ ३ ॥
इत्येवमुक्ताषड्भावविकारा देहसंश्रयाः ।

ಅಸ್ತಿ ಜಾತಃ ಪರಿಣತೋ ವೃದ್ಧಃ ಕ್ಷೀಣೋ ಜರನ್ಮೃತಃ ॥ 3 ॥
ಇತ್ಯೇವಮುಕ್ತಾಷ್ಷಡ್ಭಾವವಿಕಾರಾ ದೇಹಸಂಶ್ರಯಾಃ ।

ಜೀವನಲ್ಲಿ ಆಗುವ ಆರು ಬದಲಾವಣೆಗಳು – ಇರುವಿಕೆ, ಹುಟ್ಟು, ಬೆಳವಣಿಗೆ, ವೃದ್ಧನಾಗುವುದು, ಕ್ಷೀಣತೆ ಮತ್ತು ಮರಣ – ಎಲ್ಲವೂ ದೇಹಕ್ಕೆ ಸಂಬಂಧಿಸಿದೆ. [5–3..4]

ವಿವೃತ್ತಿ

ಷಡ್ಭಾವದ ವಿಕಾರಗಳು ದೇಹಕ್ಕೇ ಸಂಬಂಧಿಸಿವೆ, ಅದರ ಹೊರತಾದ ಆತ್ಮಕ್ಕೆ ಸಂಬಂಧಿಸಿಲ್ಲ ಎಂದು ಹೇಳಿದೆ. ಆದುದರಿಂದ ವಿಕಾರದ ಕಾರ್ಯಗಳು ದೇಹದಿಂದ ಹೊರತಾಗಿರುವುದರಿಂದ ಅಲ್ಲ. [5–3..4]

ಅವುಗಳಿಗೆ ದೇಹದಿಂದ ಬೇರೆಯಾದ ಆತ್ಮದ ಸಂಬಂಧವನ್ನು ಹೇಳಿಲ್ಲ. ಆದುದರಿಂದ ಈ ಬದಲಾವಣೆಗಳ ವಿಷಯದಂತೆ ದೇಹದಿಂದ ಭಿನ್ನವಾದ ಆತ್ಮದ ಅಸ್ತಿತ್ವದ ಕುರಿತು ಭಾವಿಸುವ ಅಗತ್ಯವಿಲ್ಲ.

वर्णाश्रमविभागश्च देहेष्वेव प्रतिष्ठितः ॥ ४ ॥
जातकर्मादिसंस्कारो देहस्यैव विधीयते ।
शतं जीवेति देहस्य प्रयुञ्जन्त्याशिषं शुभम् ॥ ५ ॥

ವರ್ಣಾಶ್ರಮವಿಭಾಗಶ್ಚ ದೇಹೇಷ್ವೇವ ಪ್ರತಿಷ್ಠಿತಃ ॥ 4 ॥
ಜಾತಕರ್ಮಾದಿಸಂಸ್ಕಾರೋ ದೇಹಸ್ಯೈವ ವಿಧೀಯತೇ ।
ಶತಂ ಜೀವೇತಿ ದೇಹಸ್ಯ ಪ್ರಾಯುಂಜಂತ್ಯಾಶಿಷಂ ಶುಭಮ್ ॥ 5 ॥

ಜಾತಿ ಮತ್ತು ಮತಗಳ ಭೇದವು ದೇಹವನ್ನು ಮಾತ್ರ ಅವಲಂಬಿಸಿವೆ; ಜಾತಕರ್ಮದಂತಹ ಸಂಸ್ಕಾರಗಳು ದೇಹಕ್ಕೆ ಮಾತ್ರ ನಡೆಯುತ್ತವೆ. 'ನೂರು ಕಾಲ ಬದುಕು' ಎಂದು ಆಶೀರ್ವಚನ ನೀಡುವಾಗ ನಾವು ದೇಹವನ್ನು ಕುರಿತು ಹೇಳುತ್ತೇವೆ. [5–4..5]

ವಿವೃತ್ತಿ

ಆಸ್ತಿಕರು ಶಾಸ್ತ್ರೀಯವಾಗಿ ವ್ಯವಹರಿಸುವಾಗ ದೇಹವನ್ನು ಆಶ್ರಯಿಸಿಯೇ ಮಾಡುವುದು ಕಾಂಡುಬರುತ್ತದೆ. ಹಾಗಾಗಿ ದೇಹದಿಂದ ಅತಿರಿಕ್ತವಾದ ಆತ್ಮದ ಕಲ್ಪನೆಯು ಅವರ ಅಪ್ರಾಮಾಣಿಕತೆಯ ಸೂಚಕವಾಗಿದೆ ಎಂದು ಹೇಳಲು **ವರ್ಣಾಶ್ರಮವಿಭಾಗಶ್ಚೇತಿ.** [5–4..5]

इति प्रपञ्चं चार्वाको वाचयत्यल्पचेतनः ।

ಇತಿ ಪ್ರಪಂಚಂ ಚಾರ್ವಾಕೋ ವಾಚಯತ್ಯಲ್ಪಚೇತನಃ ।

ಹೀಗೆ ಅಲ್ಪಜ್ಞಾನವುಳ್ಳ ಚಾರ್ವಾಕರು ಪ್ರಪಂಚವನ್ನು ಮರುಳುಮಾಡುತ್ತಾರೆ. [5–6]

ವಿವೃತ್ತಿ

ಚಾರ್ವಾಕರ ಕಲ್ಪನೆಗಳ ಕುರಿತಾದ ವಿವರಣೆಯನ್ನು ಉಪಸಂಹರಿಸುವ **ಇತಿ ಪ್ರಪಂಚಮಿತಿ.** ***ವಾಚಯತಿ*** ಶಿಷ್ಯರಿಗೆ ಪಾಠಹೇಳಿದರು ಎಂಬ ಅರ್ಥದಲ್ಲಿ. ***ಅಲ್ಪಚೇತನಃ*** ಅತಿಸ್ಥೂಲಮತಿಗಳು ಎಂಬ ಅರ್ಥ. [5–6]

ಪ್ರಾಣವು ಆತ್ಮ

केचिच्वसिमि जीवामि क्षुधितोस्मि पिपासितः ॥ ६ ॥
इत्यादिप्रत्ययबलात् प्राण आत्मेति मन्यते ।

ಕೇಚಿಚ್ವಸಿಮಿ ಜೀವಾಮಿ ಕ್ಷುಧಿತೋಸ್ಮಿ ಪಿಪಾಸಿತಃ ॥ 6 ॥
ಇತ್ಯಾದಿಪ್ರತ್ಯಯಬಲಾತ್ ಪ್ರಾಣ ಆತ್ಮೇತಿ ಮನ್ಯತೇ ।

ಉಸಿರಾಡುತ್ತೇನೆ, ಜೀವಿಸಿದ್ದೇನೆ, ಹಸಿವಾಗುತ್ತಿದೆ, ಬಾಯಾರಿಕೆಯಾಗುತ್ತಿದೆ ಇತ್ಯಾದಿ ಭಾವನೆಗಳ ಬಲದಲ್ಲಿ ಪ್ರಾಣವೇ ಆತ್ಮವೆಂದು ಕೆಲವರು ನಿರ್ಧರಿಸಿದ್ದಾರೆ. [5–6..7]

ವಿವೃತ್ತಿ

ಅವರಿಗಿಂತ ಸ್ವಲ್ಪ ಸೂಕ್ಷ್ಮಮತಿಗಳ ಕಲ್ಪನೆಯನ್ನು ಹೇಳಲು **ಕೇಚಿದಿತಿ.** ಪಂಚಭೂತಗಳಿಂದಾದ ದೇಹದಲ್ಲಿ ಶ್ವಾಸ ಮುಂತಾದವುಗಳು ಜರಗುತ್ತಿದ್ದರೆ, ಮೃತದೇಹದಲ್ಲಿ ಅದೇರೂಪದ ಶ್ವಾಸ ಮುಂತಾದ ವಿಶೇಷ ಕ್ರಿಯೆಗಳು ಇರುವುದಿಲ್ಲ. ಆದುದರಿಂದ ದೇಹದಿಂದ ಅತಿರಿಕ್ತವಾದ ಪ್ರಾಣವೇ ಆತ್ಮವಾಗಿರಬೇಕು ಎಂದು ಕೆಲವರು ತಿಳಿದಿದ್ದಾರೆ. [5–6..7]

ಸತ್ತ ಜೀವಿಯು ಬದುಕಿರುವ ಜೀವಿಯಂತಯೇ ಕಂಡು, ಉಸಿರಾಡದೆ, ಸ್ವಜ್ಞಾನವಿಲ್ಲದೆ ಮತ್ತು ಇತರ ಬದುಕಿರುವ ಜೀವಿಗಳ ಕಾರ್ಯಗಳನ್ನು ಮಾಡದೇ ಇರುವುದರಿಂದ, ಪ್ರಾಣವು ಆತ್ಮವಾಗಿರಬೇಕೆಂದು ಅವರು ನಿರ್ಧರಿಸುತ್ತಾರೆ; ಅದರ ಇರುವಿಕೆ ದೇಹವನ್ನು ಜೀವಂತವಾಗಿಸುತ್ತದೆ ಮತ್ತು ಇಲ್ಲದಿರುವಿಕೆ ದೇಹವನ್ನು ಶವವಾಗಿಸುತ್ತದೆ.

ಇಂದ್ರಿಯಗಳು ಆತ್ಮ

केचिच्छृणोमि पष्यामि जिघ्रामि स्पन्दयाम्यहम् ॥ ७ ॥
इतीन्द्रियाणामात्मत्वं प्रतियन्ति ततोधिकम् ।

ಕೇಚಿಚ್ಛೃಣೋಮಿ ಪಷ್ಯಾಮಿ ಜಿಘ್ರಾಮಿ ಸ್ಪಂದಯಾಮ್ಯಹಮ್ ॥ 7 ॥
ಇತೀಂದ್ರಿಯಾಣಾಮಾತ್ಮತ್ವಂ ಪ್ರತಿಯಂತಿ ತತೋಧಿಕಮ್ ।

ಕೇಳುತ್ತೇನೆ, ನೋಡುತ್ತೇನೆ, ಆಘ್ರಾಣಿಸುತ್ತೇನೆ (ವಾಸನೆಗಳನ್ನು), ಸ್ಪಂದಿಸುತ್ತೇನೆ ಇತ್ಯಾದಿ ಅನುಭವಗಳನ್ನು ಹೊಂದಿದ ಕೆಲವರು, ಇನ್ನೂ ಮುಂದುವರೆದು ಇಂದ್ರಿಯಗಳು ಆತ್ಮವೆಂದು ಭಾವಿಸುತ್ತಾರೆ. [5–7..8]

ವಿವೃತ್ತಿ

ಅವರಲ್ಲಿಯೇ ಕೆಲವರ ಮತವನ್ನು ತಿಳಿಸುವ **ಕೇಚಿಚ್ಛೃಣೋಮೀತಿ.** ನಾನು ಎಂಬ ಅನುಭವವು ಇಂದ್ರಿಯವ್ಯಾಪಾರದಿಂದ ಸಿಗುವುದರಿಂದ, ಅವುಗಳಿಂದ ಹೊರತಾಗಿ ದೇಹಚಾಲಕನಾದ ಪ್ರಾಣಕ್ಕೆ ಸತ್ ಭಾವದ ಪ್ರಮಾಣವಿಲ್ಲದಿರುವುದರಿಂದ, ನಿದ್ರಾವಸ್ಥೆಯಲ್ಲಿ ಇಂದ್ರಿಯಗಳನ್ನು ಮೀರಿದ ದೇಹಚಲನೆಯು ಕಾಣದಿರುವುದರಿಂದ, ಅಲ್ಲಿ ದೃಶ್ಯವಾಗುವ ಶ್ವಾಸ ಮುಂತಾದವುಗಳು ಭ್ರಾಂತಿಮಾತ್ರವಾಗಿರುವುದರಿಂದ, ಇಂದ್ರಿಯಗಳನ್ನು ಮೀರಿದ ಭೋಗವು ಕಾಣದಿರುವುದರಿಂದ ಮತ್ತು ಇಂದ್ರಿಯಗಳು ಅವುಗಳಿಗೆ ನಿಗದಿಯಾದ ಸುಖವನ್ನು ಅನುಭವಿಸುವುದರಿಂದ ಇಂದ್ರಿಯಗಳೇ ಆತ್ಮವಾಗಿರುವುದು ಎಂಬುದು ಅವರ ಮತವು. ಇಲ್ಲಿ ಇಂದ್ರಿಯಾತ್ಮ ವಾದದ ಬಳಿಕ ಪ್ರಾಣಾತ್ಮ ವಾದವನ್ನು ಹೇಳಬೇಕಿತ್ತು. ಇಂದ್ರಿಯಗಳಿಗೆ ಹೊರತಾದ ಪ್ರಾಣವ್ಯಾಪಾರವು ಹೆಚ್ಚಿನದಾದುದರಿಂದ ಅದು ಯುಕ್ತವಾಗಿದೆ. ಪಾಠಕ್ರಮದಲ್ಲಿ ಮೂಲಶ್ಲೋಕವನ್ನೇ ಅನುಸರಿಸಿದೆ. [5–7..8]

ಇಂದ್ರಿಯಗಳು ಕಾರ್ಯನಿರತವಾಗಿರುವಾಗ ಮಾತ್ರ ಸ್ವ ಪರಿಜ್ಞಾನವು ಇರುವುದರಿಂದ, ಆತ್ಮವು ಇಂದ್ರಿಯಗಳೇ ಆಗಿರಬೇಕು. ಪ್ರಾಣದ ಅಸ್ತಿತ್ವವು ಇಂದ್ರಿಯಗಳಿಗಿಂತ ಬೇರೆಯಾಗಿದೆ ಎಂಬುದಕ್ಕೆ ಯಾವ ಪ್ರಮಾಣವೂ ಇಲ್ಲ; ಗಾಢನಿದ್ದೆಯಲ್ಲಿ ಇಂದ್ರಿಯಗಳು ಸ್ತಬ್ದವಾಗಿರುವಾಗ ಯಾವುದೇ ರೀತಿಯ ಚಲನೆಗಳನ್ನು ನಾವು ಕಾಣುವುದಿಲ್ಲ; ಮತ್ತು ನಾವು ಕಾಣುವ ಉಸಿರಾಟ ಇತ್ಯಾದಿಗಳು ಬರಿಯ ಭ್ರಮೆಗಳು ಮಾತ್ರ. ಇಂದ್ರಿಯಗಳು ಒಂದೇ ಸಮಯದಲ್ಲಿ ಅನೇಕ ವಸ್ತುಗಳ ಅನುಭವಗಳನ್ನು ಪಡೆಯದಿರುವುದರಿಂದ, ಅಂದರೆ ಪ್ರತೀ ಇಂದ್ರಿಯದ ಕಾರ್ಯವು ಒಂದು ಗುಂಪಿನ ವಿಷಯಗಳಿಗೆ ಸೀಮಿತವಾಗಿರುವುದರಿಂದ ಹಾಗೂ ಅನೇಕ ಇಂದ್ರಿಯಗಳು ದೇಹವನ್ನು ಆಶ್ರಯಿಸಿರುವುದರಿಂದ, ಪ್ರತಿಯೊಂದೂ ತನ್ನಲ್ಲಿ ತಾನೇ ಆತ್ಮವಾಗಿದೆ.

ವಾರ್ತಿಕಕಾರರ ವಿವರಣೆಯಲ್ಲಿ ಈ ತಾರ್ಕಿಕ ವಾದಸರಣಿಯ ಕ್ರಮವನ್ನು ಹಿಂದುಮುಂದಾಗಿಸಿದೆ. ನಿದ್ದೆಯ ಸಮಯದಲ್ಲಿ ಸಮಸ್ತ ಇಂದ್ರಿಯಗಳು ಸ್ತಬ್ದವಾದಾಗ ಪ್ರಾಣದ ಕಾರ್ಯವು ನಿಲ್ಲದಿರುವುದರಿಂದ, ಪ್ರಾಣವು ಆತ್ಮವಾಗಲು ಇಂದ್ರಿಯಗಳಿಗಿಂತ ಅಧಿಕ ಯೋಗ್ಯತೆಯನ್ನು ಹೊಂದಿದೆ ಎಂದು ನಿರ್ಧರಿಸಬಹುದು.

ಬುದ್ಧಿಯು ಆತ್ಮ

जानामिप्रत्ययबलाद्बुद्धिरित्यपरे जगुः ॥ ८ ॥
मायाव्यामूढचित्तानां तेषां दूषणमुच्यते ।

ಜಾನಾಮಿಪ್ರತ್ಯಯಬಲಾದ್ಬುದ್ಧಿರಿತ್ಯಪರೇ ಜಗುಃ ॥ 8 ॥
ಮಾಯಾವ್ಯಾಮೂಢಚಿತ್ತಾನಾಂ ತೇಷಾಂ ದೂಷಣಮುಚ್ಯತೇ ।

'ನಾನು ತಿಳಿದಿದ್ದೇನೆ' ಎಂಬ ಭಾವನೆಯ ಬಲದಲ್ಲಿ, ಇತರರು ಬುದ್ಧಿಯನ್ನು ಆತ್ಮವೆನ್ನುತ್ತಾರೆ. ಐದನೆಯ ಚರಣವು ಮಾಯೆಯಿಂದ ಮೂಢವಾದ ಬುದ್ಧಿಯನ್ನು ಹೊಂದಿದವರ ವಾದಗಳನ್ನು ನಿರಾಕರಿಸುವ ಉದ್ದೇಶವನ್ನು ಹೊಂದಿದೆ. [5–8..9]

ವಿವೃತ್ತಿ

ಇದರಲ್ಲಿ ಬೌದ್ಧಮತವನ್ನು ತಿಳಿಸುತ್ತಾ **ಜಾನಾಮೀತಿ.** ***ಬುದ್ಧಿಃ*** ಕ್ಷಣಿಕ ವಿಜ್ಞಾನವೇ ಆತ್ಮವೆಂದು ವಿಜ್ಞಾನವಾದಿಗಳು ಮತ್ತು ಮೇಲಾಗಿ ಬೌದ್ಧರು ಹೇಳುತ್ತಾರೆ. ಇಂದ್ರಿಯಗಳ ಅಭಾವವಿರುವ ಸ್ವಪ್ನದಲ್ಲಿ ಬುದ್ಧಿಯೇ ಅವಿಕಲ್ಪಕ ಸತ್ ಆಗಿರುವುದರಿಂದ, ವ್ಯಾಸಂಗಮಾಡುವಾಗ ಅದಕ್ಕೆ ಇಂದ್ರಿಯಸಂಬಂಧವಿರುವ ಅರ್ಥದಲ್ಲಿ ವ್ಯವಹಾರವಿರುವುದರಿಂದ ಬುದ್ಧಿಯೇ ಆತ್ಮವು ಎಂಬ ಅರ್ಥವು. ಉಪಲಕ್ಷಣವಾಗಿ ಶೂನ್ಯವಾದಿಗಳ ಮತವೂ ಇದೇ ಆಗಿರುವುದು. ಸುಷುಪ್ತಿಯಲ್ಲಿ ವಿಜ್ಞಾನದ ಅಭಾವವಿದ್ದು, ಇನ್ನೊಂದು ಅವಸ್ಥೆಯಲ್ಲಿ ನಾನು ಎಂಬ ಆಕಸ್ಮಿಕ ಅಹಂಕಾರದ ಉದಯವು ವೃತ್ತಿ ಮಾತ್ರವಾಗಿರುವುದರಿಂದ ಶೂನ್ಯವೇ ಆತ್ಮವು ಎಂದು ಹೇಳುತ್ತಾರೆ. ಇತರ ಆಸ್ತಿಕಮತಗಳಲ್ಲಿ ದ್ವೈತಮತದ ವಿರೋಧವನ್ನೂ ಇಲ್ಲಿ ತೋರಿಸಲಾಗಿದೆ.

ಇಲ್ಲಿ ಹೇಳಿರುವ ಮತಗಳ ಕಲ್ಪನೆಗಳು ಮಾಯೆಯಿಂದಾದ ಭ್ರಾಂತಿಯಾಗಿರುವುದರಿಂದ, ಅವುಗಳಲ್ಲಿ ವಿಶ್ವಾಸವಿಡುವುದು ಪ್ರಾಮಾಣಿಕವಲ್ಲ ಎಂದು ಅವುಗಳನ್ನು ನಿರಾಕರಿಸಲು ಮುಂದಿನಶ್ಲೋಕವನ್ನು ಉದ್ಧರಿಸುವ **ಮಾಯಾವ್ಯಾಮೂಢಚಿತ್ತಾನಾಮಿತಿ.** [5–8..9]

ಸ್ತೋತ್ರದ ಐದನೆಯ ಚರಣ

देहं प्राणमपीन्द्रियाण्यपि चलां बुद्धिं च शून्यं विदुः
स्त्रीबालान्धजडोपमास्त्वहमिति भ्रान्ता भृशं वादिनः ।
मायाशक्तिविलासकल्पितमहाव्यामोहसंहारिणे
तस्मै श्रीगुरुमूर्तये नम इदं श्रीदक्षिणामूर्तये ॥ ५ ॥

ದೇಹಂ ಪ್ರಾಣಮಪೀಂದ್ರಿಯಾಣ್ಯಪಿ ಚಲಾಂ ಬುದ್ಧಿಂ ಚ ಶೂನ್ಯಂ ವಿದುಃ
ಸ್ತ್ರೀಬಾಲಾಂಧಜಡೋಪಮಾಸ್ತ್ವಹಮಿತಿ ಭ್ರಾಂತಾ ಭೃಶಂ ವಾದಿನಃ ।
ಮಾಯಾಶಕ್ತಿವಿಲಾಸಕಲ್ಪಿತಮಹಾವ್ಯಾಮೋಹಸಂಹಾರಿಣೇ
ತಸ್ಮೈ ಶ್ರೀ ಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ 5 ॥

ಅಹಂಕಾರ ಯಾ ಪ್ರಾಣ ಯಾ ಇಂದ್ರಿಯಗಳು ಯಾ ಚರವಾದ ಬುದ್ಧಿ ಯಾ ಶೂನ್ಯ ಇವುಗಳನ್ನು ಆತ್ಮವೆಂದು ವಾದಿಸುವವರು ಸ್ತ್ರೀ, ಮಕ್ಕಳು, ಕುರುಡ ಮತ್ತು ಆಲಸಿಗಳಂತೆ ಭ್ರಾಂತಿಗೊಳಗಾದವರಾಗಿ ಕಾಣುತ್ತಾರೆ. ಯಾರು

ಮಾಯೆಯ ಶಕ್ತಿಯಿಂದ ಉಂಟಾದ ಮಹಾ ವ್ಯಾಮೋಹವನ್ನು ನಾಶಮಾಡುತ್ತಾನೋ ಅವನಿಗೆ, ಶ್ರೀ ಗುರುರೂಪದಲ್ಲಿರುವ ಶ್ರೀ ದಕ್ಷಿಣಾಮೂರ್ತಿ ಸ್ವರೂಪನಿಗೆ, ಶಿವನಿಗೆ, ನನ್ನ ಈ ನಮಸ್ಕಾರಗಳು. {5}

ವಿವೃತ್ತಿ

ದೇಹ, ಪ್ರಾಣ, ಇಂದ್ರಿಯಗಳು, ***ಚಲಾಂ ಬುದ್ಧಿಂ*** ಕ್ಷಣಿಕವಾದ ಬುದ್ಧಿ ಇತ್ಯಾದಿಗಳು ನನ್ನ ಆತ್ಮ ಎಂದು ವಾದಿಸಿ ***ವಿದುಃ*** ತಿಳಿದವರು ***ಭೃಶಂ*** ಅತ್ಯಂತ ಭ್ರಾಂತಿಗೊಳಗಾದವರು, ವಿವೇಕಶೂನ್ಯರಾದವರು ಎಂದು ಹೇಳಲು **ಸ್ತ್ರೀಬಾಲೇತಿ.** ***ಜಡಾ*** ಆಗ್ರಹವುಳ್ಳವರು. ಯಾಕೆ ಎಂದರೆ ಎಲ್ಲರ ಕಲ್ಪನೆಗಳಲ್ಲಿಯೂ ಮಿಥ್ಯತೆ, ವಿರುದ್ಧತ್ವ ಇರುವುದರಿಂದ ಸತ್ಯವಾಗದಿರಲು ಆಸ್ಪದವಿದ್ದು, ಅವುಗಳ ಏಕೈಕ ಧರ್ಮವಾದ ವಿರೋಧಕ್ಕಾಗಿ ವಿರೋಧ ಎಂಬುದರಿಂದಾಗಿ. ಎಲ್ಲಾ ವಿಕಲ್ಪಗಳಿಗೆ ಆಸ್ಪದವೀಯುವ ಹಿಂದೆ ತಿಳಿಸಿದ ಎಲ್ಲಾ ಕಲ್ಪನೆಗಳಿಗೆ ಆಗಮಗಳಿಂದ ದೊರೆತ ಸಾಕ್ಷಿಭೂತವಾದ ಸತ್ಯ ಜ್ಞಾನ ಆನಂದ ಸ್ವಭಾವದ ಆತ್ಮ, ಈಶ್ವರತತ್ತ್ವವು ಆಶ್ರಯಣೀಯವಾಗಿದೆ. ಯಾವುದರ ಸ್ವರೂಪವನ್ನು ಅರಿಯದಿದ್ದರೆ ವಿಕಲ್ಪಗಳ ಉದಯವಾಗುವುದೋ, ಅರಿತಾಗ ವಿಕಲ್ಪಗಳಿಗೆ ಬಾಧೆಯಾಗುವುದೋ ಎಂದು ಅಭಿಪ್ರಯಿಸುವ **ಮಾಯಾಶಕ್ತೀತಿ.** ಅಕ್ಷರಾರ್ಥವು ಸ್ಪಷ್ಟವಾಗಿದೆ. {5}

ದೇಹ ಇತ್ಯಾದಿಗಳು ಆತ್ಮವಾಗಲು ಸಾಧ್ಯವಿಲ್ಲ

इदमस्य तात्पर्यम् –
देहादीनां जडार्थानां पाषाणवदनात्मनाम् ॥ ९ ॥
कथं भवेदहम्भावः समावेशं विनेशितुः ।

ಇದಮಸ್ಯ ತಾತ್ಪರ್ಯಮ್ –
ದೇಹಾದೀನಾಂ ಜಡಾರ್ಥಾನಾಂ ಪಾಷಾಣವದನಾತ್ಮನಾಮ್ ॥ 9 ॥
ಕಥಂ ಭವೇದಹಂಭಾವಃ ಸಮಾವೇಶಂ ವಿನೇಶಿತುಃ ।

ಅದರ ಅರ್ಥವನ್ನು ಹೀಗೆ ವಿವರಿಸಬಹುದು: ಕಲ್ಲಿನ ತುಂಡಿನಂತೆ ಜಡವಾದ, ಆತ್ಮದಿಂದ ತುಂಬಾ ಭಿನ್ನವಾದ ಭೌತಿಕ ದೇಹದಂತಹ ವಸ್ತುವು, ಈಶ್ವರನ ಪ್ರವೇಶವಾಗದ ಹೊರತು, ಯಾವಾಗ ಅಹಭಾವದಿಂದ, 'ನಾನು' ಎಂಬ ಭಾವದಿಂದ ಭಾಸವಾಗುತ್ತದೆ? [5–9..10]

ವಿವೃತ್ತಿ

ಐದನೆಯ ಶ್ಲೋಕದ ವ್ಯಾಖ್ಯೆಯನ್ನು ಮುಂದುವರೆಸುತ್ತಾ **ಇದಮಸ್ಯೇತಿ.** ಇಲ್ಲಿ ವಾದಿಗಳು ಪ್ರಸ್ತುತಪಡಿಸಿರುವ ದೇಹ ಇತ್ಯಾದಿಗಳು, ಬುದ್ಧಿಯೂ ಸೇರಿ ಚೇತನ ಅಚೇತನ ಆಗಿವೆ. ಹಾಗಾಗಿ ಅವರ ವಾದವು ಪ್ರಾಮಾಣಿಕವಲ್ಲ ಎಂದು ಹೇಳಲು **ದೇಹಾದೀನಾಮಿತಿ.** ***ಜಡಾರ್ಥಾಃ*** ಜಡವೆಂಬ ಅರ್ಥದಲ್ಲಿರುವ. ***ಅರ್ಥಾಃ*** ವಿಷಯವಾಗಿ, ದೃಶ್ಯವಾಗು ಎಂಬ ಅರ್ಥವು. ***ಅನಾತ್ಮನಃ*** ಜಡತೆಯಿಂದಾಗಿ ಅನಾತ್ಮವಾಗಿರುವ. ***ಪಾಷಾಣವತ್*** ಪಾಷಾಣದಂತೆ ಜಡವಾಗಿ ದೃಶ್ಯವಾಗುವಂತೆ ಇರುವ. ಅವುಗಳು ಸಾಲಭಂಜಿಕೆ, ಕಲ್ಲಿನ ವಿಗ್ರಹಗಳ ಸಮನಾಗಿರುವುದರಿಂದ ಅವುಗಳಲ್ಲಿ ಸ್ವತಃ ಚಿದಾತ್ಮ ಈಶ್ವರನ ಸಮಾವೇಶವಾಗದ ವಿನಃ ಅಹಂಭಾವವು ಹೇಗೆ ಉಂಟಾಗುವುದು? [5–9..10]

ದೇಹವು ಆತ್ಮವಲ್ಲ

देहस्तावदयं नात्मा दृश्यत्वाज्जाड्यवत्वतः ॥ १० ॥
रूपादिमत्त्वात्सांशत्वाद्भौतिकत्वाच्च कुम्भवत् ।

ದೇಹಸ್ತಾವದಯಂ ನಾತ್ಮಾ ದೃಶ್ಯತ್ವಾಜ್ಜಾಡ್ಯವತ್ವತಃ ॥ 10 ॥
ರೂಪಾದಿಮತ್ತ್ವಾತ್ಸಾಂಶತ್ವಾದ್ಭೌತಿಕತ್ವಾಚ್ಚ ಕುಂಭವತ್ ।

ದೇಹವು ಆತ್ಮವಾಗಲು ಸಾಧ್ಯವಿಲ್ಲ ಏಕೆಂದರೆ ಮಡಕೆಯಂತೆ ಅದು ದೃಶ್ಯವಾಗಿದೆ (ಕಾಣು), ಜಡವಾಗಿದೆ, ಬಣ್ಣದಿಂದ ಕೂಡಿದೆ ಇತ್ಯಾದಿ, ರೂಪವನ್ನು ಹೊಂದಿದೆ, ಅಂಗಗಳಿಂದ ಮಾಡಲ್ಪಟ್ಟಿದೆ ಹಾಗೂ ಭೌತಿಕ ಮೂಲದ್ರವ್ಯದಿಂದ ರಚಿತವಾಗಿದೆ. [5–10..11]

ವಿವೃತ್ತಿ

ಹೀಗೆ ಸಾಮಾನ್ಯವಾದ ನಿರಾಕರಣೆಯನ್ನು ತಿಳಿಸಿ, ಪ್ರತ್ಯೇಕವಾದ ನಿರಾಕರಣೆಗಳನ್ನು ಹೇಳಲು **ದೇಹಸ್ತಾವದಯಮಿತಿ.** ***ದೃಶ್ಯತ್ವ*** ಪರಾಧೀನವಾದ ಪ್ರಕಾಶತ್ವವು. ಅದರ ಸ್ವಪ್ರಕಾಶತ್ವವು ಅಂಗೀಕೃತವಾಗಿರುವುದರಿಂದ ಈ ಅಭಿಮತದಿಂದ ಆತ್ಮಕ್ಕೆ ದೋಷವಾಗುವುದಿಲ್ಲ. ***ಜಾಡ್ಯವತ್ತ್ವಂ*** ಸ್ಫುರಣೆಯಿಂದ ಅಭಿನ್ನವಾಗಿರುವಿಕೆ. ದೇಹದ ಸ್ಫುರಣೆಮಾಡುವ ರೂಪವಾಗಿಯೂ ಅಲ್ಲ, ಸ್ತಂಭದಂತೆ ತನ್ನ ಸತ್ ಸ್ಫುರಣೆಯೊಡನೆ ವ್ಯಭಿಚರಿಸಿದಂತಾಗುವುದು. ***ರೂಪಾದಿಮತ್*** ಮುಂತಾದವುಗಳು ಪ್ರಸಿದ್ಧವಾಗಿರುವ ನಿದರ್ಶನಗಳು. ಇಲ್ಲಿ ಅಪ್ರಸಿದ್ಧಿಯು ಸಾಧ್ಯವಿಲ್ಲ, ದೇಹದಿಂದ ಹೊರಗಿನ ಆತ್ಮವು ಪ್ರಸಿದ್ಧವಾಗಿರುವುದರಿಂದ, ಅದಕ್ಕೆ ಪ್ರತಿಯೋಗಿಯಾದ ಇತರ ಅನಾತ್ಮಗಳ ಅಪ್ರಸಿದ್ಧಿಯಿಂದ ಎಂದೂ ಹೇಳಬಹುದು. ನಾನು ಎಂಬುದರ ಅವಭಾಸದ ಗೋಚರಮಾತ್ರದಿಂದಲೇ ಎಲ್ಲಾ ವಾದಿಗಳ ಆತ್ಮತ್ವವು ಮತ್ತು ಅದು ಅನ್ವಯವಾಗುವ ಮಡಕೆ ಇತ್ಯಾದಿಗಳೂ ಪ್ರಸಿದ್ಧವಾಗಿಯೇ ಇದೆ. [5–10..11]

ದೃಶ್ಯ: ಪ್ರಕಟವಾಗಲು ಇನ್ನೊಂದರ ಮೇಲೆ ಅವಲಂಬಿತವಾಗಿರುವಿಕೆ.

ಜಡ: ಚೈತನ್ಯವಲ್ಲದ.

मूर्छासुषुप्तिमरणेष्यपि देहः प्रदृष्यते ॥ ११ ॥
देहादिव्यतिरिक्तत्वात्तदात्मा न प्रतीयते ।

ಮೂರ್ಛಾಸುಷುಪ್ತಿಮರಣೇಷ್ಯಪಿ ದೇಹಃ ಪ್ರದೃಷ್ಯತೇ ॥ 11 ॥
ದೇಹಾದಿವ್ಯತಿರಿಕ್ತತ್ವಾತ್ತದಾತ್ಮಾ ನ ಪ್ರತೀಯತೇ ।

ಮೂರ್ಛಿತನಾದಾಗ, ಸುಷುಪ್ತಿಯಲ್ಲಿ ಮತ್ತು ಮರಣದಲ್ಲಿ, ಭೌತಿಕ ದೇಹ ಕಾಣಿಸುತ್ತದೆ; ಆದರೆ ಭೌತಿಕ ದೇಹದಿಂದ ಬೇರೆಯಾಗಿರುವ ಆತ್ಮವು ಕಾಣಿಸುವುದಿಲ್ಲ. [5–11..12]

ವಿವೃತ್ತಿ

ವ್ಯಕ್ತಪಡಿಸಿರುವ ಅನುಮಾನವನ್ನು ನಿವಾರಿಸುವ ಪ್ರಯೋಜನವುಳ್ಳ, ವಿಪಕ್ಷಗಳಿಗೆ ಬಾಧಕವಾದ ತರ್ಕವನ್ನು ಮುಂದಿಡುತ್ತಾ **ಮೂರ್ಛೇತಿ.** ಒಂದುವೇಳೆ ದೇಹವೇ ಆತ್ಮವಾಗಿದ್ದರೆ, ಅದು ಅವಭಾಸವಾಗುವಾಗ ಆತ್ಮವು ಅವಭಾಸವಾಗಬಾರದು. ಮೂರ್ಛೆ ಮುಂತಾದ ಅವಸ್ಥೆಗಳಲ್ಲಿ ಆತ್ಮದ ದರ್ಶನವಾಗದಿರುವುದು ಸಿದ್ಧವಾಗಿದೆ. ಹಾಗಾಗಿ ಸ್ವ ಅವಸ್ಥೆಯಲ್ಲಿ ನಾನು ಎಂಬುದಾಗಿ ಅವಭಾಸವಾಗದೆ, ಇತರ ಅವಸ್ಥೆಗಳಲ್ಲಿ ಅವಭಾಸವಾಗುವ ಆತ್ಮವು ದೇಹಕ್ಕಿಂತ ಬೇರೆಯಾಗಿರುವುದು ಎಂಬುದು ಸಿದ್ಧವಾಗುತ್ತದೆ. [5–11..12]

यथा जगत्प्रवृत्तीनामादिकारणमंशुमान् ॥ १२ ॥
पुमांस्तथैव देहादिप्रवृत्तौ कारणं परम् ।
ममदेहोयमित्येवं स्त्री बालोन्धश्च मन्यते ॥ १३ ॥
देहोहमिति नावैति कदाचिदपि कश्चन ।

ಯಥಾ ಜಗತ್ಪ್ರವೃತ್ತೀನಾಮಾದಿಕಾರಣಮಂಶುಮಾನ್ ॥ 12 ॥
ಪುಮಾಂಸ್ತಥೈವ ದೇಹಾದಿಪ್ರವೃತ್ತೌ ಕಾರಣಂ ಪರಮ್ ।
ಮಮ ದೇಹೋಯಮಿತ್ಯೇವಂ ಸ್ತ್ರೀ ಬಾಲೋಂಧಶ್ಚ ಮನ್ಯತೇ ॥ 13 ॥
ದೇಹೋಹಮಿತಿ ನಾವೈತಿ ಕದಾಚಿದಪಿ ಕಶ್ಚನ ।

ಸೂರ್ಯನು ಜಗತ್ತಿನ ಪ್ರವೃತ್ತಿಗಳಿಗೆಲ್ಲಾ ಮೂಲಕಾರಣನಾಗಿರುವಂತೆ, ಆತ್ಮವು ಭೌತಿಕ ದೇಹ ಇತ್ಯಾದಿಗಳ ವೃತ್ತಿಗಳಿಗೆಲ್ಲಾ ಮುಖ್ಯಕಾರಣವಾಗಿದೆ. 'ಇದು ನನ್ನ ದೇಹ' ಎಂದು ಸ್ತ್ರೀ, ಮಕ್ಕಳು ಮತ್ತು ಒಬ್ಬ ಕುರುಡನು ಕೂಡಾ ಭಾವಿಸುತ್ತಾನೆ; ಆದರೆ ಯಾರೂ 'ನಾನೇ ದೇಹ' ಎಂದು ಭಾವಿಸುವುದಿಲ್ಲ. [5–12..14]

ವಿವೃತ್ತಿ

ಆತ್ಮವು ದೇಹದಿಂದ ಅತಿರಿಕ್ತವಾಗಿದೆ ಎಂಬ ಸದ್ಭಾವದ ಇನ್ನೊಂದು ಅನುಮಾನವನ್ನು ನಿವಾರಿಸಲು **ಯಥೇತಿ.** ಗಾಢಾಂಧಕಾರ ವ್ಯಾಪ್ತವಾಗಿರುವ ಗುಹೆಯೊಳಗಿರುವ ದೇಹದ ವ್ಯಾಪಾರವು ದೇಹದಿಂದ ಅತಿರಿಕ್ತವಾದ ಪ್ರಕಾಶದ ಸಂಪರ್ಕದ ನಿಮಿತ್ತವಾಗಿದೆ. ದೇಹವ್ಯವಹಾರವು ಹೊರಗಿರುವ ದಿವಾಕರನ ಪ್ರಕಾಶ ಸಾನ್ನಿಧ್ಯದ ಕಾರಣವಾಗಿ ಹಗಲಿನಲ್ಲಿ ಜರಗುತ್ತದೆ ಎಂಬ ಅರ್ಥ. ಹಾಗಾಗಿ ದೇಹವು ಆತ್ಮವಲ್ಲ, ವಸ್ತ್ರ ಇತ್ಯಾದಿಗಳು ನನ್ನದು ಎಂಬ ಪ್ರತ್ಯಯದ ವಿಷಯವಾಗಿರುವಂತೆ. ಅದರ ಅನುಭವವು ಸಾರ್ವಜನಿಕವಾಗಿರುವುದರಿಂದ ನನ್ನ ಎಂಬುದು ಅಪ್ರಸಿದ್ಧಿಗೆ ಕಾರಣವಾಗಿಯೂ ಇಲ್ಲ. ನನ್ನ ದೇಹ ಆತ್ಮವಾಗಿರುವುದು, ಹಾಗಾಗಿ ನಾನು ಮನುಷ್ಯನು ಎನ್ನುವಾಗ ದೇಹವೇ ನಾನು ಎಂದಲ್ಲದೆ ನನ್ನ ದೇಹ ಎಂದು ಸ್ಫುರಿಸುವುದು. ಹಾಗಾಗಿ ದೇಹವು ಆತ್ಮವಲ್ಲ ಎಂದು ಅರ್ಥವಾಗುವುದು. ಮತ್ತು ನಾನು ಮನುಷ್ಯನು ಎಂದು ಹೇಳುವಾಗ ಅದು ಆತ್ಮನ ಕುರಿತಾಗಿ ಅಲ್ಲದೆ ದೇಹದ ಅನುಭವವನ್ನು ಹೇಳುವುದು. ಹಾಗೆಯೇ ಜಾಗ್ರದವಸ್ಥೆಯಲ್ಲಿ ನಾನು ಮನುಷ್ಯನು ಎಂದು ಅಭಿಮಾನಿಸುವವನು, ಸ್ವಪ್ನದಲ್ಲಿ ಏನೋ ಹುಲಿಯಾಗಿರುವೆನು ಎಂದು ಅಭಿಮಾನಪಡಬಹುದು. ಅಲ್ಲಿರುವ ಅಹಂ ಅನುಭವದ ವಿವರಣೆಯು ಮನುಷ್ಯತ್ವದ ಅನುಭವದ ವಿವರಣೆಗಿಂತ ಭಿನ್ನವಾಗಿರುವುದು. ಹಾಗೆ ಅಹಂ ಎಂದು ಅವಭಾಸವಾಗುವ ವಿಷಯವೇ ಆತ್ಮವು ಎಂದು ಸಿದ್ಧವಾಗಿ ಅದು ದೇಹದಿಂದ ಹೊರತಾಗಿರುವುದು.

ಇನ್ನು ಪ್ರತ್ಯಕ್ಷವೊಂದೇ ಪ್ರಮಾಣವು ಎಂದು ಹೇಳುವ ಚಾರ್ವಾಕರ ದೇಹದಿಂದ ಹೊರತಾದ ಆತ್ಮವಿದೆ ಎಂಬ ಅನುಮಾನದ ಸಾಧನೆಯು ಅಸಂಗತ ಎಂಬುದಕ್ಕೆ ಹೇಳುತ್ತಾರೆ – ಪ್ರತ್ಯಕ್ಷಕ್ಕೆ ಅವಿಷಯವಾದ ಅನುಮಾನ ಮುಂತಾದವುಗಳು ಸ್ವೀಕಾರಾರ್ಹವಲ್ಲ ಎಂಬ ಪ್ರತಿವಾದಿಯ ಅಭಿಪ್ರಾಯವು ಸರಿಯಲ್ಲ. ಅದರ ಕುರಿತಾದ ಆಕ್ಷೇಪಕ್ಕೆ ಸಮಾಧಾನವು ನಮ್ಮ ಅನುಭವದಿಂದ ದೊರೆಯುವುದು. ಇಷ್ಟ–ಅನಿಷ್ಟ ಸಾಧನಗಳಲ್ಲಿ ಅನುಮಾನ ಪ್ರವೃತ್ತಿಯಿಂದ ಪ್ರವೃತ್ತಿ–ನಿವೃತ್ತಿ ವ್ಯವಹಾರಗಳನ್ನು ನಡೆಸುವುದು ದುರ್ಲಭವಾದೀತು. ಆದರೆ ಕೆಲವು ವಿಷಯಗಳಲ್ಲಿ ಅನುಮಾನವನ್ನು ಆಶ್ರಯಿಸುವುದು ಯುಕ್ತವಾಗಿಯೇ ಇದೆ. ಆದುದರಿಂದ ದೇಹಾತಿರಿಕ್ತವಾದ ಆತ್ಮದ ಸಾಧನೆಯು ಎಲ್ಲ ವಿಧವಾಗಿಯೂ ಸಾಧುವಾಗಿದೆ. ಹಾಗೆಯೇ ಪರಲೋಕ ಮುಂತಾದವುಗಳು ಇಲ್ಲ ಎಂದು ವಾದಿಸುವವರ ಪ್ರಲಾಪವು ಉಪೇಕ್ಷಣೀಯವಾಗಿದೆ. [5–12..14]

‘ನಾನು ಒಬ್ಬ ಗಂಡಸು’ ಎಂಬ ಭಾವನೆಯು ದೇಹವೇ ಅಹಂಕಾರ ಎಂದು ತೋರಿಸುತ್ತದೆ ಎಂಬುದನ್ನು ನಿರಾಕರಿಸಲು ಸಾಧ್ಯವಿಲ್ಲ; ಯಾಕೆಂದರೆ ಅವನು ಹಲವು ಬಾರಿ ತಾನು ಹುಲಿಯಾಗಿರುವಂತೆ ಕನಸು ಕಂಡಿರಬಹುದು. ಇಲ್ಲಿ ಅಹಂಕಾರದ ಜ್ಞಾನವು, ‘ನಾನು’ ಎಂಬ ಭಾವನೆಯು, ಜಾಗ್ರತ ಮತ್ತು ಕನಸಿನ ಸ್ಥಿತಿಯಲ್ಲಿ ಕಂಡುಬರುವ ಅಹಂಕಾರಕ್ಕೆ ಸಂಬಂಧಿಸಿದ ಭಿನ್ನ ದೇಹಗಳಲ್ಲಿಯೂ, ಅದೇ ಆಗಿರುವುದು.

ಅನುಮಾನವು ತಾನೇ ಪ್ರಮಾಣವಾಗದು ಎಂಬ ವಾದಕ್ಕೆ ಸಂಬಂಧಿಸಿ, ನಮ್ಮ ನಡವಳಿಕೆಯು ತಾರ್ಕಿಕವಾಗಿ ನಿಶ್ಚಯಿಸಿದ ದಾರಿಯನ್ನು ಅನುಸರಿಸಿ ಸಾಗುತ್ತವೆಯೆಂದು ನಮ್ಮ ದಿನನಿತ್ಯದ ಅನುಭವಗಳು ಸ್ಪಷ್ಟಪಡಿಸುತ್ತವೆ. ಉದಾಹರಣೆಗೆ ನಾವು ಈ ಹೊತ್ತಿನಲ್ಲಿ ತಿನ್ನುವ ಆಹಾರವು ನಮ್ಮ ಹಸಿವೆಯನ್ನು ಹಿಂಗಿಸುತ್ತದೆಯೆಂದು, ನಮ್ಮ ಹಿಂದಿನ ಅನುಭವದ ನೆಲೆಯಲ್ಲಿ ತಾರ್ಕಿಕವಾಗಿ ನಾವು ಬಲ್ಲೆವು. ಜ್ಞಾನದ ಸರಿಯಾದ ಸ್ರೋತವೆಂದು ಅನುಮಾನದ ಮೇಲೆ ಇಂತಹ ನಂಬಿಕೆಯಿಲ್ಲದಿದ್ದರೆ, ನಮ್ಮ ಜೀವನ ಮುಂದುವರೆಯುವುದು ಕಷ್ಟವಾಗುವುದು.

ಚಾರ್ವಾಕರ ವಾದದಲ್ಲಿ ಮುಂದಿಟ್ಟ ಉಳಿದ ಋಣಾತ್ಮಕ ನಿಶ್ಚಯಗಳನ್ನು ವಿವರವಾಗಿ ಖಂಡಿಸುವ ಅಗತ್ಯವಿಲ್ಲ ಎಂಬುದು ವಾರ್ತಿಕಕಾರರ ಭಾವನೆ.

ಇಂದ್ರಿಯಗಳು ಆತ್ಮವಲ್ಲ

इन्द्रियाण्यपि नात्मानः करणत्वात्प्रदीपवत् ॥ १४ ॥

ಇಂದ್ರಿಯಾಣ್ಯಪಿ ನಾತ್ಮಾನಃ ಕರಣತ್ವಾತ್ಪ್ರದೀಪವತ್ ॥ 14 ॥

ಇಂದ್ರಿಯಗಳೂ ಆತ್ಮವಲ್ಲ, ಯಾಕೆಂದರೆ ಅವುಗಳು ದೀಪದಂತೆ ಕೇವಲ ಉಪಕರಣಗಳು. [5–14]

ವಿವೃತ್ತಿ

ಇಂದ್ರಿಯಾಣ್ಯಪಿ ನಾತ್ಮಾನಃ ಇಂದ್ರಿಯಗಳ ಆತ್ಮತ್ವವನ್ನು ನಿರಾಕರಿಸಿದೆ. ಅರ್ಥ ಸ್ಪಷ್ಟವಾಗಿದೆ. [5–14]

वीणावादनवच्छ्रोत्रं शब्दग्रहणसाधनम् ।

चक्षुस्तेजस्त्रितयवद्रूपग्रहणसाधनम् ॥ १५ ॥
गन्धस्य ग्राहकं घ्राणं पुष्पसम्पुटकादिवत् ।
रसस्य ग्राहिका जिह्वा दधिक्षौद्रघृतादिवत् ॥ १६ ॥

ವೀಣಾವಾದನವಚ್ಛ್ರೋತ್ರಂ ಶಬ್ದಗ್ರಹಣಸಾಧನಮ್ ।
ಚಕ್ಷುಸ್ತೇಜಸ್ತ್ರಿತಯವದ್ರೂಪಗ್ರಹಣಸಾಧನಮ್ ॥ 15 ॥
ಗಂಧಸ್ಯ ಗ್ರಾಹಕಂ ಘ್ರಾಣಂ ಪುಷ್ಪಸಂಪುಟಕಾದಿವತ್ ।
ರಸಸ್ಯ ಗ್ರಾಹಿಕಾ ಜಿಹ್ವಾ ದಧಿಕ್ಷೌದ್ರಘೃತಾದಿವತ್ ॥ 16 ॥

ವೀಣೆಯಂತಹ ಸಂಗೀತ ಸಾಧನದಂತೆ, ಕಿವಿಯು ಶಬ್ದವನ್ನು ಗ್ರಹಿಸುವ ಒಂದು ಸಾಧನ ಮಾತ್ರ. ಮೂರು ರೀತಿಯ ಬೆಳಕಿನ ಸ್ರೋತಗಳಂತೆ (ಸೂರ್ಯ, ಚಂದ್ರ, ಅಗ್ನಿ), ರೂಪವನ್ನು ಗ್ರಹಿಸಲು ಕಣ್ಣು ಒಂದು ಸಾಧನವಾಗಿದೆ. ಮೂಗು ವಾಸನೆಯನ್ನು ಗ್ರಹಿಸುವ ಒಂದು ಸಾಧನವಾಗಿದೆ, ಹೂವಿನ ಗುಚ್ಛ ಇತ್ಯಾದಿಗಳಿಂದ; ಮತ್ತು ಮೊಸರು, ಜೇನು, ತುಪ್ಪ ಇತ್ಯಾದಿಗಳ ರಸವನ್ನು (ರುಚಿ) ಆಸ್ವಾದಿಸುವ ಸಾಧನ ನಾಲಿಗೆಯಾಗಿದೆ. [5–15..16]

ವಿವೃತ್ತಿ

ಕರಣತ್ವವು ಹೇತುವಾಗಿ ಇಂದ್ರಿಯಗಳ ಅನಾತ್ಮತ್ವವನ್ನು ಸಾಧಿಸಿ, ಅವುಗಳ ಕುರಿತಾದ ಶಂಕೆಯನ್ನು ಪರಿಹರಿಸಲು ಪ್ರತ್ಯೇಕ ಇಂದ್ರಿಯಗಳ ಕರಣತ್ವವನ್ನು ತಿಳಿಸುವ **ವೀಣಾವಾದನವದಿತ್ಯಾದಿನಾ.** ಹೇಗೆ ವೀಣಾವಾದನದ ಶಬ್ದವನ್ನು ಗ್ರಹಿಸಲು ಶಬ್ದಗ್ರಹಣಸಾಧನವಿರುವುದೋ ಹಾಗೆಯೇ ಕಿವಿಗಳು ಕೂಡ ಅಂತಹ ಒಂದು ಉಪಕರಣವಾಗಿವೆ. ಬೆಳಕಿನ ಸ್ರೋತಗಳಂತೆ, ಕಣ್ಣು ರೂಪವನ್ನು ಗ್ರಹಿಸುವ ಸಾಧನಾಗಿದೆ. ಸೂರ್ಯ–ಚಂದ್ರ–ಅಗ್ನಿ ಮೂರು ವಿಧದ ತೇಜಸ್ಸಿನ ಸ್ರೋತಗಳು. ***ಕ್ಷೌದ್ರಂ*** ಮಧು, ಜೇನು. [5–15..16]

इन्द्रियाणि न मे सन्ति मूकोस्मि बधिरोस्म्यहम् ।
इत्याहुरिन्द्रियैर्हीना जनाः किं ते निरात्मकाः ॥ १७ ॥

ಇಂದ್ರಿಯಾಣಿ ನ ಮೇ ಸಂತಿ ಮೂಕೋಸ್ಮಿ ಬಧಿರೋಸ್ಮ್ಯಹಮ್ ।
ಇತ್ಯಾಹುರಿಂದ್ರಿಯೈರ್ಹೀನಾ ಜನಾಃ ಕಿಂ ತೇ ನಿರಾತ್ಮಕಾಃ ॥ 17 ॥

ತಮ್ಮಲ್ಲಿ ಇಂದ್ರಿಯಗಳ ಕೊರತೆಯಿದ್ದಾಗ ಮೂಕ, ಕಿವುಡ ಇತ್ಯಾದಿಯಾಗಿ ಜನರು ತಮ್ಮನ್ನು ಕರೆದುಕೊಳ್ಳುತ್ತಾರೆ ಅಂದರೆ ಅವರು ಆತ್ಮಹೀನರಾಗಿದ್ದಾರೋ? [5–17]

ವಿವೃತ್ತಿ

ಇಂದ್ರಿಯಗಳು ತನ್ನಲ್ಲಿ ಇಲ್ಲದಿರುವಾಗ, ಅದಕ್ಕೆ ಸಂಬಂಧಿತ ಪದಗಳಿಂದ ತಮ್ಮನ್ನು ಕರೆದುಕೊಳ್ಳುವ ಜನರು ಆತ್ಮವಿಲ್ಲದವರೋ ಎಂದು ಯುಕ್ತಿಯಿಂದ ಸಾಧಿಸುವ **ಇಂದ್ರಿಯಾಣಿ ನ ಮೇ ಸಂತೀತಿ.** ವಿಪಕ್ಷವನ್ನು ಬಾಧಿಸುವ ತರ್ಕದಿಂದ ಅವರ ಅನುಮಾನವನ್ನು ನಿವಾರಿಸಲಾಗಿದೆ ಎಂದು ತಿಳಿಯುವುದು. [5–17]

ಪ್ರಾಣವು ಆತ್ಮವಲ್ಲ

प्राणोप्यात्मा न भवति ज्ञानाभावात्सुषुप्तिषु ।
जाग्रत्स्वप्नोपभोगोत्थश्रमविच्छित्तिहेतवे ॥ १८ ॥
सुषुप्तिं पुरुषे प्राप्ते श्रीरमभिरक्षितुम् ।
शेषकर्मोपभोगार्थं प्राणश्चरति केवलम् ॥ १९ ॥

ಪ್ರಾಣೋಪ್ಯಾತ್ಮಾ ನ ಭವತಿ ಜ್ಞಾನಾಭಾವಾತ್ಸುಷುಪ್ತಿಷು ।
ಜಾಗ್ರತ್ಸ್ವಪ್ನೋಪಭೋಗೋತ್ಥಶ್ರಮವಿಚ್ಛಿತ್ತಿಹೇತವೇ ॥ 18 ॥
ಸುಷುಪ್ತಿಂ ಪುರುಷೇ ಪ್ರಾಪ್ತೇ ಶರೀರಮಭಿರಕ್ಷಿತುಮ್ ।
ಶೇಷಕರ್ಮೋಪಭೋಗಾರ್ಥಂ ಪ್ರಾಣಶ್ಚರತಿ ಕೇವಲಮ್ ॥ 19 ॥

ಪ್ರಾಣವು ಕೂಡಾ ಆತ್ಮವಲ್ಲ; ಯಾಕೆಂದರೆ ಸುಷುಪ್ತಿಯ ಸಮಯದಲ್ಲಿ ಸ್ವಜ್ಞಾನದ ಪರಿವೆಯಿರುವುದಿಲ್ಲ. ಜಾಗ್ರತ ಮತ್ತು ಸ್ವಪ್ನದ ಕಾಲದಲ್ಲಿ ಸಂಗ್ರಹಿಸಿದ ದುಃಖಗಳನ್ನು ಮರೆಯುವುದಕ್ಕೋಸ್ಕರ ಮನುಷ್ಯನು ಸುಷುಪ್ತಿಗೆ ಹೋದಾಗ, ಸಂಚಿತಕರ್ಮಗಳ ಫಲವನ್ನು ಅನುಭವಿಸಲಿಕ್ಕೆ ದೇಹವನ್ನು ಕಾಪಾಡಲು ಮಾತ್ರ ಪ್ರಾಣವು ಕಾರ್ಯರತವಾಗಿರುವುದು. [5–18..19]

ವಿವೃತ್ತಿ

ಇದರಲ್ಲಿ ಮುಖ್ಯವಾಗಿ ಪ್ರಾಣಾತ್ಮವಾದದಲ್ಲಿಯ ದೋಷವನ್ನು ತಿಳಿಸುತ್ತಾ **ಪ್ರಾಣೋಪ್ಯಾತ್ಮೇತಿ.** ಪ್ರಾಣವು ಆತ್ಮವಾಗಲು ಸಾಧ್ಯವಿಲ್ಲ ಏಕೆಂದರೆ ಅದರಿಂದ ಸತ್‌ನಲ್ಲಿರುವ ಚೈತನ್ಯಕ್ಕೆ ಮೋಸಮಾಡಿದಂತಾಗುವುದು, ದೇಹವಾದಿಗಳಂತೆ. ***ಸುಷುಪ್ತಿಷು*** ಸುಷುಪ್ತಿ, ಮೂರ್ಛೆ, ಮರಣ ಎಂಬ ಅರ್ಥದಲ್ಲಿ. ಸುಷುಪ್ತಿಯಲ್ಲಿ ಪ್ರಾಣಕ್ಕೆ ಚೈತನ್ಯ, ಕ್ರಿಯಾಶೀಲವಲ್ಲ ಎಂದು ಸಾಧಿಸಲು **ಜಾಗ್ರದಿತಿ.** ಶೇಷಕರ್ಮಗಳ ಉಪಭೋಗಕ್ಕಾಗಿ ಶರೀರವನ್ನು ರಕ್ಷಿಸಲು ಮಾತ್ರವೇ ಪ್ರಾಣವು ಚಲಿಸುತ್ತಿರುತ್ತದೆ. [5–18..19]

प्राणस्य तत्र चैतन्यं करणोपरमे यदि ।
प्राणे व्याप्रियमाणे तु करणोपरमः कथम् ॥ २० ॥
सत्राजि हि रणोद्युक्ते विरमन्ति न सैनिकाः ।
तस्मान्न करणस्वामी प्राणो भवितुमर्हति ॥ २१ ॥

ಪ್ರಾಣಸ್ಯ ತತ್ರ ಚೈತನ್ಯಂ ಕರಣೋಪರಮೇ ಯದಿ ।
ಪ್ರಾಣೇ ವ್ಯಾಪ್ರಿಯಮಾಣೇ ತು ಕರಣೋಪರಮಃ ಕಥಮ್ ॥ 20 ॥
ಸಮ್ರಾಜಿ ಹಿ ರಣೋದ್ಯುಕ್ತೇ ವಿರಮಂತಿ ನ ಸೈನಿಕಾಃ ।
ತಸ್ಮಾನ್ನ ಕರಣಸ್ವಾಮೀ ಪ್ರಾಣೋ ಭವಿತುಮರ್ಹತಿ ॥ 21 ॥

ಸುಷುಪ್ತಿಯಲ್ಲಿ ಪ್ರಾಣದ ಸ್ವಜ್ಞಾನವಿಲ್ಲದಿರುವಿಕೆಯು ಇಂದ್ರಿಯಗಳ ನಿಷ್ಕ್ರಿಯತೆಯಿಂದಾದರೆ, ಪ್ರಾಣವು ಕಾರ್ಯನಿರತವಾಗಿರುವಾಗ ಇಂದ್ರಿಯಗಳು ಯಾಕೆ ನಿಷ್ಕ್ರಿಯವಾಗಿರುತ್ತವೆ? ರಾಜನು ಯುದ್ಧನಿರತನಾಗಿರುವಾಗ,

ಅವನ ಸೈನ್ಯವು ಹೋರಾಟವನ್ನು ನಿಲ್ಲಿಸಲು ಸಾಧ್ಯವಿಲ್ಲ. ಹಾಗಾಗಿ ಪ್ರಾಣವು ಇಂದ್ರಿಯಗಳ ಒಡೆಯನಾಗಲು ಸಾಧ್ಯವಿಲ್ಲ. [5–20..21]

ವಿವೃತ್ತಿ

ಸುಷುಪ್ತಿಯಲ್ಲಿ ಪ್ರಾಣವೇ ಸ್ವತಃ ಕ್ರಿಯಾಶೀಲವಾಗಿರುವುದೇ ಹೊರತು ಇತರ ಯಾರೋ ತನ್ನ ಶೇಷಕರ್ಮಗಳ ಭೋಗಕ್ಕಾಗಿ ಶರೀರವನ್ನು ರಕ್ಷಿಸುವುದು ಅಲ್ಲ ಎಂದು ಹೇಳುವವರಿಗೆ **ಪ್ರಾಣಸ್ಯ ತತ್ರೇತಿ.** ಅಂದರೆ ಸುಷುಪ್ತಿಯಲ್ಲಿ ಇಂದ್ರಿಯಗಳ ಒಡೆಯನಾದ ಪ್ರಾಣವು ಚೈತನ್ಯಯುತವಾಗಿದ್ದರೂ ವ್ಯವಹಾರವಿಲ್ಲದಂತೆ ತೋರಿಬರುವುದು. ಸುಷುಪ್ತಿಯ ಆಘಾತದಿಂದಾಗಿ ವ್ಯವಹಾರವಿಲ್ಲದಿರುವಿಕೆಯು ಎಂಬ ಅರ್ಥ. ಉತ್ತರವಾಗಿ ಪ್ರಾಣವೇ ಆತ್ಮವಾಗಿ ಅದು ಸುಷುಪ್ತಿಯಲ್ಲಿ ಕ್ರಿಯಾಶೀಲವಾಗಿದ್ದರೆ ಅದರ ಒಡೆತನದಲ್ಲಿರುವ ಕರಣಗಳು ನಿಷ್ಕ್ರಿಯವಾಗುತ್ತಿರಲಿಲ್ಲ. ಆದರೆ ಸುಷುಪ್ತಿಯಲ್ಲಿ ಇಂದ್ರಿಯಗಳು ವಿರಮಿಸುತ್ತವೆ, ಹಾಗಾಗಿ ಪ್ರಾಣವು ಅವುಗಳ ಅಧಿಪತಿಯಲ್ಲ, ಬೇರೆಯೇ ಯಾವುದೋ ಆಗಿದೆ ಎಂದು ದೃಷ್ಟಾಂತದ ಮೂಲಕ ತಿಳಿಸಲು **ಪ್ರಾಣೇ ವ್ಯಾಪ್ರಿಯಮಾಣ ಇತಿ.** [5–20..21]

ಪ್ರಾಣವು ಸುಷುಪ್ತಿಯಲ್ಲಿ ವಿಶ್ರಾಂತಿಯನ್ನು ಬಯಸುವ ಆತ್ಮವಾದರೆ, ಅದು ಆ ಸಮಯದಲ್ಲಿ ನಿಷ್ಕ್ರಿಯವಾಗಿರಬೇಕು. ಹಾಗಲ್ಲದೆ ನಿದ್ದೆಯಲ್ಲಿ ಪ್ರಾಣವು ಹಿಂದಿನಂತೆಯೇ ಕಾರ್ಯನಿರತವಾಗಿರುತ್ತದೆ; ಉಸಿರಾಟ ಮತ್ತಿತರ ಕಾರ್ಯಗಳು ಜರಗುತ್ತವೆ. ಒಂದುವೇಳೆ ಪ್ರಾಣವು ನಿಜವಾಗಿಯೂ ಆತ್ಮವಾಗಿದ್ದರೆ (ಇಂದ್ರಿಯಗಳು ಅದರ ಕ್ರಿಯೆ ಮತ್ತು ಜ್ಞಾನದ ಉಪಕರಣಗಳು), ಆಗ ಪ್ರಾಣವು ಸಕ್ರಿಯವಾಗಿರುವವರೆಗೆ ಆತ್ಮವು ನಿಷ್ಕ್ರಿಯವಾಗಿರಲು ಸಾಧ್ಯವಿಲ್ಲ; ಮತ್ತು ಸುಷುಪ್ತಿಯು ಆಗ ವಿಶ್ರಾಂತಿಯ ಸ್ಥಿತಿಯಾಗುವುದಿಲ್ಲ.

मनसः प्रेरके पुंसि विरते विरमन्त्यतः ।
करणानि समस्तानि तेषां स्वामी ततः पुमान् ॥ २२ ॥

ಮನಸಃ ಪ್ರೇರಕೇ ಪುಂಸಿ ವಿರತೇ ವಿರಮಂತ್ಯತಃ ।
ಕರಣಾನಿ ಸಮಸ್ತಾನಿ ತೇಷಾಂ ಸ್ವಾಮೀ ತತಃ ಪುಮಾನ್ ॥ 22 ॥

ಮನಸನ್ನು ಪ್ರೇರೇಪಿಸುವ ಪುರುಷನು ವಿಶ್ರಾಂತಿಯನ್ನು ಪಡೆದರೆ, ಸಮಸ್ತ ಇಂದ್ರಿಯಗಳು ತಮ್ಮ ಕೆಲಸವನ್ನು ನಿಲ್ಲಿಸುತ್ತವೆ. ಹಾಗಾಗಿ ಅವುಗಳ ಸ್ವಾಮಿಯು ಪುರುಷನಾಗಿದ್ದಾನೆ. [5–22]

ವಿವೃತ್ತಿ

ಪರಿಶೇಷನ್ಯಾಯದಂತೆ, ಪ್ರಾಣದಿಂದ ಹೊರತಾದುದರ ಆತ್ಮತ್ವವನ್ನು ಹೇಳಬಹುದು ಎನ್ನಲು **ಮನಸ ಇತಿ.** 'ಯೋ ಮನೋಂತರೋ ಯಮಯತಿ' (ಬೃ.ಉ.5–7–20) ಎಂಬ ಶ್ರುತಿಯಂತೆ ಅಂತರ್ಯಾಮಿಯಾದ ಆತ್ಮನೆಂಬ ಪುರುಷನು ಮನಸ್ಸಿನ ಪ್ರೇರಕನು. ಇಂದ್ರಿಯಗಳು ಮನಸ್ಸಿನ ದ್ವಾರಗಳಾಗಿವೆ. ಸರ್ವಾಧ್ಯಕ್ಷನಾದ ಪುರುಷನು ವಿಶ್ರಮಿಸುವಾಗ ಮನಸ್ಸು ಕೂಡಿರುವ ಇಂದ್ರಿಯಗಳು ವಿಶ್ರಮಿಸುತ್ತವೆ ಎಂದು ಯೋಜಿಸಿಕೊಳ್ಳುವುದು. ಹಾಗಾಗಿ ಮನಸು ಸೇರಿದಂತೆ ಎಲ್ಲಾ ಕರಣಗಳ ಸ್ವಾಮಿಯಾದ ಪುರುಷನು, ಪ್ರಾಣಕ್ಕೆ ಅತಿರಿಕ್ತನು ಎಂಬ ಅರ್ಥವು. [5–22]

ಹೀಗೆ ಮನಸು ಮತ್ತು ಇಂದ್ರಿಯಗಳ ಒಡೆಯನಾಗಿರುವ ಆತ್ಮವು, ಪ್ರಾಣದಿಂದ ಭಿನ್ನವಾಗಿದೆ.

ಬುದ್ಧಿಯು ಆತ್ಮವಲ್ಲ

ವಾರ್ತಿಕಕಾರರು ಬುದ್ಧಿಯು ಕ್ಷಣಿಕ ವಿಜ್ಞಾನವಲ್ಲದೆ (ಜ್ಞಾನದ ಕ್ಷಣಮಾತ್ರದ ಸ್ಥಿತಿ) ಬೇರೇನೂ ಅಲ್ಲ ಎಂಬ ಬುದ್ಧಿಯ ಪರವಾದ ತರ್ಕವನ್ನು ನಿರಾಕರಿಸುತ್ತಾರೆ.

बुद्धिस्तु क्षणिका वेद्या गमागमसमन्विता ।
आत्मनः पतिबिम्बे तु भासिता भासयेज्जगत् ॥ २३ ॥

ಬುದ್ಧಿಸ್ತು ಕ್ಷಣಿಕಾ ವೇದ್ಯಾ ಗಮಾಗಮಸಮನ್ವಿತಾ ।
ಆತ್ಮನಃ ಪ್ರತಿಬಿಂಬೇ ತು ಭಾಸಿತಾ ಭಾಸಯೇಜ್ಜಗತ್ ॥ 23 ॥

ಬುದ್ಧಿಯು ಕ್ಷಣಿಕವಾಗಿ ತಿಳಿದುಬರುವಂತಹದು ಹಾಗೂ ಬಂದು–ಹೋಗುವಂತಹದು. ಆತ್ಮವು ಅದರಲ್ಲಿ ಪ್ರತಿಬಿಂಬಿಸಿದಾಗ ಅದು ಬೆಳಗಲ್ಪಟ್ಟು, ವಿಶ್ವವನ್ನು ಬೆಳಗುತ್ತದೆ. [5–23]

ವಿವೃತ್ತಿ

ಇದರಲ್ಲಿ ಕ್ಷಣಿಕ ವಿಶೇಷಜ್ಞಾನಕ್ಕೆ ಆತ್ಮತ್ವವನ್ನು ನಿರಾಕರಿಸುತ್ತಾ **ಬುದ್ಧಿಸ್ತ್ವಿತಿ.** ***ಗಮಾಗಮ*** ಉತ್ಪತ್ತಿ ವಿನಾಶಗಳಿರುವ ಹಾಗಿರುವುದರಿಂದ ಅದರ ಅನಾತ್ಮತ್ವವನ್ನು ತಿಳಿಸಿ ಅದಕ್ಕೆ ಆಶ್ರಯವಾಗಿರುವುದು ಯಾವುದು ಎಂದು ತಿಳಿಸಲು **ಆತ್ಮನಃ ಇತಿ.** ಅದರ ಅನ್ಯಾಧೀನ ಪ್ರಕಾಶತ್ವದಿಂದಾಗಿ ಅದು ಆತ್ಮವಲ್ಲ ಎಂಬ ಅರ್ಥ. [5–23]

ಬುದ್ಧಿಯು ಆತ್ಮವಲ್ಲ ಏಕೆಂದರೆ ಅದು ತನ್ನ ಬೆಳಕಿಗೋಸ್ಕರ ಇನ್ನೊಂದನ್ನು ಅವಲಂಬಿಸಿದೆ. ಅದನ್ನು ಹೀಗೆ ವಿವರಿಸಿದ್ದಾರೆ:

आत्मन्युत्पद्यते बुद्धिरात्मन्येव प्रलीयते ।
प्रागुर्ध्वं चासती बुद्धिः स्वयमेव निषिध्यते ॥ २४ ॥

ಆತ್ಮನ್ಯುತ್ಪದ್ಯತೇ ಬುದ್ಧಿರಾತ್ಮನ್ಯೇವ ಪ್ರಲೀಯತೇ ।
ಪ್ರಾಗುರ್ಧ್ವಂ ಚಾಸತೀ ಬುದ್ಧಿಃ ಸ್ವಯಮೇವ ನಿಷಿಧ್ಯತೇ ॥ 24 ॥

ಆತ್ಮದಿಂದ ಬುದ್ಧಿಯ ಉತ್ಪತ್ತಿಯಾಗುತ್ತದೆ, ಆತ್ಮದಲ್ಲಿಯೇ ಅದು ಲೀನವಾಗುತ್ತದೆ; ಇದರ ಹಿಂದು–ಮುಂದೆ ಅದಕ್ಕೆ ಅಸ್ತಿತ್ವವಿಲ್ಲ ಹಾಗೂ ಅದಕ್ಕೆ ಸ್ವಯಂ ಅಸ್ತಿತ್ವವಿಲ್ಲ. [5–24]

ವಿವೃತ್ತಿ

ಅನ್ಯಾಧೀನ ಪ್ರಕಾಶತ್ವವನ್ನು ಸಿದ್ಧಮಾಡಲು **ಆತ್ಮನೀತಿ.** ತನ್ನ ಉತ್ಪತ್ತಿ–ವಿನಾಶಗಳನ್ನು ತಾನೇ ಗ್ರಹಿಸುವುದು ಸಾಧ್ಯವಿಲ್ಲವಾದುದರಿಂದ ಅದರ ಅಗ್ರಹಣತ್ವವು ಸಿದ್ಧವಾಗುವುದು. ಉತ್ಪತ್ತಿ ವಿನಾಶಗಳು ಹೊರಗಿನಿಂದ ಗ್ರಾಹ್ಯವಾಗುವುದೆಂಬ ನಿಯಮದಂತೆ ಕ್ಷಣಿಕವಿಜ್ಞಾನದ ಅನ್ಯ ಗ್ರಾಹ್ಯತ್ವವು ಸಿದ್ಧವಾಗಿ, ಅದರ ಅನಾತ್ಮತ್ವವು ಸಿದ್ಧವಾಗುವುದು. [5–24]

ಒಂದು ವಸ್ತುವಿನ ಉಗಮ ಮತ್ತು ನಾಶವನ್ನು ಅದೇ ನೋಡಲು ಸಾಧ್ಯವಿಲ್ಲ ಮತ್ತು ಬೇರೊಂದು ಚೈತನ್ಯಯುತ ವಸ್ತು ಅದನ್ನು ಅನುಭವಿಸದೆ, ಅವುಗಳು ಅನುಭವದ ವಿಷಯಗಳಾಗಲು ಸಾಧ್ಯವಿಲ್ಲ. ಹೀಗೆ ಒಂದು ಚೈತನ್ಯಯುತ ವಸ್ತುವು ಬುದ್ಧಿಯ ಕ್ಷಣ-ಕ್ಷಣದ ಬದಲಾವಣೆಗಳನ್ನು ಗಮನಿಸುವುದರಿಂದ, ಬುದ್ಧಿಯು ಆತ್ಮವಲ್ಲ ಎಂಬುದಕ್ಕೆ ಬೇರೆ ಪ್ರಮಾಣಗಳ ಅಗತ್ಯವಿಲ್ಲ.

ಈ ಕಷ್ಟವನ್ನು ತಪ್ಪಿಸಲು, ಕೆಲವರು ಆತ್ಮವು ಕೇವಲ ಒಂದು ಕ್ಷಣಿಕ ಜ್ಞಾನದ ಹೊಳಹು ಅಲ್ಲ, ಅದು ಅಂತಹ ಅನಂತ ಹೊಳಹುಗಳ ಸರಮಾಲೆ, ಒಂದು ಇನ್ನೊಂದಕ್ಕೆ ನಾಂದಿಹಾಡಿ ಅಂತ್ಯವಾದ ಕೂಡಲೇ ಇನ್ನೊಂದರಲ್ಲಿ ಸಂಯೋಗವಾಗುವುದು ಎಂದು ಹೇಳುತ್ತಾರೆ. ಒಂದು ಸ್ಥಿತಿಯು ಕ್ಷಣಿಕವಾಗಿದ್ದರೂ, ಈ ಸರಮಾಲೆಗೆ ಆದಿ – ಅಂತ್ಯವಿಲ್ಲ. ಈ ವಾದವೂ ಆಕ್ಷೇಪಗಳಿಗೆ ತುತ್ತಾಗುವುದು.

ज्ञानाच्चेत्पूर्वपूर्वस्मादुत्तरोत्तरसम्भवः ।
युगपद्बहुबुद्धित्वं प्रसज्येत क्षणे क्षणे ॥ २५ ॥
बुद्ध्यन्तरं न जनयेन्नाशोत्तरमसत्त्वतः ।

ಜ್ಞಾನಾಚ್ಚೇತ್ಪೂರ್ವಪೂರ್ವಸ್ಮಾದುತ್ತರೋತ್ತರಸಂಭವಃ ।
ಯುಗಪದ್ಬಹುಬುದ್ಧಿತ್ವಂ ಪ್ರಸಜ್ಯೇತ ಕ್ಷಣೇ ಕ್ಷಣೇ ॥ 25 ॥
ಬುದ್ಧ್ಯಂತರಂ ನ ಜನಯೇನ್ನಾಶೋತ್ತರಮಸತ್ತ್ವತಃ ।

ಹಿಂದಿನ ಸಂವೇದನೆಯು ಮುಂದಿನ ಸಂವೇದನೆಯನ್ನು ಹುಟ್ಟುಹಾಕಿದರೆ, ಅನೇಕ ಸಂವೇದನೆಗಳು ಒಂದೇ ಕ್ಷಣದಲ್ಲಿದ್ದು, ಅವುಗಳ ಸಂಖ್ಯೆ ಪ್ರತಿ ಕ್ಷಣದಲ್ಲೂ ಜಾಸ್ತಿಯಾಗಬಹುದು. ಯಾವುದೇ ಸಂವೇದನೆಯು ಇನ್ನೊಂದನ್ನು ಹುಟ್ಟಿಸಿ, ಅದರಲ್ಲಿ ವಿಲೀನವಾಗಲು ಸಾಧ್ಯವಿಲ್ಲ, ಆಗ ಅದು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. [5–25..26]

ವಿವೃತ್ತಿ

ವಿಜ್ಞಾನಸ್ವರೂಪವು ಆತ್ಮವಾಗಿದ್ದರೆ ಅದರ ಸಂತಾನಗಳೂ ಆತ್ಮವೇ ಆಗಿರುತ್ತವೆ ಎಂದು ಶಂಕಿಸುವುದು ದುರ್ವ್ಯವಹಾರವಾಗುತ್ತದೆ ಎಂದು ತಿಳಿಸಲು **ಜ್ಞಾನಾಚ್ಚೇದಿತಿ.** ಇದರ ಅರ್ಥವು ಹೀಗಿದೆ: ಒಂದು ಜ್ಞಾನದಿಂದ ಇನ್ನೊಂದು ಜ್ಞಾನವು ಉತ್ಪತಿಯಾಗುವುದು ಎಂದು ಹೇಳುವ ವಾದಿಗಳು ತೋರಿಸುವುದು ಹಿಂದಿನದರಿಂದ ಮುಂದಿನದು ಸಂಭವಿಸುತ್ತದೆ ಎಂಬ ವಾಕ್ಯವನ್ನು. ಅದರಲ್ಲಿಯ ದೋಷವನ್ನು ತಿಳಿಸಲು **ಯುಗಪದಿತಿ.** ಹಿಂದು ಹಿಂದಿನ ಬುದ್ಧಿಯನ್ನು ಅವಲಂಬಿಸಿ ಮುಂದು ಮುಂದಿನ ಬುದ್ಧಿಯು ಜನಿಸುವುದರಿಂದ ಆಯಾಯ ಬುದ್ಧಿಯ ಉತ್ಪತ್ತಿಯು ಕ್ಷಣ ಕ್ಷಣಗಳಲ್ಲಿಯೂ ಆಗುತ್ತಿರುವುದರಿಂದ ಅನಂತ ಬುದ್ಧಿಗಳು ಪ್ರತಿ ಕ್ಷಣದಲ್ಲಿಯೂ ಇರಬೇಕಾಗುವುದು. ವಿಜ್ಞಾನದ ಕ್ಷಣಿಕತೆಯು ಅಂತಹ ಪ್ರಂಗವನ್ನು ಸೃಷ್ಟಿಸುವುದಿಲ್ಲ. ಎರಡನೆಯದಾಗಿ **ಬುದ್ಧ್ಯಂತರಮಿತಿ.** ಹಿಂದಿನ ಬುದ್ಧಿಯು ಮುಂದಿನದರಲ್ಲಿ ಅನ್ವಯವಾದರೆ ಅದು ನಾಶವಾಗುವುದರಿಂದ ಅದು ಅಸತ್ಯವಾಗುತ್ತದೆ. ಹಾಗಾಗಿ ಒಂದರಿಂದ ಇನ್ನೊಂದು ಹುಟ್ಟುತ್ತದೆ ಎಂಬ ವಾದವು ಸರಿಯಲ್ಲ. ಅಸತ್ಯವಾದುದರಿಂದ ಜನಕತ್ವವೂ ಇರುವುದಿಲ್ಲ ಎಂಬ ಭಾವ. [5–25..26]

ವಿಜ್ಞಾನ–ವಾದಿಗಳನ್ನು ಕೇಳಬೇಕು: ಹಿಂದಿನ ಸಂವೇದನೆಯು ತಾನು ಹುಟ್ಟು ಹಾಕುವ ಮುಂದಿನದರಲ್ಲಿ ಉಳಿಯುವುದೋ ಇಲ್ಲವೋ? ಉಳಿಯುವುದೆಂದಾದರೆ, ಎಲ್ಲಾ ಸಂವೇದನೆಗಳು ಕ್ಷಣಿಕವಾದುದರಿಂದ, ಪ್ರತಿಯೊಂದು ಸಂವೇದನೆಯಲ್ಲಿ ಹಿಂದಿನವುಗಳು ಸೇರಿರುತ್ತವೆ ಮತ್ತು ಅವು ಅನಂತ; ಇದು ನಮ್ಮ ಅನುಭವಕ್ಕೆ ವಿರುದ್ಧವಾಗಿದೆ. ಅನಂತತೆಯನ್ನು ತಪ್ಪಿಸುವುದಾದರೆ, ವಿಜ್ಞಾನವಾದಿಗಳು ಸಂವೇದನೆಯ ಕ್ಷಣಿಕತೆಯ ವಾದವನ್ನು ಕೈಬಿಡಬೇಕು. ಉಳಿದುಕೊಳ್ಳುವುದಿಲ್ಲವೆಂದಾದರೆ, ಪ್ರತಿಯೊಂದು ಸಂವೇದನೆಯು ಶೂನ್ಯದಿಂದ ಸೃಷ್ಟಿಯಾಗುವಂತಾಯಿತು ಹಾಗು, ಎಲ್ಲವೂ ಒಂದೇ ಸಮಯದಲ್ಲಿ ಅಸ್ತಿತ್ವವನ್ನು ಪಡೆದುಕೊಳ್ಳಬಹುದು.

ಇವೆಲ್ಲವುಗಳ ಸಮಷ್ಟಿಯೂ ಆತ್ಮವಲ್ಲ

एषां सङ्घात आत्मा चेदेकदेशे पृथक्कृते ॥ २६ ॥
न चैतन्यं प्रसज्येत सङ्घाताभावतस्तदा ।

ಏಷಾಂ ಸಂಘಾತ ಆತ್ಮಾ ಚೇದೇಕದೇಶೇ ಪೃಥಕ್ಕೃತೇ ॥ 26 ॥
ನ ಚೈತನ್ಯಂ ಪ್ರಸಜ್ಯೇತ ಸಂಘಾತಾಭಾವತಸ್ತದಾ ।

ಇವೆಲ್ಲವುಗಳ ಮೊತ್ತವು ಆತ್ಮವಾಗುವುದೆಂದು ಭಾವಿಸುವುದಾದರೆ, ಒಂದು ಭಾಗವನ್ನು ಕತ್ತರಿಸಿದರೆ ಪೂರ್ಣತೆಯ ಕೊರತೆಯಿರುವುದರಿಂದ, ಉಳಿದವುಗಳಲ್ಲಿ ಚೈತನ್ಯವಿರಲು ಸಾಧ್ಯವಿಲ್ಲ. [5–26..27]

ವಿವೃತ್ತಿ

ಹೀಗೆ ದೇಹದಿಂದ ಬುದ್ಧಿಯವರೆಗೆ ಪ್ರತಿಯೊಂದರ ಆತ್ಮತ್ವವು ನಿರಾಕೃತವಾದ ಬಳಿಕ, ಪ್ರತ್ಯೇಕವಾಗಿಯಲ್ಲದೆ ಅವುಗಳೆಲ್ಲದರ ಸಂಯುಕ್ತವು ಆತ್ಮವೆಂದು ತಿಳಿಯಲು ಸಾಧ್ಯವಿದೆಯೇ? ಎಂದು ಕೇಳಿದರೆ, ಸಂಯುಕ್ತವೇ ಚೈತನ್ಯವಾಗಿದೆಯೋ ಯಾ ಪ್ರತಿಯೊಂದು ಅವಯವವೂ ಚೈತನ್ಯಯುತವಾಗಿದೆಯೋ ಎಂಬ ಪ್ರಶ್ನೆ ಏಳುವುದು. ಅದನ್ನು ದೂರಮಾಡುತ್ತಾ **ಏಷಾಮಿತಿ. *ಸಂಘಾತ*** ಅವಯುವಗಳಿಂದ ಕೂಡಿರುವ ಸಂಯುಕ್ತವು ಆತ್ಮವಾದರೆ, ಆಗ ಅದರ ಒಂದು ಭಾಗವಾದ ಕಣ್ಣು, ಕಿವಿ ಇತ್ಯಾದಿಗಳು ನಷ್ಟವಾದಾರೆ ಸಂಯುಕ್ತದ ಚೈತನ್ಯವು ನಷ್ಟವಾಗಬೇಕು. ಅದು ಹಾಗೆ ಆಗುವುದಿಲ್ಲ ಏಕೆಂದರೆ ಕುರುಡ, ಕಿವುಡ, ಮೂಕರು ತಮ್ಮ ಜೀವನ ಸಾಗಿಸುತ್ತಿದ್ದಾರೆ. ಹಾಗಾಗಿ ಸಮುದಾಯ ಚೇತನತ್ವದ ಪಕ್ಷವು ಯುಕ್ತವಲ್ಲ. [5–26..27]

ಇಲ್ಲಿ ಒಂದು ಪ್ರಶ್ನೆ ಏಳುತ್ತದೆ: ಇವುಗಳ ಮೊತ್ತವು ಪೂರ್ಣತೆಯಿಂದ ಚೈತನ್ಯವನ್ನು ಹೊಂದಿದೆಯೋ ಅಥವಾ ಪ್ರತಿಯೊಂದು ಭಾಗಗಳಲ್ಲಿಯೂ ಚೈತನ್ಯವಿದೆಯೋ? ಮೊದಲನೆಯದರಲ್ಲಿ, ಯಾವುದೇ ಒಂದು ಅಂಗವನ್ನು ತುಂಡರಿಸಿದರೆ (ಕಿವಿ, ಕಣ್ಣು ಇತ್ಯಾದಿ), ಉಳಿದವುಗಳ ಚೈತನ್ಯತೆ ನಾಶವಾಗಬೇಕು. ಆದರೆ ಕಿವುಡರು ಯಾ ಕುರುಡರು ಚೈತನ್ಯಯುತ ಜೀವನ ನಡೆಸುವುದನ್ನು ನಾವು ಕಾಣುತ್ತೇವೆ.

ಎರಡನೆಯದನ್ನು ಒಪ್ಪಿಕೊಳ್ಳಲು ಅಸಾಧ್ಯ ಯಾಕೆಂದರೆ:

भिन्नदिग्गत्यभिप्रायो बहु चेत्तन्न पूजितम् ॥ २७ ॥
सद्यो भिन्नं भवेदेतत् निष्क्रियं वा भविष्यति ।

ಭಿನ್ನದಿಗ್ಗತ್ಯಭಿಪ್ರಾಯೋ ಬಹು ಚೇತ್ತನ್ನ ಪೂಜಿತಮ್ ॥ 27 ॥

ಸದ್ಯೋ ಭಿನ್ನಂ ಭವೇದೇತತ್ ನಿಷ್ಕ್ರಿಯಂ ವಾ ಭವಿಷ್ಯತಿ ।

ಸಂಯುಕ್ತದಲ್ಲಿ ಅನೇಕ ಚೈತನ್ಯಗಳಿವೆ ಎಂದು ಒಪ್ಪಿಕೊಂಡರೆ, ಆಗ ಈ ಅನೇಕ ಚೈತನ್ಯಗಳ ಸಂಯೋಗವು ತತ್ಕ್ಷಣವೇ ಮುರಿದುಬೀಳುತ್ತದೆ ಅಥವಾ ಅದು ನಿಷ್ಕ್ರಿಯವಾಗುತ್ತದೆ. [5–27..28]

ವಿವೃತ್ತಿ

ಅವಯವಗಳು ಚೈತನ್ಯಯುತವಾಗಿವೆ ಎಂಬ ಪಕ್ಷವನ್ನು ನಿರಾಕರಿಸುತ್ತಾ, **ಭಿನ್ನೇತಿ.** ಆತ್ಮನೆಂಬ ಸಂಯುಕ್ತದಲ್ಲಿ ಅನೇಕ ಚೈತನ್ಯಗಳಿವೆ ಎಂದು ಒಪ್ಪಿಕೊಂಡರೆ ***ಭಿನ್ನದಿಗ್ಗತ್ಯಭಿಪ್ರಾಯೋ*** ಅವು ವಿರುದ್ಧ ದಿಕ್ಕಿನಲ್ಲಿ ಚಲಿಸುವ ಇಚ್ಛೆಯುಳ್ಳವಾದರೆ ಎಂಬ ಅರ್ಥ. ಇದ್ದರೆ ಆಗ **ತನ್ನ ಪೂಜಿತಾಮಿತಿ** ಅದು ಯಾಕೆ ಪೂಜಿತವಾಗುವುದಿಲ್ಲ ಎಂದು ಹೇಳಲು **ಸದ್ಯೋ ಭಿನ್ನಮಿತಿ.** ಸಂಯುಕ್ತದ ಒಂದು ಭಾಗವು ಪೂರ್ವಕ್ಕೆ ಚಲಿಸಿದರೆ, ಇನ್ನೊಂದು ಭಾಗವು ಮೇಲೆ, ಮತ್ತೊಂದು ಕೆಳಗೆ, ಮಗದೊಂದು ದಕ್ಷಿಣಕ್ಕೆ ಚಲಿಸಬಹುದು; ಹಾಗಾಗಿ ಆ ಸಂಯುಕ್ತವು ತಾನಾಗಿಯೇ ಚೂರಾಗುವುದು ಕಂಡುಬರುತ್ತದೆ. ಅದು ಚೂರಾಗದಿದ್ದರೆ ನಿಷ್ಕ್ರಿಯವಾಗಬಹುದು, ಒಂದರ ಆಕರ್ಷಣೆಯನ್ನು ಇನ್ನೊಂದು ವಿರುದ್ಧಾಕರ್ಷಣೆಯು ಸರಿದೂಗಿಸಿದಂತೆ. ಹಾಗೆ ವಿಚಾರಮಾಡುವುದರಿಂದ ಸಂಯುಕ್ತದ ಅವಯವಗಳ ಆತ್ಮತ್ವವು ಹೊಂದುವುದಿಲ್ಲ ಎಂದು ಸಿದ್ಧವಾಗುವುದು. [5–27..28]

ಸಂಯುಕ್ತದ ಪ್ರತಿಯೊಂದು ಸದಸ್ಯನೂ ತನ್ನದೇ ಆದ ದಾರಿಯಲ್ಲಿ ಸಾಗಿದರೆ, ಒಂದು ಮುಂದೆಹೋದಾಗ ಇನ್ನೊಂದು ಅದರ ವಿರುದ್ಧ ದಿಕ್ಕಿನಲ್ಲಿ ಹೋದರೆ, ಜೀವನದ ವ್ಯವಸ್ಥೆಯು ಮುರಿದುಬೀಳಬಹುದು ಅಥವಾ ಅಂತಹ ಸಂದರ್ಭಗಳು ಬಾರದಂತೆ ನೋಡಿಕೊಂಡರೂ, ಕೆಲಸಮಯದಲ್ಲಿ ಅದು ನಿಷ್ಕ್ರಿಯವಾಗಬಹುದು.

ಆತ್ಮವು ಸರ್ವವ್ಯಾಪ್ತ

ಇದುವರೆಗೆ ಆತ್ಮವು ದೇಹ, ಇಂದ್ರಿಯಗಳು, ಪ್ರಾಣ, ಬುದ್ಧಿ ಅಥವಾ ಅವುಗಳ ಮೊತ್ತದಿಂದ ಬೇರೆಯಾಗಿದೆಯೆಂದು ಪ್ರಮಾಣೀಕರಿಸಲಾಯಿತು; ಆದರೂ ಅದರ ಗಾತ್ರದ ಕುರಿತು ಸಂಶಯ ಮೂಡಬಹುದು. ಅರ್ಹತರನ್ನು ಅನುಸರಿಸುವ ಜೈನರು, ಆತ್ಮವು ತಾನು ವಾಸಿಸುವ ದೇಹದ ಪರಿಮಾಣವನ್ನೇ ತನ್ನ ಪರಿಮಾಣವೆಂದು ತಿಳಿಯುತ್ತಾರೆ; ವೇದಾಂತಿಗಳು ಅದನ್ನು ಅಣುವಿನ ಗಾತ್ರದಷ್ಟು ಚಿಕ್ಕದು ಎನ್ನುತ್ತಾರೆ; ಸಾಂಖ್ಯರು ಅದನ್ನು ಅನಂತವಾಗಿ ಬೃಹದ್ಗಾತ್ರವೆಂದೂ, ಸರ್ವವ್ಯಾಪ್ತವೆಂದೂ ಹೇಳುತ್ತಾರೆ. ವಾರ್ತಿಕಕಾರರು ಅದನ್ನು ಈಗ ಉತ್ತರಿಸುತ್ತಾರೆ:

देहस्यान्तर्गतोप्यात्मा व्याप्त एवेति बुध्यते ।
अणुप्रमाणश्चेदेष व्याप्नुयान्नाखिलं वपुः ।

ದೇಹಸ್ಯಾಂತರ್ಗತೋಪ್ಯಾತ್ಮಾ ವ್ಯಾಪ್ತ ಏವೇತಿ ಬುಧ್ಯತೇ ॥ 28 ॥
ಅಣುಪ್ರಮಾಣಶ್ಚೇದೇಷ ವ್ಯಾಪ್ನುಯಾನ್ನಾಖಿಲಂ ವಪುಃ ।

ದೇಹದಲ್ಲಿ ವಾಸಿಸುವುದರಿಂದ, ಆತ್ಮವು ಸರ್ವವ್ಯಾಪ್ತವಾಗಿರಬೇಕು. ಅದು ಅಣು ಪ್ರಮಾಣದ್ದಾಗಿದ್ದರೆ, ಅದು ಪೂರ್ಣ ದೇಹವನ್ನು ಆವರಿಸಲಾರದು. [5–28..29]

ವಿವೃತ್ತಿ

ಹೀಗಿರುವ ಯಾವ ದೇಹವಿದೆಯೋ, ಅದರ ಪರಿಮಾಣದಲ್ಲಿಯೇ ಅದರೊಳಗಿರುವ ಆತ್ಮವಿದೆ ಎಂದು ಜೈನಮತ ಅನುಸರಿಸುವವರು ತಿಳಿಯುತ್ತಾರೆ. ಆತ್ಮವು ಅಣುಪರಿಮಾಣದಲ್ಲಿದೆ ಎಂದು ವೇದಾತಿಗಳಲ್ಲಿ ಕೆಲವರು ಹೇಳಿದರೆ, ಅದು ಅನಂತಗಾತ್ರವಾಗಿದೆ ಎಂದು ಸಾಂಖ್ಯ ಮತ್ತಿತರರು ತಿಳಿಯುತ್ತಾರೆ. ಹಾಗೆ ದೇಹ ಮುಂತಾದವುಗಳಿಂದ ವಿಲಕ್ಷಣವಾಗಿರುವ ಆತ್ಮವು ಯಾವ ಪರಿಮಾಣದ್ದಾಗಿದೆ? ಎಂದು ವಿಚಾರಿಸುವ **ದೇಹಸ್ಯಾಂತರ್ಗತೋಪೀತಿ. *ವ್ಯಾಪ್ತ ಏವೇತಿ*** ಕರ್ತರಿ ನಿಷ್ಠವಾಗಿ ವ್ಯಾಪಿಸಿಯೇ ಇರುವುದು ಎಂಬ ಅರ್ಥ. ***ಬುಧ್ಯತೇ*** ತಿಳಿಯುವುದು ನಿಶ್ಚಯವಾಗಿ. ಇನ್ನೊಂದು ಪಕ್ಷವಾದ ಅಣುಪರಿಮಾಣದ ಆತ್ಮ ಎಂಬ ವಾದದಲ್ಲಿಯ ದೋಷವನ್ನು ಎತ್ತಿತೋರಿಸಲು **ಅಣುಪ್ರಮಾಣಶ್ಚೇದಿತಿ.** ಈ ಪಕ್ಷದಲ್ಲಿ ಸರ್ವಾಂಗಗಳಲ್ಲಿರುವ ಶೀತ, ಉಷ್ಣ ಮುಂತಾದವುಗಳಿಂದ ಆಗುವ ವೇದನೆ ಇತ್ಯಾದಿಗಳನ್ನು ಒಂದೇಸಮಯದಲ್ಲಿ ಅನುಭವಿಸುವ ಪ್ರಸಂಗವು ಬರಬಹುದು. ಆಗ ಅಣುಪ್ರಮಾಣದಲ್ಲಿ ಅಧಿಷ್ಠಿತವಾಗಿರುವ ಚೇತನದಿಂದ ಒಂದೇಸಮಯದಲ್ಲಿ ಅಂಗಗಳ ಸಂವೇದನೆಗಳ ವ್ಯಾಪಾರವನ್ನು ಮಾಡಲಾಗದ ಪ್ರಸಂಗವೇರ್ಪಡಬಹುದು. ಇಂತಹ ಪರಿಹಾರವಿಲ್ಲದ ದೋಷಗಳು ಈ ಪಕ್ಷದಲ್ಲಿ ಇವೆ. [5–28..29]

ಒಂದೇ ಸಮಯದಲ್ಲಿ ಛಳಿ ಮತ್ತು ಬಿಸಿ ಹಾಗೂ ಇತರ ಇದೇರೀತಿಯ ವಿರುದ್ಧ ಗುಣಗಳ ಸಂವೇದನೆಗಳನ್ನು ದೇಹದ ಭಿನ್ನ ಅಂಗಗಳಲ್ಲಿ ಅನುಭವಿಸುವುದು ಅಣುಗಾತ್ರದ ಆತ್ಮದಿಂದ ಸಾಧ್ಯವಿಲ್ಲ. ಒಂದೇ ಸಮಯದಲ್ಲಿ ದೇಹದ ವಿಭಿನ್ನ ಅಂಗಗಳು ಕ್ರಿಯಾಶೀಲವಾಗುವುದು ಅಥವಾ ನಿಷ್ಕ್ರಿಯವಾಗುವುದು ಎಂಬುದನ್ನೂ ಇದು ವಿರೋಧಿಸುತ್ತದೆ.

देहप्रमाणश्चेन्न स्याद्बालस्य स्थविरादिता ॥ २९ ॥
देहवत्परिणामी चेत्तद्वदेव विनङ्क्ष्यति ।

ದೇಹಪ್ರಮಾಣಶ್ಚೇನ್ನ ಸ್ಯಾದ್ಬಾಲಸ್ಯ ಸ್ಥವಿರಾದಿತಾ ॥ 29 ॥
ದೇಹವತ್ಪರಿಣಾಮೀ ಚೇತ್ತದ್ವದೇವ ವಿನಂಕ್ಷ್ಯತಿ ।

ಆತ್ಮವು ದೇಹದ ಪರಿಮಾಣವುಳ್ಳದ್ದಾದರೆ, ಬಾಲ್ಯಾವಸ್ಥೆಯಿಂದ ತಾರುಣ್ಯಕ್ಕೆ, ವೃದ್ಧಾವಸ್ಥೆಗೆ ಸಾಗುವಾಗ ಅದು ಬದಲಾಗುತ್ತದೆ; ಆತ್ಮವು ದೇಹದೊಂದಿಗೆ ಬದಲಾಗುವುದಾದರೆ, ಅದೂ ನಶ್ವರವೇ. [5–29..30]

ವಿವೃತ್ತಿ

ಆತ್ಮವು ದೇಹದ ಪರಿಮಾಣದ್ದಾಗಿದೆ ಎಂಬ ಪಕ್ಷದ ದೋಷವನ್ನು ತಿಳಿಸಲು **ದೇಹಪ್ರಮಾಣಶ್ಚೇದಿತಿ.** ಈ ಮತವನ್ನು ಒಪ್ಪಿದರೆ, ಬಾಲಕನು ಯುವಕನಾಗುವಾಗ ಸಮಪ್ರಮಾಣದ ದೇಹವನ್ನು ಹೊಂದಿರಲಾರ. ಶರೀರದ ಪರಿಮಾಣ ಬದಲಾಗುವಾಗ ಆತ್ಮನ ಪರಿಮಾಣವೂ ಬದಲಾಗಬೇಕು. ಹಾಗಿರುವಾಗ ಆತ್ಮವನ್ನು ಶಾಶ್ವತವೆಂದು ಭಾವಿಸಲಾಗದು. ಅದರ ಅಂಗೀಕಾರವು ಪ್ರತ್ಯಭಿಜ್ಞತೆಗೆ ವಿರೋಧವಾಗುವುದು ಎಂಬ ಭಾವ. [5–29..30]

ಒಂದು ನಿಶ್ಚಿತ ಗಾತ್ರವನ್ನು ಆತ್ಮಕ್ಕೆ ಆರೋಪಿಸಲಾಗದು; ವಿವಿಧ ಕರ್ಮಗಳ ಫಲವನ್ನು ಭೋಗಿಸಲು ಅದೇ ಆತ್ಮವು ಬೇರೆ ಬೇರೆ ದೇಹಗಳನ್ನು ಆಶ್ರಯಿಸಬೇಕಾಗುವುದು ಹಾಗೂ ಒಂದು ಗಾತ್ರವು ತುಂಬಾ ಸಣ್ಣದಾಗಿ, ಇನ್ನೊಂದು ತುಂಬಾ ದೊಡ್ಡದಾಗಬಹುದು. ಇದಲ್ಲದೆ, ಆತ್ಮವು ಸರ್ವವ್ಯಾಪ್ತವಾದರೆ ಆಗ,

कर्मणां परिणामेन क्रिमिहस्त्यादिमूर्तिषु ॥ ३० ॥
व्याप्तत्वात्प्रविशत्यात्मा घटादिष्वन्तरिक्षवत् ।

ಕರ್ಮಣಾಂ ಪರಿಣಾಮೇನ ಕ್ರಿಮಿಹಸ್ತ್ಯಾದಿಮೂರ್ತಿಷು ॥ 30 ॥
ವ್ಯಾಪ್ತತ್ವಾತ್ಪ್ರವಿಶತ್ಯಾತ್ಮಾ ಘಟಾದಿಷ್ವಂತರಿಕ್ಷವತ್ ।

ಕರ್ಮವು ಫಲವನ್ನು ನೀಡಲು ತಯಾರಾಗಿರುವಾಗ, ಆಕಾಶವು ಮಡಕೆಯನ್ನು ಸೇರಿರುವಂತೆ, ಸರ್ವವ್ಯಾಪ್ತವಾಗಿರುವ ಆತ್ಮವು ಕ್ರಿಮಿ ಯಾ ಆನೆ ಮುಂತಾದವುಗಳ ದೇಹವನ್ನು ಸೇರುವುದು. [5–30..31]

ವಿವೃತ್ತಿ

ಇನ್ನೊಂದು ವಿಧದ ನಿರಾಕರಣೆಯನ್ನು ತಿಳಿಸಲು **ಕರ್ಮಣಾಮಿತಿ.** ಇದರ ಅಭಿಪ್ರಾಯವು ಹೀಗಿದೆ: ಒಂದು ಆತ್ಮಕ್ಕೆ ಅನೇಕ ಕರ್ಮಗಳು ಇರುವುದರಿಂದ ವಿರುದ್ಧಗುಣಗಳ ಅನೇಕ ದೇಹಗಳನ್ನು ಪ್ರವೇಶಿಸಬೇಕಾದ ಪ್ರಸಂಗವಿರಬಹುದು. ಮನುಷ್ಯ ಪರಿಮಾಣದ ಆತ್ಮವು ಹೇಗೋ ಏನೋ ಆನೆಯ ಜನ್ಮವೆತ್ತಿದರೆ, ಅದರ ಶರೀರವನ್ನು ಪೂರ್ಣವಾಗಿ ಆವರಿಸಲು ಸಾಧ್ಯವಾಗುವುದಿಲ್ಲ. ಅಥವಾ ಹೇಗೋ ಕ್ರಿಮಿಶರೀರವನ್ನು ಹೊಂದಿದರೆ, ಆಗ ಅದರೊಳಗೆ ಹಿಡಿಸಲಾರದು. ಹಾಗಾಗಿ ಈ ಪಕ್ಷವು ಸಾಧುವಲ್ಲ. ಆತ್ಮವು ವ್ಯಾಪಕವಾಗಿರುವುದೆಂಬ ಪಕ್ಷದಲ್ಲಿ ದೋಷವಿಲ್ಲವೆಂದು ಹೇಳಲು **ವ್ಯಾಪ್ತತ್ವಾದಿತಿ.** ***ಅಂತರಿಕ್ಷವತ್*** ಆಕಾಶದಂತೆ ಎಂಬ ಅರ್ಥ. [5–30..31]

ಸೀಮಿತ ಗಾತ್ರದ ದೇಹದಲ್ಲಿ ಪ್ರಕಟವಾದರೂ, ಆತ್ಮವು ವ್ಯಾಪಕವಾಗಿರುವುದು. ಉದಾಹರಣೆಗೆ,

परमाणुप्रमाणेपि मनसि प्रतिभासते ॥ ३१ ॥
स्वप्ने चराचरं विश्वमात्मन्येव प्रतिष्ठितम् ।

ಪರಮಾಣುಪ್ರಮಾಣೇಪಿ ಮನಸಿ ಪ್ರತಿಭಾಸತೇ ॥ 31 ॥
ಸ್ವಪ್ನೇ ಚರಾಚರಂ ವಿಶ್ವಮಾತ್ಮನ್ಯೇವ ಪ್ರತಿಷ್ಠಿತಮ್ ।

ಅವನು ಅತೀಸಣ್ಣದಾದ (ಪರಮಾಣು ಪ್ರಮಾಣ) ಮನಸಿನಲ್ಲಿ ಬೆಳಗುತ್ತಾನೆ; ಸ್ವಪ್ನಾವಸ್ಥೆಯಲ್ಲಿ ಚಲಿಸುವ ಯಾ ಸ್ಥಿರವಾದ ಸಂಪೂರ್ಣ ಪ್ರಪಂಚವೇ, ಆತ್ಮದ ಅಧೀನದಲ್ಲಿರುತ್ತದೆ. [5–31..32]

ವಿವೃತ್ತಿ

ಅಲ್ಪ ಪರಿಮಾಣದಿಂದ ಪ್ರತೀತವಾಗುವ ಆತ್ಮವು ವ್ಯಾಪಕವಾಗಿರುವ ಅವಸ್ಥೆಯಲ್ಲಿಯೂ ಇರುವುದು ಎಂದು ತಿಳಿಸಲು **ಪರಮಾಣುಪ್ರಮಾಣೇಪಿ.** ಪರಮಸೂಕ್ಷ್ಮವಾಗಿರುವ ಎಂಬ ಅರ್ಥದಲ್ಲಿ. ಅವಸ್ಥಾಂತರದಲ್ಲಿ ತಿಳಿಸುತ್ತಾ **ಸ್ವಪ್ನ ಇತಿ.** ಈ ಎರಡು ಅವಸ್ಥೆಗಳ ಪರಿಶೀಲನೆಯಿಂದ ಆತ್ಮವು ವ್ಯಾಪಕವಾಗಿರುವುದು ಎಂದು ತೋರಿಬರುತ್ತದೆ. [5–31..32]

ಈ ಎರಡು ವಿಷಯಗಳು ಆತ್ಮದ ಸರ್ವವ್ಯಾಪ್ತತೆಯನ್ನು ತೋರಿಸುತ್ತವೆ.

ಭ್ರಮೆ

देहादिष्वहमित्येवं भ्रमस्संसारहेतुकः ॥ ३२ ॥
अन्तःप्रविष्टश्शास्तेति मोक्षायोपादिशच्छ्रुतिः ।

ದೇಹಾದಿಷ್ವಹಮಿತ್ಯೇವಂ ಭ್ರಮಸ್ಸಂಸಾರಹೇತುಕಃ ॥ 32 ॥
ಅಂತಃಪ್ರವಿಷ್ಟಶ್ಶಾಸ್ತೇತಿ ಮೋಕ್ಷಾಯೋಪಾದಿಶಚ್ಛ್ರುತಿಃ ।

ಭೌತಿಕ ದೇಹ ಇತ್ಯಾದಿಗಳು ಆತ್ಮವೆಂಬ ಭ್ರಮೆಯು ಸಂಸಾರಕ್ಕೆ ಕಾರಣವಾದ ಅವಿದ್ಯೆಯಿಂದ ಉಂಟಾಗುತ್ತದೆ. 'ಈಶ್ವರನು ಒಳಗೆ ಪ್ರವೇಶಿಸಿದ್ದಾನೆ' (ತೈ.ಆ. 3–11) ಎಂದು ಮೋಕ್ಷದ ದೃಷ್ಟಿಯಿಂದ ಶ್ರುತಿಯು ತಿಳಿಸುತ್ತದೆ. [5–32..33]

ವಿವೃತ್ತಿ

ಹಾಗಾಗಿ ದೇಹ ಇತ್ಯಾದಿಗಳು ಆತ್ಮವೆಂಬ ವಾದಗಳು ಯುಕ್ತಿ ಮಾತ್ರವಾಗಿ ಪ್ರಮಾಣರಹಿತವಾಗಿರುವುದರಿಂದ ದೇಹ ಮುಂತಾದವುಗಳಲ್ಲಿ ಅಹಂ ಅಭಿಮಾನವು ಭ್ರಮೆ ಆಗಿರುವುದು ಎಂದು ಸಿದ್ಧಮಾಡಿ ಉಪಸಂಹರಿಸಲು **ದೇಹಾದಿಷ್ವಿತಿ.** ***ಸಂಸಾರಹೇತುಕಃ*** ಸಂಸಾರಕ್ಕೆ ಕಾರಣವಾದ ಅವಿದ್ಯೆಗೆ ಹೇತುವಾಗಿರುವುದು ಎಂಬ ಅರ್ಥದಲ್ಲಿ. ಸೃಷ್ಟಿಯಲ್ಲಿರುವ ದೇಹ ಇತ್ಯಾದಿಗಳಲ್ಲಿ ಆತ್ಮವು ಹೊರಗಿನಿಂದ ಪ್ರವೇಶಿಸಿರುವುದು ಎಂದು ಶ್ರುತಿಯು ಕೂಡ ತಿಳಿಸಿ ಸಂಯುಕ್ತವೂ ಆತ್ಮದಿಂದ ಆವರಿಸಲ್ಪಟ್ಟಿದೆ ಎಂಬ ಅಭಿಪ್ರಾಯವನ್ನು ಹೇಳುವ **ಅಂತಃ ಪ್ರವಿಷ್ಟ ಇತಿ.** ಆ ಶ್ರುತಿಯು 'ಅಂತಃ ಪ್ರವಿಷ್ಟಶ್ಶಾಸ್ತಾ ಜನಾನಾಮ್ । ಏಕಸ್ಸನ್ ಬಹುಧಾ ವಿಚಾರಃ' (ತೈ.ಆ.3–11) ಎಂದಾಗಿದೆ. ***ಮೋಕ್ಷಾಯ*** ಒಟ್ಟುಮಾಡಿರುವ ವಿವೇಕವು ಎಂಬ ಅರ್ಥ. [5–32..33]

एवमेषा महामाया वादिनामपि मोहिनी ॥ ३३ ॥
यस्मात्साक्षात्कृते सद्यो लीयते च सदाशिवे ।

ಏವಮೇಷಾ ಮಹಾಮಾಯಾ ವಾದಿನಾಮಪಿ ಮೋಹಿನೀ ॥ 33 ॥
ಯಸ್ಮಾತ್ಸಾಕ್ಷಾತ್ಕೃತೇ ಸದ್ಯೋ ಲೀಯತೇ ಚ ಸದಾಶಿವೇ ।

ಹೀಗೆ ವಾದಿಸುವವರನ್ನೂ ಶಕ್ತಿಯುತವಾದ ಮಾಯೆಯು ಮೋಹಗೊಳಿಸುತ್ತದೆ. ಆದರೆ, ಒಮ್ಮೆ ಸದಾಶಿವನ ದರ್ಶನವಾದರೆ, ಅದು ನಶಿಸಿ ಹೋಗುತ್ತದೆ. [5–33..34]

ವಿವೃತ್ತಿ

ಪ್ರಕರಣದ ಅರ್ಥವನ್ನು ಉಪಸಂಹರಿಸುವ **ಏವಮೇಷೇತಿ.** ***ಏಷಾ*** ಮಹೇಶ್ವರ ಶಕ್ತಿಯು. ಈಶ್ವರಶಕ್ತಿಯಿಂದ ಉಂಟಾದ ವ್ಯಾಮೋಹದ ನಿರ್ಬಂಧವು ವಾದಿಗಳ ಕಲ್ಪನೆಗಳಿಗೆ ನಿಯಾಮಕವಾಗಿದೆ ಎಂದು ಹೇಳುವ **ಯಸ್ಮಾದಿತಿ.** ಸದಾಶಿವನ ಸಾಕ್ಷಾತ್ಕಾರವನ್ನು ಗಳಿಸಿದವರ ಕಲ್ಪನೆಗಳೆಲ್ಲವೂ ಆ ಮಾಯಾಮಯಿಯಲ್ಲಿ ತಕ್ಷಣವೇ ಲೀನವಾಗುವುದು ಎಂಬ ಅರ್ಥವು. [5–33..34]

देहेन्द्रियासुहीनाय मानदूरस्वरूपिणे ॥ ३४ ॥
ज्ञानानन्दस्वरूपाय दक्षिणमूर्तये नमः ।

ದೇಹೇಂದ್ರಿಯಾಸುಹೀನಾಯ ಮಾನದೂರಸ್ವರೂಪಿಣೇ ॥ 34 ॥
ಜ್ಞಾನಾನಂದಸ್ವರೂಪಾಯ ದಕ್ಷಿಣಾಮೂರ್ತಯೇ ನಮಃ ।

ದೇಹ, ಇಂದ್ರಿಯಗಳು, ಪ್ರಾಣ ಇತ್ಯಾದಿ ರಹಿತನಿಗೆ, ಅನುಭವಗಳನ್ನು ಹೊಂದುವ ಎಲ್ಲಾ ಅಂಗಗಳಿಗೆ ನಿಲುಕದವನಿಗೆ, ಜ್ಞಾನ (ಅರಿವು) ಮತ್ತು ಸಂತೋಷದ ಸ್ವರೂಪನಾಗಿರುವ ದಕ್ಷಿಣಾಮೂರ್ತಿಗೆ, ಈ ನಮಸ್ಕಾರಗಳು. [5–34..35]

ವಿವೃತ್ತಿ

ಅಂತಹ ಶ್ರೀಗುರುಮೂರ್ತಿಗೆ ನಮಸ್ಕಾರಗಳು ಎಂದು ಹೇಳುವಾಗ ಅಂತಹ ಶಬ್ದದ ಅರ್ಥವನ್ನು ಪ್ರಕಟಿಸುವ **ದೇಹೇಂದ್ರಿಯಾಸುಹೀನಾಯೇತಿ.** [5–34..35]

इति श्री दक्षिणामूर्तिस्त्रोत्रार्थप्रतिपादके ॥ ३५ ॥
प्रबन्धे मानसोल्लासे पञ्चमोल्लाससङ्ग्रहः ॥ ३६ ॥

ಇತಿ ಶ್ರೀದಕ್ಷಿಣಾಮೂರ್ತಿಸ್ತ್ರೋತ್ರಾರ್ಥಪ್ರತಿಪಾದಕೇ ॥ 35 ॥
ಪ್ರಬಂಧೇ ಮಾನಸೋಲ್ಲಾಸೇ ಪಂಚಮೋಲ್ಲಾಸಸಂಗ್ರಹಃ ॥ 36 ॥

ಶ್ರೀದಕ್ಷಿಣಾಮೂರ್ತಿ ಸ್ತ್ರೋತ್ರದ ಅರ್ಥವನ್ನು ಪ್ರತಿಪಾದಿಸುವ ಮಾನಸೋಲ್ಲಾಸವೆಂಬ ಪ್ರಬಂಧದ ಪಂಚಮ ಉಲ್ಲಾಸದ ವಿವರಣೆಯು ಇಲ್ಲಿಗೆ ಮುಗಿಯಿತು. [5–35..36]

ವಿವೃತ್ತಿ

ಐದನೆಯ ಶ್ಲೋಕದ ವ್ಯಾಖ್ಯೆಯನ್ನು ಉಪಸಂಹರಿಸುವ **ಇತೀತಿ.** [5–35..36]

ಇತಿ ಶ್ರೀಮಾನಸೋಲ್ಲಾಸವೃತ್ತಾಂತೇ ಪಂಚಮೋಲ್ಲಾಸಃ ಸಮಾಪ್ತಃ ।

ಷಷ್ಠೋಲ್ಲಾಸಃ

ಆತ್ಮದ ಸಾರ್ವಕಾಲಿಕ ಅಸ್ತಿತ್ವ

ಬೌದ್ಧರ ಶೂನ್ಯವಾದ

ಜಾಗ್ರತಾವಸ್ಥೆಯಲ್ಲಿ ನಾವು ಅನುಭವಿಸುವ ಸಂಪೂರ್ಣ ವಿಶ್ವವು ಮಾಯೆಯಿಂದ ತೋರಿಸಲ್ಪಟ್ಟ ಭ್ರಮೆಯಿಂದ ಕೂಡಿದ ಆತ್ಮದ ಯಾ ಪರಮೇಶ್ವರನ ಒಂದು ಸ್ವರೂಪ ಹಾಗೂ ಈ ಆತ್ಮವು ಭ್ರಮಾಧೀನವಾಗಿದ್ದರೂ, ಶಾಶ್ವತ, ಏಕ ಹಾಗೂ ಬದಲಾವಣೆಯಿಲ್ಲದದು ಎಂದು ಹಿಂದಿನ ಅಧ್ಯಾಯದಲ್ಲಿ ವಿವರಿಸಿದೆ. ಈ ದೃಷ್ಟಿಕೋನದ ವಿರುದ್ಧವಾಗಿ ಬೌದ್ಧರು ಹೀಗೆ ಕೇಳುತ್ತಾರೆ:

स्वप्ने विश्वं यथा तत्स्थं जाग्रत्यापि तथेति चेत् ।
सुषुप्तौ कस्य किं भाति कस्थायी तत्र चेतनः ॥ १ ॥

ಸ್ವಪ್ನೇ ವಿಶ್ವಂ ಯಥಾ ತತ್ಸ್ಥಂ ಜಾಗ್ರತ್ಯಾಪಿ ತಥೇತಿ ಚೇತ್ ।
ಸುಷುಪ್ತೌ ಕಸ್ಯ ಕಿಂ ಭಾತಿ ಕಸ್ಸ್ಥಾಯೀ ತತ್ರ ಚೇತನಃ ॥ 1 ॥

ಸ್ವಪ್ನದಲ್ಲಿದ್ದಂತೆಯೇ, ಜಾಗ್ರತ ಸ್ಥಿತಿಯಲ್ಲಿಯೂ ಸಂಪೂರ್ಣ ವಿಶ್ವವು ನಮ್ಮೊಳಗೆ ಇರುವುದಾದರೆ, ಸುಷುಪ್ತಿಯಲ್ಲಿ ಯಾರಿಗಾದರೂ ಏನಾದರೂ ಕಾಣುತ್ತದೆಯೋ? ಆಗ ಅದನ್ನು ಅಲ್ಲಿ ತಿಳಿಯುವ ಚೈತನ್ಯ ಯಾವುದು? [6–1]

ವಿವೃತ್ತಿ

ಪರಮೇಶ್ವರನೇ ಆತ್ಮವಾಗಿ ಸ್ವಪ್ನದಲ್ಲಿ ಮತ್ತು ಮಾಯಾಶಕ್ತಿವಿಲಾಸವೆಂದು ಕಲ್ಪಿತವಾದ ಜಾಗ್ರತ ಪ್ರಪಂಚದಲ್ಲಿ ಕಂಡುಬರುತ್ತಾನೆ. ಅಧಿಷ್ಠಾನವಾಗಿರುವ ಆತ್ಮವು ನಿತ್ಯ, ಏಕ, ನಿರ್ವಿಕಾರ ಎಂಬ ದೇಹಾತ್ಮವಾದವನ್ನು ನಿರಾಕರಿಸಲು ಬೌದ್ಧರು ಹೀಗೆ ಪ್ರತಿಪಾದಿಸುತ್ತಾರೆ: ಸತ್ ರೂಪದಿಂದ ಸ್ಥಾಯಿಯಾಗಿರುವ ಆತ್ಮದ ಉಪಸ್ಥಿತಿ ಇರುವುದಿಲ್ಲ, ಅದು ಯುಕ್ತಿ ಮಾತ್ರವಾಗಿದೆ. ಈಶ್ವರನ ಮಾಯಾಶಕ್ತಿವಿಲಾಸ ಕಲ್ಪಿತ ಮಹಾ ವ್ಯಾಮೋಹರೂಪವು ಹೇಗಿದೆ? ಎಂದು ವಿಜ್ಞಾನ, ಶೂನ್ಯ, ಪಂಚಸ್ಕಂಧ ವಾದಗಳು ಕೇಳುತ್ತವೆ ಎಂದು ಹೇಳಲು **ಸ್ವಪ್ನೇ ವಿಶ್ವಮಿತ್ಯಾದಿನಾ.** ಎಲ್ಲಾ ಸ್ವಪ್ನಗಳಲ್ಲಿ ದೃಶ್ಯವಾಗುವ ವಿಶ್ವವು ಈಶ್ವರನಲ್ಲಿಯೇ ಅಧಿಷ್ಠಿತವಾಗಿದ್ದರೆ ಮತ್ತು ಜಾಗ್ರತ ಸ್ಥಿತಿಯಲ್ಲಿಯೂ ಕೂಡ ಈಶ್ವರನ ಆಶ್ರಯದ ಅಭಿಮಾನಿಯಾಗಿದ್ದರೆ ಅದು ಸುಷುಪ್ತಿಯಲ್ಲಿ ಹೇಗಿರುವುದು? ಯಾವ ತತ್ತ್ವವಾಗಿ ಇರುವುದು? ಸುಷುಪ್ತಿಯಲ್ಲಿ ಸ್ಥಾಯಿಯಾಗಿರುವ ಚೈತನ್ಯ ಯಾವುದು? ಯಾರಿಗೂ ಏನೂ ಭಾಸವಾಗದಿರುವುದರಿಂದ ಅಲ್ಲಿ ಚೈತನ್ಯವು ಇದೆಯೋ? ಅಂದರೆ ಶೂನ್ಯವಾದಿಗಳು ಮತ್ತಿತರರು ಅಲ್ಲಿ ಆತ್ಮದ ಅಸ್ತಿತ್ವ ಇಲ್ಲ ಎಂಬ ಅಭಿಮತವನ್ನು ಹೊಂದಿದ್ದಾರೆ ಎಂಬ ಅರ್ಥದಲ್ಲಿ. [6–1]

ಶೂನ್ಯವಾದಿಗಳ ಪ್ರಕಾರ ಸುಷುಪ್ತಿಯ ಸಮಯದಲ್ಲಿ ಯಾವುದೇ ಚೈತನ್ಯದ ಉಪಸ್ಥಿತಿಯಿರುವುದಿಲ್ಲ; ಅಂದರೆ ಯಾವುದೇ ವಿಷಯವನ್ನು ತಿಳಿಯುವ ಚೈತನ್ಯ. ಹಾಗಾಗಿ ವೇದಾಂತದಲ್ಲಿ ತಿಳಿಸಿರುವಂತೆ ಶಾಶ್ವತವಾದ ಆತ್ಮದ ಅಸ್ತಿತ್ವವಿಲ್ಲ. ಶೂನ್ಯವಾದಿಯು ತನ್ನ ವಾದವನ್ನು ಹೀಗೆ ಮುಂದಿಡುತ್ತಾನೆ:

सर्वं च क्षणिकं शून्यं सर्वमेव स्वलक्षणम् ।

ಸರ್ವಂ ಚ ಕ್ಷಣಿಕಂ ಶೂನ್ಯಂ ಸರ್ವಮೇವ ಸ್ವಲಕ್ಷಣಮ್ ।

ಎಲ್ಲವೂ ಕ್ಷಣಿಕ ಮತ್ತು ಶೂನ್ಯ ಮತ್ತು ಸ್ವಯಂ ನಿರ್ಧರಿತವಾದುದು. [6–2]

ವಿವೃತ್ತಿ

ವಿಜ್ಞಾನವಾದಿಗಳ ಮತವನ್ನು ಹೇಳಲು **ಸರ್ವಂ ಚೇತಿ.** ಸರ್ವ ಜಗತ್ತು, ಆತ್ಮವೂ ಸೇರಿದಂತೆ, ಕ್ಷಣಕಾಲ ಮಾತ್ರ ಸತ್ಯವಾಗಿರುವುದು, ಮುಂದಿನ ಕ್ಷಣದಲ್ಲಿ ಎಲ್ಲವೂ ಶೂನ್ಯವಾಗುವುದು ಅಂದರೆ ಹಿಂದು ಮುಂದಿನ ಕ್ಷಣಗಳಲ್ಲಿ ಅದು ಅಸತ್ಯವಾಗಿರುವುದು. ಮತ್ತು ಅದರ ಲಕ್ಷಣಗಳು ಅದಕ್ಕೇ ಗ್ರಾಹ್ಯವಾಗಿರುವುದು ಹಾಗಾಗಿ ಗ್ರಾಹ್ಯ-ಗ್ರಾಹಕ ಭೇದವಿಲ್ಲ ಎಂಬ ಅರ್ಥ. [6–2]

ಎಲ್ಲವೂ, ಆತ್ಮವೂ ಸೇರಿ, ಒಂದು ಕ್ಷಣದಲ್ಲಿ ಅಸ್ತಿತ್ವವನ್ನು ಹೊಂದಿ ನಾಶವಾಗುವುದು; ಅದು ಆ ಕ್ಷಣದ ಹಿಂದೆಯೂ ಮುಂದೆಯೂ ಇರುವುದಿಲ್ಲ. ಎಲ್ಲವೂ ಸ್ವಯಂ ನಿರ್ಧರಿತವಾದದ್ದು, ತನ್ನನ್ನು ತಾನೇ ಅರಿತುಕೊಂಡಿರುತ್ತದೆ; ಬಾಹ್ಯವಾಗಿ ಅರಿತುಕೊಳ್ಳುವವರು, ಅರಿಯುವ ವಸ್ತುವಿನ ಹೊರತಾಗಿ, ಯಾರೂ ಇಲ್ಲ.

ಬೌದ್ಧರಲ್ಲಿ ಇನ್ನೊಂದು ಪಂಗಡದವರು, ಬಾಹ್ಯ ಮತ್ತು ಆಂತರಿಕ ಜಗತ್ತಿನ ಇರುವಿಕೆಯನ್ನು ಒಪ್ಪುತ್ತಾರೆ; ಅಂದರೆ ಅಸ್ತಿತ್ವವು ವಸ್ತುನಿಷ್ಠವೂ ಹೌದು, ವಿಷಯನಿಷ್ಠವೂ ಹೌದು. ವಿಷಯನಿಷ್ಠ ಅಸ್ತಿತ್ವವು ಐದು ಸ್ಕಂಧಗಳಿಂದ, ಭೌತಿಕ ಜ್ಞಾನದ ರೂಪಗಳು, ಕೂಡಿದೆ ಎಂದು ಅವರು ತಿಳಿಯುತ್ತಾರೆ. ಅವರ ವಾದ ಹೀಗಿದೆ:

सङ्घातः परमाणूनां मह्यम्ब्वग्निसमीरणाः ॥ २ ॥

ಸಂಘಾತಃ ಪರಮಾಣೂನಾಂ ಮಹ್ಯಂಬ್ವಗ್ನಿಸಮೀರಣಾಃ ॥ 2 ॥

ಭೂಮಿ, ನೀರು, ಅಗ್ನಿ ಮತ್ತು ವಾಯುಗಳು ಪರಮಾಣುಗಳ ಬರಿಯ ಸಂಕಲನವಾಗಿವೆ. [6–2]

ವಿವೃತ್ತಿ

ಇದರಲ್ಲಿ ಪಂಚಸ್ಕಂಧಸಮುದಾಯದವರ ಮತವನ್ನು ತಿಳಿಸುತ್ತಾ **ಸಂಘಾತ ಇತಿ.** ಭೂಮಿ, ಜಲ, ಅಗ್ನಿ, ವಾಯು ಎಂಬ ನಾಲ್ಕು ಭೂತಗಳು ಪರಮಾಣುಗಳ ನಾಲ್ಕುವಿಧದ ಸಂಯೋಗದಿಂದ ಉಂಟಾಗಿವೆ, ಅವುಗಳು ಅವಯವಗಳಿಂದಾಗಿರುವುದಿಲ್ಲ ಯಾ ಪರಿಣಾಮದಿಂದಲೂ ಅಲ್ಲ. [6–2]

ಅವುಗಳು ನಾಲ್ಕು ರೀತಿಯ ಪರಮಾಣುಗಳ ಗುಂಪಾಗಿವೆ. ಅವುಗಳಿಗೆ ತಾವು ಮಾಡಲ್ಪಟ್ಟ ಪರಮಾಣುಗಳ ಗುಣವಿಶೇಷಗಳನ್ನು ಹೊರತುಪಡಿಸಿ ತಮ್ಮದೇ ಆದ ಗುಣವಿಶೇಷಗಳಿಲ್ಲ; ತಮ್ಮದೇ ಆದ ಗುಣವಿಶೇಷಗಳಿವೆಯೆಂದು ವೈಶೇಷಿಕರು ಹೇಳುತ್ತಾರೆ; ಅವುಗಳು ಪರಮಾಣುಗಳಿಗಿಂತ ಬೇರೆಯಾದ ರೂಪವಾಗಿರದೆ, ಪರಮಾಣುಗಳು ಬದಲಾವಣೆಗೆ ಒಳಪಟ್ಟಾಗ ಒಂದರ ಹಿಂದಿನ್ನೊಂದರಂತೆ ಪ್ರಕಟವಾಗುವ ರೂಪಗಳಾಗಿದ್ದು, ಮೂಲಗುಣಗಳಲ್ಲಿ ಪರಮಾಣುಗಳೊಡನೆ ಸಮಾನವಾಗಿರುವವು ಎಂದು ಸಾಂಖ್ಯರು ಮತ್ತು ಪರಿಣಾಮವಾದಿಗಳು ಹೇಳುತ್ತಾರೆ. ವಸ್ತು-ವಿಷಯಗಳ ಮತ್ತು ವಿಷಯ ವಸ್ತುಗಳ ಬಾಹ್ಯ ಪ್ರಪಂಚ ಹೀಗಿದೆ. ಆಂತರಿಕ ವಿಶ್ವವು:

मनुष्यादिशरीराणि स्कन्धपञ्चकसंहतीः ।

स्कन्धाश्च रूपविज्ञानसंज्ञासंस्कारवेदना ॥ ३ ॥

ಮನುಷ್ಯಾದಿಶರೀರಾಣಿ ಸ್ಕಂಧಪಂಚಕಸಂಹತಿಃ ।
ಸ್ಕಂಧಾಶ್ಚ ರೂಪವಿಜ್ಞಾನಸಂಜ್ಞಾಸಂಸ್ಕಾರವೇದನಾ ॥ 3 ॥

ಮನುಷ್ಯರ ಮತ್ತು ಇತ್ಯಾದಿಗಳ ದೇಹವು ಐದು ಸ್ಕಂಧಗಳ ಯಾ ಸಂವೇದನೆಗಳ ಸಂಕಲನವಾಗಿವೆ; ರೂಪ, ವಿಜ್ಞಾನ, ಸಂಜ್ಞಾ, ಸಂಸ್ಕಾರ ಮತ್ತು ವೇದನಾಗಳು ಐದು ಸ್ಕಂಧಗಳಾಗಿವೆ. [6–3]

ವಿವೃತ್ತಿ

ಪರಮಾಣುಗಳು ಹೇತುವಾಗಿರುವ ಬಾಹ್ಯಸಂಯುಕ್ತಗಳು ಸ್ಕಂಧ ಹೇತುವಾಗಿ ಭೌತಿಕ ದೇಹದ ಸಂಯುಕ್ತವನ್ನು ತಿಳಿಸಲು **ಮನುಷ್ಯಾದೀತಿ.** ಆ ಸ್ಕಂಧಗಳು ಯಾವುವು ಎಂದು ಹೇಳಲು **ಸ್ಕಂಧಾಶ್ಚ ರೂಪೇತಿ.** [6–3]

रूप्यन्त इति रूपाणि विषयाश्चेन्द्रियाण्यपि ।
विषयेन्द्रियोर्ज्ञानं विज्ञानस्कन्ध उच्यते ॥ ४ ॥

ರೂಪ್ಯಂತ ಇತಿ ರೂಪಾಣಿ ವಿಷಯಾಶ್ಚೇಂದ್ರಿಯಾಣ್ಯಪಿ ।
ವಿಷಯೇಂದ್ರಿಯಯೋರ್ಜ್ಞಾನಂ ವಿಜ್ಞಾನಸ್ಕಂಧ ಉಚ್ಯತೇ ॥ 4 ॥

ಇಂದ್ರಿಯ ವಿಷಯಗಳು ಮತ್ತು ಜ್ಞಾನೇಂದ್ರಿಯಗಳು, ಮನಸಿನಲ್ಲಿ ಗುರುತಿಸಿರುವಂತೆ, ರೂಪ ಸ್ಕಂಧವನ್ನುಂಟುಮಾಡುತ್ತವೆ. ಇಂದ್ರಿಯ ವಿಷಯ ಮತ್ತು ಜ್ಞಾನೇಂದ್ರಿಯಗಳಿಂದ ಆಗುವ ಜ್ಞಾನವನ್ನು ವಿಜ್ಞಾನ ಸ್ಕಂಧವೆನ್ನುತ್ತಾರೆ. [6–4]

ವಿವೃತ್ತಿ

ಕ್ರಮವಾಗಿ ಅವುಗಳ ಸ್ವರೂಪವನ್ನು ತಿಳಿಸಲು **ರೂಪ್ಯಂತ ಇತಿ.** ಜ್ಞಾನೇಂದ್ರಿಯಗಳು ಮತ್ತು ಅವುಗಳ ವಿಷಯಗಳು ರೂಪಸ್ಕಂಧವಾಗಿವೆ. ವಿಜ್ಞಾನಸ್ಕಂಧದ ಅವರೂಪವನ್ನು ತಿಳಿಸಲು **ವಿಷಯೇಂದ್ರಿಯೋರಿತಿ.** ಇಂದ್ರಿಯಗಳಿಂದ ಪಡೆಯುವ ಜ್ಞಾನವು ವಿಜ್ಞಾನಸ್ಕಂಧವಾಗಿದೆ. [6–4]

ಇಂದ್ರಿಯ ವಿಷಯಗಳು ಮತ್ತು ಜ್ಞಾನೇಂದ್ರಿಯಗಳ ಕಲ್ಪನೆಗಳನ್ನು ರೂಪಸ್ಕಂಧವೆನ್ನುತ್ತಾರೆ. ವಿಷಯಗಳು ಮತ್ತು ಇಂದ್ರಿಯಗಳು ಬಾಹ್ಯ ಜಗತ್ತಿಗೆ ಸೇರಿವೆ.

संज्ञागुणक्रियाजातिविशिष्टप्रत्ययात्मिका ।
पञ्चधा कल्पना प्रोक्ता संज्ञास्कन्धस्य सौगतैः ॥ ५ ॥
गवां गौरिति संज्ञोक्ता जातिर्गोत्वं तु गोगतम् ।
गुणाश्शुक्लादयस्तस्य गच्छत्याद्यास्तथा क्रियाः ॥ ६ ॥
शृङ्गी चतुष्पाल्लाङ्गूली विशिष्टप्रत्ययो ह्यसौ ।
एवं पञ्चविधा क्ल्प्तिः संज्ञास्कन्ध इतीर्यते ॥ ७ ॥

ಸಂಜ್ಞಾಗುಣಕ್ರಿಯಾಜಾತಿವಿಶಿಷ್ಟಪ್ರತ್ಯಯಾತ್ಮಿಕಾ ।
ಪಂಚಧಾ ಕಲ್ಪನಾ ಪ್ರೋಕ್ತಾ ಸಂಜ್ಞಾಸ್ಕಂಧಸ್ಯ ಸೌಗತೈಃ ॥ 5 ॥
ಗವಾಂ ಗೌರಿತಿ ಸಂಜ್ಞೋಕ್ತಾ ಜಾತಿರ್ಗೋತ್ವಂ ತು ಗೋಗತಮ್ ।
ಗುಣಾಶ್ಶುಕ್ಲಾದಯಸ್ತಸ್ಯ ಗಚ್ಛತ್ಯಾದ್ಯಾಸ್ತಥಾ ಕ್ರಿಯಾ: ॥ 6 ॥
ಶೃಂಗೀ ಚತುಷ್ಪಾಲ್ಲಾಂಗೂಲೀ ವಿಶಿಷ್ಟಪ್ರತ್ಯಯೋ ಹ್ಯಸೌ ।
ಏವಂ ಪಂಚವಿಧಾ ಕ್ಲೃಪ್ತಿಃ ಸಂಜ್ಞಾಸ್ಕಂಧ ಇತೀರ್ಯತೇ ॥ 7 ॥

ಸೌಗತರಿಂದ ಸಂಜ್ಞಾ ಸ್ಕಂಧವು ಐದು ವಿಭಾಗಗಳಲ್ಲಿ ಹೇಳಲ್ಪಟ್ಟಿದೆ: ನಾಮ (ಹೆಸರು), ಗುಣ, ಕ್ರಿಯೆ, ಜಾತಿ, ವಿಶಿಷ್ಟತೆ.

ಹಸುವಿನ ಹೆಸರು ಹಸು; ಅದರ ಜಾತಿ ಗೋವು; ಎಲ್ಲಾ ಹಸುಗಳಲ್ಲಿರುವ ಸಾಮಾನ್ಯ ಗುಣಗಳು, ಬಿಳಿ ಬಣ್ಣ ಇತ್ಯಾದಿ, ಅದರ ಗುಣ; ಚಲನೆ ಇತ್ಯಾದಿಗಳು ಅದರ ಕಾರ್ಯ; ಕೊಂಬು, ನಾಲ್ಕು ಕಾಲುಗಳು, ಬಾಲ ಇತ್ಯಾದಿ ಅದರ ವಿಶಿಷ್ಟತೆ. ಇದು ಸಂಜ್ಞಾ ಸ್ಕಂಧದ ವಿಭಾಗಗಳ ವಿವರಣೆ. [6–5..7]

ವಿವೃತ್ತಿ

ಸಂಜ್ಞಾಸ್ಕಂಧದ ಸ್ವರೂಪವನ್ನು ಹೇಳಲು **ಸಂಜ್ಞೇತಿ.** ಸಂಜ್ಞಾ ಶಬ್ದವು ಹೆಸರು, ಗುಣ, ರೂಪ, ಕ್ರಿಯೆ – ಅದರ ಕಾರ್ಯ ಮಾಡುವ ಸಾಮರ್ಥ್ಯ, ಜಾತಿ – ಅದನ್ನು ಆವರಿಸಿರುವ ಧರ್ಮವಿಶೇಷ, ವಿಶಿಷ್ಟ –ಪ್ರತ್ಯಯವು ಅದಕ್ಕಿರುವ ನಾನಾ ಅವಯವಗಳನ್ನು ಹೊಂದಿಕೊಂಡಿದೆ ಎಂದು ತಿಳಿಸುತ್ತದೆ. ಇಂತಿರುವ ಐದು ಕಲ್ಪನೆಗಳನ್ನು ಸಂಜ್ಞಾಸ್ಕಂಧ ಎಂದು ***ಸೌಗತೈಃ*** ಸೌತ್ರಾಂತಿಕರು, ಬೌದ್ಧರು ಹೇಳುತ್ತಾರೆ.

ಈ ಐದು ಕಲ್ಪನೆಗಳನ್ನು ಉದಾಹರಣೆಯ ಮೂಲಕ ಅರ್ಥಮಾಡಿಸಲು **ಗವಾಮಿತಿ.** [6–5..7]

रागाद्याः पुण्यपापे च संस्कारस्कन्ध उच्यते ।
सुखं दुःखं च मोक्षश्च स्कन्धस्स्याद्वेदनाह्वयः ॥ ८ ॥

ರಾಗಾದ್ಯಾ: ಪುಣ್ಯಪಾಪೇ ಚ ಸಂಸ್ಕಾರಸ್ಕಂಧ ಉಚ್ಯತೇ ।
ಸುಖಂ ದುಃಖಂ ಚ ಮೋಕ್ಷಶ್ಚ ಸ್ಕಂಧಸ್ಸ್ಯಾದ್ವೇದನಾಹ್ವಯಃ ॥ 8 ॥

ಮೋಹ ಇತ್ಯಾದಿ, ಪುಣ್ಯ ಹಾಗೂ ಪಾಪಗಳು ಸಂಸ್ಕಾರ ಸ್ಕಂಧದಲ್ಲಿವೆ. ಸಂತೋಷ, ದುಃಖ ಮತ್ತು ಮೋಕ್ಷಗಳು ವೇದನಾ ಸ್ಕಂಧದಲ್ಲಿವೆ. [6–8]

ವಿವೃತ್ತಿ

ಸಂಸ್ಕಾರಸ್ಕಂಧವನ್ನು ತಿಳಿಸಲು **ರಾಗಾದ್ಯಾ ಇತಿ.** ವೇದನಾಸ್ಕಂಧವನ್ನು ತಿಳಿಸುವ **ಸುಖಮಿತಿ.** ***ಮೋಕ್ಷಃ*** ವಿಶೇಷ ಜ್ಞಾನವನ್ನು ಗಳಿಸಿರುವ ಸ್ಥಿತಿಯ ಸರಣಿ. *ಮೋಹ* ಎಂಬ ಪಾಠದಂತೆ ವಿಷಯಗಳ ರೂಪದ ವಿಶೇಷ ಜ್ಞಾನದ ಸರಣಿ ಎಂಬ ಅರ್ಥವಾಗುವುದು. [6–8]

ಇಂದ್ರಿಯಗಳ ಸಂವೇದನೆ ಇತ್ಯಾದಿಗಳೊಡನೆ ಬೆರೆಯದ ಶುದ್ಧ ಜ್ಞಾನದ ಸ್ಥಿತಿಗಳ ಸರಣಿಯನ್ನು ಮೋಕ್ಷವೆನ್ನುತ್ತಾರೆ. ಕೆಲವರು ಮೋಕ್ಷದ ಬದಲಿಗೆ ಅದರ ವಿರುದ್ಧಾರ್ಥಕವಾದ ಮೋಹ ಪಾಠವನ್ನು ಸೂಚಿಸುತ್ತಾರೆ; ಅಂದರೆ ಇಂದ್ರಿಯ ಇತ್ಯಾದಿಗಳ ಸಂವೇದನೆಗಳೊಡನೆ ಬೆರೆತ ಬಹಿರ್ಮುಖವಾದ ಜ್ಞಾನದ ಸ್ಥಿತಿಗಳ ಸರಣಿ.

पञ्चभ्य एव स्कन्धेभ्यो नान्य आत्मास्ति कश्चन ।
न कश्चिदीश्वरः कर्ता स्वगतातिशयं जगत् ॥ ९ ॥

ಪಂಚಭ್ಯ ಏವ ಸ್ಕಂಧೇಭ್ಯೋ ನಾನ್ಯ ಆತ್ಮಾಸ್ತಿ ಕಶ್ಚನ ।
ನ ಕಶ್ಚಿದೀಶ್ವರಃ ಕರ್ತಾ ಸ್ವಗತಾತಿಶಯಂ ಜಗತ್ ॥ 9 ॥

ಐದು ಸ್ಕಂಧಗಳಾಚೆಗೆ, ಬೇರೆ ಏನೂ ಆತ್ಮವೆಂದು ಕರೆಯಲ್ಪಡುವದೂ ಸೇರಿ, ಇಲ್ಲ; ಈಶ್ವರನೂ ಇಲ್ಲ, ಕರ್ತೃವೂ ಇಲ್ಲ. ವಿಶ್ವವು ಸ್ವಯಂ ನಿರ್ಮಿತ. [6–9]

ವಿವೃತ್ತಿ

ಈ ಐದು ಸ್ಕಂಧಗಳಿಗಿಂತ ಹೆಚ್ಚಿನದಾಗಿ ಸ್ಥಾಯಿಯಾದ ಯಾವುದೂ ಇಲ್ಲ ಎಂದು, ಆತ್ಮದ ಅಸ್ತಿತ್ವಕ್ಕೆ ಪ್ರಮಾಣದ ಅಭಾವವಿದೆ ಎಂದು ಹೇಳುತ್ತಾ **ಪಂಚಭ್ಯ ಏವೇತಿ.** ಈ ಐದು ಸ್ಕಂಧಗಳು ಮಾತ್ರವೇ ಇವೆ, ಅವುಗಳಿಗೆ ಹೊರತಾದ ಆತ್ಮವು ಇಲ್ಲ. ಹಾಗೂ ಸಂಯುಕ್ತವು ಸಿದ್ಧವಾಗಿ ಮಾಡುವವನಾದ ಈಶ್ವರನೆಂಬ ಹೊರಗಿನವನ ಯಾ ಆತ್ಮವೆಂಬುದೂ ಇಲ್ಲ ಎಂದು ಶಂಕಿಸಲು **ನ ಕಶ್ಚಿದಿತಿ.** ಸ್ವಗತವೇ ಅತಿಶಯವಾಗಿರುವುದು *ಸ್ವಗತಾತಿಶಯಂ,* ಜಗತ್ತು ಸ್ವಯಂಕೃತ, ಇತರರಿಂದ ಸೃಷ್ಟಿಯಾದುದಲ್ಲ ಎಂಬ ಅರ್ಥ. [6–9]

ಈ ಐದು ಸ್ಕಂಧಗಳನ್ನು ಹೊರತುಪಡಿಸಿ, ಆದರಿಂದಾಚೆಗೆ ಯಾವುದೇ ಜ್ಞಾನಯುತ ವಸ್ತು ಕಂಡುಬರುವುದಿಲ್ಲ. ಈಶ್ವರ ಅಥವಾ ಕರ್ತೃ ಎಂಬ ಪ್ರಪಂಚದ ಮೂಲವಸ್ತುಗಳನ್ನು ಬೆಸೆಯುವ, ನಿರ್ದೇಶಿಸುವ ಯಾ ಅವುಗಳ ಬೆಳವಣಿಗೆಯನ್ನು ನಿಯಂತ್ರಿಸುವ ಯಾವ ವಸ್ತುವೂ ಇಲ್ಲ. ವಿಶ್ವವು ಸ್ವಯಂ ನಿರ್ಮಿತವಾಗಿ, ಸ್ವಯಮ್ ನಿರ್ದೇಶಿತ ಮತ್ತು ಸ್ವಯಂ ನಿಯಂತ್ರಿತ; ಬೇರೆ ಯಾವುದೇ ಚೇತನವುಳ್ಳ ಕೆಲಸ ಮಾಡಿಸುವವನ ಅಗತ್ಯವಿಲ್ಲ.

स्कन्धेभ्यः परमाणुभ्यः क्षणिकेभ्योभिजायते ।
पूर्वपूर्वक्षणादेव क्षणस्स्यादुत्तरोत्तरः ॥ १० ॥

ಸ್ಕಂಧೇಭ್ಯಃ ಪರಮಾಣುಭ್ಯಃ ಕ್ಷಣಿಕೇಭ್ಯೋಭಿಜಾಯತೇ ।
ಪೂರ್ವಪೂರ್ವಕ್ಷಣಾದೇವ ಕ್ಷಣಸ್ಸ್ಯಾದುತ್ತರೋತ್ತರಃ ॥ 10 ॥

ಅದು ಕ್ಷಣಿಕವಾದ ಸ್ಕಂಧಗಳಿಂದ ಮತ್ತು ಪರಮಾಣುಗಳಿಂದ ಜನಿಸಿದೆ. ಒಂದು ಕ್ಷಣದ ಅಸ್ತಿತ್ವದಿಂದ ಮಾತ್ರ ಮುಂದಿನ ಕ್ಷಣದ ಅಸ್ತಿತ್ವ ಉಂಟಾಗುತ್ತದೆ. [6–10]

ವಿವೃತ್ತಿ

ಎರಡುವಿಧವಾಗಿ ಸಂಯುಕ್ತಗಳು ಸಾಧ್ಯವಾಗುವುದು ಎಂದು ತಿಳಿಸಲು **ಸ್ಕಂದೇಭ್ಯ ಇತಿ.** ***ಸ್ಕಂದೇಭ್ಯಃ*** ಆಧ್ಯಾತ್ಮಿಕ ಸಂಯುಕ್ತಗಳು ಸ್ಕಂದಗಳಿಂದ ಮತ್ತು ***ಪರಮಾಣುಭ್ಯಃ*** ಬಾಹ್ಯ ಸಂಯುಕ್ತಗಳು ಪರಮಾಣುಗಳಿಂದ ಉಂಟಾಗಿವೆ

ಎಂದು ಅಕ್ಷರಾರ್ಥವು. ಹಾಗಾಗಿ ಸಂಯುಕ್ತಗಳಿಗಾಗಿ ಹೊರಗಿನವನಾದ ಈಶ್ವರನ ಉಪಸ್ಥಿತಿಯನ್ನು ಯಾಕೆ ಅಪೇಕ್ಷಿಸುವುದು? ಅಪೇಕ್ಷಿಸಿದರೆ ಅದು ಅನುಭವಕ್ಕೆ ವಿರೋಧವಾಗಿದೆ. ಅವನ ನಿರಪೇಕ್ಷತೆಯಿಂದ ಅವನು ದೇಹವೆಂಬ ಸಂಯುಕ್ತದ ಕರ್ತನಾಗಿಯೂ ಕಂಡುಬರುವುದಿಲ್ಲ. ಅವನು ಅವಯಗಳ ಜೋಡಣೆಯಿಂದ ಆಗಿಲ್ಲದವನಾದುದರಿಂದ ಒಟ್ಟುಗೂಡಿಸುವಿಕೆಯ ಅಪೇಕ್ಷೆಯ ಅಭಾವದಿಂದ ಒಟ್ಟುಗೂಡಿಸುವುದೂ ಇಲ್ಲ. ಸ್ಕಂಧಗಳು ಮತ್ತು ಪರಮಾಣುಗಳು ಒಟ್ಟುಗೂಡುವ ಸಾಮರ್ಥ್ಯವುಳ್ಳವಾದುದಾಗಿ ಪದಾರ್ಥಗಳನ್ನು ಒಟ್ಟುಗೂಡಿಸಲು ಈಶ್ವರನ ಆವಶ್ಯಕತೆಯೇನಿದೆ? ಅಥವಾ ಅವುಗಳ ಸ್ವಸಾಮರ್ಥ್ಯವು ಈಶ್ವರನ ಅಸಾಮರ್ಥ್ಯವನ್ನು ಸೂಚಿಸುವುದೋ? ಹಾಗಿದ್ದರೆ ಸಮರ್ಥನಾದ ಇನ್ನೊಬ್ಬನ ಅಪೇಕ್ಷೆಯಿದೆಯೋ? ಅಂದರೆ ಅನ್ಯ ಈಶ್ವರನೆಂಬ ಸ್ವಪ್ರೇರಕನ ಸಂದರ್ಭ ಒದಗಬಹುದು. ನೀರಿನಿಂದ ಮೊಸರನ್ನು ಉತ್ಪಾದಿಸುವಂತಹ ಇವೆಲ್ಲವೂ ನಿಜವಾದ ಅವಸ್ಥೆಗಳಾಗಿರದು. ಅಂದರೆ ಒಟ್ಟುಗೂಡಿಸುವ ಅನ್ಯ ಚೇತನವು ಬರಿಯ ಕಲ್ಪನೆಯು ಆಗಿರುವುದು ಎಂಬ ಭಾವವು. ಅಣುಗಳು ಮತ್ತು ಸ್ಕಂಧಗಳು ಕ್ಷಣಿಕವಾಗಿರುವುದರಿಂದ ಬದಲಾವಣೆಗಳಿಗೆ ಒಳಗಾಗದ ಈಶ್ವರನಿಂದ ಕ್ಷಣಕ್ಕೂ ಬದಲಾಯಿಸುವ ಪದಾರ್ಥಗಳು ಅಸಂಭವ ಎಂದು ಹೇಳಿ, ಹಿಂದುಹಿಂದಿನ ಕ್ಷಣಗಳಲ್ಲಿರುವವು ಮುಂದುಮುಂದಿನ ಕ್ಷಣಗಳಲ್ಲಿರುವವನ್ನು ಉತ್ಪಾದಿಸುತ್ತವೆ ಎಂದು ಹೇಳುವ **ಪೂರ್ವಪೂರ್ವಕ್ಷಣಾದೇವೇತಿ.** [6–10]

ಸ್ಕಂಧಗಳು ಮತ್ತು ಪರಮಾಣುಗಳನ್ನು ಉಪಯೋಗಿಸಿ ವಿಶ್ವವನ್ನು ನಿರ್ಮಾಣಮಾಡಬೇಕು, ಅವುಗಳಿಲ್ಲದೆ ಈಶ್ವರನಿಗೆ ಸೃಷ್ಟಿಯ ಕಾರ್ಯವನ್ನು ಮಾಡಲು ಸಾಧ್ಯವಿಲ್ಲ ಹಾಗೂ ವಿಶ್ವದ ಗುಣವಿಶೇಷಗಳನ್ನು ಹೊಂದಿರದ ವಸ್ತುಗಳಿಂದ, ವಿಶ್ವದ ಉತ್ಪತ್ತಿಯು ಅಸಾಧ್ಯ. ಈಶ್ವರನು ಬದಲಾವಣೆಗಳಿಗೆ ಅತೀತನಾಗಿದ್ದಾನೆ ಹಾಗೂ ಸಂಪೂರ್ಣ ಜಗತ್ತು ಕ್ಷಣದಿಂದ ಕ್ಷಣಕ್ಕೆ ಬದಲಾಗುತ್ತಿರುತ್ತದೆ; ಹೀಗಿರುವಾಗ ವೇದಾಂತಿಗಳ ಆಲೋಚನೆಯ ಈಶ್ವರನ ಅಸ್ತಿತ್ವವು ಅಗತ್ಯವಿರುವುದಿಲ್ಲ ಹಾಗೂ ಅನುಭವ ವಿರುದ್ಧವಾಗಿದೆ.

> पूर्वस्मादेव हि ज्ञानात् जायते ज्ञानमुत्तरम् ।
> स एवायमिति ज्ञानं सेयं ज्वालेव विभ्रमः ॥ ११ ॥

> ಪೂರ್ವಸ್ಮಾದೇವ ಹಿ ಜ್ಞಾನಾತ್ ಜಾಯತೇ ಜ್ಞಾನಮುತ್ತರಮ್ ।
> ಸ ಏವಾಯಮಿತಿ ಜ್ಞಾನಂ ಸೇಯಂ ಜ್ವಾಲೇವ ವಿಭ್ರಮಃ ॥ 11 ॥

ಹಿಂದಿನ ತಿಳುವಳಿಕೆಯಿಂದಲೇ ಮುಂದಿನ ತಿಳುವಳಿಕೆಯ ಉಗಮವಾಗುವುದು. ಇದು ಅದರಂತೆಯೇ ಎಂಬ ಜ್ಞಾನವು ಒಂದು ಭ್ರಮೆಯಾಗಿದೆ, ಈಗಿನ ಬೆಂಕಿಯ ಕೆನ್ನಾಲಿಗೆಯು ಹಿಂದಿನ ಕೆನ್ನಾಲಿಗೆಯಂತೆಯೇ ಎಂಬ ತಿಳುವಳಿಕೆಯಂತೆ. [6–11]

ವಿವೃತ್ತಿ

ವಿಷಯ–ವಿಷಯಿಯಾಗಿರುವ ಜ್ಞಾನದ ಕ್ಷಣಿಕತೆಯಿಂದ ಮತ್ತು ಇತರ ಕಾರಣಗಳ ಅಪೇಕ್ಷೆಯಿಲ್ಲದೆ ಉತ್ಪತ್ತಿಯನ್ನು ಹೇಳಲು **ಪೂರ್ವಸ್ಮಾದೇವೇತಿ.** ಇನ್ನು ಇದು ಮಡಕೆ, ನಾನು ಪುರುಷ ಇತ್ಯಾದಿ ವಿಷಯ–ವಿಷಯಿಗಳ ಪ್ರತ್ಯಭಿಜ್ಞತೆಯು ಸ್ಥಾಯಿಯಾಗಿರುವುದರಿಂದ, ಅದಕ್ಕೆ ವಿರುದ್ಧವಾದ ಕ್ಷಣಿಕತೆಯಲ್ಲಿ ಹೇಗಿರುವುದು ಎಂದು ತಿಳಿಸುವ **ಸ ಏವಾಯಮಿತಿ.** ಅಗ್ನಿಯ ಜ್ವಾಲೆಗಳು ನಿರಂತರವಾಗಿ ಉತ್ಪತ್ತಿಯಾಗುವಂತೆ, ನಿರಂತರವಾಗಿ ಉತ್ಪತ್ತಿಯಾಗುವ ಭೇದಗ್ರಹಿಕೆಯುಳ್ಳ ಪ್ರತ್ಯಭಿಜ್ಞನು ಒಂದು ಭ್ರಮೆಯಾಗಿರುವನು ಎಂಬ ಅರ್ಥವು. [6–11]

ಬೆಂಕಿಯ ಕೆನ್ನಾಲಿಗೆಯ ವಿಚಾರದಂತೆ, ಸರಣಿಯಾಗಿ ಬರುವ ಒಂದೇ ರೀತಿಯ ಕ್ಷಣಿಕ ವಿವರಗಳಿಂದ ಭ್ರಮೆಯುಂಟಾಗುವುದು; ಹಾಗಾಗಿ ಪ್ರತ್ಯಭಿಜ್ಞನು, ಒಂದೇ ವಸ್ತುವಿನ ನಿರಂತರ ಅಸ್ತಿತ್ವವನ್ನು ಹೇಳುವ ಜ್ಞಾನ, ಬರಿಯ ಒಂದು ಭ್ರಮೆಯಾಗಿದ್ದಾನೆ.

अस्ति भातीति धीर्भ्रान्तैरात्मानात्मसु कल्प्यते ।
हानोपादानराहित्यादाकाशः किं प्रकाशते ॥ १२ ॥

ಅಸ್ತಿ ಭಾತೀತಿ ಧೀರ್ಭ್ರಾಂತೈರಾತ್ಮಾನಾತ್ಮಸು ಕಲ್ಪ್ಯತೇ ।
ಹಾನೋಪಾದಾನರಾಹಿತ್ಯಾದಾಕಾಶಃ ಕಿಂ ಪ್ರಕಾಶತೇ ॥ 12 ॥

ಅನಾತ್ಮ ವಸ್ತುಗಳ ನಡುವೆ ಆತ್ಮದ ಅಸ್ತಿತ್ವವು , ಅದು ಇದೆ ಹಾಗೂ ಬೆಳಗುತ್ತಿದೆ ಎಂದು ಭ್ರಮಿಸುವವರ ಬರಿಯ ಒಂದು ಕಲ್ಪನೆಯಾಗಿದೆ; ಅದು ಬಯಸಿ ಪಡೆಯುವ ಯಾ ಬಯಸದೆ ಇರುವ ವಸ್ತುವಲ್ಲ. ಆಕಾಶವು ಯಾವಾಗಲಾದರೂ ಹೊಳೆಯುತ್ತದೆಯೋ? [6–12]

ವಿವೃತ್ತಿ

ಅವರ ವಾದವನ್ನು ಉಪಸಂಹರಿಸುತ್ತಾ **ಅಸ್ತೀತಿ.** ಆತ್ಮ–ಅನಾತ್ಮಗಳು ವಿಷಯ–ವಿಷಯಿಯಂತಿವೆ ಎಂಬ ಅರ್ಥ, ಅಂದರೆ ಸವಿಕಲ್ಪಕ ಜ್ಞಾನವು ಭ್ರಮೆ ಎಂದು. ಅದು ಹೇಗೆ ಎನ್ನಲು **ಹಾನೋಪಾದಾನರಾಹಿತ್ಯಾದಿತಿ.** ಪ್ರತ್ಯಕ್ಷವಾಗಿರುವುದರ ಕುರಿತಾಗಿ ಯಾರೂ ಸಂವಾದ ನಡೆಸುವುದಿಲ್ಲ. ಯಾರೂ ಕೈಗೆ ಸಿಗದಿರುವ ಆಕಾಶವನ್ನು ಪಡೆಯಲು ಬಯಸುವುದಿಲ್ಲ, ಅಂತೆಯೇ ಆತ್ಮದ ಅಸ್ತಿತ್ವ ಯಾ ಹೊಳಪು ಬಯಕೆಯ ವಸ್ತುಗಳಲ್ಲ. [6–12]

ಬೌದ್ಧ ಭೌತಿಕವಾದಿಗಳು ಆಕಾಶವನ್ನು ಮೂಲವಸ್ತುವಾಗಿ ಪರಿಗಣಿಸುವುದಿಲ್ಲ ಏಕೆಂದರೆ ಅದನ್ನು ಯಾರೂ ಪಡೆಯಲು ಅಥವಾ ನಿರಾಕರಿಸಲು ಬಯಸುವುದಿಲ್ಲ. ಹಾಗೆಯೇ ಅನಾತ್ಮ ವಸ್ತುಗಳ ನಡುವಿನ ಆತ್ಮದ ಕಲ್ಪನೆಯು, ಮಾನವರಿಗೆ ಅದನ್ನು ಪಡೆಯಲು ಯಾ ನಿರಾಕರಿಸಲು ಪ್ರಯತ್ನಪಡಲು ಪ್ರಚೋದಿಸುವುದಿಲ್ಲ; ಅದರ ಅಸ್ತಿತ್ವ ಮತ್ತು ಹೊಳಪನ್ನುಂಟುಮಾಡುವ ಬೆಳಕು ಬಯಕೆಯ ವಸ್ತುಗಳಲ್ಲ.

ಶೂನ್ಯವಾದದ ನಿರಾಕರಣೆ

इत्येवं बौद्धसिद्धान्ती भाषमाणो निषिद्ध्यते ।

ಇತ್ಯೇವಂ ಬೌದ್ಧಸಿದ್ಧಾಂತೀ ಭಾಷಮಾಣೋ ನಿಷಿದ್ಧ್ಯತೇ ।

ಹೀಗೆ ಹೇಳುವ ಬೌದ್ಧಸಿದ್ಧಾಂತಿಗಳನ್ನು (ಆರನೆಯ ಚರಣವು) ಮೌನವಾಗಿಸುವುದು. [6–13]

ವಿವೃತ್ತಿ

ಹೀಗೆ ಪ್ರಶ್ನಿಸಿರುವ ಪೂರ್ವಪಕ್ಷದವರನ್ನು ನಿರಾಕರಿಸಿ ಉತ್ತರಿಸುತ್ತಾರೆ ಎನ್ನುವ **ಇತ್ಯೇವಮಿತಿ.** [6–13]

ಸ್ತೋತ್ರದ ಆರನೆಯ ಚರಣ

राहुग्रस्तदिवाकरेन्दुसदृशो मायासमाच्छादनात्

सन्मात्रः करणोपसंहरणतो योभूत्सुषुप्तः पुमान् ।
प्रागस्वाप्समिति प्रबोधसमये यः प्रत्यभिज्ञायते
तस्मै श्रीगुरुमूर्तये नम इदं श्रीदक्षिणामूर्तये ॥ ६ ॥

ರಾಹುಗ್ರಸ್ತದಿವಾಕರೇಂದುಸದೃಶೋ ಮಾಯಾಸಮಾಚ್ಛಾದನಾತ್
ಸನ್ಮಾತ್ರಃ ಕರಣೋಪಸಂಹರಣತೋ ಯೋಭೂತ್ಸುಷುಪ್ತಃ ಪುಮಾನ್ ।
ಪ್ರಾಗಸ್ವಾಪ್ಸಮಿತಿ ಪ್ರಬೋಧಸಮಯೇ ಯಃ ಪ್ರತ್ಯಭಿಜ್ಞಾಯತೇ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ 6 ॥

ಗ್ರಹಣಕಾಲದಲ್ಲಿ ಸೂರ್ಯ ಯಾ ಚಂದ್ರನನ್ನು ಆವರಿಸುವ ರಾಹುವಿನಂತೆ ಮಾಯೆಯಿಂದ ಆವರಿಸಲ್ಪಟ್ಟಿರುವ, ಸುಷುಪ್ತಿಯನ್ನು ಪ್ರವೇಶಿಸಿದಾಗ ಇಂದ್ರಿಯಗಳು ಉಪಸಂಹಾರ ಮಾಡಲ್ಪಟ್ಟು ತಾನೇ ತಾನಾಗಿ ಬೆಳಗುವ ಪುರುಷನಿಗೆ, ಎಚ್ಚರವಾದಾಗ 'ನಾನು ಇದುವರೆಗೆ ಮಲಗಿದ್ದೆ' ಎಂದು ತನ್ನ ಅಸ್ತಿತ್ವವನ್ನು ಸಾರುವ ಅವನಿಗೆ, ಶ್ರೀ ಗುರುರೂಪದಲ್ಲಿರುವ ಶ್ರೀ ದಕ್ಷಿಣಾಮೂರ್ತಿ ಸ್ವರೂಪನಿಗೆ, ಶಿವನಿಗೆ, ನನ್ನ ಈ ನಮಸ್ಕಾರಗಳು. {6}

ವಿವೃತ್ತಿ

ರಾಹುಗ್ರಸ್ತೇತಿ. ರಾಹುಗ್ರಸ್ತವಾಗಿರುವ ದಿವಾಕರ ಮತ್ತು ಚಂದ್ರರ ಸದೃಶವಾಗಿ 'ನಾನು ಇದುವರೆಗೆ ನಿದ್ರಿಸಿದ್ದೆ' ಎಂದು ತಿಳಿದಿರುವ ಪುರುಷನೇ, ನಿನಗೆ ನಮಸ್ಕಾರಗಳು. ಯಾವ ಪುರುಷನು ***ಕರಣೋಪಸಂಹರತಃ*** ವಿಶೇಷಜ್ಞಾನಕ್ಕೆ ಹೇತುವಾಗಿರುವ ಇಂದ್ರಿಯಗಳನ್ನು ಉಪಸಂಹರಿಸಿಕೊಂಡು ಕಾರಣಾತ್ಮನಲ್ಲಿ ಲಯಗೊಳಿಸಿಕೊಂಡು ***ಸುಷುಪ್ತೋ ಭೂತ್*** ವಿಶೇಷಜ್ಞಾನರಹಿತನಾಗಿರುವನೋ. ಯಾವ ರೂಪವಾಗಿ ಸುಷುಪ್ತಿಯು ಉಂಟಾಗುವುದು ಎಂದು ತಿಳಿಸಲು **ಸನ್ಮಾತ್ರ ಇತಿ.** ಸ್ವಪ್ರಕಾಶಿತ ಸತ್ತಾಮಾತ್ರವಾಗಿ ಎಂಬ ಅರ್ಥ. ಅಥವಾ ಕರಣಗಳನ್ನು ನಿಷ್ಕ್ರಿಯಗೊಳಿಸಿರುವ ಸುಷುಪ್ತಿಯಲ್ಲಿ ಸತ್ ಮಾತ್ರವಾಗಿರುವ ಯಾವ ಪುರುಷನಿರುವನೋ ಎಂದಾಗಬಹುದು. ಆ ಸನ್ಮಾತ್ರನು ಸ್ವಪ್ರಕಾಶಿತನಾಗಿದ್ದರೂ, ಪೂರ್ಣಪ್ರಕಾಶದಿಂದ ಭಾಸವಾಗುವುದಿಲ್ಲ; ಹಾಗಿರಲು ಕಾರಣವನ್ನು ದೃಷ್ಟಾಂತದ ಮೂಲಕ ಸ್ಪಷ್ಟಪಡಿಸಲು **ರಾಗ್ರಸ್ತದಿವಾಕರೇಂದು ಸದೃಶ ಇತಿ.** ಅದಕ್ಕೆ ಕಾರಣವೆಂದರೆ ಮಾಯೆಯಿಂದ ಆಚ್ಛಾದಿತನಾಗಿರುವುದು. ಮಾಯೆಯು ಅನಾದಿ ತಮೋರೂಪದಿಂದ ಆವರಿಸಿಕೊಳ್ಳುವಂತಹದು; ಅದರಿಂದ ಆವೃತವಾದ ಆತ್ಮಸ್ವರೂಪದ ಬ್ರಹ್ಮನು ಗ್ರಹಣಕಾಲದಲ್ಲಿ ರಾಹುವಿನಿಂದ ಆವರಿಸಲ್ಪಟ್ಟಿರುವ ಚಂದ್ರ, ಅರ್ಕರಂತೆ ಮುಖವುಳ್ಳವನಾಗಿ ಭಾಸವಾಗುವವನು, ಶೂನ್ಯವಾಗಿ, ಕ್ಷಣಿಕವಾಗಿ ಅಲ್ಲ ಎಂಬ ಅಭಿಪ್ರಾಯವು. ಪುರುಷನು ಸುಷುಪ್ತಿಯಲ್ಲಿ ಹೇಗಿರುವನು? ಪ್ರತ್ಯಭಿಜ್ಞಾನ ಪ್ರಮಾಣ ಇತ್ಯಾದಿಗಳಂತೆ ಎಂದು ತಿಳಿಸುವ **ಪ್ರಾಗಸ್ವಾಪ್ಸಮಿತಿ.** ***ಪ್ರಬೋಧಸಮಯೇ*** ಆತ್ಮವು ಹಿಂದಿನಕಾಲದಿಂದಲೂ ನಾನು ಸುಖವಾಗಿ ನಿದ್ರಿಸಿದೆನು ಎಂದು ತಿಳಿದುಕೊಂಡಿರುವುದು. ಅಂತಹ ಕಾಲದಲ್ಲಿ ಅಸ್ತಿತ್ವ ಮಾತ್ರವಿದ್ದು, ಸೋಹಂ ಮುಂತಾದ ಯಾವುದೇ ವಿಶೇಷ ಜ್ಞಾನವು ಇಲ್ಲದಿರುವುದು. ಜಾಗ್ರತವಾದಾಗ ಎಚ್ಚರಗೊಂಡ ಕರಣಗಳ ಗುಂಪು ಅದನ್ನು ನೆನಪಿಸಿಕೊಳ್ಳುವುದು ಪ್ರತ್ಯಭಿಜ್ಞಾಮಾನತೆಯೆನಿಸಿ, ಅದು ಶೂನ್ಯ ಯಾ ಕ್ಷಣಿಕವಲ್ಲ ಎಂಬ ಅಭಿಪ್ರಾಯ. {6}

अस्यायमाशयः ।

शून्यं चेज्जगतो हेतुः जगदेव न सिद्ध्यति ॥ १३ ॥
घटशून्यः पटशून्यः इति कैः प्रतिपाद्यते ।

ಅಸ್ಯಾಯಮಾಶಯಃ ।
ಶೂನ್ಯಂ ಚೇಜ್ಜಗತೋ ಹೇತುಃ ಜಗದೇವ ನ ಸಿದ್ಧ್ಯತಿ ॥ 13 ॥
ಘಟಶ್ಶೂನ್ಯಃ ಪಟಶ್ಶೂನ್ಯಃ ಇತಿ ಕೈಃ ಪ್ರತಿಪಾದ್ಯತೇ ।

ಅದರ ಆಶಯವನ್ನು ಹೀಗೆ ಹೇಳಬಹುದು: ವಸ್ತುವಲ್ಲದ ಶೂನ್ಯದಿಂದ ವಿಶ್ವದ ಉಗಮವಾದರೆ, ನಾವು ಈಗ ಕಾಣುವಂತೆ ಈ ಜಗತ್ತು ಇರುತ್ತಿರಲಿಲ್ಲ. ಮಡಕೆಯು ವಸ್ತುವಲ್ಲ ಅಥವಾ ವಸ್ತ್ರವು ವಸ್ತುವಲ್ಲ ಎಂದು ಯಾರು ಹೇಳುತ್ತಾರೆ? [6–13..14]

ವಿವೃತ್ತಿ

ಜಗತ್ತಿನ ಹೇತುತ್ವವನ್ನು ಹೊಂದಿರುವ ಈಶ್ವರ, ಆತ್ಮವು ಇಲ್ಲ; ಶೂನ್ಯವೇ ಈ ಜಗತ್ತಿನ ಹಿಂದಿನ ಅವಸ್ಥೆಯು ಎಂದು ಹೇಳುವ ಬೌದ್ಧರ ವಾದವನ್ನು ದೂರೀಕರಿಸುತ್ತಾ **ಶೂನ್ಯಂ ಚೇದಿತಿ.** ಜಗತ್ತಿನ ಶೂನ್ಯ ಹೇತುಕತ್ವವು ಸಿದ್ಧವಾಗುವುದಿಲ್ಲ ಎಂದು ಹೇಳಲು **ಘಟಃ ಶೂನ್ಯ ಇತಿ.** ಉಪಾದಾನಕದ ಕಾರ್ಯವು ಅದರಂತೆಯೇ ಪ್ರತೀತವಾಗುತ್ತದೆ, ಅದರಂತೆಯೇ ಹೇಳಲ್ಪಡುತ್ತದೆ; ಚಿನ್ನವು ಉಪಾದಾನವಾಗಿರುವ ಕುಂಡಲ ಇತ್ಯಾದಿಗಳು ಚಿನ್ನವೆಂದೇ ಭಾವಿಸಲಾಗುವಂತೆ. ಹಾಗಾಗಿ ಶೂನ್ಯವು ಉಪಾದಾನವಾಗಿರುವ ಜಗತ್ತನ್ನು ಸತ್ ರೂಪವಾಗಿ ಎಂದಲ್ಲದೆ ಶೂನ್ಯವೆಂದೇ ವ್ಯವಹರಿಸಬೇಕಾಗಬಹುದು; ಆದರೆ ಎಲ್ಲರೂ ಸತ್ ರೂಪವಾಗಿ ವ್ಯವಹರಿಸುತ್ತಾರೆ, ಶೂನ್ಯವಾಗಿ ಅಲ್ಲ. ಕಾರಣವಿಲ್ಲದೆ ಕಾರ್ಯದ ಉಗಮವಾಗುವುದು ಕಾರ್ಯವನ್ನು ಬಯಸುವವರ ಉಪಾದಾನ ಪ್ರವೃತ್ತಿಗೆ ವಿರೋಧವಾಗುವುದರಿಂದ, ಅಸತ್ಯ ಕಲ್ಪನೆಗಳಿಂದ ಸದ್ವಸ್ತುವಿನ ಉತ್ಪತ್ತಿಗೆ ದೃಷ್ಟಾಂತಗಳೂ ಇಲ್ಲದಿರುವುದರಿಂದ, ಅದನ್ನು 'ಕಥಮಸತಃ ಸಜ್ಜಾಯೇತ' (ಛಾ.ಉ.6–2–2) ಎಂಬ ಶ್ರುತಿವಾಕ್ಯವು ನಿರಸ್ತಗೊಳಿಸುವುದರಿಂದ, ಅಸತ್ ಕಾರಣತ್ವದ ಪಕ್ಷವು ಪ್ರಾಮಾಣಿಕವೂ ಆದರಣೀಯವೂ ಅಲ್ಲ ಎಂಬ ಭಾವವು. [6–13..14]

ವಿಶ್ವವು ಅಸ್ತಿತ್ವಕ್ಕೆ ಬರುವ ಮೊದಲು ಏನೂ ಇರಲಿಲ್ಲವೆಂದೂ, ಅದನ್ನು ಶೂನ್ಯದಿಂದ ಸೃಷ್ಟಿಸಲಾಯಿತೆಂದೂ ಬೌದ್ಧರು ಹೇಳುತ್ತಾರೆ. ಯಾವುದೇ ಕಾರಣದಿಂದ ಉಂಟಾಗುವ ಪರಿಣಾಮವು ಅದರ ಕಾರಣವನ್ನು ಒಳಗೊಂಡಿದೆ ಎಂದೂ, ಹಾಗೂ ಕಾರಣದ ಉತ್ಪಾದಕತೆಯಿಂದ ಕಾರ್ಯದ ಉಗಮವಾಗುತ್ತದೆ ಎಂದೂ ನಮ್ಮ ಅನುಭವ ಹೇಳುತ್ತದೆ. ಹಾಗೆ, ಒಂದು ಚಿನ್ನದ ಉಂಗುರವನ್ನು ಯಾವಾಗಲೂ ಚಿನ್ನದಿಂದಲೇ ಮಾಡಲಾಗಿದೆಯೆಂದು ಆಲೋಚಿಸಿ, ಚಿನ್ನದ ಬದಲಿಗೆ ಉಪಯೋಗಿಸುತ್ತಾರೆ. ವಿಶ್ವವನ್ನು ಶೂನ್ಯದಿಂದ ಸೃಷ್ಟಿಸಲಾಗಿದ್ದರೆ, ನಾವು ಅದನ್ನು ಶೂನ್ಯವೆಂದು ತಿಳಿಯುತ್ತೇವೆ ಹಾಗೂ ಉಪಯೋಗರಹಿತವೆನ್ನುತ್ತೇವೆ. ಆದುದರಿಂದ ಶೂನ್ಯವಾದಿಗಳ ಸಿದ್ಧಾಂತವನ್ನು ನಮ್ಮ ಅನುಭವ ಮತ್ತು ನಂಬಿಕೆಗಳಿಗೆ ಪ್ರಮಾಣವನ್ನು ಬಯಸುವವರು ಖಂಡಿತವಾಗಿ ನಿರಾಕರಿಸಬೇಕು.

ವಿಶ್ವವು ನಿಜವಾಗಿಯೂ ವಸ್ತುವಲ್ಲದಿದ್ದರೂ, ಭ್ರಮೆಯ ಕಾರಣದಿಂದ, ಜಗತ್ತನ್ನು ವಾಸ್ತವವೆಂದು ತಿಳಿದು ಜೀವನ ಸಾಗಿಸುತ್ತೇವೆ ಎಂದು ಶೂನ್ಯವಾದಿಗಳು ಹೇಳಬಹುದು. ಅದಕ್ಕೆ ವೇದಾಂತಿಗಳು ಹೀಗೆ ಉತ್ತರಿಸುತ್ತಾರೆ:

नैव भासेत शून्यं चेत् जगन्नरविशाणवत् ॥ १४ ॥
वस्त्वर्थी किमुपादद्याद्भारार्तः किं परित्यजेत् ।

ನೈವ ಭಾಸೇತ ಶೂನ್ಯಂ ಚೇತ್ ಜಗನ್ನರವಿಷಾಣವತ್ ॥ 14 ॥
ವಸ್ತ್ವರ್ಥೀ ಕಿಮುಪಾದದ್ಯಾದ್ಭಾರಾರ್ತಃ ಕಿಂ ಪರಿತ್ಯಜೇತ್ ।

ವಿಶ್ವವು ವಸ್ತುವಲ್ಲದಿದ್ದರೆ, ಅದು ಮನುಷ್ಯನ ಕೊಂಬಿನಂತೆ ಪ್ರಕಟವಾಗದೆ ಇರುತ್ತಿತ್ತು. ಏನಾದರೂ ಬೇಕೆನಿಸಿದವನು, ವಸ್ತುವನ್ನು ಹೇಗೆ ಪಡೆಯುವನು? ಭಾರದಿಂದ ತೊಂದರೆಗೊಳಗಾದವನು ಏನನ್ನು ಬದಿಗಿರಿಸುವನು? [6–14..15]

ವಿವೃತ್ತಿ

ಹೇಳಿರುವ ಸರ್ವ ವ್ಯವಹಾರವಿರೋಧಗಳನ್ನು ವಿವರಿಸುತ್ತಾ **ನೈವ ಭಾಸೇತೇತಿ.** ಅಥವಾ ಶೂನ್ಯಕಾರಣಕವಾದ ಜಗತ್ತು ಕೂಡ ಶೂನ್ಯವೇ ಆಗಿರುವುದು, ಅದರ ವ್ಯವಹಾರಗಳೂ ಮುಚ್ಚಿಹೋಗುವುವು ಎಂಬ ಶಂಕೆಯಿಂದ, ಶೂನ್ಯಕ್ಕೆ ವಿವರಣೆಯಿಲ್ಲದಾಗಿ ಮುಚ್ಚಿರುವ ವ್ಯವಹಾರಗಳೂ ಸಿದ್ಧವಾಗುವುದಿಲ್ಲ ಎಂದು ಹೇಳಲು **ನೈವ ಭಾಸೇತೇತಿ.** ಪ್ರಕಟವಾಗದಿರುವ ಮನುಷ್ಯನ ಕೊಂಬು ಯಾರಿಗಾದರೂ ಕಾಣುವುದೋ ಎಂಬ ಭಾವ. ಶೂನ್ಯ ಪಕ್ಷದಲ್ಲಿ, ಸಿದ್ಧವಾಗಿರುವ ವಿಷಯಗಳ ಉಪಾದಾನವನ್ನು ಪರಿತ್ಯಜಿಸುವುದರಿಂದ, ಯಾವುದನ್ನಾದರೂ ಪಡೆಯುವುದು ಹೇಗೆ? ಯಾ ತ್ಯಜಿಸುವುದು ಹೇಗೆ? ಎಂಬ ಅರ್ಥದಲ್ಲಿ. [6–14..15]

को विदध्यान्निषिद्ध्येद्वा शून्यत्वात्स्वस्य चात्मनः ॥ १५ ॥
अवसीदेन्निराकूतं तस्मात्सर्वमिदं जगत् ।

ಕೋ ವಿದಧ್ಯಾನ್ನಿಷಿದ್ಧ್ಯೇದ್ವಾ ಶೂನ್ಯತ್ವಾತ್ಸ್ವಸ್ಯ ಚಾತ್ಮನಃ ॥ 15 ॥
ಅವಸೀದೇನ್ನಿರಾಕೂತಂ ತಸ್ಮಾತ್ಸರ್ವಮಿದಂ ಜಗತ್ ।

ಅವನ ಆತ್ಮವೇ ಇರದಿದ್ದಾಗ, ಅವನನ್ನು ನಿರ್ದೇಶಿಸುವವನು ಯಾ ನಿಷೇಧಿಸುವವನು ಯಾರಿದ್ದಾರೆ? ಅದರ ಅಸ್ತಿತ್ವಕ್ಕೆ ಕಾರಣವಿಲ್ಲದಿರುವಾಗ, ಸಂಪೂರ್ಣ ವಿಶ್ವವು ನಾಶಹೊಂದಬಹುದು. [6–15..16]

ವಿವೃತ್ತಿ

ವ್ಯವಹಾರದಲ್ಲಿ ವ್ಯವಹರಿಸುವವನೇ ಇಲ್ಲದಿರುವಾಗ ಶೂನ್ಯವಾದದಲ್ಲಿ ವ್ಯವಹಾರವೇ ಇರುವುದಿಲ್ಲ ಎಂದು ಹೇಳುವ **ಕೋ ವಿದಧ್ಯಾದಿತಿ.** ಶೂನ್ಯವಾದದ ನಿರಾಕರಣೆಯನ್ನು ಸಮಾಪ್ತಗೊಳಿಸುತ್ತಾ **ಅವಸೀದೇದಿತಿ.** ***ನಿರಾಕೂತಂ*** ನಶಿಸುವುದು. [6–15..16]

ಅಸ್ತಿತ್ವವಿಲ್ಲದವುಗಳು ಭ್ರಮೆಯ ವಿಷಯವಾಗಲು ಸಾಧ್ಯವಿಲ್ಲ, ಮನುಷ್ಯನ ಕೊಂಬಿನಂತೆ.

ಐದು ಸ್ಕಂಧಗಳ ಸಿದ್ಧಾಂತದ ನಿರಾಕರಣೆ

स्कन्धानां परमाणूनां न सङ्घातयितास्ति चेत् ॥ १६ ॥
सङ्घातो न विना हेतुं जडा घटपटादयः ।

ಸ್ಕಂಧಾನಾಂ ಪರಮಾಣೂನಾಂ ನ ಸಂಘಾತಯಿತಾಸ್ತಿ ಚೇತ್ ॥ 16 ॥
ಸಂಘಾತೋ ನ ವಿನಾ ಹೇತುಂ ಜಡಾ ಘಟಪಟಾದಯಃ ।

ಇನ್ನು ಸ್ಕಂಧಗಳು ಮತ್ತು ಪರಮಾಣುಗಳನ್ನು ಸಂಯೋಜಿಸಿ ಬೆಳೆಸುವವನು ಇಲ್ಲ ಎಂಬ ವಾದದ ಕುರಿತು. ಕಾರಣವಿಲ್ಲದೆ (ಸಂಯೋಜಕ) ವಸ್ತುಗಳ ಸಂಯೋಜನೆ ಆಗುವುದಿಲ್ಲ; ಮಡಕೆ, ವಸ್ತ್ರ ಇತ್ಯಾದಿಗಳು ಜಡ ರೂಪಿಗಳು. [6–16..17]

ವಿವೃತ್ತಿ

ಇದರಲ್ಲಿ ಪಂಚಸ್ಕಂಧಗಳ ಸಂಯುಕ್ತವೆಂಬ ವಾದವನ್ನು ನಿರಾಕರಿಸುವ **ಸ್ಕಂಧಾನಾಮಿತಿ.** ಸ್ಕಂಧಗಳ ಮತ್ತು ಪರಮಾಣುಗಳ ಸಂಯೋಜಕನು ಯಾಕೆ ಇರುವುದಿಲ್ಲ? ಅವನು ಇರುವುದರಿಂದ ಅವು ಸ್ಥಿರವಾಗಿವೆ, ಕ್ಷಣಿಕವಲ್ಲ. ಹೀಗಾಗಿ ನಿಮ್ಮದು ಅಪಸಿದ್ಧಾಂತವಾಗಿದೆ. ಎರಡರ ಸಂಯುಕ್ತದ ಉತ್ಪತ್ತಿಯ ಸಮಯದಲ್ಲಿ ಸಂಯೋಜಕನ ಅನುಪಸ್ಥಿತಿಯನ್ನು ನಿರಾಕರಿಸುತ್ತಾ **ನ ಸಂಘಾತಯಿತಾಸ್ತಿ ಚೇದಿತಿ.** ಅದನ್ನೇ ಮುಂದುವರೆಸುವ **ಸಂಘಾತೋ ನ ವಿನಾ ಹೇತುಮಿತಿ.** ಸಂಯೋಜಿಸುವವನಿಲ್ಲದೆ ಸಂಯೋಜನೆಯು ಸಿದ್ಧವಾಗುವುದಿಲ್ಲ; ಮಡಕೆ, ವಸ್ತ್ರ ಮುಂತಾದವು ಜಡಪದಾರ್ಥಗಳು, ಸ್ವಯಂ ಜೋಡಣೆಯ ಸಾಮರ್ಥ್ಯವಿಲ್ಲದವುಗಳು ಎಂಬ ಅರ್ಥ. ಈ ಲೋಕದಲ್ಲಿ ಜಡವಸ್ತುಗಳಾದ ನೂಲು, ಮಣ್ಣು, ಮರ ಮುಂತಾದವುಗಳು ನೇಕಾರ, ಕುಂಬಾರ ಯಾ ಬಡಗಿಯ ಉಪಸ್ಥಿತಿಯಿಲ್ಲದೆ ತಾವಾಗಿಯೇ ವಸ್ತ್ರ, ಮಡಕೆ ಯಾ ರಥ ರೂಪವಾಗಿ ಸಂಯೋಗಗೊಳ್ಳುವುದಿಲ್ಲ. ಹಾಗಾಗುವುದಕ್ಕೆ ದೃಷ್ಟಾಂತದ ಅಭಾವವಿರುವುದರಿಂದ ಮತ್ತು ಪ್ರಸ್ತುತ ದೃಷ್ಟಾಂತಕ್ಕೆ ವಿರೋಧ ಆಗಿರುವುದರಿಂದ ನಿರಾತ್ಮಕ ಸ್ಕಂಧಗಳ ವಾದವು ಅಪ್ರಾಮಾಣಿಕವು ಎಂಬ ಭಾವ. [6–16..17]

ಜಡ ವಸ್ತುಗಳು ತಮ್ಮಷ್ಟಕ್ಕೆ ತಾವೇ ಯಾವ ಕಾರ್ಯವನ್ನೂ ಮಾಡಲಾರವು, ಸಂಯೋಜಿಸುವವನ ಆವಶ್ಯಕತೆಯಿದೆ. ಉದಾಹರಣೆಗೆ, ನೂಲು ತನ್ನಷ್ಟಕ್ಕೆ ವಸ್ತ್ರವನ್ನು ನೇಯಲಾರದು, ನೇಕಾರನ ಅಗತ್ಯವಿದೆ. ಅಹಂಕಾರವು ಕ್ಷಣಿಕವೆಂಬ ವಾದವು ಹಲವು ವಿರೋಧಾಭಾಸಗಳಿಂದ ಕೂಡಿದೆ.

महानुभावो भूयासमिति भ्रान्तश्च मन्यते ॥ १७ ॥
आत्मापलापको बौद्धः किमर्थं चरति व्रतम् ।

ಮಹಾನುಭಾವೋ ಭೂಯಾಸಮಿತಿ ಭ್ರಾಂತಶ್ಚ ಮನ್ಯತೇ ॥ 17 ॥
ಆತ್ಮಾಪಲಾಪಕೋ ಬೌದ್ಧಃ ಕಿಮರ್ಥಂ ಚರತಿ ವ್ರತಮ್ ।

'ನಾನು ಮಹಾನುಭಾವನಾಗುತ್ತೇನೆ' ಎಂದು ಭ್ರಾಂತಿಗೊಳಗಾದವರು (ಬೌದ್ಧರು) ಆಲೋಚಿಸುತ್ತಾರೆ. ಆತ್ಮದ ಅಸ್ತಿತ್ವವನ್ನು ಒಪ್ಪದ ಬೌದ್ಧರು ಯಾವ ಕಾರಣಕ್ಕೆ ವ್ರತಗಳನ್ನು ಕೈಗೊಳ್ಳುತ್ತಾರೆ? [6–17..18]

ವಿವೃತ್ತಿ

ಕ್ಷಣಿಕರೂಪದ ಪಕ್ಷವನ್ನು ಅಂಗೀಕರಿಸುವ ಬೌದ್ಧರ ಅವಿವೇಕವನ್ನು ಪ್ರಕಟಿಸುತ್ತಾ ಅವರ ಮತದಲ್ಲಿನ ಅಸಮಂಜಸತೆಯನ್ನು ಸೂಚಿಸಲು **ಮಹಾನುಭಾವ ಇತಿ.** ***ಭ್ರಾಂತೋ*** ಕಂಡುಬರುವ ಎಂಬ ಅರ್ಥದಲ್ಲಿ. ***ವ್ರತಂ*** ಪಾರಲೌಕಿಕವಾದ ಚೈತನ್ಯಕ್ಕೆ ವಂದನೆ ಇತ್ಯಾದಿಗಳು. ಕ್ಷಣಿಕ ರೂಪವಾಗಿದ್ದರೆ, ಕರ್ತೃ–ಭೋಕ್ತೃ (ಮಾಡುವವ, ಅನುಭವಿಸುವವ) ಒಂದೇ ಆಗಿರದಿರುವುದರಿಂದ ವ್ರತಾಚರಣೆಯು ವ್ಯರ್ಥವಾಗಿ ಅದರ ವಿಧಾನ ಶಾಸ್ತ್ರವು ಅದರ ಕುರಿತು ಪ್ರಾಮಾಣಿಕವಾಗಿಲ್ಲ ಎಂಬ ಭಾವ. [6–17..18]

ಪ್ರತ್ಯಭಿಜ್ಞನು ಭ್ರಮೆಯಲ್ಲ

प्रत्यभिज्ञा यदि भ्रातिः भोजनादि कथं भवेत् ॥ १८ ॥

ಪ್ರತ್ಯಭಿಜ್ಞಾ ಯದಿ ಭ್ರಾಂತಿಃ ಭೋಜನಾದಿ ಕಥಂ ಭವೇತ್ ॥ 18 ॥

ಪ್ರತ್ಯಭಿಜ್ಞನು (ಗುರುತಿನ ತಿಳುವಳಿಕೆ) ಭ್ರಮೆಯಾದರೆ, ನಾವು ಆಹಾರವನ್ನು ಯಾಕೆ ಸೇವಿಸಬೇಕು ಅಥವಾ ಅಂತಹ ಕೆಲಸಗಳನ್ನು ಯಾಕೆ ಮಾಡಬೇಕು? [6–18]

ವಿವೃತ್ತಿ

ಜ್ವಾಲೆಯು ಪ್ರತ್ಯಭಿಜ್ಞವಾದರೆ, ಅದರಂತೆಯೇ ನಾನು ಕೂಡ ಎಂದು ಹೇಳಬಹುದಾಗಿದ್ದು ಪ್ರತ್ಯಭಿಜ್ಞತೆಯು ಭ್ರಮೆ ಎನ್ನುವುದನ್ನು ದೂರಿಕರಿಸುವ **ಪ್ರತ್ಯಭಿಜ್ಞೇತಿ.** [6–18]

इष्टसाधनमेवैतदन्नं गतदिनान्नवत् ।
इति निश्चित्य बालोपि भोजनादौ प्रवर्तते ॥ १९ ॥

ಇಷ್ಟಸಾಧನಮೇವೈತದನ್ನಂ ಗತದಿನಾನ್ನವತ್ ।
ಇತಿ ನಿಶ್ಚಿತ್ಯ ಬಾಲೋಽಪಿ ಭೋಜನಾದೌ ಪ್ರವರ್ತತೇ ॥ 19 ॥

ಇವತ್ತು ತಿನ್ನುವ ಆಹಾರವು ನಮ್ಮ ಹಸಿವನ್ನು ಹಿಂಗಿಸುತ್ತದೆ, ನಿನ್ನೆ ತಿಂದ ಆಹಾರದಂತೆ. ಅದೇ ನಂಬಿಕೆಯಿಂದಲೇ, ಒಂದು ಸಣ್ಣ ಮಗು ಕೂಡಾ ಆಹಾರವನ್ನು ಸೇವಿಸುತ್ತದೆ. ಆ ನಂಬಿಕೆಯಿಂದಲೇ ಇತರ ಕೆಲಸಗಳನ್ನೂ ಮಾಡುತ್ತೇವೆ. [6–19]

ವಿವೃತ್ತಿ

ಭೋಜನ ಇತ್ಯಾದಿಗಳು ಪ್ರತ್ಯಭಿಜ್ಞತೆ ಯಾಕೆ ಅಲ್ಲ ಎಂದು ತಿಳಿಸಲು **ಇಷ್ಟಸಾಧನಮಿತಿ.** ಇದರ ಅರ್ಥವು ಹೀಗಿದೆ: ವಸ್ತುವನ್ನು ದೃಷ್ಟಿಸಿದ ಪುರುಷನು ಅದರ ಪ್ರವೃತ್ತಿ– ನಿವೃತ್ತಿಗಳನ್ನು ಅನುಭವದಿಂದ ಸಿದ್ಧಮಾಡಿಕೊಳ್ಳುತ್ತಾನೆ. ಅದರ ಪ್ರವೃತ್ತಿ–ನಿವೃತ್ತಿಗಳಿಂದ ತನಗೆ ಆಗುವ ಅನುಕೂಲ, ಪ್ರತಿಕೂಲಗಳು ಬುದ್ಧಿಯಲ್ಲಿ ಸಂಗ್ರಹವಾಗುತ್ತದೆ. ಅದನ್ನು ಉಪಭೋಗಿಸುವ ತನಗೆ ಅದರಿಂದ ಸುಖದ ಅನುಭವವಾದರೆ ಅದು ಅನುಕೂಲಕರವಾಗಿ ಪ್ರತೀತವಾಗುವುದು; ದುಃಖಜನಕವಾಗಿದ್ದರೆ ಪ್ರತಿಕೂಲವಾಗಿ ಪ್ರಸಿದ್ಧವಾಗುವುದು. ಮುಂದಿನ ಕಾಲದಲ್ಲಿ ಅಂತಹದೇ ವಸ್ತುವು ಅಕಸ್ಮಾತ್ತಾಗಿ ದೊರಕಿದಾಗ, ಅದರಲ್ಲಿ ಪ್ರವೃತ್ತವಾಗುವುದು ಅಸಂಭವವಾಗಿದ್ದರೂ ಅದರ ಅನುಕೂಲತೆಯು ಬುದ್ಧಿಯಲ್ಲಿ ಉದಯವಾಗುವುದು. ಎಲ್ಲಿ ಬರಿಯ ವಸ್ತುದರ್ಶನ ಮಾತ್ರದಿಂದ ಅದರ

ಪ್ರವೃತ್ತಿಯು ಗೋಚರವಾದಾಗ ಅಲ್ಲಿ ಹಿಂದೆ ಅನುಭವಿಸಿರುವ ಸಜಾತೀಯ, ಅಂತಹದೇ ವಸ್ತುವಿನ ಅನುಭವವು ಅದು ತನಗೆ ಅನುಕೂಲಕರವೋ ಅನನುಕೂಲವೋ ಎಂದು ನಿಶ್ಚಯಿಸಲು ಸಹಕಾರಿಯಾಗುವುದು ಅಂಗೀಕೃತವಾಗಿದೆ. ಕ್ಷಣಿಕ ಆತ್ಮವಾದಿಗಳಂತೆ ಎಲ್ಲವೂ ಕ್ಷಣಿಕವಾಗಿದ್ದರೆ, ವಸ್ತುದರ್ಶನದ ಹಿಂದು–ಮುಂದಿನ ಕಾಲದಲ್ಲಿ ಪ್ರಕಟವಾಗಿರುವುದರ ತಿಳುವಳಿಕೆಯ ಅಭಾವದಲ್ಲಿ ಅದರ ಪ್ರವೃತ್ತಿ–ನಿವೃತ್ತಿಗಳ ಅರಿವಿಲ್ಲದೆ ಜೀವನವು ದುಷ್ಕರವಾಗುವುದು. ಹಿಂದೆ ಸ್ವೀಕರಿಸಿರುವ ಅನ್ನವು ತನ್ನ ಹಸಿವನ್ನು ಹಿಂಗಿಸಿರುವುದು ನಿಶ್ಚಿತವಾದುದರಿಂದ, ಇಂದು ತಿನ್ನುವ ಅನ್ನವನ್ನೂ ಇಷ್ಟದಿಂದ ಸ್ವೀಕರಿಸಲು ಸಾಧ್ಯವಾಗುವುದು. ಊಟಮಾಡುವುದರಿಂದ ಹಸಿವುಹಿಂಗುವುದೆಂಬ ನಿಶ್ಚಯದಿಂದಲೇ ಒಂದು ಮಗುವೂ ಕೂಡ ಭೋಜನ ಮುಂತಾದವುಗಳಲ್ಲಿ ತೊಡಗಿಸಿಕೊಳ್ಳುತ್ತದೆ. ಹಾಗಾಗಿ ಆಗಮ ಪಂಡಿತರು ತಿಳಿಸಿರುವ ವ್ಯವಹಾರಮಾರ್ಗವನ್ನು ಆಬಾಲವೃದ್ಧರಾದಿಯಾಗಿ ಎಲ್ಲರೂ ಸ್ವೀಕರಿಸಿ, ಬೌದ್ಧರನ್ನು ದೂರೀಕರಿಸುವುದೇ ಶ್ರೇಯ ಎಂದು ತಿಳಿಯುತ್ತಾರೆ ಎಂಬ ಭಾವ. [6–19]

ಎರಡು ದಿನಗಳ ಅನುಭವಗಳಿಲ್ಲದಿದ್ದರೆ, ಒಬ್ಬನೇ ವ್ಯಕ್ತಿಗೆ, ಹೀಗೆ ಮಾಡುವುದು ಸಂಭವವಾಗುವುದಿಲ್ಲ.

ಆತ್ಮದ ನಿರಂತರ ಅಸ್ತಿತ್ವ

अवकाशप्रदातृत्वं आकाशार्थक्रिया यथा ।
तथैवार्थक्रिया पुंसः कर्तृत्वज्ञातृतादिका ॥ २० ॥

ಅವಕಾಶಪ್ರದಾತೃತ್ವಂ ಆಕಾಶಾರ್ಥಕ್ರಿಯಾ ಯಥಾ ।
ತಥೈವಾರ್ಥಕ್ರಿಯಾ ಪುಂಸಃ ಕರ್ತೃತ್ವಜ್ಞಾತೃತಾದಿಕಾ ॥ 20 ॥

ಆವಕಾಶವನ್ನು ಕಲ್ಪಿಸಿಕೊಡುವುದು ಆಕಾಶದ ಕೆಲಸವಾಗಿದೆ; ಅಂತೆಯೇ ಕರ್ತೃ (ಮಾಡುವವನು) ಮತ್ತು ಜ್ಞಾತೃವಿನಂತೆ (ತಿಳಿಯುವವನು), ಪುರುಷನಿಗೆ ಒಂದು ಗುರಿ ಇದೆ. [6–20]

ವಿವೃತ್ತಿ

ಸ್ಥಾಯಿಯಾದ ಒಂದು ಗುರಿಯಿಲ್ಲದಿರುವ ಕ್ಷಣಿಕವಾದ ಆತ್ಮವು ಎಂದು ಬೌದ್ಧರು ಹೇಳುತ್ತಾರಾದರೆ ಅದು ನಿಶ್ಚಿತವಾದ ಗುರಿಯನ್ನು ಹೊಂದಿರುವುದು ಎಂಬ ಅಭಿಪ್ರಾಯವನ್ನು ಸಾಧಿಸಲು **ಅವಕಾಶೇತಿ.** ಆಕಾಶವು ಖಾಲಿಯಾಗಿ ಆವರಿಸಿಕೊಂಡಿರುವಂತಹ ಉಪಯೋಗವಿಲ್ಲದ ವಸ್ತುಎಂದು ಹೇಳುವವರಿಗೆ ಉತ್ತರಿಸುತ್ತಾ ಆಕಾಶಕ್ಕೆ ಆವರಿಸಿಕೊಳ್ಳುವಂತಹ ಖಾಲಿತನವು ಇರುವುದಾದರೂ ಅದು ಅದರೊಳಗೆ ಇರುವವರಿಗೆ ಅವಕಾಶವನ್ನು ಕಲ್ಪಿಸಿಕೊಡುತ್ತದೆ. ಮತ್ತು ಪಕ್ಷಿ ಮುಂತಾದ ಹಾರುವ ಜೀವಿಗಳಿಗೆ ಅವುಗಳ ಹಾರುವಿಕೆಗೆ ತನ್ನಲ್ಲಿ ಅವಕಾಶಮಾಡಿಕೊಡುವ ಆಕಾಶವು ಭಾವರೂಪದ ವಸ್ತು ಎಂದಾಗುವುದು. ಆತ್ಮನ ಜ್ಞಾತೃತ್ವ, ಕರ್ತೃತ್ವಗಳು ಪ್ರಸಿದ್ಧವಾಗಿವೆ. ಅಂತಹ ಒಂದು ನಿಶ್ಚಿತ ಗುರಿಯಿರುವುದರಿಂದ ಆತ್ಮದ ಸ್ಥಾಯಿತ್ವವು ಹಿಂದೆ ಹೇಳಿರುವ ಯುಕ್ತಿಯಿಂದ ಸಿದ್ಧವಾಗಿದೆ. [6–20]

ಹೀಗೆ, ನಿರಂತರತೆಯುಳ್ಳ ಆತ್ಮವು, ಆಕಾಶದಂತೆ, ಉಪಯೋಗವಿಲ್ಲದ ಅವಸ್ತು ಎಂಬ ವಾದವು ಖಂಡಿಸಲ್ಪಡುತ್ತದೆ. ಆಕಾಶವು ಅವಸ್ತುವಲ್ಲ, ಬರಿಯ ಖಾಲಿಯಾಗಿರುವ ಸ್ಥಿತಿಯಲ್ಲ; ಅದು ಸಮ್ಮಿಳಿತವಾಗಿರುವ, ಜೀವಿಗಳಿಗೆ ವಾಸಿಸಲು ಮತ್ತು ಚಲಿಸಲು ಅವಕಾಶವನ್ನು ಕಲ್ಪಿಸುವ ಒಂದು ತತ್ತ್ವ. ಹೀಗೆ ಮಾಡುವವನು ಮತ್ತು ತಿಳಿಯುವವನು ಎಂಬ ಕೆಲಸದ ಗುರಿಯಿಂದ, ಆತ್ಮದ ನಿರಂತರ ಅಸ್ತಿತ್ವವನ್ನು ನಿರಾಕರಿಸಲು ಸಾಧ್ಯವಿಲ್ಲ.

सुषुप्तिसमयेप्यात्मा सत्यज्ञानसुखात्मकः ।
सुखमस्वाप्समित्येवं प्रत्यभिज्ञायते यतः ॥ २१ ॥

ಸುಷುಪ್ತಿಸಮಯೇಪ್ಯಾತ್ಮಾ ಸತ್ಯಜ್ಞಾನಸುಖಾತ್ಮಕ: ।
ಸುಖಮಸ್ವಾಪ್ಸಮಿತ್ಯೇವಂ ಪ್ರತ್ಯಭಿಜ್ಞಾಯತೇ ಯತಃ ॥ 21 ॥

ಸುಷುಪ್ತಿಯ ಸಮಯದಲ್ಲಿ ಕೂಡಾ, ಆತ್ಮವು ಸತ್ಯವೂ, ಜ್ಞಾನರೂಪಿಯೂ ಮತ್ತು ಆನಂದಮಯವೂ ಆಗಿ ಕಂಡುಬರುತ್ತದೆ; ಯಾಕೆಂದರೆ ಆ ವೇಳೆಯಲ್ಲಿ 'ನಾನು ಸುಖವಾಗಿ ನಿದ್ರಿಸಿದೆ' ಎಂಬ ಜ್ಞಾನವನ್ನು ಪ್ರತ್ಯಭಿಜ್ಞನು ಹೊಂದಿರುತ್ತಾನೆ. [6–21]

ವಿವೃತ್ತಿ

ಜಾಗ್ರತ್ ಸ್ವಪ್ನಗಳಲ್ಲಿರುವ ಸತ್ ಸುಷುಪ್ತಿಯಲ್ಲಿ ನಿರ್ದಿಷ್ಟ ಗುರಿಯ ಅಭಾವದಿಂದ ಅಸತ್ ರೂಪವನ್ನು ಹೊಂದುವುದು ಎಂಬುದನ್ನು ನಿರಾಕರಿಸುತ್ತಾ ಸತ್ ಯಾವಾಗಲೂ ನಿರ್ದಿಷ್ಟ ಗುರಿಯನ್ನು ಹೊಂದಿರುತ್ತದೆ ಎಂದು ತಿಳಿಸುವ **ಸುಷುಪ್ತಿಸಮಯೇಪೀತಿ.** ಪ್ರತ್ಯಭಿಜ್ಞನಿಗೆ ಪ್ರಮಾಣವು ಹಿಂದೆಯೇ ಸಿದ್ಧವಾಗಿದೆ. ಹಿಂದು ಮುಂದಿನ ಕ್ಷಣಗಳಲ್ಲಿಯೂ ಸತ್ ಸಮಾನರೂಪವಾಗಿ ದ್ರಷ್ಟವಾಗುತ್ತದೆ ಎಂಬುದು ಅಂಗೀಕಾರವಾದರೆ ಅದರಿಂದ ಹಿಂದು ಮುಂದಿನ ಕ್ಷಣಗಳಿಗೆ ಸಾದೃಶ್ಯವಿಲ್ಲ ಎನ್ನುವ ಬೌದ್ಧರ ಪ್ರತ್ಯಭಿಜ್ಞತೆಯು ಒಂದು ಭ್ರಮೆ ಎಂಬುದು ಸಿದ್ಧವಾಗುವುದಿಲ್ಲ, ಮತ್ತು ಅದರ ಭ್ರಮತ್ವವನ್ನು ಹೇಳುವ ಯುಕ್ತಿಯೂ ಯುಕ್ತವಲ್ಲ ಎಂಬ ಭಾವ. [6–21]

ಈ ಸ್ವಂತಿಕೆಯ ಜ್ಞಾನವನ್ನು ಬೌದ್ಧರು ಸಮಾನ ಗುಣಗಳಿರುವ ಭ್ರಮೆಯೆಂದು ಯಾವಾಗಲೂ ನಿರಾಕರಿಸಲು ಸಾಧ್ಯವಿಲ್ಲ; ಅವರ ವಾದದ ಪ್ರಕಾರ ಎರಡು ಬೇರೆ ಬೇರೆ ಕ್ಷಣಗಳಲ್ಲಿ ಜರಗುವ ಕ್ರಿಯೆಗಳಲ್ಲಿ ಸಮಾನಗುಣಗಳನ್ನು ಪರಿಶೀಲಿಸುವ ಯಾವುದೇ ವ್ಯಕ್ತಿತ್ವವು ಅಷ್ಟು ಸಮಯ ಇರುವುದಿಲ್ಲ.

प्रत्यभिज्ञायत इति प्रयोगः कर्मकर्तरि ।
आत्मा स्वयंप्रकाशत्वाज्ज्ञानात्यात्मानमात्मना ॥ २२ ॥

ಪ್ರತ್ಯಭಿಜ್ಞಾಯತ ಇತಿ ಪ್ರಯೋಗಃ ಕರ್ಮಕರ್ತರಿ ।
ಆತ್ಮಾ ಸ್ವಯಂಪ್ರಕಾಶತ್ವಾಜ್ಜಾನಾತ್ಯಾತ್ಮಾನಮಾತ್ಮನಾ ॥ 22 ॥

'ಆತ್ಮವನ್ನು ತಿಳಿಯಲಾಗಿದೆ' ಎಂಬ ಹೇಳಿಕೆಯು ಕರ್ತರಿ ಪ್ರಯೋಗದಲ್ಲಿದೆ. ಸ್ವಯಂಪ್ರಕಾಶಿತವಾದುದರಿಂದ, ಆತ್ಮವನ್ನು ಆತ್ಮವೇ ಅರಿತುಕೊಂಡಿದೆ. [6–22]

ವಿವೃತ್ತಿ

ಸುಖವಿದೆ ಎಂದು ತಿಳಿದಿರುವೆನು ಎಂಬ ಹೇಳಿಕೆಯು ಆತ್ಮನ ವಿಷಯತ್ವವನ್ನು ತಿಳಿಸಿ, ಕರ್ಮಪ್ರತ್ಯಯವನ್ನು ನಿರ್ದೇಶಿಸುತ್ತದೆ. ಹಾಗೂ ವೇದಾಂತಿಗಳು ಹೇಳುವ ಸ್ವಯಂಜ್ಯೋತಿಯಾಗಿರುವ ಆತ್ಮ ಎಂಬ ವಚನಕ್ಕೆ ವಿರೋಧವಾಗುವುದು ಎಂಬ ಶಂಕೆಯನ್ನು ಪರಿಹರಿಸಲು **ಪ್ರತ್ಯಭಿಜ್ಞಾಯತ ಇತಿ.** ತಿಳಿದಿರುವೆನು ಎಂಬ

ಪ್ರಯೋಗವು ‘ಆತ್ಮವು ತನ್ನನ್ನು ಸ್ವಯಂ ಅರಿತಿರುವುದು’ ಎಂಬ ಕರ್ಮಣಿ ಪ್ರಯೋಗಕ್ಕೆ ಸಮನಾಗಿ, ಆತ್ಮದ ಸ್ವಪ್ರಕಾಶತ್ವದ ವಿವರಣೆಗೆ ವಿರೋಧವಾಗುವುದಿಲ್ಲ ಎಂದು ಸ್ಪಷ್ಟಪಡಿಸಲು **ಆತ್ಮೇತಿ.** [6–22]

‘ಆತ್ಮವನ್ನು ತಿಳಿಯಲಾಗಿದೆ’ ಎಂಬ ಕರ್ತರಿ ಪ್ರಯೋಗವು ‘ಆತ್ಮವು ತನ್ನನ್ನು ತಾನೇ ತಿಳಿದುಕೊಂಡಿದೆ’ ಎಂಬ ಕರ್ಮಣಿ ಪ್ರಯೋಗಕ್ಕೆ ಸಮನಾಗಿದೆ. ಆದುದರಿಂದ ಆತ್ಮವನ್ನು ತಿಳಿಯಲು ಬೇರೊಂದರ ಆವಶ್ಯಕತೆಯಿದ್ದು, ಇನ್ನೊಂದು ಬಾಹ್ಯ ಜ್ಞಾನಿಯ ಉಗಮವನ್ನು ಸೂಚಿಸುವಂತಹ ಪ್ರಯೋಗವಲ್ಲ ಹಾಗೂ ಸ್ವಪ್ರಕಾಶಿತ ಆತ್ಮದ ಅಸ್ತಿತ್ವವನ್ನು ನಿರಾಕರಿಸುವುದಿಲ್ಲ.

सुषुप्तौ मायया मूढः जडान्ध इव लक्ष्यते ।
अप्रकाशतया भाति स्वप्रकाशतयापि च ॥ २३ ॥

ಸುಷುಪ್ತೌ ಮಾಯಯಾ ಮೂಢಃ ಜಡಾಂಧ ಇವ ಲಕ್ಷ್ಯತೇ ।
ಅಪ್ರಕಾಶತಯಾ ಭಾತಿ ಸ್ವಪ್ರಕಾಶತಯಾಪಿ ಚ ॥ 23 ॥

ಸುಷುಪ್ತಿಯಲ್ಲಿ ಮಾಯೆಯಿಂದ ಆವರಿಸಲ್ಪಟ್ಟು ಮೂಢನಾಗಿರುವಾಗ, ಜಡವಾಗಿಯೂ, ಸ್ವಜ್ಞಾನವಿಲ್ಲದವನಾಗಿಯೂ ಕಾಣಿಸಿಕೊಳ್ಳುತ್ತಾನೆ; ಸ್ವಯಂ ಪ್ರಕಾಶಯುತನಾಗಿದ್ದರೂ ಹೊಳಪಿಲ್ಲದವನಾಗುತ್ತಾನೆ. [6–23]

ವಿವೃತ್ತಿ

ಹೀಗೆ ತಾತ್ಪರ್ಯವನ್ನು ವರ್ಣಿಸುತ್ತಾ, ನಿತ್ಯ ಶುದ್ಧ ಬುದ್ಧ ಮುಕ್ತ ಸ್ವಭಾವದ್ದಾಗಿರುವ ಆತ್ಮವು ರಾಹುಗ್ರಸ್ತವಾಗಿರುವುದು ಎಂಬುದರ ಅಕ್ಷರಾರ್ಥವನ್ನು ವರ್ಣಿಸಲು **ಸುಷುಪ್ತಾವಿತ್ಯಾದಿನಾ.** ***ಜಡತ್ವಂ*** ಅಚೇತನತ್ವವು ***ಅಂಧತ್ವಂ*** ಅಜ್ಞಾತೃತ್ವವು. ಹಾಗೆ ವಿಶೇಷವಾದ ಜ್ಞಾನವಿಲ್ಲದೆ ಅಪ್ರಕಾಶತೆಯಿಂದ ಮಂದವಾಗಿ ಭಾಸವಾಗುವುದು, ಸ್ವರೂಪದ ವಿಶೇಷಜ್ಞಾನದ ಲೋಪವಿಲ್ಲದೆ ಸ್ವಪ್ರಕಾಶಿತವಾಗಿದ್ದರೂ ಕೂಡ. [6–23]

जडात्मनि च देहादौ साक्षादीशो विविच्यते ।

ಜಡಾತ್ಮನಿ ಚ ದೇಹಾದೌ ಸಾಕ್ಷಾದೀಶೋ ವಿವಿಚ್ಯತೇ ।

ಜಡವಾದ ದೇಹ ಮತ್ತು ಇತ್ಯಾದಿಗಳು ಸ್ವಯಂ ಜ್ಞಾನವಿಲ್ಲದವುಗಳಾದುದರಿಂದ, ಅವನು ಅವುಗಳ ಒಡೆಯನಾಗಿ ಕಂಡುಬರುತ್ತಾನೆ. [6–24]

ವಿವೃತ್ತಿ

ಇಂತು ಪೂರ್ವಾರ್ಧವನ್ನು ವ್ಯಾಖ್ಯಾನಿಸಿ, ಉತ್ತರಾರ್ಧದ ಮೊದಲಪಾದದ ಅರ್ಥವನ್ನು ತಿಳಿಸಲು **ಜಡಾತ್ಮನೀತ್ಯಾದಿನಾ.** ದೇಹ, ಇಂದ್ರಿಯ ಮನಃ ಬುದ್ಧಿಗಳು ಜಡವಾಗಿರುವುದರಿಂದ ತಮ್ಮ ವ್ಯವಹಾರಗಳ ಕುರಿತು ಅನಭಿಜ್ಞವಾಗಿ ಇದು ನನ್ನ ಕಣ್ಣು, ನಾನು ಆಘ್ರಾಣಿಸುತ್ತೇನೆ, ಕೇಳುತ್ತೇನೆ, ಮಾತನಾಡುತ್ತೇನೆ, ಒಪ್ಪುವೆನು, ತಿಳಿಯುವೆನು, ಹೋಗುವೆನು, ಕುಳಿತಿರುವೆನು, ನೆಗೆಯುವೆನು ಎಂದು ಅವಭಾಸವಾಗುವಲ್ಲಿ ಪ್ರತ್ಯಭಿಜ್ಞನಾಗಿರುವ ಆತ್ಮವು ಸಾಕ್ಷಾತ್ ಈಶ್ವರನೇ ಆಗಿರುವನು ಎಂಬ ಚಿಂತಿಸುವುದು. [6–24]

ಉಪಾಧಿಗಳು ಜಡವಾಗಿವೆ; ಅವುಗಳಿಗೆ ತಮ್ಮ ಸ್ವತಃ ಪರಿಚಯವಿರುವುದಿಲ್ಲ ಹಾಗೂ ಬೇರೆಯವುಗಳ ಕೆಲಸದ ಕುರಿತೂ ಅರಿವಿರುವುದಿಲ್ಲ; ಆದರೆ ಆತ್ಮಕ್ಕೆ ಅದರ ಬಗ್ಗೆ ತಿಳುವಳಿಕೆಯಿದೆ ಹಾಗೂ ನಾನು ನೋಡಿದ್ದೇನೆ, ಕೇಳಿದ್ದೇನೆ, ರುಚಿ ನೋಡಿದ್ದೇನೆ, ಮಾತನ್ನಾಡಿದ್ದೇನೆ ಇತ್ಯಾದಿಯಾಗಿ ಪ್ರಕಾಶಿಸುತ್ತದೆ. ಹಾಗಾಗಿ ಬೇರೆಲ್ಲವನ್ನೂ ಆತ್ಮದ ಸೇವಕರು, ಅದರ ಇಚ್ಛೆ ಮತ್ತು ಕಾರ್ಯಗಳನ್ನು ನೆರವೇರಿಸುವವರು ಎಂದು ತಿಳಿಯಬಹುದು ಮತ್ತು ಆತ್ಮವು ಬೇರೆಲ್ಲದಕ್ಕಿಂತ ವಿಭಿನ್ನವಾಗಿ ಕಂಡುಬರುತ್ತದೆ.

एषैव मोहिनी नाम मायाशक्तिर्महेशितुः ॥ २४ ॥
मोहापोहः प्रमातॄणां मोक्ष इत्यभिधीयते ।

ಏಷೈವ ಮೋಹಿನೀ ನಾಮ ಮಾಯಾಶಕ್ತಿರ್ಮಹೇಶಿತುಃ ॥ 24 ॥
ಮೋಹಾಪೋಹಃ ಪ್ರಮಾತೄಣಾಂ ಮೋಕ್ಷ ಇತ್ಯಭಿಧೀಯತೇ ।

ಇದು ನಿಜವಾಗಿಯೂ ಈಶ್ವರನ ಮಾಯಾಶಕ್ತಿಯ ಮೋಹಗೊಳಿಸುವ ಶಕ್ತಿಯಾಗಿದೆ. ಪ್ರಮಾತೃಗಳಿಂದ (ಜ್ಞಾನ ಸಾಧಕ) ಈ ಮೋಹದ ಆವರಣವನ್ನು ನಿವಾರಿಸುವುದನ್ನು ಮೋಕ್ಷವೆಂದು ಕರೆದಿದ್ದಾರೆ. [6–24..25]

ವಿವೃತ್ತಿ

ಹೀಗೆ ನಿತ್ಯ ಶುದ್ಧತ್ತ್ವ ಮುಂತಾದ ಲಕ್ಷಣಗಳಿರುವ ಈಶ್ವರನ ಸ್ವಭಾವದಿಂದಿರುವ ಆತ್ಮವು ಹಾಗೆ ಕಾಣದಿರುವುದು, ಸಂಸಾರಬಂಧದ ನಿವೃತ್ತಿಯಾದಾಗ ಭೇದಜ್ಞಾನವಿಲ್ಲದಿರುವುದು, ಅದನ್ನೇ ಮೋಹಿನೀ ಎಂಬ ಮಾಯಾಶಕ್ತಿಯೆಂದು ಹೇಳುತ್ತಾ, ಬೌದ್ಧರು ಆತ್ಮವಿಲ್ಲವೆಂಬ ವಾದದಿಂದ ಮೋಹಿತರಾದಂತೆ ಎಂದು ಉಪಸಂಹರಿಸುವ **ಏಷೈವೇತಿ.** [6–24..25]

ಮಾಯೆಯು ಆತ್ಮದ ನಿಜಸ್ವರೂಪವನ್ನು ಮರೆಮಾಚುತ್ತದೆ. ಮಾಯೆಯನ್ನು ಕಳಚಿದರೆ, ಸಂಪೂರ್ಣ ಸಂಸಾರವು ನೀರಿನಮೇಲಿನ ಗುಳ್ಳೆಯಂತೆ ನಾಶವಾಗುತ್ತದೆ. ಈ ಮಾಯೆಯು ಬೌದ್ಧರನ್ನು ಭ್ರಮಾಧೀನರನ್ನಾಗಿಸಿದೆ ಹಾಗೂ ಆತ್ಮದ ಅಸಿತ್ವದ ಕುರಿತು ವಾದಿಸುವಂತೆ ಮಾಡಿದೆ.

ಆತ್ಮದ ನಿಜ ಸ್ವರೂಪ

अवस्थात्रयनिर्मुक्तो दोषादिभिरनाविलः ॥ २५ ॥

ಅವಸ್ಥಾತ್ರಯನಿರ್ಮುಕ್ತೋ ದೋಷಾದಿಭಿರನಾವಿಲಃ ॥ 25]

ಆತ್ಮವು ಮೂರು ಅವಸ್ಥೆಗಳಿಂದ ಮುಕ್ತವಾಗಿದೆ; ದುಷ್ಟ ಬಯಕೆಗಳು ಮತ್ತು ಕೆಟ್ಟ ಆಲೋಚನೆ ಇತ್ಯಾದಿಗಳಿಂದ ದೋಷಪೂರಿತವಾಗಿಲ್ಲ. [6–25]

ವಿವೃತ್ತಿ

ಜ್ಞಾನಪ್ರಬೋಧವಾಗುವ ಸಮಯದಲ್ಲಿ ಪ್ರತ್ಯಭಿಜ್ಞತೆಯಿರುವ ಆತ್ಮದ ಸ್ವರೂಪವನ್ನು ತಿಳಿಸಲು **ಅವಸ್ಥಾತ್ರಯೇತಿ.** ಅದು ಮೂರು ಅವಸ್ಥೆಗಳಿಗೂ ಸಾಕ್ಷಿಯಾಗಿರುವುದರಿಂದ ಅವಸ್ಥಾತ್ರಯ ವರ್ಜಿತವು. ಹೀಗೆ ದೇಹ

ಮೊದಲಾದವುಗಳಿಂದ ಅಕಲುಷಿತವಾಗಿ, ಅಸಂಗತ್ವದಿಂದ ಸಾಕ್ಷಿಯ ಸಂಬಂಧಗಳಿಂದಾಗುವ ದೋಷಗಳಿಂದ ಹೊರತಾಗಿರುವುದು ಎಂಬ ಅರ್ಥ. [6–25]

इषीक इव सन्मात्रो न्यग्रोधकणिकोपमः ।
बाह्याद्वाह्यदळोनुमुक्तकदळीकन्दसन्निभः ॥ २६ ॥

ಇಷೀಕ ಇವ ಸನ್ಮಾತ್ರೋ ನ್ಯಗ್ರೋಧಕಣಿಕೋಪಮಃ ।
ಬಾಹ್ಯಾದ್ಬಾಹ್ಯದಳೋನ್ಮುಕ್ತಕದಳೀಕಂದಸನ್ನಿಭಃ ॥ 26 ॥

ಇಷೀಕದ ಹುಲ್ಲಿನಂತೆ, ನ್ಯಗ್ರೋಧದ (ಆಲ) ಬೀಜದಂತೆ ಅಥವಾ ಹೊರಗಿನ ಮತ್ತು ಒಳಗಿನ ಕವಚಗಳನ್ನು ಸರಿಸಿದ ಬಾಳೆಯ ದಿಂಡಿನಂತೆ ಅದರ ಅಸ್ತಿತ್ವವಿದೆ. [6–26]

ವಿವೃತ್ತಿ

ಅಂತಹ ಆತ್ಮವು ಸದಾ ಒಂದೇ ರೂಪದಿಂದ ಇಂದ್ರಿಯಗಳಿಗೆ ಅಗೋಚರವಾಗಿರುವುದನ್ನು ದೃಷ್ಟಾಂತದ ಮೂಲಕ ತಿಳಿಸುವ **ಇಷೀಕ ಇತಿ.** ಮುಂಜಹುಲ್ಲಿನ ಒಳಗಿನ ಶಲಾಕೆಯನ್ನು ಇಷೀಕ ಎಂದು ಹೇಳಲಾಗಿದೆ. ಆ ಶಬ್ದಕ್ಕೆ ಉಭಯಲಿಂಗತ್ವವಿರುವುದರಿಂದ ಪುಂ ರೂಪದಲ್ಲಿ ನಿರ್ದೇಶಿಸಿದೆ. ಅದು ಅಂತರಾಳದಲ್ಲಿಯೇ ಲಭಿಸುವುದೆಂದು ತಿಳಿಸುವ ಉದಾಹರಣೆಯಾಗಿ **ಬಾಹ್ಯಾದಿತಿ.** [6–26]

ಮುಂಜ ಹುಲ್ಲಿನ ಸೂಕ್ಷ್ಮವಾದ ಎಳೆಯನ್ನು ಇಷೀಕವೆನ್ನುತ್ತಾರೆ; ಅದನ್ನು ಆತ್ಮದ ಸಾಮಾನ್ಯತೆಯನ್ನು ತಿಳಿಸಲು ಉದಾಹರಿಸಿದ್ದಾರೆ. ವಿಶ್ವದ ಬೆಳವಣಿಗೆಯಲ್ಲಿ ಆತ್ಮದ ಸೂಕ್ಷ್ಮ ಪಾತ್ರವನ್ನು ಬಿಂಬಿಸಲು (ಛಾಂದೋಗ್ಯ ಉಪನಿಷತ್ 6–12) ನ್ಯಗ್ರೋಧದ ಬೀಜದ ಉದಾಹರಣೆಯನ್ನು ಹೇಳಿದ್ದಾರೆ. ಹೊರಗಿನ ಮಾಯೆಯ ಆವರಣಗಳನ್ನು ಕಳಚಿದ ಬಳಿಕ ಆತ್ಮದ ಹುಡುಕಾಟವು ಅಂತರಾಳದಲ್ಲಿ ನಡೆಯಬೇಕೆಂದು, ಬಾಳೆಯ ದಿಂಡು ಸೂಚಿಸುತ್ತದೆ.

निरंशो निर्विकारश्च निराभासो निरञ्जनः ।
पुरुषः केवलः पूर्णः प्रोच्यते परमेश्वरः ॥ २७ ॥

ನಿರಂಶೋ ನಿರ್ವಿಕಾರಶ್ಚ ನಿರಾಭಾಸೋ ನಿರಂಜನಃ ।
ಪುರುಷಃ ಕೇವಲಃ ಪೂರ್ಣಃ ಪ್ರೋಚ್ಯತೇ ಪರಮೇಶ್ವರಃ ॥ 27 ॥

ಆತ್ಮವನ್ನು ಪರಮೇಶ್ವರನೆಂದು ಹೇಳುತ್ತಾರೆ; ಅವನು ಅಂಗರಹಿತ, ವಿಕಾರ ರಹಿತ, ಅಪ್ರಕಟಿತ, ದೋಷರಹಿತ, ಸರ್ವವ್ಯಾಪ್ತ ಹಾಗೂ ಪೂರ್ಣತೆಯುಳ್ಳವ. [6–27]

ವಿವೃತ್ತಿ

ಹೇಳಿರುವ ದೃಷ್ಟಾಂತಗಳಲ್ಲಿ ಅವಯವತ್ವ, ಪರಿಚ್ಛೇದ, ವಿಕಾರಿತ್ವ ಮುಂತಾದವುಗಳಿವೆ ಎಂಬ ಶಂಕೆಯನ್ನು ನಿವಾರಿಸಲು **ನಿರಂಶ ಇತ್ಯಾದಿನಾ.** ***ನಿರಾಭಾಸೋ*** ಜನ್ಯ ಜ್ಞಾನಕ್ಕೆ ಅವಿಷಯವಾಗಿರುವ. ***ನಿರಂಜನೋ*** ನಿರ್ಲೇಪವಾಗಿರುವ. ***ಕೇವಲಃ*** ಉಪಾಧಿಗಳ ಸಂಸರ್ಗವಿಲ್ಲದ. ***ಪೂರ್ಣಃ*** ಅಪರಿಚ್ಛಿನ್ನವಾದ. ಹೀಗಿರುವ

ಪರಮೇಶ್ವರನೇ ಪುರುಷನೆಂಬ ಆತ್ಮವು, ಆತ್ಮವೆಂಬ ಪುರುಷನೇ ಪರಮೇಶ್ವರನು ***ಪ್ರೋಚ್ಯತೇ*** ಸರ್ವ ವೇದಾಂತಗಳು ಹೇಳುತ್ತವೆ ಎಂಬ ಅರ್ಥದಲ್ಲಿ. [6–27]

वाचो यत्र निवर्तन्ते मनो यत्र विलीयते ।
एकीभवन्तियत्रैव भूतानि भुवनानि च ॥ २८ ॥
समस्तानि च तत्त्वानि समुद्रे सिन्धवो यथा ।
कश्शोकस्तत्र को मोह एकत्वमनुपश्यतः ॥ २९ ॥

ವಾಚೋ ಯತ್ರ ನಿವರ್ತಂತೇ ಮನೋ ಯತ್ರ ವಿಲೀಯತೇ ।
ಏಕೀಭವಂತಿ ಯತ್ರೈವ ಭೂತಾನಿ ಭುವನಾನಿ ಚ ॥ 28 ॥
ಸಮಸ್ತಾನಿ ಚ ತತ್ತ್ವಾನಿ ಸಮುದ್ರೇ ಸಿಂಧವೋ ಯಥಾ ।
ಕಶ್ಶೋಕಸ್ತತ್ರ ಕೋ ಮೋಹ ಏಕತ್ವಮನುಪಶ್ಯತಃ ॥ 29 ॥

ಎಲ್ಲಾ ಮಾತುಗಳು ಅವನಿಂದ ಹೊರಡುತ್ತವೆ; ಮನಸು ಅವನಲ್ಲಿ ಕರಗುತ್ತದೆ; ಜಗತ್ತು ಮತ್ತು ಅದರಲ್ಲಿರುವ ಎಲ್ಲವೂ, ಎಲ್ಲಾ ತತ್ತ್ವಗಳೂ ಅವನಲ್ಲಿ ಒಂದಾಗುತ್ತವೆ, ನದಿಗಳು ಸಮುದ್ರದಲ್ಲಿ ಒಂದಾಗುವಂತೆ. ಈ ಏಕತೆಯನ್ನು ಅರಿತವನಿಗೆ ಎಲ್ಲಿಯ ಶೋಕ, ಎಲ್ಲಿಯ ಮೋಹ? (ಈ.ಉ. 7) [6–28..29]

ವಿವೃತ್ತಿ

ಹೀಗೆ ತಿಳಿಸಿರುವ ಲಕ್ಷಣಗಳಿರುವ ಈಶ್ವರರೂಪನು ಸರ್ವಪ್ರಪಂಚಧರ್ಮದ ವಿಲಕ್ಷಣಸ್ವಭಾವವನ್ನು ಹೊಂದಿರುವನು ಎಂದು ವಿಶದಪಡಿಸುವ **ವಾಚ ಇತಿ.** ಹಾಗೆಂದು ಶ್ರುತಿಯು 'ಯತೋ ವಾಚೋ ನಿವರ್ತಂತೇ । ಅಪ್ರಾಪ್ಯ ಮನಸಾ ಸಹ' (ತೈ.ಉ.2–4), 'ಆತ್ಮೇತ್ಯೇವೋಪಾಸೀತಾತ್ರ ಹ್ಯೇತೇ ಸರ್ವ ಏಕಂ ಭವಂತಿ' (ಬೃ.ಉ.3–4–2), 'ಪರೇವ್ಯಯೇ ಸರ್ವ ಏಕೀಭವಂತಿ' (ಮು.ಉ.3–2–7), 'ಯಥಾಸ್ಯೈವ ಪ್ರಜ್ಞಾಯೈ ಸರ್ವಾಣಿ ಭೂತಾನಿ ಏಕಂ ಭವಂತಿ ತದ್ವ್ಯಾಖ್ಯಾಸ್ಯಾಮಃ' (ಕೌ.ಉ.3–4), 'ಅಥಾಸ್ಮಿನ್ ಪ್ರಾಣ ಏವೈಕಧಾ ಭವತಿ' (ಕೌ.ಉ.3–3) ಎಂದು ಮುಂತಾಗಿ ಹೇಳಿದೆ.

ಜೀವನು ಉಪಾಧಿಗಳನ್ನು ಪರಿತ್ಯಜಿಸುವುದರಿಂದ ಬ್ರಹ್ಮ–ಆತ್ಮದ ಏಕತೆಯನ್ನು ಅರಿಯುವನು ಎಂದು ಪ್ರತಿಪಾದಿಸುವ ಶ್ರುತಿಯಲ್ಲಿರುವಂತಹ ಅರ್ಥವನ್ನು ತಿಳಿಸುವ **ಸಮಸ್ತಾನಿ ಚೇತಿ.** ***ತತ್ತ್ವಾನಿ*** ಜೀವರು. ಹಾಗೆನ್ನುವ ಶ್ರುತಿಯು 'ಯಥಾ ನದ್ಯಸ್ಸ್ಯಂದಮಾನಾಸ್ಸಮುದ್ರೇऽಸ್ತಂ ಗಚ್ಛಂತಿ ನಾಮರೂಪೇ ವಿಹಾಯ । ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಮ್ ॥' (ಮು.ಉ.3.2.8). ಹೀಗೆ ಏಕಾತ್ಮತ್ವವನ್ನು ದರ್ಶಿಸಿ ಸಕಲ ಬಂಧನಿವೃತ್ತಿಯಾಗಿರುವವನ ಕುರಿತು ಶ್ರುತಿಯನ್ನು ಉದಾಹರಿಸುವ **ಕಃ ಶೋಕಸ್ತತ್ರೇತಿ.** 'ಯಸ್ಮಿನ್ ಸರ್ವಾಣಿ ಭೂತಾನ್ಯಾತ್ಮೈವಾಭೂದ್ವಿಜಾನತಃ । ತತ್ರ ಕೋ ಮೋಹಃ ಕಶ್ಶೋಕ ಏಕತ್ವಮನುಪಶ್ಯತಃ ॥' (ಈ.ಉ.) ಎಂದು ಈಶಾವಾಸ್ಯೋಪನಿಷತ್ತಿನ ಮಂತ್ರವು ಹೇಳುತ್ತದೆ. [6–28..29]

वाच्यवाचकरूप्वात् सविकल्पोपि सन्नहम् ।

देहादीनां व्यपोहेन सम्भवेन्निर्विकल्पकम् ॥ ३० ॥

ವಾಚ್ಯವಾಚಕರೂಪತ್ವಾತ್ ಸವಿಕಲ್ಪೋಽಪಿ ಸನ್ನಹಮ್ ।
ದೇಹಾದೀನಾಂ ವ್ಯಪೋಹೇನ ಸಂಭವೇನ್ನಿರ್ವಿಕಲ್ಪಕಮ್ ॥ 30 ॥

ವಾಚ್ಯ–ವಾಚಕ ರೂಪದಿಂದ ಸವಿಕಲ್ಪವುಳ್ಳದ್ದಾಗಿ ಭಾಸವಾದರೂ, ದೇಹಾದಿಗಳ ಭಾವನೆಗಳನ್ನು ದೂರಮಾಡಿದಾಗ ನಿರ್ವಿಕಲ್ಪತೆಯು (ಏಕತ್ವ) ಒದಗಿಬರುತ್ತದೆ. [6–30]

ವಿವೃತ್ತಿ

ಆತ್ಮದ ಲಕ್ಷಣಗಳು ಏಕಾಗಿ ಇವೆ? ಅದರ ನಾಮರೂಪ ಪ್ರಪಂಚಕ್ಕೆ ಅಧಿಷ್ಠಾನತ್ವದಿಂದಾಗಿಯೋ, ಯಾ ಅದಕ್ಕೆ ಅದರ ಉಪಾದಾನತ್ವದಿಂದಾಗಿಯೋ ಯಾ ಅದರೊಳಗೆ ಇರುವಂತೆ ಕಾಣುವುದರಿಂದಲೋ ಎಂದು ತಿಳಿಸುವ **ವಾಚ್ಯವಾಚಕರೂಪತ್ವಾದಿತಿ.** [6–30]

असन्नेव भवेद्विद्वानसद्ब्रह्मेति वेद चेत् ।
अस्ति ब्रह्मेति चेद्वेद सन्तमेनं ततो विदुः ॥ ३१ ॥

ಅಸನ್ನೇವ ಭವೇದ್ವಿದ್ವಾನಸದ್ಬ್ರಹ್ಮೇತಿ ವೇದ ಚೇತ್ ।
ಅಸ್ತಿ ಬ್ರಹ್ಮೇತಿ ಚೇದ್ವೇದ ಸಂತಮೇನಂ ತತೋ ವಿದುಃ ॥ 31 ॥

ಬ್ರಹ್ಮನ ಅಸ್ತಿತ್ವವಿಲ್ಲವೆಂದು ವಾದಿಸುವ ವಿದ್ವಜ್ಜನರ ಅಸ್ತಿತ್ವವೇ ಇಲ್ಲವೆಂದು ತಿಳಿಯಬಹುದು; ಆದರೆ ಪರಬ್ರಹ್ಮನ ಅಸ್ತಿತ್ವವನ್ನು ಸಾರುವವರು, ವಿದ್ವಾನರೇ ಆಗಿರುತ್ತಾರೆ. (ತೈ.ಉ. 2–6) [6–31]

ವಿವೃತ್ತಿ

ದೇಹಾದಿಗಳು ಆತ್ಮವೆಂಬ ಊಹೆಗಳು ಶೂನ್ಯದಲ್ಲಿ ಅವಸಾನಹೊಂದಿದುರಿಂದ, ಹೇಗೆ ನಿರ್ವಿಕಲ್ಪಕ ಆತ್ಮವು ಸಿದ್ಧವಾಗುವುದು? ಎಂಬ ಶಂಕೆಗೆ ವಿಚಾರಪೂರ್ವಕವಾಗಿ ಉತ್ತರಿಸುತ್ತಾ ಶ್ರುತಿಯಲ್ಲಿ ನಿರ್ವಿಕಲ್ಪಕ ಆತ್ಮಸತ್ತೆಯು ನಿರ್ಧರಿತವಾಗಿದೆ ಎಂದು ತಿಳಿಸಲು **ಅಸನ್ನೇವೇತಿ.** ಯಾರಾದರೂ ಬ್ರಹ್ಮಕ್ಕೆ ಅಸ್ತಿತ್ವವಿಲ್ಲ ಎಂದು ತಿಳಿದಿರುವರಾದರೆ ಅವರು ಅವಿದ್ಯಾವಂತರಾಗಿರುವರು; ಬ್ರಹ್ಮನ ಆತ್ಮತ್ವವನ್ನು ನಿರಾಕರಿಸುವವರು ಸ್ವಯಂ ಅಸ್ತಿತ್ವವಿಲ್ಲದವರಾಗುವರು ಎಂಬ ಅರ್ಥವು. ಉಳಿದುದು ಸ್ಪಷ್ಟವಾಗಿದೆ. [6–31]

इति श्रीदक्षिणामूर्तिस्त्रोत्रार्थप्रतिपादके ।
प्रबन्धे मानसोल्लासे षष्ठोल्लसस्य सङ्ग्रहः ॥ ३२ ॥

ಇತಿ ಶ್ರೀದಕ್ಷಿಣಾಮೂರ್ತಿಸ್ತೋತ್ರಾರ್ಥಪ್ರತಿಪಾದಕೇ ।
ಪ್ರಬಂಧೇ ಮಾನಸೋಲ್ಲಾಸೇ ಷಷ್ಠೋಲ್ಲಾಸಸ್ಯ ಸಂಗ್ರಹಃ ॥ 32 ॥

ಶ್ರೀದಕ್ಷಿಣಾಮೂರ್ತಿ ಸ್ತೋತ್ರದ ಅರ್ಥವನ್ನು ಪ್ರತಿಪಾದಿಸುವ ಮಾನಸೋಲ್ಲಾಸವೆಂಬ ಪ್ರಬಂಧದ ಆರನೆಯ ಉಲ್ಲಾಸದ ವಿವರಣೆಯು ಇಲ್ಲಿಗೆ ಮುಗಿಯಿತು. [6–32]

ವಿವೃತ್ತಿ

ಆರನೆಯ ಶ್ಲೋಕದ ವ್ಯಾಖ್ಯೆಯನ್ನು ಉಪಸಂಹರಿಸುವ **ಇತೀತಿ.** [6–32]

ಇತಿ ಶ್ರೀಮಾನಸೋಲ್ಲಾಸವೃತ್ತಾಂತೇ ಷಷ್ಠೋಲ್ಲಾಸಃ ಸಮಾಪ್ತಃ ।

ಸಪ್ತಮೋಲ್ಲಾಸಃ

ಆತ್ಮ ಒಂದು ಸಾರ್ವಕಾಲಿಕ ಬೆಳಕು

ಪ್ರತ್ಯಭಿಜ್ಞನ ಅಧಿಕಾರವನ್ನು ಪ್ರಶ್ನಿಸುವುದು

प्रत्यभिज्ञाबलादात्मा स्थायी निर्धार्यते यदि ।
का नाम प्रत्यभिज्ञैषां किं वा तस्याः प्रयोजनम् ॥ १ ॥

ಪ್ರತ್ಯಭಿಜ್ಞಾಬಲಾದಾತ್ಮಾ ಸ್ಥಾಯೀ ನಿರ್ಧಾರ್ಯತೇ ಯದಿ ।
ಕಾ ನಾಮ ಪ್ರತ್ಯಭಿಜ್ಞೈಷಾ ಕಿಂ ವಾ ತಸ್ಯಾಃ ಪ್ರಯೋಜನಮ್ ॥ 1 ॥

ಪ್ರತ್ಯಭಿಜ್ಞಾನ (ಸ್ಮಂತಿಕೆಯ ಗುರುತು) ಬಲದ ಮೇಲೆ, ಆತ್ಮವು ಶಾಶ್ವತವೆಂದು ನಿರ್ಧರಿಸಿದೆವೆಂದಾದರೆ, (ನಾವು ಕೇಳುತ್ತೇವೆ) ಪ್ರತ್ಯಭಿಜ್ಞಾ ಅಂದರೆ ಯಾರು ಮತ್ತು ಅದರ ಪ್ರಯೋಜನವೇನು? [7–1]

ವಿವೃತ್ತಿ

ಪ್ರತ್ಯಭಿಜ್ಞತೆಯ ಆಧಾರದಲ್ಲಿ ಆತ್ಮದ ಸ್ಥಾಯಿತ್ವವನ್ನು ನಿರ್ಧರಿಸುವುದಾದರೆ, ಪ್ರತ್ಯಭಿಜ್ಞನ ಪ್ರಮಾಣವನ್ನು ಆಕ್ಷೇಪಿಸುವ **ಪ್ರತ್ಯಜ್ಞಾಬಲಾದಿತಿ.** [7–1]

प्रत्यक्षादिप्रमाणेषु प्रत्यभिज्ञान पठ्यते ।
कथं तस्याः प्रमाणत्वं इति पृच्छन् प्रबोध्यते ॥ २ ॥

ಪ್ರತ್ಯಕ್ಷಾದಿಪ್ರಮಾಣೇಷು ಪ್ರತ್ಯಭಿಜ್ಞಾನ ಪಠ್ಯತೇ ।
ಕಥಂ ತಸ್ಯಾಃ ಪ್ರಮಾಣತ್ವಂ ಇತಿ ಪೃಚ್ಛನ್ ಪ್ರಬೋಧ್ಯತೇ ॥ 2 ॥

ಜ್ಞಾನದ ಆಕರಗಳಾದ ಪ್ರತ್ಯಕ್ಷಾದಿ ಪ್ರಮಾಣಗಳಿಂದ ಪ್ರತ್ಯಭಿಜ್ಞಾನವನ್ನು ವಿವರಿಸಲಿಲ್ಲ. ಅದು ಪ್ರಮಾಣ ಹೇಗಾಗುತ್ತದೆ? ಹೀಗೆ ಪ್ರಶ್ನಿಸಿದವರಿಗೆ ಏಳನೆಯ ಚರಣ ಉತ್ತರಿಸುತ್ತದೆ. [7–2]

ವಿವೃತ್ತಿ

ಪ್ರತ್ಯಭಿಜ್ಞತೆಯು ಯಾವ ರೂಪವಾಗಿ ಪ್ರಕಟವಾಗುತ್ತದೆ ಎಂದು ಆಕ್ಷೇಪಾರ್ಥದಲ್ಲಿ ಕೇಳುವ **ಪ್ರತ್ಯಕ್ಷಾದೀತಿ.** ಇಂದ್ರಿಯಗಳ ಸಂಪರ್ಕಕ್ಕೆ ಬರುವ ವಿಷಯಗಳನ್ನು ಅರ್ಥೈಸುವುದರಿಂದ ದೊರೆಯುವ ಜ್ಞಾನವಿಶೇಷವು ಪ್ರತ್ಯಕ್ಷವಾಗಿರುವುದು. ಪ್ರತ್ಯಭಿಜ್ಞತೆಯು ಆ ವಿಧವಾಗಿಲ್ಲ, ಅದಕ್ಕೆ ಸಂಸ್ಕಾರದ ಕಾರಣತ್ವವಿರುವುದರಿಂದ. ಹಾಗಾಗಿ ಪ್ರತ್ಯಭಿಜ್ಞತೆಯು ಪ್ರತ್ಯಕ್ಷವಲ್ಲ. ಅರ್ಥಪ್ರಯೋಗದ ಕಾರಣವಾಗಿ ಅನುಮಾನ ಇತ್ಯಾದಿಗಳಿಂದಲೂ ಪ್ರಮಾಣೀಕರಿಸುವ ಪ್ರಸಂಗವೇ ಬರುವುದಿಲ್ಲ. ಬೇರೆ ಪ್ರಮಾಣಗಳಿಗೂ ಅದು ಸ್ವತಂತ್ರವಲ್ಲ. ಹಾಗಾಗಿ ಪ್ರತ್ಯಭಿಜ್ಞತೆಯು ಆತ್ಮದ ಸ್ಥಾಯಿತ್ವಕ್ಕೆ ಪ್ರಮಾಣವಲ್ಲ ಎಂಬ ಅರ್ಥದಲ್ಲಿ. ಇದಕ್ಕೆ ಪರಿಹಾರವಾಗಿ ಮುಂದಿನ ಶ್ಲೋಕವನ್ನು ಹೇಳುತ್ತಾರೆ ಎನ್ನಲು **ಇತಿ ಪೃಚ್ಛನ್ ಪ್ರಬೋಧ್ಯತ ಇತಿ.** [7–2]

बाल्यादिष्वपि जग्रदादिषु तथा सर्वास्ववस्थास्वपि
व्यावृत्तास्वनुवर्तमानमहमित्यन्तस्स्फुरन्तं सदा ।
स्वात्मानं प्रकटीकरोति भजतां यो मुद्रया भद्रया
तस्मै श्रीगुरुमूर्तये नम इदं श्रीदक्षिणामूर्तये ॥ ७ ॥

ಬಾಲ್ಯಾದಿಷ್ವಪಿ ಜಾಗ್ರದಾದಿಷು ತಥಾ ಸರ್ವಾಸ್ವವಸ್ಥಾಸ್ವಪಿ
ವ್ಯಾವೃತ್ತಾಸ್ವನುವರ್ತಮಾನಮಹಮಿತ್ಯಂತಸ್ಸ್ಫುರಂತಂ ಸದಾ ।
ಸ್ವಾತ್ಮಾನಂ ಪ್ರಕಟೀಕರೋತಿ ಭಜತಾಂ ಯೋ ಮುದ್ರಯಾ ಭದ್ರಯಾ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ 7 ॥

ಮುದ್ರೆಗಳ ಮೂಲಕ ಭಜಿಸುವ ಭಕ್ತರಿಗೆ ಆತ್ಮದ ರೂಪದಲ್ಲಿ ಪ್ರಕಟವಾಗಿ ಅನುಗ್ರಹಿಸುವವನಿಗೆ, ಬಾಲ್ಯ ಮುಂತಾದ (ಯೌವನ, ವೃದ್ಧಾಪ್ಯ) ಎಲ್ಲಾ ಸ್ಥಿತಿಗಳಲ್ಲಿಯೂ, ಜಾಗ್ರತ ಮುಂತಾದ (ಸ್ವಪ್ನ, ಸುಷುಪ್ತಿ) ಎಲ್ಲಾ ಅವಸ್ಥೆಗಳಲ್ಲಿಯೂ, ವರ್ತಮಾನ ಮುಂತಾದ ಎಲ್ಲಾ ಕಾಲಗಳಲ್ಲಿಯೂ ತಾನೇತಾನಾಗಿ ಸ್ಫುರಿಸಿ ಸಮಾನವಾಗಿ ಬೆಳಗುವ ಅವನಿಗೆ, ಶ್ರೀ ಗುರುರೂಪದಲ್ಲಿರುವ ಶ್ರೀ ದಕ್ಷಿಣಾಮೂರ್ತಿ ಸ್ವರೂಪನಿಗೆ, ಶಿವನಿಗೆ, ನನ್ನ ಈ ನಮಸ್ಕಾರಗಳು. {7}

ವಿವೃತ್ತಿ

ಭಜತಾಂ ಯಾವ ಶಿಷ್ಯರಿಗೆ ***ಸ್ವಾತ್ಮಾನಂ*** ಹೇಗೆ ತನ್ನನ್ನು ಪ್ರಕಟಿಸಿಕೊಳ್ಳುವನು? ***ಭದ್ರಯಾ*** ಕಲ್ಯಾಣಕಾರಿಯಾದ ***ಮುದ್ರಯಾ*** ತತ್ತ್ವ ಮುದ್ರೆಗಳಿಂದ ಪ್ರಕಟಿಸಿಕೊಳ್ಳುವನು. ವ್ಯಾಖ್ಯಾನಮುದ್ರೆಯ ಪ್ರದರ್ಶನದಿಂದ ಶಿಷ್ಯರಿಗೆ ಸ್ವಾತ್ಮ ತತ್ತ್ವವನ್ನು ಸಾಕ್ಷಾತ್ಕರಿಸುವ ಅಂತಹ ಗುರುಮೂರ್ತಿಗೆ ನಮಸ್ಕಾರಗಳು ಎಂದು ಅನ್ವಯವಾಗುವುದು. ಸ್ವಾತ್ಮದ ಲಕ್ಷಣಗಳೇನು? ಸರ್ವದಾ ***ಅಹಮಿತ್ಯಂತಃ ಸ್ಫುರಂತಂ*** ಅಹಂ, ನಾನು ಎಂದು ಪ್ರತ್ಯಕ್ಷರೂಪದಲ್ಲಿ ಶರೀರದ ಒಳಗೆ ಸ್ಫುರಿಸುವನು, ಪ್ರಕಾಶಮಾನವಾಗಿರುವನು ಎಂಬ ಅರ್ಥ. ಅದನ್ನು ಹೀಗೆ ಹೇಳಬಹುದು: ನಾನು ಎಂಬ ಚಿದಾತ್ಮನ ತಾದಾತ್ಮ್ಯವು ಅದರಲ್ಲಿ ಅಧ್ಯಸ್ತವಾಗಿರುವ ಅವಿದ್ಯೆಯ ಕಾರ್ಯವಾದ ಅಂತಃಕರಣವು ಎಂದು ಹೇಳಿದೆ. ಅದು ಅಹಂ ಎಂಬ ಆಕಾರದಿಂದ ತನ್ನ ವೃತ್ತಿಯನ್ನು ಸಂಪೂರ್ಣ ಸ್ಥೂಲದೇಹದಲ್ಲಿ ಪಸರಿಸುವುದು. ತನ್ನಲ್ಲಿ ಅಧ್ಯಸ್ತವಾಗಿರುವ ಅಹಂಕಾರರೂಪವಾಗಿ ಅವಭಾಸಮಾನವಾಗುವ ಆತ್ಮವೇ ನಾನು ಎಂಬ ಅಹಂಕಾರದ ಒಂದು ಅಂಶ ಎಂಬ ಊಹೆಯಿಂದ ಚಿಂತಿಸುವವರಿಗೆ ಸ್ವಾಭಾವಿಕವಾಗಿ ಪೂರ್ಣರೂಪದ ಬ್ರಹ್ಮರೂಪವನ್ನು ಪ್ರಕಟಿಸುವನು. ಅದರ ವಿವೇಕೋದಯ ಪ್ರಕಾರವನ್ನು ವಿವರಿಸಿ, ಆತ್ಮದ ವಿಶಿಷ್ಟತೆಯನ್ನು ತಿಳಿಸಲು **ಬಾಲ್ಯಾದಿಷ್ವಿತಿ.** ಬಾಲ್ಯ, ಕೌಮಾರ್ಯ, ಯೌವನ, ವಾರ್ಧಕ್ಯಗಳಲ್ಲಿ ಮತ್ತು ಜಾಗ್ರತ್, ಸ್ವಪ್ನ, ಸುಷುಪ್ತಿಗಳಲ್ಲಿ ಹಾಗೂ ***ಸರ್ವಾಸು ಸ್ವ ಅವಸ್ಥಾಸು*** ಮೂರ್ಛೆ, ಆತುರ, ಸ್ವಸ್ಥ, ಅಸ್ವಸ್ಥ ಮುಂತಾದ ಅನೇಕ ಅವಸ್ಥೆಗಳಲ್ಲಿ ಯಾವ ಲಕ್ಷಣದಿಂದಿದೆ? ***ವ್ಯಾವೃತ್ತಾಸು*** ಭಿನ್ನವಾಗಿರುವ ಪ್ರತಿಕ್ಷಣದಲ್ಲಿಯೂ ***ಅನುವರ್ತಮಾನ ಅಹಂ*** ಅಭಿನ್ನವಾದ ಅಹಂಕಾರವೇ ದೇಹ ಇಂದ್ರಿಯ ಮುಂತಾಗಿ ಅನೇಕ ವಿಧವಾಗಿ ಪರಿಣಾಮ ಹೊಂದಿದ್ದರೂ ಎಲ್ಲಾ ಅವಸ್ಥೆಗಳಲ್ಲಿಯೂ ಸತ್ ಎಂಬ ಏಕರೂಪದಿಂದ ಅಪರಿಣಾಮಿಯಾಗಿ ಅವಭಾಸವಾಗುವ ಚಿದಾನಂದ ಅದ್ವಯ ಬ್ರಹ್ಮರೂಪದ ಆತ್ಮವೇ ನಾನಾಗಿರುವೆನು ಎಂದು ತಿಳಿದುಕೋ ಎಂದು ಶಿಷ್ಯನಿಗೆ ಬೋಧಿಸುವನು ಎಂಬ ಅರ್ಥದಲ್ಲಿದೆ. {7}

ಇಲ್ಲಿ ಸಂಬೋಧಿಸಿರುವ ಮುದ್ರೆಯು ಚಿನ್ಮುದ್ರೆ, ವ್ಯಾಖ್ಯಾ ಮುದ್ರೆ, ತಾರಕ ಮುದ್ರೆ, ಜ್ಞಾನ ಮುದ್ರೆ ಎಂದು ಕರೆಯುವ ಮುದ್ರೆಯಾಗಿದೆ. ಅದು ಹೆಬ್ಬೆರಳು ಮತ್ತು ತೋರುಬೆರಳಿನ ತುದಿಗಳನ್ನು ಒಂದು ವೃತ್ತದ ಹಾಗೆ ಸೇರಿಸಿ, ಉಳಿದ ಬೆರಳುಗಳನ್ನು ನೇರವಾಗಿಸಿ ಮಾಡುವ ಕೈಯ ಒಂದು ಕ್ರಿಯೆ.

ಆತ್ಮನ ಸಾರ್ವಕಾಲಿಕತ್ವಕ್ಕೆ ಪ್ರತ್ಯಭಿಜ್ಞನ ಉದಾಹರಣೆ

ಏಳನೆಯ ಚರಣದ ಅರ್ಥವನ್ನು ಹೀಗೆ ವಿವರಿಸಬಹುದು:

एतदुक्तं भवति ।
भातस्य कस्य चित्पूर्वं भासमानस्य साम्प्रताम् ।
सोयमित्यनुसन्धानं प्रत्यभिज्ञानमुच्यते ॥ ३ ॥

ಏತದುಕ್ತಂ ಭವತಿ ।
ಭಾತಸ್ಯ ಕಸ್ಯ ಚಿತ್ಪೂರ್ವಂ ಭಾಸಮಾನಸ್ಯ ಸಾಂಪ್ರತಾಮ್ ।
ಸೋಯಮಿತ್ಯನುಸಂಧಾನಂ ಪ್ರತ್ಯಭಿಜ್ಞಾನಮುಚ್ಯತೇ ॥ 3 ॥

ಶ್ಲೋಕದ ತಾತ್ಪರ್ಯವನ್ನು ಹೀಗೆ ವಿವರಿಸಬಹುದು: ಒಂದು ವಸ್ತುವನ್ನು 'ಇದು ಅದರಂತೆಯೇ' ಎಂದು ಗುರುತಿಸುವಿಕೆಯನ್ನು ಪ್ರತ್ಯಭಿಜ್ಞಾನ ಎನ್ನುತ್ತಾರೆ; ಒಮ್ಮೆ ಅದು ಅರಿವಿನಲ್ಲಿ ಬಂದರೆ, ಪುನಃ ಅದು ವರ್ತಮಾನದಲ್ಲಿ ಅರಿವಿನ ವಿಷಯವಾಗುತ್ತದೆ. [7–3]

ವಿವೃತ್ತಿ

ಶ್ಲೋಕದ ತಾತ್ಪರ್ಯವನ್ನು ಹೇಳಲು ಆರಂಭಿಸುವ **ಏತದುಕ್ತಂ ಭವತೀತಿ.** ಇಲ್ಲಿ 'ಯಾವುದನ್ನು ಪ್ರತ್ಯಭಿಜ್ಞತೆ ಎನ್ನುತ್ತಾರೆ? ಎಂದು ಪ್ರಶ್ನಿಸಿ, ಅದಕ್ಕೆ ಆಕ್ಷೇಪಗಳೇನು? ಎಂದು ಪೂರ್ವವಾದಿಯು ಕೇಳುತ್ತಾನೆ. ಅದಕ್ಕೆ ಉತ್ತರವಾಗಿ **ಭಾತಸ್ಯೇತಿ.**ಯಾವ ಚಿತ್‌ಪದಾರ್ಥವು ಹಿಂದೆ ಯಾವಾಗಲೋ ಅವಗತವಾಗಿ, ಪ್ರಸಕ್ತಕಾಲದಲ್ಲಿ ಪುನಃ ಅವಗಮ್ಯವಾಗುವಾಗ ***ಸೋಯಮಿತಿ*** ಅದುವೇ ಇದು ಎಂಬ ಸಾಮಾನಾಧಿಕರಣ್ಯದಿಂದ ಅನುಸಂಧಾನವಾದರೆ ಅದನ್ನು ಪ್ರತ್ಯಭಿಜ್ಞಾನ ಎಂದು ಹೇಳುತ್ತಾರೆ. ಪೂರ್ವೋತ್ತರ, ದೇಶ, ಕಾಲಗಳ ವೈಶಿಷ್ಟ್ಯಗಳ ಅಂಶಗಳನ್ನು ಪರಿತ್ಯಜಿಸಿ ದರ್ಶಿತವಾಗುವ ವಿಶಿಷ್ಟ ವಸ್ತುಮಾತ್ರವನ್ನು ಅರಿಯುವುದು ಪ್ರತ್ಯಭಿಜ್ಞಾನ ಎಂಬ ಅರ್ಥವು. [7–3]

तद्देशकालाकारादीनवधूयानुषङ्गिकान् ।
यथैकं वस्त्वनुस्यूतं प्रत्यभिज्ञानमात्मनः ॥ ४ ॥

ತದ್ದೇಶಕಾಲಾಕಾರಾದೀನವಧೂಯಾನುಷಂಗಿಕಾನ್ ।
ಯಥೈಕಂ ವಸ್ತ್ವನುಸ್ಯೂತಂ ಪ್ರತ್ಯಭಿಜ್ಞಾನಮಾತ್ಮನಃ ॥ 4 ॥

(ಬಾಹ್ಯ ವಸ್ತುಗಳ ವಿಷಯದಲ್ಲಿ) ಒಂದು ಸಮಾನ ಗುಣಧರ್ಮಗಳುಳ್ಳ ವಸ್ತುವು ಎಲ್ಲಾ ಕಾಲದಲ್ಲಿಯೂ ಕಂಡು ಬಂದಾಗ, ದೇಶ–ಕಾಲ–ಆಕಾರ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಳ್ಳದೇ 'ಇದು ಅದೇ' ಎಂದು ಗುರುತಿಸುವುದನ್ನು ಪ್ರತ್ಯಭಿಜ್ಞಾನ ಎನ್ನುತ್ತಾರೆ. [7–4]

ವಿವೃತ್ತಿ

ಬಾಹ್ಯಗೋಚರವಾಗುವ ವಸ್ತುಗಳ ಕುರಿತಾದ ಪ್ರತ್ಯಭಿಜ್ಞಾನವನ್ನು ಯಾವ ಪ್ರಕಾರವಾಗಿ ಹೇಳಬಹುದೆಂದು ತಿಳಿಸಲು **ತದ್ದೇಶೇತಿ.** ***ಆಕಾರ*** ಅವಯವಸಹಿತವಾಗಿರುವಿಕೆಯನ್ನು ತಿಳಿಸುವುದು. ***ಅನುಷಂಗಿಕಾನ್*** ಅತ್ಯಂತಪ್ರಾಪ್ತವಾಗಿರುವ, ಅಸ್ವಾಭಾವಿಕವಾಗಿ ಸರ್ವಕಾಲದಲ್ಲಿಯೂ ದರ್ಶಿತವಾದರೆ. ***ಯಥೈಕಂ ವಸ್ತ್ವನುಸ್ಯೂತಂ*** ಅವೆಲ್ಲವೂ ಒಂದೇ ವಸ್ತು ಎಂದು ಪ್ರತೀತವಾಗುವುದು ಪ್ರತ್ಯಭಿಜ್ಞಾನ ಎಂದಾಗುವುದು. [7–4]

मायानुषङ्गसञ्जातकिञ्चित्ज्ञात्वाद्यपोहनात् ।
सर्वज्ञत्वादिविज्ञानं प्रत्यभिज्ञानमात्मनः ॥ ५ ॥

ಮಾಯಾನುಷಂಗಸಂಜಾತಕಿಂಚಿತ್‌ಜ್ಞಾತ್ವಾದ್ಯಪೋಹನಾತ್ ।
ಸರ್ವಜ್ಞತ್ವಾದಿವಿಜ್ಞಾನಂ ಪ್ರತ್ಯಭಿಜ್ಞಾನಮಾತ್ಮನಃ ॥ 5 ॥

ತಾನು ಸರ್ವಜ್ಞ ಇತ್ಯಾದಿಯಾದ ಅರಿವಿನಿಂದ, ಮಾಯೆಯ ಸಂಪರ್ಕದಿಂದ ಉಂಟಾದ ಸೀಮಿತ ಜ್ಞಾನದಿಂದ ಹೊರಬಂದು, ತನ್ನನ್ನು ಗುರುತಿಸಿಕೊಳ್ಳುವುದು ಆತ್ಮದ ಪ್ರತ್ಯಭಿಜ್ಞಾನ. [7–5]

ವಿವೃತ್ತಿ

ದೃಷ್ಟಾಂತದ ಮೂಲಕ ಆತ್ಮದ ಪ್ರತ್ಯಭಿಜ್ಞಾನವನ್ನು ಉಪಪಾದಿಸಲು **ಮಾಯೇತಿ.** ಪದಾರ್ಥದ ಪರಿಶೋಧನೆ ಮಾಡುವಾಗ ಅನೃತ, ಜಡ, ಪರಿಚ್ಛಿನ್ನ ರೂಪದಲ್ಲಿ ಅದರ ವಿಲಕ್ಷಣವಾದ ಧರ್ಮಗಳಿಂದ ಅಪರಿಚ್ಛಿನ್ನ ಜ್ಞಾನರೂಪದಲ್ಲಿರುವ ವಾಕ್ಯಾರ್ಥವನ್ನು ಅರ್ಥೈಸಿಕೊಳ್ಳುವಾಗ, ಮಾಯೆಯಿಂದ ಆ ಕಾರ್ಯದಲ್ಲಿ ಎದುರಾಗುವ ಸೀಮಿತತೆಯಿಂದಾಗಿ ಅದರಲ್ಲಿ ಕಲ್ಪಿಸಿರುವ ಅಲ್ಪತ್ವ, ಅಂಶತ್ವ ಮುಂತಾದವುಗಳನ್ನು ತೊಡೆದುಹಾಕುವ ಸರ್ವಜ್ಞತ್ವವೆಂಬ ವಿಶೇಷಜ್ಞಾನ. *ಆದಿ* ಶಬ್ದದಿಂದ ಅನಂತ, ಆನಂದ ರೂಪವನ್ನು ಗ್ರಹಿಸಬೇಕು. ಅಪರಿಚ್ಛಿನ್ನ ಜ್ಞಾನದಿಂದ ಅನಂತ ಆನಂದ ರೂಪದ ಸಾಕ್ಷಾತ್ಕಾರವಾಗುವುದು ಆತ್ಮದ ಪ್ರತ್ಯಭಿಜ್ಞಾನ ಎಂಬ ಅರ್ಥ. [7–5]

ಮಾಯೆ ಮತ್ತು ಅದರ ಕಾರ್ಯದಿಂದಾದ ಸೀಮಿತತೆಯನ್ನು ಕಳೆದುಕೊಂಡ ಬಳಿಕ ಪಡೆಯುವ ಸ್ವಜ್ಞಾನದ, ತಾನು ಅನಂತ ಜ್ಞಾನವುಳ್ಳವನು ಮತ್ತು ತನ್ನ ಆನಂದಕ್ಕೆ ಮಿತಿಯಿಲ್ಲ ಇತ್ಯಾದಿ, ಗುರುತಿಸುವಿಕೆಯನ್ನು ಸ್ವಂತಿಕೆಯೆಂದು ಹೇಳಬಹುದು.

पूर्वजन्मानुभूतार्थस्मरणान्मृगशाबकः ।
जननीस्तन्यपानाय स्वयमेव प्रवर्तते ॥ ६ ॥

ಪೂರ್ವಜನ್ಮಾನುಭೂತಾರ್ಥಸ್ಮರಣಾನ್ಮೃಗಶಾಬಕಃ ।
ಜನನೀಸ್ತನ್ಯಪಾನಾಯ ಸ್ವಯಮೇವ ಪ್ರವರ್ತತೇ ॥ 6 ॥

ಪೂರ್ವಜನ್ಮದ ಅನುಭವಗಳ ಸ್ಮರಣೆಯಿಂದ, ಹೊಸದಾಗಿ ಜನ್ಮತಳೆದ ಪ್ರಾಣಿಯು ತಾನಾಗಿ ತಾಯಿಯ ಹಾಲನ್ನು ಕುಡಿಯಲು ಪ್ರವರ್ತಿಸುತ್ತದೆ. [7–6]

ವಿವೃತ್ತಿ

ಪ್ರಶ್ನೆಗೆ ಉತ್ತರವನ್ನು ಹೇಳುತ್ತಾ ಹಿಂದಿನ ಆಕ್ಷೇಪ "ಪ್ರತ್ಯಭಿಜ್ಞತೆಯು ಭ್ರಾಂತಿಯಾಗಿದ್ದರೆ, ಭೋಜನ ಇತ್ಯಾದಿಗಳು ಹೇಗೆ ಮಾಡಲ್ಪಡುತ್ತವೆ?' ಎಂಬುದನ್ನು ಪರಿಹರಿಸಲು ಆತ್ಮದ ಸ್ಥಾಯಿತ್ವವನ್ನು ಸಾಧಿಸುವ **ಪೂರ್ವಜನ್ಮೇತಿ.** ***ಮೃಗಶಾಬಕಃ*** ಆಗತಾನೇ ಹುಟ್ಟಿರುವ ಬಾಲಪ್ರಾಣಿಯು ಕೂಡಲೇ ಜನನಿಯ ಸ್ತನ್ಯಪಾನಮಾಡಲು ತಾನಾಗಿಯೇ ಪ್ರವೃತ್ತವಾಗುವುದು ಅದರ ಪೂರ್ವಜನ್ಮದ ಅನುಭೂತಿಯ ಸ್ಮರಣೆಯಿಂದ, ಇಲ್ಲವಾದರೆ ಅದು ಓಡಲು ಪ್ರಯತ್ನಿಸಬೇಕಿತ್ತು. ಹಾಗೆಯೇ ಬಾಲ್ಯದಿಂದ ಅಂತ್ಯದವರೆಗೆ ಪರಿಣಾಮಗಳನ್ನು ಹೊಂದುತ್ತಿರುವ ದೇಹದಲ್ಲಿರುವ ಆತ್ಮವು ಪರಿಣಾಮಗಳಿಂದ ಹೊರತಾಗಿರುವುದು, ವಿವಿಧ ಅವಸ್ಥೆಗಳಿಂದ ಅದು ಭಿನ್ನವಾಗಿರುವುದು ಮತ್ತು ದೇವ, ತಿರ್ಯಕ್, ಮನುಷ್ಯ ಮುಂತಾದ ಕ್ರಮದಲ್ಲಿ ಭಾವಿಸುವ ಅನೇಕ ಶರೀರಗಳು ಹುಟ್ಟುವಾಗ ಹುಟ್ಟದೇ, ಸಾಯುವಾಗ ಸಾಯದೇ ಇರುವುದು ನಿತ್ಯವಾಗಿರುವ ಆತ್ಮವೇ ಎಂದು ಸಿದ್ಧವಾಗುವುದು ಎಂಬ ಅಭಿಪ್ರಾಯವು. [7–6]

ಹೀಗೆ, ಜಾಗ್ರತ–ಸ್ವಪ್ನ–ಸುಷುಪ್ತಿಯ ವಿವಿಧ ಅವಸ್ಥೆಗಳಲ್ಲಿ ಅಥವಾ ದೇಹ ಬದಲಾವಣೆಯ ಶೈಶವ, ಬಾಲ್ಯ, ತಾರುಣ್ಯ, ಯೌವನ, ವೃದ್ಧಾಪ್ಯಗಳ ಸ್ಥಿತಿಗಳಲ್ಲಿ ಬದಲಾಣೆಗಳಿಲ್ಲದೆ ಆತ್ಮವು ಒಂದೇ ಸಮನಾಗಿ ಇರುತ್ತದೆ; ಹಾಗೆಯೇ ಅದು ಬೇರೆ ಬೇರೆ ಯೋನಿಗಳಲ್ಲಿ ಜನಿಸಿದ ದೇಹಗಳಲ್ಲಿ, ದೇವ–ಮಾನವ–ಪ್ರಾಣಿ ಇತ್ಯಾದಿ, ಇರುವಾಗಲೂ ವಿಕಾರಗಳಿಲ್ಲದೆ ಇರುತ್ತದೆ – ದೇಹ ಜನಿಸಿದಾಗ ಜನಿಸುವುದಿಲ್ಲ, ದೇಹ ನಶಿಸಿದಾಗ ನಶಿಸುವುದಿಲ್ಲ.

तस्मान्निश्चीयते स्थायीत्यात्मा देहान्तरेष्वपि ।
स्मृतिं विना न घटते स्तन्यपानं शिशोर्यतः ॥ ७ ॥

ತಸ್ಮಾನ್ನಿಶ್ಚೀಯತೇ ಸ್ಥಾಯೀತ್ಯಾತ್ಮಾ ದೇಹಾಂತರೇಷ್ವಪಿ ।
ಸ್ಮೃತಿಂ ವಿನಾ ನ ಘಟತೇ ಸ್ತನ್ಯಪಾನಂ ಶಿಶೋರ್ಯತಃ ॥ 7 ॥

ಹೀಗೆ, ಆತ್ಮವು ಸ್ಥಾಯಿಯಾಗಿ (ಒಂದೇ ರೀತಿಯಿಂದ) ವಿವಿಧ ದೇಹಗಳಲ್ಲಿ ಇರುತ್ತದೆ; ಹಿಂದಿನ ಜನ್ಮದ ಅನುಭವಗಳ ಸ್ಮರಣೆಯಿಲ್ಲದೆ ಮಗುವಿಗೆ ತಾಯಿಯ ಹಾಲು ಕುಡಿಯುವ ಪ್ರೇರಣೆಯಾಗುವುದಿಲ್ಲ. [7–7]

ವಿವೃತ್ತಿ

ಆತ್ಮದ ಸ್ಥಾಯಿತ್ವದ ಉಪಪಾದನೆಯನ್ನು ಉಪಸಂಹರಿಸುವ **ತಸ್ಮಾದಿತಿ.** ಇದನ್ನು ಹೀಗೆ ಹೇಳಬಹುದು: ಹಿಂದೆ ಅನುಭವಿಸಿರುವ ವಿಷಯ ಸಂಸ್ಕಾರಗಳಿಂದಾಗಿ ಈಗಿನ ಸಜಾತೀಯ ಅನುಭವದ ದರ್ಶನವಾಗುವಾಗ ಹಿಂದಿನ ಅನುಭವದ ವಿಷಯಸ್ವಭಾವಗಳ ಸ್ಮರಣೆಯಾಗಿ ಉಭಯ ವಸ್ತುಗಳ ಅನುಭವ ಕಾಲದಲ್ಲಿ ಅಂತರವಿದ್ದರೂ ಪರಿದೃಶ್ಯವಾಗುವ ವಿಷಯಗಳು ಜಾತಿ, ಲಿಂಗಗಳಲ್ಲಿ ಅದರಂತೆಯೇ ಇವೆ ಎಂದು ಕಲ್ಪಿಸಿಕೊಳ್ಳುವುದು ಒಂದೇ ಆಗಿರುವ ಆತ್ಮದ, ಪುರುಷನ ಪ್ರತ್ಯಭಿಜ್ಞಾನವಾಗಿರುವುದು. ಅಂತೆಯೇ ಪ್ರತ್ಯಭಿಜ್ಞತೆಯು ಪ್ರಮಾಣವಾಗಿ, ಪ್ರತ್ಯಕ್ಷದಲ್ಲಿ ಅಂತರ್ಭೂತವಾಗಿದ್ದು, ಸಾಮಗ್ರಿ ಭೇದದಿಂದ ಪ್ರತ್ಯಕ್ಷ ವ್ಯಕ್ತಿಭೇದದ ನಿಯಮದಂತೆ ವಿವಿಧ ಜಾತಿಗಳಲ್ಲಿದೆ. ಹಾಗೆಯೇ ದೋಷ ಸಂಸ್ಕಾರಗಳಿರುವ ಪ್ರಯೋಗಗಳಿಂದ ಜನಿತ ಭ್ರಾಂತಿಜ್ಞಾನವು ಅಪ್ರತ್ಯಕ್ಷವೂ ಆಗುವುದಿಲ್ಲ. ಹಾಗಾಗಿ ಪ್ರತ್ಯಭಿಜ್ಞಾನತೆಯು ಪ್ರತ್ಯಕ್ಷವಾದ ಪ್ರಮಾಣವಾಗಿರುವುದು. [7–7]

ಪ್ರತ್ಯಭಿಜ್ಞಾನ ಸರಿಯಾದ ತಿಳುವಳಿಕೆಯ ಸ್ರೋತವಾಗಿದೆ ಹಾಗೂ ಅದರ ಕಾರ್ಯವು ಇತರ ಪ್ರತ್ಯಕ್ಷಗಳಿಗಿಂತ ಸ್ವಲ್ಪ ಭಿನ್ನವಾಗಿದ್ದರೂ, ಪ್ರತ್ಯಕ್ಷವೆಂದು ನಿರ್ಧರಿಸಬಹುದು. ಇತರ ಪ್ರತ್ಯಕ್ಷಗಳಲ್ಲಿ ವಿಷಯದೊಡನೆ ಇಂದ್ರಿಯಗಳ

ಸಂಪರ್ಕ ಮಾತ್ರವೇ ಸಾಕಾದರೆ, ಪ್ರತ್ಯಭಿಜ್ಞಾನದಲ್ಲಿ ಅದರೊಡನೆ ನೆನಪುಗಳು (ಸ್ಮೃತಿ) ಪೂರಕವಾಗಿ ಸೇರಿಕೊಳ್ಳುತ್ತವೆ. ಉದಾಹರಣೆಗೆ, ಇಂದ್ರಿಯಗಳಿಂದ ಸ್ಪಷ್ಟತೆಯಿಲ್ಲದೆ ಉಗಮಿಸಿದರೂ ಭ್ರಾಂತಿಯನ್ನು ನಿಜವಾಗಿಯೂ ಪ್ರತ್ಯಕ್ಷವೆಂದು ವರ್ಗೀಕರಿಸಿದ್ದಾರೆ.

पूर्वत्रानुभवे काले स्मृतिकाले परत्र सन् ।
आत्मा संस्कार रूपेण स्मरत्यर्थं स्वनिष्ठितम् ॥ ८ ॥

ಪೂರ್ವತ್ರಾನುಭವೇ ಕಾಲೇ ಸ್ಮೃತಿಕಾಲೇ ಪರತ್ರ ಸನ್ ।
ಆತ್ಮಾ ಸಂಸ್ಕಾರ ರೂಪೇಣ ಸ್ಮರತ್ಯರ್ಥಂ ಸ್ವನಿಷ್ಠಿತಮ್ ॥ 8 ॥

ಹಿಂದಿನ ಅನುಭವದ ಕಾಲದ ಮತ್ತು ಆ ಅನುಭವದ ನೆನಪು ಉಂಟಾಗುವ ಸಮಯದ ಹಿಂದೆಯೂ ಇದ್ದು ಮುಂದೆಯೂ ಇರುವಂತಹ ಆತ್ಮವು ತನ್ನಲ್ಲಿ ಸಂಸ್ಕಾರ ರೂಪದಲ್ಲಿ ಹುದುಗಿರುವ ವಿಷಯಗಳನ್ನು ನೆನಪಿಸಿಕೊಳ್ಳುತ್ತದೆ. [7–8]

ವಿವೃತ್ತಿ

ಹೀಗೆ ಹೇಳಿದ ಅರ್ಥವನ್ನು ವಿಶದಪಡಿಸುತ್ತಾ **ಪೂರ್ವತ್ರೇತಿ.** ***ಸ್ಮೃತಿಕಾಲಃ*** ಹಿಂದೆ ಅನುಭವಿಸಿರುವುದನ್ನು ನೆನಪಿಸಿಕೊಂಡು ಅನುಭವಿಸುವ ಸಮಯ. ಉಭಯಕಾಲಗಳಲ್ಲಿಯೂ ಸತ್ ತನ್ನಲ್ಲಿ ***ಸಂಸ್ಕಾರರೂಪೇಣ*** ವ್ಯಕ್ತರೂಪದಲ್ಲಿ ***ಸ್ವನಿಷ್ಠಿತಂ*** ನೆನಪು ಎಂದು ಸಂಗ್ರಹವಾಗಿರುವ ***ಸ್ಮರತಿ*** ಪ್ರತ್ಯಭಿಜ್ಞಾನ, ನೆನಪಿಸಿಕೊಳ್ಳುತ್ತದೆ ಎಂಬ ಅರ್ಥದಲ್ಲಿದೆ. [7–8]

ಒಂದು ವಿಷಯವನ್ನು ತಾನು ಹಿಂದೆ ಅನುಭವಿಸಿರುವೆನೆಂದು ಇರುವ ಅರಿವನ್ನು ನೆನಪು ಎಂದು ಇಲ್ಲಿ ಅರ್ಥೈಸಿದೆ.

ಸ್ಮರಣೆಯೆಂಬ (ಸ್ಮೃತಿ) ಶಬ್ದವನ್ನು ಕೇಳಿ, ಹಿಂದೆ ಹೇಳಿದ ಪ್ರತ್ಯಭಿಜ್ಞಾದ ಸರಿಯಾದ ಅರ್ಥವನ್ನು ತಿಳಿದುಕೊಳ್ಳದೆ ಮತ್ತು ವೇದಾಂತಿಯು ಆತ್ಮದ ಗುರುತನ್ನು ಕೇವಲ ಸ್ಮರಣೆಯಾಗಿರುವ ಪ್ರತ್ಯಭಿಜ್ಞಾನದ ಬಲದ ಮೇಲೆ ಪ್ರಮಾಣೀಕರಿಸುವ ಪ್ರಯತ್ನವನ್ನು ಮಾಡುತ್ತಿರುವನೆಂದು ಆಕ್ಷೇಪಿಸುವವವನು ಹೀಗೆ ಪ್ರಶ್ನಿಸುತ್ತಾನೆ:

प्रत्यभिज्ञेति भावानां स्मृतिश्चेदभिधीयते ।
आत्मस्थैर्ये प्रमाणत्वं स्मृतिश्च प्राप्नुयात्कथम् ॥ ९ ॥

ಪ್ರತ್ಯಭಿಜ್ಞೇತಿ ಭಾವಾನಾಂ ಸ್ಮೃತಿಶ್ಚೇದಭಿಧೀಯತೇ ।
ಆತ್ಮಸ್ಥೈರ್ಯೇ ಪ್ರಮಾಣತ್ವಂ ಸ್ಮೃತಿಶ್ಚ ಪ್ರಾಪ್ನುಯಾತ್ಕಥಮ್ ॥ 9 ॥

ಪ್ರತ್ಯಭಿಜ್ಞಾನ ಎಂದರೆ ಸ್ಮೃತಿ ಯಾ ಸ್ಮರಣೆ ಎಂದಾದರೆ, ಕೇವಲ ಸ್ಮರಣೆಯು ಆತ್ಮದ ನಿರಂತರ ಅಸ್ತಿತ್ವಕ್ಕೆ ಪ್ರಮಾಣ ಹೇಗಾಗುವುದು? [7–9]

ವಿವೃತ್ತಿ

ನೆನಪಿಸಿಕೊಂಡೆನು ಎಂದು ಹೇಳುವುದಾದರೆ, ಪೂರ್ವಪಕ್ಷಿಯು ಆಕ್ಷೇಪಿಸುತ್ತಾನೆ **ಪ್ರತ್ಯಭಿಜ್ಞೇತಿ.** ಸ್ಮರಣೆಯ ಅಪ್ರಮಾಣತ್ವವು ಎಲ್ಲಾ ವಾದಿಗಳಿಗೂ ಸಮ್ಮತವಾಗಿದೆ ಎಂಬ ಅರ್ಥ. [7–9]

स्मृतौ प्रकाशो नार्थस्य न चाप्यर्थस्य निश्चयः ।
न चाप्यर्थानुभवयोरङ्गुल्योरिव सम्भवेत् ॥ १० ॥
नानुभूतिविशिष्टस्य पदार्थस्य च दण्डिवत् ।
सर्वत्राप्येवमित्येवं प्रसङ्गादिति तच्छृणु ॥ ११ ॥

ಸ್ಮೃತೌ ಪ್ರಕಾಶೋ ನಾರ್ಥಸ್ಯ ನ ಚಾಪ್ಯರ್ಥಸ್ಯ ನಿಶ್ಚಯಃ ।
ನ ಚಾಪ್ಯರ್ಥಾನುಭವಯೋರಂಗುಲ್ಯೋರಿವ ಸಂಭವೇತ್ ॥ 10 ॥
ನಾನುಭೂತಿವಿಶಿಷ್ಟಸ್ಯ ಪದಾರ್ಥಸ್ಯ ಚ ದಂಡಿವತ್ ।
ಸರ್ವತ್ರಾಪ್ಯೇವಮಿತ್ಯೇವಂ ಪ್ರಸಂಗಾದಿತಿ ತಚ್ಛೃಣು ॥ 11 ॥

ನೆನಪಿನಲ್ಲಿ ಸ್ಮರಿಸಿಕೊಂಡ ವಸ್ತುವು ನೇರವಾಗಿ ಕಾಣುವುದಿಲ್ಲ ಅಥವಾ ಅದರ ನಿಜವಾದ ಅನುಭವ ಇರುವುದಿಲ್ಲ; ಎರಡು ಬೆರಳಿನಂತೆ ಏಕಕಾಲದಲ್ಲಿ ಅದು (ಪರಸ್ಪರ ಸಂಬಂಧವಿರುವ) ವಸ್ತುವೂ, ಅನುಭವವೂ ಆಗಿರಲು ಅಸಾಧ್ಯ; ವಸ್ತುವು ಅನುಭವದ ವಿಷಯವೂ ಆಗಿರುವುದಿಲ್ಲ, (ವಸ್ತು ಮತ್ತು ಅನುಭವಗಳು ಹೀಗೆ ಪರಸ್ಪರ ಸಂಬಂಧವನ್ನು ಹೊಂದಿ) ದಂಡ ಮತ್ತು ಅದನ್ನು ಹಿಡಿದಿರುವ ವ್ಯಕ್ತಿಯ ಹಾಗೆ; ಇದು ನೆನಪಿನ ಎಲ್ಲ ಘಟನೆಗಳಿಗೆ ಹೊಂದುತ್ತದೆ. ಇದಕ್ಕೆ ನಮ್ಮ ಉತ್ತರವನ್ನು ಕೇಳಿ: [7–10..11]

ವಿವೃತ್ತಿ

ಸ್ಮರಣೆಯ ಅಪ್ರಮಾಣತ್ವವನ್ನು ಸಾಧಿಸಲು **ಸ್ಮೃತಾವಿತಿ.** ನೆನಪು ಪ್ರತ್ಯಕ್ಷ ಪ್ರಮಾಣವಲ್ಲ, ವಸ್ತುವು ಸ್ಮೃತಿಯಲ್ಲಿ ಪ್ರಕಾಶವಾದರೂ ಅದರ ನಿಜವಾದ ಅಸ್ತಿತ್ವ ಮತ್ತು ಸ್ವರೂಪದ ಅವಭಾಸವಿರುವುದಿಲ್ಲ. ಅದು ಅನುಮಾನ ಮುಂತಾದ ರೂಪವಾಗಿಯೂ ಇಲ್ಲ ಎಂದು ಹೇಳಲು **ನ ಚಾಪೀತಿ.** ***ನಿಶ್ಚಯಃ*** ಸತ್ ಭಾವನಿಶ್ಚಯ, ಸ್ಮರಣೆಯ ಸ್ಥಿತಿಯಲ್ಲಿ ಅರ್ಥವಾಗುವ ಸತ್ಯದ ನಿಶ್ಚಯವಲ್ಲ. 'ನ ಚಾರ್ಥಾನುಭವಸ್ಯ ಚ' ಎಂದು ದ್ವಿತೀಯಪಾದದ ಪಾಠವಿದ್ದರೆ ಉತ್ತರಾರ್ಧದ ಅರ್ಥವು ಸುಸಂಗತವಾಗುವುದು. ನೆನಪಿನಲ್ಲಿ ಪ್ರಕಟವಾದುದು ನಷ್ಟವಾಗುವ ಸಂಭವವಿರುವುದರಿಂದ ಹಿಂದಿನ ಅನುಭೂತಿಯ ಅರ್ಥದ ಅನುಭವವು ಎಂಬ ಅರ್ಥವಾಗುವುದು. ಹಾಗಾಗಿ ಎರಡರ ಪ್ರಕಟಣೆಯ ಸಂಭವವೂ ಇಲ್ಲವಾಗುವುದು ಎಂದು ತಿಳಿಸಲು **ನ ಚಾಪೀತಿ.** ಬೆರಳುಗಳಂತೆ ಎಂಬುದು ವ್ಯತಿರೇಕ ದೃಷ್ಟಾಂತವು.

ಮತ್ತು ಇನ್ನೊಂದು ವಿಧದಲ್ಲಿ ವಿಶಿಷ್ಟವಾಗಿ ಮುಂದೆ ಸ್ಮರಣೆಯಾಗುವುದೋ ಎಂದು ಶಂಕಿಸಿದರೆ, ಅದು ಆಗದಿರಬಹುದು ಎಂದು ಹೆಚ್ಚಿನ ವಿಚಾರವನ್ನು ತಿಳಿಸಲು **ನಾನುಭೂತೀತಿ.** ಚಕಾರದಿಂದ ಪದಾರ್ಥವಿಶಿಷ್ಟವಾದ ಅನುಭೂತಿಯು ಗ್ರಹಿಸಲ್ಪಡುತ್ತದೆ. ಪದಾರ್ಥದ ಸ್ಮರಣೆಯು ಅನುಭವ ವಿಶಿಷ್ಟವಾದ ಅರ್ಥವನ್ನು ಪ್ರಕಾಶಿಸುತ್ತದೆ ಎಂಬ ಅರ್ಥ. ಆಕ್ಷೇಪವನ್ನು ನಿರಾಕರಿಸಲು **ತಚ್ಛೃಣ್ವಿತಿ.** [7–10.11]

ಈ ಆಕ್ಷೇಪವನ್ನು ಹೀಗೆ ವಿವರಿಸಬಹುದು: ಪ್ರತ್ಯಭಿಜ್ಞಾನವು ಕೇವಲ ನೆನಪುಗಳಾಗಿದ್ದರೆ ವೇದಾಂತಿಗಳು ಸೂಚಿಸಿರುವಂತೆ ಅದು ಆತ್ಮದ ಗುರುತನ್ನು ಪ್ರಮಾಣೀಕರಿಸಲಾರದು. ಪ್ರತ್ಯಭಿಜ್ಞಾನವು ವಸ್ತುಗಳ ಕುರಿತಾದ

ಹಿಂದಿನ ಅನುಭವಗಳನ್ನು ಧೃಢೀಕರಿಸುತ್ತದೆ ಎಂಬುದು ನಿಜ; ಹೀಗೆ ಅದು ಬರಿಯ ನೆನಪು ಮಾತ್ರ. ಮತ್ತು ನೆನಪಿನ ರೂಪದಲ್ಲಿ, ಅದು ನೆನಪಿಸಿಕೊಳ್ಳುವ ವಸ್ತುವಿನ ಕುರಿತು ಪ್ರತ್ಯಕ್ಷದ ತರಹದ ಶೋಧನೆಯ ಗುಣವನ್ನು ಹೊಂದಿರುವುದಿಲ್ಲ ಯಾಕೆಂದರೆ ಅದು ಇಂದ್ರಿಯಗೋಚರವಲ್ಲ; ಮತ್ತು ಅದು ನಿಜವಾದ ಅನುಭವದಂತೆಯೂ ಅಲ್ಲ, ನಿಜವಾದ ಅನುಭವವು ಹಿಂದೆ ಆಗಿರುತ್ತದೆ. ಹಾಗಾಗಿ, ಎರಡುಬೆರಳುಗಳಂತೆ ಸ್ವತಂತ್ರವಾಗಿರುವ ವಸ್ತು ಮತ್ತು ಅದರ ಅನುಭವಗಳನ್ನು ಶೋಧಿಸುವ ಪ್ರತ್ಯಕ್ಷದ ಗುಣವನ್ನು ಅದು ಹೊಂದಿಲ್ಲ; ಮತ್ತು ವಸ್ತುವು ಅನುಭವದ ವಿಷಯವಾಗುವ ಸಾಧ್ಯತೆಯೂ ಬಹಳ ಕಡಿಮೆ.

ಅನುಭವದ ಸಾಕ್ಷಿಯೆಂದು ಪರಿಗಣಿಸಲು ಸ್ಮರಣೆಯು ಸಾಕೆಂದಾದರೆ ಆಗ ಅದೇ ಶೋಧನಾ ಶಕ್ತಿಯನ್ನು ಶಬ್ದದ ಮೂಲಕ ಉಂಟಾಗುವ ವಸ್ತುವಿನ ನೆನಪಿಗೆ ಹೊಂದಿಸಬೇಕು.

(ಉತ್ತರ): ಸ್ಮರಣೆಯು ಪ್ರಮಾಣವೆಂದು, ನಿಜ ಅರಿವಿನ ಸ್ರೋತವೆಂದು, ವೇದಾಂತಿಯು ಸಾಧಿಸುವುದಿಲ್ಲ. ಶಾಶ್ವತ ಆತ್ಮನ ಅಭಾವದಲ್ಲಿ, ನೆನಪುಗಳನ್ನು ವಿವರಿಸಲು ಸಾಧ್ಯವಿಲ್ಲವೆಂಬುದು ಅವನ ವಾದ. ಸ್ಮರಣೆಯ ಉಗಮದ ಕುರಿತಾಗಿ:

प्राक्तनानुभवे नष्टे तदवष्टम्भसम्भवात् ।
संस्कारसंज्ञात्सामग्र्यात् पौरुषाज्जायते स्मृतिः ॥ १२ ॥

ಪ್ರಾಕ್ತನಾನುಭವೇ ನಷ್ಟೇ ತದವಷ್ಟಂಭಸಂಭವಾತ್ ।
ಸಂಸ್ಕಾರಸಂಜ್ಞಾತ್ಸಾಮಗ್ರ್ಯಾತ್ ಪೌರುಷಾಜ್ಜಾಯತೇ ಸ್ಮೃತಿಃ ॥ 12 ॥

ಹಿಂದಿನ ಅನುಭವವು ಮರೆಯಾದಾಗ, ಆತ್ಮದಲ್ಲಿರುವ ಸಂಸ್ಕಾರ (ಆ ಅನುಭವದ ಛಾಯಾ ಪ್ರತಿ) ಎಂಬುದರಿಂದ ಅದರ ಸ್ಮರಣೆಯು ಉಂಟಾಗುತ್ತದೆ. [7–12]

ವಿವೃತ್ತಿ

ನಾವು ಸ್ಮರಣೆಯು ಪ್ರಮಾಣವೆಂದು ಹೇಳುತ್ತಿಲ್ಲ, ಆದರೆ ಸ್ಮರಣೆಯಿಂದ ಹೊರತಾಗಿ ಆತ್ಮದಲ್ಲಿರುವ ಅನುಭವವನ್ನು ಪ್ರಮಾಣವೆಂದು ಹೇಳುತ್ತೇವೆ. ಹಾಗಾಗಿ ನಮ್ಮ ಅಭಿಪ್ರಾಯದಂತೆ ನೀವು ಹೇಳಿರುವ ದೋಷವು ಇಲ್ಲಿ ಉಂಟಾಗುವುದಿಲ್ಲ ಎಂದು ಹೇಳುತ್ತಾ ಸ್ಮರಣೆಯಿಂದ ಉಗಮವಾಗುವ ಅಂತಹ ಸಾಮಗ್ರಿಗಳನ್ನು ತೋರಿಸಲು **ಪ್ರಾಕ್ತನಾನುಭವ ಇತಿ.** ***ಪ್ರಾಕ್ತನಾನುಭವಃ*** ಹಿಂದೆ ಹೇಗೋ ಲಭಿಸಿರುವ ಕಿಂಚಿತ್ ಅನುಭವವು ನಷ್ಟವಾದರೂ, ***ತದವಷ್ಟಂಭಃ*** ಹಿಂದಿನ ಅನುಭವವನ್ನು ಆಶ್ರಯಿಸಿ ಅದರಿಂದ ಸಂಭವಿಸಿರುವ ಸಂಸ್ಕಾರ ಎಂಬ ಸಂಜ್ಞೆಯುಳ್ಳ ***ಸಾಮಗ್ರ್ಯಾತ್*** ಸಮಗ್ರಭಾವ, ಅಸಾಧಾರಣ ಕಾರಣವಾಗಿ ***ಪೌರುಷಾತ್*** ಪುರುಷನಿಂದ, ಅಧಿಷ್ಠಿತವಾಗಿರುವ ಚೈತನ್ಯಪ್ರಧಾನವಾದ ಪ್ರಮಾತೃ ಈಶ್ವರನಿಂದ, ಈ ಲಕ್ಷಣಗಳಿರುವ ಸಾಮಗ್ರಿಗಳಿಂದ ಸ್ಮರಣೆಯು ಆಗುವುದು. [7–12]

आवेद्यानुभवे नष्टे तदीयं विषयं प्रति ।
अनुभावकमात्मानं बोधयत्यनपायिनम् ॥ १३ ॥

ಆವೇದ್ಯಾನುಭವೇ ನಷ್ಟೇ ತದೀಯಂ ವಿಷಯಂ ಪ್ರತಿ ।
ಅನುಭಾವಕಮಾತ್ಮಾನಂ ಬೋಧಯತ್ಯನಪಾಯಿನಮ್ ॥ 13 ॥

ಈಗಿನ ಅನುಭವವು ಮರೆಯಾದ ನಂತರ, ಹಿಂದಿನ ಅನುಭವದ ವಸ್ತುವಿನ ವಿಷಯವಾಗಿ ಈ ಸ್ಮರಣೆಯು ಆತ್ಮದ ನಿರಂತರತೆಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತದೆ. [7–13]

ವಿವೃತ್ತಿ

ಹೀಗೆ ಆಗಿರುವ ಸ್ಮರಣೆಯು ಏನು ಮಾಡುತ್ತದೆ ಎಂದು ತಿಳಿಸುವ **ಆವೇದ್ಯೇತಿ.** ***ಆವೇದ್ಯಸ್ಯ*** ಚೆನ್ನಾಗಿ ವೇದ್ಯವಾಗಿರುವ ಅನುಭವವು ನಷ್ಟವಾದರೂ ಅದರ ಕುರಿತಾದ ಅರಿವಿರುವ ಹಿಂದಿನ ಅನುಭಾವವನ್ನು ಆತ್ಮವು ಅನುಭವಿಸಿರುವುದರಿಂದ, ಅಂತಹ ಆತ್ಮದ ನಿರಂತರತೆಯು ನಿತ್ಯವಾಗಿ ಒಂದೇ ಆಗಿರುವುದು ಎಂದು ಈ ನೆನಪುಗಳು ಜ್ಞಾಪಿಸುತ್ತವೆ. ಮತ್ತು ಪೂರ್ವಾನುಭವ ಜನಿತ ಸಂಸ್ಕಾರದಿಂದ ಪೂರ್ವಾನುಭೂತಿಯಾದ ವಿಷಯವು ಸ್ಮರಣೆಯಾಗುವುದು. ಇದು ಆ ವಿಷಯಕ್ಕೂ, ಅದರ ಅನುಭವದ ಸ್ಮರಣೆಗೂ ಇರುವ ಅಂತರವು. ಪುರುಷನು ಹಿಂದೆ ಆನೆ, ಕುದುರೆ ಮುಂತಾದ ಸಂಕುಲಗಳಿರುವ ರಾಜ್ಯವನ್ನು ಅನುಭವಿಸಿರುವನು, ಅವನೇ ಹಿಮಗಿರಿ, ಕುಹರ, ಗುಹೆಯ ಪರಿಸರದಲ್ಲಿರುವ ಮಂದಾಕಿನೀಯ ಹರಿವಿನ ಭೋರ್ಗರೆತವನ್ನೂ ಅನುಭವಿಸಿರುವನು; ಹಾಗೆ ಆತ್ಮವೇ ಪ್ರತಿಯೊಂದನ್ನೂ ಅರಿತುಕೊಂಡಿರುವ ಪುರುಷನು ಎಂದು ಸ್ಮರಣೆಯಾಗುವುದೇ ಪ್ರತ್ಯಭಿಜ್ಞತೆ ಎಂದು ತಿಳಿಯಬೇಕು ಎಂಬ ಭಾವ. [7–13]

ಈಗಿನ ಕ್ಷಣದಲ್ಲಿ ಪಡೆಯುತ್ತಿರುವ ಅನುಭವದಲ್ಲಿ ಮುಂದುವರೆಯುತ್ತಾ, ಹಿಂದಿನ ಒಂದು ಅನುಭವವನ್ನು ಮೆಲುಕುಹಾಕುವಾಗ ನಿಜವಾದ ಅನುಭವದಿಂದ ಉಂಟಾಗುವ ಸಂವೇದನೆಗಳೊಂದಿಗೆ ಆತ್ಮವು ಹೀಗೆ ಆಲೋಚಿಸುತ್ತದೆ 'ನಾನು ಈ ಮೊದಲು ಒಂದು ರಾಜ್ಯವನ್ನು ಆಳುತ್ತಿದ್ದೆ, ಈಗ ಗಂಗಾನದಿಯ ತೀರದಲ್ಲಿ ಸನ್ಯಾಸಿಯಂತೆ ಬದುಕುತ್ತಿದ್ದೇನೆ'. ಹೀಗೆ ಅವನು ಎರಡು ವಿಭಿನ್ನ ಸಮಯದಲ್ಲಿ ನಡೆಯುವ ಘಟನೆಗಳಲ್ಲಿ ತನ್ನ ನಿರಂತರತೆಯನ್ನು ಗುರುತಿಸಿಕೊಳ್ಳುತ್ತಾನೆ. ಇದೇ ರೀತಿ, ಹಿಂದಿನ ಜನ್ಮಗಳಲ್ಲಿ ನಡೆದ ಘಟನೆಗಳ ಸ್ಮರಣೆಯಿಂದ ಅನೇಕ ಜನ್ಮಗಳಲ್ಲಿಯ ತನ್ನ ನಿರಂತರತೆಯನ್ನು, ಅವನು ಗುರುತಿಸುತ್ತಾನೆ. ಹೀಗೆ ತನ್ನನ್ನು ಗುರುತಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ನೆನಪುಗಳು ಒಂದು ಘಟಕವಾಗಿ ಕೂಡಿಕೊಳ್ಳುವುದರಿಂದ, ಪ್ರತ್ಯಭಿಜ್ಞತೆಯನ್ನು ಸ್ಮೃತಿಯೆಂದು ಹೇಳಲಾಗಿದೆ.

विषये च प्रमुषिते नष्टे चानुभवे सति ।
स्वविश्रान्तं स्मरत्यर्थं देवोऽप्रमुषितस्सदा ॥ १४ ॥

ವಿಷಯೇ ಚ ಪ್ರಮುಷಿತೇ ನಷ್ಟೇ ಚಾನುಭವೇ ಸತಿ ।
ಸ್ವವಿಶ್ರಾಂತಂ ಸ್ಮರತ್ಯರ್ಥಂ ದೇವೋಽಪ್ರಮುಷಿತಸ್ಸದಾ ॥ 14 ॥

ಅನುಭವದ ವಸ್ತುವು ಮತ್ತು ಅನುಭವವು ಕೂಡಾ ಮರೆಯಾದ ಬಳಿಕ, ಮರೆಯಾಗದ, ಅರಿವುಳ್ಳ ದೈವಿಕ ಆತ್ಮವು, ತನ್ನಲ್ಲಿ ಹುದುಗಿರುವ ಆ ವಸ್ತುವನ್ನು ಯಾವುದೇ ಸಮಯದಲ್ಲಿ ನೆನಪಿಸಿಕೊಳ್ಳುತ್ತದೆ. [7–14]

ವಿವೃತ್ತಿ

ವೇದ್ಯವಾಗಿರುವುದನ್ನು ವಿವರಿಸಿದ ಬಳಿಕ ವೇದಿತವಾಗುವುದನ್ನು ವಿವರಿಸದಿರುವುದರಿಂದ, ಮುಂದೆ ವೇದಿತವಾಗುವ ಆತ್ಮವು ನಿತ್ಯವಾಗಿರುವುದು ಎಂದು ಹೇಳುವ **ವಿಷಯೇ ಚೇತಿ.** ***ಪ್ರಮುಷಿತೇ*** ಅನುಭವಿಸಿರುವುದು ಮತ್ತು ಅದರ ಅನುಭವವವು ನಾಶವಾದರೂ, ಆತ್ಮದಲ್ಲಿ ಸಂಸ್ಕಾರರೂಪವಾಗಿ ವಿಲೀನವಾಗಿರುವ ಆ ವಿಷಯವನ್ನು ದೈವಿಕ ಆತ್ಮವು ಅನಂತವಾಗಿ ಸ್ಮರಿಸಿಕೊಳ್ಳುವುದು. [7–14]

ಆ ವಸ್ತುವು ಸಂಸ್ಕಾರದ ರೂಪದಲ್ಲಿ ಆತ್ಮದಲ್ಲಿ ಕರಗಿರುತ್ತದೆ.

पमोषणं प्रमातॄणां मायया तमसा कृतम् ।
मायाविद्ये प्रभोश्शक्ती भानोश्छायाप्रभोपमे ॥ १५ ॥

ಪ್ರಮೋಷಣಂ ಪ್ರಮಾತ್ೄಣಾಂ ಮಾಯಯಾ ತಮಸಾ ಕೃತಮ್ ।
ಮಾಯಾವಿದ್ಯೇ ಪ್ರಭೋಶ್ಶಕ್ತೀ ಭಾನೋಶ್ಛಾಯಾಪ್ರಭೋಪಮೇ ॥ 15 ॥

ಪ್ರಮಾತೃಗಳು, ಅನುಭವಗಳನ್ನು ಗಳಿಸುವವರು, ಮಾಯೆಯ ಕತ್ತಲೆಯ ಅರಿವನ್ನು ಹೊಂದಿರುವುದಿಲ್ಲ. ಮಾಯೆ ಮತ್ತು ವಿದ್ಯೆ ಅಥವಾ ಭ್ರಮೆ ಮತ್ತು ಜ್ಞಾನ ಪ್ರಭುವಿನ ಶಕ್ತಿಗಳಾಗಿವೆ, ನೆರಳು ಮತ್ತು ಬಿಸಿಲು ಸೂರ್ಯನಿಗಿದ್ದ ಹಾಗೆ. [7–15]

ವಿವೃತ್ತಿ

ಸದೈವ ದೈವಿಕವಾಗಿ ನೆನಪಿಸಿಕೊಳ್ಳುವುದು ಎಂದು ಯಾಕೆ ಹೇಳುವುದು? ಅದು ಸುಷುಪ್ತಿ, ಪ್ರಳಯಗಳಲ್ಲಿ ಕಳಚಿಹೋಗುವ ಸಂಭವವಿದೆ ಎಂದು ಹೇಳಲು **ಪ್ರಮೋಷಣಮಿತಿ.** ಮಾಯಾರೂಪದ ಸಂಬಂಧಜ್ಞಾನವು ಪಾರಮಾರ್ಥಿಕವಲ್ಲ, ಅದು ವಿಶೇಷ ಆಕಾರದಿಂದ ಅವಭಾಸ ಮಾತ್ರವಾಗುವುದಲ್ಲದೆ ಸ್ವರೂಪನಾಶಕವಲ್ಲ. ಹಾಗಾಗಿ ಅವಿದ್ಯೆಯು ಅದರ ಕಾರ್ಯ ಉಪಾಧಿಯು ಅವಿವೇಕದ ಉಪಾಧಿಯಲ್ಲಿ ಲೀನವಾಗಿ, ಆತ್ಮದಲ್ಲಿಯೇ ಲೀನವಾಗಿ ನಷ್ಟವಾಗಿದೆ ಎಂಬ ಭ್ರಮೆಯನ್ನುಂಟುಮಾಡುತ್ತದೆ. ಮಾಯಾರೂಪದ ಉಪಾಧಿಯ ಆತ್ಮದ ಆವರಣವು ಅನಾದಿಭಾವರೂಪವಾಗಿರುವುದರಿಂದ ಆತ್ಮಕ್ಕೆ ಮೋಕ್ಷದ ಅಭಾವವಿರುವ ಪ್ರಸಂಗವೇರ್ಪಡುವುದು ಎಂಬ ಶಂಕೆಯಿರುವುದು. ವಿದ್ಯೆಯನ್ನು ಆವರಿಸಿಕೊಳ್ಳುವ ಮಾಯೆಯು ಅವಿದ್ಯೆಮಾತ್ರವಾಗಿ ಅದರಿಂದ ಅದು ಅನಿರ್ವಚನೀಯ ಎಂದು ಹೇಳುವ ದೋಷವಿದೆ ಎಂಬ ಅಭಿಪ್ರಾಯದಿಂದ ಮಾಯೆ ಮತ್ತು ಅವಿದ್ಯೆ ಎರಡೂ ಪೂರ್ವಾಪರ ಭಾವದಿಂದ ಒಂದೇ ಆಗಿವೆ ಎಂದು ಹೇಳಲು **ಮಾಯಾವಿದ್ಯೇ ಇತಿ.** ***ಪ್ರಭೋ*** ಆತ್ಮದ, ಈಶ್ವರನ ***ಶಕ್ತೀ*** ಸಾಮರ್ಥ್ಯದಿಂದಾಗಿ ಬಂಧಮೋಕ್ಷವಾಗುವುದನ್ನು ಆತ್ಮವು ಅನುಭವಿಸುವುದು ಎಂಬ ಅದರ ಶಕ್ತಿತ್ವವನ್ನು ಹೇಳುವುದು ಉಪಚಾರಕ್ಕಾಗಿ ಮಾತ್ರ, ವಸ್ತುತ ಅಲ್ಲ. ಅಸಂಗತ್ವದಿಂದ ಕೂಡಿರುವ ಪ್ರಕಾಶಸ್ವಭಾವಕ್ಕೆ ಅವಿದ್ಯಾರೂಪದ ಮಾಯೆಯ ಆಶ್ರಯತ್ವವನ್ನು ಹೇಳುವುದಾದರೆ ಜ್ಞಾನಸ್ವರೂಪಕ್ಕೆ ಆಗಂತುಕಜ್ಞಾನದ ಅಪೇಕ್ಷೆಯಿಲ್ಲದಿರುವುದರಿಂದ ಅದರ ಆಶ್ರಯತ್ವದ ಯೋಗವಿಲ್ಲ. ಅದಕ್ಕೆ ದೃಷ್ಟಾಂತವಾಗಿ **ಭಾನೋರಿತಿ.** ***ಛಾಯಾ*** ರಾಹು. ವಸ್ತುತಃ ರಾಹುವು ಭಾನುವಿಗೆ ಸಂಬಂಧಿತನಾಗಿಲ್ಲದಿದ್ದರೂ ಸಂಬಂಧಿತನಾಗಿ ಪ್ರತೀತನಾಗಿ ಅವನ ಆಚ್ಛಾದಕನಾಗಿರುವನು. ಹಾಗೆಯೇ ಮಾಯೆಯು ಕೂಡ ವಸ್ತುತ ಆತ್ಮಕ್ಕೆ ಅಸಂಬಂಧಿತವಾಗಿದ್ದರೂ ಆತ್ಮದ ಆಚ್ಛಾದಕವೆಂದು ಹೇಳಲಾಗಿದೆ. ಪ್ರಭೆಯ ದೃಷ್ಟಾಂತದಿಂದ ಸ್ವಸ್ವರೂಪವೇ ಸತ್ ಆಗಿದ್ದು, ಯಾವುದೋ ನಿಮಿತ್ತದಿಂದ ವ್ಯವಹಾರಧರ್ಮದಲ್ಲಿ ತೊಡಗಿದೆ ಎಂದು ಸಿದ್ಧವಾಗುವುದು. [7–15]

ಸುಷುಪ್ತಿಯಲ್ಲಿಯೂ ಕೂಡಾ ಆತ್ಮವು ಅರಿವಿಲ್ಲದ್ದಾಗಿಲ್ಲ; ಒಂದು ನಿಶ್ಚಿತ ರೂಪದಲ್ಲಿ ಕಾಣಿಸಿಕೊಳ್ಳದಿದ್ದರೂ, ಅದು ಬೆಳಗುವುದನ್ನು ಮುಂದುವರಿಸುತ್ತದೆ, ತಿಳುವಳಿಕೆಯುಳ್ಳದ್ದಾಗಿರುತ್ತದೆ. ಉಪಾಧಿಗಳಾದ ಬುದ್ಧಿ ಇತ್ಯಾದಿಗಳು ಗಾಢನಿದ್ದೆಯಲ್ಲಿ ಸುಪ್ತವಾಗಿರುತ್ತವೆ ಹಾಗೂ 'ನಿದ್ದೆಯಲ್ಲಿ ಆತ್ಮಕ್ಕೆ ಅರಿವಿಲ್ಲ' ಎಂಬುದು ಬರಿಯ ಭ್ರಾಂತಿಯಾಗಿದೆ. ವಿಶ್ವದಷ್ಟೇ ಪುರಾತನವಾಗಿರುವ ಈ ಮಾಯೆಯ ಕತ್ತಲೆಯು, ಜ್ಞಾನ ಸೂರ್ಯನ ಉದಯವಾದಾಗ ಮರೆಯಾಗುತ್ತದೆ. ಸೂರ್ಯನಲ್ಲಿ ನೆರಳು ಮತ್ತು ಬಿಸಿಲು (ಬೆಳಕು) ಎರಡೂ ಇರುವಂತೆ, ಮಾಯೆ ಮತ್ತು ವಿದ್ಯೆ ಎರಡೂ ಈಶ್ವರನಲ್ಲಿ ಅವನ ಶಕ್ತಿಗಳ ರೂಪದಲ್ಲಿವೆ; ಅವುಗಳು ಬಂಧನ ಮತ್ತು ಮುಕ್ತಿಯ ಕಾರಣವಾಗಿವೆ. ಅವು ಉಂಟುಮಾಡುವ ಬಂಧನ ಮತ್ತು ಮುಕ್ತಿಯ ಅರಿವು ಆತ್ಮಕ್ಕೆ ಇರುವುದರಿಂದ, ಮಾಯೆ ಮತ್ತು ವಿದ್ಯೆಯನ್ನು ಆತ್ಮನ ಶಕ್ತಿಗಳೆಂದು ಹೇಳಿದ್ದಾರೆಯೇ ವಿನಃ, ಅವುಗಳು ಆತ್ಮದ ಮೂಲಭೂತ ಗುಣಗಳೆಂದು ಅಲ್ಲ, ಅದು ಯಾವಾಗಲೂ ನಿರ್ಮೋಹಿ ಮತ್ತು ಸ್ವಪ್ರಕಾಶಿತ. ಅದನ್ನು ಜ್ಞಾನವನ್ನು ಗಳಿಸುವಂತಹದು, ಹಿಂದೆ ಅದೇ ಜ್ಞಾನ ಅದರಲ್ಲಿ ಇದ್ದಿರದಂತೆ, ಎಂದೂ ಹೇಳಲಾಗುವುದಿಲ್ಲ; ಸೂರ್ಯನು ಮೋಡಗಳಿಂದ ಪ್ರಭಾವಿತನಾಗದಂತೆ ಅದು ಮಾಯೆಯಿಂದ ಪ್ರಭಾವಿತವಾಗುವುದಿಲ್ಲ. ಸೂರ್ಯನಂತೆ, ಆತ್ಮವನ್ನು ಅದರ ಪ್ರಭೆಯಿಂದ ಬೇರೆಯೆನ್ನುವುದು ಒಂದು ಭ್ರಮೆಯಷ್ಟೆ.

सर्वानाच्छादयेन्माया विद्या व्याक्षिप्य दर्शयेत् ।
प्रत्यभिज्ञैव सर्वेषां प्रमाणानां च साधनम् ॥ १६ ॥

ಸರ್ವಾನಾಚ್ಛಾದಯೇನ್ಮಾಯಾ ವಿದ್ಯಾ ವ್ಯಾಕ್ಷಿಪ್ಯ ದರ್ಶಯೇತ್ ।
ಪ್ರತ್ಯಭಿಜ್ಞೈವ ಸರ್ವೇಷಾಂ ಪ್ರಮಾಣಾನಾಂ ಚ ಸಾಧನಮ್ ॥ 16 ॥

ಮಾಯೆಯು ಎಲ್ಲವನ್ನೂ ಆಚ್ಛಾದಿಸುತ್ತದೆ (ಆವರಿಸು) ಮತ್ತು ವಿದ್ಯೆಯು ಮುಸುಕನ್ನು ತೆರೆದು ಪ್ರಕಟಗೊಳಿಸುತ್ತದೆ. ಎಲ್ಲವನ್ನೂ ವೀಕ್ಷಿಸುವ ಪ್ರತ್ಯಭಿಜ್ಞತೆಯು ಎಲ್ಲಾ ಪ್ರಮಾಣಗಳ ಮತ್ತು ಜ್ಞಾನ ಸ್ರೋತಗಳ ಅಡಿಪಾಯವಾಗಿದೆ. [7–16]

ವಿವೃತ್ತಿ

ಮಾಯೆ ಮತ್ತು ವಿದ್ಯೆಯ ಕಾರ್ಯವನ್ನು ತಿಳಿಸಲು **ಸರ್ವಾನಿತಿ. *ಸರ್ವಾನ್*** ಪ್ರಮಾತೄವನ್ನು ಎಂಬ ಅರ್ಥವು. ***ವ್ಯಾಕ್ಷಿಪ್ಯ*** ಆವರಿಸಿರುವ ಮುಸುಕನ್ನು ನಿವಾರಿಸು ಎಂಬ ಅರ್ಥ. ಎಲ್ಲವನ್ನೂ ಆವರಿಸುವಂತಹ ಮಾಯೆಯಿಂದ ಮುಸುಕಿರುವ ಜೀವನಿಗೆ ತನ್ನ ಜಡತ್ವದಿಂದಾಗಿ ತತ್ತ್ವ ವಿದ್ಯೆಯ ದರ್ಶನವು ಹೇಗಾಗುವುದು? ಮತ್ತು ವಿದ್ಯೆಯೂ ಅಂತಃಕರಣವೃತ್ತಿಯ ರೂಪವಾಗಿ ಜಡವಾಗಿರುವುದರಿಂದ ಅದು ಹೇಗೆ ಸಾಧ್ಯ ಎಂಬ ಶಂಕೆಗೆ **ಪ್ರತ್ಯಭಿಜ್ಞೈವೇತಿ.** ಎಲ್ಲಾ ಪ್ರಮಾಣಗಳಿಗೆ, ಚಕಾರವು ಅಪ್ರಮಾಣಗಳನ್ನೂ ಸೂಚಿಸುತ್ತದೆ, ಪ್ರತ್ಯಭಿಜ್ಞತೆಯೇ ಸಾಧಕವಾಗಿದೆ; ಅವಭಾಸವಾಗುವ ಎಲ್ಲವನ್ನೂ ಅನುಸರಿಸಿ ಅರಿತುಕೊಳ್ಳುವುದನ್ನು ಪ್ರತ್ಯಭಿಜ್ಞಾ, ಸಾಕ್ಷೀ ಎಂದು ಅದುವೇ ಸರ್ವ ವಿಜ್ಞಾನ ಸಾಧಕವಾಗಿದೆ ಎಂಬುದು ಅಕ್ಷರಾರ್ಥವು. ವಿದ್ಯೆಗೆ ಸ್ವಸ್ವರೂಪದಲ್ಲಿ ಜಡತ್ವವಿದ್ದರೂ ಅಶೇಷ ವಿಜ್ಞಾನದಲ್ಲಿ ಅಧಿಷ್ಠಿತವಾಗಿರುವ ಸಾಕ್ಷಿ ಚೈತನ್ಯದವರೆಗೆ ವ್ಯಾಪ್ತವಾಗಿದ್ದು, ಕಾಯಿಸಿದ ಕಬ್ಬಿಣದ ಗುಂಡಿನ ಎರವಲು ಪಡೆದ ಪ್ರಕಾಶದಂತೆ, ಅದು ಮಾಯೆಯ ನಿವಾರಣೆಯಲ್ಲಿ ಸಮರ್ಥವಾಗಿದೆ ಎಂಬ ಭಾವ. ಅಥವಾ ವಿದ್ಯೆಯು ಮಾಯೆಯ ಮುಸುಕನ್ನು ತೆರೆಯುವುದು ಎಂದು ಹೇಗೆ ತಿಳಿಯುವುದು? ಅದಕ್ಕಾಗಿ **ಪ್ರತ್ಯಭಿಜ್ಞೈವೇತಿ.** ಎಲ್ಲಾ ***ಪ್ರಮಾಣಾನಾಂ*** ಪ್ರಮಾಣವೃತ್ತಿಗಳಿಗೆ ಪ್ರತ್ಯಭಿಜ್ಞತೆಯು 'ಇದರ ತಿಳುವಳಿಕೆಯು ಅದರಂತೆಯೇ ಇದೆ' ಎಂದು ಜ್ಞಾಪಿಸುವ ಸಾಧನವಾಗಿ ವಿದ್ಯಾರೂಪದ ಪ್ರಮಾಣವೃತ್ತಿಗಳ ಸ್ವಭಾವ ಸಾಧಕವಾಗಿದ್ದು, ವಿದ್ಯೆಯು

ವಿಷಯದ ಆವರಣವನ್ನು ನಾಶಗೊಳಿಸುವ ಸಾಮರ್ಥ್ಯವನ್ನು ಹೊಂದಿರುವುದು ಎಂಬ ಅರ್ಥ. ಅಥವಾ ಈ ವಿದ್ಯೆಯೆನ್ನುವುದು ಏನು? ಯಾವ ಅವಿದ್ಯೆಯನ್ನು ತೊಲಗಿಸಿ ಸರ್ವ ತತ್ತ್ವಗಳನ್ನು ಪ್ರಕಟಿಸುವಂತಹದು ಎಂಬ ಆಕಾಂಕ್ಷೆಯನ್ನು ತಿಳಿಸುವ **ಪ್ರತ್ಯಭಿಜ್ಞೈವೇತಿ.** ಪ್ರತಿ ವಿಷಯದ ಪ್ರಕಾಶನದಿಂದ ಸಂಪೂರ್ಣವಾಗಿ ಅದನ್ನು ಅನವಚ್ಛಾದಿಸುವ ಮೂಲಕ ಅರಿಯುವ ಪ್ರತ್ಯಗಾತ್ಮ ರೂಪದ ಸಾಕ್ಷಿಯು ಪ್ರತ್ಯಭಿಜ್ಞಾ ***ಸಾಧನಂ*** ಸರ್ವ ಪ್ರಮಾಣವೃತ್ತಾಂತಗಳ ಜ್ಞಾನರೂಪವಾಗಿದೆ ಎಂಬ ಅರ್ಥವು. [7–16]

ವಿದ್ಯೆಯು ಮನಸಿನ ಒಂದು ಸ್ಥಿತಿಯಾಗಿ ಜಡವಾಗಿದ್ದರೂ, ಅದರೊಳಗಿರುವ ಹಾಗೂ ಎಲ್ಲವನ್ನೂ ಸಾಕ್ಷಿ ಭಾವದಿಂದ ವೀಕ್ಷಿಸುವ ಜ್ಞಾನದ ಸಹಾಯದಿಂದ ಮಾಯೆಯನ್ನು ನಿವಾರಿಸುತ್ತದೆ. 'ನಾನು ಇದನ್ನು ತಿಳಿದಿದ್ದೇನೆ' ಎಂಬ ಜ್ಞಾನವು, ಪ್ರತಿಯೊಂದು ವಸ್ತುವನ್ನು ಗುರುತಿಸುವ ಕ್ರಿಯೆಯ ಜೊತೆಗೂಡುವುದರಿಂದ ವಿದ್ಯೆಯು ಆ ವಸ್ತುವನ್ನು ಮುಚ್ಚಿರುವ ಆವರಣವನ್ನು ನಿವಾರಿಸುತ್ತದೆ. ವಿದ್ಯೆಯು ಅರಿವಿಲ್ಲದ ಸ್ಥಿತಿಯಿಂದ ಹೊರತೆಗೆದು, ವಸ್ತುಗಳ ನಿಜ ಸ್ವರೂಪವನ್ನು ಬಿಚ್ಚಿಡುತ್ತದೆ ಎಂದೂ ಹೇಳಬಹುದು ಮತ್ತು ಅದು ಎಲ್ಲದಕ್ಕೂ ಸಾಕ್ಷಿಯಾಗಿ ಬೆಳಗುತ್ತಿರುವ ಪ್ರತ್ಯಗಾತ್ಮವೇ ಆಗಿದೆಯಲ್ಲದೆ ಬೇರೇನೂ ಅಲ್ಲ.

ईश्वरोन्योहमप्यन्य इति विच्छेदकारिणीम् ।
व्याक्षिप्य विद्यया मायामीश्वरोहमिति स्मृतिः ॥ १७ ॥

ಈಶ್ವರೋನ್ಯೋಹಮಪ್ಯನ್ಯ ಇತಿ ವಿಚ್ಛೇದಕಾರಿಣೀಮ್ ।
ವ್ಯಾಕ್ಷಿಪ್ಯ ವಿದ್ಯಯಾ ಮಾಯಾಮೀಶ್ವರೋಹಮಿತಿ ಸ್ಮೃತಿಃ ॥ 17 ॥

ವಿದ್ಯೆಯು 'ಈಶ್ವರನು ಒಬ್ಬ, ನಾನು ಇನ್ನೊಬ್ಬ' ಎಂಬ ಭಿನ್ನತೆಯ ಭಾವವನ್ನುಂಟುಮಾಡುವ ಮಾಯೆಯ ಆವರಣವನ್ನು ತೆರೆದು 'ನಾನೇ ಈಶ್ವರ'ನೆಂಬ ಜ್ಞಾನವನ್ನುಂಟುಮಾಡುವುದು ಹಾಗೂ ಅದೇ ಪ್ರತ್ಯಭಿಜ್ಞಾ. [7–17]

ವಿವೃತ್ತಿ

ಅದುವೇ ಪ್ರತ್ಯಭಿಜ್ಞಾ ಎಂದು ಸ್ವರೂಪವನ್ನು ನಿರ್ದೇಶಿಸುವ **ಈಶ್ವರೋನ್ಯ ಇತಿ.** ***ಸ್ಮೃತಿಃ*** ಪ್ರತ್ಯಭಿಜ್ಞಾನ. ಅಥವಾ ಮಾಯೆಯ ಸ್ವಭಾವವನ್ನು ತಿಳಿಸಿ ಅದಕ್ಕೆ ವಿದ್ಯೆಯು ಬಾಧಕವಾಗಿ, ಸ್ವಯಂ ಸ್ವರೂಪದಲ್ಲಿ ಆವಿರ್ಭವಿಸಿರುವ ಪ್ರತ್ಯಭಿಜ್ಞಾ ಆಗಿರುವುದು ಎಂದು ತಿಳಿಸುವ **ಈಶ್ವರೋನ್ಯೋಹಮಿತಿ.** [7–17]

ईषत्प्रकाशोभूदीशो मायायवनिकावृतः ।
सम्यगावरणापाये सहस्रांशुरिव स्फुरेत् ॥ १८ ॥

ಈಷತ್ಪ್ರಕಾಶೋಭೂದೀಶೋ ಮಾಯಾಯವನಿಕಾವೃತಃ ।
ಸಮ್ಯಗಾವರಣಾಪಾಯೇ ಸಹಸ್ರಾಂಶುರಿವ ಸ್ಫುರೇತ್ ॥ 18 ॥

ಮಾಯೆಯೆಂಬ ಪರದೆಯಿಂದಾವೃತವಾದ ಈಶ್ವರನು ಅಲ್ಪ ಪ್ರಕಾಶನಾಗಿ ಕಂಡುಬರುತ್ತಾನೆ; ಪರದೆಯನ್ನು ಪೂರ್ಣವಾಗಿ ಸರಿಸಿದಾಗ ಸಹಸ್ರ ಸೂರ್ಯರಂತೆ ಪ್ರಕಾಶಿಸುತ್ತಾನೆ. [7–18]

ವಿವೃತ್ತಿ

ವಿದ್ಯೆಯನ್ನು ಅವಿದ್ಯೆಯು ಬಾಧಿಸಬಹುದು ಆದರೆ ಸ್ವರೂಪ ಪ್ರಕಾಶವನ್ನಲ್ಲ ಎಂದು ವಿವರಿಸಲು **ಈಷತ್ಪ್ರಕಾಶ ಇತಿ.** ಮಾಯೆಯೆಂಬ ಯವನಿಕೆಯ, ಪರದೆಯಿಂದ ಆವೃತವಾಗಿ. ಮೋಡಗಳಿಂದ ಆವರಿಸಲ್ಪಟ್ಟ ***ಸಹಸ್ರಾಂಶುಃ*** ಸೂರ್ಯನು ಸದಾ ತನ್ನ ನಿಜ ಪ್ರಕಾಶದಿಂದ ಬೇಳಗುತ್ತಾನೆ; ಅಂತೆಯೇ ಮಾಯೆಯ ಆವರಣವನ್ನು ವಿದ್ಯೆಯು ನಿವಾರಿಸಿದಾಗ ಸ್ವತಃಸಿದ್ಧ ಪ್ರಕಾಶದಿಂದ ಆತ್ಮವು ಸ್ಫುರಿಸುತ್ತದೆ. ಹಾಗೆಯೇ ಹಿಂದೆ ಲಭಿಸಿರುವ ಸ್ಫುರಣೆಯೇ ಯಥಾವತ್ ಸ್ವರೂಪದಿಂದ ಅಭಿವ್ಯಕ್ತವಾಗುವುದು ಪ್ರತ್ಯಭಿಜ್ಞತೆ ಎಂಬ ಅಭಿಪ್ರಾಯ. [7–18]

न कारणानां व्यापारात् प्रमाणानां न वा पुनः ।
प्रत्यभिज्ञापनं नाम मोहापसरणं परम् ॥ १९ ॥

ನ ಕಾರಣಾನಾಂ ವ್ಯಾಪಾರಾತ್ ಪ್ರಮಾಣಾನಾಂ ನ ವಾ ಪುನಃ ।
ಪ್ರತ್ಯಭಿಜ್ಞಾಪನಂ ನಾಮ ಮೋಹಾಪಸರಣಂ ಪರಮ್ ॥ 19 ॥

ಕಾರಣಗಳ ದೆಸೆಯಿಂದ ಅಥವಾ ಗ್ರಹಣೇಂದ್ರಿಯಗಳಿಂದ (ಈ ಗುರುತಿಸುವಿಕೆ ಬರುವುದಿಲ್ಲ). ಮೋಹಾಂಧಕಾರವನ್ನು ಕಳಚುವುದೇ ಗುರುತಿಸುವಿಕೆಯ ಮುಖ್ಯ ಕಾರಣ. [7–19]

ವಿವೃತ್ತಿ

ಹಿಂದೆ ಲಭಿಸಿದ ಸ್ವಸ್ವರೂಪಜ್ಞಾನ ಮಾತ್ರವೇ ಪ್ರತ್ಯಭಿಜ್ಞಾನ ಎಂದು ಹೇಗೆ ಹೇಳುವುದು? ಕೆಲವು ಧರ್ಮರೂಪದ ಆಗಂತುಕ, ಪರಿಚಯವಿಲ್ಲದ ಸ್ವರೂಪಜ್ಞಾನಗಳು ಯಾಕೆ ಅಲ್ಲ ಎಂಬ ಶಂಕೆಗೆ ಕಾರಣಗಳ ವ್ಯವಹಾರದಿಂದ ಯಾ ಪ್ರಮಾಣಗಳ ವ್ಯವಹಾರದಿಂದ ಅದು ಆಗಿರುವುದು ಹಾಗೂ ಇಂತಹ ವಿಕಲ್ಪಗಳನ್ನು ನಿರಾಕರಿಸಲು **ನ ಕಾರಣಾನಾಮಿತಿ.** ಕಾರಣಗಳ ವ್ಯವಹಾರದಿಂದ ಉತ್ಪತ್ತಿಯಾದ ಅರಿವು ಪ್ರತ್ಯಭಿಜ್ಞಾನವಲ್ಲ, ಪ್ರಮಾಣಗಳ ವ್ಯವಹಾರದಿಂದಾದ ಅರಿವೂ ಪ್ರತ್ಯಭಿಜ್ಞಾನ ಅಲ್ಲ. ಹಾಗಾದರೆ ಅದು ಏನು? ***ಮೋಹಾಪಸರಣಂ ಪರಂ*** ಮೋಹದ ಪರದೆಯನ್ನು ಕಳಚುವ ಅಭಿವ್ಯಕ್ತಿಕಾರಣವು ಎಂಬ ಅರ್ಥ. [7–19]

यावन्ति सन्ति मानानि व्यवहारप्रवृत्तये ।
तेषां मोहापसरणात् व्यापारोन्यो न विद्यते ॥ २० ॥

ಯಾವಂತಿ ಸಂತಿ ಮಾನಾನಿ ವ್ಯವಹಾರಪ್ರವೃತ್ತಯೇ ।
ತೇಷಾಂ ಮೋಹಾಪಸರಣಾತ್ ವ್ಯಾಪಾರೋನ್ಯೋ ನ ವಿದ್ಯತೇ ॥ 20 ॥

ನಮ್ಮ ಜೀವನದ ವ್ಯವಹಾರವನ್ನು ನಿರ್ದೇಶಿಸುವ ಯಾವುದೇ ಪ್ರಮಾಣಗಳು (ಜ್ಞಾನದ ಆಕರಗಳು) ಇವೆಯೋ, ಅವುಗಳೆಲ್ಲಾ ಅಜ್ಞಾನವನ್ನು (ಮೋಹಾಂಧಕಾರವನ್ನು) ನಿವಾರಿಸುವ ನಿಟ್ಟಿನಲ್ಲಿ ಪ್ರಯತ್ನಿಸುತ್ತವೆ. [7–20]

ವಿವೃತ್ತಿ

ವಿದ್ಯೆಯಿಂದ ಆತ್ಮದ ಅವಭಾಸವಾಗುವುದು ಸ್ವತಃಸಿದ್ಧವಾಗಿ, ಆವರಣದ ನಾಶವೇ ಮಾನ್ಯವಾದ ಸರ್ವ ಪ್ರಮಾಣಗಳಿಗೆ ಸಾಮಾನ್ಯವಾಗಿದೆ ಎಂದು ಪ್ರತಿಪಾದಿಸಿ ಸಾಧಿಸುವ **ಯಾವಂತಿ ಸಂತೀತಿ.** ಇದರ ಭಾವವು ಹೀಗಿದೆ: ಇದು ಮಡಕೆ ಎಂಬ ಪ್ರಮಾಣದಿಂದ ಅವಭಾಸವಾಗುವ ಮಡಕೆಯು ಪ್ರಮಾಣಜನಿತವಾದ ಅತಿಶಯ

ವಸ್ತುವಾಗಿರುವುದು. ಅದರ ಹಿಂದಿರುವ ಧರ್ಮವೇನು? ಮತ್ತು ಅದರ ವೃತ್ತಿಯೇನು? ಮುಂತಾಗಿ ವಿವೇಚನೆಯು ಕೇಳುತ್ತದೆ. ಮೊದಲಾಗಿ ಅದರ ಸ್ಫುರಣರೂಪವೇನು? ಮತ್ತು ಅದನ್ನು ಯಾವ ರೂಪವಾಗಿ ಅರಿಯಲಿ? ಇತ್ಯಾದಿಯಾಗಿ. ಸ್ಫುರಣವಾಗಿರುವ ಚೇತನದಿಂದ ಜಡವಾಗಿರುವ ಮಡಕೆಗೆ ಜನ್ಮವು ಲಭಿಸಿರುತ್ತದೆ. ಮಡಕೆಯ ಜ್ಞಾನವನ್ನು ಹೊಂದಿರುವ ಜ್ಞಾತೃವು ಅರಿವನ್ನು ಆಶ್ರಯಿಸಿ ಅನುಭವವನ್ನು ಗಳಿಸುತ್ತಾನೆ. ಅರಿಯುವಿಕೆಯ ಕ್ರಿಯೆಯು ಜ್ಞಾತೃವಿನಲ್ಲಿ ಮಾಡುವ ಫಲವು, ಅರಿವಿನ ವಿಷಯಕವಾಗಿರುವುದೆಂದು ಹೇಳಲಾಗಿದೆ; ಮಡಕೆ ಇರುವುದರಿಂದ ಮಡಕೆಯು ಸ್ಫುರಿಸುತ್ತದಾದುರಿಂದ ಸ್ಫುರಣೆಯಲ್ಲಿ ಮಡಕೆಯ ಕರ್ತೃತ್ವ ಪ್ರತೀತವಾಗುವುದು. ಮಡಕೆ ನನಗೆ ಸ್ಫುರಿಸುತ್ತಿದೆ ಎಂದು ತಿಳಿಯುವುದೇ ಸ್ಫುರಣೆಯ ಧರ್ಮವಾಗಿ ಅನುಭವವಾಗುತ್ತದೆ. ಅರಿಯುವವನಾದರೋ ನನಗೆ ಇದು ಸ್ಫುರಿಸುತ್ತದೆ ಯಾ ಸ್ಫುರಿಸುವುದಿಲ್ಲ ಎಂಬ ವ್ಯವಹಾರವನ್ನು ಮಾಡುತ್ತಾನೆ ಎಂಬ ಅರ್ಥವು ಕದಾಚಿತ್ ಅಲ್ಲ. ಏಕೆ? ಅನುಭವವು ತನ್ನನ್ನು ತಾನೇ ಆಶ್ರಯಿಸುವುದು ಸಂಸ್ಕಾರಜನಕವಾಗಿದೆ ಎಂಬ ನಿಯಮದಂತೆ, ಸಂಸ್ಕಾರವನ್ನು ಆಶ್ರಯಿಸಿದರೆ ನೆನಪಿನ ಉತ್ಪತ್ತಿಯಾಗುವುದು ಎಂಬ ನಿಯಮದಿಂದ ಜ್ಞಾತೃವಿಗೆ ವಿಷಯಸ್ಮರಣೆಯ ಅಭಾವ ಪ್ರಸಂಗವು ಉಂಟಾಗಿ ತಿಳುವಳಿಕೆಯ ನೆನಪು ಇಲ್ಲದಾಗಬಹುದಾದರಿಂದ ಅವನಿಗೆ ಆ ವಿಷಯದೊಡನೆ ವ್ಯವಹಾರವು ಲೋಪವಾಗಿ ಜೀವನವು ದುಸ್ತರವಾಗುವುದು ಎಂದು ಶಂಕಿಸಬಹುದು ಎಂಬುದು ಒಂದು ಪಕ್ಷ. ಎರಡನೆಯದಾಗಿ ಅರಿಯುವಂತಹದು ಎಂಬುದು ಒಂದು ದ್ರವ್ಯ, ಗುಣ, ಕರ್ಮ ಯಾ ವಸ್ತುವಾಗಿ ಅದರ ವಿಷಯವು ಜ್ಞಾನದಿಂದ ಜನಿತವಾಗಿದೆ ಎಂದು ತಿಳಿಯುವುದು. ಸರ್ವಥಾ ಇದು ಸಾಧ್ಯವಿಲ್ಲ. ಅದರ ಅತೀಂದ್ರಿಯತ್ವವು ಅದಕ್ಕೆ ಆಧಾರವಾದ ವಿಷಯವು ಸ್ಫುರಿಸುವುದಿಲ್ಲ ಎಂದು ತಿಳಿದು 'ಇದು ಮಡಕೆ' ಎಂಬ ವ್ಯವಹಾರವೇ ಉದಯವಾಗುವುದಿಲ್ಲ. ಇಂದ್ರಿಯಗ್ರಾಹ್ಯವಾಗುವುದರಿಂದ ಮಡಕೆಯು ದರ್ಶಿತವಾಗಿ ರೂಪ ಇತ್ಯಾದಿಗಳು ವೇದ್ಯವಾಗುವುವು. ಏಕೆ? ಜ್ಞಾನವು ಸ್ವಜನಿತವಾದರೆ ಅರಿಯುವಿಕೆಯ ಅವಭಾಸವಾಗುವುದಿಲ್ಲವೇ? ಬೇರೆ ಜ್ಞಾನವೂ ಉದಯವಾಗಬಹುದೇ? ಜನ್ಮದಿಂದಲೇ ಅರಿವಿನ ಅವಭಾಸವಾಗುವ ಯೋಗಪದವು ಇಲ್ಲದಿರುವುದರಿಂದ ಕ್ರಮವಾಗಿ ಕಲಿತ ಜ್ಞಾನವು ವಿರಮಿಸಬಹುದು, ಮರೆಯಬಹುದು ಎಂಬ ವ್ಯವಹಾರವು ಸಾಧ್ಯವಾಗುವುದಿಲ್ಲ. ಅದೇ ಪದಾರ್ಥವನ್ನು ಇನ್ನೊಂದು ವಿಧವಾಗಿ ಅರಿತರೆ, ಆ ಇನ್ನೊಂದು ವಿಧವಾದ ಜ್ಞಾನದಿಂದ ಆ ಪದಾರ್ಥಕ್ಕೆ ಅನವಸ್ಥೆಯ ಪ್ರಸಂಗವೇರ್ಪಡಬಹುದು. (ಹಗ್ಗವನ್ನು ಹಾವೆಂದು ಅರಿತಂತೆ). ಆದುದರಿಂದ ಆತ್ಮವೇ ಜ್ಞಾನಜನ್ಯ ಸ್ಫುರಣೆಯ ಉತ್ಪತ್ತಿಕಾರಕವೆಂದು ತಾರ್ಕಿಕರು ಕೂಡ ಅಂಗೀಕರಿಸಿರುವರು. ಅದು ಕೂಡ ಸಮಗ್ರವಲ್ಲ, ಮಡಕೆಯ ಸ್ಫುರಣೆಯಾಗುತ್ತಿದೆ ಎಂದು ಸ್ಫುರಣೆಯಾಗುತ್ತಿರುವುದರ ಘಟತ್ವವು ಸಾಮಾನಾಧಿಕರಣ್ಯದ ಅನುಭವಕ್ಕೆ ವಿರೋಧವಾಗುವುದರಿಂದ. ಪ್ರಮಾಣಸಿದ್ಧವಾಗಿರುವುದು ಸತ್ ಎಂದು ಹೇಳಲ್ಪಡುತ್ತದೆ ಮತ್ತು ಬಾಧಿಸುವ ವಿಷಯಕ ಪ್ರಮಾಣತ್ವದ ನಿಯಮದಿಂದ ಅದನ್ನು ಇತರ ಪ್ರಮಾಣಗಳು ಬಾಧಿಸುವುದು ಶಕ್ಯವಿಲ್ಲ. ಹಾಗಾಗಿ ಅನಿರ್ವಚನೀಯವಾಗಿರುವುದರ ಅನಿರ್ವಚನೀಯತೆಯ ನಿವೃತ್ತಿಗೆ ಪ್ರಮಾಣದಿಂದ ಲಭಿಸುವ ಮೋಹನಿವೃತ್ತಿಯೊಂದೇ ದಾರಿ ಎಂಬುದು ಸಿದ್ಧವಾಗುವುದು. [7–20]

ಹಾಗಾಗಿ, ಉಪನಿಷತ್ತುಗಳಲ್ಲಿರುವ ವಿಷಯಗಳು ಪ್ರಮಾಣಗಳಾಗಿವೆ ಅಥವಾ ಆತ್ಮದ ನಿಜ ಸ್ವರೂಪಜ್ಞಾನದ ಆಕರಗಳಾಗಿವೆ; ಅವು ಆತ್ಮದ ನಿಜ ಸ್ವರೂಪವನ್ನು ಮರೆಮಾಚುವ ಅಜ್ಞಾನದ ತೆರೆಯನ್ನು ಸರಿಸಿ, ಆ ಅಜ್ಞಾನದಿಂದ ಉಂಟಾದ ಬಂಧನವನ್ನು ನಿವಾರಿಸುತ್ತವೆ.

ಅಧ್ಯಾಸ ಯಾ ಭ್ರಮೆ

ಈ ಸಂಸಾರದ ಬಂಧನವು ನಿಜವಲ್ಲ, ಅದು ಆತ್ಮ ಮತ್ತು ದೇಹದ ಸಂಬಂಧವನ್ನು ತಪ್ಪಾಗಿ ಕಲ್ಪಿಸಿಕೊಂಡಿರುವ ಭ್ರಮೆಯ ಕಾರಣದಿಂದ ಉಂಟಾಗಿದೆಯೆಂದು ಈಗ ವಾರ್ತಿಕಕಾರರು ವಿವರಿಸುತ್ತಾರೆ.

जडानृतपरिच्छिन्नदेहधर्माश्चिदात्मनि ।
सत्यज्ञानसुखात्मत्वं मोहाद्देहेपि कल्प्यते ॥ २१ ॥
शुक्तौ रजतमित्येवं यथा व्यामुह्यतेन्यथा ।
सदैव रूप्यं चेद्भाति विलयस्ते न सिध्यति ॥ २२ ॥

ಜಡಾನೃತಪರಿಚ್ಛಿನ್ನದೇಹಧರ್ಮಾಶ್ಚಿದಾತ್ಮನಿ ।
ಸತ್ಯಜ್ಞಾನಸುಖಾತ್ಮತ್ವಂ ಮೋಹಾದ್ದೇಹೇಪಿ ಕಲ್ಪ್ಯತೇ ॥ 21 ॥
ಶುಕ್ತೌ ರಜತಮಿತ್ಯೇವಂ ಯಥಾ ವ್ಯಾಮುಹ್ಯತೇನ್ಯಥಾ ।
ಸದೈವ ರೂಪ್ಯಂ ಚೇದ್ಭಾತಿ ವಿಲಯಸ್ತೇ ನ ಸಿಧ್ಯತಿ ॥ 22 ॥

ಜಡ, ನಿಜವಲ್ಲದ ಮತ್ತು ಸೀಮಿತ ದೇಹದ ಗುಣಧರ್ಮಗಳನ್ನು ಚಿದಾತ್ಮನಿಗೆ ಆರೋಪಿಸಿರುವುದು, ಅಜ್ಞಾನದಿಂದ; ಮತ್ತು ಆತ್ಮದ ಗುಣಗಳಾದ ಸತ್ಯ, ಜ್ಞಾನ ಮತ್ತು ಆನಂದಗಳನ್ನು ದೇಹಕ್ಕೆ ಆರೋಪಿಸುತ್ತೇವೆ; ಮುತ್ತಿನ ಚಿಪ್ಪಿನ ಹೊಳೆಯುವಿಕೆಯಿಂದ ಅದನ್ನು ಬೆಳ್ಳಿ ಎಂದು ತಿಳಿಯುವಂತೆ. ನಮ್ಮ ಜ್ಞಾನದಲ್ಲಿ ಕಾಣಿಸಿಕೊಳ್ಳುವ ಬೆಳ್ಳಿಯು ನಿಜವಾಗಿಯೂ ಚಿಪ್ಪಿನಲ್ಲಿದ್ದಿದ್ದರೆ, ಅದೇ ರೂಪದಲ್ಲಿ ಕಂಡರೂ ಅದು ಇಲ್ಲವಾಗುವುದು ಹೇಗೆ? [7–21..22]

ವಿವೃತ್ತಿ

ಹಾಗೆಯೇ ಎಲ್ಲಾ ಪ್ರಮಾಣಗಳು ತಮ್ಮ ತಮ್ಮ ವಿಷಯಗಳ ಜ್ಞಾನರೂಪದಲ್ಲಿ ಮೋಹನಿವಾರಿಸುವ ಸ್ವಭಾವವುಳ್ಳದ್ದಾವಾಗಿವೆ. ಹಾಗಾಗಿ ವೇದಾಂತವಾಕ್ಯಗಳಿಂದ ತಿಳಿಯುವ ವೃತ್ತಿರೂಪದ ಪ್ರಮಾಣಗಳು ಆತ್ಮನಿಗೆ ಆರೋಪಿಸಿರುವ ಅನಾದಿ ಅನಿರ್ವಚನೀಯ ಅಜ್ಞಾನರೂಪದ ಮೋಹನಿವೃತ್ತಿಯ ಮೂಲಕ ಅದರ ಕಾರ್ಯವಾದ ದೇಹ ಮುಂತಾದವುಗಳ ಬಂಧನ ನಿವೃತ್ತಿಯನ್ನು ಮಾತ್ರ ಮಾಡುವುವು, ಅದಕ್ಕಿಂತ ಹೆಚ್ಚಾಗಿ ಏನೂ ಮಾಡುವುದಿಲ್ಲ ಎಂಬುದನ್ನು ವಿಶದಪಡಿಸುತ್ತಾ, ದೇಹ ಆತ್ಮಗಳ ಪರಸ್ಪರ ಅಧ್ಯಾಸ ನಿಬಂಧನಗಳಿಂದ ಸಂಸಾರಬಂಧನವಿರುವುದು, ಪರಮಾರ್ಥದಲ್ಲಿ ಅಲ್ಲ ಎಂದು ತಿಳಿಸಲು **ಜಡಾನೃತೇತಿ.**

ಹೇಳಿರುವ ದೇಹ ಆತ್ಮಗಳು ಅನ್ಯೋನ್ಯವಾಗಿದ್ದು, ಅನ್ಯೋನ್ಯಧರ್ಮದ ಅಧ್ಯಾಸಕ್ಕೆ ದೃಷ್ಟಾಂತವಾಗಿ **ಶುಕ್ತೌ ರಜತಮಿತಿ.** ***ವ್ಯಾಮುಹ್ಯತೇ*** ಜಗತ್ತು ತಿಳಿಯುತ್ತದೆ. ಕಪ್ಪೆಚಿಪ್ಪು ಎಂಬ ವಸ್ತುವಿನಲ್ಲಿ ಹೊಳೆಯುತ್ತಿರುವುದು ಬೆಳ್ಳಿ ಎಂದು ಅನ್ಯಥಾ ಭಾವಿಸುವುದು. ಹಾಗೆಯೇ ಪರಸ್ಪರ ಅಧ್ಯಾಸರೂಪವಾಗಿ ಲೋಕವು ಮೋಹಿಸುವುದು ಎಂಬ ಅರ್ಥ. ಶುಕ್ತಿಯಲ್ಲಿ ಭಾಸವಾಗುವ ಬೆಳ್ಳಿಯ ಅನಿರ್ವಚನೀಯತೆಯನ್ನು ಉಪಪಾದಿಸುತ್ತಾ ಮಾಯಾಮಯತ್ವವನ್ನು ಸಾಧಿಸಲು **ಸದೇವೇತಿ.** ಸದಾ ಬೆಳ್ಳಿಯ ರೂಪವಾಗಿ ಕಪ್ಪೆಚಿಪ್ಪು ಭಾಸವಾದರೂ, ಅದರಲ್ಲಿ ವಿಲಯವಾಗಿರುವುದು ಸಿದ್ಧವಾಗುವುದಿಲ್ಲ. ಹಾಗೆಂದು ಭಗವಂತನು ಹೇಳಿದ್ದಾನೆ 'ನಾಭಾವೋ ವಿದ್ಯತೇ ಸತಃ' (ಭ.ಗೀ.2–16) ಎಂದು. [7–21..22]

नात्यन्तासत्प्रकाशेत नरशृङ्गादिवत्क्वचित् ।
कान्ताकरादौ रजतमिति स्यात्स्मरणं भ्रमे ॥ २३ ॥

ನಾತ್ಯಂತಾಸತ್ಪ್ರಕಾಶೇತ ನರಶೃಂಗಾದಿವತ್ಕ್ವಚಿತ್ ।
ಕಾಂತಾಕರಾದೌ ರಜತಮಿತಿ ಸ್ಯಾತ್ಸ್ಮರಣಂ ಭ್ರಮೇ ॥ 23 ॥

ಯಾವುದು ಅಸ್ತಿತ್ವದಲ್ಲಿ ಇಲ್ಲವೋ, ಅದು ಅರಿವಿಗೆ ಗೋಚರವಾಗುವುದಿಲ್ಲ, ಮನುಷ್ಯನ ಕೊಂಬಿನಂತೆ. ಆದರೆ ಭ್ರಮೆಯು ನೆನಪಿನ ಆಟವಾದರೆ, ಬೆಳ್ಳಿಯು ಹೆಂಗಸಿನ ಕೈಯಲ್ಲಿರುವ ಆಭರಣದಂತೆ, ಅರಿವಿಗೆ ಗೋಚರವಾಗುವುದು. [7–23]

ವಿವೃತ್ತಿ

ಸತ್ತ್ವದ ನಿಷೇಧದಿಂದ ಅಸತ್ತ್ವವು ಪ್ರಾಪ್ತವಾಗುತ್ತದೆ ಎಂದು ತಿಳಿಸುವ **ನಾತ್ಯಂತಾಸದಿತಿ.** ಸತ್ ಅಸತ್ ಪಕ್ಷಗಳನ್ನು ಪ್ರತ್ಯೇಕವಾಗಿ ದೂಷಿಸುವ ಪ್ರವೃತ್ತಿಯವರು ಸತ್ ಅಸತ್ ಸಮುಚ್ಚಯದ ಪಕ್ಷದವರನ್ನು ನಿಷೇಧಿಸಿದುದರಿಂದಲೇ ಅವುಗಳ ಅರ್ಥನಿಷಿದ್ಧವಾಗುವುದು ವೇದ್ಯವಾಗುವುದು. ಇನ್ನು ಅನ್ಯ ಪ್ರಯೋಗಗಳು ಬೇರೆಯೇ ಆದ ವಿಷಯಜ್ಞಾನವನ್ನು ನೀಡಿದರೆ ಆ ನೆನಪುಗಳು ಅನುಭವಜನಿತವಾಗಿರುವುದಿಲ್ಲ. ಹಾಗಾದರೆ ಭ್ರಾಂತಿ ಎಂದರೇನು? ಎಂಬ ಪ್ರಾಭಾಕರಮತದವರ ಆಶಂಕೆಗೆ ಉತ್ತರವಾಗಿ ಅದರ ಸ್ಮರಣೆಯ ವೈಪರೀತ್ಯವನ್ನು ಸ್ಮರಣೆ ಎಂದು ಹೇಳಲಾಗುವುದಿಲ್ಲ ಎಂದು ತಿಳಿಸಲು **ಕಾಂತಾಕರಾದಾವಿತಿ.** ಈಗ ಇದು ಹಿಂದೆ ನೋಡಿರುವುದೇ ಆಗಿದೆ ಎಂದು ಭಾಸವಾದರೆ ಆಗ ಅಲ್ಲಿ ನೋಡಿರುವಂತಹ ವಸ್ತು ಇದ್ದಿರುವುದರಿಂದ ಅದರ ಅವಭಾಸವಾಗಿದೆ, ಇಲ್ಲದಿದ್ದರೆ ಈಗ ಅಂತಹ ಅವಭಾಸವು ಇರುತ್ತಿರಲಿಲ್ಲ. ದೋಷದಿಂದಾಗಿ ಅದು ಅಲ್ಲಿ ಇಲ್ಲದಿದ್ದರೆ ಅದರ ಅವಭಾಸವಾಗುವುದಿಲ್ಲ, ಆಗ ಅಲ್ಲಿ ಅದರ ಇರುವಿಕೆಯು ನೆನಪಿನಿಂದಲೇ ನಿಶ್ಚಯಿತವಾಗಿ ಹಾಗೆ ಅವಭಾಸವಾಗಿ ಲಭಿಸುವ ಅನುಭವದ ವಿವರಣೆಯಲ್ಲಿ ವಾದ-ವಿವಾದಗಳಿಗೆ ಅವಕಾಶವಾಗುವುದು ಎಂಬ ಭಾವ. [7–23]

ಇಲ್ಲಿ ಅರಿವಿಗೆ ಕಂಡುಬರುವ ಬೆಳ್ಳಿಯು ನಿಶ್ಚಿತವಾಗಿ ಅಸ್ತಿತ್ವದಲ್ಲಿ ಇಲ್ಲ ಎಂದು ಹೇಳಲಾಗುವುದಿಲ್ಲ.

तेनेदं तुल्यमित्येवं स्यात्सादृश्यात्तु विभ्रमः ।
पीतश्शङ्खो गुडस्तिक्त इत्यादौ नास्ति तुल्यता ॥ २४ ॥

ತೇನೇದಂ ತುಲ್ಯಮಿತ್ಯೇವಂ ಸ್ಯಾತ್ಸಾದೃಶ್ಯಾತ್ತು ವಿಭ್ರಮಃ ।
ಪೀತಶ್ಶಂಖೋ ಗುಡಸ್ತಿಕ್ತ ಇತ್ಯಾದೌ ನಾಸ್ತಿ ತುಲ್ಯತಾ ॥ 24 ॥

(ವಸ್ತುಗಳ ನಡುವಿನ) ಹೋಲಿಕೆಗಳಿಂದಾಗಿ ಭ್ರಮೆಯುಂಟಾಗಿದ್ದರೆ, ಆಗ ನಮಗೆ 'ಈ ಮುತ್ತಿನ ಚಿಪ್ಪು ಬೆಳ್ಳಿಯಂತೆಯೇ ಇದೆ' ಎಂಬ ಅರಿವುಂಟಾಗಬೇಕು. ಬಿಳಿಯದಾದ ಶಂಖವು (ಕಾಮಾಲೆ ಕಣ್ಣಿಗೆ) ಹಳದಿಯಾಗಿ ಕಂಡಾಗ ಅಥವಾ ಬೆಲ್ಲವು (ರೋಗ ಗ್ರಸ್ತವಾದ ನಾಲಗೆಗೆ) ಕಹಿಯಾದಾಗ, ಮುಂತಾಗಿ ನಿಜವಾಗಿಯೂ (ಬಣ್ಣಗಳು ಮತ್ತು ರುಚಿಗಳ ನಡುವೆ) ಹೋಲಿಕೆಗಳಿರುವುದಿಲ್ಲ. [7–24]

ವಿವೃತ್ತಿ

ಇನ್ನು ಮುತ್ತಿನಚಿಪ್ಪನ್ನು ನೋಡಿದಾಗ ಬೆಳ್ಳಿಯ ನೆನಪಾಗುವುದರಿಂದ ಅದರ ಮಾಯಾಮಯತ್ವವು ಸಿದ್ಧವಾಗುವುದಿಲ್ಲ. ಹಿಂದೆ ನೋಡಿರುವ ಬೆಳ್ಳಿಯ ಸಾದೃಶ್ಯವು ಕಂಡುಬರುವುದರಿಂದ ಅದರ ಸಂಸ್ಕಾರದ ಬೋಧೆಯಾಗಿ ನೆನಪಾಗಿರುವ ಬೆಳ್ಳಿಯು ಹಿಂದೆ ಆರೋಪಿತವಾಗಿರುವ ಬೆಳ್ಳಿಯೇ ಎಂಬ ಭಾವವು

ಸಂಭವವಿರುವುದು. ನೆನಪಿನಲ್ಲಿರುವ ಬೆಳ್ಳಿ ಮತ್ತು ಆರೋಪಿತ ಬೆಳ್ಳಿಗಳ ಅಭೇದದಿಂದಾಗಿ ಮುತ್ತಿನಚಿಪ್ಪು ಬೆಳ್ಳಿಯದ್ದಾಗಿರುವುದು ಎಂಬ ಅನುಭವವಾಗುವುದು ಎಂಬ ಅನ್ಯಥಾವಾದಿಗಳ ಮತವನ್ನು ದೂಷಿಸುತ್ತಾ **ತೇನೇದಮಿತಿ.** ಬೆಳ್ಳಿಯ ಸಾದೃಶ್ಯವು ಭ್ರಮೆಯಾದರೆ ಆಗ ಇದು ಬೆಳ್ಳಿಯಲ್ಲ ಎಂದು ಹಿಂದಿನ ಸಾದೃಶ್ಯವು ತಿಳಿಸಬೇಕು ಮತ್ತು ಅದರ ಹೋಲಿಕೆಯಿದೆ ಎಂಬ ಅರಿವಾಗಬೇಕು; ಭ್ರಮೆಯ ಉಲ್ಲೇಖದಿಂದ ಅದು ರಜತವಲ್ಲ ಎಂಬ ತಿಳುವಳಿಕೆಯಿರುವುದು ಎಂಬ ಅರ್ಥ. ಏಕೆ? ಸಾದೃಶ್ಯವು ಭ್ರಮೆ ಎಂದು ಹೇಳುವವರನ್ನು ಪ್ರಶ್ನಿಸುತ್ತಾ ಸಾದೃಶ್ಯದ ಭ್ರಮೆಯ ಏಕೆ ವ್ಯಾಪಕವಾದ ವ್ಯಾಪ್ತಿಯನ್ನು ಹೊಂದಿದೆ? ಅದು ಸರಿಯಲ್ಲ ಎಂದು ಹೇಳಲು **ಪೀತ ಶಂಖ ಇತಿ.** ಸಾದೃಶ್ಯದಿಂದಾಗಿ ಹೋಲಿಸಲ್ಪಡುತ್ತದೆ. ಒಂದು ಮುತ್ತಿನಚಿಪ್ಪಿಗೂ, ಇನ್ನೊಂದು ಮುತ್ತಿನಚಿಪ್ಪಿಗೂ ಸಾದೃಶ್ಯವಿರುದು ಸತ್ಯ ಆದರೆ ಅದನ್ನು ಭ್ರಮೆಯಿಂದ ನೋಡಿದರೆ ಅದು ಇರುವುದಿಲ್ಲ ಎಂದು ತೋರಿಸಲಾಗಿದೆ. [7–24]

तादात्म्येन स्फुरति चेद्रजतत्वेन शुक्तिका ।
विभ्रमो निरधिष्ठानो बाधो निरवधिर्भवेत् ॥ २५ ॥

ತಾದಾತ್ಮ್ಯೇನ ಸ್ಫುರತಿ ಚೇದ್ರಜತತ್ವೇನ ಶುಕ್ತಿಕಾ ।
ವಿಭ್ರಮೋ ನಿರಧಿಷ್ಠಾನೋ ಬಾಧೋ ನಿರವಧಿರ್ಭವೇತ್ ॥ 25 ॥

ಆ ಸಮಯದಲ್ಲಿ ಮುತ್ತಿನ ಚಿಪ್ಪು ನಮ್ಮ ಅರಿವಿಗೆ ಬೆಳ್ಳಿಯಾಗಿಯೇ ಯಾ ಬೆಳ್ಳಿಯಂತೆಯೇ ಪ್ರಕಟವಾದರೆ, ಆಗ ಆ ಕುರಿತಾದ ಭ್ರಾಮಕ ಅರಿವಿಗೆ ಯಾವ ಆಧಾರವೂ ಇರುವುದಿಲ್ಲ; ಮತ್ತು ಅನುಭವದಿಂದ ನಿರಾಕರಿಸಲ್ಪಟ್ಟರೆ, (ನಮ್ಮ ಅರಿವಿನಲ್ಲಿ ಮೂಡುವ) ಸತ್ಯವು ಕಾಲಬಾಧಿತವಾಗುವುದಿಲ್ಲ. [7–25]

ವಿವೃತ್ತಿ

ಇನ್ನು ಎರಡನೆಯದಾಗಿ ಅನ್ಯಥಾ ವ್ಯಾಖ್ಯಾನಮಾಡುವವರ ಮತವನ್ನು ದೂಷಿಸುವ **ತಾದಾತ್ಮ್ಯೇನೇತಿ.** ಮುತ್ತಿನ ಚಿಪ್ಪಿನಲ್ಲಿ ಬೆಳ್ಳಿಯ ತಾದಾತ್ಮ್ಯವು ಭ್ರಮೆಯನ್ನು ಅವಲಂಬಿಸಿರುವುದು, ಅದು ಎರಡೂ ಆಗಿರುವುದು ಮಿಥ್ಯೆಯಾಗಿರುವುದರಿಂದ ಸತ್ಯವನ್ನು ವಸ್ತುಸ್ಥಿತಿಯಿಂದ ಬೇರೆಯಾಗಿ ತಿಳಿಯುವುದು ಶೂನ್ಯವಾದದಲ್ಲಿ ಪತನವಾಗುವ ಪ್ರಸಂಗವಾಗಬಹುದು ಎಂಬ ಅರ್ಥವು. ಕೂದಲಿನ ಮೊಟ್ಟೆ ಮುಂತಾದವುಗಳು ಭ್ರಮೆಯಾಗಿ ದೃಶ್ಯವಾಗುವ ಲೋಕದಲ್ಲಿ ಇರುವಂತಹದನ್ನು ಇನ್ನೊಂದು ವಿಧವಾಗಿ ನಿರೂಪಿಸುವುದು, ಅದು ಅಲ್ಲಿ ಇಲ್ಲದಿರುವಾಗಲೂ, ಭ್ರಮೆಯೆಂದು ಕಾಲಬಾಧಿತವಾಗದ ಈ ಉದಾಹರಣೆಯು ತಿಳಿಸುವುದು. ಅದು ಶೂನ್ಯವಾದಿಗಳಿಗೆ ಇಷ್ಟವಾದ ಪ್ರಸಂಗವೂ ಅಲ್ಲ. ಹೀಗೆ ಅಸತ್‌ನ ಪ್ರಸಿದ್ಧಿಯು ನಿರಾಕೃತವಾಯಿತೆಂದು ವೇದ್ಯವಾಗುವುದು. [7–25]

ಮುತ್ತಿನ ಚಿಪ್ಪು ನಮ್ಮ ಅರಿವಿನೊಳಗೆ ಬರದೆ ಬೆಳ್ಳಿಯೊಡನೆ ಏಕತೆ ಹೊಂದಿದೆ ಎಂದು ತಿಳಿದರೆ ಮತ್ತು ಬೆಳ್ಳಿಯ ಅರಿವು ಮಾತ್ರ ಇದ್ದಾಗ, ಅರಿವಿನ ಸ್ಥಿತಿಯು ಭ್ರಾಮಕವಾಗಿರುತ್ತದೆ ಏಕೆಂದರೆ ಅದು ವಸ್ತುಸ್ಥಿತಿಗೆ ದೂರವಾಗಿದೆ. ಅಂದರೆ ನಿಜಸ್ಥಿತಿಯ ಅರಿವಿಲ್ಲದೆ ಮಾಡುವ ಊಹಾಪೋಹಗಳನ್ನು ಭ್ರಮೆಯೆನ್ನುತ್ತಾರೆ ಮತ್ತು ಅದನ್ನು ಪರೀಕ್ಷಿಸಿದಾಗ ಅದು ಕೊನೆಗೊಳ್ಳುತ್ತದೆ. ಹಾಗೆ ಅನುಭವದ ಒಂದು ತಥ್ಯವನ್ನು ನಿಜಸ್ಥಿತಿಯಿಂದ ಸ್ವತಂತ್ರಗೊಳಿಸಿದಾಗ, ಉಳಿಕೆಯ ಅನುಭವಗಳು ಅಸತ್ಯವನ್ನು ಆಧರಿಸಿವೆಯೆಂದು ತಿಳಿಯಲು ಯಾರೂ ತಡೆಯುವುದಿಲ್ಲ. ಭ್ರಮೆಯ ಈ ರೀತಿಯ ವಿವರಣೆಯು ನಮ್ಮನ್ನು ಶೂನ್ಯವಾದದ ತುದಿಗೆ ಕೊಂಡೊಯ್ಯುತ್ತದೆ.

बुद्धिस्थितं चेद्रजतं बाह्यत्वेन प्रतीयते ।
गुञ्जादौ ज्वलनारोपे देहदाहः प्रसज्यते ॥ २६ ॥

ಬುದ್ಧಿಸ್ಥಿತಂ ಚೇದ್ರಜತಂ ಬಾಹ್ಯತ್ವೇನ ಪ್ರತೀಯತೇ ।
ಗುಂಜಾದೌ ಜ್ವಲನಾರೋಪೇ ದೇಹದಾಹಃ ಪ್ರಸಜ್ಯತೇ ॥ 26 ॥

ಬೆಳ್ಳಿಯು ಬುದ್ಧಿಯಲ್ಲಿದ್ದರೆ (ಒಂದು ಸೂಚನೆಯ ರೀತಿಯಲ್ಲಿ), ಬಾಹ್ಯವಾಗಿ ಭಾಸವಾಗುತ್ತದೆ; ಗುಲಗುಂಜಿಯ ಬೀಜವನ್ನು ಬೆಂಕಿಯೆಂದು ಭಾವಿಸಿದರೆ, ನಮ್ಮ ದೇಹ ಸುಡುತ್ತಿರುವ ಹಾಗೆ ಭಾಸವಾದಂತೆ. [7–26]

ವಿವೃತ್ತಿ

ಇದರಲ್ಲಿ ಆತ್ಮ ಪ್ರಸಿದ್ಧಿಯ ಪಕ್ಷವನ್ನೂ ನಿರಾಕರಿಸಿದೆ– **ಬುದ್ಧಿಸ್ಥಿತಮಿತಿ.** [7–26]

ಬುದ್ಧಿಯಲ್ಲಿ ಪ್ರಕಟವಾಗುವ ಬೆಳ್ಳಿಯು ನಿಜವಾಗಿದೆ ಹಾಗೂ ಅದು ಅಲ್ಲಿ ಒಂದು ಸೂಚನೆಯಂತೆ ಇದ್ದು ಬಾಹ್ಯವಾಗಿ ಪ್ರತೀತವಾಗುತ್ತದೆ ಎಂದು ಕೆಲವರು ಆಲೋಚಿಸುತ್ತಾರೆ. ಆಗ ಕೆಂಪಾಗಿರುವ ಒಂದು ಗುಲಗುಂಜಿಯ ಬೀಜವನ್ನು ಬೆಂಕಿಯೆಂದು ತಪ್ಪಾಗಿ ತಿಳಿದರೆ, ಆ ಬೆಂಕಿಯೂ ನಿಜವಾಗಿದ್ದು, ಸೂಚ್ಯವಾಗಿ ಅಸ್ತಿತ್ವವನ್ನು ಹೊಂದಿ ಬಾಹ್ಯವಾಗಿ ಭಾಸವಾಗಬೇಕು, ಬೌದ್ಧ ತಾತ್ವಿಕರು ಹೇಳುವ ಹಾಗೆ. ಬೇರೆ ಬೆಂಕಿಯಂತೆ, ಈ ಬೆಂಕಿಯೂ ತಾನು ಇರುವ ದೇಹವನ್ನು ಸುಡಬೇಕು.

युक्तिहीनप्रकाशत्वात् भ्रान्तेर्न ह्यस्ति लक्षणम् ।
यदि स्याल्लक्षणं किञ्चिद्भ्राान्तिरेव न सिध्यति ॥ २७ ॥

ಯುಕ್ತಿಹೀನಪ್ರಕಾಶತ್ವಾತ್ ಭ್ರಾಂತೇರ್ನ ಹ್ಯಸ್ತಿ ಲಕ್ಷಣಮ್ ।
ಯದಿ ಸ್ಯಾಲ್ಲಕ್ಷಣಂ ಕಿಂಚಿದ್ಭ್ರಾಂತಿರೇವ ನ ಸಿದ್ಧ್ಯತಿ ॥ 27 ॥

ಭ್ರಮೆಯು ಒಂದು ಯುಕ್ತಿರಹಿತ ಪ್ರಕಟಣೆಯಾದುದರಿಂದ, ಅದನ್ನು ಹೀಗೆಯೇ ಎಂದು (ಸತ್ ಯಾ ಅಸತ್) ಹೇಳಲಾಗದು. ಹಾಗೆ ಹೇಳಬಹುದಾದರೆ, ಆಗ ಭ್ರಮೆಯಿರುವುದಿಲ್ಲ. [7–27]

ವಿವೃತ್ತಿ

ಒಂದುವೇಳೆ ಏನೋಸ್ವಲ್ಪ ಮುತ್ತಿನಚಿಪ್ಪಿನಲ್ಲಿ ಬೆಳ್ಳಿಯು ಸತ್ ಆಗಿ ಯಾ ಅಸತ್ ಆಗಿ ಭಾಸವಾಗದೆ ಇದು ಎಂತಹ ಅಲೌಕಿಕ ವಸ್ತು ಎಂಬ ಉದ್ಗಾರವು ಬಂದರೆ, ಬುದ್ಧಿಯಲ್ಲಿ ಇಲ್ಲದಿರುವ ಮುತ್ತಿನಚಿಪ್ಪಿನ ಬೆಳ್ಳಿ ಏನಾಗುವುದು ಎಂದು ಶಂಕಿಸಿ ಯಾವ ರೂಪವಾಗಿ ತಿಳಿಯುವುದರಿಂದ ಪ್ರಾಮಾಣಿಕ ಜ್ಞಾನದ ಉದಯವಾಗುವ ಸಂಭವವಿರುವುದು ಎಂದು ತಿಳಿಸುತ್ತಾ, ರಜತಜ್ಞಾನದ ಭ್ರಾಂತಿತ್ವವು ಪ್ರಸಿದ್ಧವಾಗಿಲ್ಲ ಎಂಬ ಅಭಿಪ್ರಾಯವನ್ನು ಹೇಳುವ **ಯುಕ್ತಿಹೀನ ಇತಿ.** [7–27]

ಹೀಗೆ, ಬೆಳ್ಳಿಯ ಪ್ರಕಟಣೆಯನ್ನು, ಮೇಲೆ ತೋರಿಸಿದ ಯಾವುದೇ ರೀತಿಯಲ್ಲಿಯೂ ಸಮರ್ಥಿಸಲು ಆಗುವುದಿಲ್ಲ; ಅದನ್ನು ಇದೆ ಯಾ ಇಲ್ಲವೆಂದು ನಿಶ್ಚಿತವಾಗಿ ಹೇಳಲಾಗುವುದಿಲ್ಲ. ಅದನ್ನು ಹೀಗಿದೆ ಅಥವಾ ಹಾಗಿದೆ ಎಂದು

ಹೇಳಬಹುದಾದರೆ, ಅದು ಭ್ರಮೆಯಾಗಿರುವುದಿಲ್ಲ ಮತ್ತು ಯಾವುದೇ ಜ್ಞಾನವು ಅದನ್ನು ನಿರಾಕರಿಸಲಾರದು; ಇದು ನಮ್ಮ ಅನುಭವಕ್ಕೆ ವಿರೋಧವಾದ ನಿಶ್ಚಯವಾಗಿದೆ.

ಇದುವರೆಗೆ ಭ್ರಮೆಯ ಸ್ವರೂಪವನ್ನು ಉದಾಹರಣೆ ಸಹಿತ ವಿವರಿಸಿದ ವಾರ್ತಿಕಕಾರರು, ಸಂಪೂರ್ಣ ವಿಶ್ವವು ಆತ್ಮದ ಒಂದು ಭ್ರಾಮಕ ಪ್ರಕಟಣೆ ಎಂದು ಇತ್ಯರ್ಥ ಮಾಡುತ್ತಾರೆ.

जलचन्द्रवदेकस्मिन् निर्भये रज्जुसर्पवत् ।
प्रतियते यथा स्वर्णे कारणे कटकादिवत् ॥ २८ ॥

ಜಲಚಂದ್ರವದೇಕಸ್ಮಿನ್ ನಿರ್ಭಯೇ ರಜ್ಜುಸರ್ಪವತ್ ।
ಪ್ರತೀಯತೇ ಯಥಾ ಸ್ವರ್ಣೇ ಕಾರಣೇ ಕಟಕಾದಿವತ್ ॥ 28 ॥

ಒಂದೇ (ಆತ್ಮವು) ಅನೇಕವಾಗಿ ಕಾಣುತ್ತದೆ, ಒಬ್ಬ ಚಂದ್ರನು ಅನೇಕ ಕಲಶಗಳಲ್ಲಿರುವ ನೀರುಗಳಲ್ಲಿ ಅನೇಕವಾಗಿ ಕಾಣುವಂತೆ; ಹೆದರಿಕೆಯಿಲ್ಲದವರು ಹಗ್ಗದಲ್ಲಿ ಹಾವನ್ನು ಕಂಡು ಹೆದರಿದಂತೆ. ಕಾರಣವು ಕಾರ್ಯದಂತೆ ಕಂಡುಬರುತ್ತದೆ, ಚಿನ್ನವು ಕಡಗವಾಗಿ ಕಾಣುವಂತೆ. [7–28]

ವಿವೃತ್ತಿ

ಉದಾಹರಣೆಯಿಂದ ಮಾಯಾಮಯತ್ವವನ್ನು ಉಪಪಾದಿಸಿ, ಉದಾಹರಿಸಲ್ಪಟ್ಟುದರ ಮಾಯಾಮಯತ್ವವು ಸಿದ್ಧವಾಗಿ, ಇನ್ನೊಂದು ದೃಷ್ಟಾಂತದ ಮೂಲಕ ವಾದವನ್ನು ಉಪಸಂಹರಿಸುವ **ಜಲಚಂದ್ರವದಿತಿ.** ಒಬ್ಬನೇ ಆಗಿರುವ ಚಂದ್ರನು ನೀರಿನ ಪಾತ್ರೆಗಳ ಉಪಾಧಿಭೇದದಿಂದ ಅನೇಕನಾಗಿ ಕಾಣುವಂತೆ, ಒಂದೇ ಆಗಿರುವ ಚಿದಾನಂದ ಅದ್ವಯ ಆತ್ಮವು ದೇಹವೆಂಬ ಉಪಾಧಿಭೇದದಿಂದ ಅನೇಕತ್ವವನ್ನು ಹೊಂದಿರುವಂತೆ ಅವಭಾಸವಾಗುವುದು ಎಂದು ದೃಷ್ಟಾಂತದ ಅರ್ಥವನ್ನು ವಿವರಿಸಬಹುದು. ***ನಿರ್ಭಯೇ*** ಭಯಪಡಲು ಕಾರಣವಿಲ್ಲದ ಚಿದಾತ್ಮನು ***ರಜ್ಜುಸರ್ಪವತ್*** ಸಂಸಾರಭಯವನ್ನು ಅನುಭವಿಸುತ್ತಾನೆ ಎಂದು ಎರಡನೆಯ ದೃಷ್ಟಾಂತದ ಅರ್ಥವು. ಒಂದೇ ಆಗಿರುವುದು ಅನೇಕವಾಗಿ ಪ್ರತೀತವಾಗಿ ನಿರ್ಭಯನು ಭಯದಿಂದ ಕೂಡಿರುವಂತೆ ಪ್ರತೀತವಾಗುವುದು ಎಂದು ಯೋಜಿಸಿಕೊಳ್ಳುವುದು. ಇಲ್ಲಿ ಆಶ್ರಯಿಸಿರುವ ಕಾರ್ಯಕಾರಣ ವಾದವು ಲೋಕಪ್ರಸಿದ್ಧವಾಗಿದ್ದು, ಕಾರಣದಿಂದ ಬೇರೆಯಾಗಿ ಕಾರ್ಯವಿರುವುದಿಲ್ಲ ಎಂಬ ದೃಷ್ಟಾಂತವನ್ನು ತಿಳಿಸಲು **ಯಥಾ ಸ್ವರ್ಣ ಇತಿ.** ಕಡಗವು ಸತ್ಯವಾಗಿರುವುದು ಸ್ವರ್ಣದ ಕಾರಣವಾಗಿ ಎಂಬ ಅರ್ಥ. [7–28]

उपात्ते रूप्यवच्छुक्तौ व्याप्ते यक्षपुरीव खे ।
रश्म्यम्बुवत्स्फुरद्रूपे स्थाणौ चोरवदक्रिये ॥ २९ ॥
असत्कल्पमिदं विश्वं आत्मन्यारोप्यते भ्रमात् ॥

ಉಪಾತ್ತೇ ರೂಪ್ಯವಚ್ಛುಕ್ತೌ ವ್ಯಾಪ್ತೇ ಯಕ್ಷಪುರೀವ ಖೇ ।
ರಶ್ಮ್ಯಂಬುವತ್ಸ್ಫುರದ್ರೂಪೇ ಸ್ಥಾಣೌ ಚೋರವದಕ್ರಿಯೇ ॥ 29 ॥
ಅಸತ್ಕಲ್ಪಮಿದಂ ವಿಶ್ವಂ ಆತ್ಮನ್ಯಾರೋಪ್ಯತೇ ಭ್ರಮಾತ್ ।

ಭ್ರಮೆಯ ಕಾರಣದಿಂದ ಈ ಅಸ್ತಿತ್ವವಿಲ್ಲದ ಜಗತ್ತನ್ನು ಆತ್ಮದಲ್ಲಿದೆ – ಒಂದು ಸ್ವಯಂ ಅಸ್ತಿತ್ವವುಳ್ಳದರಲ್ಲಿ, ಮುತ್ತಿನ ಚಿಪ್ಪಿನಲ್ಲಿದ್ದ ಬೆಳ್ಳಿಯಂತೆ; ಸರ್ವವ್ಯಾಪಿಯಾಗಿರುವುದರಲ್ಲಿ, ಯಕ್ಷ ನಗರವು ಆಕಾಶದಲ್ಲಿದ್ದಂತೆ; ಒಂದು ಹೊಳೆಯುವುದರಲ್ಲಿ, ಸೂರ್ಯನ ಕಿರಣದಿಂದ ಹೊಳೆಯುವ ಮರೀಚಿಕೆಯಂತೆ; ಒಂದು ಸ್ಥಿರವಾದುದರಲ್ಲಿ, ಕಂಬದಲ್ಲಿ ಕಂಡ ಚೋರನಂತೆ – ಎಂದು ಆರೋಪಿಸಲಾಗಿದೆ. [7–29..30]

ವಿವೃತ್ತಿ

ಇಲ್ಲಿ ಶ್ರುತಿ ಯುಕ್ತಿಗಳಿಂದ ನಿರ್ಣಿತವಾಗಿ ತಾನೇ ತಾನಾಗಿ ಅಧಿಷ್ಠಿತವಾಗಿರುವ ಸತ್ತ್ವವು ವಿವರ್ತವಾದವನ್ನು ಆಶ್ರಯಿಸಿ ದೃಶ್ಯವಾಗುವುದಿಲ್ಲ ಎನ್ನುವವರಿಗೆ ಅದರಲ್ಲಿ ಅಧಿಷ್ಠಿತವಾಗಿರುವ ಜಗತ್ತು ಭ್ರಾಂತಿಯೆಂದು ಸಿದ್ಧವಾಗಿದೆ ಎಂದು ದೃಷ್ಟಾಂತವನ್ನು ನೀಡುತ್ತಾ **ಉಪಾತ್ತ ಇತಿ.** ಸ್ವಯಂಸಿದ್ಧವಾಗಿರುವ ಚಿದಾತ್ಮನಲ್ಲಿ ಈ ವಿಶ್ವವನ್ನು ಕಲ್ಪಿಸಿರುವುದು ಅಸತ್, ಸತ್ಯವಲ್ಲ, ಮುತ್ತಿನಚಿಪ್ಪಿನಲ್ಲಿನ ಬೆಳ್ಳಿಯಂತೆ. ಅಪರಿಚ್ಛಿನ್ನವಾಗಿ ವ್ಯಾಪಿಸಿ ಕೂಟಸ್ಥವಾಗಿರುವ ಚಿದಾತ್ಮನನ್ನು ವಿಶ್ವವೆನ್ನುವುದು, ಆಕಾಶದಲ್ಲಿರುವ ಗಂಧರ್ವನಗರದಂತೆ. ಅಂತೆಯೇ ಅಸತ್ ಕಲ್ಪನೆ ಎಂದು ಎಲ್ಲೆಡೆಯೂ ಸೇರಿಸಿಕೊಳ್ಳುವುದು. ಸ್ವಯಂಪ್ರಕಾಶದಿಂದ ಸ್ಫುರಿಸುವ ರೂಪದ ಚಿದಾತ್ಮನು ಬೆಳಕಿನ ಬಾಣವೆನ್ನುವುದು ಮರೀಚಿಕೆಯಲ್ಲಿರುವ ನೀರಿನಂತೆ. ಅಕ್ರಿಯನಾಗಿ ನಿರ್ವ್ಯಾಪಾರವುಳ್ಳ ಚಿದಾತ್ಮನನ್ನು ವ್ಯವಹರಿಸುವ ವಸ್ತುವಿನ ಅಧ್ಯಾಸದಿಂದ ಹೇಳುವುದು ಸ್ಥಿರವಾದ ಕಂಬದಲ್ಲಿ ಕಳ್ಳನ ಅಧ್ಯಾಸವಿದ್ದಂತೆ. ***ಭ್ರಮಾತ್*** ಮಿಥ್ಯಾಜ್ಞಾನದಿಂದ ಮಿಥ್ಯಾರೋಪಗಳನ್ನು ಮಾಡಿ ವ್ಯವಹರಿಸುತ್ತಿರುವುದು ಎಂಬ ಅರ್ಥದಲ್ಲಿದೆ. [7–29..30]

स्वयंप्रकाशं सद्रूपं भ्रान्तिबाधविवर्जितम् ॥ ३० ॥
प्रत्यभिज्ञायते वस्तु प्राग्वन्मोहे व्यपोहिते ।
देहाद्युपाधौ निर्धूते स्यादात्मैव महेश्वरः ॥ ३१ ॥

ಸ್ವಯಂಪ್ರಕಾಶಂ ಸದ್ರೂಪಂ ಭ್ರಾಂತಿಬಾಧವಿವರ್ಜಿತಮ್ ॥ 30 ॥
ಪ್ರತ್ಯಭಿಜ್ಞಾಯತೇ ವಸ್ತು ಪ್ರಾಗ್ವನ್ಮೋಹೇ ವ್ಯಪೋಹಿತೇ ।
ದೇಹಾದ್ಯುಪಾಧೌ ನಿರ್ಧೂತೇ ಸ್ಯಾದಾತ್ಮೈವ ಮಹೇಶ್ವರಃ ॥ 31 ॥

ಭ್ರಾಂತಿಯನ್ನು ಕಳೆದಾಗ, ಭ್ರಮೆ ಮತ್ತು ವಿರೋಧಾಭಾಸಗಳಿಗೆ ತುತ್ತಾಗದ ಸ್ವಪ್ರಕಾಶಿತ ನಿಜಸ್ವರೂಪವು ಅದರಂತೆಯೇ ಗುರುತಿಸಲ್ಪಡುವುದು. ದೇಹ ಮತ್ತಿತರ ಉಪಾಧಿಗಳನ್ನು ಕಳಚಿದರೆ, ಆತ್ಮವು ಮಹೇಶ್ವರನೇ ಆಗಿದೆ. [7–30..31]

ವಿವೃತ್ತಿ

ಹಾಗೆ ಜೀವಭೇದವಿರುವ ಬಾಹ್ಯಪ್ರಪಂಚವು ಅವಿದ್ಯೆಮಾತ್ರವಾಗಿದ್ದು, ವಿದ್ಯೆಯು ಅದನ್ನು ತೊಲಗಿಸಿದಾಗ ಅದ್ವೈತ ಆನಂದ ಬ್ರಹ್ಮಸ್ವರೂಪದಿಂದ ಆತ್ಮವು ಅವಭಾಸವಾಗುವುದು ಎಂದು ಉಪಸಂಹರಿಸುವ **ಸ್ವಯಂ ಪ್ರಕಾಶಮಿತಿ.** ***ಭ್ರಾಂತಿಭಾಧಾವಿವರ್ಜಿತಮ್*** ಆಗಮಿಕವಲ್ಲದ ಧರ್ಮವನ್ನು ತ್ಯಜಿಸಿದಾಗ ಎಂಬ ಅರ್ಥ. ***ವಸ್ತು*** ಪರಮಾರ್ಥದಿಂದ ***ಮೋಹೇ ವ್ಯಪೋಹಿತೇ*** ತತ್ತ್ವಜ್ಞಾನದಿಂದ ಅಜ್ಞಾನವನ್ನು ತೊಡೆದುಹಾಕಿದಾಗ ಯಥಾವಸ್ಥೆಯ ಸ್ವರೂಪವು ***ಪ್ರತ್ಯಭಿಜ್ಞಾಯತೇ*** ಸಾಕ್ಷಾತ್ಕರಿಸಲ್ಪಡುವುದು.

ಕಾರಣವಾದ ಅವಿದ್ಯೆಯನ್ನು ಬಾಧಿಸಿದರೆ ಅದರ ಕಾರ್ಯವೂ ಬಾಧಿತವಾಗುವುದು; ಆತ್ಮತತ್ತ್ವದ ಬ್ರಹ್ಮಸ್ವರೂಪವು ಅವಭಾಸವಾಗುವುದನ್ನು ಪ್ರತಿಬಂಧಿಸುವ ವಿಷಯದ ಅಭಾವದಲ್ಲಿ ಆತ್ಮವೇ ಈಶ್ವರನೆಂದು ಉಪಲಕ್ಷಿತವಾಗಿರುವ ಬ್ರಹ್ಮ ಆಗಿರುವುದು ಎಂದು ತಿಳಿಸುವ **ದೇಹಾದ್ಯುಪಾಧಾವಿತಿ.** [7–30..31]

स्मृतिः प्रत्यक्षमैतिह्यमित्यादीन्यपराण्यपि ।
प्रमाणान्याप्तवागाह प्रत्यभिज्ञाप्रसिद्धये ॥ ३२ ॥

ಸ್ಮೃತಿಃ ಪ್ರತ್ಯಕ್ಷಮೈತಿಹ್ಯಮಿತ್ಯಾದೀನ್ಯಪರಾಣ್ಯಪಿ ।
ಪ್ರಮಾಣಾನ್ಯಾಪ್ತವಾಗಾಹ ಪ್ರತ್ಯಭಿಜ್ಞಾಪ್ರಸಿದ್ಧಯೇ ॥ 32 ॥

ಸ್ಮೃತಿ, ಪ್ರತ್ಯಕ್ಷ, ಐತಿಹ್ಯ ಮತ್ತು ಇತರ ಪ್ರಮಾಣಗಳಿಂದ ಆಪ್ತವಾಕ್ಯವು ಆತ್ಮದ ಗುರುತನ್ನು ತಿಳಿಸುತ್ತದೆ. [7–32]

ವಿವೃತ್ತಿ

ಯುಕ್ತಿಯನ್ನು ಪ್ರಮಾಣವಾಗಿ ಉಪಪಾದಿಸಲು **ಸ್ಮೃತಿರಿತಿ.** 'ಕ್ಷೇತ್ರಜ್ಞಂಚಾಪಿ ಮಾಂ ವಿದ್ಧಿ' (ಭ.ಗೀ.13–2), 'ನ ಚ ಮತ್ಸ್ಥಾನಿ ಭೂತಾನಿ ಪಶ್ಯ ಮೇ ಯೋಗಮೈಶ್ವರಮ್' (ಭ.ಗೀ.9–5) ಇತ್ಯಾದಿ ಸ್ಮೃತಿಗಳು. ***ಪ್ರತ್ಯಕ್ಷಂ*** ಬ್ರಹ್ಮವೇ ಆಗಿದ್ದೇನೆ ಎಂಬ ವಿದ್ವಜ್ಜನರ ಅನುಭವಗಳು. ***ಐತಿಹ್ಯಂ*** ಗುರುವಿನಿಂದ ಉಪದೇಶಿತವಾದ ತತ್ತ್ವಮಸಿ ಮುಂತಾದ ವಾಕ್ಯಗಳು. *ಆದಿ* ಶಬ್ದದಿಂದ ಅನುಮಾನವು ಗ್ರಹಿಸಲ್ಪಡುವುದು. ಜೀವ ಈಶ್ವರರು ತತ್ತ್ವತಃ ಭಿನ್ನರಲ್ಲ, ಏಕಸ್ವಭಾವದವರಾಗಿ ಉಪಾಧಿಯ ಪರಾಮರ್ಶೆಯಿಂದ ಅವರೊಳಗಿನ ವ್ಯತ್ಯಾಸವು ಭೇದವಾಗಿ ಭಾವಿಸಲ್ಪಡುವುದು, ಆಕಾಶದಂತೆ ಮುಂತಾದವುಗಳು ಅನುಮಾನವು. ಅದು ವಿಶೇಷಣವಾಗಿಯೂ ಸಿದ್ಧವಾಗುವುದಿಲ್ಲ; 'ಸತ್ಯಂ ಜ್ಞಾನಂ' (ತೈ.ಉ.2–1), 'ಪ್ರಜ್ಞಾನಘನ ಏವ' (ಮಾಂ.ಉ.5) ಎಂದು ಉಭಯರ ಚಿತ್ಸ್ವಭಾವವು ಕೇಳಿಬರುವುದರಿಂದ. ***ಆಪ್ತವಾಗಾಹ*** 'ಸ್ಮೃತಿಃ ಪ್ರತ್ಯಕ್ಷಮೈತಿಹ್ಯಂ । ಅನುಮಾನಶ್ಚತುಷ್ಟಯಮ್ । ಏತೈರಾದಿತ್ಯಮಂಡಲಮ್ । ಸರ್ವೈರೇವ ವಿಧಾಸ್ಯತೇ' (ತೈ.ಆ.1–2) ಎಂಬ ಶ್ರುತಿಯಂತೆ ಎಂಬ ಅರ್ಥವು. ಆದಿತ್ಯಮಂಡಲವೆಂಬ ಅಧ್ಯಾತ್ಮ, ಅಧಿದೈವವು ಕಣ್ಣುಗಳಿಗೆ ಗೋಚರವಾಗಿ ಉಪಲಕ್ಷಿತವಾದ ಆದಿತ್ಯಮಂಡಲವು ಪ್ರತ್ಯಕ್ಷ ಬ್ರಹ್ಮತತ್ತ್ವವು ಎಂದು ವಿಧಿಸಲ್ಪಡುತ್ತದೆ ಎಂಬುದು ಉದಾಹರಿಸಿರುವ ಶ್ರುತಿಯ ಅರ್ಥವು. ***ಪ್ರತ್ಯಭಿಜ್ಞಾಪ್ರಸಿದ್ಧಯ*** ನಾನೇ ಬ್ರಹ್ಮ, ಬ್ರಹ್ಮನೇ ನಾನು ಎಂಬ ಬ್ರಹ್ಮ ಆತ್ಮದ ಏಕತ್ವವು ಪ್ರಸಿದ್ಧವಾಗಿದೆ ಎಂಬ ಅರ್ಥ. [7–32]

'ಸ್ಮೃತಿ, ಪ್ರತ್ಯಕ್ಷ, ಐತಿಹ್ಯ ಮತ್ತು ಶುದ್ಧ ಅನುಮಾನ' ಇವೆಲ್ಲವುಗಳಿಂದ ಸೂರ್ಯನನ್ನು ತಿಳಿಯಬಹುದು. (ತೈತ್ತರೀಯ ಆರಣ್ಯಕ 1.2). ಸ್ಮೃತಿ: ಭಗವದ್ಗೀತೆ ಇತ್ಯಾದಿ; ಪ್ರತ್ಯಕ್ಷ: ಋಷಿಗಳ ದರ್ಶನ; ಐತಿಹ್ಯ: ಋಷಿಗಳ ಸಾಂಪ್ರದಾಯಿಕ ಪಠ್ಯ; ಅನುಮಾನ: ತಾರ್ಕಿಕ ನಿಲುವು. ಇವೆಲ್ಲವೂ ಬ್ರಹ್ಮ ಮತ್ತು ಆತ್ಮದ ಏಕತೆಯನ್ನು ಸೂಚಿಸುತ್ತದೆ.

इति श्रीदक्षिणामूर्तिस्त्रोत्रार्थप्रतिपादके ।
प्रबन्धे मानसोल्लासे सप्तमोल्लाससङ्ग्रहः ॥ ३३ ॥

ಇತಿ ಶ್ರೀದಕ್ಷಿಣಾಮೂರ್ತಿಸ್ತ್ರೋತ್ರಾರ್ಥಪ್ರತಿಪಾದಕೇ ।

ಪ್ರಬಂಧೇ ಮಾನಸೋಲ್ಲಾಸೇ ಸಪ್ತಮೋಲ್ಲಾಸಸಂಗ್ರಹಃ ॥ 33 ॥

ಶ್ರೀದಕ್ಷಿಣಾಮೂರ್ತಿ ಸ್ತೋತ್ರದ ಅರ್ಥವನ್ನು ಪ್ರತಿಪಾದಿಸುವ ಮಾನಸೋಲ್ಲಾಸವೆಂಬ ಪ್ರಬಂಧದ ಏಳನೆಯ ಉಲ್ಲಾಸದ ವಿವರಣೆಯು ಇಲ್ಲಿಗೆ ಮುಗಿಯಿತು. [7–33]

ವಿವೃತ್ತಿ

ಏಳನೆಯ ಶ್ಲೋಕದ ವ್ಯಾಖ್ಯೆಯನ್ನು ಉಪಸಂಹರಿಸುವ **ಇತೀತಿ.** [7–33]

ಇತಿ ಶ್ರೀಮಾನಸೋಲ್ಲಾಸವೃತ್ತಾಂತೇ ಸಪ್ತಮೋಲ್ಲಾಸಃ ಸಮಾಪ್ತಃ ।

ಅಷ್ಟಮೋಲ್ಲಾಸಃ

ಮಾಯೆ

ಬಂಧನ, ಮುಕ್ತಿ ಮತ್ತು ಮಾಯೆ

प्रकाशव्यतिरेकेण पदार्थः कोपि नास्ति चेत् ।
परमार्थोपदेशान्तो व्यवहारः कथं भवेत् ॥ १ ॥

ಪ್ರಕಾಶವ್ಯತಿರೇಕೇಣ ಪದಾರ್ಥಃ ಕೋಽಪಿ ನಾಸ್ತಿ ಚೇತ್ ।
ಪರಮಾರ್ಥೋಽಪದೇಶಾಂತೋ ವ್ಯವಹಾರಃ ಕಥಂ ಭವೇತ್ ॥ 1 ॥

ಪ್ರಕಾಶವನ್ನು ಹೊರತುಪಡಿಸಿ ಬೇರಾವ ವಸ್ತುಗಳ ಅಸ್ತಿತ್ವವಿಲ್ಲವೆಂದಾದರೆ, ಪರಮಾರ್ಥ ಜ್ಞಾನವನ್ನು ಗಳಿಸಿದ ನಂತರ ಅನುಭವಗಳು ಹೇಗಾಗುತ್ತವೆ? [8–1]

ವಿವೃತ್ತಿ

ಇನ್ನು ಎಲ್ಲಾ ಶಾಸ್ತ್ರಾರ್ಥಗಳನ್ನು ಉಪಸಂಹರಿಸುವ ಉದ್ದೇಶದ ಮುಂದಿನ ಶ್ಲೋಕವನ್ನು ಉದ್ಧರಿಸಲು **ಪ್ರಕಾಶವ್ಯತಿರೇಕೇಣೇತಿ.** ವಸ್ತುತಃ ಕಾಲತ್ರಯಗಳಲ್ಲಿಯೂ ಚಿತ್ಪ್ರಕಾಶವನ್ನು ಹೊರತುಪಡಿಸಿ ಯಾವುದೇ ಭೂತ ಭೌತಿಕ ಪದಾರ್ಥವು ಇರುವುದಿಲ್ಲವಾದರೆ***ಪರಮಾರ್ಥೋಽಪದೇಶಾಂತೋ*** ಗುರುವಿನಿಂದ ತತ್ತ್ವಜ್ಞಾನಗ್ರಹಣದ ಉಪದೇಶವಾದ ಬಳಿಕ ಹಿಂದಿನ ಸಂಸಾರರೂಪದ ವ್ಯವಹಾರಗಳು ಯಾವುದನ್ನು ಅವಲಂಬಿಸುತ್ತವೆ? [8–1]

कस्य बन्धश्च मोक्षश्च बध्यते केन हेतुना ।
मायाया लक्षणं किं स्यत् इत्येवं परिपृच्छतः ॥ २ ॥
प्रश्नस्स्यादुत्तरं वक्तुं प्रतिपत्तुं सुखेन च ।
उक्तोर्थस्सप्तभिश्श्लोकौः पुनस्संक्षिप्य कथ्यते ॥ ३ ॥

ಕಸ್ಯ ಬಂಧಶ್ಚ ಮೋಕ್ಷಶ್ಚ ಬಧ್ಯತೇ ಕೇನ ಹೇತುನಾ ।
ಮಾಯಾಯಾ ಲಕ್ಷಣಂ ಕಿಂ ಸ್ಯಾತ್ ಇತ್ಯೇವಂ ಪರಿಪೃಚ್ಛತಃ ॥ 2 ॥
ಪ್ರಶ್ನಸ್ಸ್ಯಾದುತ್ತರಂ ವಕ್ತುಂ ಪ್ರತಿಪತ್ತುಂ ಸುಖೇನ ಚ ।
ಉಕ್ತೋಽರ್ಥಸ್ಸಪ್ತಭಿಶ್ಶ್ಲೋಕೌಃ ಪುನಸ್ಸಂಕ್ಷಿಪ್ಯ ಕಥ್ಯತೇ ॥ 3 ॥

ಯಾರು ಬಂಧನಕ್ಕೊಳಗಾಗಿದ್ದಾರೆ ಮತ್ತು ಮುಕ್ತಿಯನ್ನು ಪಡೆದಿದ್ದಾರೆ? ಯಾವ ಕಾರಣಕ್ಕಾಗಿ ಬಂಧನಕ್ಕೊಳಗಾಗಿದ್ದಾರೆ? ಮಾಯೆಯ ಲಕ್ಷಣಗಳು ಯಾವುವು? ಹೀಗೆಂದು ಕೆಲವರು ಪ್ರಶ್ನಿಸಬಹುದು. ಈ ಪ್ರಶ್ನೆಗಳಿಗೆ ಉತ್ತರವಾಗಿ ಮತ್ತು ಪ್ರಶ್ನಕರಿಗೆ ಸುಲಭವಾಗಿ ಅರ್ಥವಾಗುವಂತೆ, ಹಿಂದಿನ ಏಳು ಶ್ಲೋಕಗಳಲ್ಲಿ ತಿಳಿಸಿದ್ದನ್ನು ಈಗ ಪುನಃ ಸಂಕ್ಷಿಪ್ತವಾಗಿ ಹೇಳುತ್ತೇವೆ. [8–2..3]

ವಿವೃತ್ತಿ

ಅದು ಮಾತ್ರವಲ್ಲದೆ ಅವುಗಳು ಘಟಿಸುವುದೂ ಇಲ್ಲ ಎಂದು ಹೇಳುವ **ಕಸ್ಯೇತಿ.** ಬಂಧನದ ಅಭಾವದಲ್ಲಿ ಮೋಕ್ಷವು ಹೇಗಾಗುವುದು ಅಂದರೆ ಬಂಧನಿವೃತ್ತಿರೂಪವಾಗಿ ಎಂಬ ಅರ್ಥ. ಇವೆಲ್ಲವೂ ಮಾಯಾಮಯ ಆಗಿವೆಯಾದರೆ ಅದರ ಲಕ್ಷಣವೇನು ಎಂದು ಕೇಳಲು **ಮಾಯಾಯಾ ಇತಿ.** ಹೀಗೆ ***ಪರಿಪೃಚ್ಛತಃ*** ಪ್ರಶ್ನಿಸುವವರಿಗೆ; ಸಂಭಾವನೆಯ ಅರ್ಥದಲ್ಲಿ ಲಿಙ್ ಲಕಾರವಿದೆ. ಶಿಷ್ಯರ ಈ ಪ್ರಶ್ನೆಗಳಿಗೆ ಉತ್ತರವನ್ನು ಹೇಳಲು ಗುರುಗಳು 'ಸುಲಭವಾಗಿ ತಿಳಿಸುತ್ತೇನೆ ಮತ್ತು ಹಿಂದಿನ ಏಳು ಶ್ಲೋಕಗಳಲ್ಲಿ ತಿಳಿಸಿರುವ ಅರ್ಥವನ್ನು ಪುನಃ ಎಂಟನೆಯ ಶ್ಲೋಕದಲ್ಲಿ ಸಂಕ್ಷಿಪ್ತವಾಗಿ ಹೇಳುತ್ತೇನೆ' ಎನ್ನುತ್ತಾರೆ. [8–2.3]

पौनरुक्त्यं न दोषोत्र शब्देनार्थेन वा भवेत् ।
अभ्यासेन गरीयस्त्वमर्थस्य प्रतिपाद्यते ॥ ४ ॥

ಪೌನರುಕ್ತ್ಯಂ ನ ದೋಷೋತ್ರ ಶಬ್ದೇನಾರ್ಥೇನ ವಾ ಭವೇತ್ ।
ಅಭ್ಯಾಸೇನ ಗರೀಯಸ್ತ್ವಮರ್ಥಸ್ಯ ಪ್ರತಿಪಾದ್ಯತೇ ॥ 4 ॥

ಶಬ್ದಗಳ ಅಥವಾ ಅರ್ಥಗಳ ಪುನರಾವರ್ತನೆಯು ಇಲ್ಲಿ ದೋಷವೆನಿಸಿಕೊಳ್ಳುವುದಿಲ್ಲ. ಬಹು ಬಾರಿ ಅಭ್ಯಾಸಮಾಡುವುದರಿಂದ ಪ್ರತಿಪಾದಿಸುವ ತತ್ತ್ವದ ಗಹನತೆಯು ಅರಿವಾಗುವುದು. [8–4]

ವಿವೃತ್ತಿ

ಆ ಏಳು ಶ್ಲೋಕಗಳಲ್ಲಿ ಶಾಸ್ತ್ರಾರ್ಥಗಳು ಅಶೇಷ, ಒಂದೂ ಬಿಡದೆ ನಿರ್ಣಿತವಾಗಿವೆ, ಅವುಗಳ ಪುನರ್ವಿಚಾರ ನಿರರ್ಥಕ ಎಂಬ ಆಶಂಕೆಗೆ **ಪೌನರುಕ್ತ್ಯಮಿತಿ.** ಈ ಶಾಸ್ತ್ರಕ್ಕೆ ಪುನರುಕ್ತಿಯ ದೋಷ ಬರುವುದಿಲ್ಲ ಏಕೆಂದರೆ ಪ್ರತಿಪಾದಿತವಾದ ವಿಷಯವು ಅತಿ ಸೂಕ್ಷ್ಮವಾದುದರಿಂದ ಎಲ್ಲರಿಗೂ ಸುಲಭಗ್ರಾಹ್ಯವಲ್ಲ. ***ಅರ್ಥಸ್ಯ*** ಬ್ರಹ್ಮ-ಆತ್ಮವಸ್ತುವಿನ ***ಗರೀಯಸ್ತ್ವಂ*** ಶ್ರುತಿತಾತ್ಪರ್ಯದ ಗೋಚರತ್ವ. [8–4]

ಸ್ತೋತ್ರದ ಎಂಟನೆಯ ಚರಣ

विश्वंपश्यति कार्यकारणतया स्वस्वामिसम्बन्धतः
शिष्याचार्यतया तथैव पितृपुत्राद्यात्मना भेदतः ।
स्वप्ने जाग्रति वा य एष पुरुषो मायापरिभ्रामितः
तस्मै श्रीगुरुमूर्तये नम इदं श्रीदक्षिणामूर्तये ॥ ८ ॥

ವಿಶ್ವಂಪಶ್ಯತಿ ಕಾರ್ಯಕಾರಣತಯಾ ಸ್ವಸ್ವಾಮಿಸಂಬಂಧತಃ
ಶಿಷ್ಯಾಚಾರ್ಯತಯಾ ತಥೈವ ಪಿತೃಪುತ್ರಾದ್ಯಾತ್ಮನಾ ಭೇದತಃ ।
ಸ್ವಪ್ನೇ ಜಾಗ್ರತಿ ವಾ ಯ ಏಷ ಪುರುಷೋ ಮಾಯಾಪರಿಭ್ರಾಮಿತಃ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ 8 ॥

ಮಾಯೆಯಿಂದ ಭ್ರಮಿತನಾಗಿ, ಜಾಗ್ರತ ಯಾ ಸ್ವಪ್ನ ಅವಸ್ಥೆಯಲ್ಲಿ ವಿಶ್ವವನ್ನು ಕಾರ್ಯ–ಕಾರಣ, ಸ್ವಾಮಿ–ಸೇವಕ, ಗುರು–ಶಿಷ್ಯ, ತಂದೆ–ಮಗ ಇತ್ಯಾದಿ ಆತ್ಮ ಭೇದಗಳಂತೆ ವಿವಿಧತೆಯಿಂದ ಕಾಣುವ ಪುರುಷನಿಗೆ, ಶ್ರೀ ಗುರುರೂಪದಲ್ಲಿರುವ ಶ್ರೀ ದಕ್ಷಿಣಾಮೂರ್ತಿ ಸ್ವರೂಪನಿಗೆ, ಶಿವನಿಗೆ, ನನ್ನ ಈ ನಮಸ್ಕಾರಗಳು. {8}

ವಿವೃತ್ತಿ

ಯ ಏಷ ಪುರುಷಃ ಯಾವ ಪುರುಷನು ಕಾರ್ಯ–ಕಾರಣ ಭಾವದಿಂದ, ಯಾ ಒಡೆಯ–ಭೃತ್ಯ ಭಾವದಿಂದ, ಯಾ ಶಿಷ್ಯ–ಆಚಾರ್ಯ ಭಾವದಿಂದ ಮತ್ತು ಪಿತೃ–ಪುತ್ರ–ಭ್ರಾತೃ–ಅಳಿಯ–ಮಾವ ಮುಂತಾದ ರೂಪದಿಂದ ಯಾವುದೇ ಪ್ರಕಾರವಾಗಿ ದೇವ–ತಿರ್ಯಕ್–ಮನುಷ್ಯ ಮೊದಲಾದ ರೂಪದಲ್ಲಿ ಭೇದಗಳಿರುವಂತೆ ಸ್ವಪ್ನ ಯಾ ಜಾಗ್ರತ್ತಿನಲ್ಲಿ ವಿಶ್ವವನ್ನು ದೃಷ್ಟಿಸುತ್ತಾನೋ ***ಮಾಯಯಾ*** ಅನಾದಿ ಅನಿರ್ವಚನೀಯ ಅಜ್ಞಾನ ರೂಪದಿಂದ ***ಪರಿಭ್ರಾಮಿತಃ*** ಮೋಹಿತನಾದ, ಆಚ್ಛಾದಿಸಲ್ಪಟ್ಟ, ವಿಕ್ಷಿಪ್ತನಾದ ***ತಸ್ಮೈ*** ಪ್ರತ್ಯಕ್ಷರೂಪದಲ್ಲಿ ತತ್ತ್ವಜ್ಞಾನದ ಮೂಲಕ ಮಾಯೆಯ ಭ್ರಾಂತಿಯನ್ನು ನಿವಾರಿಸುವವನಾದ ಶ್ರೀ ಗುರುಮೂರ್ತಿಗೆ ನಮಸ್ಕಾರಗಳು. {8}

ಎಂಟನೆಯ ಚರಣದ ಅರ್ಥವನ್ನು ಹೀಗೆ ವಿವರಿಸಬಹುದು:

ಎಲ್ಲಾ ಅನುಭವಗಳು ಅವಾಸ್ತವಿಕ

अस्यायमभिसन्धिः –
स्वयंप्रकाशो सद्रूपेऽप्येकस्मिन् परमेश्वरे ।
कार्यकारणसम्बन्धाद्यनेकविधकल्पना ॥ ५ ॥
राहोश्शिरस्सुषिः खस्य ममात्मा प्रतिमावपुः ।
इत्यादिकल्पनातुल्या न पृथग्वस्तुगोचरा ॥ ६ ॥

ಅಸ್ಯಾಯಮಭಿಸಂಧಿಃ –
ಸ್ವಯಂಪ್ರಕಾಶೋ ಸದ್ರೂಪೇಽಪ್ಯೇಕಸ್ಮಿನ್ ಪರಮೇಶ್ವರೇ ।
ಕಾರ್ಯಕಾರಣಸಂಬಂಧಾದ್ಯನೇಕವಿಧಕಲ್ಪನಾ ॥ 5 ॥
ರಾಹೋಶ್ಶಿರಸ್ಸುಷಿಃ ಖಸ್ಯ ಮಮಾತ್ಮಾ ಪ್ರತಿಮಾವಪುಃ ।
ಇತ್ಯಾದಿಕಲ್ಪನಾತುಲ್ಯಾ ನ ಪೃಥಗ್ವಸ್ತುಗೋಚರಾ ॥ 6 ॥

ಸ್ವಯಂಪ್ರಕಾಶನಾಗಿರುವ ಪರಮೇಶ್ವರನ ನಿಜಸ್ವರೂಪವನ್ನು ಕಾರ್ಯ–ಕಾರಣ ಮತ್ತು ಇತ್ಯಾದಿ ಅನೇಕ ಸಂಬಂಧಗಳಿಂದ ಕಲ್ಪಿಸಿಕೊಳ್ಳುವುದು, ರಾಹುವಿನ ತಲೆ, ಆಕಾಶದಲ್ಲಿರುವ ಅವಕಾಶ, ನನ್ನ ಆತ್ಮ, ಶಿಲಾಮೂರ್ತಿಯ ದೇಹ ಇತ್ಯಾದಿಗಳನ್ನು ಕಲ್ಪಿಸಿಕೊಂಡು ಅವುಗಳ ಭಿನ್ನ ಸ್ವರೂಪಗಳನ್ನು ಪರಿಗಣಿಸದೆ ಇರುವಂತೆ. [8–5..6]

ವಿವೃತ್ತಿ

ಶ್ಲೋಕದ ವ್ಯಾಖ್ಯೆಯನ್ನು ಆರಂಭಿಸುವ **ಅಸ್ಯಾಯಮಭಿಸಂಧಿರಿತಿ.** ಏಕೈಕ ಅಖಂಡ ಆನಂದ ಚಿದಾತ್ಮನು ಯಾವಾಗ ಅವಿದ್ಯೆಯು ಆವರಿಸಿಕೊಳ್ಳುವುದೋ ಆಗ ಸರ್ವ ವ್ಯವಹಾರಗಳನ್ನು ಅವಿದ್ಯೆ, ಮಾಯೆ, ಅವ್ಯಕ್ತ ಇತ್ಯಾದಿ

ಹೆಸರುಗಳಿಂದ ಕರೆಯುವುದು ಅನಾದಿ ಅನಿರ್ವಚನೀಯ ಅಜ್ಞಾನದ ವಿಲಾಸವಾಗಿರುವ ಪಪಂಚವನ್ನು ಅವಲಂಬಿಸಿರುವುದರಿಂದ, ಅದು ವಿರೋಧವಾಗುವುದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಲು **ಸ್ವಯಂ ಪ್ರಕಾಶ ಇತಿ.** ಒಂದರೊಡನೆ ಅನೇಕ ವ್ಯವಹಾರಗಳು ಸಾಧ್ಯವಾಗುವುದು ಎಂದು ಉದಾಹರಿಸಲು **ರಾಹೋರಿತಿ.** ***ಖಸ್ಯ*** ಆಕಾಶದ ***ಸುಷಿಃ*** ಛಿದ್ರವು ***ಪ್ರತಿಮಾವಪುಃ*** ಪ್ರತಿಮೆಯಂತಿರುವ ಶರೀರ ಮುಂತಾದ ***ಕಲ್ಪನಾತುಲ್ಯಾ*** ಕಾರ್ಯಕಾರಣರೂಪದಿಂದ ಪ್ರಪಂಚಭೇದದ ಕಲ್ಪನೆಯು ತತ್ತ್ವತಃ ಪ್ರತ್ಯಕ್ಷ ವಿಷಯವಾಗಿರುವುದಿಲ್ಲ. [8–5..6]

ರಾಹು ಮತ್ತು ಕೇತುಗಳು, ಒಬ್ಬ ರಾಕ್ಷಸನ ತಲೆ ಮತ್ತು ದೇಹ ಭಾಗಗಳಾಗಿವೆ; ನಾವು ರಾಹುವಿನ ತಲೆ ಎಂದು ಹೇಳುವಾಗ, ತಲೆಯು ರಾಹುವನ್ನು ಬಿಟ್ಟು ಬೇರೆಯೇ ವಸ್ತು ಎಂದು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅವೆರಡೂ ನಿಜವಾಗಿಯೂ ಒಂದೇ. ಹಾಗೆಯೇ ಪರಮೇಶ್ವರನನ್ನು ವಿಶ್ವದ ಕಾರಣಸ್ವರೂಪನೆಂದು ಹೇಳುವಾಗ, ವಿಶ್ವವು ಪರಮೇಶ್ವರನಿಂದ ಬೇರೆಯೇ ಆದ ವಸ್ತು ಎಂದು ಭಾವಿಸಬಾರದು. ಅವೆರಡೂ ಒಂದೇ ಮತ್ತು ಪರಮೇಶ್ವರನೆಂಬ ಒಂದೇ ಅಸ್ತಿತ್ವವಿದೆ.

उपास्योपासकत्वेन गुरुशिष्यक्रमेण च ।
स्वामिभृत्यादिरूपेण क्रीडति स्वेच्छयेश्वरः ॥ ७ ॥

ಉಪಾಸ್ಯೋಪಾಸಕತ್ವೇನ ಗುರುಶಿಷ್ಯಕ್ರಮೇಣ ಚ ।
ಸ್ವಾಮಿಭೃತ್ಯಾದಿರೂಪೇಣ ಕ್ರೀಡತಿ ಸ್ವೇಚ್ಛಯೇಶ್ವರಃ ॥ 7 ॥

ಉಪಾಸ್ಯ–ಉಪಾಸಕ, ಗುರು–ಶಿಷ್ಯ, ಸ್ವಾಮಿ–ಸೇವಕ ಇತ್ಯಾದಿ ರೂಪಗಳಿಂದ ಈಶ್ವರನು ಸ್ವ ಇಚ್ಛೆಯಿಂದ ಕ್ರೀಡಿಸುತ್ತಾನೆ. [8–7]

ವಿವೃತ್ತಿ

'ನ ತಸ್ಯ ಕಾರ್ಯಂ ಕಾರಣಂ ಚ ವಿದ್ಯತೇ ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ । ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ ॥' (ಶ್ವೇ.ಉ.6–8) ಎಂಬ ಶ್ರುತಿಯ ಅನುಸಂಧಾನದಂತೆ, 'ಲೋಕವತ್ ಲೀಲಾಕೈವಲ್ಯಮ್' (ಬ್ರ.ಸೂ.2–2–33) ಎಂಬ ನ್ಯಾಯದಂತೆ ಈಶ್ವರನೇ ಅನೇಕವಾಗಿ ಪ್ರಕಟವಾಗುತ್ತಾನೆ ಎಂದು ಹೇಳುವ **ಉಪಾಸ್ಯೋಪಾಸಕತ್ವೇನ ಇತಿ.** [8–7]

पितरं प्रति पुत्रो यः पुत्रं प्रति पितैव सः ।
एक एव हि नानेव कल्प्यते शब्दमात्रव ॥ ८ ॥

ಪಿತರಂ ಪ್ರತಿ ಪುತ್ರೋ ಯಃ ಪುತ್ರಂ ಪ್ರತಿ ಪಿತೈವ ಸಃ ।
ಏಕ ಏವ ಹಿ ನಾನೇವ ಕಲ್ಪ್ಯತೇ ಶಬ್ದಮಾತ್ರತಃ ॥ 8 ॥

ಯಾವನು ತನ್ನ ತಂದೆಗೆ ಮಗನೆಂದು ಕರೆಸಿಕೊಳ್ಳುತ್ತಾನೋ, ಅವನೇ ತನ್ನ ಮಗನಿಗೆ ತಂದೆಯಾಗಿರುತ್ತಾನೆ; ಒಬ್ಬನೇ ವ್ಯಕ್ತಿಯು ಶಬ್ದಗಳ ಜಾಲದಲ್ಲಿ ಸಿಕ್ಕಿಬಿದ್ದು ಅನೇಕ ವಿಧಗಳಲ್ಲಿ ಕಲ್ಪಿಸಿಕೊಳ್ಳಲ್ಪಟ್ಟಿದ್ದಾನೆ. [8–8]

ವಿವೃತ್ತಿ

ನಿಯಮಿತವಾಗಿ ಕಂಡುಬರುವ ತಂದೆ–ಮಗ ಭಾವವು ಇಲ್ಲವೇ ಇಲ್ಲ, ಅದು ಕಲ್ಪಿತವಾಗಿದೆ ಎಂದು ತಿಳಿಸಲು **ಪಿತರಮಿತಿ.** ಪಿತೃತ್ವವು ಸಾಪೇಕ್ಷವಾಗಿರುವುದು, ಪರಮಾರ್ಥದಲ್ಲಿ ಅಲ್ಲ ಎಂಬ ಅರ್ಥ. [8–8]

तस्मात्प्रकाश एवास्ति परमार्थ निरूपिणे ।
भेदप्रतीतिर्मिथ्यैव माययात्मनि कल्पिता ॥ ९ ॥

ತಸ್ಮಾತ್ಪ್ರಕಾಶ ಏವಾಸ್ತಿ ಪರಮಾರ್ಥ ನಿರೂಪಿಣೇ ।
ಭೇದಪ್ರತೀತಿರ್ಮಿಥ್ಯೈವ ಮಾಯಯಾತ್ಮನಿ ಕಲ್ಪಿತಾ ॥ 9 ॥

ಹಾಗಾಗಿ ಸತ್ಯವನ್ನು ವಿಮರ್ಶಿಸಿ ನಿರೂಪಿಸಿದಾಗ, ನಾವು ಪ್ರಕಾಶದ ಅಸ್ತಿತ್ವವನ್ನು ಮಾತ್ರ ಕಾಣುತ್ತೇವೆ. ಆತ್ಮದಲ್ಲಿರುವ ಭಿನ್ನತೆಗಳು, ಮಾಯೆಯ ಆವರಣದಿಂದ ಕಲ್ಪಿತವಾದ ಒಂದು ಮಿಥ್ಯೆಯಾಗಿದೆ (ಸುಳ್ಳು). [8–9]

ವಿವೃತ್ತಿ

ಯಾವುದು ಸಾಪೇಕ್ಷವಾಗಿ ದೃಷ್ಟಿಸಲ್ಪದುವುದೋ ಅದು ಸ್ವಪ್ನದಂತೆ ಮಾಯಾಮಯವೇ ಆಗಿರುವುದು, ಪರಮಾರ್ಥವಾಗಿ ಅಲ್ಲ ಎಂದು ಉಪಸಂಹರಿಸುವ **ತಸ್ಮಾದಿತಿ.** [8–9]

ಮಿಥ್ಯೆಯ ಅರ್ಥ

मिथ्यात्वं नाम बाध्यत्वं सम्यग्ज्ञानोदये सति ।
शिष्याचार्योपदेशादि स्वप्नवत्प्रतिभासते ॥ १० ॥

ಮಿಥ್ಯಾತ್ವಂ ನಾಮ ಬಾಧ್ಯತ್ವಂ ಸಮ್ಯಗ್ಜ್ಞಾನೋದಯೇ ಸತಿ ।
ಶಿಷ್ಯಾಚಾರ್ಯೋಪದೇಶಾದಿ ಸ್ವಪ್ನವತ್ಪ್ರತಿಭಾಸತೇ ॥ 10 ॥

ನಿಜವಾದ ಅರಿವು ಉಂಟಾದಾಗ, ಮಿಥ್ಯತ್ವ (ತಪ್ಪು ತಿಳುವಳಿಕೆ) ನಾಶವಾಗುವುದು; ಆಗ ಶಿಷ್ಯನಿಗೆ ಉಪದೇಶಿಸುವ ಆಚಾರ್ಯ ಇತ್ಯಾದಿಗಳು ಕನಸಿನಂತೆ ಕಾಣುತ್ತವೆ. [8–10]

ವಿವೃತ್ತಿ

'ಮಾಯಾಯಾ ಲಕ್ಷಣಂ ಕಿಂ ಸ್ಯಾತ್' ಎಂದು ಕೇಳಿದಾಗ ಅದಕ್ಕೆ ಉತ್ತರವಾಗಿ 'ಭೇದಪ್ರತೀತಿರ್ಮಿಥ್ಯೈವ' ಎಂದು ಹೇಳುವ ಮೂಲಕ ಮಿಥ್ಯೆಯ ಅರ್ಥ ಪ್ರತಿಪಾದಿಸಿ ಮಿಥ್ಯೆಯ ಲಕ್ಷಣವನ್ನು ತಿಳಿಸುವ **ಮಿಥ್ಯಾತ್ವಂ ನಾಮೇತಿ.** ತತ್ತ್ವಜ್ಞಾನದ ಉಪದೇಶವು ಮಿಥ್ಯತ್ವಕ್ಕೆ ಬಾಧೆಯಾಗುವುದು ಎಂಬ ಅರ್ಥ. ಇದುವೇ ಮಾಯೆಯ ಲಕ್ಷಣವು. ಅದು ಪ್ರಮಾಣದಿಂದ ಸಿದ್ಧವಾಗುವುದಿಲ್ಲ ಹಾಗೂ ಜ್ಞಾನಪ್ರಮಾಣವನ್ನು ಬಾಧಿಸಲೂ ಬಹುದು, ವಿಷಯದ ಪ್ರಾಮಾಣಿಕತೆಯನ್ನೂ ಬಾಧಿಸಬಹುದು. ಬಾಧಿತವಾಗಿ ಯಾವುದು ಎಲ್ಲಿ ಲಭಿಸುವುದೋ, ಅಲ್ಲಿಯೇ ಅದರ ಕಾಲತ್ರಯಗಳಲ್ಲಿ ಇಲ್ಲದಿರುವಿಕೆಯು ಬೋಧವಾಗಿ ವ್ಯವಹಾರಯೋಗ್ಯತೆಯು ನಾಶವಾಗುವುದು. ಶಿಷ್ಯ–ಆಚಾರ್ಯ ರೂಪದ ಭೇದಪ್ರಪಂಚವು ವಸ್ತುತಃ ಆತ್ಮದಿಂದ ಹೊರತಾಗಿದ್ದುಕಾಲತ್ರಯಗಳಲ್ಲಿ ಇರುವುದಿಲ್ಲ, ಎಲ್ಲಿ ಯಾವುದು ದೃಷ್ಟವಾಗುವುದೋ ಅಲ್ಲಿಯೇ ಜ್ಞಾನದಿಂದ ವಿಶ್ಲೇಷಿಸಿದಾಗ ಅದು ಸ್ವಪ್ನದಲ್ಲಿ ಕಂಡ ಪ್ರಪಂಚದಂತೆ ಅನುಮಾನಾಸ್ಪದವಾಗುವುದು ಎಂದು ತಿಳಿಸಲು **ಶಿಷ್ಯಾಚಾರ್ಯೇತಿ.** [8–10]

मित्याभूतोपि वेदान्तस्सत्यमर्थं प्रबोधयेत् ।
देवताप्रतिमावच्च चित्रवत्प्रतिबिम्बवत् ॥ ११ ॥

ಮಿಥ್ಯಾಭೂತೋಽಪಿ ವೇದಾಂತಸ್ಸತ್ಯಮರ್ಥಂ ಪ್ರಬೋಧಯೇತ್ ।
ದೇವತಾಪ್ರತಿಮಾವಚ್ಚ ಚಿತ್ರವತ್ಪ್ರತಿಬಿಂಬವತ್ ॥ 11 ॥

ವೇದಾಂತವು, ಅದರಲ್ಲಿಯೇ ಅದು ಮಿಥ್ಯೆಯಾದರೂ, ನಮಗೆ ನಿಜ ಜ್ಞಾನವನ್ನು ಪಡೆಯಲು ಸಹಕಾರಿಯಾಗಬಹುದು, ದೇವರ ಮೂರ್ತಿಯಂತೆ ಯಾ ಬಿಡಿಸಿದ ಚಿತ್ರದಂತೆ ಯಾ ಪ್ರತಿಬಿಂಬದಂತೆ. [8–11]

ವಿವೃತ್ತಿ

ಇನ್ನು ಪ್ರತ್ಯಕ್ಷ ಬ್ರಹ್ಮಬೋಧಕವಾದ ವೇದಾಂತಶಾಸ್ತ್ರವು ಹೇಗೆ ಪ್ರಮಾಣವೆನಿಸಿರುವುದು? ಎಂದು ತಿಳಿಸಲು **ಮಿಥ್ಯಾಭೂತೋಽಪೀತಿ.** ಸ್ವರೂಪದಿಂದ ಮಿಥ್ಯತ್ವವಿರುವುದಾದರೂ, ವೇದಾಂತದ ಸಾಮರ್ಥ್ಯವನ್ನು ಜಾಪಿಸಲು ದೃಷ್ಟಾಂತವಾಗಿ **ದೇವತೇತಿ.** ಹೇಗೆ ದೇವತೆಯಲ್ಲದ ಪ್ರತಿಮೆಯಲ್ಲಿ ಆರೋಪಿತವಾದ ದೇವತೆಯು ಪೂಜಕನಿಗೆ ಸತ್ಯ ಫಲವನ್ನು ನೀಡುವಂತೆ, ಪ್ರತಿಮೆಯು ದೇವತೆಯಲ್ಲವಾದರೂ ಅದಕ್ಕೆ ಉಚಿತವಾದ ಅನೇಕ ಲೌಕಿಕ ವ್ಯಾಪಾರಗಳನ್ನು ನೀಡುವುದರಿಂದ ಅದು ದೇವತೆಯಾಗುವುದು. ಹಾಗೆಯೇ ಹುಲಿ, ಆನೆ ಮೊದಲಾದವುಗಳ ಚಿತ್ರ ಮಕ್ಕಳಿಗೆ ನಿಜವಾದ ಭಯಕ್ಕೆ ಹೇತುವಾಗಬಹುದು, ಪ್ರತಿಬಿಂಬವು ನಿಜಬಿಂಬವು ಯಾರದ್ದೆಂದು ತಿಳಿಸುವ ಕ್ಷಮತೆ ಹೊಂದಿರುವುದು. ಅಂತೆಯೇ ವೇದಾಂತವು ಸ್ವಯಂ ಮಿಥ್ಯಾಭೂತವಾದರೂ ಸತ್ಯವಾಗಿರುವ ಬ್ರಹ್ಮತತ್ತ್ವದ ಬೋಧಕವಾಗಿರುವುದು ಎಂಬ ಅರ್ಥವು. [8–11]

ಜ್ಞಾನದಿಂದ ಮಾಯೆಯ ನಿವಾರಣೆ

सर्वोपि व्यवहारोयं मायायाः परिजृंभणम् ।
सुषुप्तिसदृशी माया स्वप्रबोधेन बाध्यते ॥ १२ ॥

ಸರ್ವೋಽಪಿ ವ್ಯವಹಾರೋಽಯಂ ಮಾಯಾಯಾಃ ಪರಿಜೃಂಭಣಮ್ ।
ಸುಷುಪ್ತಿಸದೃಶೀ ಮಾಯಾ ಸ್ವಪ್ರಬೋಧೇನ ಬಾಧ್ಯತೇ ॥ 12 ॥

ನಮ್ಮ ದಿನನಿತ್ಯದ ಎಲ್ಲಾ ಅನುಭವಗಳು ಮಾಯೆಯ ಅಟ್ಟಹಾಸಗಳು. ಸುಷುಪ್ತಿಯಂತೆ ಮಾಯೆಯೂ ಕೂಡಾ ಆತ್ಮಜ್ಞಾನ ಉಂಟಾದಾಗ ನಾಶವಾಗುವುದು. [8–12]

ವಿವೃತ್ತಿ

ಹೆಚ್ಚೇಕೆ, ಎಲ್ಲಾ ವ್ಯವಹಾರಗಳೂ ಮಾಯಾಮಯವಾಗಿವೆ, ಅದರಲ್ಲಿ ತೊಂದರೆಯೇನೂ ಇಲ್ಲ ಎಂದು ಉಪಸಂಹರಿಸುವ **ಸರ್ವೋಽಪೀತಿ.** ***ಪರಿಜೃಂಭಣಮ್*** ಅಟ್ಟಹಾಸ. ಮಾಯೆಯು ಸ್ವರೂಪಕ್ಕೆ ದೃಷ್ಟಾಂತವಾಗಿ ಬುದ್ಧಿಯನ್ನು ಹೇಳುವ **ಸುಷುಪ್ತೀತಿ.** ***ಸ್ವಪ್ರಬೋಧೇನ*** ವೇದಾಂತಜ್ಞಾನದಿಂದ ಆತ್ಮದ ಅವಬೋಧೆಯಾದಾಗ ***ಬಾಧ್ಯತೇ*** ಅದು ಮಾಯೆಯನ್ನು ಬಾಧಿಸುತ್ತದೆ. [8–12]

युक्तिहीनप्रकाशस्य संज्ञा मायेति कथ्यते ।
नासती दृष्यमाना सा बाध्यमाना न वा सती ॥ १३ ॥

ಯುಕ್ತಿಹೀನಪ್ರಕಾಶಸ್ಯ ಸಂಜ್ಞಾ ಮಾಯೇತಿ ಕಥ್ಯತೇ ।
ನಾಸತೀ ದೃಷ್ಯಮಾನಾ ಸಾ ಬಾಧ್ಯಮಾನಾ ನ ವಾ ಸತೀ ॥ 13 ॥

ಆಧಾರವಿಲ್ಲದ ಯುಕ್ತಿರಹಿತ ಪ್ರಕಟಣೆಯನ್ನು ಮಾಯೆ ಎಂದು ಹೆಸರಿಸಿದ್ದಾರೆ. ಕಂಡುಬರುವುದರಿಂದ ಅದಕ್ಕೆ ಅಸ್ತಿತ್ವವಿದೆ ಆದರೆ ನಿವಾರಿಸಲ್ಪಡುವುದರಿಂದ ಅದಕ್ಕೆ ಅಸ್ತಿತ್ವವಿಲ್ಲ. [8–13]

ವಿವೃತ್ತಿ

ಇದರಲ್ಲಿ ಮಾಯೆಯ ಪ್ರತ್ಯಕ್ಷ ಲಕ್ಷಣವನ್ನು ತಿಳಿಸುತ್ತಾ **ಯುಕ್ತಿಹೀನೇತಿ.** ***ಯುಕ್ತಿಹೀನಃ ಪ್ರಕಾಶಃ*** ಪ್ರತೀತಿ ಮಾತ್ರವಾಗಿ ಹಾಗೋ ಹೀಗೋ ಭಾಸವಾಗುವಂತಹದು ಮಾಯೆ ಎಂಬ ಸಂಜ್ಞೆಯಿಂದ ತಿಳಿಯಲ್ಪಡುತ್ತದೆ. ಸರ್ವ ಪ್ರಕಾರದ ಯುಕ್ತಿಗಳ ನೆರವಿಲ್ಲದೆ ಸತ್ಯದಂತೆ ಪ್ರಕಾಶಿಸುವುದು ಮಾಯೆಯ ಲಕ್ಷಣವು ಎಂಬ ಅರ್ಥವು. ಅದರ ಯುಕ್ತಿಶೂನ್ಯ ಪ್ರಕಟಣೆಯನ್ನು ಸಾಧಿಸಲು **ನಾಸತೀತಿ.** ***ದೃಶ್ಯಮಾನಾ*** ಅಪರೋಕ್ಷವಾಗಿ. ***ನ ಸತೀ ಬಾಧ್ಯಮಾನಾ*** ಅದರ ನಿವಾರಣೆಯಾಗುವುದರಿಂದ ಅದು ಸತ್ಯವಲ್ಲ. [8–13]

न प्रकाशादियं भिन्ना छायेवार्कस्य तामसी ।
न चाभिन्ना जडत्वेन विरोधान्नोभयात्मिका ॥ १४ ॥

ನ ಪ್ರಕಾಶಾದಿಯಂ ಭಿನ್ನಾ ಛಾಯೇವಾರ್ಕಸ್ಯ ತಾಮಸೀ ।
ನ ಚಾಭಿನ್ನಾ ಜಡತ್ವೇನ ವಿರೋಧಾನ್ನೋಭಯಾತ್ಮಿಕಾ ॥ 14 ॥

ಕಪ್ಪಾದ ನೆರಳು ಸೂರ್ಯನಿಗಿಂತ ಬೇರೆಯಾಗಿರುವ ಹಾಗೆ, ಅದು ಪ್ರಕಾಶದಿಂದ ಭಿನ್ನವಾಗಿಲ್ಲ; ಆದರೆ ಅದು ಜಡವಾಗಿರುವುದರಿಂದ ಪ್ರಕಾಶದೊಡನೆ ಸಮಾನವಾಗಿಯೂ ಇಲ್ಲ. ಅದು ಪ್ರಕಾಶದಿಂದ ಭಿನ್ನವಾಗಿಯೂ, ಅಭಿನ್ನವಾಗಿಯೂ ಏಕ ಕಾಲಕ್ಕೆ ಇರಲು ಸಾಧವಿಲ್ಲ ಏಕೆಂದರೆ ಇದು ವಿರೋಧಾಭಾಸಗಳನ್ನುಂಟುಮಾಡುತ್ತದೆ. [8–14]

ವಿವೃತ್ತಿ

ಸದಸದ್ವಿಲಕ್ಷಣತ್ವದಿಂದ ಭಿನ್ನ–ಅಭಿನ್ನವಾಗಿರುವುದು ಯಾ ಸಾವಯವ–ನಿರವಯವತ್ವವಿರುವುದು ಯುಕ್ತಿಗೆ ಸಹ್ಯವಾಗುವುದೋ ಎಂಬ ಶಂಕೆಯನ್ನು ನಿರಾಕರಿಸುತ್ತಾ **ನ ಪ್ರಕಾಶಾದಿತಿ.** ಹೇಗೆ ಸೂರ್ಯನ ನೆರಳು ತಾಮಸ ಕತ್ತಲೆಯರೂಪವಾಗಿ ಸೂರ್ಯನಿಂದ ಭಿನ್ನವಾಗಿರುವುದೋ ಹಾಗೆ ಮಾಯೆಯು ಪ್ರಕಾಶದಿಂದ ಭಿನ್ನವಾಗಿಲ್ಲ ಎಂಬ ವ್ಯತಿರೇಕ ದೃಷ್ಟಾಂತ. ಅಥವಾ ಸೂರ್ಯನ ಛಾಯೆಯು ಸೂರ್ಯನನ್ನೇ ಮರೆಮಾಡುವ ***ತಾಮಸೀ*** ತಮೋದೃಷ್ಟಿಯಿಂದ ಹಗಲನ್ನೇ ಕತ್ತಲೆಯಾಗಿಸುವುದೆಂದು ಆರೋಪಿತವಾದರೂ ಅದು ಸೂರ್ಯನಿಂದ ಭಿನ್ನವಲ್ಲ, ಅಂತೆಯೇ ಮಾಯೆಯೂ ಕೂಡ ಎಂಬ ಅರ್ಥವು. 'ಪರಾಸ್ಯ ಶಕ್ತಿಃ' (ಶ್ವೇ.ಉ.6–8) ಎಂಬ ಶ್ರುತಿಯಂತೆ ಮಾಯೆಯು ಆತ್ಮದ ಶಕ್ತಿಯೆಂದು ತಿಳಿದುಬರುವುದರಿಂದ, ಶಕ್ತಿ–ಶಕ್ತಿವಂತರನ್ನು ಭೇದವಿರುವಂತೆ

ಭಾವಿಸಲಾಗುವುದಿಲ್ಲ. ಅದು ಚಿದಾತ್ಮನಿಂದ ಅಭಿನ್ನವೂ ಅಲ್ಲ, 'ಭಿನ್ನಾಭಿನ್ನಾ ವಾ' (ಶ್ವೇ.ಉ.6–8), ಮಾಯೆಯ ಜಡತ್ವದಿಂದಾಗಿ ಭಿನ್ನವಾಗಿರುವ ವಿಷಯವು ಲಭಿಸುವುದರಿಂದ, ಜಡ–ಅಜಡಗಳು ಒಂದೇ ಆಗಿರುವ ಸಾಧ್ಯತೆ ಇಲ್ಲವಾಗುವುದು ಎಂದು ತಿಳಿಸುವ **ನ ಚಾಭಿನ್ನೇತಿ.** [8–14]

ಸೂರ್ಯನನ್ನು ಮರೆಮಾಡುವ ನೆರಳಿಗೆ ಮಾಯೆಯನ್ನು ಹೋಲಿಸಬಹುದು. ಸೂರ್ಯನ ಬೆಳಕೇ ನೆರಳಿನಂತೆ ಕಾಣಿಸುತ್ತದೆ ಮತ್ತು ನೆರಳಿಗೆ ಬೆಳಕಿನ ಹೊರತಾದ ಭಿನ್ನ ಅಸ್ತಿತ್ವ ಇಲ್ಲ.

स्वहेत्ववयवाभावान्नेयं सावयवोच्यते ।
न चावयवहीना सा कार्येष्ववयवान्विता ॥ १५ ॥

ಸ್ವಹೇತ್ವವಯವಾಭಾವಾನ್ನೇಯಂ ಸಾವಯವೋಚ್ಯತೇ ।
ನ ಚಾವಯವಹೀನಾ ಸಾ ಕಾರ್ಯೇಷ್ವವಯವಾನ್ವಿತಾ ॥ 15 ॥

ಯಾವುದೇ ಅಂಗಗಳು ಅದನ್ನು ಸೃಷ್ಟಿಮಾಡದಿದ್ದುದರಿಂದ, ಅದು ಅವಯವಗಳಿಂದ ಮಾಡಲ್ಪಟ್ಟಿಲ್ಲ; ಆದರೆ ಕಾರ್ಯಗಳಲ್ಲಿ ಅದು ಅಂಗಗಳಿಂದ ಕೂಡಿದಹಾಗಿರುವುದರಿಂದ, ಅದಕ್ಕೆ ಅವಯವಗಳಿವೆ. [8–15]

ವಿವೃತ್ತಿ

ಇನ್ನೊಂದು ಪ್ರಕಾರವಾಗಿ ಅದನ್ನು ಸಾಧಿಸಲು **ಸ್ವಹೇತ್ವವಯವಾಭಾವಾದಿತಿ.** ಅದರ ಅನಾದಿತ್ವದಿಂದ ಎಂಬ ಅರ್ಥದಲ್ಲಿ. ಮಾಯೆಗೆ ಅದರದೇ ಆದ ಕಾರ್ಯಗಳ ಕಾರಕತ್ವವಿದ್ದು, ಕಾರ್ಯಗಳಿಗೆ ಸಾವಯವತ್ವ ಇರುವುದರಿಂದ ಕಾರ್ಯಗಳ ಕಾರಕವೂ ಅವಯವಗಳಿಂದ ಕೂಡಿರಬೇಕು. ಅಂದರೆ ಮಾಯೆಯಿಂದ ನಿರ್ಮಿತವಾದ ಆನೆ, ಕುದುರೆ ಮೊದಲಾದವುಗಳು ನಿರವಯವವಾಗಿಲ್ಲ ಎಂಬ ಭಾವ. [8–15]

अविचारितसिद्धेयं मायावेश्याविलासिनी ।
पुरुषं वञ्चयत्येव मिथ्याभूतैस्स्वविभ्रमैः ॥ १६ ॥

ಅವಿಚಾರಿತಸಿದ್ಧೇಯಂ ಮಾಯಾವೇಶ್ಯಾವಿಲಾಸಿನೀ ।
ಪುರುಷಂ ವಂಚಯತ್ಯೇವ ಮಿಥ್ಯಾಭೂತೈಸ್ಸ್ವವಿಭ್ರಮೈಃ ॥ 16 ॥

ಮಾಯೆಯೆಂಬ ವೇಶ್ಯೆಯು ಪರೀಕ್ಷೆಗೆ ಒಳಪಡದಿರುವಷ್ಟು ಸಮಯ ವಿಲಾಸದಲ್ಲಿದ್ದು, ಪುರುಷನನ್ನು ಅವಳ ಭ್ರಮೆಗೊಳಿಸುವ ಮಿಥ್ಯಾರೂಪಗಳಿಂದ ವಂಚಿಸುತ್ತಾಳೆ. [8–16]

ವಿವೃತ್ತಿ

ಹೀಗೆ ವಿಧವಿಧವಾಗಿ ಸಿದ್ಧಮಾಡಿ, ಮಾಯೆಯ ಯುಕ್ತಿಹೀನ ಪ್ರಕಾಶತ್ವದ ಲಕ್ಷಣವನ್ನು ಉಪಸಂಹರಿಸುವ **ಅವಿಚಾರಿತೇತಿ.** [8–16]

ಮೋಕ್ಷ ಅಂದರೆ ಮಾಯೆಯ ನಿವಾರಣೆ

न तस्या मूलविच्छेदमभिवाञ्चन्ति केचन ।

तेषां पक्षे कथं मोक्षो मनसस्सम्भविष्यति ॥ १७ ॥

ನ ತಸ್ಯಾ ಮೂಲವಿಚ್ಛೇದಮಭಿವಾಂಛಂತಿ ಕೇಚನ ।
ತೇಷಾಂ ಪಕ್ಷೇ ಕಥಂ ಮೋಕ್ಷೋ ಮನಸಸ್ಸಂಭವಿಷ್ಯತಿ ॥ 17 ॥

ಕೆಲವರು ಅವಳ ಸಮೂಲ ನಾಶವನ್ನು ಬಯಸುವುದಿಲ್ಲ; ಹಾಗಿರುವಾಗ ಅವರ ದೃಷ್ಟಿಕೋನದಂತೆ, ಮನಸಿನಿಂದ ಬಿಡುಗಡೆಯನ್ನು ಹೇಗೆ ಪಡೆಯುವುದು? [8–17]

ವಿವೃತ್ತಿ

ಈ ಮಾಯಾವಿಲಾಸದಿಂದಾಗಿ ವಂಚಿತರಾದವರು, ಇಂದ್ರಿಯಗಳ ಚಾಪಲ್ಯಕ್ಕೆ ತುತ್ತಾದವರು ಅದರ ನಾಶವನ್ನು ಬಯಸುವುದಿಲ್ಲ ಎಂಬ ಶೋಚನೀಯತೆಯನ್ನು ತಿಳಿಸುವ **ನ ತಸ್ಯಾ ಇತಿ.** ***ಮೂಲವಿಚ್ಛೇದಃ*** ವಾಸನೆಗಳ ನಿವೃತ್ತಿ. ಅದು ನಿವೃತ್ತಿಯಾಗದಿರುವುದರ ದೋಷವು ಸಂಸಾರದ ದುಃಖಪರಂಪರೆಯು ನಿವೃತ್ತಿ ಆಗದಿರುವುದು ಎಂದು ಹೇಳುತ್ತಾ **ತೇಷಾಂ ಪಕ್ಷ ಇತಿ.** ***ಮನಸೋ ಮೋಕ್ಷಃ*** ಮನಸ್ಸೆಂಬ ಅವಕಾಶಕ್ಕೆ ಮುಕ್ತಿ, ಮನಸ್ಸಿನ ವಿಲಯ ಯಾ ಪರಮ ಉಪಶಮನಕಾರಿಯಾದ ಪರಮಾನಂದದ ಲಭಿಸುವಿಕೆ ಹೇಗೆ ಆಗುವುದು? ಎಂಬ ಅರ್ಥದಲ್ಲಿ. [8–17]

तिस्रोप्यवस्था मनसो जाग्रत्स्वप्नसुषुप्तयः ।
चक्रवत्परिवर्तन्ते भेदभ्रान्त्येकहेतवः ॥ १८ ॥

ತಿಸ್ರೋಪ್ಯವಸ್ಥಾ ಮನಸೋ ಜಾಗ್ರತ್ಸ್ವಪ್ನಸುಷುಪ್ತಯಃ ।
ಚಕ್ರವತ್ಪರಿವರ್ತಂತೇ ಭೇದಭ್ರಾಂತ್ಯೇಕಹೇತವಃ ॥ 18 ॥

ಮೂರು ಅವಸ್ಥೆಗಳಾದ ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿಗಳು ಮನಸನ್ನು ಬಾಧಿಸುತ್ತವೆ; ಅವು ಚಕ್ರದಂತೆ ತಿರುಗುತ್ತವೆ ಮತ್ತು ದ್ವೈತಭಾವ (ಭೇದ) ಮತ್ತು ಭ್ರಾಂತಿಗೆ ಕಾರಣವಾಗುತ್ತವೆ. [8–18]

ವಿವೃತ್ತಿ

ಮನಸ್ಸಿನ ಮುಕ್ತಿಯ ಅಭಾವದಲ್ಲಿ ಪರಮಾನಂದವು ಯಾಕೆ ಲಭಿಸುವುದಿಲ್ಲ ಎಂದು ತಿಳಿಸುವ **ತಿಸ್ರೋಪೀತಿ.** ಮನಸು ಜಾಗ್ರತ್ ಮುಂತಾದ ಮೂರು ಅವಸ್ಥೆಗಳಲ್ಲಿ ಚಕ್ರದಂತೆ ತಿರುಗುತ್ತಾ ಇರುತ್ತದೆ ಮತ್ತು ಮುಖ್ಯವಾಗಿ ಅದು ಭೇದದ ಭ್ರಾಂತಿಗೆ ಕಾರಣಭೂತವಾಗಿದೆ. ಅದನ್ನು ಹೀಗೆ ಹೇಳಬಹುದು: ಮನಸು ಸದಾ ಬಾಹ್ಯೇಂದ್ರಿಯಗಳ ಮೂಲಕ ಬಾಹ್ಯವಿಷಯಗಳಲ್ಲಿಯೇ ಆಸಕ್ತವಾಗಿದ್ದರೆ ಅದು ಜಾಗ್ರದವಸ್ಥೆ, ಜಾಗ್ರತ್ತಿನ ಕಂಡಿರುವ ವಾಸನೆಗಳ ಒಳಗೆ ಪ್ರವೇಶಿಸಿದರೆ ಸ್ವಪ್ನಾವಸ್ಥೆಯೂ, ನಾಡೀಛಿದ್ರಗಳಲ್ಲಿ ಪ್ರವಹಿಸುವುದನ್ನು ತ್ಯಜಿಸಿ ತನ್ನ ಕಾರಣದಲ್ಲಿ ಲೀನವಾದರೆ ಆಗ ಅಶೇಷ ವಿಶೇಷಗಳಿಂದ ವೇದ್ಯವಾಗುವ ವೇದನೆಗಳು ವಿಲಯವಾಗುವುದರಿಂದ ಸುಷುಪ್ತಿಯೂ ಆಗುವುದು. ಹೀಗೆ ಮನಸಿನ ಸಂಚಾರವು ಭೇದದ ವಿಭ್ರಮೆಯಾಗಿ ಕರ್ತೃ, ಕ್ರಿಯೆ, ಕಾರಕ ಫಲಗಳಿಗೆ ಆಶ್ರಯವಾಗಿರುವುದು. [8–18]

ताभिः करोति कर्माणि पुनस्तैर्बध्यते मनः ।
मनसः केवलस्साक्षी भानुवत्पुरुषः परः ॥ १९ ॥

ತಾಭಿಃ ಕರೋತಿ ಕರ್ಮಾಣಿ ಪುನಸ್ತೈರ್ಬಧ್ಯತೇ ಮನಃ ।
ಮನಸಃ ಕೇವಲಸ್ಸಾಕ್ಷೀ ಭಾನುವತ್ಪುರುಷಃ ಪರಃ ॥ 19 ॥

ಇವುಗಳಿಂದ (ಭ್ರಮೆ) ಮನಸು ಕಾರ್ಯಗಳನ್ನು ಮಾಡುತ್ತದೆ ಮತ್ತು ಅವುಗಳಿಂದ ಬಂಧಿಸಲ್ಪಡುತ್ತದೆ. ಅದರಾಚೆಗಿರುವ ಆತ್ಮವು, ಮನಸಿನ ಕಾರ್ಯಗಳನ್ನು ಕೇವಲ ಸಾಕ್ಷೀಭಾವದಿಂದ ವೀಕ್ಷಿಸುತ್ತದೆ, ಸೂರ್ಯನಂತೆ (ನಮ್ಮ ಕಾರ್ಯಗಳಿಗೆ ಸಾಕ್ಷಿಯಾಗಿ). [8–19]

ವಿವೃತ್ತಿ

ಭೇದದ ಭ್ರಮೆಯು ಹೇಗಿದೆ ಎಂದು ತಿಳಿಸಲು **ತಾಭಿರಿತಿ.** ಭೇದವಿರುವ ಭ್ರಾಂತಿಯಿಂದ ಎಂಬ ಅರ್ಥ. ಹೇಗೆ ಮನಸಿನಿಂದ ಸಂಸಾರದ ವರ್ಣನೆಯಾಗುತ್ತದೆ ಆದರೆ ಆತ್ಮವೇ ಸಂಸಾರವಾಗಿದೆ ಎಂದು ಹೇಳಲು **ಮನಸ ಇತಿ.** ಮನಸಿಗೆ ಅನೇಕ ವಿಕಾರಗಳಿದ್ದು, ಕೇವಲ ನಿರ್ವಿಕಾರಿಯಾದ ಸಾಕ್ಷೀ ಪುರುಷನು ಮನಸಿನಿಂದ ಹೊರಗಿರುವನು, ಜಗತ್ತಿಗೆ ಸಾಕ್ಷೀಯಾಗಿ ಸೂರ್ಯನಿರುವಂತೆ. ಸಾಕ್ಷಿಮಾತ್ರವಾಗಿರುವ ಅವಸ್ಥೆಯು ಸಂಸಾರಧರ್ಮವಾಗಿರುವರಿಂದ ಅದರ ಸಾಕ್ಷ್ಯವಿಧಗಳಲ್ಲಿ ಪತನವಾಗುವುದು ಅಸಾಕ್ಷಿಕತೆಗೆ ಹೇತುವಾಗಿ ಅವಸ್ಥಾತ್ರಯಗಳು ಉಂಟಾಗುವುವು ಎಂಬ ಭಾವ. [8–19]

यथा प्राणिकृतैरर्कः कर्मभिर्नैव बध्यते ।
तथा मनःकृतैरात्मा साक्षित्वान्नैव बध्यते ॥ २० ॥

ಯಥಾ ಪ್ರಾಣಿಕೃತೈರರ್ಕಃ ಕರ್ಮಭಿರ್ನೈವ ಬಧ್ಯತೇ ।
ತಥಾ ಮನಃಕೃತೈರಾತ್ಮಾ ಸಾಕ್ಷಿತ್ವಾನ್ನೈವ ಬಧ್ಯತೇ ॥ 20 ॥

ಹೇಗೆ ಭೂಮಿಯಲ್ಲಿರುವ ಪ್ರಾಣಿಗಳು ಮಾಡುವ ಕೃತ್ಯಗಳಿಂದ ಸೂರ್ಯನು ಬಾಧಿತನಾಗುವುದಿಲ್ಲವೋ, ಹಾಗೆ ಸಾಕ್ಷಿಯಾಗಿರುವ ಆತ್ಮನು ಮನಸಿನ ಕಾರ್ಯಗಳಿಂದ ಬಂಧಿತನಾಗುವುದಿಲ್ಲ. [8–20]

ವಿವೃತ್ತಿ

ಕರ್ಮಗಳಿಗೆ ಸಾಕ್ಷಿತ್ವವಿರುವ ಪುರುಷನು ಕರ್ಮದಲ್ಲಿ ಲಿಪ್ತನಾಗುವುದಿಲ್ಲ ಎಂದು ಹೇಳುವ **ಯಥಾ ಪ್ರಾಣಿಕೃತೈರಿತಿ.** ಹಾಗೆಂದು ಶ್ರುತಿಯು 'ಸೂರ್ಯೋ ಯಥಾ ಸರ್ವಲೋಕಸ್ಯ ಚಕ್ಷುಃ' (ಕ.ಉ.5–11) ಎಂದು ಹೇಳುತ್ತದೆ. [8–20]

आत्मा करोति कर्माणि बध्यते मुच्यते च तैः ।
इतौपचारिकी प्तिर्भ्रममात्रैव केवलम् ॥ २१ ॥

ಆತ್ಮಾ ಕರೋತಿ ಕರ್ಮಾಣಿ ಬಧ್ಯತೇ ಮುಚ್ಯತೇ ಚ ತೈಃ ।
ಇತ್ಯೌಪಚಾರಿಕೀ ಕ್ಲ್ಪ್ತಿರ್ಭ್ರಮಮಾತ್ರೈವ ಕೇವಲಮ್ ॥ 21 ॥

ಆತ್ಮವು ಕಾರ್ಯಗಳನ್ನು ಮಾಡುತ್ತದೆ, ಅದು ಅದರಿಂದ ಬಂಧಿತವಾಗಿದೆ ಮತ್ತು ಅದು ಅದರಿಂದ ಬಿಡುಗಡೆ ಹೊಂದಿತು ಇತ್ಯಾದಿಗಳು ಶಾಬ್ದಿಕವಾಗಿ ಮಾತ್ರ ಸತ್ಯವಾಗಿವೆ ಹಾಗೂ ಬರಿಯ ಭ್ರಮೆಯಾಗಿವೆ. [8–21]

ವಿವೃತ್ತಿ

ಆತ್ಮವು ಅಕರ್ತಾ ಅಭೋಕ್ತಾ ಆಗಿದ್ದರೆ, ಲೋಕದಲ್ಲಿರುವವರು ಅದಕ್ಕೆ ಕರ್ತೃತ್ವ ಮೊದಲಾದ ಕೀರ್ತಿಗಳನ್ನು ಹೇಳುತ್ತಾರೆ ಎಂಬ ಶಂಕೆಗೆ ಜಪಾಕುಸುಮದ (ಕೆಂಪುದಾಸವಾಳ) ಎದುರಿಗಿರುವ ಸ್ಫಟಿಕವು ಲೋಹಿತವರ್ಣದ್ದಾಗಿ ಅವಭಾಸವಾಗುವಂತೆ ಮನಸು ಮುಂತಾದ ಕರ್ತೃಗಳ ಸನ್ನಿಧಿಯಲ್ಲಿರುವ ಉಪಾಧಿಗಳ ನಿಮಿತ್ತವಾಗಿ ಅದರ ಕರ್ತೃತ್ವವು ಅವಭಾಸವಾಗುವುದು. ಅವಿವೇಕದಿಂದಾಗಿ ಲೋಕದಲ್ಲಿರುವವರಿಗೆ ಕರ್ತೃತ್ವ ಮೊದಲಾದವುಗಳ ಪ್ರಸಿದ್ಧಿಯು ಕಂಡುಬರುತ್ತದೆ ಎಂಬ ಅಭಿಪ್ರಾಯವನ್ನು ಹೇಳಲು **ಆತ್ಮಾ ಕರೋತೀತಿ.** [8–21]

धूमाभ्रधूळीनीहारैरस्पृष्टोपि दिवाकरः ।
यथा छन्न इवाभाति तथैवात्मापि मायया ॥ २२ ॥

ಧೂಮಾಭ್ರಧೂಳೀನೀಹಾರೈರಸ್ಪೃಷ್ಟೋಽಪಿ ದಿವಾಕರಃ ।
ಯಥಾ ಛನ್ನ ಇವಾಭಾತಿ ತಥೈವಾತ್ಮಾಪಿ ಮಾಯಯಾ ॥ 22 ॥

ಹೊಗೆ, ಮೋಡ, ಧೂಳು ಮತ್ತು ಮಂಜುಗಳು ಸೂರ್ಯನನ್ನು ಆವರಿಸಿದಂತೆ ಕಂಡರೂ, ಅವನು ಅವುಗಳಿಂದ ಸ್ಪರ್ಶಿಸಲ್ಪಡುವುದಿಲ್ಲವೋ, ಹಾಗೆಯೇ ಆತ್ಮವು ಮಾಯೆಯಿಂದ ಆವರಿಸಲ್ಪಟ್ಟಿದೆ. [8–22]

ವಿವೃತ್ತಿ

ಆತ್ಮವು ಮನಸು ಮುಂತಾದ ಉಪಾಧಿಗಳ ಸಂಬಂಧದಿಂದ ಅವುಗಳಂತೆಯೇ ಪ್ರಕಾಶಿತವಾಗುವುದಾದರೆ, ಅದು ಅಸಂಗತ್ವ ಮುಂತಾದ ಸ್ವಭಾವವಿರುವಂತಹದು ಎಂದು ಭಾವಿಸುವುದು ಯಾಕೆ ಎಂಬ ಶಂಕೆಗೆ ದೃಷ್ಟಾಂತದ ಮೂಲಕ ವಿವರಿಸುವ **ಧೂಮಾಭ್ರೇತಿ.** ***ಮಾಯಯಾ*** ಮಾಯೆಯ ಕಾರ್ಯದಿಂದ ಎಂಬ ಅರ್ಥ. [8–22]

यथा लीलावशात्कश्चिद्भ्राम्यमाणः कुमारकः ।
भ्रमत्तत्पश्यति जगत् शतचन्द्रं नभस्स्थलम् ॥ २३ ॥
तथैव मायया जीवो भ्रामितो वासनावशात् ।
नानाकारमिदं विश्वं भ्रममाणं च पश्यति ॥ २४ ॥

ಯಥಾ ಲೀಲಾವಶಾತ್ಕಶ್ಚಿದ್ಭ್ರಾಮ್ಯಮಾಣಃ ಕುಮಾರಕಃ ।
ಭ್ರಮತ್ತತ್ಪಶ್ಯತಿ ಜಗತ್ ಶತಚಂದ್ರಂ ನಭಸ್ಸ್ಥಲಮ್ ॥ 23 ॥
ತಥೈವ ಮಾಯಯಾ ಜೀವೋ ಭ್ರಾಮಿತೋ ವಾಸನಾವಶಾತ್ ।
ನಾನಾಕಾರಮಿದಂ ವಿಶ್ವಂ ಭ್ರಮಮಾಣಂ ಚ ಪಶ್ಯತಿ ॥ 24 ॥

ಆಟವಾಡುತ್ತಾ ಸುತ್ತು ಭ್ರಮಿಸುತ್ತಿರುವ ಬಾಲಕನು, ಜಗತ್ತು ತನ್ನ ಸುತ್ತು ಭ್ರಮಿಸುತ್ತಿರುವಂತೆ ಕಾಣುತ್ತಾನೆ ಹಾಗೂ ಆಕಾಶದಲ್ಲಿ ನೂರಾರು ಚಂದ್ರರನ್ನು ಕಂಡಂತೆ ಭಾವಿಸುತ್ತಾನೆ; ಅದೇರೀತಿ ವಾಸನೆಗಳಿಂದಾಗಿ (ಹಿಂದಿನ ಅನುಭವಗಳ ಸಂವೇದನೆ) ಜೀವನು ಮಾಯೆಗೆ ವಶವಾಗಿ, ಸಂಪೂರ್ಣ ವಿಶ್ವವು ವಿವಿಧ ರೂಪ–ಆಕಾರಗಳಿಂದ ಸುತ್ತುತ್ತಿರುವಂತೆ ಕಾಣುತ್ತಾನೆ. [8–23..24]

ವಿವೃತ್ತಿ

ಪರಮಾರ್ಥದಲ್ಲಿ ಆವೃತವಾಗಿರುವಂತೆ ಭಾವಿಸಲ್ಪಡುವ ಆತ್ಮದ ಆವೃತತ್ವವು ಪ್ರತೀತಿಮಾತ್ರವೆಂದು ದೃಷ್ಟಾಂತದ ಮೂಲಕ ಉಪಪಾದಿಸಿದ ಬಳಿಕ ಅದು ಆತ್ಮದ ವಿಕ್ಷೇಪ ಅವಭಾಸವಾಗಿದ್ದು ಪರಮಾರ್ಥದಲ್ಲಿ ಅಲ್ಲ ಎಂದು ಇಲ್ಲಿ ದೃಷ್ಟಾಂತವನ್ನು ಹೇಳುತ್ತಾ **ಯಥಾ ಲೀಲಾವಶಾದಿತಿ.** ಉದಾಹರಿಸಲ್ಪಟ್ಟದ್ದನ್ನು ವಿವರಿಸಲು **ತಥೈವೇತಿ.** ***ವಾಸನಾವಶಾತ್*** ವಿಷಯವಾಸನೆಗೆ ಒಳಗಾಗಿ, ಹಿಂದು ಹಿಂದಿನ ಭ್ರಮೆಯ ಸಂಸ್ಕಾರಗಳ ಉದ್ಭವವಾಗುವುದರಿಂದ. ನಾನಾಕಾರದ ದೇವ–ತಿರ್ಯಕ್–ಮನುಷ್ಯ ಮುಂತಾದ ಆನೇಕ ವಿಧಗಳು ಭ್ರಮೆಯನ್ನುಂಟುಮಾಡುವಂತಹವು, ಚಂಚಲ ಎಂಬ ಅರ್ಥ. [8–23..24]

संसृज्य मनसा देवस्संसरन्निव लक्ष्यते ।
यथार्को जलसंसर्गाच्चलन्नानेव लक्ष्यते ॥ २५ ॥

ಸಂಸೃಜ್ಯ ಮನಸಾ ದೇವಸ್ಸಂಸರನ್ನಿವ ಲಕ್ಷ್ಯತೇ ।
ಯಥಾರ್ಕೋ ಜಲಸಂಸರ್ಗಾಚ್ಚಲನ್ನಾನೇವ ಲಕ್ಷ್ಯತೇ ॥ 25 ॥

ದೈವಿಕ ಆತ್ಮವು ಮನಸಿನ ಸಂಪರ್ಕದಿಂದ ವಿಶ್ವದಲ್ಲಿ ಚಲಿಸುತ್ತಿರುವಂತೆ ತೋರಿಬರುತ್ತದೆ; ಸೂರ್ಯನು ನೀರಿನ ಸಂಪರ್ಕದಿಂದ ಬಹು ರೂಪದಲ್ಲಿ ಚಲಿಸುವುದನ್ನು ಕಾಣುವಂತೆ. [8–25]

ವಿವೃತ್ತಿ

ಮಾಯೆಯಿಂದಾಗಿ ಭ್ರಮೆಗೊಳಗಾಗಿರುವಂತಿರುವ ಜೀವನು ನಿಜಾರ್ಥದಲ್ಲಿ ಭ್ರಮಿಸುತ್ತಿಲ್ಲ ಎಂಬುದನ್ನು ಉದಾಹರಣೆಯಿಂದ ಉಪಪಾದಿಸುವ **ಸಂಸೃಜ್ಯ ಮನಸೇತಿ.** ***ದೇವಃ*** ಆತ್ಮವು. ಆತ್ಮದ ನಾನಾತ್ವವು ಪ್ರತಿಭಾಸವಾಗುವುದನ್ನು ಉದಾಹರಣೆಯ ಮೂಲಕ ಮಿಥ್ಯೆ ಎಂದು ಪ್ರಸ್ತುತಪಡಿಸುವ **ನಾನೇವ ಲಕ್ಷ್ಯತ ಇತಿ.** *ಚಲನ್ನಿವ ನಾನೇವೇತಿ* ಎಂದು ಯೋಜಿಸಿಕೊಳ್ಳುವುದು. [8–25]

योगाभ्यासवशाद्येन मनो निर्विषयं कृतम् ।
निवृत्तस्स पुमान्त्सद्यो जिवन्मुक्तो भविष्यति ॥ २६ ॥

ಯೋಗಾಭ್ಯಾಸವಶಾದ್ಯೇನ ಮನೋ ನಿರ್ವಿಷಯಂ ಕೃತಮ್ ।
ನಿವೃತ್ತಸ್ಸ ಪುಮಾಂತ್ಸದ್ಯೋ ಜೀವನ್ಮುಕ್ತೋ ಭವಿಷ್ಯತಿ ॥ 26 ॥

ಯೋಗಾಭ್ಯಾಸ ಮಾಡಿದ ಮನುಷ್ಯನು, ಮನಸನ್ನು ವಿಷಯರಹಿತವಾಗಿಸಿದಾಗ, ಜಗತ್ತಿನಿಂದ ನಿವೃತ್ತಿಯನ್ನು ಪಡೆದು ಜೀವನ್ಮುಕ್ತನಾಗಿ ಬೆಳೆಯುತ್ತಾನೆ. [8–26]

ವಿವೃತ್ತಿ

ಹಾಗೆಯೇ ಮಾಯೆಯಿಂದ ಆವರಿತನಾದ ಜೀವನು ಬಂಧಕ್ಕೆ ಒಳಗಾಗಿರುವುದರಿಂದ ತತ್ತ್ವಜ್ಞಾನವನ್ನು ಚಿದಾತ್ಮನಾಗುವ ಸಾಧನವೆಂದು ಹೇಳಿ ಅದರ ಮೂಲಕ ಮೋಕ್ಷವೆಂದು ತಿಳಿಸುವ **ಯೋಗಾಭ್ಯಾಸೇತಿ.** ***ನಿರ್ವಿಷಯಂ ಕೃತಂ*** ಶೂನ್ಯ ಅವಲಂಬನೆಯ, ಅವಿಷಯಕ ಬ್ರಹ್ಮರೂಪವನ್ನು ಅರಿತು ಎಂಬ ಅರ್ಥ. ಹಾಗಾಗಿಯೇ ಅಂತಹ

ಪುರುಷನು ಇರುವ ಎಲ್ಲ ಬಾಹ್ಯವಿಷಯಗಳಿಂದ ನಿವೃತ್ತನಾದವನು ***ಜೀವನ್ಮುಕ್ತಃ*** ನಿರ್ವಿಷಯಕ ಆತ್ಮಜ್ಞಾನದ ಉದಯವನ್ನು ಅಲ್ಪಸಮಯದಲ್ಲಿಯೇ ಪಡೆಯುವನು. [8–26]

द्वा सुपर्णौ च सयुजावभवन्मायया शिवः ।
अजामेकां जुषन्नेको नानेवासीदिति श्रुतिः ॥ २७ ॥

ದ್ವಾ ಸುಪರ್ಣೌ ಚ ಸಯುಜಾವಭವನ್ಮಾಯಯಾ ಶಿವಃ ।
ಅಜಾಮೇಕಾಂ ಜುಷನ್ನೇಕೋ ನಾನೇವಾಸೀದಿತಿ ಶ್ರುತಿಃ ॥ 27 ॥

ಮಾಯೆಯಿಂದ ಶಿವನು ಯಾವಾಗಲೂ ಜೊತೆಯಲ್ಲಿರುವ ಎರಡು ಸುವರ್ಣ ಪಕ್ಷಿಗಳಂತೆ ಆಗಿದ್ದಾನೆ; ಒಂದು (ಪುರುಷ) ಜನ್ಮಿಸದ ಇನ್ನೊಂದಕ್ಕೆ (ಪ್ರಕೃತಿ) ಅಂಟಿಕೊಂಡು ಬಹುವಾಗಿ ಆಗಿದ್ದಾನೆ, ಬಹುತ್ವವೇ ಅವನ ಗುಣವೆಂಬಂತೆ. (ಮು.ಉ. 3–1; ಯಾ.ಉ. 12–5). [8–27]

ವಿವೃತ್ತಿ

ಇಲ್ಲಿ ಜೀವ–ಈಶ್ವರರೊಳಗಿನ ಮಾಯಿಕ ಭೇದವನ್ನು ಅರ್ಥೈಸಲು ಶ್ರುತಿಯನ್ನು ಉದಾಹರಿಸುವ **ದ್ವಾ ಸುಪರ್ಣಾವಿತಿ.** 'ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ । ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನ್ಯೋ ಅಭಿಚಾಕಶೀತಿ ॥' (ಮು.ಉ.3–1), 'ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ ಬಹ್ವೀಂ ಪ್ರಜಾಂ ಜನಯಂತೀಂ ಸರೂಪಾಂ' (ಯಾ.ಉ.12–5) ಮುಂತಾದ ಶ್ರುತಿಗಳಂತೆ. [8–27]

इति श्रीदक्षिणामूर्तिस्त्रोत्रार्थप्रतिपादके ।
प्रबन्धे मानसोल्लासे अष्टमोल्लाससङ्ग्रहः ॥ २८ ॥

ಇತಿ ಶ್ರೀದಕ್ಷಿಣಾಮೂರ್ತಿಸ್ತ್ರೋತ್ರಾರ್ಥಪ್ರತಿಪಾದಕೇ ।
ಪ್ರಬಂಧೇ ಮಾನಸೋಲ್ಲಾಸೇ ಅಷ್ಟಮೋಲ್ಲಾಸಸಂಗ್ರಹಃ ॥ 28 ॥

ಶ್ರೀದಕ್ಷಿಣಾಮೂರ್ತಿ ಸ್ತೋತ್ರದ ಅರ್ಥವನ್ನು ಪ್ರತಿಪಾದಿಸುವ ಮಾನಸೋಲ್ಲಾಸವೆಂಬ ಪ್ರಬಂಧದ ಎಂಟನೆಯ ಉಲ್ಲಾಸದ ವಿವರಣೆಯು ಇಲ್ಲಿಗೆ ಮುಗಿಯಿತು. [8–28]

ವಿವೃತ್ತಿ

ಎಂಟನೆಯ ಶ್ಲೋಕದ ವ್ಯಾಖ್ಯೆಯನ್ನು ಉಪಸಂಹರಿಸುವ **ಇತೀತಿ.** [8–28]

ಇತಿ ಶ್ರೀಮಾನಸೋಲ್ಲಾಸವೃತ್ತಾಂತೇ ಅಷ್ಟಮೋಲ್ಲಾಸಃ ಸಮಾಪ್ತಃ ।

ನವಮೋಲ್ಲಾಸಃ

ಈಶ್ವರನಿಗೆ ಶರಣಾಗತಿ

ಶ್ರದ್ಧೆಯಿಂದ ಮಾಯೆಯ ಅಂತ್ಯ

कथमेवंविधा माया निवर्तेतेति पृच्छतः ।
इश्वरोपासनारूपस्तदुपायः प्रकीर्त्यते ॥ १ ॥

ಕಥಮೇವಂವಿಧಾ ಮಾಯಾ ನಿವರ್ತೇತೇತಿ ಪೃಚ್ಛತಃ ।
ಈಶ್ವರೋಪಾಸನಾರೂಪಸ್ತದುಪಾಯಃ ಪ್ರಕೀರ್ತ್ಯತೇ ॥ 1 ॥

ಈ ತರಹದ ಮಾಯೆಯು ಹೇಗೆ ನಿವಾರಿಸಲ್ಪಡುವುದು? ಎಂದು ಪ್ರಶ್ನಿಸಿದವರಿಗೆ, ಈಶ್ವರನ ಉಪಾಸನೆಯು ಅದರ ಉಪಾಯವೆಂದು ಪ್ರಸಿದ್ಧವಾಗಿದೆ ಎಂದು ಹೇಳುತ್ತಾರೆ. [9–1]

ವಿವೃತ್ತಿ

ಇನ್ನುಮುಂದೆ ಇದುವರೆಗೆ ವಿವರಿಸಿರುವ ಆತ್ಮವೇ ಈಶ್ವರನೆಂದು ಅರಿಯುವ ಸಾಧನೆಯ ವಿಧಾನವನ್ನು ಮುಂದಿನ ಶ್ಲೋಕದಲ್ಲಿ ತಿಳಿಸುತ್ತಾರೆ ಎಂಬುದಕ್ಕೆ **ಕಥಮೇವಂವಿಧೇತಿ.** [9–1]

ಈಶ್ವರನ ನಾನಾ ರೂಪಗಳು

षट्त्रिंशत्तत्त्वरूपासु परमेश्वरमूर्तिषु ।
प्रत्यक्षेणोपलभ्यन्ते सर्वैरप्यष्टमूर्तयः ॥ २ ॥

ಷಟ್ತ್ರಿಂಶತ್ತತ್ತ್ವರೂಪಾಸು ಪರಮೇಶ್ವರಮೂರ್ತಿಷು ।
ಪ್ರತ್ಯಕ್ಷೇಣೋಪಲಭ್ಯಂತೇ ಸರ್ವೈರಪ್ಯಷ್ಟಮೂರ್ತಯಃ ॥ 2 ॥

ಮೂವತ್ತಾರು ತತ್ತ್ವಗಳು ಈಶ್ವರನ ದೇಹಗಳಾಗಿದ್ದು, ಅದರಲ್ಲಿ ಎಂಟು ರೂಪಗಳು ಎಲ್ಲರಿಗೂ ಸುಲಭವಾಗಿ ದೃಷ್ಟವಾಗುವುದು. [9–2]

ವಿವೃತ್ತಿ

ಈಶ್ವರನ ಉಪಾಸನೆಯನ್ನು ಹೇಗೆ ಅವಲಂಬಿಸುವುದು? ನಿರಾಲಂಬನ ಉಪಾಸನೆಯು ಸಂಭವವಾಗುವುದಿಲ್ಲ; ಅಂತೆಯೇ ಈಶ್ವರನ ಸ್ವರೂಪವನ್ನೇ ಅವಲಂಬಿಸಿ ಉಪಾಸಿಸುವುದೂ ಸಾಧ್ಯವಿಲ್ಲ, ಅವನ ನಿರಾಕಾರತ್ವದಿಂದ. ಹಾಗಾಗಿ ಅದರ ಸಾಧ್ಯತೆಯೇ ಇಲ್ಲ ಎಂಬ ಶಂಕೆಗೆ ಉತ್ತರವಾಗಿ ಪ್ರಪಂಚದ ಉಪಾಧಿಯಿಂದ ಕಲ್ಪಿತ ಮೂರ್ತರೂಪದಲ್ಲಿ ಈಶ್ವರನಿಗೆ ಯುಕ್ತವಾದ ಉಪಾಸನೆಯನ್ನು ಅವಲಂಬಿಸಬಹುದು ಎಂದು ಪರಿಹಾರವನ್ನು ಹೇಳುವ **ಷಟ್ತ್ರಿಂಶತ್ತತ್ತ್ವರೂಪಾಸ್ವಿತಿ.** ಮೂವತ್ತಾರು ತತ್ತ್ವಗಳು ಶೈವಾಗಮಗಳಲ್ಲಿ ಪ್ರಸಿದ್ಧವಾಗಿವೆ. ಅವುಗಳಲ್ಲಿ ದೃಷ್ಟವಾಗಿ ನಿರ್ಧರಿಸಬಹುದಾದದ್ದು ಏಳು; ಆಕಾಶದ ಮನೋಗೋಚರತ್ವವು ಸಾಕ್ಷಿಮಾತ್ರವಾಗಿ

ಗೋಚರವಾಗುವಿಕೆಯು ಮನಸನ್ನು ಆಶ್ರಯಿಸಿದ್ದು, 'ಪ್ರತ್ಯಕ್ಷೇಣೋಪಲಭ್ಯಂತೇ' ಎಂಬ ವಚನದಂತೆ ದೃಷ್ಟವಾಗುವುದು ಎಂದು ತಿಳಿಯಬಹುದು. [9–2]

ಶೈವಾಗಮಗಳಲ್ಲಿ ವಿವರಿಸಿರುವ ಮೂವತ್ತಾರು ತತ್ತ್ವಗಳನ್ನು ತಿಳಿಯಲು ಅಧ್ಯಾಯ 2, ಶ್ಲೋಕ 31–42 ನೋಡಿ.

अनुमेयासु न मनः क्षिप्रमारोहतीत्यतः ।
मूर्त्यष्टकमयीं ब्रूते गुरुस्सर्वात्मभावनाम् ॥ ३ ॥

ಅನುಮೇಯಾಸು ನ ಮನಃ ಕ್ಷಿಪ್ರಮಾರೋಹತೀತ್ಯತಃ ।
ಮೂರ್ತ್ಯಷ್ಟಕಮಯೀಂ ಬ್ರೂತೇ ಗುರುಸ್ಸರ್ವಾತ್ಮಭಾವನಾಮ್ ॥ 3 ॥

ಅರ್ಥಮಾಡಿಕೊಳ್ಳಲು ಕಷ್ಟಕರವಾದ ವಿಷಯವಸ್ತುಗಳನ್ನು ಸುಲಭವಾಗಿ ತಿಳಿದುಕೊಳ್ಳಲು ಮನಸಿಗೆ ಅಸಾಧ್ಯವಾಗಿರುವುದರಿಂದ, ಗುರುವು ಸರ್ವಾತ್ಮನ ವಿಶ್ವ ಭಾವವನ್ನು ಅಷ್ಟಮೂರ್ತಿಗಳಂತೆ ಕಾಣುವ ರೂಪದಲ್ಲಿ ಹೇಳುತ್ತಾನೆ. [9–3]

ವಿವೃತ್ತಿ

ಈ ಎಂಟು ಮೂರ್ತಿಗಳ ರೂಪವಾಗಿಯೇ ಏಕೆ, ಅನ್ಯರೂಪಗಳು ಯಾಕಿಲ್ಲ ಎಂಬ ಪ್ರಶ್ನೆಗೆ **ಅನುಮೇಯಾಸ್ವಿತಿ.** ***ಗುರುಃ*** ಶ್ರೀಶಂಕರಾಚಾರ್ಯರು. ಪ್ರಕಾಶ್ಯ–ಪ್ರಕಾಶಕರಿಂದ ಹೊರತಾದವುಗಳನ್ನು ಅರಿಯುವುದು ಸುಲಭಸಾಧ್ಯವಲ್ಲದುದರಿಂದ ಈಶ್ವರನ ಅಷ್ಟಮೂರ್ತಿಗಳ ಹೊರತಾದುದನ್ನು ಅರಿಯುವುದು ಸುಲಭವಲ್ಲ. ಹಾಗಾಗಿ ಕಂಡುಬರುವ ಅಷ್ಟಮೂರ್ತಿಗಳ ಧ್ಯಾನವೇ ಈಶ್ವರನ ಸರ್ವಾತ್ಮಭಾವದ ಧ್ಯಾನವು ಎಂದು ಅಭಿಪ್ರಯಿಸುವ **ಸರ್ವಾತ್ಮಭಾವನಾಮಿತಿ.** [9–3]

ಸ್ತೋತ್ರದ ಒಂಭತ್ತನೆಯ ಚರಣ

भूरम्भांस्यनलोऽनिलोम्बरमहर्नाथो हिमांशुः
पुमानित्याभाति चराचरात्मकमिदं यस्यैव मूर्त्यष्टकम् ।
नान्यत्किञ्चन विद्यते विमृशतां यस्मात्परस्माद्विभोः
तस्मै श्रीगुरुमूर्तये नम इदं श्रीदक्षिणामूर्तये ॥ ९ ॥

ಭೂರಂಭಾಂಸ್ಯನಲೋಽನಿಲೋಂಬರಮಹರ್ನಾಥೋ ಹಿಮಾಂಶುಃ
ಪುಮಾನಿತ್ಯಾಭಾತಿ ಚರಾಚರಾತ್ಮಕಮಿದಂ ಯಸ್ಯೈವ ಮೂರ್ತ್ಯಷ್ಟಕಮ್ ।
ನಾನ್ಯತ್ಕಿಂಚನ ವಿದ್ಯತೇ ವಿಮೃಶತಾಂ ಯಸ್ಮಾತ್ಪರಸ್ಮಾದ್ವಿಭೋಃ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ 9 ॥

ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ ಮತ್ತು ಪುರುಷ ಎಂದು ಭಾಸವಾಗುವ ಯಾವನ ಅಷ್ಟಮೂರ್ತ್ಯಾತ್ಮಕ ದೇಹವು ಈ ಚರಾಚರ ಜಗತ್ತಾಗಿದ್ದು, ವಿಮರ್ಶಿಸುವವರಿಗೆ ಶ್ರೇಷ್ಠನಾಗಿರುವ ಅವನಿಂದಾಚೆಗೆ

ಬೇರೇನೂ ಕಂಡುಬರದೆ ಅವನೇ ಅಂತಿಮ ಸತ್ಯವಾಗಿರುವ ವಿಭುವಿಗೆ, ಶ್ರೀ ಗುರುರೂಪದಲ್ಲಿರುವ ಶ್ರೀ ದಕ್ಷಿಣಾಮೂರ್ತಿ ಸ್ವರೂಪನಿಗೆ, ಶಿವನಿಗೆ, ನನ್ನ ಈ ನಮಸ್ಕಾರಗಳು. {9}

ವಿವೃತ್ತಿ

ಅಹರ್ನಾಥಃ ಸೂರ್ಯನು. ***ಪುಮಾನ್*** ತ್ರಿಲೋಕದ ಅಂತರ್ಯಾಮಿಯಾಗಿರುವ ಪುರುಷನು. ಅಥವಾ ಪುಮಾನ್ ಭೋಕ್ತೃ. ಇತರ ರೂಪಗಳು ಪ್ರಸಿದ್ಧವಾಗಿವೆ. ಹಾಗೆ ಚರಾಚರ ರೂಪವಾಗಿ ಕಾಣುವ ಎಲ್ಲವೂ ಈ ಅಷ್ಟಮೂರ್ತಿಗಳಾಗಿವೆ, ಅಂತಹವನಿಗೆ ನಮಸ್ಕಾರಗಳು. ಈ ಈಶ್ವರಮೂರ್ತಿರೂಪಗಳು ಈಶ್ವರನಿಂದ ಭಿನ್ನವಾಗಿವೆಯೇ? ಎಂಬ ಶಂಕೆಗೆ **ನಾನ್ಯದಿತಿ.** ***ವಿಮೃಶತಾಂ*** ವಿಚಾರ ಮಾಡಿದಾಗ. ***ಯಸ್ಮಾತ್ ಪರಸ್ಮಾತ್ ವಿಭೋಃ*** ಸರ್ವಕಾರಣಗಳಿಂದಲೂ ಅಪರಿಚ್ಛಿನ್ನನಾದ ಈಶ್ವರನ ಹೊರತಾಗಿರುವುದು ಯಾವುದೂ ಕಾಣದಿರುವುದರಿಂದ. ವಿಚಾರಮಾಡಿದಾಗ ಈಶ್ವರನಿಂದ ಬೇರೆಯಾಗಿ ಸ್ವತಂತ್ರವಾಗಿರುವ ಜಗತ್ತು ಇಲ್ಲದಿರುವುದರಿಂದ ಎಲ್ಲವೂ ಅವನಲ್ಲಿಯೇ ಕಲ್ಪಿತವಾಗಿರುವುದು, ಅಂತಿರುವ ಶರೀರವು ಎಂಬ ಅಭಿಪ್ರಾಯವು. {9}

ಒಂಬತ್ತನೆಯ ಚರಣದ ಅರ್ಥವನ್ನು ಹೀಗೆ ವಿವರಿಸಬಹುದು:

ಪಿಂಡಾಂಡ ಮತ್ತು ಬ್ರಹ್ಮಾಂಡದ ಏಕತೆ

अस्यैवं सिद्धान्तः –
विराट्छरीरे ब्रह्माण्डे प्राणिनामपि विग्रहे ।
षट्त्रिंशत्तत्त्वसङ्घातस्सर्वत्राप्यनुवर्तते ॥ ४ ॥

ಅಸ್ಯೈವಂ ಸಿದ್ಧಾಂತಃ –
ವಿರಾಟ್ಛರೀರೇ ಬ್ರಹ್ಮಾಂಡೇ ಪ್ರಾಣಿನಾಮಪಿ ವಿಗ್ರಹೇ ।
ಷಟ್ತ್ರಿಂಶತ್ತತ್ತ್ವಸಂಘಾತಸ್ಸರ್ವತ್ರಾಪ್ಯನುವರ್ತತೇ ॥ 4 ॥

ವಿರಾಟ್ ಸ್ವರೂಪಿಯ ಶರೀರವಾದ ಬ್ರಹ್ಮಾಂಡದಲ್ಲಿ ಮತ್ತು ಅದೇ ರೀತಿ ಮಾನವ ದೇಹದಲ್ಲಿ, ಮೂವತ್ತಾರು ತತ್ತ್ವಗಳ ಸಂಯೋಜನೆಗಳು ಸರ್ವವ್ಯಾಪಿಯಾಗಿವೆ. [9–4]

ವಿವೃತ್ತಿ

ಇದರ ತಾತ್ಪರ್ಯವನ್ನು ವ್ಯಾಖ್ಯಾನಿಸಿ ವಿವರಿಸಲು ಆರಂಭಿಸುವ **ಅಸ್ಯೈವಮಿತಿ.** ಇದರ ವಿವರವು ಇಂತಿದೆ: ಸರ್ವ ಜಗತ್ತು ಅಷ್ಟಮೂರ್ತ್ಯಾತ್ಮಕವಾಗಿದ್ದು, ಮಹೇಶ್ವರನ ಶರೀರವು ಮೂವತ್ತಾರು ತತ್ತ್ವಗಳ ರೂಪದಿಂದ ಎರಡು ವಿಧವಾಗಿದೆ, ಅಧಿದೈವ ಮತ್ತು ಅಧ್ಯಾತ್ಮ ಎಂದು. ಮೊದಲನೆಯದಾದ ಬ್ರಹ್ಮಾಂಡವು ಹದಿನಾಲ್ಕು ಲೋಕಗಳಿಂದ ಕೂಡಿದ್ದು, ಎರಡನೆಯದಾದ ಪಿಂಡಾಂಡವು ಪಿಂಡರೂಪ, ಶರೀರರೂಪವಾಗಿದೆ. ಇವೆರಡೂ ಕಾರ್ಯ–ಕಾರಣ ರೂಪದಿಂದ ಅಭೇದವಾಗಿದೆ. ಸಮಷ್ಟಿಯಾದ ಬ್ರಹ್ಮಾಂಡದ ಅವಯವಗಳು ಎಲ್ಲವೂ ವ್ಯಷ್ಟಿರೂಪವಾಗಿರುವ ಪಿಂಡದ ಅವಯವಗಳಾಗಿ ಉಪಸ್ಥಿತವಿದ್ದು, ಪಿಂಡದ ಅವಯುವಗಳು ಬ್ರಹ್ಮಾಂಡದ ಅವಯವಗಳ ರೂಪದಿಂದ ಇರುವುದಾಗಿ, ಮಹೇಶ್ವರನನ್ನು ಅವುಗಳ ರೂಪವಾಗಿ ಇರುವಂತೆ ಧ್ಯಾನಿಸಬೇಕು. ಅವನಲ್ಲಿ ಸ್ಥಿರೀಕರಿಸಿರುವ ಅಂತಃಕರಣದಿಂದ ಮಹೇಶ್ವರನ ಪ್ರಸಾದವೇ ಆಗಿರುವ ನಿರ್ವಿಶೇಷ ತತ್ತ್ವವನ್ನು ಹಿಂದಿನ ಎಂಟುಶ್ಲೋಕಗಳಲ್ಲಿ

ಪ್ರತಿಪಾದಿಸಿದೆ ಎಂದು ಸಾಕ್ಷಾತ್ಕರಿಸಿಕೊಂಡವನು ಕೃತಕೃತ್ಯನಾಗುವನು. ಅದೆಲ್ಲವನ್ನೂ ಕ್ರಮವಾಗಿ ತೋರಿಸಿಕೊಡುವ **ವಿರಾಡಿತ್ಯಾದಿನಾ.** ***ಬ್ರಹ್ಮಾಂಡೇ*** ಸಮಷ್ಟಿರೂಪದಲ್ಲಿ. ***ಪ್ರಾಣಿನಾಂ ವಿಗ್ರಹೇ*** ವ್ಯಷ್ಟಿರೂಪದಲ್ಲಿ. ***ಷಟ್ತ್ರಿಂಶತ್ತತ್ತ್ವ*** ಎರಡನೆಯ ಶ್ಲೋಕದ ಉಲ್ಲಾಸದಲ್ಲಿ ವಿವರಿಸಲಾಗಿದೆ. ಪಂಚಭೂತಗಳು, ಪಂಚಪ್ರಾಣಗಳು, ಹದಿನಾಲ್ಕು ಇಂದ್ರಿಯಗಳು ಸೇರಿ ಇಪ್ಪತ್ತನಾಲ್ಕು; ಮಹತ್, ಕಾಲ, ಪ್ರಧಾನ, ಮಾಯೆ, ವಿದ್ಯೆ, ಪುರುಷ ಎಂಬ ಆರು; ಬಿಂದು, ನಾದ, ಶಕ್ತಿ, ಶಿವ, ಶಾಂತ, ಅತೀತ ಎಂಬ ಆರು ಒಟ್ಟು ಮೂವತ್ತಾರು ತತ್ತ್ವಗಳು ಶೈವಾಗಮದಲ್ಲಿ ಪ್ರಸಿದ್ಧವಾಗಿದ್ದು, ಅವೆಲ್ಲವೂ ಪಿಂಡದಲ್ಲಿಯೂ ಬ್ರಹ್ಮಾಂಡದಲ್ಲಿಯೂ ಇರುವುವು ಎಂಬ ಅರ್ಥ. ಪಿಂಡವು ಬ್ರಹ್ಮಾಂಡದಿಂದ ಅತಿರಿಕ್ತವಾಗಿ ಸ್ವಲ್ಪವೂ ಇಲ್ಲ, ಅಂತೆಯೇ ಅವು ಅಷ್ಟಮೂರ್ತಿಗಳಿಂದ ಹೊರತಾಗಿಲ್ಲ ಎಂಬ ಭಾವ. [9–4]

ಕಣ್ಣಿಗೆ ಕಾಣುವ ವಿಶ್ವವು ಒಂಬತ್ತನೆಯ ಚರಣದಲ್ಲಿ ತಿಳಿಸಿದಂತೆ ಎಂಟು ತತ್ತ್ವಗಳಿಂದ ಮಾಡಲ್ಪಟ್ಟಿದೆ. ಮೂವತ್ತಾರು ತತ್ತ್ವಗಳ ಮೊತ್ತವು ಎರಡು ರೀತಿಯಲ್ಲಿ ಮಹೇಶ್ವರನ ದೇಹವಾಗಿದೆ; ಅಧಿದೈವಿಕ ಮತ್ತುಆಧ್ಯಾತ್ಮಿಕ – ಬ್ರಹ್ಮಾಂಡ ಮತ್ತು ಪಿಂಡಾಂಡ. ಬ್ರಹ್ಮಾಂಡವು ಹದಿನಾಲ್ಕು ಲೋಕಗಳಿಂದ ಕೂಡಿದೆ; ಪಿಂಡಾಂಡವು ಪಿಂಡ ಅಂದರೆ ಮಾನವನ ವೈಯುಕ್ತಿಕ ದೇಹವಾಗಿದೆ. ಇವೆರಡೂ ಕಾರ್ಯ–ಕಾರಣ ರೂಪದಿಂದ ಒಂದೇ ಆಗಿವೆ, ಒಂದು ಇನ್ನೊಂದರಿಂದ ಬೆಳೆದಿದೆ. ವೈಯುಕ್ತಿಕ ದೇಹ ಯಾ ಪಿಂಡಾಂಡದಲ್ಲಿರುವ ಪ್ರತಿಯೊಂದು ತತ್ತ್ವವು ಬ್ರಹ್ಮಾಂಡದಲ್ಲಿರುವ ತತ್ಸಮಾನ ತತ್ತ್ವಗಳೊಡನೆ ಏಕತ್ವವನ್ನು ಹೊಂದಿವೆ. ಆದರಂತಯೇ, ಪಿಂಡಾಂಡದಲ್ಲಿರುವ ಆತ್ಮವು (ಪುರುಷ) ಬ್ರಹ್ಮಾಂಡದಲ್ಲಿರುವ ಈಶ್ವರನೇ ಆಗಿದೆ. ಮಹೇಶ್ವರನನ್ನು ಎರಡರಲ್ಲಿಯೂ ಸಮಾನವಾಗಿರುವ ಆತ್ಮವೆಂದು ಭಾವಿಸಬೇಕು. ಅಂತಃಕರಣವು ಆತ್ಮಜ್ಞಾನದಲ್ಲಿ ಸ್ಥಿರವಾದಾಗ , ಈಶ್ವರನ ಕೃಪೆಯಿಂದ ಅವನನ್ನು ತನ್ನಲ್ಲಿ ಸ್ಥಾಪಿಸಿಕೊಂಡು ಮುಕ್ತಿಯನ್ನು ಪಡೆಯುತ್ತಾನೆ. ಈ ಕ್ರಿಯೆಯನ್ನು ಮುಂದೆ ವಿವರಿಸಿದೆ.

> व्याप्तिर्व्यष्टिशरीरेस्मिन् मनसो व्यष्टिरूपिणः ।
> तस्मात्सर्वात्मकमिदं स्वशरीरं विचिन्तयेत् ॥ ५ ॥

> ವ್ಯಾಪ್ತಿರ್ವ್ಯಷ್ಟಿಶರೀರೇಸ್ಮಿನ್ ಮನಸೋ ವ್ಯಷ್ಟಿರೂಪಿಣಃ ।
> ತಸ್ಮಾತ್ಸರ್ವಾತ್ಮಕಮಿದಂ ಸ್ವಶರೀರಂ ವಿಚಿಂತ್ಯಯೇತ್ ॥ 5 ॥

ವೈಯುಕ್ತಿಕ (ವ್ಯಷ್ಟಿ) ಮನಸಿಗೆ ಪಿಂಡಾಂಡದ ವ್ಯಾಪ್ತಿಯಿದೆ; ಆದುದರಿಂದ ತನ್ನ ಶರೀರವು ವಿಶ್ವಾತ್ಮದೊಡನೆ ಒಂದಾಗಿದೆಯೆಂದು ಚಿಂತಿಸಬೇಕು. [9–5]

ವಿವೃತ್ತಿ

ಇಲ್ಲಿ ಪಿಂಡದಲ್ಲಿ ಬ್ರಹ್ಮಾಂಡವು ಇರುವ ಪ್ರಕಾರವನ್ನು ಹೇಳುತ್ತಾ **ವ್ಯಾಪ್ತಿರಿತಿ.** ವ್ಯಷ್ಟಿರೂಪದ ಮನಸು ವ್ಯಷ್ಟಿಶರೀರದಲ್ಲಿ ವ್ಯಾಪ್ತವಾಗಿದೆ. 'ತ ಏತೇ ಸರ್ವ ಏವ ಸಮಾಃ ಸರ್ವೇನಂತಾಃ' (ಬೃ.ಉ.3–5–13) ಎಂಬ ಶ್ರುತಿಯಂತೆ ವಾಕ್, ಮನಸು, ಪ್ರಾಣಗಳು ಅನುಕ್ರಮವಾಗಿ ಹಿರಣ್ಯಗರ್ಭರೂಪದ ಮನಸಾಗಿ ವ್ಯಾಪಕತೆಯನ್ನು ಹೊಂದಿವೆ. ಲಿಂಗಾತ್ಮನಿಗೆ ಮನಸು ಪ್ರಧಾನವಾಗಿ ಸಮಷ್ಟಿಶರೀರದ ಆಯಾ ಕಾರ್ಯಗಳು ವ್ಯಷ್ಟಿಶರೀರದ ವ್ಯಾಪ್ತಿಯನ್ನು ಹೊಂದಿರುವುದರಿಂದ, ವ್ಯಷ್ಟಿ ಪಿಂಡಕ್ಕೆ ಕೂಡ ಸರ್ವಾತ್ಮಕತೆಯಿದೆ ಎನ್ನುವುದು ಯುಕ್ತವಾಗಿದೆ ಎಂಬ ಭಾವ. [9–5]

ಪಿಂಡಾಂಡದಲ್ಲಿರುವ ಆತ್ಮದ ಮನಸು, ಪ್ರಾಣ ಮತ್ತು ವಾಕ್‌ಗಳು ಆಕಾಶ ಮತ್ತು ಸಮಯದಲ್ಲಿ ಅನಂತವಾಗಿರುತ್ತವೆ ಎಂದು ಶ್ರುತಿಯು (ಬೃ.ಉ 3–5–13) ಹೇಳುತ್ತದೆ; ಅಂದರೆ ಅವು ಹಿರಣ್ಯಗರ್ಭನೊಡನೆ (ಲಿಂಗಾತ್ಮ) ಒಂದಾಗಿವೆ. ಹಿರಣ್ಯಗರ್ಭನು ಮನಸಿನ ಮೇಲೆ ಕಾರ್ಯವೆಸಗಿ, ಬ್ರಹ್ಮಾಂಡವನ್ನು ದೇಹವಾಗಿ ಹೊಂದಿದ್ದಾನೆ; ವ್ಯಷ್ಟಿ ದೇಹವು ಬ್ರಹ್ಮಾಂಡದಿಂದ ಉತ್ಪತ್ತಿಯಾದುದರಿಂದ, ಆವನು ವ್ಯಷ್ಟಿದೇಹವನ್ನೂ ವ್ಯಾಪಿಸಿದ್ದಾನೆ ಎಂದು ತಿಳಿಯಬಹುದು. ಹೀಗೆ ಲಿಂಗಾತ್ಮನು ಎರಡರಲ್ಲೂ ಸಮಾನವಾಗಿ ವ್ಯಾಪ್ತನಾಗಿರುವುದರಿಂದ, ವ್ಯಷ್ಟಿ ದೇಹವು ಬ್ರಹ್ಮಾಂಡದೊಡನೆ ಒಂದಾಗಿದೆ ಎಂದು ತಿಳಿಯಬಹುದು.

ಪಿಂಡಾಂಡದಿಂದ ಬ್ರಹ್ಮಾಂಡದೆಡೆಗೆ

व्यष्ट्युपासनया पुंसस्समष्टिव्याप्तिमाप्नुयात् ।
उपसङ्क्रामतीत्येवं दशकृत्व उपादिशत् ॥ ६ ॥

ವ್ಯಷ್ಟ್ಯುಪಾಸನಯಾ ಪುಂಸಸ್ಸಮಷ್ಟಿವ್ಯಾಪ್ತಿಮಾಪ್ನುಯಾತ್ ।
ಉಪಸಂಕ್ರಾಮತೀತ್ಯೇವಂ ದಶಕೃತ್ವ ಉಪಾದಿಶತ್ ॥ 6 ॥

ಪಿಂಡಾಂಡದಲ್ಲಿರುವ ಮಹೇಶ್ವರನನ್ನು ಉಪಾಸನೆ ಮಾಡುವುದರಿಂದ ಸಮಷ್ಟಿಯ ಪರಿಮಿತಿಗೆ ಸಾಗಬಹುದು. ಇದನ್ನು ಶ್ರುತಿಗಳು 'ಅವನು ಆತ್ಮದೊಡನೆ ಒಂದಾಗುತ್ತಾನೆ' ಎಂದು ಹತ್ತು ಬಾರಿ ಹೇಳಿವೆ. [9–6]

ವಿವೃತ್ತಿ

ಹೀಗೆ ಪಿಂಡ–ಬ್ರಹ್ಮಾಂಡಗಳ ಏಕ್ಯೈಕ ಹಿರಣ್ಯಗರ್ಭರೂಪತ್ವದಿಂದ ಅವುಗಳ ನಡುವಿನ ಭೇದವು ಇಲ್ಲವಾಗಿದೆ. ಪಿಂಡರೂಪಕ್ಕೆ ಮಹೇಶ್ವರನ ಉಪಾಸನೆಯಿಂದ ಸಮಷ್ಟಿ ಬ್ರಹ್ಮಾಂಡರೂಪವು ಲಭಿಸುವುದು ಎಂದು ಪಿಂಡವು ಬ್ರಹ್ಮಾಂಡವನ್ನು ಸಂಪಾದಿಸುವುದು ಎಂದು ಹೇಳಲು **ವ್ಯಷ್ಟೀತಿ.** ***ಪುಂಸೋ ವ್ಯಷ್ಟ್ಯುಪಾಸನಯೇ*** ಎಂದು ಅನ್ವಯಿಸಿಕೊಳ್ಳುವುದು. ***ಪುಂಸಃ*** ಪರಮೇಶ್ವರನ, ವ್ಯಷ್ಟಿಶರೀರದಲ್ಲಿರುವ ಅಂತರಾತ್ಮನ ಉಪಾಸನೆಯಿಂದ ಎಂಬ ಅರ್ಥ. ***ಆಪ್ನುಯಾತ್*** ಉಪಾಸಕನು ಮಾಡುವುದರಿಂದ. ಅದಕ್ಕೆ ಪ್ರಮಾಣವಾಗಿ **ಉಪಸಂಕ್ರಾಮತೀತ್ಯೇವಮಿತಿ.** ತೈತ್ತರೀಯ ಉಪನಿಷತ್ತಿನಲ್ಲಿ ಪ್ರಥವಾಗಿ ಅಧ್ಯಾತ್ಮದ ಅನ್ನಮಯ ಮುಂತಾದ ಪಂಚಕೋಶಗಳನ್ನು ವಿವರಿಸಿದ ಬಳಿಕ 'ಅವನು ಅನ್ನಮಯ ಆತ್ಮನೊಡನೆ ಸಂಕ್ರಮಿಸುತ್ತಾನೆ, ಅವನು ಪ್ರಾಣಮಯ ಆತ್ಮನೊಡನೆ ಸಂಕ್ರಮಿಸುತ್ತಾನೆ, ಅವನು ಮನೋಮಯ ಆತ್ಮನೊಡನೆ ಸಂಕ್ರಮಿಸುತ್ತಾನೆ, ಅವನು ವಿಜ್ಞಾನಮಯ ಆತ್ಮನೊಡನೆ ಸಂಕ್ರಮಿಸುತ್ತಾನೆ' (ತೈ.ಉ.2–8–5) ಎಂದು ಹೇಳಿ ಐದನೆಯ ಸಂಕ್ರಮಣವು ಆನಂದಮಯಕೋಶದದಲ್ಲಿರುವ ಸರ್ವಾಧಾರ, ವ್ಯಾಪಕ ಬ್ರಹ್ಮರೂಪದೊಂದಿಗೆ ಎಂದು ಹೇಳುತ್ತದೆ. ಹಾಗೆಯೇ ಭೃಗುವಲ್ಲಿಯಲ್ಲಿ ಅಧಿದೈವದ ಪಂಚಕೋಶಗಳನ್ನು ವಿವರಿಸಿ 'ಅವನು ಅನ್ನಮಯ ಆತ್ಮನೊಡನೆ ಸಂಕ್ರಮಿಸುತ್ತಾನೆ' (ತೈ.ಉ.3–10–5) ಎಂದು ಮೊದಲಾಗಿ ಐದುಬಾರಿ ಸಂಕ್ರಮಣ ಹೊಂದುವುದನ್ನು ಹೇಳುತ್ತದೆ. ಇದು ಪರಿಚ್ಛಿನ್ನ ದೃಷ್ಟಿಯಿಂದಲೂ ಪೂರ್ಣಾತ್ಮವಿಷಯತೆಯ ಪರಿಪೂರ್ಣ ಪ್ರಾಪ್ತಿಗೆ ಹೇತುವಾಗಿ ಪ್ರಮಾಣವಾಗುತ್ತದೆ. [9–6]

ಮೊದಲು ಒಬ್ಬ ವ್ಯಕ್ತಿಯ ಐದು ಕೋಶಗಳನ್ನು ವಿವರಿಸಿದ ತೈತ್ತರೀಯ ಉಪನಿಷತ್ತು (2–8), ಐದು ಬಾರಿ 'ಅವನು ಬ್ರಹ್ಮನೊಡನೆ ಒಂದಾಗುತ್ತಾನೆ' ಎಂದು ಘೋಷಿಸುತ್ತದೆ; 'ಅವನು ಅನ್ನಮಯ ಆತ್ಮದೊಡನೆ ಒಂದಾಗುತ್ತಾನೆ; ಅವನು ಪ್ರಾಣಮಯ ಆತ್ಮದೊಡನೆ ಒಂದಾಗುತ್ತಾನೆ; ಅವನು ಮನೋಮಯ ಆತ್ಮದೊಡನೆ

ಒಂದಾಗುತ್ತಾನೆ; ಅವನು ವಿಜ್ಞಾನಮಯ ಆತ್ಮದೊಡನೆ ಒಂದಾಗುತ್ತಾನೆ; ಅವನು ಆನಂದಮಯ ಆತ್ಮದೊಡನೆ ಒಂದಾಗುತ್ತಾನೆ'. ಆಬಳಿಕ, ಬ್ರಹ್ಮಾಂಡದಲ್ಲಿರುವ ಪಂಚಕೋಶಗಳನ್ನು ವಿವರಿಸುತ್ತದೆ ಹಾಗೂ ಕೊನೆಗೆ (3–10) ಪುನಃ ಐದು ಬಾರಿ ಮೇಲಿನಂತೆಯೇ ಘೋಷಿಸುತ್ತದೆ.

ಪಿಂಡಾಂಡ ಮತ್ತು ಬ್ರಹ್ಮಾಂಡದಲ್ಲಿರುವ ಸಮಾನತೆ

ಇನ್ನು ಮುಂದೆ ವಾರ್ತಿಕಕಾರರು ಬ್ರಹ್ಮಾಂಡದಲ್ಲಿ ಪಿಂಡಾಂಡವನ್ನು ಕಾಣುವ ವಿಧಾನವನ್ನು ಕಲಿಸುತ್ತಾರೆ:

(1) ಭೂಮಿಯ ಸಾಮ್ಯತೆ

ब्रह्माण्डस्योदरे लोकास्सप्तभूरादयः स्मृताः ।
मूलादिब्रह्मरन्ध्रान्तेष्वाधारेषु वसन्ति ते ॥ ७ ॥
ಬ್ರಹ್ಮಾಂಡಸ್ಯೋದರೇ ಲೋಕಾಸ್ಸಪ್ತಭೂರಾದಯಃ ಸ್ಮೃತಾಃ ।
ಮೂಲಾದಿಬ್ರಹ್ಮರಂಧ್ರಾಂತೇಷ್ವಾಧಾರೇಷು ವಸಂತಿ ತೇ ॥ 7 ॥

ಬ್ರಹ್ಮಾಂಡದ ಉದರದಲ್ಲಿ ಭೂ ಇತ್ಯಾದಿ ಏಳು ಲೋಕಗಳು ಇವೆ ಎಂದು ಹೇಳಲಾಗಿದೆ. ಇವುಗಳು ದೇಹದಲ್ಲಿ ಮೂಲದಿಂದ ಬ್ರಹ್ಮರಂಧ್ರದವರೆಗಿನ ಏಳು ಆಧಾರಗಳಲ್ಲಿ ವಾಸಿಸುತ್ತವೆ. [9–7]

ವಿವೃತ್ತಿ

ಇದರಲ್ಲಿ ಬ್ರಹ್ಮಾಂಡದ ಸಂಪತ್ತನ್ನು ತಿಳಿಸುತ್ತಾ **ಬ್ರಹ್ಮಾಂಡಸ್ಯೇತಿ.** ಭೂಮಿ ಮೊದಲಾದ ಏಳು ಲೋಕಗಳು ಈ ಬ್ರಹ್ಮಾಂಡದ ಉದರದೊಳಗೆ ಇರುವವಾಗಿ, ಅವು ಮೂಲಾಧಾರದಿಂದ ಬ್ರಹ್ಮರಂಧ್ರದವರೆಗಿನ ಸ್ವಾಧಾರಗಳಲ್ಲಿ ಸ್ಥಿತವಾಗಿವೆ. ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧ, ಆಜ್ಞಾ, ಸಹಸ್ರಾರ ಎಂಬ ಆಧಾರಗಳಲ್ಲಿ ಕ್ರಮವಾಗಿ ಭೂಃ, ಭುವಃ, ಸುವಃ, ಮಹಃ, ಜನಃ, ತಪಃ, ಸತ್ಯಂ ಎಂಬ ಲೋಕಗಳು ವಾಸಿಸುತ್ತಿರುವಂತೆ ಧ್ಯಾನಿಸುವುದು ಎಂಬ ಅರ್ಥ. [9–7]

ಲೋಕ	ಆಧಾರ
ಭೂ:	ಮೂಲಾಧಾರ
ಭುವಃ	ಸ್ವಾಧಿಷ್ಠಾನ
ಸ್ವಃ	ಮಣಿಪೂರಕ
ಮಹಃ	ಅನಾಹತ
ಜನಃ	ವಿಶುದ್ಧ
ತಪಃ	ಆಜ್ಞಾ
ಸತ್ಯ	ಸಹಸ್ರಾರ

वीणादण्डो महमेरुरस्थीनि कुलपर्वताः ।

ವೀಣಾದಂಡೋ ಮಹಾಮೇರುರಸ್ಥೀನಿ ಕುಲಪರ್ವತಾಃ ।

ವೀಣೆಯ ದಂಡದಂತಿರುವ ಬೆನ್ನುಮೂಳೆಯು ಮಹಾಮೇರು ಮತ್ತು ಅದರ ಬಳಿಯಿರುವ ಮೂಳೆಗಳು ಕುಲಪರ್ವತಗಳಾಗಿವೆ. [9–8]

ವಿವೃತ್ತಿ

ಸಂಪೂರ್ಣ ಪಿಂಡದಲ್ಲಿ ಲೋಕಗಳು ಸಂಸ್ಥಿತವಾಗಿರುವುದನ್ನು ತಿಳಿಸಿ, ಅದರಲ್ಲಿಯ ಭೂಲೋಕದ ವಿವರವನ್ನು ವಿಶೇಷವಾಗಿ ತಿಳಿಸುವ **ವೀಣಾದಂಡ ಇತಿ.** ಬೆನ್ನುಹುರಿಯಲ್ಲಿರುವ ಬೆನ್ನುಮೂಳೆಯು ವೀಣೆಯ ದಂಡದಂತಿದ್ದು, ಅದು ಮಹಾಮೇರು ಪರ್ವತವಾಗಿರುವುದು. ಅದರ ಪಾರ್ಶ್ವದಲ್ಲಿರುವ ಇತರ ಮೂಳೆಗಳು ಪಾರಿಯಾತ್ರಾ ಮುಂತಾದ ಕುಲಪರ್ವತಗಳಾಗಿವೆ. [9–8]

(2) ಜಲದ ಸಾಮ್ಯತೆ

गङ्गा तु पिङ्गळा नाडी यमुनेडा प्रकीर्तिता ॥ ८ ॥
सरस्वती सुषुम्नोक्ता नाड्योन्याः पुण्यनिम्नगाः ।
द्वीपास्स्युर्धातवस्सप्त स्वेदबाष्पादयोब्धयः ॥ ९ ॥

ಗಂಗಾ ತು ಪಿಂಗಳಾ ನಾಡೀ ಯಮುನೇಡಾ ಪ್ರಕೀರ್ತಿತಾ ॥ 8 ॥
ಸರಸ್ವತೀ ಸುಷುಮ್ನೋಕ್ತಾ ನಾಡ್ಯೋನ್ಯಾಃ ಪುಣ್ಯನಿಮ್ನಗಾಃ ।
ದ್ವೀಪಾಸ್ಸ್ಯುರ್ಧಾತವಸ್ಸಪ್ತ ಸ್ವೇದಬಾಷ್ಪಾದಯೋಬ್ಧಯಃ ॥ 9 ॥

ಪಿಂಗಳಾ ನಾಡಿಯು ಗಂಗೆಯೆಂದೂ, ಇಡಾ ನಾಡಿಯು ಯಮುನೆಯೆಂದೂ ಪ್ರಸಿದ್ಧವಾಗಿವೆ. ಸುಷುಮ್ನಾ ನಾಡಿಯು ಸರಸ್ವತಿಯಾಗಿದೆ ಮತು ಇತರ ನಾಡಿಗಳು ಇತರ ಪುಣ್ಯನದಿಗಳಾಗಿವೆ. ಏಳು ಧಾತುಗಳು ಏಳು ದ್ವೀಪಗಳಾಗಿವೆ; ಬೆವರು, ಕಣ್ಣೀರು ಮುಂತಾದವುಗಳು ಸಾಗರಗಳಾಗಿವೆ. [9–8..9]

ವಿವೃತ್ತಿ

ಗಂಗಾನದಿಯು ಪಿಂಗಳಾನಾಡೀಯೊಂದಿಗೆ, ಯಮುನೆಯು ಇಡಾನಾಡೀಯೊಂದಿಗೆ ಮತ್ತು ಸರಸ್ವತೀಯು ಸುಷುಮ್ನಾನಾಡೀಯೊಂದಿಗೆ ಸಾಮ್ಯತೆಯನ್ನು ಹೊಂದಿವೆ. ಪ್ರಕಟವಾಗಿ ಎರಡು ಪಾರ್ಶ್ವಗಳಲ್ಲಿರುವ ನದಿಗಳೊಂದಿಗೆ ಮಧ್ಯದ ನದಿಯು ಸಾಮಾನ್ಯವಾಗಿ ಗುಪ್ತಗಾಮಿನಿಯಾಗಿರುವುದರಿಂದ ನಾಡೀತ್ರಯವನ್ನು ನದೀತ್ರಯವಾಗಿ ತಿಳಿದುಕೊಳ್ಳುವುದು. ಇತರ ನಾಡೀಗಳು ಎಲ್ಲವೂ ಇತರ ನದೀರೂಪವಾಗಿವೆ ಎಂದು ಹೇಳುವ **ನಾಡ್ಯೋನ್ಯಾ ಇತಿ.** ಚರ್ಮ ಮೊದಲಾದ ಏಳು ಧಾತುಗಳು ಜಂಬೂ ಮೊದಲಾದ ಏಳುದ್ವೀಪಗಳಾಗಿವೆ ಎಂದು ತಿಳಿಯಬೇಕು ಎಂಬ ಅರ್ಥ. ಶರೀರದಲ್ಲಿರುವ ಬೆವರು, ಕಣ್ಣೀರು ಮೊದಲಾದವುಗಳು ದ್ವೀಪಗಳನ್ನು ಸುತ್ತಿರುವ ಏಳು ಸಮುದ್ರಗಳಾಗಿವೆ ಎಂದು ತಿಳಿಯುವುದು. [9–8..9]

(3) ಅಗ್ನಿಯ ಸಾಮ್ಯತೆ

मूले तिष्ठतिकालाग्निरस्थिमध्ये च बाडबः ।

वैद्युतोग्निस्सुषुम्नायां पार्थिवो नाभिमण्डले ॥ १० ॥
हृदि तिष्ठति सूर्याग्नि कपाले चन्द्रमण्डलम् ।
नक्षत्राण्यपराण्याहुर्नेत्रादीनीन्द्रियाण्यपि ॥ ११ ॥

ಮೂಲೇ ತಿಷ್ಠತಿಕಾಲಾಗ್ನಿರಸ್ಥಿಮಧ್ಯೇ ಚ ಬಾಡಬಃ ।
ವೈಧ್ಯುತೋಗ್ನಿಸ್ಸುಷುಮ್ನಾಯಾಂ ಪಾರ್ಥಿವೋ ನಾಭಿಮಂಡಲೇ ॥ 10 ॥
ಹೃದಿ ತಿಷ್ಠತಿ ಸೂರ್ಯಾಗ್ನಿ ಕಪಾಲೇ ಚಂದ್ರಮಂಡಲಮ್ ।
ನಕ್ಷತ್ರಾಣ್ಯಪರಾಣ್ಯಾಹುರ್ನೇತ್ರಾದೀನೀಂದ್ರಿಯಾಣ್ಯಪಿ ॥ 11 ॥

ಮೂಲಾಧಾರದಲ್ಲಿ ಕಾಲಾಗ್ನಿಯಿದೆ, ಮೂಳೆಗಳ ಮಧ್ಯದಲ್ಲಿ ಬಾಡಬಾಗ್ನಿಯಿದೆ; ಸುಷುಮ್ನಾದಲ್ಲಿ ಮಿಂಚಿನ ಅಗ್ನಿಯಿದೆ ಮತ್ತು ಭೂಮ್ಯಾಗ್ನಿಯು ಹೊಕ್ಕಳಿನಲ್ಲಿದೆ. ಹೃದಯದಲ್ಲಿ ಸೂರ್ಯಾಗ್ನಿಯು ಕುಳಿತಿದೆ, ಕಪಾಲದಲ್ಲಿ ಚಂದ್ರಮಂಡಲವಿದೆ; ಕಣ್ಣು ಮುಂತಾದ ಇಂದ್ರಿಯಗಳಲ್ಲಿ ನಕ್ಷತ್ರಾದಿ ಬೆಳಕುಗಳು ಸೇರಿಕೊಂಡಿವೆ. [9–10..11]

ವಿವೃತ್ತಿ

ಮೂಲೇ ಮೂಲಾಧಾರದಲ್ಲಿ ***ಕಾಲಾಗ್ನಿಃ*** ಪ್ರಳಯಕಾಲದ ಅಗ್ನಿಯು ***ಅಸ್ಥಿಮಧ್ಯೇ*** ಮೂಳೆಗಳ ಸಮೂಹದೊಳಗೆ ಬೆವರು ಮುಂತಾದ ಸಮುದ್ರಗಳ ಶೋಷಕವಾಗಿ ಬಾಡಬಾಗ್ನಿಯು ಇರುವುದು. ***ವೈದ್ಯುತ್ಯೋಗ್ನಿಃ*** ಕ್ಷಣಮಾತ್ರ ಹೊಳೆಯುವ ದಿವ್ಯವಾದ ಮಿಂಚಿನ ಅಗ್ನಿಯು ಸುಷುಮ್ನಾದಲ್ಲಿರುವುದು; ಎಲ್ಲಾ ನಾಡೀಗಳಿಗೂ ಅದು ಆಧಾರವಾಗಿರುವುದರಿಂದ ಎಂಬ ಅರ್ಥ. ***ಪಾರ್ಥಿವಃ*** ಪೃಥ್ವೀಧಾತುವನ್ನು ಶೋಷಿಸುವ ಅಗ್ನಿಯು ನಾಭಿಮಂಡಲದಲ್ಲಿರುವುದು. ಹೃದಯದಲ್ಲಿ ಸೂರ್ಯಾಗ್ನಿಯಿದೆ. ***ಕಪಾಲಂ*** ಲಲಾಟದಲ್ಲಿ ಚಂದ್ರಮಂಡಲವಿದೆ. ***ಅಪರಾಣಿ ನಕ್ಷತ್ರಾಣಿ*** ಚಂದ್ರನಿಗೆ ಹೊರತಾದ ಅಶ್ವಿನಿ ಮೊದಲಾದ ಇಪ್ಪತ್ತೇಳು ಸಂಖ್ಯೆಯ ನಕ್ಷತ್ರಗಳು ಮತ್ತು ಮಂಗಳ, ಬುಧ ಮುಂತಾದ ಗ್ರಹಗಳೂ ನಕ್ಷತ್ರರೂಪವಾಗಿ ಕಂಡುಬರುವುದರಿಂದ ಅವೆಲ್ಲವೂ ಕಣ್ಣು ಮುಂತಾದ ಇಂದ್ರಿಯಗಳಲ್ಲಿರುವುದೆಂದು ತಿಳಿಯುವುದು. [9–10..11]

(4) ವಾಯುವಿನ ಸಾಮ್ಯತೆ

धार्यन्ते वायुभिर्लोकाः यथा प्रवहणादिभिः ।
प्राणादिभिर्दशविधैर्धार्यते वायुभिर्वपुः ॥ १२ ॥

ಧಾರ್ಯಂತೇ ವಾಯುಭಿರ್ಲೋಕಾಃ ಯಥಾ ಪ್ರವಹಣಾದಿಭಿಃ ।
ಪ್ರಾಣಾದಿಭಿರ್ದಶವಿಧೈರ್ಧಾರ್ಯತೇ ವಾಯುಭಿರ್ವಪುಃ ॥ 12 ॥

ಜಗತ್ತನ್ನು ಆಧರಿಸಿರುವ ಪ್ರವಹಣ ಮುಂತಾದ ವಾಯುಗಳಂತೆ ದೇಹವು ಪ್ರಾಣ ಮುಂತಾದ ಹತ್ತು ವಾಯುಗಳಿಂದ ಆಧರಿಸಲ್ಪಟ್ಟಿದೆ. [9–12]

ವಿವೃತ್ತಿ

ಬ್ರಹ್ಮಾಂಡವನ್ನು ಆಧರಿಸಿರುವ ವಾಯುಗಳಂತೆ ಶರೀರದಲ್ಲಿಯೂ ದೇಹಧಾರಕ ಪ್ರಾಣರೂಪದ ವಾಯುಗಳಿವೆ ಎಂದು ತಿಳಿಸಲು **ಧಾರ್ಯಂತ ಇತಿ.** ಪ್ರವಹಣ, ಸಂವಹನ ಮೊದಲಾದ ಏಳು ಭೇದದ ವಾಯುಗಳಿವೆ ಎಂಬ ಅರ್ಥದಲ್ಲಿ. [9–12]

प्राप्येडापिङ्गळे प्राणो मूलात्सूर्यस्वरूपतः ।
नासिकाभ्यां बहिर्गत्वा लीयते द्विषडङ्गुले ॥ १३ ॥

ಪ್ರಾಪ್ಯೇಡಾಪಿಂಗಳೇ ಪ್ರಾಣೋ ಮೂಲಾತ್ಸೂರ್ಯಸ್ವರೂಪತಃ ।
ನಾಸಿಕಾಭ್ಯಾಂ ಬಹಿರ್ಗತ್ವಾ ಲೀಯತೇ ದ್ವಿಷಡಂಗುಲೇ ॥ 13 ॥

ಮೂಲಾಧಾರದಿಂದ ಆರಂಭವಾಗಿ ಸೂರ್ಯಸ್ವರೂಪದಿಂದ ಪ್ರಾಣವು ಇಡಾ ಮತ್ತು ಪಿಂಗಳವನ್ನು ಪ್ರವೇಶಿಸುತ್ತದೆ ಮತ್ತು ಮೂಗಿನಿಂದ ಹೊರಬಂದು ಹನ್ನೆರಡು ಅಂಗುಲಗಳಷ್ಟು ದೂರದಲ್ಲಿ ಲೀನವಾಗುತ್ತದೆ. [9–13]

ವಿವೃತ್ತಿ

ದಶವಿಧದಾಗಿರುವ ಪ್ರಾಣದ ಕಾರ್ಯವನ್ನು ನಿರ್ದೇಶಿಸುವ **ಪ್ರಾಪ್ಯೇತಿ.** ***ಮೂಲಾತ್*** ಮೂಲಾಧಾರದಿಂದ ಹೊರಟಿರುವ ಇಡಾ–ಪಿಂಗಳ ನಾಡೀಗಳನ್ನು ***ಸೂರ್ಯರೂಪತಃ*** ಸೂರ್ಯನಂತಹ ರೂಪವನ್ನು ಆಶ್ರಯಿಸಿ ***ನಾಸಿಕಾಭ್ಯಾಂ*** ಮೂಗಿನದ್ವಾರಗಳ ಮೂಲಕ ದೇಹದಿಂದ ಹೊರಬಂದು ***ದ್ವಿಷಡಂಗುಲೇ*** ಹನ್ನೆರಡುಅಂಗುಲ ದೂರದಲ್ಲಿ ***ಲೀಯತೇ*** ಲಯವಾಗುತ್ತದೆ. [9–13]

अष्टाङ्गुळेन सोमात्मा नाडीभ्यामन्तराविशत् ।
मलमूत्रमरुच्छुक्राण्यपानो विसृजेद्बहिः ॥ १४ ॥

ಅಷ್ಟಾಂಗುಳೇನ ಸೋಮಾತ್ಮಾ ನಾಡೀಭ್ಯಾಮಂತರಾವಿಶತ್ ।
ಮಲಮೂತ್ರಮರುಚ್ಛುಕ್ರಾಣ್ಯಪಾನೋ ವಿಸೃಜೇದ್ಬಹಿಃ ॥ 14 ॥

ಅದು ಎಂಟು ಅಂಗುಲ ದೂರದಿಂದ ಚಂದ್ರನ ರೂಪದಲ್ಲಿ (ಮೂಗನ್ನು) ಎರಡು ನಾಡಿಗಳನ್ನು ಪ್ರವೇಶಿಸಿ, ಅಪಾನವಾಗಿ ಅದು ಮಲ, ಮೂತ್ರ, ವಾಯು ಮತ್ತು ವೀರ್ಯಗಳನ್ನು ವಿಸರ್ಜಿಸುತ್ತದೆ. [9–14]

ವಿವೃತ್ತಿ

ಸೋಮರೂಪವಾಗಿ ಅದುವೇ ಪ್ರಾಣವು ಅಪಾನವೆಂದು ಕರೆಸಿಕೊಂಡು ಎಂಟುಅಂಗುಲ ದೂರದಿಂದ ***ನಾಡೀಭ್ಯಾಂ*** ಇಡಾ–ಪಿಂಗಳರೂಪದ ನಾಡೀಗಳನ್ನು ಮೂಗಿನ ಛಿದ್ರಗಳ ಮೂಲಕ ಶರೀರದೊಳಗೆ ಪ್ರವೇಶಿಸಿ, ಮಲ ಮುಂತಾದವುಗಳನ್ನು ಗುದ ಮುಂತಾದವುಗಳಿಂದ ಹೊರಗೆ ವಿಸರ್ಜಿಸುವುದು. [9–14]

अग्निषोममयो भूत्वा सुषुम्नारन्ध्रमाश्रितः ।
आब्रह्मरन्ध्रमुद्गच्छन्नुदानो वर्धते स्वयम् ॥ १५ ॥

ಅಗ್ನಿಷೋಮಮಯೋ ಭೂತ್ವಾ ಸುಷುಮ್ನಾರಂದ್ರಮಾಶ್ರಿತಃ

ಆಬ್ರಹ್ಮರಂಧ್ರಮುದ್ಗಚ್ಛನ್ನುದಾನೋ ವರ್ಧತೇ ಸ್ವಯಮ್ ॥ 15 ॥

ಅದು ಅಗ್ನಿ ಮತ್ತು ಸೋಮರೂಪದಿಂದ ಒಂದಾಗಿ ಸುಷುಮ್ನಾದ ರಂಧ್ರವನ್ನು ಆಶ್ರಯಿಸುತ್ತದೆ; ಬ್ರಹ್ಮರಂಧ್ರದವರೆಗೆ ಏರಿ, ಅದು ಉದಾನವಾಗಿ ಬೆಳೆಯುತ್ತದೆ. [9–15]

ವಿವೃತ್ತಿ

ಅದರ ಉದಾನರೂಪವನ್ನು ತಿಳಿಸಲು **ಅಗ್ನಿಷೋಮಮಯ ಇತಿ.** ***ವರ್ಧತೇ*** ವಿಜೃಂಭಿಸು. [9–15]

व्यापयेद्वपुषि व्यानो भुक्तान्नरसमन्वहम् ।
सन्धुक्षणं समानस्तु कायाग्नेः कुरुते सदा ॥ १६ ॥

ವ್ಯಾಪಯೇದ್ವಪುಷಿ ವ್ಯಾನೋ ಭುಕ್ತಾನ್ನರಸಮನ್ವಹಮ್ ।
ಸಂಧುಕ್ಷಣಂ ಸಮಾನಸ್ತು ಕಾಯಾಗ್ನೇಃ ಕುರುತೇ ಸದಾ ॥ 16 ॥

ಭುಂಜಿಸಿದ ಆಹಾರದ ರಸವನ್ನು ವ್ಯಾನ ರೂಪದಿಂದ ದೇಹದೆಲ್ಲಡೆ ಸಮನ್ವಯಗೊಳಿಸುವುದು; ಸಮಾನ ರೂಪದಿಂದ ದೇಹದ ತಾಪವನ್ನು ಉಂಟುಮಾಡುವುದು. [9–16]

ವಿವೃತ್ತಿ

ಭುಕ್ತಾನ್ನರಸಂ ಅನ್ವಹಂ ಪಚನಗೊಂಡ ಅನ್ನರಸವನ್ನು ದೇಹನಾಡೀಗಳಲ್ಲಿ ವ್ಯಾಪಿಸುವಂತೆ ಮಾಡಿ, ವಿವಿಧ ರೂಪಗಳನ್ನು ಹೊಂದುವಂತೆ ಸರ್ವ ನಾಡೀಗಳಲ್ಲಿ ವ್ಯಾಪ್ತವಾಗಿಸುವುದೇ ವ್ಯಾನವು ಎಂಬ ಅರ್ಥ. ***ಸಂಧುಕ್ಷಣಂ*** ಪ್ರಜ್ವಲನಕ್ಕೆ ಅನುಕೂಲವಾದ ವ್ಯವಹಾರ. ***ಕಾಯಾಗ್ನೇಃ*** ದೇಹದ ಅಗ್ನಿಯನ್ನು ಸದಾ ಪ್ರಜ್ವಲಿಸುವಂತೆ ಮಾಡುವುದು ಸಮಾನವು ಎಂಬ ಅರ್ಥ. [9–16]

नागो हिक्काकरः कूर्मो निमेषोन्मेषकारकः ।
क्षुतं करोति कृकरो देवदत्तो विजृम्भणम् ॥ १७ ॥
स्थौल्यं धनञ्जयः कुर्यान्मृतं चापि न मुञ्चति ।

ನಾಗೋ ಹಿಕ್ಕಾಕರಃ ಕೂರ್ಮೋ ನಿಮೇಷೋನ್ಮೇಷಕಾರಕಃ ।
ಕ್ಷುತಂ ಕರೋತಿ ಕೃಕರೋ ದೇವದತ್ತೋ ವಿಜೃಂಭಣಮ್ ॥ 17 ॥
ಸ್ಥೌಲ್ಯಂ ಧನಂಜಯಃ ಕುರ್ಯಾನ್ಮೃತಂ ಚಾಪಿ ನ ಮುಂಚತಿ ।

ನಾಗವು ಹಿಕ್ಕದೆಗಳನ್ನು ಬರುವಂತೆ ಮಾಡುವುದು, ಕೂರ್ಮವು ಕಣ್ಣುರೆಪ್ಪೆಗಳನ್ನು ತೆರೆದು ಮುಚ್ಚುವುದು; ಕೃಕರವು ಸೀನುವಂತೆ ಮಾಡುವುದು, ಆಕಳಿಕೆಯನ್ನು ದೇವದತ್ತವು ಉಂಟುಮಾಡುವುದು. ಧನಂಜಯವು ಸ್ಥೂಲತೆಯನ್ನುಂಟುಮಾಡುವುದು ಹಾಗೂ ಮೃತದೇಹವನ್ನೂ ಬಿಟ್ಟುಹೋಗುವುದಿಲ್ಲ. [9–17..18]

ವಿವೃತ್ತಿ

ಶ್ರುತಿಪ್ರಸಿದ್ಧ ಪ್ರಾಣ ಇತ್ಯಾದಿ ಐದು ವಾಯುಗಳ ವಿಭಜನೆಯನ್ನು ತಿಳಿಸಿದ ಬಳಿಕ ಅವುಗಳಿಗೆ ಹೊರತಾಗಿ ಯೋಗಶಾಸ್ತ್ರದಲ್ಲಿ ಪ್ರಸಿದ್ಧವಾಗಿರುವ ನಾಗ ಮುಂತಾದ ಐದು ವಾಯುಗಳ ವಿಭಜನೆಯನ್ನು ತಿಳಿಸಲು **ನಾಗೋ ಹಿಕ್ಕಾಕರ ಇತ್ಯಾದಿನಾ.** ***ನಿಮೇಷೋನ್ಮೇಷ*** ಕಣ್ಣುಗಳ ಮುಚ್ಚುವಿಕೆ ತೆರೆಯುವಿಕೆಯನ್ನು ಕೂರ್ಮವು ಮಾಡುವುದು ಎಂಬ ಅರ್ಥ. ***ವಿಜೃಂಭಣಂ*** ಜಡತೆಯಿಂದಾಗುವ ಆಕಳಿಕೆ. ***ಸ್ಥೌಲ್ಯಂ*** ದೇಹದ ಅಪಚಯ, ಸ್ಥೂಲತೆ. ***ಮೃತಂ*** ಶವರೂಪದಲ್ಲಿಯೂ ಬಿಟ್ಟುಹೋಗುವುದಿಲ್ಲ, ಶರೀರದ ಬಾತುಕೊಳ್ಳುವಿಕೆಯ ಕಾರಣವಾಗಿರುವ ವಾಯುವು ಧನಂಜಯ ಎಂಬ ಅರ್ಥದಲ್ಲಿ. [9–17..18]

(5) ಆಕಾಶದ ಸಾಮ್ಯತೆ

आकाशो बहिरप्यन्तरवकाशं प्रयच्छति ॥ १८ ॥

ಆಕಾಶೋ ಬಹಿರಪ್ಯಂತರವಕಾಶಂ ಪ್ರಯಚ್ಛತಿ ॥ 18 ॥

ಆಕಾಶವು ದೇಹದೊಳಗಿನ ಅವಕಾಶವನ್ನು ಒದಗಿಸುವುದು ಮತ್ತು ಹೊರಗಿನ ಅವಕಾಶವನ್ನು ಕೂಡಾ. [9–18]

ವಿವೃತ್ತಿ

ಹೀಗೆ ಭೂ, ಜಲ, ಅನಲ, ಅನಿಲಗಳನ್ನು ವ್ಯಾಖ್ಯಾನಿಸಲಾಯಿತು. ಇದರಲ್ಲಿ ಅಂಬರವನ್ನು ವಿವರಿಸುತ್ತಾ ಅದರ ಸಾಮ್ಯವನ್ನು ಸೂಚಿಸಲು **ಆಕಾಶ ಇತಿ.** [9–18]

ಪಿಂಡಾಂಡ ಮತ್ತು ಬ್ರಹ್ಮಾಂಡದಲ್ಲಿರುವ ಆಕಾಶವು ಒಂದೇ ಆಗಿದೆ.

(6–8) ಸೂರ್ಯ, ಚಂದ್ರ ಮತ್ತು ಆತ್ಮದ ಸಾಮ್ಯತೆ

चन्द्रार्कौ कालनेतारौ प्राणापानौ शरीरिणाम् ।
साक्षी पुरुष इत्येवं मुर्त्यष्टकमिदं वपुः ॥ १९ ॥

ಚಂದ್ರಾರ್ಕೌ ಕಾಲನೇತಾರೌ ಪ್ರಾಣಾಪಾನೌ ಶರೀರಿಣಾಮ್ ।
ಸಾಕ್ಷೀ ಪುರುಷ ಇತ್ಯೇವಂ ಮೂರ್ತ್ಯಷ್ಟಕಮಿದಂ ವಪುಃ ॥ 19 ॥

ಶರೀರವನ್ನು ಹೊಂದಿದವರಲ್ಲಿ, ಸಮಯ ನಿಯಾಮಕರಾದ ಸೂರ್ಯ ಚಂದ್ರರು, ಪ್ರಾಣ–ಅಪಾನ ಆಗಿರುತ್ತಾರೆ; ಅಷ್ಟಮೂರ್ತಿ ರೂಪದ ದೇಹದ (ಒಳಗಿರುವ) ಸಾಕ್ಷಿಯು (ಹೊರಗಿರುವ) ಪುರುಷನಾಗಿದ್ದಾನೆ. [9–19]

ವಿವೃತ್ತಿ

ಕಾಲನೇತಾರರೆಂದು ಸಿದ್ಧವಾದ ಸೂರ್ಯ–ಚಂದ್ರರು ಶರೀರಿಗಳ ದೇಹದಲ್ಲಿ ಪ್ರಾಣ–ಅಪಾನವಾಗಿರುವರು ಎಂದು ತಿಳಿಯುವುದು. ***ಸಾಕ್ಷೀ*** ಯಾರು ಈ ಸಂಯುಕ್ತದ ಸಾಕ್ಷಿಯಾಗಿರುವನೋ, ಅವನೇ ***ಪುರುಷಃ*** ಪುರುಷನೆಂದು ಕರೆಯಲ್ಪಡುತ್ತಾನೆ. ಶ್ಲೋಕದ 'ಇತ್ಯಾಭಾತಿ ಚರಾಚರಾತ್ಮಕಮ್' ಎಂಬುದನ್ನು ವಿವರಿಸುವ **ಇತ್ಯೇವಮಿತಿ.** [9–19]

ಅಂದರೆ ಪಿಂಡಾಂಡದಲ್ಲಿರುವ ಆತ್ಮವು ಬ್ರಹ್ಮಾಂಡದಲ್ಲಿರುವ ಆತ್ಮ, ಹಿರಣ್ಯಗರ್ಭನಾಗಿದೆ.

ಸಮನಸ್ಕ ಯೋಗದಿಂದ ಅಮನಸ್ಕದೆಡೆಗೆ

समनस्कमिदं योगी सेवमान उपासनम् ।
अष्टाङ्गयोगयुक्तस्सन्नमनस्कं स गच्छति ॥ २० ॥

ಸಮನಸ್ಕಮಿದಂ ಯೋಗೀ ಸೇವಮಾನ ಉಪಾಸನಮ್ ।
ಅಷ್ಟಾಂಗಯೋಗಯುಕ್ತಸ್ಸನ್ನಮನಸ್ಕಂ ಸ ಗಚ್ಛತಿ ॥ 20 ॥

ಸಮನಸ್ಕ ಯೋಗವನ್ನು ಅಭ್ಯಾಸ ಮಾಡುವುದರಿಂದ (ಮನಸಿನೊಡನೆ ಭಕ್ತಿ), ಅಷ್ಟಾಂಗ ಯೋಗದಲ್ಲಿ ಪರಿಣತನಾಗಿರುವ ಯೋಗಿಯು ಅಮನಸ್ಕನೆಡೆಗೆ (ಈಶ್ವರ, ಮನಸು ಇಲ್ಲದವನು) ಸಾಗುತ್ತಾನೆ. [9–20]

ವಿವೃತ್ತಿ

ಹೀಗೆ ಅಷ್ಟಮೂರ್ತಿ ಸ್ವರೂಪದ ದೇಹವನ್ನೇ ತಿಳಿದು ಧ್ಯಾನಿಸುವ ಫಲವನ್ನು ಹೇಳಲು **ಸಮನಸ್ಕಮಿತಿ.** ***ಸಮನಸ್ಕಮಿದಂ*** ಮನಸಿನಲ್ಲಿ ವ್ಯಾಪ್ತವಾಗಿರುವ ಅಷ್ಟಮೂರ್ತಿಲಕ್ಷಣವನ್ನು ***ಉಪಾಸನಂ*** ಧ್ಯಾನಿಸುವ ***ಸೇವಮಾನ*** ಅಭ್ಯಾಸವುಳ್ಳ ***ಯೋಗೀ*** ಯೋಗನಿರತನು. ಹೇಗಿರುವ ಯೋಗೀ ***ಅಷ್ಟಾಂಗಯೋಗಯುಕ್ತಸ್ಸನ್*** ಅಷ್ಟಾಂಗಯೋಗದಲ್ಲಿ ಪರಿಣತನಾದವನು. ಅವನು ***ಅಮನಸ್ಕಂ*** ಈಶ್ವರನೆಡೆಗೆ ಚಲಿಸುತ್ತಾನೆ, ಈಶ್ವರಪದವನ್ನು ಹೊಂದುತ್ತಾನೆ ಎಂಬ ಅರ್ಥ. [9–20]

ಯೋಗದ ಎಂಟು ಮೆಟ್ಟಿಲುಗಳು

(1) ಯಮ

मनःप्रसादस्सन्तोषो मौनमिन्द्रियनिग्रहः ।
दया दाक्षिण्यमास्तिक्यमार्जवं मार्दवं क्षमा ॥ २१ ॥
भावशुद्धिरहिंसा च ब्रह्मचर्यं स्मृतिर्धृतिः ।
इत्येवमादयोन्ये चमनस्साध्या यमास्स्मृताः ॥ २२ ॥

ಮನಃಪ್ರಸಾದಸ್ಸಂತೋಷೋ ಮೌನಮಿಂದ್ರಿಯನಿಗ್ರಹಃ ।
ದಯಾ ದಾಕ್ಷಿಣ್ಯಮಾಸ್ತಿಕ್ಯಮಾರ್ಜವಂ ಮಾರ್ದವಂ ಕ್ಷಮಾ ॥ 21 ॥
ಭಾವಶುದ್ಧಿರಹಿಂಸಾ ಚ ಬ್ರಹ್ಮಚರ್ಯಂ ಸ್ಮೃತಿರ್ಧೃತಿಃ ।
ಇತ್ಯೇವಮಾದಯೋನ್ಯೇ ಚ ಮನಸ್ಸಾಧ್ಯಾ ಯಮಾಸ್ಸ್ಮೃತಾಃ ॥ 22 ॥

ಶಾಂತಿ, ಸಂತೋಷ, ಮೌನ, ಇಂದ್ರಿಯನಿಗ್ರಹ, ದಯೆ, ದಾಕ್ಷಿಣ್ಯ, ಆಸ್ತಿಕತೆ, ಆರ್ಜವ (ನೇರನುಡಿ), ಮೃದುಭಾವ, ಕ್ಷಮೆ, ಭಾವಶುದ್ಧಿ, ಅಹಿಂಸೆ, ಬ್ರಹ್ಮಚರ್ಯ, ಸ್ಮೃತಿ, ಧೈರ್ಯ ಇತ್ಯಾದಿಗಳನ್ನು ಮನಸಿನ ಸ್ವನಿಯಂತ್ರಣದ ಯಮಗಳೆಂದು ಹೇಳುತ್ತಾರೆ. [9–21..22]

ವಿವೃತ್ತಿ

ಇನ್ನುಮುಂದೆ ಯೋಗದ ಎಂಟು ಅಂಗಗಳನ್ನು ವಿಭಜಿಸಿ ವಿವರಿಸುವ **ಮನಃಪ್ರಸಾದ ಇತ್ಯಾದಿನಾ.** ಮನಸಿನ ಉದ್ರಿಕ್ತ ಅವಸ್ಥೆಗೆ ಆಪತ್ತುತರುವ ***ಪ್ರಸಾದಃ*** ಪ್ರಸನ್ನತೆ, ಲಕ್ಷ್ಯದ ವಿಕ್ಷೇಪವಿಲ್ಲದಿರುವ ಸ್ಥಿತಿ. ***ಸಂತೋಷೋ*** ಯಾದೃಚ್ಛಿಕ ಸಂತುಷ್ಟಿಯು. ***ಮೌನಂ*** ವೃಥಾಮಾತುಗಳ ತ್ಯಾಗ. **ಇಂದ್ರಿಯನಿಗ್ರಹಃ** ಇಂದ್ರಿಯಗಳ ವಶೀಕರಣ. ದಯಾ ಜೀವಿಗಳಿಗೆ ನೋವನ್ನುಂಟುಮಾಡದಿರುವುದು. ***ದಾಕ್ಷಿಣ್ಯಂ*** ವ್ಯವಹಾರ ದಕ್ಷತೆ, ಆಗ್ರಹರಹಿತತೆ. ***ಆಸ್ತಿಕ್ಯಂ*** ಶಾಸ್ತ್ರಗಳಲ್ಲಿ ತಿಳಿಸಿರುವ ವಿಷಯಗಳ ಪ್ರತಿ ವಿಶ್ವಾಸ. ***ಆರ್ಜವಂ*** ಋಜುತ್ವ, ಅಕುಟಿಲತ್ವ. ***ಮಾರ್ದವಂ*** ಮೃದುತ್ವ, ಅಕಠಿಣತ್ವ. ***ಕ್ಷಮಾ*** ಕ್ರೋಧಕ್ಕೆ ಕಾರಣವಾಗಿರುವುದರೊಡನೆ ಕ್ರೋಧದ ಪರಿತ್ಯಾಗ. ***ಭಾವಶುದ್ಧಿಃ*** ಮಾತುಗಳಲ್ಲಿ ಮನಃಶುದ್ಧಿ, ಶುದ್ಧಾಂತಕರಣತ್ವ. ***ಅಹಿಂಸಾ*** ಪರಪೀಡನೆಯನ್ನು ವರ್ಜಿಸುವುದು. ***ಬ್ರಹ್ಮಚರ್ಯಂ*** ಅಷ್ಟಾಂಗ ಮೈಥುನ ತ್ಯಾಗ. ***ಸ್ಮೃತಿಃ*** ಜನ್ಮ, ಮೃತ್ಯು, ಜರೆ ಎಂಬ ವ್ಯಾಧಿಗಳ ದುಃಖ, ದೋಷಗಳ ವಿವೇಚನೆ. ***ಧೃತಿಃ*** ಧೈರ್ಯ, ಮನಃ ಪ್ರಾಣ ಇಂದ್ರಿಯಗಳಿಂದ ಆಗಾಗ ದೊರೆತ ಅನುಭವಗಳ ನಿರ್ಧಾರ. ಇವೆಲ್ಲವೂ ಮನಸಿಗೆ ಸಾಧ್ಯವಾಗಿರುವ ಯೋಗಸಾಧನೆಯ ರೂಪದ ಧರ್ಮವಾಗಿ ಯಮ ಎಂದು ವಿದ್ವಜ್ಜನರಿಂದ ಕರೆಯಲ್ಪಟ್ಟಿವೆ. ಮನಸಿನಿಂದ ಮಾತ್ರ ಸಾಧ್ಯವಾದ ನಿವೃತ್ತಿಲಕ್ಷಣವುಳ್ಳ ಯೋಗಾಂಗವಿಶೇಷವು ಯಮ ಎಂದು ಯಮದ ಲಕ್ಷಣವನ್ನು ಇದರಿಂದ ಹೇಳಬಹುದು. [9–21..22]

(2) ನಿಯಮ

स्नानं शौचं ऋतुस्सत्यं जपो होमश्च तर्पणम् ।
तपो दानं तितिक्षा च नमस्कारः प्रदक्षिणम् ॥ २३ ॥
व्रतोपवासाद्याश्छान्ये कायिका नियमास्स्मृताः ।

ಸ್ನಾನಂ ಶೌಚಂ ಕ್ರತುಸ್ಸತ್ಯಂ ಜಪೋ ಹೋಮಶ್ಚ ತರ್ಪಣಮ್ ।
ತಪೋ ದಾನಂ ತಿತಿಕ್ಷಾ ಚ ನಮಸ್ಕಾರಃ ಪ್ರದಕ್ಷಿಣಮ್ ॥ 23 ॥
ವ್ರತೋಪವಾಸಾದ್ಯಾಶ್ಚಾನ್ಯೇ ಕಾಯಿಕಾ ನಿಯಮಾಸ್ಸ್ಮೃತಾಃ ।

ಸ್ನಾನ, ಶೌಚ, ಪೂಜೆ, ಜಪ, ಹೋಮ, ತರ್ಪಣ, ತಪಸ್ಸು, ದಾನ, ತಿತಿಕ್ಷಾ (ಸಹನೆ), ನಮಸ್ಕಾರ, ಪ್ರದಕ್ಷಿಣೆ, ವ್ರತ, ಉಪವಾಸ ಇತ್ಯಾದಿಗಳನ್ನು ದೈಹಿಕ ನಿಯಂತ್ರಣದ ನಿಯಮಗಳೆಂದು ಹೇಳುತ್ತಾರೆ. [9–23..24]

ವಿವೃತ್ತಿ

ದೇಹದಿಂದ ಸಾಧ್ಯವಾಗಿರುವ ಲಕ್ಷಣವುಳ್ಳ ಯೋಗವಿಶೇಷವು ನಿಯಮ ಎಂದು ತಿಳಿಸುವ **ಸ್ನಾನಮಿತಿ.** ಸ್ನಾನ, ಶೌಚಗಳು ದೇಹಶುದ್ಧಿಗಾಗಿ ಬಾಹ್ಯವಾಗಿ ಗ್ರಹಿಸಲ್ಪಡುವವು. ***ಕ್ರತುಃ*** ಈಶ್ವರಪೂಜೆ. ***ಸತ್ಯಂ*** ಯಥಾರ್ಥವಚನ. ***ತಿತಿಕ್ಷಾ*** ದ್ವಂದ್ವದ ಸಹನೆ. ವ್ರತ, ಉಪವಾಸಗಳು ಆಯಾಯ ಕಾಲಕ್ಕೆ ಉಚಿತವಾಗಿ. ***ಅನ್ಯೇಪಿ*** ಯಾವ ಯೋಗವಿರೋಧಿಯಾದ ಆಹಾರ-ವಿಹಾರಗಳು ***ಕಾಯಿಕಾ*** ಕಾಯಕ್ಕೆ ಸಾಧ್ಯವಾಗಿರುವ. ಉಪಲಕ್ಷಣದಿಂದ ಕಾಯ-ವಾಕ್‌ಗಳಿದೆ ಸಾಧ್ಯವಾಗಿರುವಂತಹ ಎಂಬ ಅರ್ಥ. [9–23..24]

(3) ಆಸನ

स्वस्तिकं गोमुखं पद्मं हम्साख्यं ब्राह्ममासनम् ॥ २४ ॥

नृसिंहं गरुडं कूर्मं नागाख्यं वैष्णवासनम् ।
वीरं मयूरं वज्राख्यं सिद्धाख्यं रौद्रमासनम् ॥ २५ ॥
योन्यासनं विदुश्शाक्तं शैवं पश्चिमतानकम् ।

ಸ್ವಸ್ತಿಕಂ ಗೋಮುಖಂ ಪದ್ಮಂ ಹಂಸಾಖ್ಯಂ ಬ್ರಾಹ್ಮಮಾಸನಮ್ ॥ 24 ॥
ನೃಸಿಂಹಂ ಗರುಡಂ ಕೂರ್ಮಂ ನಾಗಾಖ್ಯಂ ವೈಷ್ಣವಾಸನಮ್ ।
ವೀರಂ ಮಯೂರಂ ವಜ್ರಾಖ್ಯಂ ಸಿದ್ಧಾಖ್ಯಂ ರೌದ್ರಮಾಸನಮ್ ॥ 25 ॥
ಯೋನ್ಯಾಸನಂ ವಿದುಶ್ಶಾಕ್ತಂ ಶೈವಂ ಪಶ್ಚಿಮತಾನಕಮ್ ।

ಸ್ವಸ್ತಿಕ, ಗೋಮುಖ, ಪದ್ಮ, ಹಂಸ ಇವುಗಳು ಬ್ರಹ್ಮ ಆಸನಗಳು; ನೃಸಿಂಹ, ಗರುಡ, ಕೂರ್ಮ, ನಾಗ ಇವುಗಳು ವೈಷ್ಣವಾಸನಗಳು; ವೀರ, ಮಯೂರ, ವಜ್ರ, ಸಿದ್ಧ ಇವುಗಳು ರುದ್ರ ಆಸನಗಳು; ಯೋನಿಯಾಸನವು ಶಾಕ್ತೇಯರ ಮತ್ತು ಪಶ್ಚಿಮತಾನಕವು ಶೈವರ ಆಸನಗಳಾಗಿವೆ ಎಂದು ತಿಳಿದವರು ಹೇಳುತ್ತಾರೆ. [9–24..26]

ವಿವೃತ್ತಿ

ಆಸನಗಳನ್ನು ತಿಳಿಸುವ **ಸ್ವಸ್ತಿಕಮಿತ್ಯಾದಿನಾ.** ಸ್ವಸ್ತಿಕ ಮೊದಲಾದ ನಾಲ್ಕು ಆಸನಗಳು ಬ್ರಹ್ಮದೇವತೆಗೆ ಸಂಬಂಧಿಸಿದವು ಎಂಬ ಅರ್ಥ. ನೃಸಿಂಹ ಮೊದಲಾದ ನಾಲ್ಕು ವಿಷ್ಣುದೇವತೆಗೆ ಸಂಬಂಧಿಸಿದವು. ವೀರ ಮೊದಲಾದ ನಾಲ್ಕು ರುದ್ರದೇವತೆಗೆ ಸಂಬಂಧಿಸಿದವು. ಯೋನಿ ಆಸನವು ಶಕ್ತಿದೇವತೆಗೆ ಎನ್ನುತ್ತಾರೆ ವಿದ್ವಾಂಸರು. ಪಶ್ಚಿಮತಾನಕ ಎಂಬ ಆಸನವು ಶೈವವಾಗಿದೆ ಎಂದು ಯೋಗಿಗಳು ಹೇಳುತ್ತಾರೆ. [9–24..26]

ಆಯಾ ದೇವತೆಗಳ ಉಪಾಸನೆಯ ಅನುಸಾರ ಸೂಕ್ತವಾಗಿ ವರ್ಗೀಕರಿಸಲಾಗಿದೆ. ವಿವರಗಳಿಗೆ ಯೋಗ ಕೃತಿಗಳನ್ನು ನೋಡಿ.

निरालम्बन योगस्य निरालम्बनमासनम् ॥ २६ ॥
निरालम्बतया ध्यानं निरालम्बस्सदाशिवः ।

ನಿರಾಲಂಬನ ಯೋಗಸ್ಯ ನಿರಾಲಂಬನಮಾಸನಮ್ ॥ 26 ॥
ನಿರಾಲಂಬತಯಾ ಧ್ಯಾನಂ ನಿರಾಲಂಬಸ್ಸದಾಶಿವಃ ।

ನಿರಾಲಂಬನ ಯೋಗದಲ್ಲಿ ನಿರಾಲಂಬನ ಆಸನವನ್ನು (ಯಾವುದೇ ಆಧಾರವಿಲ್ಲದೆ, ಯಾವುದೇ ಪೂರ್ವನಿರ್ಧಾರಿತ ದೇಹ, ಅಂಗಗಳ ಕ್ರಿಯೆ ಇಲ್ಲದೆ) ಹೇಳಿದೆ; ನಿರಾಲಂಬನ ಕುರಿತು ಧ್ಯಾನ ಮಾಡಬೇಕು ಮತ್ತು ಸದಾಶಿವನು ನಿರಾಲಂಬನಾಗಿದ್ದಾನೆ, ಅನಿಯಮಿತ ಪರಮಾತ್ಮ. [9–26..27]

ವಿವೃತ್ತಿ

ಯೋಗವಿಶೇಷ ಮತ್ತು ಆಸನವಿಶೇಷಗಳನ್ನು ತಿಳಿಸಲು **ನಿರಾಲಂಬನೇತಿ.** ***ನಿರಾಲಂಬನಂ*** ಕರ ಚರಣಗಳ ಸ್ಥಿತಿಯ ಕುರಿತಾದ ಯಾವುದೇ ನಿಯಮಗಳನ್ನು ಅವಲಂಬಿಸದೆ. ನಿರಾಲಂಬಯೋಗವು ಹೇಗೆ ಇರುವುದು ಎಂದು ಅರಿಯಲು ಉತ್ಸುಕರಾದವರಿಗೆ **ನಿರಾಲಂಬತಯಾ ಧ್ಯಾನಮಿತಿ.** ಯಾರು ನಿರಾಲಂಬನು ಎನ್ನಲು **ನಿರಾಲಂಬಃ ಸದಾಶಿವ ಇತಿ.**

ಸದಾಶಿವೋ ನಿರ್ವಿಶೇಷನಾದ ಪರಮಾತ್ಮನು, ಅವನನ್ನು ಅವಲಂಬಿಸಿ ಮನಸನ್ನು ಸಮಾಧಾನಗೊಳಿಸುವುದು ನಿರಾಲಂಬನಯೋಗವಾಗಿರುವುದು ಎಂಬ ಅರ್ಥ. ಸ್ವಸ್ತಿಕ ಮುಂತಾದ ಆಸನಗಳ ಲಕ್ಷಣಗಳನ್ನು ಯೋಗಗ್ರಂಥಗಳಿಂದ ಅರಿತುಕೊಳ್ಳುವುದು. [9–26..27]

(4) ಪ್ರಾಣಾಯಾಮ

रेचकः पूरकश्चैव कुम्भकः प्राणसंयमः ॥ २७ ॥

ರೇಚಕಃ ಪೂರಕಶ್ಚೈವ ಕುಂಭಕಃ ಪ್ರಾಣಸಂಯಮಃ ॥ 27 ॥

ಪ್ರಾಣದ ನಿಯಮನವು (ಶ್ವಾಸಕೋಶಗಳನ್ನು) ರೇಚಕ (ಖಾಲಿಮಾಡು), ಪೂರಕ (ತುಂಬಿಸುವುದು) ಮತ್ತು ಕುಂಭಕ (ತಡೆದು ನಿಲ್ಲಿಸು) ಕ್ರಿಯೆಗಳನ್ನೊಳಗೊಂಡಿದೆ. [9–27]

ವಿವೃತ್ತಿ

ಇದರಲ್ಲಿ ಪ್ರಾಣಾಯಾಮವನ್ನು ವಿವರಿಸುತ್ತಾ **ರೇಚಕ ಇತಿ.** ರೇಚಕ, ಪೂರಕ, ಕುಂಭಕ ಎಂಬ ಮೂರು ವಿಧದ ಪ್ರಾಣನಿರೋಧವು ಪ್ರಾಣಾಯಾಮವಾಗಿದೆ. [9–27]

(5) ಪ್ರತ್ಯಾಹಾರ

इन्द्रियाणां समस्तानां विषयेभ्यो निवारणम् ।
प्रत्याहार इति प्रोक्तं प्रत्याहारार्थवेदिभिः ॥ २८ ॥

ಇಂದ್ರಿಯಾಣಾಂ ಸಮಸ್ತಾನಾಂ ವಿಷಯೇಭ್ಯೋ ನಿವಾರಣಮ್ ।
ಪ್ರತ್ಯಾಹಾರ ಇತಿ ಪ್ರೋಕ್ತಂ ಪ್ರತ್ಯಾಹಾರಾರ್ಥವೇದಿಭಿಃ ॥ 28 ॥

ಸಮಸ್ತ ಇಂದ್ರಿಯಗಳನ್ನು ಅವುಗಳ ವಿಷಯಗಳಿಂದ ದೂರಮಾಡುವುದನ್ನು ಪ್ರತ್ಯಾಹಾರವೆಂದು, ಅದರ ಕ್ರಿಯೆಯನ್ನು ತಿಳಿದವರು ಹೇಳುತ್ತಾರೆ. [9–28]

ವಿವೃತ್ತಿ

ಪ್ರತ್ಯಾಹಾರವನ್ನು ತಿಳಿಸುತ್ತಾ **ಇಂದ್ರಿಯಾಣಾಮಿತಿ.** ಅರ್ಥವು ಸ್ಪಷ್ಟವಾಗಿದೆ. [9–28]

(6) ಧಾರಣ

आधारे क्वापि मनसस्स्थापनं धारणोच्यते ।

ಆಧಾರೇ ಕ್ವಾಪಿ ಮನಸಸ್ಸ್ಥಾಪನಂ ಧಾರಣೋಚ್ಯತೇ ।

ಮನಸನ್ನು ಒಂದು ವಸ್ತುವಿನ (ಆಧಾರ) ಮೇಲೆ ಕೇಂದ್ರೀಕರಿಸುವುದನ್ನು ಧಾರಣವೆನ್ನುತ್ತಾರೆ. [9–29]

ವಿವೃತ್ತಿ

ಧಾರಣೆ ಎಂಬುದನ್ನು ವಿವರಿಸುವ **ಆಧಾರ ಇತಿ. *ಕ್ವಾಪಿ*** ಮಣಿಪೂರಕ ಮೊದಲಾದ ಚಕ್ರಗಳಲ್ಲಿ ಎಂಬ ಅರ್ಥದಲ್ಲಿ. ಅಥವಾ ***ಕ್ವಾಪಿ*** ಶುಭವಿಷಯಕವಾಗಿ ಹೃದಯದಲ್ಲಿ ಆವಿಷ್ಕರಿಸಿರುವ ವಿಷ್ಣು ಇತ್ಯಾದಿ ಮೂರ್ತಿಗಳಲ್ಲಿ ಎಂಬ ಅರ್ಥ. [9–29]

ದೇಹದಲ್ಲಿರುವ ಚಕ್ರಗಳು ಅಥವಾ ದೇವತಾರೂಪ ಇತ್ಯಾದಿಗಳು ನಾವು ಯೋಚಿಸುವ ವಸ್ತುವಾಗಿರಬಹುದು.

(7) ಧ್ಯಾನ

ब्रह्मविष्णुशिवादीनां चिन्ता ध्यानं प्रचक्षते ॥ २९ ॥

ಬ್ರಹ್ಮವಿಷ್ಣುಶಿವಾದೀನಾಂ ಚಿಂತಾ ಧ್ಯಾನಂ ಪ್ರಚಕ್ಷತೇ ॥ 29 ॥

ಬ್ರಹ್ಮ, ವಿಷ್ಣು, ಶಿವ ಮುಂತಾದವರ ಕುರಿತು ನಿರಂತರವಾಗಿ ಚಿಂತನೆಮಾಡುವುದನ್ನು ಧ್ಯಾನ ಎನ್ನುತ್ತಾರೆ. [9–29]

ವಿವೃತ್ತಿ

ಧ್ಯಾನವನ್ನು ತಿಳಿಸಲು **ಬ್ರಹ್ಮವಿಷ್ಣುಶಿವಾದೀನಾಮಿತಿ.** ಪ್ರಾಣದೊಂದಿಗೆ ಮನಸನ್ನು ಒಂದು ವಸ್ತುವಿನ ಮೇಲೆ ಕೇಂದ್ರೀಕರಿಸುವುದನ್ನು ಧಾರಣಾ ಆಗಿದ್ದರೆ, ಧ್ಯಾನದಲ್ಲಿ ವಿಷಯವಿಶೇಷಗಳಾದ ಬ್ರಹ್ಮ ಮುಂತಾದವರಲ್ಲಿ ಮನೋವೃತ್ತಿಯ ಧಾರಾಪ್ರವಾಹ ನಿರಂತರವಾಗಿರುವುದು. ಇದುವೇ ಅವೆರಡರ ನಡುವಿನ ಭೇದ. [9–29]

ಧಾರಣದಲ್ಲಿ ಒಂದು ವಸ್ತುವಿನ ಮೇಲೆ ಮನಸು ಮತ್ತು ಪ್ರಾಣದ ಕೇಂದ್ರೀಕರಣ ಮಾತ್ರ ಇದೆ ಆದರೆ ಧ್ಯಾನದಲ್ಲಿ ಆ ಕೇಂದ್ರೀಕರಣವು ನಿರಂತರವಾಗಿದೆ.

(8) ಸಮಾಧಿ

ध्यानादस्पन्दनं बुद्धेः समाधिरभिधीयते ।
अमनस्कसमाधिस्तु सर्वचिन्ताविवर्जितम् ॥ ३० ॥

ಧ್ಯಾನಾದಸ್ಪಂದನಂ ಬುದ್ಧೇಃ ಸಮಾಧಿರಭಿಧೀಯತೇ ।
ಅಮನಸ್ಕಸಮಾಧಿಸ್ತು ಸರ್ವಚಿಂತಾವಿವರ್ಜಿತಮ್ ॥ 30 ॥

ಧ್ಯಾನಮಾಡುವಾಗ ಉಂಟಾಗುವ ಬುದ್ಧಿಯ ಸ್ಥಿರತೆಯನ್ನು ಸಮಾಧಿ ಎಂದು ಕರೆಯುತ್ತಾರೆ; ಅಮನಸ್ಕ ಸಮಾಧಿಯು ಎಲ್ಲಾ (ದ್ವೈತ–ಭೇದದ) ಆಲೋಚನೆಗಳಿಂದ ಮುಕ್ತವಾಗಿರುವುದು. [9–30]

ವಿವೃತ್ತಿ

ಎಂಟನೆಯ ಅಂಗವಾದ ಸಮಾಧಿಯನ್ನು ವಿವರಿಸುವ **ಧ್ಯಾನಾದಿತಿ.** ಇದು ಸವಿಕಲ್ಪಕಸಮಾಧಿ ಎಂಬ ಸಮನಸ್ಕ ಜ್ಞಾತೃ, ಜ್ಞೇಯ ವಿಭಾಗಗಳಿಂದ ಉಲ್ಲೇಖವಾಗುವ ಅಂಗ ಎಂಬ ಅರ್ಥ. ಅಂತೆಯೇ ಇನ್ನೊಂದು ವಿಧವಾದ ನಿರ್ವಿಕಲ್ಪಕಸಮಾಧಿರೂಪದ ಯೋಗಾಂಗವನ್ನು ತಿಳಿಸಲು **ಅಮನಸ್ಕಸಮಾಧಿಸ್ತ್ವಿತಿ. *ಸರ್ವಚಿಂತಾ*** ಜ್ಞಾತೃ–ಜ್ಞೇಯ ವಿಭಾಗಗಳ ಉಲ್ಲೇಖವು ***ವರ್ಜಿತಂ*** ಲಯವಾಗಿರುವ, ವಿಕ್ಷೇಪರಹಿತತೆಯಿಂದ ಪ್ರಶಾಂತಾವಸ್ಥೆಯಿರುವ ಎಂಬ ಅರ್ಥವು. [9–30]

ಮನಸು ಮತ್ತು ಪ್ರಾಣದ ಸ್ಥಿರತೆಗೆ ಯೋಗದ ಆವಶ್ಯಕತೆ

चित्ते निश्चलतां याते प्राणो भवति निश्चलः ।
चित्तस्य निश्चलत्वाय योगं सध्यानमभ्यसेत् ॥ ३१ ॥

ಚಿತ್ತೇ ನಿಶ್ಚಲತಾಂ ಯಾತೇ ಪ್ರಾಣೋ ಭವತಿ ನಿಶ್ಚಲಃ ।
ಚಿತ್ತಸ್ಯ ನಿಶ್ಚಲತ್ವಾಯ ಯೋಗಂ ಸಧ್ಯಾನಮಭ್ಯಸೇತ್ ॥ 31 ॥

ಚಿತ್ತ, ಯೋಚಿಸುವ ತತ್ತ್ವ, ನಿಶ್ಚಲವಾದರೆ, ಪ್ರಾಣವು ಸ್ಥಿರವಾಗುವುದು; ಚಿತ್ತವನ್ನು ನಿಶ್ಚಲವಾಗಿ ಮಾಡಲು, ಯೋಗವನ್ನು ಧ್ಯಾನದೊಂದಿಗೆ ಅಭ್ಯಸಿಸಬೇಕು. [9–31]

ವಿವೃತ್ತಿ

ಚಿತ್ತವನ್ನು ನಿಶ್ಚಲಮಾಡುವ ಫಲವನ್ನು ತಿಳಿಸಲು **ಚಿತ್ತ ಇತಿ.** ಪ್ರಾಣದ ಚಲನೆಯು ಚಿತ್ತದ ಚಂಚಲತೆಗೆ ಹೇತುವಾಗಿದೆ ಎಂದು ಇದು ಹೇಳುತ್ತದೆ. ಚಿತ್ತದ ಸ್ಥಿರತೆಯು ಅಷ್ಟಾಂಗಯೋಗದಿಂದಲೇ ಲಭಿಸುವುದು. ಅದನ್ನು ಪ್ರಯತ್ನಪೂರ್ವಕವಾಗಿ ಅಭ್ಯಸಿಸಬೇಕೆನ್ನಲು **ಚಿತ್ತಸ್ಯೇತಿ.** ***ಸಧ್ಯಾನಮ್*** ಧ್ಯಾನಮಾತ್ರವನ್ನು ಗ್ರಹಣಮಾಡುವುದರಿಂದ, ಅದರ ಗೌರವಾತಿಶಯದ ದ್ಯೋತಕವಾಗಿದೆ. [9–31]

ಲಂಬಿಕಾ ಯೋಗ

आकुञ्चनमपानस्य प्राणस्य च निरोधनम् ।
लम्बिकोपरि जिह्वायास्स्थापनं योगसाधनम् ॥ ३२ ॥

ಆಕುಂಚನಮಪಾನಸ್ಯ ಪ್ರಾಣಸ್ಯ ಚ ನಿರೋಧನಮ್ ।
ಲಂಬಿಕೋಪರಿ ಜಿಹ್ವಾಯಾಸ್ಸ್ಥಾಪನಂ ಯೋಗಸಾಧನಮ್ ॥ 32 ॥

ಅಪಾನವನ್ನು ಸಂಕುಚಿತಗೊಳಿಸಿ, ಪ್ರಾಣವನ್ನು ಸಂಯಮಗೊಳಿಸಿ ನಾಲಗೆಯ ತುದಿಯನ್ನು ಲಂಬಿಕದ (ಗಂಟಲಿನ ಮತ್ತು ಬಾಯಿಯ ಮೇಲಿನ ಅಂಗಳ ಸೇರುವ ಜಾಗದಲ್ಲಿರುವ ಜೋತಾಡುವ ಅಂಗ) ಮೇಲೆ ಸ್ಥಾಪಿಸುವುದು – ಚಿತ್ತವನ್ನು ಸ್ಥಿರವಾಗಿಸುವ ಯೋಗವಿಧಾನವಾಗಿದೆ. [9–32]

ವಿವೃತ್ತಿ

ಇನ್ನೊಂದು ಪ್ರಕಾರದ ಯೋಗಸಾಧನೆಯನ್ನು ತಿಳಿಸುವ **ಆಕುಂಚನಮಿತಿ.** ***ಆಕುಂಚನಂ*** ಗುದದ್ವಾರದ ಸಂಕೋಚದಿಂದ ಅಪಾನವಾಯುವನ್ನು ಊರ್ಧ್ವಸ್ರೋತವಾಗಿ ಪ್ರವರ್ತಿಸುವುದು; ಕುಂಭಕದಿಂದ ಪ್ರಾಣವನ್ನು ಶರೀರದೊಳಗೇ ನಿರೋಧಿಸುವುದು. ***ಲಂಬಿಕಾ*** ತಾಲುಮೂಲದಲ್ಲಿರುವ ಸ್ತನಾಕಾರದ ಮಾಂಸಖಂಡ. ಅದರ ಮೇಲೆ ***ಜಿಹ್ವಾಯಾಃ ಸ್ಥಾಪನಂ*** ಬಲಹಾಕಿ ನಿರೋಧಿಸುವುದು. ಇಂತಹ ಕ್ರಿಯೆಯು ಚಿತ್ತವೃತ್ತಿನಿರೋಧಲಕ್ಷಣದ ಉತ್ಕೃಷ್ಟ ಸಾಧನೆಗೆ ಕಾರಣವಾಗಿರುವುದು ಎಂಬ ಅರ್ಥ. [9–32]

ಯೋಗ ಪ್ರಾವೀಣ್ಯತೆಯ ಲಕ್ಷಣಗಳು

चित्ते निश्चलतां याते प्राणे मध्यपथं गते ।
चिह्नान्येतानि जायन्ते पञ्चभूतजयात्पृथक् ॥ ३३ ॥

ಚಿತ್ತೇ ನಿಶ್ಚಲತಾಂ ಯಾತೇ ಪ್ರಾಣೇ ಮಧ್ಯಪಥಂ ಗತೇ ।
ಚಿಹ್ನಾನ್ಯೇತಾನಿ ಜಾಯಂತೇ ಪಂಚಭೂತಜಯಾತ್ಪೃಥಕ್ ॥ 33 ॥

ಚಿತ್ತವನ್ನು ನಿಶ್ಚಲವಾಗಿಸಿ ಮತ್ತು ಪ್ರಾಣವು ಮಧ್ಯಮಾರ್ಗವನ್ನು (ಸುಷುಮ್ನಾ) ಸೇರಿದರೆ, ಪಂಚಭೂತಗಳನ್ನು ಸ್ವಾಧೀನಗೊಳಿಸಿದಾಗ, ಮುಂದೆ ತಿಳಿಸಿದ ಚಿಹ್ನೆಗಳು ಕಾಣಬರುವುವು. [9–33]

ವಿವೃತ್ತಿ

ಇಲ್ಲಿ ಅಭ್ಯಾಸದಿಂದ ಚಿತ್ತ–ಪ್ರಾಣಗಳನ್ನು ವಶೀಕರಿಸಿಕೊಂಡ ಯೋಗಿಯ ಇತರ ಚಿಹ್ನೆಗಳಿಗೆ **ಚಿತ್ತೇ ನಿಶ್ಚಲತಾಂ ಯಾತ ಇತಿ.** ***ಪಂಚಭೂತಜಯಾತ್ಪೃಥಕ್*** ಪಾದದಿಂದ ಮೊಣಕಾಲಿನವರೆಗೆ ಪೃಥ್ವೀಸ್ಥಾನ, ಮೊಣಕಾಲಿನಿಂದ ನಾಭಿಯವರೆಗೆ ಜಲ ಸ್ಥಾನ, ನಾಭಿಯಿಂದ ಕಂಠದವರೆಗೆ ತೇಜಸ್ಸಿನ ಸ್ಥಾನ, ಕಂಠದಿಂದ ಭ್ರೂಮಧ್ಯದವರೆಗೆ ವಾಯುಸ್ಥಾನ, ಅಲ್ಲಿಂದ ಮೇಲೆ ಬ್ರಹ್ಮರಂಧ್ರದವರೆಗೆ ಆಕಾಶ ಸ್ಥಾನ ಹೀಗೆ ಧಾರಣೆಯ ಅಭ್ಯಾಸಕ್ರಮದಿಂದ ಮುಂದೆ ತಿಳಿಸುವ ಚಿಹ್ನೆಗಳು ಯೋಗಿಯಲ್ಲಿ ಕಾಣಬರುತ್ತವೆ. [9–33]

ದೇಹದಲ್ಲಿ ಪಂಚಭೂತಗಳ ಸ್ಥಾನಗಳಲ್ಲಿ ಧಾರಣವನ್ನು ಅಭ್ಯಾಸ ಮಾಡುವುದರಿಂದ, ಅವುಗಳ ನಿಯಂತ್ರಣವನ್ನು ಸಾಧಿಸಬಹುದು. ಅಂಗಾಲಿನಿಂದ ಮೊಣಗಂಟಿನವರೆಗೆ ಭೂ ತತ್ತ್ವದ ಸ್ಥಾನವಾಗಿದೆ; ಮೊಣಗಂಟಿನಿಂದ ಹೊಕ್ಕಳಿನವರೆಗೆ ಜಲತತ್ತ್ವವು ವ್ಯಾಪಿಸಿದೆ; ಹೊಕ್ಕಳಿನಿಂದ ಗಂಟಲಿನವರೆಗೆ ಅಗ್ನಿತತ್ತ್ವದ ವ್ಯಾಪ್ತಿಯಿದೆ; ಗಂಟಲಿನಿಂದ ಭ್ರೂಮಧ್ಯದವರೆಗೆ ವಾಯುತತ್ತ್ವವು ಪಸರಿಸಿದೆ; ಭ್ರೂಮಧ್ಯದಿಂದ ಬ್ರಹ್ಮರಂದ್ರದವರೆಗೆ ಆಕಾಶತತ್ತ್ವದ ಸ್ಥಾನವಿದೆ.

मलमूत्रकफाल्पत्वमारोग्यं लघुता तनोः ।
सुगन्धस्स्वर्ण[स्वर]वर्णत्वं प्रथमं योगलक्षणम् ॥ ३४ ॥

ಮಲಮೂತ್ರಕಫಾಲ್ಪತ್ವಮಾರೋಗ್ಯಂ ಲಘುತಾ ತನೋಃ ।
ಸುಗಂಧಸ್ಸ್ವರ್ಣ[ಸ್ವರ]ವರ್ಣತ್ವಂ ಪ್ರಥಮಂ ಯೋಗಲಕ್ಷಣಮ್ ॥ 34 ॥

ಮಲ, ಮೂತ್ರ, ಕಫಗಳು ಅಲ್ಪವಾಗಿ ವಿಸರ್ಜನೆಯಾಗುವುದು, ಆರೋಗ್ಯವಂತ, ಹಗುರವಾದ ದೇಹ, ಮಧುರವಾದ ದೇಹ ವಾಸನೆ, ಸ್ವರ ಮತ್ತು ಬಣ್ಣ ಇವುಗಳು ಪ್ರಥಮ ಗುಂಪಿನ (ಭೂ ತತ್ತ್ವದ) ನಿಯಂತ್ರಣದ ಲಕ್ಷಣಗಳು. [9–34]

ವಿವೃತ್ತಿ

ಅವುಗಳೇನು ಎಂದು ತಿಳಿಯಲು **ಮಲಮೂತ್ರೇತಿ.** ***ಪ್ರಥಮಂ ಯೋಗಲಕ್ಷಣಮ್*** ಪೃಥ್ವೀ ಎಂಬ ಪ್ರಥಮ ಭೂಮಿಕೆಯ ಮೇಲಿನ ಜಯವು ಯೋಗದ ಲಕ್ಷಣವಾಗಿದೆ ಎಂಬ ಅರ್ಥ. ಇದು ಉತ್ತರವೆಂದು ಇಲ್ಲಿ

ಯೋಜಿಸಿಕೊಳ್ಳುವುದು. ಶ್ವೇತಾಶ್ವತರ ಎಂಬ ಮಂತ್ರೋಪನಿಷತ್ತಿನಲ್ಲಿ 'ಯುಂಜಾನಃ ಪ್ರಥಮಂ ಮನಃ' ಎಂದು ಯೋಗವನ್ನು ಪ್ರಕಟಿಸಿರುವರು.

ಪೃಥ್ವ್ಯಪ್ಯತೇಜೋನಿಲಖೇ ಸಮುತ್ಥಿತೇ ಪಂಚಾತ್ಮಕೇ ಯೋಗಗುಣೇ ಪ್ರವೃತ್ತೇ ।
ನ ತಸ್ಯ ರೋಗೋ ನ ಜರಾ ನ ಮೃತ್ಯುಃ ಪ್ರಾಪ್ತಸ್ಯ ಯೋಗಾಗ್ನಿಮಯಂ ಶರೀರಮ್ ॥ 12 ॥
ಲಘುತ್ವಮಾರೋಗ್ಯಮಲೋಲುಪತ್ವಂ ವರ್ಣಪ್ರಸಾದಂ ಸ್ವರಸೌಷ್ಠವಂ ಚ ।
ಗಂಧಃ ಶುಭೋ ಮೂತ್ರಪುರೀಷಮಲ್ಪಂ ಯೋಗಪ್ರವೃತ್ತಿಂ ಪ್ರಥಮಾಂ ವದಂತಿ ॥ ಶ್ವೇ.ಉ.2–13 ॥

ಎಂದು ಹೇಳಿರುವರು. [9–34]

कण्टकाग्रेश्वसङ्गत्वं जलपङ्केष्वमज्जनम् ।
क्षुतृडादिसहिष्णुत्वं द्वितीयं योगलक्षणम् ॥ ३५ ॥

ಕಂಟಕಾಗ್ರೇಷ್ವಸಂಗತ್ವಂ ಜಲಪಂಕೇಷ್ವಮಜ್ಜನಮ್ ।
ಕ್ಷುತೃಡಾದಿಸಹಿಷ್ಣುತ್ವಂ ದ್ವಿತೀಯಂ ಯೋಗಲಕ್ಷಣಮ್ ॥ 35 ॥

ಮುಳ್ಳಿನ ತುದಿಗಳಿಂದ ಬಾಧಿಸಲ್ಪಡದಿರುವುದು, ನೀರಿನಲ್ಲಿ ಮತ್ತು ಕೆಸರಿನಲ್ಲಿ ಮುಳುಗದಿರುವುದು, ಹಸಿವೆ, ಬಾಯಾರಿಕೆ ಇತ್ಯಾದಿಗಳನ್ನು ತಡೆದುಕೊಳ್ಳುವ ಶಕ್ತಿ, ಇವುಗಳು ಎರಡನೆಯ ವರ್ಗದ (ಜಲ ತತ್ತ್ವ) ನಿಯತ್ರಣದ ಲಕ್ಷಣಗಳು. [9–35]

ವಿವೃತ್ತಿ

ಎರಡನೆಯ ಭೂಮಿಕೆಯ ಧಾರಣೆಸಿದ್ಧಿಯ ಚಿಹ್ನೆಗಳಿಗೆ **ಕಂಟಕಾಗ್ರೇಷ್ವಿತಿ.** ***ಅಸಂಗತ್ವಂ*** ಮುಳ್ಳಿನಿಂದ ಚುಚ್ಚಲ್ಪಡದಿರುವುದು. [9–35]

बह्वन्नपानभोक्तृत्वमातपाग्निसहिष्णुता ।
दर्शनं श्रवणं दूरात्तृतीयं योगलक्शणम् ॥ ३६ ॥

ಬಹ್ವನ್ನಪಾನಭೋಕ್ತೃತ್ವಮಾತಪಾಗ್ನಿಸಹಿಷ್ಣುತಾ ।
ದರ್ಶನಂ ಶ್ರವಣಂ ದೂರಾತ್ತೃತೀಯಂ ಯೋಗಲಕ್ಷಣಂ ॥ 36 ॥

ತುಂಬಾ ಅನ್ನ ಪಾನೀಯಗಳನ್ನು ಸೇವಿಸುವ ಶಕ್ತಿ, ಸೂರ್ಯನ ಬಿಸಿಲನ್ನು ಮತ್ತು ಬೆಂಕಿಯ ಶಾಖವನ್ನು ತಡೆದುಕೊಳ್ಳುವ ಶಕ್ತಿ, ದೂರದ ವಸ್ತುಗಳ ದರ್ಶನ, ದೂರ ಶ್ರವಣ ಇವುಗಳು ಮೂರನೆಯ ಗುಂಪಿನ (ಅಗ್ನಿ ತತ್ತ್ವ) ನಿಯಂತ್ರಣದ ಲಕ್ಷಣಗಳು. [9–36]

ವಿವೃತ್ತಿ

ಮೂರನೆಯ ಭೂಮಿಕೆಯ ಸಿದ್ಧಿಲಕ್ಷಣಗಳಿಗೆ **ಬಹ್ವನ್ನೇತಿ.** [9–36]

मण्डूकप्लवनं भूमौ मर्कटप्लवनं द्रुमे ।

आकाशगमनं चेति चतुर्थं योगलक्षणम् ॥ ३७ ॥

ಮಂಡೂಕಪ್ಲವನಂ ಭೂಮೌ ಮರ್ಕಟಪ್ಲವನಂ ದ್ರುಮೇ ।
ಆಕಾಶಗಮನಂ ಚೇತಿ ಚತುರ್ಥಂ ಯೋಗಲಕ್ಷಣಂ ॥ 37 ॥

ಕಪ್ಪೆಯಂತೆ ಭೂಮಿಯಲ್ಲಿ ಹಾರುವುದು, ಮಂಗನಂತೆ ಮರದಲ್ಲಿ ಹಾರುವುದು, ಗಾಳಿಯಲ್ಲಿ ನಡಿಗೆ ಇವುಗಳು ನಾಲ್ಕನೆಯ (ವಾಯು ತತ್ತ್ವ) ಗುಂಪಿನ ನಿಯಂತ್ರಣದ ಲಕ್ಷಣಗಳು. [9–37]

ವಿವೃತ್ತಿ

ನಾಲ್ಕನೆಯದರ ಸಿದ್ಧಿಯ ಲಕ್ಷಣಗಳಿಗೆ **ಮಂಡೂಕಪ್ಲವನಮಿತಿ.** [9–37]

ज्ञानं त्रिकालविषयमैश्वर्यमणिमादिकम् ।
अनन्तशक्तिमत्त्वं च पञ्चमं योगलक्शणम् ॥ ३८ ॥

ಜ್ಞಾನಂ ತ್ರಿಕಾಲವಿಷಯಮೈಶ್ವರ್ಯಮಣಿಮಾದಿಕಮ್ ।
ಅನಂತಶಕ್ತಿಮತ್ತ್ವಂ ಚ ಪಂಚಮಂ ಯೋಗಲಕ್ಷಣಮ್ ॥ 38 ॥

ತ್ರಿಕಾಲ ಜ್ಞಾನ, ಅಣಿಮಾ ಇತ್ಯಾದಿ ಸಿದ್ಧಿಗಳನ್ನು ಗಳಿಸುವುದು, ಅನಂತ ಶಕ್ತಿವಂತನಾಗುವುದು ಇವುಗಳು ಐದನೆಯ (ಆಕಾಶ ತತ್ತ್ವ) ವರ್ಗದ ನಿಯಂತ್ರಣದ ಲಕ್ಷಣಗಳು. [9–38]

ವಿವೃತ್ತಿ

ಐದನೆಯ ಯೋಗಲಕ್ಷಣವನ್ನು ತಿಳಿಸಲು **ಜ್ಞಾನಮಿತಿ.** ***ಅನಂತಶಕ್ತಿಮತ್ತ್ವಂ*** ಅಪರಿಮಿತ ಬಲವಿರುವಿಕೆ. [9–38]

प्राणे सुषुम्नां संप्राप्ते नादोन्तश्श्रूयतेष्टधा ।
घन्टादुन्धुभिशङ्खाब्दिवीणावेण्वादिताळवत् ॥ ३९ ॥

ಪ್ರಾಣೇ ಸುಷುಮ್ನಾಂ ಸಂಪ್ರಾಪ್ತೇ ನಾದೋಂತಶ್ರೂಯತೇಷ್ಟಧಾ ।
ಘಂಟಾದುಂದುಭಿಶಂಖಾಬ್ಧಿವೀಣಾವೇಣ್ವಾದಿತಾಳವತ್ ॥ 39 ॥

ಪ್ರಾಣವು ಸುಷುಮ್ನೆಯಲ್ಲಿ ಸೇರಿದಾಗ. ಎಂಟುಬಗೆಯ ನಾದವು ಒಳಗಿನಿಂದ ಕೇಳಿಬರುವುದು; ಘಂಟೆ, ದುಂದುಭಿ (ಡೋಲು), ಶಂಖ, ಸಾಗರ, ವೀಣೆ, ಕೊಳಲು, ತಾಳ ಇತ್ಯಾದಿಗಳಂತೆ. [9–39]

ವಿವೃತ್ತಿ

ಹೀಗೆ ಆಯಾಯ ವಿಶೇಷಸ್ಥಾನಗಳ ಮೇಲಿನ ಜಯದ ಚಿಹ್ನೆಗಳನ್ನು ತಿಳಿಸಲಾಯಿತು. ಸುಷುಮ್ನೆಯಲ್ಲಿ ಪ್ರಾಣವನ್ನು ನಿರೋಧಿಸುವುದರಿಂದ ಮನಸಿನ ವಶೀಕರಣದ ಚಿಹ್ನೆಗಳಿಗೆ **ಪ್ರಾಣೇ ಸುಷುಮ್ನಾಂ ಸಂಪ್ರಾಪ್ತ ಇತಿ.** ಎಂಟು ವಿಧದ ನಾದಗಳಿಗೆ **ಘಂಟೇತಿ.** ವೇಣ್ವಾದಿ ಶಬ್ದದಿಂದ ಮೃದಂಗ ಮೊದಲಾದವುಗಳು ಗ್ರಹಿಸಲ್ಪಡುತ್ತವೆ. ಅವುಗಳಂತಹ ಧ್ವನಿಯಿರುವ ನಾದವು ಕಿವಿಗಳಿಗೆ ಕೇಳಿಸುವುದು ಎಂಬ ಅರ್ಥದಲ್ಲಿ. [9–39]

तनूनपात्तटित्तारातारेशतपनोपमम् ।
ब्रह्मनाडीं गते प्राणेबिम्बरूपं प्रकाशते ॥ ४० ॥

ತನೂನಪಾತ್ತಟಿತ್ತಾರಾತಾರೇಶತಪನೋಪಮಮ್ ।
ಬ್ರಹ್ಮನಾಡೀಂ ಗತೇ ಪ್ರಾಣೇಬಿಂಬರೂಪಂ ಪ್ರಕಾಶತೇ ॥ 40 ॥

ಬ್ರಹ್ಮನಾಡಿಯಲ್ಲಿ ಪ್ರಾಣವು ಸ್ಥಿರವಾದಾಗ ಈಶ್ವರನು ದೇಹದಲ್ಲಿ ಅಗ್ನಿ, ಮಿಂಚು, ನಕ್ಷತ್ರಗಳು, ಚಂದ್ರ, ಸೂರ್ಯರ ಪ್ರತಿಬಿಂಬದಂತೆ ಪ್ರಕಾಶಿಸುತ್ತಾನೆ. [9–40]

ವಿವೃತ್ತಿ

ಹೀಗೆ ಸಿದ್ಧವಾಗುವ ಸುಷುಮ್ನೆಯ ಧಾರಣೆಯ ಯೋಗದಿಂದ ಪ್ರತ್ಯಕ್ಷರೂಪದ ಈಶ್ವರನು ಆವಿರ್ಭವಿಸುವನು ಎನ್ನಲು **ತನೂನಪಾದಿತಿ.** ***ತನೂನಪಾತ್*** ಅಗ್ನಿಯು. ***ತಟಿತ್*** ಸೌದಾಮಿನೀ, ಮಿಂಚು. ***ತಾರಾ*** ನಕ್ಷತ್ರಗಳು. ***ತಾರೇಶಃ*** ಚಂದ್ರ. ***ತಪನಃ*** ಸೂರ್ಯ. ***ಬ್ರಹ್ಮನಾಡೀ*** ಸುಷುಮ್ನಾ. ***ಬಿಂಬರೂಪಂ*** ಪರಮೇಶ್ವರ ಚೈತನ್ಯವು. ಈ ಕ್ರಮದಲ್ಲಿ ಅಗ್ನಿ ಮೊದಲಾದವುಗಳಂತೆ ಭಾಸವಾಗುವುದು ಎಂಬ ಅರ್ಥ. [9–40]

ಯೋಗದಲ್ಲಿ ಪ್ರಣವ

श्वासाश्चरन्ति यावन्तो मनुष्यस्य दिनं प्रति ।
तावन्ति योजनान्यर्कः श्वासेश्वासे प्रधावति ॥ ४१ ॥

ಶ್ವಾಸಾಶ್ಚರಂತಿ ಯಾವಂತೋ ಮನುಷ್ಯಸ್ಯ ದಿನಂ ಪ್ರತಿ ।
ತಾವಂತಿ ಯೋಜನಾನ್ಯರ್ಕಃ ಶ್ವಾಸೇಶ್ವಾಸೇ ಪ್ರಧಾವತಿ ॥ 41 ॥

ಮನುಷ್ಯನ ಶ್ವಾಸದಲ್ಲಿರುವ ಸೂರ್ಯನು, ಪ್ರತಿ ಶ್ವಾಸದಲ್ಲಿ ಪ್ರತಿದಿನದ ಶ್ವಾಸದಷ್ಟು ಯೋಜನ ದೂರವನ್ನು ಕ್ರಮಿಸುತ್ತಾನೆ. [9–41]

ವಿವೃತ್ತಿ

ಶ್ವಾಸದಲ್ಲಿ ಪ್ರಣವವು ಅಭಿವ್ಯಕ್ತವಾಗುವ ವಿಧವನ್ನು ವಿವರಿಸುವ **ಶ್ವಾಸಾಶ್ಚರಂತೀತಿ.** [9–41]

एकविंशतिसाहस्रं षट्छतं श्वाससङ्ख्यया ।
सोहमित्युच्चरत्यात्मा मन्त्रं प्रत्यहमायुषे ॥ ४२ ॥

ಏಕವಿಂಶತಿಸಾಹಸ್ರಂ ಷಟ್ಛತಂ ಶ್ವಾಸಸಂಖ್ಯಯಾ ।
ಸೋಹಮಿತ್ಯುಚ್ಚರತ್ಯಾತ್ಮಾ ಮಂತ್ರಂ ಪ್ರತ್ಯಹಮಾಯುಷೇ ॥ 42 ॥

ಪ್ರತಿದಿನ ಇಪ್ಪತ್ತೊಂದು ಸಾವಿರದ ಆರುನೂರು ಬಾರಿ ನಡೆಯುವ ಉಸಿರಾಟದಲ್ಲಿ, ಆತ್ಮವು ಪ್ರತಿಬಾರಿಯೂ 'ಸೋಹಂ' (ಅವನು ನಾನೇ ಆಗಿದ್ದೇನೆ) ಮಂತ್ರವನ್ನು, ಆಯುಷ್ಯವೃದ್ಧಿಗೆಂದು, ಉಚ್ಚರಿಸುತ್ತದೆ. [9–42]

ವಿವೃತ್ತಿ

ಮನುಷ್ಯನಲ್ಲಿ ದಿನಂಪ್ರತಿ ಏಷ್ಟು ಶ್ವಾಸಗಳು ಚಲಿಸುತ್ತವೆ ಎಂದು ತಿಳಿಯಬಯಸುವವರಿಗೆ **ಏಕ ವಿಂಶತೀತಿ.** ಒಂದು ಸೂರ್ಯೋದಯದಿಂದ ಇನ್ನೊಂದು ಸೂರ್ಯೋದಯದವರೆಗೆ, ಒಂದು ಅಹೋರಾತ್ರಿಯಲ್ಲಿ ಇಪ್ಪತ್ತೊಂದು ಸಾವಿರದ ಆರುನೂರು ಸಂಖ್ಯೆಯಲ್ಲಿ ಶ್ವಾಸೋಚ್ಛ್ವಾಸಗಳನ್ನು ಮಾಡಿ, ಹಂಸ ಸೋಹಂ ಎಂಬ ಮಂತ್ರವನ್ನುಚ್ಚರಿಸುವುದು ಸ್ವಾಭಾವಿಕವಾಗಿರುವುದು. ಇದರ ಅರ್ಥವೇನು? ***ಆಯುಷೇ*** ಆಯುಷ್ಯವೃದ್ಧಿಗಾಗಿ ಎಂಬ ಅರ್ಥವು. [9–42]

सकारं च हकारं च लोपयित्वा प्रयोजयेत् ।
सन्धिं वै पूर्वरूपाख्यं ततोसौ प्रणवो भवेत् ॥ ४३ ॥

ಸಕಾರಂ ಚ ಹಕಾರಂ ಚ ಲೋಪಯಿತ್ವಾ ಪ್ರಯೋಜಯೇತ್ ।
ಸಂಧಿಂ ವೈ ಪೂರ್ವರೂಪಾಖ್ಯಂ ತತೋಸೌ ಪ್ರಣವೋ ಭವೇತ್ ॥ 43 ॥

ಸಕಾರ ಮತ್ತು ಹಕಾರದ ಲೋಪವನ್ನು ಮಾಡಿ, ಅಕಾರವನ್ನು ಮೊದಲು ಬರುವ ಉಕಾರದಲ್ಲಿ ಸೇರಿಸಿದರೆ ಪ್ರಣವ 'ಓಮ್'ಕಾರವು ದೊರೆಯುವುದು. [9–43]

ವಿವೃತ್ತಿ

ಅದರಿಂದ ಏನಾಗುವುದು ಎಂದು ಹೇಳಲು **ಸಕಾರಂ ಚೇತಿ.** ಸೋಹಂ ಮಂತ್ರದಿಂದ ಸಕಾರ, ಹಕಾರಗಳನ್ನು ಲೋಪಮಾಡಿದಾಗ ಉಕಾರ, ಅಕಾರ, ಬಿಂದು ಉಳಿದುಕೊಳ್ಳುತ್ತವೆ. ಅದರಲ್ಲಿ ***ಪೂರ್ವರೂಪಾಖ್ಯಂ ಸಂಧಿಂ ಪ್ರಯೋಜಯೇತ್*** ಅಕಾರವನ್ನು ಉಕಾರದೊಡನೆ ಏಕೀಕರಿಸಿ ಬಿಂದುವನ್ನು ಜೋಡಿಸಿದಾಗ ಓಂಕಾರವು ಯೋಜನೆಯಾಗುವುದು. [9–43]

अकारश्चाप्युकारश्च मकारो बिन्दुनादकौ ।
पञ्चाक्षराण्यमून्याहुः प्रणवस्थानि पण्डिताः ॥ ४४ ॥

ಅಕಾರಶ್ಚಾಪ್ಯುಕಾರಶ್ಚ ಮಕಾರೋ ಬಿಂದುನಾದಕೌ ।
ಪಂಚಾಕ್ಷರಾಣ್ಯಮೂನ್ಯಾಹುಃ ಪ್ರಣವಸ್ಥಾನಿ ಪಂಡಿತಾಃ ॥ 44 ॥

ಅ, ಉ, ಮ, ಬಿಂದು ಮತ್ತು ನಾದಗಳು ಪ್ರಣವದ ಐದು ಅಕ್ಷರಗಳು (ಶಬ್ದಗಳು) ಎಂದು ಪ್ರಣವವನ್ನು ತಿಳಿದ ಪಂಡಿತರು ಹೇಳುತ್ತಾರೆ. [9–44]

ವಿವೃತ್ತಿ

ಈ ಪ್ರಣವವೆಂಬ ಓಂಕಾರದ ಅವಯುವಗಳನ್ನು ವಿಭಜಿಸಿ ಅವುಗಳ ಚಿಂತನೆಯನ್ನು ಮಾಡುವ **ಅಕಾರಶ್ಚಾಪ್ಯುಕಾರಶ್ಚೇತಿ.** ಅಕಾರ, ಉಕಾರಗಳು ಸೇರಿ ಓ, ಅದಾದಬಳಿಕ ಮಕಾರದ ಯೋಜನೆಯು. ಮಕಾರವು ಸ್ವರಹೀನವಾಗಿರುವುದರಿಂದ ಮೇಲೆ ಬಿಂದುವನ್ನು ಯೋಜಿಸುವುದು. ಆಗ ಓಮ್ ಎಂಬ ರೂಪವು ದೊರೆಯುವುದು. ಹೀಗೆ ಉಚ್ಚರಿಸುವಾಗ ಪ್ರಾಣದೊಂದಿಗೆ ಏಕೀಕರಣವಾಗಿಸಿದರೆ, ನಾದವು ಮೂಲಾಧಾರದಿಂದ ಮೇಲೇರಿದ ಪ್ರಾಣದೊಡನೆ ಸಂಚರಿಸಿ, ನಾಡೀಗಳಲ್ಲಿ ಉತ್ತಮವಾಗಿ ಅಭಿವ್ಯಕ್ತವಾಗಿ ಪ್ರಕಟವಾಗುವುದರಿಂದ ಓಂಕಾರಕ್ಕೆ ನಾದಾಂತ್ಯವನ್ನು ಹೇಳಿದೆ. ಹೀಗೆ ***ಪ್ರಣವಸ್ಥಾನಿ*** ಪ್ರಣವ ಶಬ್ದವಾಚ್ಯವಾದ ಪಿಂಡದಲ್ಲಿ ***ಪಂಚಾಕ್ಷರಾಣಿ*** ಅಕಾರ ಉಕಾರ ಮಕಾರ ಬಿಂದು ಎಂಬ ನಾಲ್ಕು ಮತ್ತು ನಾದ ಎಂಬ ಐದು ಅಕ್ಷರಗಳಿವೆ ಎಂದು ***ಪಂಡಿತಾ*** ಅತ್ಮವಿದ್ಯಾಕುಶಲರು ಹೇಳುತ್ತಾರೆ ಎಂಬ ಅರ್ಥ. [9–44]

ಬಿಂದುವು ನಾಸಿಕದಿಂದ ಹೊರಡುವ ಸ್ವರಾಕ್ಷರವಾಗಿದ್ದು, ಅದಿಲ್ಲದೆ ಮ್ ವ್ಯಂಜನವನ್ನು ಉಚ್ಛರಿಸಲಾಗದು. ನಾದವು ಪ್ರಾಣದೊಡನೆ ಐಕ್ಯವಾಗಿ, ಮೂಲಾಧಾರದಿಂದ ಹೊರಟ ಬಿಸಿಯಾದ ಪ್ರಾಣವು ಹರಿಯುವ ನಾಡಿಗಳ ಅವಕಾಶಗಳಲ್ಲಿ ಪ್ರಕಟವಾಗುತ್ತದೆ. ಪ್ರಣವದ ಅಂಗಗಳನ್ನು ತೋರಿಸುವ ನಾದವು, ಪ್ರಣವವನ್ನು ಅಂತ್ಯಗೊಳಿಸುತ್ತದೆ. ಹೀಗೆ ಅ, ಉ, ಮ, ಬಿಂದು ಮತ್ತು ನಾದಗಳು ಪ್ರಣವ ಅಂದರೆ ಮನುಷ್ಯನ ದೇಹರೂಪಿಯಾದ ಪ್ರಣವದಲ್ಲಿರುವ ಅಕ್ಷರಗಳು.

ब्रह्मा विष्णुश्च रुद्रश्चापीश्वरश्च सदाशिवः ।
तेष्वक्षरेषु तिष्ठन्ति षट्त्रिंशत्तत्त्वसंयुता ः ॥ ४५ ॥

ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚಾಪೀಶ್ವರಶ್ಚ ಸದಾಶಿವಃ ।
ತೇಷ್ವಕ್ಷರೇಷು ತಿಷ್ಠಂತಿ ಷಟ್ತ್ರಿಂಶತ್ತತ್ತ್ವಸಂಯುತಾಃ ॥ 45 ॥

ಬ್ರಹ್ಮ, ವಿಷ್ಣು, ರುದ್ರ, ಈಶ್ವರ ಮತ್ತು ಸದಾಶಿವ ಇವರು ಈ ಐದು ಅಕ್ಷರಗಳಲ್ಲಿ ಮೂವತ್ತಾರು ತತ್ತ್ವಗಳೊಂದಿಗೆ ವಾಸಿಸುತ್ತಾರೆ. [9–45]

ವಿವೃತ್ತಿ

ಮುಂದೆ ಆ ಅಕ್ಷರಗಳ ದೇವತೆಗಳನ್ನು ಕ್ರಮವಾಗಿ ತಿಳಿಸಲು **ಬ್ರಹ್ಮಾ ವಿಷ್ಣುಶ್ಚೇತಿ.** ***ಷಟ್ತ್ರಿಂಶತ್ತತ್ತ್ವಸಂಯುತಾ*** ಮೂವತ್ತಾರು ತತ್ತ್ವಗಳೂ ಪ್ರಣವದ ಅಂತರ್ಗತವಾಗಿವೆ, ಅವುಗಳು ಹೊರಗಿಲ್ಲ ಎಂಬುದರಿಂದ ಪ್ರಣವಕ್ಕೆ ಪೂರ್ಣಾತ್ಮತೆಯಿದೆ ಎಂಬುದು ಧ್ವನಿಸುತ್ತದೆ. ಎಲ್ಲಾ ವಾಚಕಗಳೂ ಪ್ರಣವಾಕ್ಷರದಿಂದ ಗ್ರಹಿಸಲ್ಪಡುತ್ತವೆ, ಪ್ರಣವವು ಎಲ್ಲಾ ಶಬ್ದಗಳಿಗೆ ಸಾಮಾನ್ಯರೂಪವಾಗಿ ವ್ಯಾಪಕವಾಗಿರುವುದರಿಂದ. ಹಾಗೆಂದು ಶ್ರುತಿಯು 'ತದ್ಯಥಾ ಶಂಕುನಾ ಸರ್ವಾಣಿ ಪರ್ಣಾನಿ ಸಂತೃಣ್ಣಾನ್ಯೇವಮೋಂಕಾರೇಣ ಸರ್ವಾ ವಾಕ್ಸಂತೃಣ್ಣೋಂಕಾರ ಏವೇದಂ ಸರ್ವಮ್' (ಛಾ.ಉ.2–23–4) ಎಂದು ಹೇಳಿದೆ. 'ಓಮಿತ್ಯೇತದಕ್ಷರಮಿದಂ ಸರ್ವಮ್' (ಮಾಂ.ಉ.1), 'ಸರ್ವಂ ಹ್ಯೇತದ್ಬ್ರಹ್ಮ' (ಮಾಂ.ಉ.1) ಎಂದು ಒಂಕಾರಕ್ಕೂ ಬ್ರಹ್ಮಕ್ಕೂ ಅಭೇದವನ್ನು ಪ್ರತಿಪಾದಿಸುವುದರಿಂದ ಪೂರ್ಣ ಅದ್ವಿತೀಯ ಬ್ರಹ್ಮರೂಪದ ಪ್ರಣವವು ಆವರಿಸಿದೆ ಎಂಬುದು ತಾತ್ಪರ್ಯಾರ್ಥವು. [9–45]

ದೇವರ ಮತ್ತು ಗುರುವಿನ ಕೃಪೆ ಅಗತ್ಯ

गुरुप्रसादाल्लभते योगमष्टाङ्गलक्षणम् ।

शिवप्रसादाल्लभते योगसिद्धिं शाश्वतीम् ॥ ४६ ॥

ಗುರುಪ್ರಸಾದಾಲ್ಲಭತೇ ಯೋಗಮಷ್ಟಾಂಗಲಕ್ಷಣಮ್ ।
ಶಿವಪ್ರಸಾದಾಲ್ಲಭತೇ ಯೋಗಸಿದ್ಧಿಂ ಶಾಶ್ವತೀಮ್ ॥ 46 ॥

ಗುರುವಿನ ಕೃಪೆಯಿಂದ, ಅಷ್ಟಾಂಗಯೋಗವು ಲಭಿಸುವುದು; ಶಿವನ ಕೃಪೆಯಿಂದ ಯೋಗದಲ್ಲಿ ಶಾಶ್ವತವಾಗಿ ಸಿದ್ಧನಾಗುವನು. [9–46]

ವಿವೃತ್ತಿ

ಇದರಿಂದ 'ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ । ತಸ್ಯೈತೇ ಕಥಿತಾ ಹ್ಯಾರ್ಥಾಃ ಪ್ರಕಾಶಂತೇ ಮಹಾತ್ಮನಃ ॥' (ಶ್ವೇ.ಉ.6–23) ಎಂಬ ಶ್ರುತಿಯನ್ನು ಆಶ್ರಯಿಸಿ ಎಲ್ಲಾ ಸಿದ್ಧಿಗಳು ಗುರು ಮತ್ತು ದೇವತೆಯ ಅಧೀನವಾಗಿರುವುದು ಎಂದು ಉಪಾಸಕನ ಕರ್ತವ್ಯವನ್ನು ಸೂಚಿಸುವ **ಗುರುಪ್ರಸಾದಾದಿತಿ.** ***ಯೋಗಸಿದ್ಧಿಃ*** ಆತ್ಮತತ್ತ್ವದ ಆವಿರ್ಭಾವ. [9–46]

ಆತ್ಮದ ನಿಜಸ್ವರೂಪವನ್ನು ಕ್ಷಣದ ಹೊಳೆಯುವಿಕೆಯಿಂದ ಗುರುತಿಸುವಲ್ಲಿ ಸಫಲನಾದರೆ, ಯೋಗದಲ್ಲಿ ಪ್ರಾವೀಣ್ಯತೆ ಉಂಟಾಗಿದೆಯೆಂದು ತಿಳಿಯಬಹುದು.

सच्चिदानन्दरूपाय बिन्दुनादान्तरात्मने ।
आदिमध्यान्तशून्याय गुरूणां गुरवे नमः ॥ ४७ ॥

ಸಚ್ಚಿದಾನಂದರೂಪಾಯ ಬಿಂದುನಾದಾಂತರಾತ್ಮನೇ ।
ಆದಿಮಧ್ಯಾಂತಶೂನ್ಯಾಯ ಗುರೂಣಾಂ ಗುರವೇ ನಮಃ ॥ 47 ॥

ಸತ್ ಚಿತ್ ಆನಂದ ಸ್ವರೂಪನಾದವನೇ, ಬಿಂದು ನಾದಗಳ ಅಂತರಾತ್ಮವಾಗಿರುವವನೇ, ಆದಿ ಮಧ್ಯ ಅಂತ್ಯಗಳಿಲ್ಲದವನೇ, ಗುರುಗಳ ಗುರುವಾದವನೇ, ನಿನಗೆ ನಮಸ್ಕಾರಗಳು. [9–47]

ವಿವೃತ್ತಿ

ವ್ಯಾಖ್ಯಾನ ಅಂತ್ಯಗೊಳಿಸುತ್ತಾ ಮಂಗಳಾಚರಣೆಯನ್ನು ಮಾಡಿ ಪ್ರಣವದ ಅರ್ಥವನ್ನು ಪ್ರಕಟಿಸುವ **ಸಚ್ಚಿದಾನಂದರೂಪಾಯೇತಿ.** ಆತ್ಮಸ್ವರೂಪವನ್ನು ಹೇಳಿದೆ. ***ಬಿಂದುನಾದಾಂತರಾತ್ಮನೇ*** ಅವುಗಳು ಉಪಲಕ್ಷಣವಾಗಿರುವುದರಿಂದ ಆತ್ಮದ ಉಪಲಕ್ಷಣವನ್ನು ಹೇಳಲಾಗಿದೆ. ಹೀಗೆ ವಿವರಿಸಬಹುದು: ***ಸಚ್ಚಿದಾನಂದಃ*** ಅಕಾರ ಉಕಾರ ಮಕಾರ ರೂಪದ ಪ್ರಣವಕ್ಕೆ ಬ್ರಹ್ಮತ್ವದ ರೂಪವು ನಿತ್ಯವಾಗಿರುವುದು. ಬಿಂದು, ನಾದಗಳಾದರೋ ರೂಪ–ನಾಮಗಳಿಂದ ಆವಿರ್ಭಾವ, ತಿರೋಭಾವ ಧರ್ಮವುಳ್ಳದ್ದಾಗಿ, ಉತ್ಪತ್ತಿ, ಸ್ಥಿತಿ, ಲಯಗಳಿಗೆ ಆಧಾರವಾಗಿ ವಸ್ತುವಿನಲ್ಲಿರುವುದು ಎಂಬುದು ಪ್ರಣವ ಬ್ರಹ್ಮದ ಉಪಲಕ್ಷಣವು. ನಾಮ–ರೂಪಾತ್ಮಕ ನಾದ–ಬಿಂದುಗಳು ಯಾವ ವಿಧವಾಗಿ ಅಧಿಷ್ಠಾನವನ್ನು ಆಶ್ರಯಿಸಿವೆ ಎಂಬ ಶಂಕೆಯನ್ನು ದೂರಮಾಡಲು **ಆದಿಮಧ್ಯಾಂತಶೂನ್ಯಾಯೇತಿ.** ಯಾವ ವಿಧವಾದ ಅಧಿಷ್ಠಾನವಿದೆ ಎನ್ನಲು **ಗುರೂಣಾಂ ಗುರವೇ ನಮಃ ಇತಿ.** ದಕ್ಷಿಣಾಮೂರ್ತಯೇ ನಮಃ ಎಂಬ ಅರ್ಥದಲ್ಲಿ. [9–47]

ಪ್ರಣವದ ಅರ್ಥವನ್ನು ಇಲ್ಲಿಯವರೆಗೆ ವಿವರಿಸಲಾಯಿತು. ಸತ್, ಚಿತ್, ಆನಂದಗಳನ್ನು ಪ್ರತಿನಿಧಿಸುವ ಅ, ಉ, ಮ ಪ್ರಣವದ ಅಂಗಗಳಾಗಿವೆ ಮತ್ತು ಬ್ರಹ್ಮನ ನಿಜಸ್ವರೂಪವಾಗಿವೆ. ಬಿಂದು ಮತ್ತು ನಾದಗಳು ನಾಮ ಮತ್ತು ರೂಪಗಳಾಗಿವೆ; ಒಂದು ಪ್ರಕಟ ನಾಮ–ರೂಪ ಮತ್ತು ಇನ್ನೊಂದು ಅಪ್ರಕಟಿತ ನಾಮ–ರೂಪ. ಅವನು ವಿಶ್ವದ ಸೃಷ್ಟಿ, ಸ್ಥಿತಿ, ಲಯಗಳಿಗೆ ಮೂಲಕಾರಣನೆಂದು ಪ್ರಕಟಿತವು ತಿಳಿಸುತ್ತದೆ; ಅಪ್ರಕಟಿತವು ಅವನನ್ನು ಅವನ ಕಾರ್ಯದ ಮೂಲಕ ಗುರುತಿಸುತ್ತವೆ, ಅವನಂತೆಯೇ ಅಲ್ಲ.

इति श्रीदक्षिणामूर्तिस्त्रोत्रार्थप्रतिपादके ।
प्रबन्धे मानसोल्लासे नवमोल्लाससङ्ग्रहः ॥ ४८ ॥

ಇತಿ ಶ್ರೀದಕ್ಷಿಣಾಮೂರ್ತಿಸ್ತ್ರೋತ್ರಾರ್ಥಪ್ರತಿಪಾದಕೇ ।
ಪ್ರಬಂಧೇ ಮಾನಸೋಲ್ಲಾಸೇ ನವಮೋಲ್ಲಾಸಸಂಗ್ರಹಃ ॥ 48 ॥

ಶ್ರೀದಕ್ಷಿಣಾಮೂರ್ತಿ ಸ್ತೋತ್ರದ ಅರ್ಥವನ್ನು ಪ್ರತಿಪಾದಿಸುವ ಮಾನಸೋಲ್ಲಾಸವೆಂಬ ಪ್ರಬಂಧದ ಒಂಭತ್ತನೆಯ ಉಲ್ಲಾಸದ ವಿವರಣೆಯು ಇಲ್ಲಿಗೆ ಮುಗಿಯಿತು. [9–48]

ವಿವೃತ್ತಿ

ಒಂಬತ್ತನೆಯ ಶ್ಲೋಕದ ವ್ಯಾಖ್ಯೆಯನ್ನು ಉಪಸಂಹರಿಸುವ **ಇತೀತಿ.** [9–48]

ಇತಿ ಶ್ರೀಮಾನಸೋಲ್ಲಾಸವೃತ್ತಾಂತೇ ನವಮೋಲ್ಲಾಸಃ ಸಮಾಪ್ತಃ ।

ದಶಮೋಲ್ಲಾಸಃ

ಪ್ರಾವೀಣ್ಯತೆ

ಅಂತಿಮ ಗುರಿ

परिच्छिन्नमहम्भावं परित्यज्यानुषङ्गिकम् ।
पूर्णाहम्भावलाभोस्य स्तोत्रस्य फलमुच्यते ॥ १ ॥

ಪರಿಚ್ಛಿನ್ನಮಹಂಭಾವಂ ಪರಿತ್ಯಜ್ಯಾನುಷಂಗಿಕಮ್ ।
ಪೂರ್ಣಾಹಂಭಾವಲಾಭೋಽಸ್ಯ ಸ್ತೋತ್ರಸ್ಯ ಫಲಮುಚ್ಯತೇ ॥ 1 ॥

ಸೀಮಿತ ಅಹಂಭಾವದ ಸಾಧಾರಣ ಸ್ಥಿತಿಯನ್ನು ತ್ಯಜಿಸಿ ನೈಸರ್ಗಿಕವಾಗಿರುವ ವಿಶ್ವಾತ್ಮ ಸ್ಥಿತಿಯನ್ನು ಗಳಿಸುವುದು ಈ ಸ್ತೋತ್ರದ ಫಲವೆಂದು ಹೇಳಿದ್ದಾರೆ. [10–1]

ವಿವೃತ್ತಿ

ಮುಂದಿನ ಶ್ಲೋಕದ ತಾತ್ಪರ್ಯವನ್ನು ಸಂಕ್ಷಿಪ್ತವಾಗಿ ತಿಳಿಸಲು ಹಿಂದಿನ ವಿಷಯವಾಗಿ **ಪರಿಚ್ಛಿನ್ನಮಿತಿ.** ***ಆನುಷಂಗಿಕಂ*** ದೇಹ ಮೊದಲಾದುವುಗಳಲ್ಲಿರುವ ಅಭಿಮಾನವು ಸ್ವಾಭಾವಿಕವಾಗಿಯೇ ಇರುವುದು ಎಂಬ ಅರ್ಥ. ***ಉಚ್ಯತೇ*** ಮುಂದಿನ ಶ್ಲೋಕದ ಮೂಲಕ ಎಂಬ ಅರ್ಥದಲ್ಲಿ. [10–1]

ಆತ್ಮವು ಒಂದೇ ಮತ್ತು ವೈಶ್ವಿಕ. ಅನೇಕವಾಗಿರುವ ಮತ್ತು ಭಿನ್ನವಾಗಿರುವ ದೇಹಗಳಲ್ಲಿ ಸೇರಿಕೊಂಡು ಅದು ಬಹುವಾಗುತ್ತದೆ ಮತ್ತು ಭಿನ್ನವಾಗುತ್ತದೆ. ಈ ಸತ್ಯವನ್ನು ಧೃಡೀಕರಿಸುವುದು ಈ ಸ್ತೋತ್ರದ ಗುರಿಯಾಗಿದ್ದು, ಆತ್ಮವನ್ನು ಅದರ ಭೇದಯುತವಾದ ಅಸ್ತಿತ್ವ ಮತ್ತು ಜೀವನದಿಂದ ಪುನರುಜ್ಜೀವಿತಗೊಳಿಸುತ್ತದೆ.

ಸ್ತೋತ್ರದ ಹತ್ತನೆಯ ಚರಣ

सर्वात्मत्वमिति स्फुटीकृतमिदं यस्मादमुष्मिन् स्तवे
तेनास्य श्रवणात्तदर्थमननाद्ध्यानाच्च सङ्कीर्तनात् ।
सर्वात्मत्वमहाविभूतिसहितं स्यादीश्वरत्वं स्वतः
सिध्येत्तत्पुनरष्टधा परिणतं चैश्वर्यमव्याहतम् ॥ १० ॥

ಸರ್ವಾತ್ಮತ್ವಮಿತಿ ಸ್ಫುಟೀಕೃತಮಿದಂ ಯಸ್ಮಾದಮುಷ್ಮಿನ್ ಸ್ತವೇ
ತೇನಾಸ್ಯ ಶ್ರವಣಾತ್ತದರ್ಥಮನನಾದ್ಧ್ಯಾನಾಚ್ಚ ಸಂಕೀರ್ತನಾತ್ ।
ಸರ್ವಾತ್ಮತ್ವಮಹಾವಿಭೂತಿಸಹಿತಂ ಸ್ಯಾದೀಶ್ವರತ್ವಂ ಸ್ವತಃ
ಸಿದ್ಧ್ಯೇತ್ತತ್ಪುನರಷ್ಟಧಾ ಪರಿಣತಂ ಚೈಶ್ವರ್ಯಮವ್ಯಾಹತಮ್ ॥ 10 ॥

ಸರ್ವಾತ್ಮಕತೆಯನ್ನು ಈ ಸ್ತವದಲ್ಲಿ (ಸ್ತೋತ್ರ) ವಿಷದೀಕರಿಸಿರುವುದರಿಂದ, ಅದನ್ನು ಕೇಳುವುದು, ಅದರ ಅರ್ಥವನ್ನು ಮನನಮಾಡಿಕೊಂಡು ಧ್ಯಾನ ಮಾಡುವುದು, ಅದನ್ನು ಹಾಡುವುದು, (ಇವುಗಳಲ್ಲಿ) ಪರಿಣತರಾದವರಿಗೆ ಸರ್ವಾತ್ಮಕತೆಯೆಂಬ ವಿಶೇಷಣವನ್ನು ಹೊಂದಿದ ಈಶ್ವರನು ಅಷ್ಟಮೂರ್ತಿಗಳಂತೆ ಅವ್ಯಾಹತವಾಗಿ ಪ್ರತ್ಯಕ್ಷನಾಗುವ ಸೌಭಾಗ್ಯವನ್ನು ಕರುಣಿಸುತ್ತಾನೆ. {10}

ವಿವೃತ್ತಿ

ಯಸ್ಮಾದಮುಷ್ಮಿನ್ ಸ್ತವೇ ದಕ್ಷಿಣಾಮೂರ್ತಿ ಸ್ತೋತ್ರದಲ್ಲಿ ಹೇಳಿರುವ ಪ್ರಕಾರದಿಂದ ಸರ್ವಾತ್ಮಕತೆಯನ್ನು ಪ್ರತ್ಯಕ್ಷವಾಗಿ ಸ್ಫುಟೀಕರಿಸಿದ್ದು, ಅದರಿಂದ ಸ್ತೋತ್ರದ ***ಶ್ರವಣಾತ್*** ಗುರುವು ವಿವರಿಸಿರುವ ಅರ್ಥವನ್ನು ತಿಳಿದುಕೊಂಡು; ***ತಥಾರ್ಥಮನನಾತ್*** ಹೇಗೆ ಕೇಳಿರುವೆವೋ ಹಾಗೆಯೇ ಅರ್ಥವನ್ನು ಯುಕ್ತಿಯಿಂದ ವ್ಯವಸ್ಥಿತವಾಗಿಸಿ; ***ಧ್ಯಾನಾತ್*** ಕೇಳಿರುವ ಅರ್ಥದ ಆಕಾರವೃತ್ತಿಗಳನ್ನು ನಿರಂತರವಾಗಿ ಅಂತಃಸ್ಥವಾಗಿಸಿ; ***ಸಂಕೀರ್ತನಾತ್*** ಸ್ತೋತ್ರದ ಹಾಡುವಿಕೆಯಿಂದ; ಸರ್ವಾತ್ಮತ್ವದ ಲಕ್ಷಣದ ಮಹಾವಿಭೂತಿಯುಳ್ಳ ಈಶ್ವರತ್ವವು, ನಿರುಪಮ ನಿರತಿಶಯ ಈಶ್ವರತ್ವವು ***ಸ್ವತಃ ಸಿದ್ಧ್ಯೇತ್*** ಸ್ವಾಭಾವಿಕವಾಗಿ ಸಿದ್ಧಿಸುವುದು, ಪ್ರಯತ್ನದಿಂದಲ್ಲ ಎಂಬ ಅರ್ಥ. ***ಪುನರಷ್ಟಧಾ ಪರಿಣತಂ ಐಶ್ವರ್ಯಂ*** ಪುನಃ ಅಣಿಮಾ ಮುಂತಾದ ಅಷ್ಟ ಐಶ್ವೈರ್ಯಗಳು ಆನುಷಂಗಿಕವಾಗಿ ಸಿದ್ಧಿಸುವುವು. ***ಅವ್ಯಾಹತಮ್*** ಅಪ್ರತಿಹತವಾಗಿ. ಅಂದರೆ ಈ ಸ್ತೋತ್ರವನ್ನು ಯತ್ನದಿಂದ ಗುರು ತಿಳಿಸಿರುವ ಅರ್ಥಸಹಿತವಾಗಿ ಪಠಿಸುವವರು, ಅದರಲ್ಲಿ ನಿಷ್ಠರಾಗುವರು, ಮುಮುಕ್ಷುಗಳಾಗಿ ಅಭ್ಯುದಯ ಹೊಂದುವರು ಎಂಬ ಅರ್ಥವು. {10}

ಹತ್ತನೆಯ ಚರಣದ ಅರ್ಥವನ್ನು ಹೀಗೆ ವಿವರಿಸಬಹುದು:

> इदमत्राकूतम् –
> पुत्रपौत्रगृहक्षेत्रधनधान्यसमृद्धयः ।
> अर्वाचीनाश्च सिद्ध्यन्ति स्वर्गपाताळभूमिशु ॥ २ ॥
>
> ಇದಮತ್ರಾಕೂತಮ್ –
> ಪುತ್ರಪೌತ್ರಗೃಹಕ್ಷೇತ್ರಧನಧಾನ್ಯಸಮೃದ್ಧಯಃ ।
> ಅರ್ವಾಚೀನಾಶ್ಚ ಸಿದ್ಧ್ಯಂತಿ ಸ್ವರ್ಗಪಾತಾಳಭೂಮಿಶು ॥ 2 ॥

ಪುತ್ರ, ಪೌತ್ರ, ಮನೆ, ಭೂಮಿ, ಧನ, ಧಾನ್ಯ ಮುಂತಾದ ಸಾಧಾರಣ ವಿಷಯಗಳ ಸಮೃದ್ಧಿಯು ಸ್ವರ್ಗ, ಪಾತಾಳ, ಭೂಮಿಯಲ್ಲಿಯೂ ಒದಗಿಬರುವುದು. [10–2]

ವಿವೃತ್ತಿ

ಇದರ ವ್ಯಾಖ್ಯೆಯನ್ನು ಪ್ರಾರಂಭಿಸುವ **ಇದಮತ್ರಾಕೂತಮಿತಿ.** ಒಂದುವೇಳೆ ಈ ಸ್ತೋತ್ರವು ಬಯಸಿರುವ ಎಲ್ಲಾ ಅರ್ಥಗಳು ಪಾಠಕನಿಗೆ ಲಭಿಸಿದರೆ ಅದನ್ನು ಕ್ಷುದ್ರಲಾಭಕ್ಕಾಗಿ ಅಲ್ಲದೆ ಬುದ್ಧಿಯಿಂದ ಪ್ರಯೋಗಿಸಬೇಕು. ಆದರೆ ಅದರ ಅತ್ಯಂತ ಶ್ರೇಷ್ಠವಾದ ಫಲವು ಪರಮೇಶ್ವರಪದವೇ ಆಗಿರುವುದು. ಮುಂದೆ ದೊರಕುವ ಅನೇಕ ಫಲಗಳನ್ನು ವಿವರಣೆಯ ವಸ್ತುವಾಗಿಸಿ ಅವೆಲ್ಲವೂ ಲಭಿಸಬಹುದು ಎಂಬ ತಾತ್ಪರ್ಯವುಳ್ಳ ಅಭಿಪ್ರಾಯಕ್ಕೆ **ಪುತ್ರಪೌತ್ರೇತ್ಯಾದಿನಾ.** ಸ್ವರ್ಗ, ಪಾತಾಳ, ಭೂಮಿಗಳಲ್ಲಿ ಯಥಾಕಾಲದಲ್ಲಿ ಫಲಭೇದದಿಂದ ಒದಗಬಹುದು ಎಂಬ ಅರ್ಥದಲ್ಲಿ. [10–2]

ಭಕ್ತನು ಹೀಗೆ ಬಯಸಿದ ವಿಷಯ-ವಸ್ತುಗಳನ್ನು, ಈ ಸ್ತೋತ್ರದ ಶ್ರವಣ ಮನನದಿಂದ ಪಡೆಯಬಹುದು ಆದರೆ ಇಂತಹ ಸಾಧಾರಣ ವಸ್ತುಗಳ ಸಂಗ್ರಹಕ್ಕೆ ಮನಸು ಮಾಡಬಾರದು. ಅವನು ಯಾವಾಗಲೂ ಉನ್ನತವಾದ ಗುರಿಯನ್ನು ಹೊಂದಿ, ಪರಮೇಶ್ವರ ಸಮಾನನಾಗುವ ಇಲ್ಲಾ ಪರಮೇಶ್ವರನೇ ಆಗುವ ಇಚ್ಛೆಯನ್ನು ಹೊಂದಬೇಕು; ಅದನ್ನು ಹೊಂದಿದರೆ ಬೇರೆಲ್ಲವನ್ನೂ ಪಡೆದಂತೆ.

पाके प्रवर्तमानस्य शीतादिपरिहारवत् ।
प्रासङ्गिकाश्च सिद्ध्यन्ति स्तोत्रेणानेन सर्वदा ॥ ३ ॥

ಪಾಕೇ ಪ್ರವರ್ತಮಾನಸ್ಯ ಶೀತಾದಿಪರಿಹಾರವತ್ ।
ಪ್ರಾಸಂಗಿಕಾಶ್ಚ ಸಿದ್ಧ್ಯಂತಿ ಸ್ತೋತ್ರೇಣಾನೇನ ಸರ್ವದಾ ॥ 3 ॥

ಅಡುಗೆ ಮಾಡಲು ಆರಂಭಿಸಿದಾಗ ಛಳಿಯು ದೂರಸರಿಯುವಂತೆ, ಈ ಸ್ತೋತ್ರದಿಂದ ಯಾವಾಗಲೂ ಪ್ರಾಸಂಗಿಕವಾಗಿ ಲಾಭಗಳು ಸಿದ್ಧಿಸುವುವು. [10–3]

ವಿವೃತ್ತಿ

ಅದರಿಂದ ಅಸಂಕಲ್ಪಿತವಾದ ಫಲಗಳು ಆನುಷಂಗಿಕವಾಗಿ ಸಿದ್ಧಿಯಾಗುವುವು ಎಂಬ ದೃಷ್ಟಾಂತವನ್ನು ಉಪಪಾದಿಸುವ **ಪಾಕೇ ಪ್ರವರ್ತಮಾನಸ್ಯೇತಿ.** [10–3]

ऐश्वर्यमीश्वरत्वं हि तस्य नास्ति पृथक्स्थितिः ।
पुरुषे धावमानेपि छाया तमनुधावती ॥ ४ ॥

ಐಶ್ವರ್ಯಮೀಶ್ವರತ್ವಂ ಹಿ ತಸ್ಯ ನಾಸ್ತಿ ಪೃಥಕ್ಸ್ಥಿತಿಃ ।
ಪುರುಷೇ ಧಾವಮಾನೇಪಿ ಛಾಯಾ ತಮನುಧಾವತೀ ॥ 4 ॥

ಈಶತ್ವವೇ (ಒಡೆತನ) ಈಶ್ವರನ ಮೂಲ ಸ್ವಭಾವವಾಗಿದೆ, ಅದು ಬಿಟ್ಟು ಬೇರೆ ಏನೂ ಇಲ್ಲ; ಓಡುತ್ತಿರುವವನೊಡನೆ ಅವನ ನೆರಳೂ ಓಡುವಂತೆ. [10–4]

ವಿವೃತ್ತಿ

ಹೀಗೆ ಈಶ್ವರತ್ವವೇ ಅದರ ತಾತ್ಪರ್ಯವೆಂದು ತಿಳಿಸಿ, ಈಶ್ವರತ್ವವನ್ನು ವಿವರಿಸುವ **ಐಶ್ವರ್ಯಮೀಶ್ವರತ್ವಂ ಹೀತಿ.** ಈಶ್ವರಸ್ವರೂಪವೆಂಬ ಐಶ್ವಯಕ್ಕೆ ಈಶ್ವರನಿಂದ ***ಪೃಥಕ್ಸ್ಥಿತಿಃ*** ಪ್ರತ್ಯೇಕವಾದ ಸ್ಥಿತಿ ಇರುವುದಿಲ್ಲ ಎಂಬ ಅರ್ಥ. ಅದಕ್ಕೆ ದೃಷ್ಟಾಂತವಾಗಿ **ಪುರುಷೇ ಧಾವಮಾನ ಇತಿ.** [10–4]

अनन्तशक्तिरैश्वर्यं निष्यन्दाश्चाणिमादयः ।
स्वस्येश्वरत्वे संसिद्धे सिद्ध्यन्ति स्वयमेव हि ॥ ५ ॥

ಅನಂತಶಕ್ತಿರೈಶ್ವರ್ಯಂ ನಿಷ್ಯಂದಾಶ್ಚಾಣಿಮಾದಯಃ ।
ಸ್ವಸ್ಯೇಶ್ವರತ್ವೇ ಸಂಸಿದ್ಧೇ ಸಿದ್ಧ್ಯಂತಿ ಸ್ವಯಮೇವ ಹಿ ॥ 5 ॥

ಅನಂತಶಕ್ತಿಯು ಈಶ್ವರನಿಗೆ ಪ್ರಾಕೃತಿಕವಾಗಿದೆ ಹಾಗೂ ಅಣಿಮಾ ಇತ್ಯಾದಿಗಳು ಅದರಿಂದ ಉದುರಿದ ಕೆಲವು ಬಿಂದುಗಳಾಗಿವೆ. ಸ್ವತಃ ಈಶ್ವರತ್ವವನ್ನು ಗಳಿಸಿದಾಗ, ಅವುಗಳು ಸ್ವಾಭಾವಿಕವಾಗಿ ಅವನ ಬಳಿ ಬರುವುವು. [10–5]

ವಿವೃತ್ತಿ

ಈಶ್ವರನಲ್ಲಿ ಛಾಯೆಯಂತೆ ಅವಿಭಾಜ್ಯವಾಗಿರುವ ಐಶ್ವರ್ಯಗಳು ಹೇಗಿವೆ ಎಂದು ತಿಳಿಯಲು **ಅನಂತಶಕ್ತಿರಿತಿ.** ಅವನ ಐಶ್ವರ್ಯಗಳು ಮಾತಿಗೆ ಅಗೋಚರವಾದ ಸಹಜ ಸಾಮರ್ಥ್ಯವಾಗಿದೆ. ಇನ್ನು ಅಣಿಮಾ ಮುಂತಾದ ಸಿದ್ಧಿಗಳು ಐಶ್ವರ್ಯಗಳೆಂದು ಪ್ರಸಿದ್ಧಿಯನ್ನು ಹೊಂದಿವೆ, ಅನಂತಶಕ್ತಿಯ ಐಶ್ವರ್ಯ ಎಂದರೇನು? ಎಂದು ತಿಳಿಯಲು **ನಿಷ್ಯಂದಾಶ್ಚೇತಿ.** ಅಣಿಮಾ ಮೊದಲಾದ ಸಿದ್ಧಿಗಳು ಈಶ್ವರನ ಶಕ್ತಿಯಿಂದ ಉದುರಿರುವ ಕೆಲವು ಬಿಂದುಗಳು ಮಾತ್ರವಾಗಿವೆ. ಅವುಗಳು ಹೊರಗೆ ಕಾಣಿಸಿಕೊಂಡಿರುವುದರಿಂದ ಇತರ ಸಿದ್ಧಿಗಳು ಪ್ರಕಟವಾಗಿಲ್ಲ ಎಂಬ ಭಾವ. ಹಾಗೆಂದು ಶ್ರುತಿಯು 'ಏತಸ್ಯೈವಾನಂದಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವಂತಿ' (ಬೃ.ಉ. 6–3–32) ಎಂದು ಹೇಳಿದೆ. ಹಾಗಾಗಿ ಈಶ್ವರತ್ವದ ಸಿದ್ಧಿಯೇ ಸ್ತೋತ್ರದ ಪ್ರಯೋಜನವು, ಅಣಿಮಾ ಮುಂತಾದ ಸಿದ್ಧಿಗಳಲ್ಲ; ಅವುಗಳ ಆನುಷಂಗಿಕತ್ವವನ್ನು ತಿಳಿಸಲು **ಸ್ವಸ್ಯೇತಿ.** [10–5]

यदीयैश्वर्यविप्रुड्भिर्ब्रह्मविष्णुशिवादयः ।
ऐश्वर्यवन्तो भासन्ते स एवात्मा सदाशिवः ॥ ६ ॥

ಯದೀಯೈಶ್ವರ್ಯವಿಪ್ರುಡ್ಭಿರ್ಬ್ರಹ್ಮವಿಷ್ಣುಶಿವಾದಯಃ ।
ಐಶ್ವರ್ಯವಂತೋ ಭಾಸಂತೇ ಸ ಏವಾತ್ಮಾ ಸದಾಶಿವಃ ॥ 6 ॥

ಆತ್ಮವು ಸದಾಶಿವನಲ್ಲದೆ ಬೇರೇನೂ ಅಲ್ಲ ಮತ್ತು ಅವನ ಶಕ್ತಿಯ ಹನಿಗಳಾದ ಬ್ರಹ್ಮ, ವಿಷ್ಣು, ಶಿವ ಮುಂತಾದವರು ಶಕ್ತಿವಂತರಾಗಿ ಭಾಸವಾಗುತ್ತಾರೆ. [10–6]

ವಿವೃತ್ತಿ

ಅಂತೆಯೇ ಬ್ರಹ್ಮ ಮೊದಲಾದವರ ಐಶ್ವರ್ಯವನ್ನೂ ಪ್ರತ್ಯೇಕವಾಗಿ ಹೇಳಲಾಗುವುದೇ ಎಂಬ ಆಶಂಕೆಗೆ ಅವರು ಕೂಡ ಅಲ್ಪರು ಎನ್ನಲು **ಯದೀಯೇತಿ.** ***ವಿಪ್ರುಡ್ಭಿಃ*** ಬಿಂದುಗಳು, ಲೇಶ, ಅಲ್ಪ. ಗೋಚರವಾಗುವ ಅಲ್ಪ ಐಶ್ವರ್ಯಗಳು ಬ್ರಹ್ಮ ಮೊದಲಾದ ಭೇದವಾಗಿವೆ, ಅವರೆಲ್ಲರೂ ಸದಾಶಿವನೆಂಬ ವಿಭೂತಿಯಲ್ಲಿರುವರು ಎಂದು ಶಂಕೆಯ ನಿವಾರಣೆಗಾಗಿ **ಸ ಏವಾತ್ಮಾ ಸದಾಶಿವ ಇತಿ.** ಆತ್ಮವೇ ಸದಾಶಿವನು ಎಂಬ ಅರ್ಥದಲ್ಲಿ. [10–6]

पुष्पमानयता गन्धो विनेच्छामनुभूयते ।
पूर्णाहम्भावयुक्तेन परिच्छिन्ना विभूतयः ॥ ७ ॥

ಪುಷ್ಪಮಾನಯತಾ ಗಂಧೋ ವಿನೇಚ್ಛಾಮನುಭೂಯತೇ ।
ಪೂರ್ಣಾಹಂಭಾವಯುಕ್ತೇನ ಪರಿಚ್ಛಿನ್ನಾ ವಿಭೂತಯಃ ॥ 7 ॥

ಪುಷ್ಪವನ್ನು ಒಯ್ಯುವಾಗ ಅದರ ಗಂಧವೂ ಜೊತೆಗೆ ಬರುವಂತೆ, ಸೀಮಿತ ಶಕ್ತಿಯುಳ್ಳವರು (ಬ್ರಹ್ಮ, ವಿಷ್ಣು ಇತ್ಯಾದಿಗಳು) ವಿಶ್ವಾತ್ಮ ಸ್ಥಿತಿಯನ್ನು ಪಡೆದವರ ಜೊತೆಗೆ ಬರುತ್ತಾರೆ. [10–7]

ವಿವೃತ್ತಿ

ಹಾಗೆಯೇ ಬ್ರಹ್ಮ ಮೊದಲಾದ ಐಶ್ವರ್ಯಗಳು ಕೂಡ ಆತ್ಮದ ಸ್ವಾಭಾವಿಕ ಮಹಿಮೆಗಳು ಎಂದು ವಿದ್ವಾಂಸರು ತಿಳಿಯುತ್ತಾರೆ ಎಂದು ದೃಷ್ಟಾಂತವಾಗಿ **ಪುಷ್ಪಮಾನಯತೇತಿ.** ಆದುದರಿಂದ ಪೂರ್ಣಾತ್ಮನ ಸದಾಶಿವರೂಪವೇ ಸಂಭವಿಸುವ ಕಾರ್ಯವಾಗಿರುವುದು, ಬ್ರಹ್ಮ ಮುಂತಾಗಿ ಅಲ್ಲ ಎಂಬುದೇ ಸ್ತೋತ್ರಫಲವಾಗಿರುವುದು ಎನ್ನುವುದು ಸ್ತುತಿಯ ತಾತ್ಪರ್ಯವು. [10–7]

ಅಷ್ಟಸಿದ್ಧಿಗಳು

अणिमा महिमा चैव गरिमा लघिमा तथा ।
प्राप्तिः प्राकाम्यमीशित्वं वशित्वं चाष्टसिद्धयः

ಅಣಿಮಾ ಮಹಿಮಾ ಚೈವ ಗರಿಮಾ ಲಘಿಮಾ ತಥಾ ।
ಪ್ರಾಪ್ತಿಃ ಪ್ರಾಕಾಮ್ಯಮೀಶಿತ್ವಂ ವಶಿತ್ವಂ ಚಾಷ್ಟಸಿದ್ಧಯಃ ॥ 8 ॥

ಶರೀರಕ್ಕೆ ಸಂಬಂಧಿಸಿ ಅಣಿಮಾ (ಗಾತ್ರ ಸಣ್ಣದು ಮಾಡುವುದು), ಮಹಿಮಾ (ಗಾತ್ರ ದೊಡ್ಡದು ಮಾಡುವುದು), ಗರಿಮಾ (ಭಾರವಾಗಿಸುವುದು), ಲಘಿಮಾ (ಹಗುರವಾಗಿಸುವುದು), ಮತ್ತು ಪ್ರಾಪ್ತಿ (ದೂರ ದರ್ಶನ), ಪ್ರಾಕಾಮ್ಯ (ಬಯಸಿದ್ದನ್ನು ಪಡೆಯುವುದು), ಈಶಿತ್ವ (ಒಡೆತನದ ಶಕ್ತಿ), ವಶಿತ್ವ (ವಶಪಡಿಸಿಕೊಳ್ಳುವ ಶಕ್ತಿ) ಇವುಗಳು ಅಷ್ಟಸಿದ್ಧಿಗಳು. [10–8]

ವಿವೃತ್ತಿ

ಇದರಲ್ಲಿ ಅಣಿಮಾ ಮೊದಲಾದ ಎಂಟು ಐಶ್ವರ್ಯಗಳ ವಿಭಜನೆಯನ್ನು ತಿಳಿಸಿ, ಶ್ಲೋಕದ 'ಅಷ್ಟಧಾ ಪರಿಣತಂ ಚೈಶ್ವರ್ಯಮವ್ಯಾಹತಮ್' ಎಂಬ ವಾಕ್ಯವನ್ನು ವಿವರಿಸುವ **ಅಣಿಮಾ ಮಹಿಮಾ ಚೇತಿ.** [10–8]

अत्यन्तमणुषु प्राणिष्वात्मत्वेन प्रवेशनम् ।
अणिमासंज्ञमैश्वर्यं व्याप्तस्य परमात्मनः ॥ ९ ॥

ಅತ್ಯಂತಮಣುಷು ಪ್ರಾಣಿಷ್ವಾತ್ಮತ್ವೇನ ಪ್ರವೇಶನಮ್ ।
ಅಣಿಮಾಸಂಜ್ಞಮೈಶ್ವರ್ಯಂ ವ್ಯಾಪ್ತಸ್ಯ ಪರಮಾತ್ಮನಃ ॥ 9 ॥

ಸರ್ವವ್ಯಾಪಿ ಪರಮೇಶ್ವರನು ಅತೀಸಣ್ಣಗಾತ್ರದ ಪ್ರಾಣಿಗಳ ಆತ್ಮವಾಗಿ ಪ್ರವೇಶಿಸುವುದನ್ನು ಅಣಿಮಾ ಎನ್ನುತ್ತಾರೆ. [10–9]

ವಿವೃತ್ತಿ

ಅವುಗಳಲ್ಲಿ ಅಣಿಮಾ ಸಿದ್ಧಿಯನ್ನು ವಿವರಿಸುವ **ಅತ್ಯಂತಮಿತಿ.** ಇರುವೆ, ನೊಣದಂತಹ ಅತಿ ಸಣ್ಣ ಪ್ರಾಣಿಗಳಲ್ಲಿ ಎಂಬ ಅರ್ಥ. [10–9]

ब्रह्माण्डादिशिवान्तायाषट्त्रिंशत्तत्त्वसंहतेः ।
बहिश्च व्याप्यवृत्तित्वमैश्वर्यं महिमाह्वयम् ॥ १० ॥

ಬ್ರಹ್ಮಾಂಡಾದಿಶಿವಾಂತಾಯಾಷ್ಷಟ್ತ್ರಿಂಶತ್ತತ್ತ್ವಸಂಹತೇಃ ।
ಬಹಿಶ್ಚ ವ್ಯಾಪ್ಯವೃತ್ತಿತ್ವಮೈಶ್ವರ್ಯಂ ಮಹಿಮಾಹ್ವಯಮ್ ॥ 10 ॥

ಹೊರಗೆ ವ್ಯಾಪಿಸಿರುವ ಮೂವತ್ತಾರು ತತ್ತ್ವಗಳು ಬ್ರಹ್ಮಾಂಡದಿಂದ ಹಿಡಿದು ಶಿವನವರೆಗೂ ಸಂವಹನಗೊಳ್ಳುವುದನ್ನು ಮಹಿಮಾ ಎನ್ನುತ್ತಾರೆ. [10–10]

ವಿವೃತ್ತಿ

ಮಹಿಮಾ ಎಂಬುದನ್ನು ತಿಳಿಸಲು **ಬ್ರಹ್ಮಾಂಡಾದೀತಿ.** ***ಶಿವೋ*** ಅಭಿವ್ಯಕ್ತವಾಗಿ ವಿರಾಜಿಸುತ್ತಿರುವ ಪುರುಷ. [10–10]

महामेरुसमाङ्गस्य समुद्धरणकर्मणि ।
लाघवे तूलतुल्यत्वं लघिमानं विदुर्बुधाः ॥ ११ ॥

ಮಹಾಮೇರುಸಮಾಂಗಸ್ಯ ಸಮುದ್ಧರಣಕರ್ಮಣಿ ।
ಲಾಘವೇ ತೂಲತುಲ್ಯತ್ವಂ ಲಘಿಮಾನಂ ವಿದುರ್ಬುಧಾಃ ॥ 11 ॥

ಮಹಾಮೇರುವಿನಂತೆ (ಪರ್ವತದಂತಹ) ದೇಹವನ್ನು ಹೊಂದಿದ್ದರೂ, ಎತ್ತುವಾಗ ಹತ್ತಿಯಂತೆ ಹಗುರವಾಗಿರುವುದು ಲಘಿಮಾ ಎಂದು ತಿಳಿದವರು ಹೇಳುತ್ತಾರೆ. [10–11]

ವಿವೃತ್ತಿ

ಲಘಿಮಾ ಸಿದ್ಧಿಯನ್ನು ವಿವರಿಸಲು **ಮಹಾಮೇರುಸಮಾಂಗಸ್ಯೇತಿ.** ಯೋಗಿಗಳ ವಿಶೇಷಣವಾಗಿದೆ. ಸ್ಥೂಲಕಾಯವಿರುವುದಾದರೂ, ಎತ್ತುವಾಗ ಹತ್ತಿಯ ಸಮಾನವಾಗಿ ಹಗುರವಾಗಿರುವುದು. [10–11]

परमाणुसमाङ्गस्य समुद्धरणकर्मणि ।
गौरवे मेरुतुल्यत्वं गरिमाणं विदुर्बुधाः ॥ १२ ॥

ಪರಮಾಣುಸಮಾಂಗಸ್ಯ ಸಮುದ್ಧರಣಕರ್ಮಣಿ ।
ಗೌರವೇ ಮೇರುತುಲ್ಯತ್ವಂ ಗರಿಮಾಣಂ ವಿದುರ್ಬುಧಾಃ ॥ 12 ॥

ಪರಮಾಣುವಿನಂತಹ (ಅತೀಸಣ್ಣದಾದ) ದೇಹವನ್ನು ಹೊಂದಿದ್ದರೂ, ಎತ್ತುವಾಗ ಮೇರುವಿನಂತೆ ಭಾರವಾಗಿರುವುದು ಗರಿಮಾ ಎಂದು ತಿಳಿದವರು ಹೇಳುತ್ತಾರೆ. [10–12]

ವಿವೃತ್ತಿ

ಗರಿಮಾ ಸಿದ್ಧಿಯನ್ನು ತಿಳಿಸಲು **ಪರಮಾಣುಸಮಾಂಗಸ್ಯೇತಿ.** ಇಲ್ಲಿ ಹಿಂದಿನ ಲಘಿಮಾಕ್ಕೆ ವಿಪರೀತವಾಗಿ ಯೋಜಿಸುವುದು. [10–12]

पाताळवासिनः पुंसो ब्रह्मलोकावलोकनम् ।
प्राप्तिर्नाम महैश्वर्यं सुदुष्प्रापमयोगिनाम् ॥ १३ ॥

ಪಾತಾಳವಾಸಿನಃ ಪುಂಸೋ ಬ್ರಹ್ಮಲೋಕಾವಲೋಕನಮ್ ।
ಪ್ರಾಪ್ತಿರ್ನಾಮ ಮಹೈಶ್ವರ್ಯಂ ಸುದುಷ್ಪ್ರಾಪಮಯೋಗಿನಾಮ್ ॥ 13 ॥

ಪಾತಾಳದಲ್ಲಿ ವಾಸಿಸುವವನು ಬ್ರಹ್ಮಲೋಕವನ್ನು ದೃಷ್ಟಿಸುವ ಶಕ್ತಿಯನ್ನು ಪ್ರಾಪ್ತಿಯೆನ್ನುತ್ತಾರೆ ಹಾಗೂ ಯೋಗಿಗಳಲ್ಲದವರಿಗೆ ಕಷ್ಟಸಾಧ್ಯವಾಗಿರುವುದು. [10–13]

ವಿವೃತ್ತಿ

ಪ್ರಾಪ್ತಿ ಎಂಬ ಐಶ್ವರ್ಯವನ್ನು ವಿವರಿಸುತ್ತಾ **ಪಾತಾಳವಾಸಿನಃ ಇತಿ.** [10–13]

आकाशगमनादीनामन्यासां सिद्धिसम्पदाम् ।
स्वेच्छामात्रेण संसिद्धिः प्राकाम्यमभिधीयते ॥ १४ ॥

ಆಕಾಶಗಮನಾದೀನಾಮನ್ಯಾಸಾಂ ಸಿದ್ಧಿಸಂಪದಾಮ್ ।
ಸ್ವೇಚ್ಛಾಮಾತ್ರೇಣ ಸಂಸಿದ್ಧಿಃ ಪ್ರಾಕಾಮ್ಯಮಭಿಧೀಯತೇ ॥ 14 ॥

ಇಚ್ಛಾಮಾತ್ರದಿಂದ ಆಕಾಶಗಮನ ಇತ್ಯಾದಿ ಶಕ್ತಿಗಳನ್ನು ಹೊಂದುವುದನ್ನು ಪ್ರಾಕಾಮ್ಯವೆನ್ನುತ್ತಾರೆ. [10–14]

ವಿವೃತ್ತಿ

ಪ್ರಾಕಾಮ್ಯ ಹೆಸರಿನ ಸಿದ್ಧಿಯನ್ನು ಹೇಳಲು **ಆಕಾಶಗಮನಾದೀನಾಮಿತಿ.** [10–14]

स्वशरीरप्रकाशेन सर्वार्थानां प्रकाशनम् ।
प्राकाश्यमिदमैश्वर्यमिति केचित्प्रचक्षते ॥ १५ ॥

ಸ್ವಶರೀರಪ್ರಕಾಶೇನ ಸರ್ವಾರ್ಥಾನಾಂ ಪ್ರಕಾಶನಮ್ ।
ಪ್ರಾಕಾಶ್ಯಮಿದಮೈಶ್ವರ್ಯಮಿತಿ ಕೇಚಿತ್ಪ್ರಚಕ್ಷತೇ ॥ 15 ॥

ಯೋಗಿಯ ದೇಹದ ಬೆಳಕಿನಲ್ಲಿ ಸುತ್ತಲಿನ ವಸ್ತುಗಳೆಲ್ಲವೂ ಹೊಳೆಯುವುದನ್ನು 'ಪ್ರಾಕಾಶ್ಯ' ಎಂಬ ಸಿದ್ಧಿಯಾಗಿ ಕೆಲವು ತಿಳಿಯುತ್ತಾರೆ. [10–15]

ವಿವೃತ್ತಿ

ಪ್ರಾಕಾಶ್ಯ ಹೆಸರಿನ ಐಶ್ವರ್ಯ ವಿವರಿಸುವ **ಸ್ವಶರೀರಪ್ರಕಾಶೇನೇತಿ.** [10–15]

स्वेच्छामात्रेण लोकनां सृष्टिस्थित्यन्तकर्तृता ।
सूर्यादीनां नियोत्कृत्वमीशित्वमभिधीयते । १६ ॥

ಸ್ವೇಚ್ಛಾಮಾತ್ರೇಣ ಲೋಕಾನಾಂ ಸೃಷ್ಟಿಸ್ಥಿತ್ಯಂತಕರ್ತೃತಾ ।
ಸೂರ್ಯಾದೀನಾಂ ನಿಯೋತ್ಕೃತ್ವಮೀಶಿತ್ವಮಭಿದೀಯತೇ ॥ 16 ॥

ಇಚ್ಛಾಮಾತ್ರದಿಂದ ಲೋಕವನ್ನು ಸೃಷ್ಟಿಸುವ, ಪಾಲಿಸುವ ಮತ್ತು ನಾಶಮಾಡುವ ಹಾಗೂ ಸೂರ್ಯ ಇತ್ಯಾದಿಗಳ ನಿಯಂತ್ರಣವನ್ನು ಮಾಡುವ ಶಕ್ತಿಯನ್ನು ಈಶಿತ್ವವೆನ್ನುತ್ತಾರೆ. [10–16]

ವಿವೃತ್ತಿ

ಈಶಿತ್ವ ಸಿದ್ಧಿಯನ್ನು ವಿವರಿಸುತ್ತಾ **ಸ್ವೇಚ್ಛಾಮಾತ್ರೇಣೇತಿ.** 'ಜಗದ್ವ್ಯಾಪಾರವರ್ಜಮ್' (ಬ್ರ.ಸೂ.4–4–17) ಎಂಬ ನ್ಯಾಯದಂತೆ ವಿದ್ವಾಂಸರು ಲೋಕವಿಷಯದಲ್ಲಿ ಸ್ವಾತಂತ್ರ್ಯವನ್ನು ಗಳಿಸಿದರೆ, ವಿಶ್ವಾಮಿತ್ರ ಮುಂತಾದವರಂತೆ ಬ್ರಹ್ಮಾಂಡದಲ್ಲಿದ್ದುಕೊಂಡೇ ಬಾವಿ, ಕೆರೆ, ಸರೋವರ, ನಗರ, ಉದ್ಯಾನ ಸ್ಥಳಗಳ ಸೃಷ್ಟಿಗೆ ಶಕ್ತರಾಗುವರು ಎಂಬ ಅಭಿಪ್ರಾಯದಲ್ಲಿ ಇದನ್ನು ಹೇಳಲಾಗಿದೆ. [10–16]

सलोकपालास्सर्वेपि लोकास्स्ववशवर्तिनः ।
तदैश्वर्यं वशित्वाख्यं सुलभं शिवयोगिनम् ॥ १७ ॥

ಸಲೋಕಪಾಲಾಸ್ಸರ್ವೇऽಪಿ ಲೋಕಾಸ್ಸ್ವವಶವರ್ತಿನಃ ।
ತದೈಶ್ವರ್ಯಂ ವಶಿತ್ವಾಖ್ಯಂ ಸುಲಭಂ ಶಿವಯೋಗಿನಾಮ್ ॥ 17 ॥

ಎಲ್ಲಾ ಲೋಕಗಳನ್ನು, ಅದರ ಒಡೆಯರ ಸಹಿತವಾಗಿ, ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು ವಶಿತ್ವವಾಗಿದೆ ಮತ್ತು ಶಿವ ಯೋಗಿಗಳಿಗೆ ಇದು ಬಹಳ ಸುಲಭವಾಗಿದೆ. [10–17]

ವಿವೃತ್ತಿ

ವಶಿತ್ವವನ್ನು ವಿವರಿಸುವ **ಸಲೋಕಪಾಲಾ ಇತಿ.** [10–17]

ದೇವಧ್ಯಾನದ ವೈಭವ

यस्त्वेवं ब्राह्मणो वेति तस्य देवा वशे स्थिताः ।
किं पुनः क्ष्मापतिव्याघ्रव्याळस्त्रीपुरुषादयः ॥ १८ ॥

ಯಸ್ತ್ವೇವಂ ಬ್ರಾಹ್ಮಣೋ ವೇತಿ ತಸ್ಯ ದೇವಾ ವಶೇ ಸ್ಥಿತಾಃ ।
ಕಿಂ ಪುನಃ ಕ್ಷ್ಮಾಪತಿವ್ಯಾಘ್ರವ್ಯಾಳಸ್ತ್ರೀಪುರುಷಾದಯಃ ॥ 18 ॥

ದೇವತೆಗಳು ಬ್ರಾಹ್ಮಣನ ವಶದಲ್ಲಿರುವಾಗ, ರಾಜಕುಮಾರರು, ಹುಲಿಗಳು, ಹಾವುಗಳು, ಸ್ತ್ರೀಯರು ಮತ್ತು ಪುರುಷರು ಮುಂತಾದವರು ಅವನ ವಶದಲ್ಲಿದ್ದಾರೆಂದು ಪುನಃ ಹೇಳುವ ಅಗತ್ಯವೇನಿದೆ? [10–18]

ವಿವೃತ್ತಿ

ಶಿವಯೋಗಿಗಳಿಗೆ ತಿಳಿಸಿರುವ ಐಶ್ವರ್ಯಗಳು ಸುಲಭವಶವಾಗುತ್ತವೆ ಎಂದು ಪ್ರಮಾಣವಾಗಿ ಶ್ರುತಿಯನ್ನು ಉದಾಹರಿಸುವ **ಯಸ್ತ್ವೇವಮಿತಿ.** 'ಯಸ್ತ್ವೇವಂ ಬ್ರಾಹ್ಮಣೋ ವಿದ್ಯಾತ್ | ತಸ್ಯ ದೇವಾ ಅಸನ್ವಶೇ' (ತೈ.ಆ.3–13) ಎಂಬ ಮಂತ್ರಸ್ವರೂಪದಿಂದ ನಿರ್ದೇಶಿಸಲ್ಪಟ್ಟಿದೆ. ಯೋಗಿಗಳಿಗೆ ***ಕ್ಷ್ಮಾಪತಿ*** ರಾಜ ಮುಂತಾದವರ ವಶೀಕರಣವು ಹೇಗೆ ಲಭಿಸುವುದು ಎಂಬುದಕ್ಕೆ **ಕಿಂ ಪುನರಿತಿ.** [10–18]

सर्वात्मभावसाम्राज्यनिरन्तरितचेतसाम् ।
परिपक्वसमाधीनां किंकिं नाम न सिद्ध्यति ॥ १९ ॥

ಸರ್ವಾತ್ಮಭಾವಸಾಮ್ರಾಜ್ಯನಿರಂತರಿತಚೇತಸಾಮ್ ।
ಪರಿಪಕ್ವಸಮಾಧೀನಾಂ ಕಿಂಕಿಂ ನಾಮ ನ ಸಿದ್ಧ್ಯತಿ ॥ 19 ॥

ವಿಶ್ವಾತ್ಮಭಾವ ಸಾಮ್ರಾಜ್ಯದಲ್ಲಿ ನಿರಂತರವಾಗಿ ಇರುವ ಚೇತನಗಳು ಪರಿಪಕ್ವವಾದ ಸಮಾಧಿಯನ್ನು ಹೊಂದಿರುವಾಗ, ಯಾವುದನ್ನು ಸಾಧಿಸಲಾಗುವುದಿಲ್ಲ? [10–19]

ವಿವೃತ್ತಿ

ಐಶ್ವರ್ಯವೆಂದು ಪರಿಗಣಿತವಾಗಿರದಿದ್ದರೂ, ಸರ್ವಾತ್ಮಭಾವದ ಮಹಾತ್ಮೆಯಿಂದ ಯಾವುದನ್ನು ಅಭಿಲಾಷಿಸುತ್ತಾನೋ ಅವೆಲ್ಲವೂ ಸಿದ್ಧಿಯಾಗುವುದು ಎಂದು ಹೇಳುವ **ಸರ್ವಾತ್ಮಭಾವೇತಿ.** [10–19]

स्तोत्रमेतत्पठेद्धीमान् सर्वात्मत्वं च भावयेत् ।
अर्वाचीने स्पृहां मुक्त्वा फले स्वर्गादिसम्भवे ॥ २० ॥

ಸ್ತೋತ್ರಮೇತತ್ಪಠೇದ್ಧೀಮಾನ್ ಸರ್ವಾತ್ಮತ್ವಂ ಚ ಭಾವಯೇತ್ ।
ಅರ್ವಾಚೀನೇ ಸ್ಪೃಹಾಂ ಮುಕ್ತ್ವಾ ಫಲೇ ಸ್ವರ್ಗಾದಿಸಂಭವೇ ॥ 20 ॥

ತಿಳಿದವರು ಈ ಸ್ತೋತ್ರವನ್ನು ಸರ್ವಾತ್ಮಭಾವದಿಂದ (ತನ್ನಲ್ಲಿರುವ ಆತ್ಮವೇ ಎಲ್ಲರಲ್ಲಿಯೂ ಇರುವುದು) ಸ್ವರ್ಗ ಮುಂತಾದುವುಗಳಿಂದ ದೊರೆಯುವ ಕನಿಷ್ಠ ಫಲಗಳನ್ನು ಬಯಸದೆ ಪಠಿಸಬೇಕು. [10–20]

ವಿವೃತ್ತಿ

ಯದ್ಯಪಿ ಇದು ಈ ಸ್ತೋತ್ರದ ಮಹಿಮೆಯಾದರೆ, ಸ್ವಾಭಾವಿಕವಾಗಿ ಅದರ ಫಲವನ್ನು ಬಯಸದಿರುವ ಮನಸಿನಿಂದ ಅದನ್ನು ಪಠಿಸಬೇಕು ಎಂದು ಉಪದೇಶಿಸುವ **ಸ್ತೋತ್ರಮೇತದಿತಿ.** [10–20]

स्वर्गादिराज्यं साम्राज्यं मनुते न हि पण्डितः ।
तदेव तस्य साम्राज्यं यत्तु स्वराज्यमात्मनि ॥ २१ ॥

ಸ್ವರ್ಗಾದಿರಾಜ್ಯಂ ಸಾಮ್ರಾಜ್ಯಂ ಮನುತೇ ನ ಹಿ ಪಂಡಿತಃ ।

ತದೇವ ತಸ್ಯ ಸಾಮ್ರಾಜ್ಯಂ ಯತ್ತು ಸ್ವರಾಜ್ಯಮಾತ್ಮನಿ ॥ 21 ॥

ಸ್ವರ್ಗ ಮುಂತಾದುವುಗಳನ್ನು ಉತ್ತಮ ಸಾಮ್ರಾಜ್ಯಗಳೆಂದು ಪಂಡಿತರು ತಿಳಿಯುವುದಿಲ್ಲ; ತಮ್ಮ ಗುರುತನ್ನು ವಿಶ್ವಾತ್ಮನೊಡನೆ ಒಂದಾಗಿಸಿ ಅವನ ಸಾಮ್ರಾಜ್ಯವನ್ನು ತಮ್ಮದೆಂದು ತಿಳಿಯುತ್ತಾರೆ. [10–21]

ವಿವೃತ್ತಿ

ಯಾಕೆ ಎಂದು ತಿಳಿಯಲು **ಸ್ವರ್ಗಾದಿರಾಜ್ಯಂ ಸಾಮ್ರಾಜ್ಯಮಿತಿ.** [10–21]

सवात्मभावनावन्तं सेवन्ते सर्वसिद्धयः ।
तस्मादात्मनि साम्राज्यं कुर्यान्नियतमानसः ॥ २२ ॥

ಸರ್ವಾತ್ಮಭಾವನಾವಂತಂ ಸೇವಂತೇ ಸರ್ವಸಿದ್ಧಯಃ ।
ತಸ್ಮಾದಾತ್ಮನಿ ಸಾಮ್ರಾಜ್ಯಂ ಕುರ್ಯಾನ್ನಿಯತಮಾನಸಃ ॥ 22 ॥

ಸರ್ವಾತ್ಮಭಾವದಲ್ಲಿ ವಿಹರಿಸುವವನನ್ನು ಎಲ್ಲಾ ಸಿದ್ಧಿಗಳು ಆಶ್ರಯಿಸುತ್ತವೆ; ಹಾಗಾಗಿ ಮನಸಿನ ನಿಯಂತ್ರಣವನ್ನು ಸಾಧಿಸಿ, ಆತ್ಮ ಸಾಮ್ರಾಜ್ಯವನ್ನು ಹೊಂದಬೇಕು. [10–22]

ವಿವೃತ್ತಿ

ಸ್ವರ್ಗ ಮುಂತಾದ ರಾಜ್ಯಗಳನ್ನು ಸಾಮ್ರಾಜ್ಯವೆಂದು ಯಾವ ಪಂಡಿತರು ಮಾನ್ಯಮಾಡುವುದಿಲ್ಲ ಎಂದು ತಿಳಿಯಲು **ಸರ್ವಾತ್ಮಭಾವನಾವಂತಮಿತಿ.** [10–22]

ಜ್ಞಾನಮಾರ್ಗದಲ್ಲಿ ದೇವರ ಮತ್ತು ಗುರುವಿನ ಪ್ರೀತಿಯ ಆಗತ್ಯ

यस्य देवे परा भक्तिर्यथा देवे तथा गुरौ ।
तस्यैते कथिता ह्यार्थाः प्रकाशन्ते महात्मनः ॥ २३ ॥

ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯಾರ್ಥಾಃ ಪ್ರಕಾಶಂತೇ ಮಹಾತ್ಮನಃ ॥ 23 ॥

ಯಾರಿಗೆ ದೇವರಲ್ಲಿ ಶ್ರೇಷ್ಠವಾದ ಭಕ್ತಿಯಿದೆಯೋ, ದೇವರಂತಯೇ ಗುರುವಿನಲ್ಲಿಯೂ ಕೂಡಾ, ಅಂತಹ ಮಹಾತ್ಮನಿಗೆ ಇಲ್ಲಿ ತಿಳಿಸಿರುವ ಸತ್ಯಗಳು ಪೂರ್ಣವಾಗಿ ಪ್ರಕಾಶಿತವಾಗುವುವು. [10–23]

ವಿವೃತ್ತಿ

ದೇವೇ ದಕ್ಷಿಣಾಮೂರ್ತಿಯೆಂಬ ಗುರುವಿನಲ್ಲಿ ತನ್ನ ಭಕ್ತಿಯನ್ನಿಡುವವನು ಈ ಸ್ತೋತ್ರಕ್ಕೆ ಅಧಿಕಾರಿಯಾಗಿರುವನು, ಇತರರು ಅಲ್ಲ ಎಂಬುದನ್ನು ತೋರಿಸುವ **ಯಸ್ಯ ದೇವ ಇತಿ.** [10–23]

प्रकाशात्मिकया शक्त्या प्रकाशानां प्रभाकरः ।

प्रकाशयति यो विश्वं प्रकाशोयं प्रकाशताम् ॥ २४ ॥

ಪ್ರಕಾಶಾತ್ಮಿಕಯಾ ಶಕ್ತ್ಯಾ ಪ್ರಕಾಶಾನಾಂ ಪ್ರಭಾಕರಃ ।
ಪ್ರಕಾಶಯತಿ ಯೋ ವಿಶ್ವಂ ಪ್ರಕಾಶೋಽಯಂ ಪ್ರಕಾಶತಾಮ್ ॥ 24 ॥

ಯಾರು ತನ್ನ ಬೆಳಕಿನ ಶಕ್ತಿಯಿಂದ ಎಲ್ಲವನ್ನೂ ಬೆಳಗುವ ಪ್ರಭಾಕರನನ್ನು ಬೆಳಗುತ್ತಾನೋ, ಯಾರು ಈ ಬ್ರಹ್ಮಾಂಡವನ್ನು ಬೆಳಗುತ್ತಾನೋ, ಈ ಬೆಳಕು ಅವನ ಬೆಳಕಿನಲ್ಲಿ ಪೂರ್ಣವಾಗಿ ಬೆಳಗಲಿ. [10–24]

ವಿವೃತ್ತಿ

ಅಂತೆಯೇ ಸಂಪೂರ್ಣ ಸ್ತೋತ್ರ ತಾತ್ಪರ್ಯವನ್ನು ವ್ಯಾಖ್ಯಾನಿಸುವ ಗ್ರಂಥರಚನೆಯಲ್ಲಿ ಒದಗುವ ವಿಘ್ನಗಳನ್ನು ಶಾಂತಗೊಳಿಸಲು ಶಿಷ್ಟಾಚಾರಲಕ್ಷಣವಾಗಿ ಮಂಗಳವನ್ನು ವಸ್ತುನಿರ್ದೇಶನ ರೂಪವಾಗಿ ಆಚರಿಸುವ **ಪ್ರಕಾಶಾತ್ಮಿಕಯೇತಿ.** ಆದಿತ್ಯ ಮೊದಲಾದ ಪ್ರಕಾಶವುಳ್ಳವುಗಳನ್ನು ಪ್ರಭಾಕರ ಎನ್ನಲಾಗಿದೆ. ತಾವಾಗಿಯೇ ಪ್ರಕಾಶಿಸುವಂತಹ ಎಂಬ ಅರ್ಥದಲ್ಲಿ. [10–24]

इति श्रीदक्षिणामूर्तिस्तोत्रार्थप्रतिपादके ।
प्रबन्धे मानसोल्लासे दशमोल्लाससङ्ग्रहः ॥ २५ ॥

ಇತಿ ಶ್ರೀದಕ್ಷಿಣಾಮೂರ್ತಿಸ್ತೋತ್ರಾರ್ಥಪ್ರತಿಪಾದಕೇ ।
ಪ್ರಬಂಧೇ ಮಾನಸೋಲ್ಲಾಸೇ ದಶಮೋಲ್ಲಾಸಸಂಗ್ರಹಃ ॥ 25 ॥

ಶ್ರೀದಕ್ಷಿಣಾಮೂರ್ತಿ ಸ್ತೋತ್ರದ ಅರ್ಥವನ್ನು ಪ್ರತಿಪಾದಿಸುವ ಮಾನಸೋಲ್ಲಾಸವೆಂಬ ಪ್ರಬಂಧದ ಹತ್ತನೆಯ ಉಲ್ಲಾಸದ ವಿವರಣೆಯು ಇಲ್ಲಿಗೆ ಮುಗಿಯಿತು. [10–25]

ಇತಿ ಶ್ರೀಮಚ್ಛಂಕರಭಗವತ್ಪಾದಾಚಾರ್ಯಕೃತ ದಕ್ಷಿಣಾಮೂರ್ತಿಸ್ತೋತ್ರ ಭಾವಾರ್ಥ ವಾರ್ತಿಕಂ ಸುರೇಶ್ವರಾಚಾರ್ಯಕೃತಂ ಸಮಾಪ್ತಂ ।

ವಿವೃತ್ತಿ

ಹತ್ತನೆಯ ಶ್ಲೋಕದ ವ್ಯಾಖ್ಯೆಯನ್ನು ಉಪಸಂಹರಿಸುವ **ಇತೀತಿ.** [10–25]

ಇತಿ ಶ್ರೀಮಾನಸೋಲ್ಲಾಸಪ್ರಬಂಧೋಽಯಂ ಯಥಾಮತಿ ।
ವ್ಯಾಖ್ಯಾತೋ ರಾಮತೀರ್ಥೇನ ಗುರುದೇವಪ್ರಸಾದತಃ ॥
ಅನೇನ ಭಗವಾಂಛ್ರೀಮದ್ದಕ್ಷಿಣಾಶಾಮುಖಃ ಶಿವ ।
ಪ್ರೀಯತಾಂ ಭಜತಾಂ ನಿತ್ಯಂ ತತ್ತ್ವಜ್ಞಾನಪ್ರದಃ ಸತಾಮ್ ॥

॥ ॐ तत् सत् ॥ ॐ ತತ್ ಸತ್ ॥

ಓಂ

ಶ್ರೀದಕ್ಷಿಣಾಮೂರ್ತಿಸ್ತೋತ್ರಮ್

ಸ್ವಯಂಪ್ರಕಾಶಯತಿ ವಿರಚಿತ ವ್ಯಾಖ್ಯಾ ತತ್ತ್ವಸುಧಾ ಸಹಿತಮ್

ಮೌನವ್ಯಾಖ್ಯಾಪ್ರಕಟಿತಪರಬ್ರಹ್ಮತತ್ತ್ವಂ ಯುವಾನಂ
ವರ್ಷಿಷ್ಠಾಂತೇವಸದೃಷಿಗಣೈರಾವೃತಂ ಬ್ರಹ್ಮನಿಷ್ಠೈಃ ।
ಆಚಾರ್ಯೇಂದ್ರಂ ಕರಕಲಿತಚಿನ್ಮುದ್ರಮಾನಂದಮೂರ್ತಿಂ
ಸ್ವಾತ್ಮಾರಾಮಂ ಮುದಿತವದನಂ ದಕ್ಷಿಣಾಮೂರ್ತಿಮೀಡೇ ॥ 1 ॥

ಕೈವಲ್ಯಾನಂದಯೋಗೀಂದ್ರಶುದ್ಧಾನಂದಯತೀಶ್ವರೌ ।
ನತ್ವಾರಭೇ ಲಘುವ್ಯಾಖ್ಯಾಂ ದಕ್ಷಿಣಾಶಾಮುಖಸ್ತುತೇಃ ॥ 2 ॥

ಸರ್ವಜ್ಞರಾದ ಭಗವಾನ್ ಭಾಷ್ಯಕಾರರು ಲೋಕಾನುಗ್ರಹವೆಂಬ ಒಂದು ಪ್ರಯೋಜನಕ್ಕಾಗಿ ಶರೀರವನ್ನು ಪರಿಗ್ರಹಿಸಿ ಸಕಲ ವೇದಾಂತವೆಂಬ ಹಾಲಿನ ಸಮುದ್ರವನ್ನು ನ್ಯಾಯವೆಂಬ ಮಂದರದಿಂದ ವಿಚಾರಿಸಿ ಮಥಿಸಿಗಾಗ ಆವಿರ್ಭವಿಸಿದ ಅದ್ವೈತವೆಂಬ ಅಮೃತದ ಕಲಶದಂತೆ ವಿನ್ಯಾಸವಾಗಿರುವ ಶ್ರೀದಕ್ಷಿಣಾಮೂರ್ತಿಸ್ತೋತ್ರವು ಸಕಲ ಲೋಕದಲ್ಲಿ ಭೋಕ್ತೃವಾದ ಜೀವನ ಬಯಕೆಗಳ ಭೋಗ್ಯವಾದ ಜಗತ್ತಿನಲ್ಲಿ ಭೋಗಪ್ರದನಾದ ಪರಮೇಶ್ವರನೊಡನೆ ಮೋಕ್ಷಪ್ರದನಾದ ಗುರುವನ್ನು ಅತ್ಯಂತ ಅಭೇದಬೋಧಕವಾಗಿ ಪರಿಗಣಿಸಿ, ಚೆನ್ನಾಗಿ ಪಾಠ ಶ್ರವಣ ಅರ್ಥಮನನ ಮುಂತಾದ ವಿಧವಾಗಿ ಪರಮಪುರುಷಾರ್ಥವನ್ನು ಪ್ರಾಪ್ತಿಸಲು ಆರಂಭಿಸಿರುವ ಉಪದೇಶವು. ವೇದಾಂತಸಾರಭೂತವಾದ ನವನೀತದ ಮುದ್ದೆಯಂತೆ, ಅದರ ವಿಷಯದ ಅರಿವಿನಿಂದ ಮೋಕ್ಷದ ಸಿದ್ಧಿಯಾಗುವುದು ಎಂಬ ಅಭಿಪ್ರಾಯದಿಂದ ಮೊದಲಾಗಿ ಪ್ರತೀತವಾಗುವ ಜಗತ್ತಿನಲ್ಲಿ ಅಧಿಷ್ಠಿತನಾಗಿರುವುದರಿಂದ ಪರಮೇಶ್ವರನಾಗಿ ಕಂಡುಬರುವ ದಕ್ಷಿಣದಿಕ್ಕಿಗೆ ಮುಖಮಾಡಿರುವ ಪರಮೇಶ್ವರನನ್ನು ಮನಸಿನಲ್ಲಿಯೇ ಪೂಜಿಸುವ **ವಿಶ್ವಮಿತಿ.**

ವಿಶ್ವಂ ದರ್ಪಣದೃಶ್ಯಮಾನನಗರೀತುಲ್ಯಂ ನಿಜಾಂತರ್ಗತಂ
ಪಶ್ಯನ್ನಾತ್ಮನಿ ಮಾಯಯಾ ಬಹಿರಿವೋದ್ಭೂತಂ ಯಥಾ ನಿದ್ರಯಾ ।
ಯಸ್ಸಾಕ್ಷಾತ್ಕುರುತೇ ಪ್ರಬೋಧಸಮಯೇ ಸ್ವಾತ್ಮಾನಮೇವಾದ್ವಯಂ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀ ದಕ್ಷಿಣಾಮೂರ್ತಯೇ ॥ 1 ॥

ವಿಶ್ವಂ ವಿವಿಧ ಪ್ರತ್ಯಯಗಳಿಂದ ತಿಳಿದುಬರುವ ಆಕಾಶ ಮುಂತಾದವುಗಳಿಂದ ಕೂಡಿರುವ ಸರ್ವ ಜಗತ್ತು ***ನಿಜಾಂತರ್ಗತಂ*** ತನ್ನ ಒಳಗಿರುವ, ಪ್ರತ್ಯಕ್ಷ ಸ್ವರೂಪದಲ್ಲಿರುವ. ನಿರ್ವಿಕಾರ, ನಿರಂಧ್ರ, ಅತಿಸ್ವಚ್ಛ, ಅಸಂಗ ಸೂಕ್ಷ್ಮ ಎಂಬುದಕ್ಕೆ ವಿಪರೀತವಾಗಿ ಪ್ರತೀತವಾಗುವ ಜಗತ್ತಿರುವುದು ಎಂದು ಅದಕ್ಕೆ ಸದೃಶವಾಗಿರುವ ದೃಷ್ಟಾಂತವಾಗಿ ***ದರ್ಪಣದೃಶ್ಯಮಾನನಗರೀತುಲ್ಯಮ್*** ಕನ್ನಡಿಯಲ್ಲಿ ಆದರ್ಶ, ನಿರಂಧ್ರ, ಅಸಂಗ, ಸ್ವಚ್ಛ, ಸೂಕ್ಷ್ಮ, ನಿರ್ವಿಕಾರವಾಗಿ ಪ್ರತಿಬಿಂಬಿತವಾಗಿ ಅವಲೋಕಿಸಲ್ಪಡುವ ಯಾವ ನಗರವಿದೆಯೋ ಅದು. ಹದಿನಾಲ್ಕು ಲೋಕಗಳಾಗಿ ಏಳು ಸಾಗರಗಳಿರುವ, ಅನೇಕ ಉಪವನಗಳಿರುವ, ದಕ್ಷಿಣೋತ್ತರವಾಗಿ ಅತಿ ಮನೋಹರವಾದ ಎರಡು ಮಾರ್ಗಗಳಿಂದ ಭೂಷಿತವಾಗಿರುವ, ಎರಡು ಮಂಗಳದೀಪಗಳಿಂದ ವಿರಾಜಿತವಾದ, ವಿಲಾಸಯೋಗ್ಯವಾದ ಅನೇಕ ಶಿಖರಗಳಿರುವ,

ನಾನಾವಿಧದ ಜನಸಂಕುಲಗಳಿರುವಕೆಲವು ದಟ್ಟವಾದ ಪ್ರದೇಶಗಳುಳ್ಳ ಜಗತ್ತಿಗೆ ಸಮಾನವಾಗಿರುವ ನಗರ. ಹಾಗೆಂದು ಶ್ರೀಭಾರತೀತೀರ್ಥರು

> ನಿಶ್ಛಿದ್ರದರ್ಪಣೇ ಭಾತಿ ವಸ್ತುಗರ್ಭಂ ಬೃಹಜ್ಜಗತ್ ।
> ಸಚ್ಚಿತ್ಸುಖೇ ತಥಾ ನಾನಾಜಗದ್ಗರ್ಭಮಿದಂ ವಿಯತ್ ॥ ಪಂಚದಶೀ 13–99 ॥

ಎಂದು ಹೇಳಿರುವರು. ವಸಿಷ್ಠರು ಕೂಡ ಶಿಲೋಪಾಖ್ಯಾನದಲ್ಲಿ ಹೀಗೆ ಹೇಳಿದ್ದಾರೆ:

> ದ್ಯೌಃ ಕ್ಷ್ಮಾ ವಾಯುರಥಾಕಾಶಃ ಪರ್ವತಾಸ್ಸರಿತೋ ದಿಶಃ ।
> ಸಂತಿ ತಸ್ಯಾಂ ಶಿಲಾ ಸಾ ಚ ಸುಷಿರಾ ನ ಮನಾಗಪಿ ॥
> ಅಪ್ಯತ್ಯಂತಘನಾಂಗಯಾಸ್ಸನೀರಂಧ್ರಾಕೃತೇರಪಿ ।
> ವಿದ್ಯತೇಂತರ್ಜಗದ್ವೃಂದಂ ವ್ಯೋಮ್ನೀವ ವಿತತೋನಿಲಃ ॥ ನಿರ್ವಾಣಪ್ರಕರಣ ಅ.46 ॥

ಇನ್ನು ಇನ್ನೊಂದುವಿಧವಾಗಿ ವೈರುದ್ಧ್ಯವಿರುವಂತೆ ವಿಶ್ವವು ಸದಾ ಇರುವುದಾದರೆ ಅದು ರಾಗ ಮುಂತಾದವುಗಳ ಪ್ರಕಾರದಿಂದ ಅನುಭೂತಿಯಾಗುವುದೇ ಎಂಬ ಶಂಕೆಗೆ **ಆತ್ಮನೀತ್ಯಾದಿನಾ.** ***ಆತ್ಮನಿ*** ಸ್ವಪ್ರಕಾಶಿತವಾಗಿ ಪ್ರತೀತವಾಗುವ ವಿಷಯಗಳನ್ನು ಆಶ್ರಯಿಸಿ. ***ಮಾಯಯಾ*** ಅವಿದ್ಯೆಯೆಂಬ ಸೂರ್ಯನು 'ನಾನು ಅರಿತಿಲ್ಲ' ಎಂದು ಅನೇಕವಿಧವಾದ ವೈರುದ್ಧ್ಯಮಯ ಅಂಧಕಾರಗಳನ್ನು ಸೃಜಿಸುವಂತೆ, ಭ್ರಮೆಯೆಂದು ಅನುಭವಸಿದ್ಧವಾದ. ***ಬಹಿಃ*** ತನ್ನಿಂದ ಹೊರಗಿರುವ ಪ್ರದೇಶದಲ್ಲಿ ***ಉದ್ಭೂತಮಿವ*** ಆವಿರ್ಭೂತವಾಗಿರುವಂತೆ ***ಪಶ್ಯನ್*** ಅವಲೋಕಿಸಲ್ಪಡುವ. ಒಳಗೆ ವಿದ್ಯಮಾನವಾಗುವ ಜಗತ್ತನ್ನು ಹೊರಗಿರುವಂತೆ ಅನುಭವ ಹೊಂದುವುದಕ್ಕೆ ಉದಾಹರಣೆಯಾಗಿ **ಯಥಾ ನಿದ್ರಯೇತಿ.** ***ಯಥಾ ನಿದ್ರಯಾ*** ಸುಷುಪ್ತಿಯಲ್ಲಿ ಜಗತ್ತಿನ ಸಾಕ್ಷಿಯು ತನ್ನೊಳಗೆ ಅಧ್ಯಸ್ತವಾಗಿದ್ದರೂ ತನ್ನಿಂದ ಹೊರಗಿರುವಂತೆ ಅನುಭವನೀಡುವ ಜಾಗ್ರತ ಪ್ರಪಂಚವು ತನ್ನಲ್ಲಿ ಪ್ರತ್ಯೇಕವಾಗಿರುವ ಚೈತನ್ಯದಲ್ಲಿ ಅಧ್ಯಸ್ತವಾಗಿ, ತನಗೆ ದೇಹದಲ್ಲಿರುವ ತಾದಾತ್ಮ್ಯದ ಅಧ್ಯಾಸದಿಂದಾಗಿ ತನ್ನಿಂದ ಹೊರಗಿರುವಂತೆ ಕಂಡುಬರುವುದು. ಜಡವಾದ ಜಗತ್ತಿಗೆ ಪ್ರತ್ಯೇಕ ಚೈತನ್ಯದೊಡನೆ ಸಂಯೋಗ ಮುಂತಾಗಿ ಇತರ ಸಂಬಂಧಗಳ ಸಂಭವವಿರುವುದರಿಂದ ಕಾಣಸಿಗುವ ವೈರುದ್ಧ್ಯಮಯ ಜಗತ್ತಿನ ಅವಕಾಶವು ನಿಜವಾದುದಲ್ಲ, ಜಗತ್ತು ಚೈತನ್ಯದಲ್ಲಿಯೇ ಅಧ್ಯಸ್ತವಾಗಿರುವುದರಿಂದಲೇ ಹಾಗಿರುವುದು. ಹಾಗೆಂದು ಪ್ರತ್ಯಗಾತ್ಮನನ್ನು ಪ್ರಕಟಿಸುವ ಶ್ರುತಿಯು ಹೇಳುತ್ತದೆ:

> ಪುರತ್ರಯೇ ಕ್ರೀಡತಿ ಯಶ್ಚ ಜೀವಸ್ತತಸ್ತು ಜಾತಂ ಸಕಲಂ ವಿಚಿತ್ರಮ್ ।
> ಆಧಾರಮಾನಂದಮಖಂಡಬೋಧಂ ಯಸ್ಮಿನ್ ಲಯಂ ಯಾತಿ ಪುರತ್ರಯಂ ಚ ॥
> ಏತಸ್ಮಾಜ್ಜಾಯತೇ ಪ್ರಾಣೋ ಮನಸ್ಸರ್ವೇಂದ್ರಿಯಾಣಿ ಚ ।
> ಖಂ ವಾಯುರ್ಜ್ಯೋತಿರಾಪಃ ಪೃಥಿವೀ ವಿಶ್ವಸ್ಯ ಧಾರಿಣೀ ॥
> ಮಯ್ಯೇವ ಸಕಲಂ ಜಾತಂ ಮಯಿ ಸರ್ವಂ ಪ್ರತಿಷ್ಠಿತಮ್ ।
> ಮಯಿ ಸರ್ವಂ ಲಯಂ ಯಾತಿ ತದ್ಬ್ರಹ್ಮಾದ್ವಯಮಸ್ಮ್ಯಹಮ್ ॥ ಕೈವಲ್ಯೋಪನಿಷತ್ ॥

> ಯಥಾ ಸ್ವಪ್ನಪ್ರಪಂಚೋಽಯಂ ಮಯಿ ಮಾಯಾವಿಜೃಂಭಿತಃ ।
> ಏವಂ ಜಾಗ್ರತ್ಪ್ರಪಂಚಶ್ಚ ಮಯಿ ಮಾಯಾವಿಜೃಂಭಿತಃ ॥

ಎಂಬ ಪುರಾಣವಚನವೂ ಇದೆ. ಹಾಗೆ ಪ್ರತೀತವಾಗುವ ಜಾಗ್ರತ್ತಿನ ಪ್ರಪಂಚದಲ್ಲಿ ಅಧ್ಯಸ್ತವಾಗಿರುವ ಭ್ರಾಂತಿಯಿಂದಾಗಿ ಹೊರಗಿರುವಂತೆ ಅನುಭವವಾಗುತ್ತದೆ ಎಂಬ ಭಾವ.

ಇನ್ನು ತನ್ನ ಆತ್ಮನಲ್ಲಿ ಪ್ರಪಂಚವು ಅಧ್ಯಸ್ತವಾಗಿದೆ ಎಂಬುದು ಸುಳ್ಳಾಗಿರಬಹುದು. ಅದು ಎಂದಿಗೂ ಸ್ವಲ್ಪವೂ ಅನುಭೂತಿಯಾಗುವುದಿಲ್ಲ. ಹಾಗಾಗಿ ಅದು ಆತ್ಮದಲ್ಲಿರದೆ ಹೊರಗೆ ಪರಮಾರ್ಥದಲ್ಲಿ, ಅಂತಿಮಸತ್ಯವಾಗಿ ವಿದ್ಯಮಾನವಾಗುತ್ತಿದೆ ಎಂಬ ಶಂಕೆಗೆ ಹೇಗೆ ಸ್ವಪ್ನಪ್ರಪಂಚದಲ್ಲಿರುವುದೆಲ್ಲವೂ ಆಗ ಸತ್ಯವೆಂದೇ ಭಾಸವಾಗುವುದೋ ಅದರೆ ಎಚ್ಚರವಾಗುವಾಗ ಸುಳ್ಳಾಗಿರುವುದೋ ಹಾಗೆಯೇ ಜಾಗ್ರತ ಪ್ರಪಂಚವೂ ತತ್ತ್ವಜ್ಞಾನದ ಅರಿವಾಗುವ ಮೊದಲು ಸತ್ಯವಾಗಿಯೇ ಭಾಸವಾಗುವುದು. ಪರಮದಯಾಳುಗಳಾದ ಆಚಾರ್ಯರು ಸಾಕ್ಷಾತ್ ಪರಮೇಶ್ವರ ಅವತಾರರೂಪದಿಂದ ಉಪದೇಶಿಸಿರುವ ತತ್ತ್ವಮಸಿ ಮುಂತಾದ ಮಹಾವಾಕ್ಯಗಳಿಂದ ಜನಿತವಾದ ಬ್ರಹ್ಮೈಕ್ಯದ ಸಾಕ್ಷಾತ್ಕಾರ ಸಮಯದಲ್ಲಿ ಅದು ಸಮೂಲ ಬಾಧಿತವಾಗಿ ಅಭಿನ್ನ, ಅದ್ವಿತೀಯ ಬ್ರಹ್ಮಮಾತ್ರವೇ ಆಗಿರುವುದು ಎಂದು ಅರಿತುಕೊಳ್ಳುವನು ಎಂಬ ಅಭಿಪ್ರಾಯದಿಂದ **ಯಸ್ಸಾಕ್ಷಾದಿತ್ಯಾದಿನಾ.** ***ಯಃ*** ಅಧ್ಯಸ್ತವಾಗಿರುವ ಪ್ರಪಂಚಕ್ಕೆ ಅಧಿಷ್ಠಾನಭೂತ ಪ್ರತ್ಯಗಾತ್ಮನು ***ಪ್ರಬೋಧಸಮಯೇ*** ಗುರೂಪದಿಷ್ಟ ಮಹಾವಾಕ್ಯಗಳಿಂದ ಜ್ಞಾನದ ಉತ್ಪತ್ತಿಯಾಗುವ ಕಾಲಕ್ಕೆ ***ಅದ್ವಯಂ*** ಸರ್ವ ಪ್ರಪಂಚವನ್ನು ಸಮೂಲವಾಗಿ ಬಾಧಿಸುವ ಆಕಾಶ ಮುಂತಾದ ದ್ವೈತರಹಿತವಾದ ***ಸ್ವಾತ್ಮಾನಮೇವ*** ವಿಯತ್ ಮೊದಲಾದವುಗಳಲ್ಲಿ ಅಧಿಷ್ಠಾನವಾಗಿರುವ ಬ್ರಹ್ಮಕ್ಕಿಂತ ಅಭಿನ್ನವಾದ ಸಚ್ಚಿದಾನಂದರೂಪದ ಪ್ರತ್ಯಗಾತ್ಮನೇ ***ಸಾಕ್ಷಾತ್ಕುರುತೇ*** ಸಚ್ಚಿದಾನಂದರೂಪದ ಬ್ರಹ್ಮವೇ ನಾನಾಗಿರುವೆನು ಎಂಬ ಅಪ್ರತಿಬಂಧಕವಾದ ಅನುಭವವನ್ನು ಹೊಂದುವುದು; 'ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ತತ್ಕೇನ ಕಂ ಪಶ್ಯೇತ್' (ಬೃ.ಉ.6–5–15) ಮೊದಲಾದ ಶ್ರುತಿಯಂತೆ. ***ತಸ್ಮೈ*** ಮೇಲೆ ಹೇಳಿರುವ ರೂಪದ ***ಶ್ರೀಗುರುಮೂರ್ತಯೇ*** ಶ್ರೀಗುರು, ಸಾಕ್ಷಾತ್ಕರಿಸಿಕೊಂಡ ಬ್ರಹ್ಮತತ್ತ್ವವಾಗಿ ಮೂರುವಿಧದ ಆವರಣಶೂನ್ಯನಾಗಿರುವ ಜ್ಞಾನವನ್ನು ಉಪದೇಶಿಸಿರುವ ಪುರುಷನು, ಅವನ ರೂಪದಲ್ಲಿ ಅವಸ್ಥಿತನಾಗಿರುವ ***ದಕ್ಷಿಣಾಮೂರ್ತಯೇ*** ದಕ್ಷಿಣದಿಕ್ಕಿಗೆ ಅಭಿಮುಖವಾಗಿರುವ ಸ್ವರೂಪವುಳ್ಳವನಿಗೆ ನಮಸ್ಕಾರಗಳು.

ಪರಮಾದ್ವೈತವಿಜ್ಞಾನಂ ಕೃಪಯಾ ವೈ ದದಾತಿ ಯಃ ।
ಸೋಽಯಂ ಗುರುರ್ಗುರುಸ್ಸಾಕ್ಷಾಚ್ಛಿವ ಏವ ನ ಸಂಶಯಃ ॥

ಮುಂತಾದ ನೂರಾರು ವಚನಗಳ ಜ್ಞಾನೋಪದೇಶ ನೀಡಿರುವ ಗುರು ಸಾಕ್ಷಾತ್ ಪರಮೇಶ್ವರನೇ ಆಗಿರುವನು. ಅಥವಾ *ತಸ್ಮೈ ಶ್ರೀಗುರುಮೂರ್ತಯೇ* ಸಚ್ಚಿದಾನಂದಾತ್ಮಿಕಳಾದ ಗುರ್ವೀ, ಸ್ತ್ರೀಗುರುವಿನ ಅತಿಮಹತ್ತರವಾದ ಮೂರ್ತಿಸ್ವರೂಪಳಾದವಳಿಗೆ. ಶ್ರೀಯ, ಅನಾದಿ ಅಚಿಂತ್ಯ ಮಾಯಾಶಕ್ತಿಯ *ದಕ್ಷಿಣಃ* ಸೃಷ್ಟಿ ಸ್ಥಿತಿ ಅಂತ್ಯಗಳನ್ನು ವಿರಚಿಸುವಲ್ಲಿ ನಿಪುಣಳಾಗಿರುವವಳು ಪರಮಾರ್ಥದಲ್ಲಿ ಅಮೂರ್ತ, ಆಕಾರರಹಿತಳಾಗಿರುವವಳು; 'ಅಸ್ಥೂಲಮನಣುಃ' (ಬೃ.ಉ.5–8–8) ಮುಂತಾದ ಶ್ರುತಿಯಂತೆ. ಅಂತಹ ದಕ್ಷಿಣಾಮೂರ್ತಿಗೆ *ಇದಂ ನಮಃ* ಪೂಜ್ಯಭಾವದಿಂದ ಪ್ರಣಾಮಗಳನ್ನು ಸಲ್ಲಿಸುವೆನು. ಸ್ವಾತ್ಮನ ಪೂಜ್ಯಭಾವವು ಪರಮೇಶ್ವರನೊಡನೆ ಏಕತ್ವದಿಂದ ಸಮರ್ಪಿತವಾಗಬೇಕು. ಇಲ್ಲಿ ಪೂರ್ವಾರ್ಧದಲ್ಲಿ ತ್ವಂ ಪದಾರ್ಥವು ಹೇಳಲ್ಪಟ್ಟು ಉತ್ತರಾರ್ಧದಲ್ಲಿ ಶ್ರೀಗುರುಮೂರ್ತಯೇ ಶ್ರೀದಕ್ಷಿಣಾಮೂರ್ತಯೇ ಎಂಬ ಪದದ್ವಯವು ಮೂರ್ತಿದ್ವಯ ಯುಕ್ತವಾದ ತತ್ ಪದಾರ್ಥವು ಹೇಳಲ್ಪಟ್ಟಿದೆ. ಆತ್ಮವು ಅದ್ವಯವೆಂದು ಪದದ್ವಯಗಳ ಸಾಮಾನಾಧಿಕರಣ್ಯದಿಂದ ಅರಿಯಲ್ಪಟ್ಟು, ಆ ಶಬ್ದಗಳು ಬ್ರಹ್ಮದೊಡನೆ ಏಕತ್ವದ ಲಕ್ಷಣವನ್ನು ಹೊಂದಿವೆ ಎಂಬುದು ವಾಕ್ಯಾರ್ಥವಾಗಿರುವುದು. ಸಕಲ ವೇದಾಂತಗಳಲ್ಲಿ ಪ್ರಸಿದ್ಧವಾದ ಈ ಅರ್ಥವನ್ನು ಮುಂದಿನ ಶ್ಲೋಕದಲ್ಲಿ ತೋರಿಸಲಾಗುವುದು.

ದರ್ಪಣದೃಶ್ಯಮಾನನಗರೀತುಲ್ಯಂ ನಿಜಾಂತರ್ಗತಂ ವಿಶ್ವಂ ಯಥಾ ನಿದ್ರಯಾ ತಥಾ ಆತ್ಮನಿ ಮಾಯಯಾ ಬಹಿರಿವೋದ್ಭೂತಂ ಪಶ್ಯನ್ ಯಃ ಪ್ರಬೋಧಸಮಯೇ ಅದ್ವಯಂ ಸ್ವಾತ್ಮಾನಮೇವ ಸಾಕ್ಷಾತ್ಕುರುತೇ ತಸ್ಮಾ ಇದಂ ನಮ ಎಂದು ಅನ್ವಯವಾಗುವುದು.

ಇದೇ ಅರ್ಥವನ್ನು ವಾರ್ತಿಕಕಾರರು ಸಂಗ್ರಹವಾಗಿ ಹೇಳಿದ್ದಾರೆ –

ಈಶ್ವರೋ ಗುರುರಾತ್ಮೇತಿ ಮೂರ್ತಿಭೇದಾದ್ವಿಭಾಗಿನೇ ।
ವ್ಯೋಮವದ್ವ್ಯಾಪ್ತದೇಹಾಯ ದಕ್ಷಿಣಾಮೂರ್ತಯೇ ನಮಃ ॥

ಎಂದು. {1}

ಇನ್ನು ಆತ್ಮದಲ್ಲಿ ಪ್ರಪಂಚದ ಇರುವಿಕೆಯು ಪ್ರಮಾಣಿತವಾಗುವುದಿಲ್ಲ, ಅದರ ಅಕಾರಣತ್ವದಿಂದಾಗಿ. ಹಾಗೆಯೇ ಆತ್ಮವು ಹೇಗೆ ಜಗತ್ತಿನ ಆರಂಭಕವಾಗಿದೆ? ಅಥವಾ ಜಗತ್ತಿನ ಆಕಾರದಲ್ಲಿ ಪರಿಣಾಮವನ್ನು ಹೇಗೆ ಹೊಂದಿದೆ? ಮೊದಲಿನ ಪ್ರಶ್ನೆಗೆ ಆತ್ಮವು ಜಗತ್ತನ್ನು ಆರಂಭಿಸಲು ಸಾಧವಿಲ್ಲ ಏಕೆಂದರೆ ಒಂದು ವಿಭು ಚಿದ್ರೂಪವು ಜಡವಾದ ಪ್ರಪಂಚವನ್ನು ಆರಂಭಿಸುವುದು ಅಸಂಭವವಾಗಿದೆ. ಎರಡನೆಯದೂ ಸಾಧ್ಯವಿಲ್ಲ ಏಕೆಂದರೆ ನಿರವಯವ ನಿರ್ವಿಕಾರ ಚಿದ್ರೂಪಕ್ಕೆ ಪರಿಣಾಮವು ಅಸಂಭವವಾದುದರಿಂದ. ನಿತ್ಯವಾಗಿರುವ ನಾಲ್ಕುವಿಧದ ಪರಮಾಣುಗಳು ಜಗತ್ತಿನ ಆರಂಭಕವಾಗಿವೆ ಮತ್ತು ಅವುಗಳಂತೆಯೇ ಜಗತ್ತಿನ ಸ್ಥಿತಿಯಿರುವುದು. ಅಥವಾ ಪ್ರಧಾನವೇ ಜಡ, ತ್ರಿಗುಣಾತ್ಮಕವಾದ ಜಗತ್ತಾಗಿ ಪರಿಣಮಿಸಿದೆ; ಹಾಗಾಗಿ ಅದುವೇ ಜಗತ್ತಿನ ಪರಮಾರ್ಥವಾಗಿದೆ, ಚಿದಾತ್ಮನಲ್ಲ. ಹೀಗೆ ನೈಯಾಯಿಕರ, ಸಾಂಖ್ಯರ ಮತಗಳು ತಮ್ಮ ಶಂಕೆಯನ್ನು ವ್ಯಕ್ತಪಡಿಸುತ್ತವೆ. ಪರಮಾಣು ಆರಂಭ ವಾದವು ಹಾಗೆ ಲಭಿಸುವುದಿಲ್ಲ, ನಿರವಯವವಾಗಿರುವುದು ಹಾಗೆ ಎಲ್ಲಾ ರೂಪವಾಗಿ ಸಂಯೋಗಹೊಂದುವುದು ಸಾಧ್ಯವಿಲ್ಲ, ಭಿನ್ನವಾಗಿರುವ ಗೋವು, ಅಶ್ವ ಮುಂತಾಗಿ ಕಾರ್ಯ–ಕಾರಣಭಾವದ ಯೋಗವಿಲ್ಲದಿರುವುದರಿಂದ. ಮೊದಲೇ ಅಸತ್ಯ ಆಗಿರುವ ಕಾರ್ಯಕ್ಕೆ ಉತ್ಪತ್ತಿಯನ್ನು ಹೇಳುವುದು ಸಂಭವವಿಲ್ಲ, ಮೊಲದ ಕೊಂಬಿನಂತೆ. ಅತ್ಯಂತ ಭಿನ್ನವಾದ ಕಾರ್ಯಗಳನ್ನು ಆರಂಭಿಸುವಾಗ ಕಾರ್ಯದ ಗುರುತ್ವ ಇತ್ಯಾದಿ ವೈರುಧ್ಧ್ಯಗಳು ಲಕ್ಷಿತವಾಗಬೇಕಾಗುವುದರಿಂದ. ಪರಮಾಣುಗಳ ಸತ್ ಭಾವಕ್ಕೆ ಪ್ರಮಾಣದ ಅಭಾವವಿರುವುದರಿಂದ ಕಾರ್ಯದ್ರವ್ಯವು ಸ್ವತಃ ಅಲ್ಪಪರಿಮಾಣದ್ದಾಗಿದ್ದು ಉತ್ಪತ್ತಿಯ ನಿಯಮದಂತೆ ಸ್ಥೂಲವೆನ್ನಬಹುದಾದ ಪಿಂಡದ ಉತ್ಪತ್ತಿಯಲ್ಲಿ ನೂಲು ಮುಂತಾದವುಗಳು ಕಾಣಸಿಗುವುದಿಲ್ಲ. ಪ್ರಧಾನಪರಿಣಾಮ ವಾದವೂ ಸರಿಯಲ್ಲ, ಚೇತನವು ಅಧಿಷ್ಠಿತವಾಗಿರದ ಅದರ ಕಾರ್ಯೋತ್ಪಾದನೆಯಲ್ಲಿರುವ ಅಸಾಮರ್ಥ್ಯದಿಂದ; ಲೋಕದಲ್ಲಿ ರಥ ಮುಂತಾದವುಗಳಲ್ಲಿ ಚೇತನವು ಅಧಿಷ್ಠಿತವಾಗಿದ್ದರೆ ಮಾತ್ರ ಅದರ ಪ್ರವೃತ್ತಿಯ ದರ್ಶನವಾಗುವುದು. ಅದರ ಸತ್ ಭಾವಕ್ಕೆ ಪ್ರಮಾಣದ ಅಭಾವವಿರುವುದರಿಂದ 'ಅಜಾಮ್' (ಶ್ವೇ.ಉ.4–5) ಮುಂತಾದ ಶ್ರುತಿಯಂತೆ ತೇಜೋವತಿಯಾದ ಆದಿಪ್ರಕೃತಿಯು ಅವ್ಯಾಕೃತದ ಪರವಾಗಿದೆ. ಆದರೆ ಶ್ರುತಿಗಳು 'ಸತ್ಯಂ ಜ್ಞಾನಮನಂತಂ ಬ್ರಹ್ಮ' (ತೈ.ಉ.2–1), 'ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಸ್ಸಂಭೂತಃ' (ತೈ.ಉ.2–1), 'ಸದೇವ ಸೋಮ್ಯೇದಮಗ್ರ ಆಸೀತ್' (ಛಾ.ಉ.6–2), 'ತದೈಕ್ಷತ ಬಹು ಸ್ಯಾಂ ಪ್ರಜಾಯೇಯೇತಿ' (ಛಾ.ಉ.6–2), 'ಯತೋ ವಾ ಇಮಾನಿ ಭೂತಾನಿ ಜಾಯಂತೇ' (ತೈ.ಉ.3–1), 'ಯಸ್ಸರ್ವಜ್ಞಸ್ಸರ್ವವಿತ್ ಯಸ್ಯ ಜ್ಞಾನಮಯಂ ತಪಃ । ತಸ್ಮಾದೇತದ್ಬ್ರಹ್ಮ ನಾಮ ರೂಪಮನ್ನಂ ಚ ಜಾಯತೇ' (ಮು.ಉ.1–1–9) ಇತ್ಯಾದಿ ಸಾವಿರವಿಧವಾಗಿ ಪರಮಾತ್ಮನೇ ಚೈತನ್ಯದಿಂದ ಜಗತ್ತನ್ನು ಉತ್ಪಾದಿಸಿದನು ಎಂದು ಕೇಳಿಬರುವುದರಿಂದ, ವಿಲಕ್ಷಣವಾದ ಕಾರ್ಯ–ಕಾರಣಭಾವದಿಂದ ಸೆಗಣಿ, ಚೇಳು, ಪುರುಷ, ಕೂದಲು, ನಾಳ ಮುಂತಾದವುಗಳು ಕಂಡುಬರುವುದು. ಆರಂಭಿಸುವ ಪರಿಣಾಮಕ್ಕೆ ವ್ಯತಿರಿಕ್ತವಾಗಿ ತಾತ್ವಿಕವಾಗಿ ಬೇರೆಯೇ ಆದ ಲಕ್ಷಣವುಳ್ಳ ವಿರುದ್ಧಪ್ರಕಾರದ ಕಾರ್ಯಗಳ ಉತ್ಪಾದನೆಯು ಸ್ವಪ್ನಪ್ರಪಂಚದ ಮುತ್ತಿನಚಿಪ್ಪಿನ ಬೆಳ್ಳಿಯಂತೆ ಕಂಡುಬರುವುದು. ಇಲ್ಲಿ ವಿವರ್ತವಾದವು ವಿವಕ್ಷಿತವಾಗಿ, 'ಸರ್ವಂ ತಂ ಪರಾದಾದ್ಯೋಽನ್ಯತ್ರಾತ್ಮನಸ್ಸರ್ವಂ ವೇದ' (ಬೃ.ಉ.4–4–6) ಮುಂತಾದ ಶ್ರುತಿಯಂತೆ ಆತ್ಮದಿಂದ ಹೊರತಾದ ಜಗತ್ತನ್ನು ಕಾಣುವುದು ದೂಷಿತವಾಗುವುದು. ಮಡಕೆ ಇದೆ, ವಸ್ತ್ರ ಇದೆ

ಮುಂತಾದ ಮಡಕೆಯ ಸ್ಫುರಣೆ, ವಸ್ತ್ರದ ಸ್ಫುರಣೆ ಎಂಬ ಸತ್ತಾಸ್ಫುರಣೆಯ ಅನುಭೂತಿಯನ್ನು ಹೊಂದುವ ಜಗತ್ತಿನಲ್ಲಿ ಮಣ್ಣಿನ ಮಡಕೆಗೆ ಮಣ್ಣು ಕಾರ್ಯವಾಗಿ ಸತ್ತಾಸ್ಫುರಣೆಯಾಗುವುದು ಆತ್ಮದ ಕಾರ್ಯವೇ ಆಗಿರುವುದು ಯುಕ್ತವೆಂದು, ಆತ್ಮವೇ ಜಗತ್ತಿನ ಉತ್ಪತ್ತಿಗೆ ಮೂಲಕಾರಣವು ಎಂಬ ಅಭಿಪ್ರಾಯದಿಂದ **ಬೀಜಸ್ಯಾಂತರಿವೇತಿ.**

ಬೀಜಸ್ಯಾಂತರಿವಾಂಕುರೋ ಜಗದಿದಂ ಪ್ರಾಗ್ನಿರ್ವಿಕಲ್ಪಂ
ಪುನರ್ಮಾಯಾಕಲ್ಪಿತದೇಶಕಾಲಕಲನಾವೈಚಿತ್ರ್ಯಚಿತ್ರೀಕೃತಮ್ ।
ಮಾಯಾವೀವ ವಿಜೃಂಭಯತ್ಯಾಪಿ ಮಹಾಯೋಗೀವ ಯಸ್ಸ್ವೇಚ್ಛಯಾ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ 2 ॥

ಇದಂ ಅನುಭೂತಿಯಾಗುವ ಸರ್ವ ***ಜಗತ್, ಪ್ರಾಕ್*** ಉತ್ಪತ್ತಿಯ ಮೊದಲು ***ನಿರ್ವಿಕಲ್ಪಂ*** ಭೋಕ್ತೃ-ಭೋಗ್ಯ ಮುಂತಾದ ವಿಕಲ್ಪರಹಿತ ಆತ್ಮಮಾತ್ರವೇ ಆಗಿರುವುದು; 'ಆತ್ಮಾ ವಾ ಇದಮೇಕ ಏವಾಗ್ರ ಆಸೀತ್' (ಐ.ಉ.1-1-1), 'ಸದೇವ ಸೋಮ್ಯೇದಮಗ್ರ ಆಸೀತ್' (ಛಾ.ಉ.6-2) ಮುಂತಾದ ಶ್ರುತಿಗಳಂತೆ. ಅದಕ್ಕೆ ದೃಷ್ಟಾಂತವಾಗಿ **ಬೀಜಸ್ಯೇತಿ.** ***ಬೀಜಸ್ಯಾಂತಃ*** ಬೀಜದೊಳಗಿರುವ ***ಅಂಕುರ ಇವ*** ಮೊಳಕೆಯಂತೆ. ಉಪಲಕ್ಷಣವಾಗಿ – ಚಿಗುರು, ಎಲೆ, ಹೂವು, ಹಣ್ಣು, ಕೊಂಬೆ, ಕಾಂಡ ರೂಪವಾಗಿರುವ ವೃಕ್ಷವು ಹೇಗೆ ಉತ್ಪತ್ತಿಯ ಮೊದಲು ನಿರ್ವಿಕಲ್ಪವಾಗಿ ಬೀಜ ಮಾತ್ರವೇ ಆಗಿರುವ ಹಾಗೆ. ***ಪುನಃ*** ಸೃಷ್ಟಿಯ ಬಳಿಕ ***ಮಾಯಾಕಲ್ಪಿತ*** ಈಶ್ವರಾಧಿಷ್ಠಾನವಾಗಿರುವುದೆಂದು ಕಲ್ಪಿತವಾಗಿ ***ದೇಶ ಕಾಲ*** ದೇಶ, ಕಾಲಗಳ ***ಕಲನಾ*** ಸಂಬಂಧದಿಂದ ***ವೈಚಿತ್ರ್ಯ ಚಿತ್ರೀಕೃತಮ್*** ವಿಚಿತ್ರವಾಗಿ, ನಾನಾವಿಧದ ಭೇದ ಭಿನ್ನತೆಯಿಂದ ವಿಭಜಿತವಾಗಿ ಇರುವುದು; 'ತಂ ನಾಮರೂಪಾಭ್ಯಾಮೇವ ವ್ಯಾಕ್ರಿಯತ' (ಬೃ.ಉ.3-4-7) ಎಂಬ ಶ್ರುತಿಯಂತೆ. ಇನ್ನು ಈಶ್ವರನಿಗೆ ಅದ್ವಿತೀಯವಾಗಿ ಬಾಹ್ಯಸಾಧನರಹಿತವಾಗಿ ಜಗತ್ತಿನ ಉತ್ಪಾದಕತ್ವವಿದೆಯೇ? ಲೋಕದಲ್ಲಿ ಕುಂಬಾರ ಮೊದಲಾದವರು ಬಾಹ್ಯಸಾಧನಗಳನ್ನು ಹೊಂದಿಯೇ ಕಾರ್ಯಗಳನ್ನು ಮಾಡುವುದನ್ನು ನೋಡಿ ಶಂಕೆಯಿಂದ ಹೀಗೆ ಪ್ರಶ್ನಿಸಿದೆ. ಈಶ್ವರನು ಅನಾದಿ ಅನಿರ್ವಚನೀಯ ಮಾಯಾಶಕ್ತಿಯಿಂದ ಒಡಗೂಡಿ ಸ್ವೇಚ್ಛೆಯಿಂದ ಮಾತ್ರವೇ ಐಂದ್ರಜಾಲಿಕರಂತೆ, ದೇವರ್ಷಿ ಮೊದಲಾದ ಯೋಗಿಗಳಂತೆ ಇಚ್ಛೆಯಿಂದ ಜಗತ್ತಿನ ಉತ್ಪಾದಕತ್ವವನ್ನು ಹೊಂದುವವನು ಎಂಬ ಅಭಿಪ್ರಾಯದ **ಮಾಯಾವೀವೇತ್ಯಾದಿನಾ.** ***ಯಃ*** ಪರಮೇಶ್ವರನು ***ಮಾಯಾವೀವ*** ಲೋಕ ಪ್ರಸಿದ್ಧವಾದ ಐಂದ್ರಜಾಲಿಕ ಮಾಯಾವಿಗಳಂತೆ ***ಮಾಹಾಯೋಗೀವ*** ವಿಶ್ವಾಮಿತ್ರ ಮೊದಲಾದ ಮಹಾಯೋಗಿಗಳಂತೆ ***ಸ್ವೇಚ್ಛಯಾ*** ಸ್ವಸಂಕಲ್ಪಮಾತ್ರದಿಂದ ***ವಿಜೃಂಭಯತಿ*** ಈ ಜಗತ್ತನ್ನು ಉತ್ಪಾದಿಸುವನು. 'ಇಂದ್ರೋ ಮಾಯಾಭಿಃ ಪುರುರೂಪ ಈಯತೇ' (ಬೃ.ಉ.4-5-19), ತದಾತ್ಮಾನಂ ಸ್ವಯಮಕುರುತ' (ತೈ.ಉ.2-7), 'ಸಚ್ಚತ್ಯಚ್ಚಾಭವತ್' (ತೈ.ಉ.2-6) ಮುಂತಾಗಿ ಶ್ರುತಿಯಿದೆ. ಮಾಯೆಯಿಂದಾಗಿ ಅದು ಸತ್ಯ, ಅದ್ವಿತೀಯವಾಗಿರುವುದಿಲ್ಲ, ಅದು ಕಲ್ಪಿತವಾಗಿರುವುದರಿಂದ. ಅದರ ಕಾರಣತ್ವದಿಂದಾಗಿ ಈಶ್ವರನಿಗೆ ವಿಕಾರಿತ್ವವಿಲ್ಲ, ಜಗತ್ಕಾರಣತ್ವವು ಅನಾದಿ ಅನಿರ್ವಚನೀಯವಾದ ಮಾಯಾಘಟಿತವಾಗಿ ಕಲ್ಪಿತವಾದ ಉಪಲಕ್ಷಣವಾಗಿದ್ದು ಅಲ್ಲಿ ವಿಕಾರಗಳನ್ನು ಆರೋಪಿಸಬಹುದಾಗಿದೆ. ಹಾಗಾಗಿ ಅಲ್ಲಿ ಯಾವುದೇ ದೋಷದ ಅಭಾವವಿರುವುದರಿಂದ ಬ್ರಹ್ಮವೇ ತನ್ನಿಂದ ಅಭಿನ್ನವಾದ ಸಕಲ ಜಗತ್ತಿನ ಉತ್ಪತ್ತಿ ಸ್ಥಿತಿ ಲಯಕ್ಕೆ ಹೇತುವಾಗಿರುವುದು ಎಂಬ ಭಾವವು. {2}

ಜಗತ್ತಿನ ಕಾರಣವು ಅಸತ್ ಆಗಿದ್ದರೂ, ಮಣ್ಣಿನ ಮುದ್ದೆಯ ನಾಶದಿಂದಲೇ ಮಡಕೆಯ ಉತ್ಪತ್ತಿಯಾಗುವುದು ಕಂಡುಬರುವಂತೆ ಜಾಗ್ರತ ಮೊದಲಾದ ಸಮಯದ ಕಾರ್ಯಗಳು ಕೂಡ ಅಸತ್ ಆಗಿರುವಂತೆ ಕಂಡುಬಂದು, ಈ

ದೃಷ್ಟಾಂತದಂತೆ ಜಗತ್ತುಕೂಡ ಹಾಗೆಯೇ ಆಗಿರಬಹುದೆಂಬ ಅನುಮಾನದಿಂದ, 'ಅಸದ್ವಾ ಇದಮಗ್ರ ಆಸೀತ್' (ತೈ.ಉ.2-7) ಎಂಬ ಶ್ರುತಿಯಂತೆ ಜಗತ್ತು ಅಸತ್ ಎಂದು ವಾದಮಾಡುವುದೋ ಎಂಬ ಶಂಕೆಗೆ **ಯಸ್ಯೈವೇತಿ.**

ಯಸ್ಯೈವ ಸ್ಫುರಣಂ ಸದಾತ್ಮಕಮಸತ್ಕಲ್ಪಾರ್ಥಗಂ ಭಾಸತೇ
ಸಾಕ್ಷಾತ್ತತ್ತ್ವಮಸೀತಿ ವೇದವಚಸಾ ಯೋ ಬೋಧಯತ್ಯಾಶ್ರಿತಾನ್ ।
ಯತ್ಸಾಕ್ಷಾತ್ಕರಣಾದ್ಭವೇನ್ನ ಪುನರಾವೃತ್ತಿರ್ಭವಾಂಭೋನಿಧೌ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ 3 ॥

ಯಸ್ಯ ಪರಮೇಶ್ವರನ ಸ್ವರೂಪದಿಂದ ಪ್ರತ್ಯಕ್ಷ ಅಭಿನ್ನವಾದ ***ಸದಾತ್ಮಕಂ*** ಸತ್ ರೂಪದ ***ಸ್ಫುರಣಮೇವ*** ಚೈತನ್ಯವೇ ***ಅಸತ್ಕಲ್ಪಾರ್ಥಗಂ*** ಅಸತ್ ಆಗಿರುವ, ಸ್ವತಃ ಸತ್ತಾರಹಿತ, ಅನಿರ್ವಚನೀಯ ಎಂಬ ಅರ್ಥದಲ್ಲಿ. ವಿಯತ್ ಮೊದಲಾದ ಪದಾರ್ಥಗಳಲ್ಲಿ ನಿಷ್ಠವಾಗಿರುವಾಗ ***ಭಾಸತೇ*** ಪ್ರಕಾಶಿಸುವುದು. ಇಲ್ಲಿಯ ಭಾವ ಹೀಗಿದೆ: ಸತ್ ಕಾರಣತ್ವವಿರುವ ಜಗತ್ತಿನಲ್ಲಿ ಮಡಕೆ, ವಸ್ತ್ರ ಮುಂತಾದವುಗಳು ಅನುವೃತ್ತಿಯಿಂದ ಅಸತ್ ಆಗಿವೆ, ಅವು ಸತ್ ಅಲ್ಲ. ಯಾಕೆ? ಅದರಲ್ಲಿರುವ ಸತ್ತೆಯ ಸ್ವಪ್ರಕಾಶತ್ವದಿಂದ ಅಲ್ಲಿ ವರ್ತಮಾನವಿರುವ ಜಗತ್ತು ಕುರುಡಾಗಿರುವುದರಿಂದ. ಜಗತ್ತನ್ನು ಸತ್ ಸುತ್ತುವರೆದು ಪ್ರಕಾಶಿಸುತ್ತದೆ; ಹಾಗೆ ಸ್ವತಃ ಸತ್ತ್ವಪ್ರಕಾಶರಹಿತವಾದ ಜಗತ್ತು ಅದರಲ್ಲಿ ಅಧಿಷ್ಠಾನವಾಗಿರುವ ಸತ್ತೆಯ ಪ್ರಕಾಶದಿಂದಲೇ ಸತ್ ಪ್ರಕಾಶದಂತೆ ಕಂಡುಬರುವುದು. ಅದರಲ್ಲಿರುವ ಮಣ್ಣಿನ ಕಾರಣತ್ವದಿಂದಲ್ಲದೆ ಮಣ್ಣಿನಮುದ್ದೆಯ ನಾಶವು ಮಡಕೆಗೆ ಕಾರಣವಲ್ಲ. ಜಾಗ್ರತ ಮುಂತಾದ ಅವಸ್ಥೆಗಳ ಕಾರ್ಯವು ಅಸತ್‌ಪೂರ್ವಕವೆನ್ನುವುದು ನಮಗೆ ಸಮ್ಮತವಲ್ಲ; ಸುಷುಪ್ತಿಯಲ್ಲಿನ ಆತ್ಮಸತ್ತ್ವವು ಸಾಧಿಸಲ್ಪಟ್ಟಿರುವುದರಿಂದ, ಸುಷುಪ್ತಿಕಾಲದ ಸತ್ ರೂಪದ ಆತ್ಮದ ಕಾರಣತ್ವವು ಅಂಗೀಕೃತವಾಗಿದೆ. 'ಅಸದ್ವಾ ಇದಮಗ್ರ ಆಸೀತ್' (ತೈ.ಉ.2-7) ಎಂಬ ಶ್ರುತಿಯು ಅಭಿವ್ಯಕ್ತಪಡಿಸುವ ಸತ್ ಕಾರಣದ ಪರವಾಗಿದ್ದು, 'ಕಥಮಸತಸ್ಸಜ್ಜಾಯೇತ' (ಛಾ.ಉ.6-2-2) ಎಂಬ ಶ್ರುತಿಯು ಅಸತ್ ವಾದವನ್ನು ಪ್ರತಿಷೇಧಿಸುವುದು. ಅಥವಾ ಮಡಕೆ, ವಸ್ತ್ರ ಮೊದಲಾಗಿ ಸತ್ತ್ವದಿಂದ ಪ್ರತೀತವಾಗುವ ಜಗತ್ತು ಅಸತ್ ಕಲ್ಪನೆಯಿಂದ ಅಧ್ಯಸ್ತವಾಗಿದೆ ಎಂದು ಹೇಗೆ ಹೇಳಲ್ಪಡುತ್ತದೆ? ಎಂಬ ಶಂಕೆಗೆ **ಯಸ್ಯೈವೇತ್ಯಾದಿನಾ.** ಸತ್ಪ್ರಕಾಶರೂಪದಲ್ಲಿ ಅಧಿಷ್ಠಿತವಾಗಿರುವ ಆತ್ಮಸತ್ತೆಯೇ ಆರೋಪಿತ ಜಗತ್ತಿಗೆ ನಿಷ್ಠವಾಗಿರುವಂತೆ ಪ್ರತೀತವಾಗುವುದೇ ವಿನಃ ಅದರ ಸ್ವತಃ ಸತ್ತ್ವದಿಂದಲ್ಲ. 'ಅಥಾತ ಆದೇಶೋ ನೇತಿ ನೇತಿ' (ಬೃ.ಉ.4-3-6), 'ನೇಹ ನಾನಾಸ್ತಿ ಕಿಂ ಚ ನ' (ಬೃ.ಉ.6-4-19) ಮುಂತಾದ ಶ್ರುತಿಗಳು ಪ್ರಪಂಚವನ್ನು ಪ್ರತಿಷೇಧಿಸುವುದರಿಂದ ಭ್ರಾಂತಿಯಿಂದಲೇ ಅದು ಪ್ರತೀತವಾಗುವುದು ಎಂದು ನಿರ್ಧರಿಸಬಹುದು. ಅದಕ್ಕೆ ಸತ್ ಲಕ್ಷಣವನ್ನು ಅಂಗೀಕರಿಸುವುದು ಮೊಲದ ಕೊಂಬಿಗೆ ಸಮನಾಗುವುದು. ಅಂದರೆ ಚೈತನ್ಯವು ಅದರಲ್ಲಿ ಅಪರೋಕ್ಷವಾಗಿ ಪ್ರತೀತವಾಗುವುದು ಎಂಬುದು ತಾತ್ಪರ್ಯವು. ಈ ಅಸತ್ಯವಾದ ಪ್ರಪಂಚವನ್ನು ಸತ್ಯತ್ವದ ಬುದ್ಧಿಯಿಂದ ನೋಡುವುದರಿಂದ ದೇಹ ಮೊದಲಾದವುಗಳು ಆತ್ಮ, ಬುದ್ದಿ ಮುಂತಾದವುಗಳು ಆತ್ಮ ಇತ್ಯಾದಿಯಾಗಿ ಕಂಡುಬಂದು ಈ ಸಕಲ ಸಂಸಾರಕ್ಕೆ ಕಾರಣವಾಗಿದೆ. ಇದಕ್ಕೆ ನಿವೃತ್ತಿಯಾಗಿ ಗುರುವು ಉಪದೇಶಿಸಿರುವ ತತ್ತ್ವಮಸಿ ಮುಂತಾದ ವಾಕ್ಯದಿಂದ ಜನಿತವಾದ ಅಪರೋಕ್ಷ ಜ್ಞಾನದಿಂದ ಮೂಲ ಅಜ್ಞಾನದ ನಿವೃತ್ತಿಯಾಗುವುದು ಎಂಬ ಅಭಿಪ್ರಾಯದ **ಸಾಕ್ಷಾದಿತ್ಯಾದಿನಾ.** ***ಯೋ*** ಗುರುರೂಪದ ಪರಮೇಶ್ವರನನ್ನು ***ಆಶ್ರಿತಾನ್*** ವಿಧಿವತ್ತಾಗಿ ಆಶ್ರಯಿಸಿ ಪಡೆದ ***ತತ್ತ್ವಮಸೀತಿ ವೇದವಚಸಾ*** ಸತ್ಯವಾದ ಯಾವ ಜಗತ್ಕಾರಣ ಅದ್ವಿತೀಯವಾದ ಬ್ರಹ್ಮವಿದೆಯೋ ಅದೇ ನೀನಾಗಿರುವೆ, ನೀನು ಅದರಿಂದ ಭಿನ್ನವಾಗಿಲ್ಲ ಎಂಬ ವೇದವಾಕ್ಯದಿಂದ ***ಸಾಕ್ಷಾತ್*** ಅಪರೋಕ್ಷವಾಗಿ ತತ್ತ್ವವನ್ನು ***ಬೋಧಯತಿ*** ಜ್ಞಾಪಿಸುತ್ತದೆ ಎಂಬ ಅರ್ಥ. ಇನ್ನು ಸ್ವಲ್ಪ ಅಜ್ಞತ್ವ-ಸರ್ವಜ್ಞತ್ವ ಮುಂತಾದ ವಿರುದ್ಧ

ಧರ್ಮಗಳಿರುವ ಜೀವ–ಈಶ್ವರರಿಗೆ ಅಯೋಗ್ಯವಾಗಿರುವ ಅಭೇದವನ್ನು ವೇದಗಳು ಹೇಗೆ ಬೋಧಿಸುತ್ತವೆ? ಎಂದು ತಿಳಿಸಲು 'ಅವನೇ ದೇವದತ್ತ' ಎಂಬ ವಾಕ್ಯದಲ್ಲಿ ಆಗ–ಈಗ, ಅಲ್ಲಿ–ಇಲ್ಲಿ ಮುಂತಾದ ವಿರುದ್ಧ ಅಂಶಗಳನ್ನು ತ್ಯಜಿಸಿದರೆ ಅವಿರುದ್ಧವಾಗಿರುವ ಅಂಶವಾಗಿ ಪಿಂಡ ಮಾತ್ರವು ಲಭಿಸಿ, ಭಾಗತ್ಯಾಗ ಲಕ್ಷಣದಿಂದ ಹೇಗೆ ಅಭೇದವನ್ನು ಬೋಧಿಸುವುದೋ ಹಾಗೆಯೇ ತತ್ತ್ವಮಸಿ ಮುಂತಾದ ವಾಕ್ಯಗಳಲ್ಲಿಯೂ ಜೀವ–ಈಶ್ವರರಲ್ಲಿ ಮಾಯೆ, ಅಂತಃಕರಣ ಇತ್ಯಾದಿ ಉಪಾಧಿಗಳ ನಿಮಿತ್ತವಾಗಿರುವ ಸ್ವಲ್ಪ ಅಜ್ಞತ್ವ–ಸರ್ವಜ್ಞತ್ವ ಮುಂತಾದ ವಿರುದ್ಧ ಅಂಶಗಳನ್ನು ತ್ಯಜಿಸಿದಾಗ ಉಭಯರಲ್ಲಿರುವ ಅವಿರುದ್ಧ ಚಿತ್ ಮಾತ್ರವೇ ಉಳಿದು ಅಭೇದವು ಬೋಧವಾಗುವುದು. ಈ ವಾಕ್ಯಗಳಿಂದ ಜನಿತವಾದ ಜ್ಞಾನದಿಂದ ಸಂಸಾರನಿವೃತ್ತಿಯಾದರೂ ಅದು ಸುಷುಪ್ತಿ ಪ್ರಳಯಗಳಂತೆ ಪುನರಪಿ ಹೇಗೆ ಉದ್ಭವವಾಗುವುದು? ಎಂಬ ಶಂಕೆಗೆ **ಯತ್ಸಾಕ್ಷಾತ್ ಇತ್ಯಾದಿನಾ.**

ಯತ್ಸಾಕ್ಷಾತ್ಕರಣಾತ್ ಯಾವ ಸ್ವಪ್ರಕಾಶಿತವಾಗಿ ತೋರುವ ಸಚ್ಚಿದಾನಂದ ಸ್ವರೂಪದ ಬ್ರಹ್ಮನ ಸಾಕ್ಷಾತ್ಕಾರದಿಂದ ಅಪರೋಕ್ಷವಾಗಿ ಸೋಹಂ ಅಸ್ಮಿ, ನಾನೇ ಅವನಾಗಿದ್ದೇನೆ ಎಂಬ ಜ್ಞಾನದಿಂದ ***ಭವಾಂಭೋನಿಧೌ*** ಸಂಸಾರಸಮುದ್ರದಲ್ಲಿ ***ಪುನಃ*** ಮತ್ತೆ ***ಆವೃತ್ತಿಃ*** ಚಕ್ರ ತಿರುಗಿದಂತೆ ಆಗಮಿಸುವುದು ***ನ ಭವೇತ್*** ಇರುವುದಿಲ್ಲ. 'ತರತಿ ಶೋಕಮಾತ್ಮವಿತ್' (ಛಾ.ಉ.7–1–3), 'ಬ್ರಹ್ಮ ವೇದ ಬ್ರಹ್ಮೈವ ಭವತಿ' (ಮುಂ.ಉ.3–2–1), 'ನ ಸ ಪುನರಾವರ್ತತೇ' (ಕಾಲಾಗ್ನಿ.2) ಮುಂತಾದ ಶ್ರುತಿಗಳು ನೂರಾರಿವೆ. ಸುಷುಪ್ತಿ, ಪ್ರಳಯಗಳಲ್ಲಿ ಮೂಲ ಅಜ್ಞಾನವು ವಿದ್ಯಮಾನವಾಗುವುದರಿಂದ ಪುನರುತ್ಥಾನವಿದೆ, ಅವನಿಗೆ ವಾಕ್ಯಜನ್ಯ ಜ್ಞಾನದಿಂದ ಅಜ್ಞಾನವು ನಷ್ಟವಾಗಿ ಮುಕ್ತನಾದವನಿಗೆ ಪುನರುತ್ಥಾನವಿಲ್ಲ ಎಂಬ ಭಾವ. {3}

ಜಗತ್ತು ಆತ್ಮಸತ್ತೆಯಿಂದ ತೋರುವುದಾದರೆ, ಅದರಹಾಗೆ ಏಕಿಲ್ಲ? ಆತ್ಮದಂತೆಯೇ ಜಗತ್ತು ಕೂಡ ಸ್ವತಃ ಸತ್ತಾಪ್ರಕಾಶದಿಂದಿದ ಕೂಡಿದೆಯೇ ಎಂಬ ಶಂಕೆಗೆ ಆತ್ಮದಂತೆ ಜಗತ್ತು ಕೂಡ ಸ್ವತಃ ಸತ್ತ್ವವೇ ಆಗಿದ್ದರೆ ಅದಕ್ಕೆ ಉತ್ಪತ್ತಿ ವಿನಾಶಗಳು ಇರುತ್ತಿರಲಿಲ್ಲ, ಅದು ಕರಣಗಳಿಗೆ ಅನಪೇಕ್ಷಿತವಾಗಿ ಸರ್ವಕಾಲವೂ ಕಂಡುಬರುತ್ತಿರಲಿಲ್ಲ. ಹಾಗಾಗಿ ಜಗತ್ತಿಗೆ ಸ್ವತಃ ಸತ್ತಾಪ್ರಕಾಶವಿಲ್ಲ, ಆದರೆ ಆತ್ಮದ ಸತ್ತಾಪ್ರಕಾಶದಿಂದಲೇ ಜಗತ್ತಿಗೂ ಸತ್ತಾಪ್ರಕಾಶವಿರುವಂತೆ ತೋರಿಬರುವುದು. ಇನ್ನು ನಿಮ್ಮ ಮತದಂತೆ ಈ ಎಲ್ಲಾ ಜಗತ್ತು ಆತ್ಮದಲ್ಲಿಯೇ ಅಧ್ಯಸ್ತವಾಗಿರುವುದಾದರೆ ಕರಣ ಮುಂತಾದವುಗಳ ಆವಶ್ಯಕತೆಯೇನಿದೆ? ಪ್ರಕಾಶರೂಪದ ಆತ್ಮದ ಸಂಬಂಧವಿರುವುದಾದರೆ ಎಲ್ಲವೂ ಎಲ್ಲಕಾಲಕ್ಕೂ ಯಾಕೆ ಭಾಸವಾಗುವುದಿಲ್ಲ? ಎಲ್ಲರಲ್ಲಿರುವ ಚೈತನ್ಯವು ವಿರೋಧವಾದ ಅಜ್ಞಾನದಿಂದ ಆವೃತವಾಗಿರುವುದು ಹೇಗೆ ಜಗತ್ತಿನಲ್ಲಿ ಕಂಡುಬರುವುದು? ಅಜ್ಞಾನ ಚೈತನ್ಯದಿಂದ ಅತಿರಿಕ್ತವಾಗಿರುವುದೆಂಬ ಭಾವವು ಅದಕ್ಕೆ ವಿರೋಧವಾಗುವುದಿಲ್ಲವೇ? ಎಂಬ ಆಶಂಕೆಗಳಿಗೆ ಉತ್ತರವಾಗಿ **ನಾನಾಚ್ಛಿದ್ರೇತಿ.**

ನಾನಾಚ್ಛಿದ್ರಘಟೋದರಸ್ಥಿತಮಹಾದೀಪಪ್ರಭಾಭಾಸ್ವರಂ
ಜ್ಞಾನಂ ಯಸ್ಯ ತು ಚಕ್ಷುರಾದಿಕರಣದ್ವಾರಾ ಬಹಿಸ್ಸ್ಪಂದತೇ ।
ಜಾನಾಮೀತಿ ತಮೇವ ಭಾಂತಮನುಭಾತ್ಯೇತತ್ಸಮಸ್ತಂ ಜಗತ್
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ 4 ॥

ನಾನಾಚ್ಛಿದ್ರ ಅನೇಕ ರಂಧ್ರಗಳುಳ್ಳ ***ಘಟಸ್ಯ ಉದರೇ ಸ್ಥಿತ*** ಕುಂಭದ ಒಳಗಿರುವ ***ಮಹಾದೀಪಪ್ರಭಾ ಭಾಸ್ವರಂ*** ದೊಡ್ಡದಾದ ದೀಪದ ಬೆಳಕಿನಂತೆಯೇ ಭಾಸವಾಗುತ್ತಿರುವ; ದೀಪಕ್ಕೆ ತಮಸ್ಸಿನ ವಿರೋಧಿ ಲಕ್ಷಣವಾದ ಪ್ರಕಾಶಸ್ವಭಾವವಿರುವುದು. ***ಯಸ್ಯ*** ಪರಮೇಶ್ವರನು ಕುಂಭದಂತೆ ಅನೇಕ ಛಿದ್ರಗಳಿರುವ ದೇಹದಲ್ಲಿ, ಅಂತಃಕರಣದಲ್ಲಿ ಪ್ರತಿಬಿಂಬಿತವಾಗಿ ಸಾಕ್ಷಿರೂಪದಲ್ಲಿ ಇರುವವನು. ***ಜ್ಞಾನಂ*** ಚೈತನ್ಯವು ***ಚಕ್ಷುರಾದಿಕರಣದ್ವಾರಾ***

ಕಣ್ಣು, ಕಿವಿ ಮುಂತಾದ ಇಂದ್ರಿಯಗಳ, ವಿಷಯಗಳನ್ನು ಸಂಗ್ರಹಿಸುವ ಸಾಧನಗಳ ಮೂಲಕ ಆ ಛಿದ್ರಗಳಿಂದ ***ಬಹಿಃ*** ವಿಷಯಪ್ರದೇಶದಲ್ಲಿ ***ಸ್ಪಂದತೇ*** ಸಕ್ರಿಯವಾಗಿರುವುದು. ಇಂದ್ರಿಯಗಳು ಸಂಗ್ರಹಿಸಿದ ವಿಷಯಗಳು ಅವುಗಳಿಂದ ಚೈತನ್ಯದ ಉಪಾಧಿಯಿರುವ ಅಂತಃಕರಣಕ್ಕೆ ತಲುಪಿ, ಅಂದರೆ ಅದು ಪ್ರತಿಬಿಂಬಿತವಾಗಿರುವ ಚೈತನ್ಯವನ್ನೇ ತಲುಪಿದಾಗ ವಿಷಯವು ಭಾಸವಾಗುವುದು ಎಂಬ ಅರ್ಥ. ಇದರ ಅಭಿಪ್ರಾಯ ಹೀಗಿದೆ: ಚೈತನ್ಯವಾದರೋ ಸ್ವತಃ ಅಜ್ಞಾನವಿರೋಧಿಯಾಗಿ ಅಂತಃಕರಣದಲ್ಲಿ ಪ್ರತಿಬಿಂಬಿತವಾದ ಸತ್ತೆಗೆ ವಿರೋಧಿಯಾಗಿರುವುದು. ಹಾಗಾಗಿ ಅಂತಃಕರಣದ ಧರ್ಮವಾಗಿ ರಾಗ ಮೊದಲಾದವುಗಳ ಸ್ವ ಸತ್ತೆಯು ಸರ್ವದಾ ಭಾಸವಾಗುತ್ತವೆ. ಮಡಕೆ, ವಸ್ತ್ರ ಮೊದಲಾದ ವಿಷಯಗಳ ಬಿಂಬಚೈತನ್ಯದಲ್ಲಿ ಬ್ರಹ್ಮವೇ ಅಧ್ಯಸ್ತವಾಗಿರುತ್ತದೆ. ಅಂತಃಕರಣವು ಕಣ್ಣು ಮುಂತಾದವುಗಳ ಮೂಲಕ ವಿಷಯದೇಶವನ್ನು ಹೊಗುವಾಗ ಮಡಕೆಯಲ್ಲಿ ಅಧಿಷ್ಠಿತವಾಗಿರುವ ಬಿಂಬಚೈತನ್ಯದ ಉಪಾಧಿಯು ವಿದಿತವಾಗುವುದು. ಮತ್ತು ಈ ಉಪಾಧಿಯ ಸಂಬಂಧದಿಂದ ಅಂತಃಕರಣವು ಪ್ರತಿಬಿಂಬದಲ್ಲಿರುವ ಸಾಕ್ಷಿಚೈತನ್ಯವನ್ನು ಮಡಕೆ ಮೊದಲಾದವುಗಳಲ್ಲಿ ಅಧಿಷ್ಠಿತ ಚೈತನ್ಯವೇ ಎಂದು ತಿಳಿಯುವುದು. ಆಯಾಯ ಸಾಕ್ಷಿಚೈತನ್ಯಗಳು ಅದರ ಅಜ್ಞಾನದ ನಿವೃತ್ತಿಮಾಡುವುದರಿಂದ ಮಡಕೆ ಮೊದಲಾದ ವಿಷಯಗಳು ಭಾಸವಾಗುವುವು, ಆದರೆ ಎಲ್ಲ ಕಾಲದಲ್ಲಿಯೂ ಅಲ್ಲ. ಹಾಗಾಗಿ ಅಜ್ಞಾನದ ಆವರಣವನ್ನು ಭಂಗಗೊಳಿಸುವಲ್ಲಿ ಕಣ್ಣು ಮೊದಲಾದವುಗಳ ಸಹಕಾರ ಪಡೆಯುವುದರಲ್ಲಿ ಯಾವ ದೋಷವೂ ಇಲ್ಲ.

ಅಚಿದ್ರೂಪದ ಆತ್ಮನಿಷ್ಠ ಜ್ಞಾನದಿಂದ ಮಡಕೆ ಮೊದಲಾದ ವಿಷಯಗಳು ಭಾಸವಾಗುತ್ತವೆ ಎಂದು ಕೆಲವರು ಹೇಳುತ್ತಾರೆ. ಅದು ಸರಿಯಲ್ಲ. ಆತ್ಮನಿಷ್ಠ ಜ್ಞಾನದಿಂದ ಜಡವಸ್ತುಗಳು ಪ್ರಕಾಶಿತವಾಗಿ ಮಡಕೆ ಮುಂತಾದ ವಿಷಯಗಳಲ್ಲಿ ಸಂಯೋಗ ಮುಂತಾದ ಸಂಬಂಧಗಳು ಇಲ್ಲದಿರುವುದರಿಂದ ಸ್ವರೂಪಸಂಬಂಧವು ಮಾತ್ರವೇ ಪ್ರಸಕ್ತವಾಗಿರುವುದು. ಕೆಲವರು ವಿಷಯನಿಷ್ಠ ಸ್ಫುರಣೆಯಿಂದ ಮಡಕೆ ಮುಂತಾದವುಗಳು ಕಂಡುಬರುತ್ತವೆ ಎನ್ನುತ್ತಾರೆ. ಅದೂ ಕೂಡ ಅಲ್ಲ. ವಿಷಯನಿಷ್ಠವಾಗಿರುವುದಕ್ಕೆ ಆತ್ಮದೊಡನೆ ಸಂಬಂಧ ಇಲ್ಲದಿರುವುದರಿಂದ 'ನಾನು ತಿಳಿದಿರುವೆನು' ಎಂಬ ಸಂಬಂಧವೂ ಇರುವುದಿಲ್ಲ. ಹಾಗಾಗಿ ಸ್ವಪ್ರಕಾಶಿತ ಸಾಕ್ಷಿ ಚೈತನ್ಯದ ಸಂಬಂಧದಿಂದಲೇ ಮಡಕೆ ಮುಂತಾದ ವಿಷಯಗಳು ಅರಿವಿಗೆ ಬರುತ್ತವೆ. ಅದರಂತೆಯೇ **ಜಾನಾಮೀತ್ಯಾದಿನಾ.** ಮಡಕೆ ಮುಂತಾದ ವಿಷಯಗಳಿಗೆ ಬದ್ಧವಾಗಿ ***ಭಾಂತಂ*** ಪ್ರಕಾಶಮಾನವಾದ ***ತಮೇವ*** ಸಾಕ್ಷಿತ್ವದಿಂದ ಕೂಡಿರುವ ಪರಮೇಶ್ವರನೇ ***ಅನು*** ಬಳಿಕ ***ಏತತ್*** ವಿವಿಧ ಶಬ್ದ, ಪ್ರತ್ಯಯಗಳಿಂದ ಲಭಿಸಿರುವ ***ಸಮಸ್ತಂ*** ಎಲ್ಲವೂ ***ಜಗತ್ ಭಾತಿ*** ಜಗತ್ತಾಗಿ ಪ್ರಕಾಶಿಸುತ್ತದೆ. ಅದು ಸ್ವತಃ ಭಾಸವಾಗುವುದಿಲ್ಲ, ಆದರೆ ಅಗ್ನಿಯು ಸುಡುತ್ತದೆ ಎಂದು ಅನ್ವಯವಾಗುವಂತೆ ಸುಡುವುದು ಎಂಬ ಅಧ್ಯಾಸದಂತೆ ಎಂಬ ಅರ್ಥದಲ್ಲಿ. ಹಾಗೆಂದು ಶ್ರುತಿಯು 'ತಮೇವ ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ' (ಮು.ಉ.2-2-10) ಎಂದು ಹೇಳುತ್ತದೆ. {4}

ಇನ್ನು ಕೆಲವರು ಅವೆಲ್ಲವೂ ಮನಸಿನಲ್ಲಿರುವ ಚಿತ್ರಗಳು, ದೇಹಕ್ಕೆ ಅತಿರಿಕ್ತವಾದ ಆತ್ಮನೇ ಇಲ್ಲವಾದುದರಿಂದ ದೇಹದಿಂದಾಗಿಯೇ ಹೋಗುತ್ತೇನೆ, ಕುಳಿತಿದ್ದೇನೆ, ನಾನು ಸ್ಥೂಲವಾಗಿದ್ದೇನೆ, ನಾನು ಕೃಶವಾಗಿದ್ದೇನೆ ಇತ್ಯಾದಿಯಾದ ಅನುಭವಗಳು ಆಗುತ್ತವೆ ಎನ್ನುವರು. ಇತರ ಕೆಲವರು ಅದನ್ನು ಕೈಯೆತ್ತಿ ಖಂಡಿಸುತ್ತಾ ಹೇಳುತ್ತಾರೆ: ಜೀವಾತ್ಮನ ನಿರ್ಗಮನವಾದಾಗ ಶರೀರವು ಮರಣಹೊಂದುವುದು ಕಂಡುಬರುವುದರಿಂದ, ಮಾತನಾಡುತ್ತೇನೆ, ಕೇಳುತ್ತೇನೆ ಇತ್ಯಾದಿಗಳು ಬುದ್ಧಿಯಿಂದ ಅರಿಯಲ್ಪಡುವುದರಿಂದ, ಇಂದ್ರಿಯಗಳೇ ಆತ್ಮವಾಗಿದೆ. ಮತ್ತೂ ಕೆಲವರು ಅಲ್ಪಬುದ್ಧಿಯವರಾದಾಗ ಕಣ್ಣು ಮುಂತಾದ ಇಂದ್ರಿಯಗಳು ನಾಶವಾಗಿ ಪ್ರಾಣಸತ್ತ್ವದಿಂದಾಗಿ ಜೀವನದರ್ಶನವಾಗುವುದು, ಇಲ್ಲದಿದ್ದರೆ ಕಾಣುವುದಿಲ್ಲವಾದುದರಿಂದ ಉಣ್ಣುತ್ತೇನೆ, ಕುಡಿಯುತ್ತೇನೆ ಮುಂತಾಗಿ ಪ್ರತೀತವಾಗಿ ಪ್ರಾಣವೇ ಆತ್ಮವಾಗಿದೆ ಎಂದು ಪೂತ್ಕರಿಸುತ್ತಾರೆ. ಇತರರು ಪ್ರಾಣವು ಬಾಹ್ಯವಾಯುವಾಗಿ ಜಡತ್ವವಿದ್ದು ಭೋಕ್ತೃತ್ವವು ಅಸಂಭವವಾಗುವುದರಿಂದ ಮನಸ್ಸೇ ಚೇತನವೂ ಭೋಕ್ತೃವೂ ಆಗಿರುವ ಆತ್ಮವು

ಎಂದು ಹೇಳುತ್ತಾರೆ. ಯೋಗಾಚಾರದಲ್ಲಿ 'ನನ್ನ ಮನಸ್ಸು' ಎನ್ನುವಾಗ ಮನಸ್ಸಿನ ಭಿನ್ನತೆಯು ಪ್ರತೀತವಾಗುವುದರಿಂದ ಆದರ ಆತ್ಮತ್ವವು ಅಸಂಭವವಾಗಿದೆ. ಹಾಗಾಗಿ ಕ್ಷಣಿಕವಿಜ್ಞಾನವು ನಾನು ಎಂದು ಪ್ರತೀತವಾಗುವ ಬುದ್ಧಿ ಶಬ್ದ ಪರ್ಯಾಯವಾಗಿ ಆತ್ಮವಾಗಿದೆ ಎಂದು ಜಪಿಸುತ್ತಾರೆ. ಅದನ್ನು ಧಿಕ್ಕರಿಸಿ ಕೆಲವರು ಅದು ಮಿಂಚಿನಬೆಳಕಿನಂತೆ ಕ್ಷಣಿಕವಾಗಿರುವುದರಿಂದ ಅದರ ಆತ್ಮತ್ವವು ಸಿದ್ಧವಾಗುವುದಿಲ್ಲ, ಸುಷುಪ್ತಿಯಲ್ಲಿ ಅದರ ಅಭಾವವಿರುವುದರಿಂದ ಮತ್ತು ಎಲ್ಲರಲ್ಲಿಯೂ ಅದು ಸಮಾನವಾಗಿ ಇಲ್ಲದಿರುವುದರಿಂದ ಶೂನ್ಯವೇ ಆತ್ಮವಾಗಿರುವುದು ಎಂದು ಉದ್ಗರಿಸುತ್ತಾರೆ. ಅವರೆಲ್ಲರೂ ತಮ್ಮ ತಮ್ಮ ಪಕ್ಷದ ಧಾರ್ಷ್ಟ್ಯತೆಯನ್ನು ಪ್ರತಿಪಾದಿಸಿದರೂ ಯಾವ ಶ್ರುತಿಯನ್ನು ಅದಕ್ಕೆ ಉದಾಹರಿಸುತ್ತಾರೆ? ಇತರರು ಚೇತನದಿಂದ ಬೇರೆಯಾದುದನ್ನೇ ಆತ್ಮಸ್ವರೂಪವೆಂದು ಫೂತ್ಕರಿಸುತ್ತಾರೆ. ಎಲ್ಲರೂ ದೇವರು ಕೊಟ್ಟಿರುವ ಚಿತ್ತದ ಭ್ರಾಂತಿಯಿಂದ ಸಕಲ ಶ್ರುತಿ ಸ್ಮೃತಿ ಇತಿಹಾಸ ಪುರಾಣ ನ್ಯಾಯ ವಿದ್ವತ್ತುಗಳಲ್ಲಿ ಪ್ರತ್ಯಕ್ಷವಾಗಿರುವುದಕ್ಕೆ ವಿರುದ್ಧಾರ್ಥವನ್ನು ಪರಿಗ್ರಹಿಸುವವರಾಗಿರುವರು. ಇವರೆಲ್ಲರ ಮಾರ್ಗಗಳೂ ಆತ್ಮದ ಶ್ರೇಯಸ್ಸಿಗಾಗಿಯಲ್ಲದೆ, ಸ್ವಪ್ನವನ್ನು ಅನುಸರಿಸುವವರಂತೆ ಇದೆ ಎಂಬ ಅಭಿಪ್ರಾಯದಿಂದ **ದೇಹಂ ಪ್ರಾಣಮಪೀತಿ.**

ದೇಹಂ ಪ್ರಾಣಮಪೀಂದ್ರಿಯಾಣ್ಯಪಿ ಚಲಾಂ ಬುದ್ಧಿಂ ಚ ಶೂನ್ಯಂ ವಿದುಃ
ಸ್ತ್ರೀಬಾಲಾಂಧಜಡೋಪಮಾಸ್ತ್ವಹಮಿತಿ ಭ್ರಾಂತಾ ಭೃಶಂ ವಾದಿನಃ ।
ಮಾಯಾಶಕ್ತಿವಿಲಾಸಕಲ್ಪಿತಮಹಾವ್ಯಾಮೋಹಸಂಹಾರಿಣೇ
ತಸ್ಮೈ ಶ್ರೀ ಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ 5 ॥

ದೇಹಂ ಸಶರೀರಿಯಾದ ಪಿಂಡವು ***ಪ್ರಾಣಂ*** ಐದು ವೃತ್ತಿಗಳಿಂದ ಮೂಗಿನಲ್ಲಿ ಸಂಚರಿಸುವ ವಾಯು ***ಇಂದ್ರಿಯಾಣಿ*** ಕಣ್ಣು ಮುಂತಾದ ಆಯಾಯ ಗೋಲಕವೃತ್ತಿಗಳ ರೂಪ ಮೊದಲಾದವುಗಳ ಗ್ರಾಹಕಗಳು ***ಚಲಾಂ ಬುದ್ಧಿಂ*** ಕ್ಷಣಿಕವಾಗಿರುವ ವಿಜ್ಞಾನ, ವಿಶೇಷಜ್ಞಾನ. ***ಶೂನ್ಯಂ*** ತುಚ್ಛವಾಗಿರುವ, ಚಕಾರವು ತಾರ್ಕಿಕ ಮೊದಲಾದವರ ಅಭಿಮತವನ್ನೂ ಸೂಚಿಸುವುದು. ***ವಾದಿನಃ*** ಚಾರ್ವಾಕ ಮೊದಲಾದವರು ***ಸ್ತ್ರೀಬಾಲಾಂಧಜಡೋಪಮಾಃ*** ಸ್ತ್ರೀ, ಬಾಲಕರು, ಅಂಧರು, ಜಡರಂತೆ ವಿವೇಕವಿಜ್ಞಾನರಹಿತರು. ಹಾಗಾಗಿ ***ಭ್ರಾಂತಾಃ*** ತತ್ತ್ವವನ್ನು ಬೇರೆವಿಧವಾಗಿ ಪ್ರತಿಪಾದಿಸುವರಾಗಿ ***ಅಹಮಿತಿ ವಿದುಃ*** ಆತ್ಮತ್ವದಿಂದ ತಿಳಿಯುವರು, ಇತರರಿಗೆ ಉಪದೇಶಿಸುವರು ಎಂಬ ಅರ್ಥ. ಈ ಎಲ್ಲ ವಾದಗಳ ಪ್ರತಿಪಾದಕರು ಯಾಕೆ ಹೀಗೆ ನಾಸ್ತಿಕರಂತೆ ಬೇರೆ ಬೇರೆ ತತ್ತ್ವಗಳನ್ನು ಪ್ರತಿಪಾದಿಸುತ್ತಾರೆ? ಯಾಕೆಂದರೆ ಈಶ್ವರಾನುಗ್ರಹದ ಅಭಾವದಿಂದ. ಯಾವ ಆಸ್ತಿಕರು ಶ್ರುತಿ ಸ್ಮೃತಿಗಳಲ್ಲಿ ಹೇಳಿರುವ ಮಾರ್ಗದ ಕರ್ಮಾನುಷ್ಠಾನದಿಂದ ಭಗವಂತ ಪರಮೇಶ್ವರನನ್ನು ಸೇವಿಸುವರೋ, ಅವರಿಗೆ ಪರಮೇಶ್ವರ ಪ್ರಸಾದವಾಗಿ ಅಂತಹ ವ್ಯಾಮೋಹವಿರುವುದಿಲ್ಲ ಎನ್ನುವ **ಮಾಯೇತ್ಯಾದಿನಾ.** ***ಮಾಯಾಶಕ್ತಿವಿಲಾಸಕಲ್ಪಿತ ಮಹಾವ್ಯಾಮೋಹ ಸಂಹಾರಿಣೇ*** ಭಗವಂತ ಪರಮೇಶ್ವರನ ಪರವ್ಯಾಮೋಹವನ್ನುಂಟುಮಾಡುವ ಅನಾದಿ ಅನಿರ್ವಚನೀಯವಾದ ಮಾಯಾಶಕ್ತಿಯ ವಿಲಾಸದ ಭಾಗವಾಗಿ ಕಲ್ಪಿತವಾದ ಅನಂತಪರಿಮಾಣದ ದೇಹ ಮುಂತಾದವುಗಳ ಆತ್ಮತ್ವದ ಭ್ರಮೆಯನ್ನು ನಾಶಗೊಳಿಸುವುದೇ ಶೀಲವಾಗಿರುವವನೇ, ನಿನಗೆ ನಮಸ್ಕಾರಗಳು. ಹಾಗೆಂದು ಶ್ರೀಭಾಗವತದಲ್ಲಿ 'ಯೇಷಾಂ ಸ ಏವ ಭಗವಾನ್ದಯಯೇದನಂತಸ್ಸರ್ವಾತ್ಮನಾಶ್ರಿತಪದೋ ಯದಿ ನಿರ್ವ್ಯಲೀಕಮ್ । ತೇ ದುಸ್ತರಾಮತಿತರಂತಿ ಚ ದೇವಮಾಯಾಂ ನೈಷಾಂ ಮಮಾಹಮಿತಿಧೀಶ್ವಸೃಗಾಲಭಕ್ಷ್ಯೇ ॥' (ಸ್ಕಂ.ಪು.2–7–42) ಎಂದು ಹೇಳಿದೆ. {5}

ಇನ್ನು ಶೂನ್ಯವಾದಿಗಳು ಸುಷುಪ್ತಿಯಲ್ಲಿ ಆತ್ಮವು ಉಪಲಬ್ಧವಿರದಂತೆ ಶೂನ್ಯವಾಗಿ ಕಂಡುಬರುತ್ತದೆ ಎಂದು ಹೇಳುತ್ತಾರೆ, ಅದಕ್ಕೆ ಸಮಾಧಾನವೇನು? ಈ ಶಂಕೆಗೆ ಉತ್ತರವಾಗಿ ಸುಷುಪ್ತಿಯಲ್ಲಿ ಆತ್ಮದ ಅಸ್ತಿತ್ವವನ್ನು ಸಾಧಿಸುವ **ರಾಹುಗ್ರಸ್ತೇತಿ.**

ರಾಹುಗ್ರಸ್ತದಿವಾಕರೇಂದುಸದೃಶೋ ಮಾಯಾಸಮಾಚ್ಛಾದನಾತ್
ಸನ್ಮಾತ್ರಃ ಕರಣೋಪಸಂಹರಣತೋ ಯೋಽಭೂತ್ಸುಷುಪ್ತಃ ಪುಮಾನ್ ।
ಪ್ರಾಗಸ್ವಾಪ್ಸಮಿತಿ ಪ್ರಬೋಧಸಮಯೇ ಯಃ ಪ್ರತ್ಯಭಿಜ್ಞಾಯತೇ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ 6 ॥

ಯಃ ಪುಮಾನ್ ಪ್ರತ್ಯಗ್ರೂಪದ ಪರಮೇಶ್ವರನು ***ಕರಣೋಪಸಂಹರಣತಃ*** ವಿಶೇಷವಿಜ್ಞಾನಗಳಿಗೆ ಹೇತುವಾದ ಚಕ್ಷು ಮುಂತಾದ ಕರಣಗಳನ್ನು ಉಪಸಂಹರಿಸಿ ***ಸನ್ಮಾತ್ರಃ*** ಪೂರ್ಣಾನಂದ ಮುಂತಾದ ರೂಪದಿಂದ ಸ್ಫುಟವಾಗಿ ಪ್ರಕಾಶಮಾನವಾಗಿರದೆ ಕೇವಲ ಸತ್ ಮಾತ್ರವಾಗಿ ಇರುವವನು ***ಸುಷುಪ್ತೋಽಭೂತ*** ಸುಪ್ತ ಸ್ಥಿತಿ ಪ್ರಾಪ್ತವಾಗಿಸಿಕೊಂಡು. ಕರಣಗಳ ಅಭಾವದಲ್ಲಿ ಪೂರ್ಣಾನಂದತೆಯಿರುವ ಮುಕ್ತಾತ್ಮದ ಅವಸ್ಥೆಯು ಸುಷುಪ್ತಿರೂಪದ ವಿಷಮತೆಯು ಎನ್ನುವ **ಮಾಯಾಸಮಾಚ್ಛಾದನಾತ್ ಇತಿ.** ಮಾಯೆಯಿರುವ ಆತ್ಮವು ಅವಿದ್ಯೆಯಿಂದ ಆವರಿತವಾಗಿರುವುದರಿಂದ ಅದು ಸನ್ಮಾತ್ರವು ಎಂದು ಸಂಬಂಧ. ಸ್ಫುಟವಾಗಿ ಪ್ರಕಾಶಿಸದ ಸತ್ತ್ವ ಸ್ವರೂಪಕ್ಕೆ ದೃಷ್ಟಾಂತವಾಗಿ **ರಾಹುಗ್ರಸ್ತೇತಿ.** ***ರಾಹುಗ್ರಸ್ತ*** ಸೌಂಹಿಕಯನಿಂದ ಗ್ರಹಣವಾದ ***ದಿವಾಕರೇಂದು*** ಸೂರ್ಯ ಚಂದ್ರರ ***ಸದೃಶಃ*** ಸಮಾನವಾಗಿ ಆತ್ಮವು ಸುಷುಪ್ತಿಯಲ್ಲಿರುವುದು ಎಂದು ಸಂಬಂಧ. ಹೇಗೆ ರಾಹುವಿನಿಂದ ಗ್ರಹಣವಾದ ಸೂರ್ಯ ಯಾ ಚಂದ್ರನು ಸ್ಫುಟವಾಗಿ ಪ್ರಕಾಶಿಸುವುದಿಲ್ಲವಾದರೂ ಸೂರ್ಯ ಯಾ ಚಂದ್ರನು ಅಸತ್ ಆಗುವುದಿಲ್ಲವೋ ಹಾಗೆಯೇ ಕರಣಗಳ ಉಪಸಂಹಾರದಿಂದಲೂ ಮಾಯೆಯಿಂದ ಆವೃತವಾಗಿರುವ ಆತ್ಮವು ಸುಷುಪ್ತಿಯಲ್ಲಿ ಸ್ಫುಟವಾಗಿ ಭಾಸವಾಗುವುದಿಲ್ಲ, ಹಾಗಿದ್ದರೂ ಆತ್ಮವು ಅಸತ್ ಆಗುವುದಿಲ್ಲ ಎಂಬ ಅರ್ಥ.

ಇನ್ನು ರಾಹುಗ್ರಸ್ತವಾದ ದಿವಾಕರ ಯಾ ಚಂದ್ರನ ಸ್ಫುಟಪ್ರಕಾಶದ ಅಭಾವದಲ್ಲಿ ಕಣ್ಣುಗಳಿಗೆ ಎಲ್ಲವೂ ಗ್ರಹಣವಾದಂತೆ ಕಾಣುತ್ತದೆ, ಆದರೆ ಆತ್ಮವು ಆ ವಿಧವಾಗಿಲ್ಲ. ಹೇಗೆ ಅದು ಚಿತ್ಸತ್ತ್ವದ ಅನುಭೂತಿಯನ್ನು ಹೊಂದುವುದು? ಎಂಬ ಶಂಕೆಗೆ, ಸುಷುಪ್ತಿಯಲ್ಲಿ ಆತ್ಮವು ವಿಶೇಷವಾಗಿ ಕಂಡುಬರುವುದು ಎಂದು ಸಾಧಿಸಲು **ಪ್ರಾಗಸ್ವಾಪ್ಸಮಿತ್ಯಾದಿನಾ.** ***ಯಃ*** ಸುಷುಪ್ತಿ ಕಾಲದ ಆತ್ಮವು ***ಪ್ರಬೋಧಸಮಯೇ*** ಸುಷುಪ್ತಿಯಿಂದ ಎಚ್ಚರಗೊಳ್ಳುವ ಸಮಯ ***ಪ್ರತ್ಯಭಿಜ್ಞಾಯತೇ*** ನೆನಪಿಸಿಕೊಳ್ಳುತ್ತದೆ. ಏನೆಂದು? ***ಪ್ರಾಕ್*** ಈ ನಾನು ***ಅಸ್ವಾಪ್ಸಂ*** ಈಗ ಎಚ್ಚರಗೊಂಡೆನು ಎಂದು. ಅದನ್ನು ಅನುಭವಿಸಿರದವನಿಗೆ ಅದರ ನೆನಪಿರುವ ಸಂಭವವಿಲ್ಲ, ದೇವದತ್ತನ ಅನುಭವವನ್ನು ಹೊಂದಿರದವನಿಗೆ ಅವನ ನೆನಪು ಬರುವುದಿಲ್ಲ ಎಂಬಂತೆ. ಮತ್ತು ಆಗ ಕರಣಗಳಿಗೂ ಆತ್ಮದ ಅನುಭವವಾಗಿರುವುದಿಲ್ಲ ಏಕೆಂದರೆ ಇಂದ್ರಿಯ ಮುಂತಾದ ಕರಣಗಳು ಸುಪ್ತವಾಗಿರುವುವು. ಹಾಗಾಗಿ ಸ್ವಪ್ರಕಾಶಿತ ಆತ್ಮದ ಸತ್ತ್ವವು ಆಗ ಶೂನ್ಯವಾಗಿರುವುದಿಲ್ಲ. ಅದು ಕ್ಷಣಿಕವೂ ಆಗಿರುವುದಿಲ್ಲ, ಜಡವಾಗಿರುವುದೂ ಇಲ್ಲ. 'ಸುಷುಪ್ತಿಕಾಲೇ ಸಕಲೇ ವಿಲೀನೇ ತಮೋಽಭಿಭೂತಸ್ಸುಖರೂಪಮೇತಿ । ಪುನಶ್ಚ ಜನ್ಮಾಂತರಕರ್ಮಯೋಗಾತ್ಸ ಏವ ಜೀವಸ್ಸ್ವಪಿತಿ ಪ್ರಬುದ್ಧಃ ॥ (ಕೈ.ಉ.), 'ಸತಾ ಸೋಽಭ್ಯ ತದಾ ಸಂಪನ್ನೋ ಭವತಿ' (ಛಾ.ಉ.6–7–1) ಮುಂತಾದ ಶ್ರುತಿಗಳು ಆತ್ಮವು ಸುಷುಪ್ತಿಯಲ್ಲಿ ಸಚ್ಚಿದಾನಂದರೂಪವಾಗಿ ಇರುವುದನ್ನು ತೋರಿಸುತ್ತವೆ. ಆತ್ಮವು ಸುಖಸ್ವರೂಪದಿಂದ ಎದ್ದೇಳುವಾಗ ಅದನ್ನು 'ನಾನು ಸುಖದಿಂದ ಎಚ್ಚರಗೊಂಡೆನು' ಎಂದು ಅನುಸಂಧಾನ ಮಾಡುತ್ತದೆ. ಇದರಲ್ಲಿ ಯಾವ ದೋಷವೂ ಇಲ್ಲ ಎಂಬ ಭಾವ. {6}

ಮುಂದೆ ಮುಂಜ ಮುಂತಾದ ಹುಲ್ಲಿನ ಚಿಗುರಿನಂತೆ ದೇಹ ಇತ್ಯಾದಿಗಳ ವಿವೇಚನೆಯು ಸಚ್ಚಿದಾನಂದ ರೂಪದ ಪ್ರತ್ಯಗಾತ್ಮನನ್ನು ಪ್ರದರ್ಶಿಸಬೇಕು, ಅದರ ಪರಮೇಶ್ವರನೊಡನೆ ಅಭೇದವು ಶ್ರುತಿ, ಗುರು, ಈಶ್ವರ ಪ್ರಸಾದದಿಂದ ಲಭ್ಯವಾಗುವುದು ಎಂದು ತೋರಿಸಲು **ಬಾಲ್ಯಾದಿಷ್ವಿತಿ.**

ಬಾಲ್ಯಾದಿಷ್ವಪಿ ಜಾಗ್ರದಾದಿಷು ತಥಾ ಸರ್ವಾಸ್ವವಸ್ಥಾಸ್ವಪಿ
ವ್ಯಾವೃತ್ತಾಸ್ವನುವರ್ತಮಾನಮಹಮಿತ್ಯಂತಸ್ಸ್ಫುರಂತಂ ಸದಾ ।
ಸ್ವಾತ್ಮಾನಂ ಪ್ರಕಟೀಕರೋತಿ ಭಜತಾಂ ಯೋ ಮುದ್ರಯಾ ಭದ್ರಯಾ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ 7 ॥

ಬಾಲ್ಯಾದಿಷು ಶೈಶವ ಇತ್ಯಾದಿಗಳಲ್ಲಿ, ಶೈಶವ ಕೌಮಾರ ಯೌವನ ಮಧ್ಯವಯಸ್ಸು ವೃದ್ಧಾಪ್ಯ ರೂಪಗಳಲ್ಲಿ ***ಜಾಗ್ರದಾದಿಷು*** ಜಾಗ್ರತ್ ಸ್ವಪ್ನ ಸುಷುಪ್ತಿ ಮೂರ್ಛೆ ಜನ್ಮ ಜರಾ ಮರಣ ರೂಪಗಳಲ್ಲಿ, ***ತಥಾ*** ಇತರ ನಿದ್ರೆಗೆ ಹೊರತಾದ ದರ್ಶನ, ಶ್ರವಣ ಮುಂತಾದ ರೂಪದ ಕರ್ತೃತ್ವ ಭೋಕ್ತೃತ್ವವಿರುವ ರೂಪಗಳಲ್ಲಿ ***ಸರ್ವಾಸ್ವವಸ್ಥಾಸು*** ಎಲ್ಲಾ ದಶೆಗಳಲ್ಲಿ ***ವ್ಯಾವೃತ್ತಾಸು*** ಪರಸ್ಪರ ವೈರುದ್ಧ್ಯಗಳಿರುವ ***ಅನುವರ್ತಮಾನಂ*** ಸದಾ ಸರ್ವ ಸ್ವ ಅವಸ್ಥೆಗಳಲ್ಲಿ ಇರುವಂತಹ. ಇದರ ಭಾವ: ಯಾವುದು ಅಸತ್ಯ, ಜಡ, ಆನಾನಂದ ರೂಪವಾಗಿರುವ ತನ್ನ ಎಲ್ಲ ಅವಸ್ಥೆಗಳಲ್ಲಿ ಒಳಮುಖವಾದಾಗ ಕಂಡುಬರುವ ಅಹಂ, ನಾನು ಎಂಬುದು ಸ್ವಪ್ನದಲ್ಲಿರುವಂತೆ ಸುಪ್ತವಾಗಿದ್ದು ಮೂರು ಅವಸ್ಥೆಗಳಲ್ಲಿಯೂ 'ನಾನು ಅವನೇ ಆಗಿರುವೆನು, ಈಗ ಎಚ್ಚರವಾಗಿರುವೆನು ಮುಂತಾಗಿ, ನಾನು ಬಾಲಕನಾಗಿದ್ದೆನು, ಯುವಕನಾಗಿದ್ದೆನು, ನಾನು ಈಗ ವೃದ್ಧನಾಗಿರುವೆನು' ಮುಂತಾಗಿ ಬಾಲ್ಯ ಮೊದಲಾದ ಕಾಲಗಳಲ್ಲಿಯೂ ಸತ್ವವಾಗಿ ನಿರಂತರ ಅನುಭೂತಿ ಹೊಂದಿರುವ, ಹಾಗೆ ದ್ರಷ್ಟವಾಗುವ ಅಭಿಮತದಿಂದ ಕಣ್ಣು ಮುಂತಾದವುಗಳು ವಿಶ್ಲೇಷಿಸಿದರೂ ನಾನು ಅವೆಲ್ಲಕ್ಕೂ ಸಾಕ್ಷಿಯಾಗಿರುವ ಚಿದ್ರೂಪದ ಅನುಭೂತಿಯನ್ನು ನಿರಂತರವಾಗಿ ಹೊಂದುತ್ತಿರುವೆನು. ಅಂತೆಯೇ ಬುದ್ಧಿ ಇತ್ಯಾದಿಗಳ ಆತ್ಮತ್ವದ ಅಭಿಮತವನ್ನು ಹೊಂದಿ ದೇಹ ಮುಂತಾದ ಭೋಕ್ತೃಗಳ ಒಳಹೊಕ್ಕಾಗ ವಿವೇಕವು ಎಚ್ಚರಿಸಿ ಸದಾ ಆತ್ಮತ್ವದಿಂದ ಇರುವುದನ್ನು ಅನುಭವಿಸುತ್ತದೆ, ಅದರ ಸದ್ರೂಪತ್ವ, ಚಿದ್ರೂಪತ್ವ, ಆನಂದರೂಪತ್ವಗಳ ಅನುಭವದಿಂದ ನಾನು ಬುದ್ಧಿಯೆಂಬ ವಿಷಯವನ್ನು ತ್ಯಜಿಸಿ, ಮುಂದೆ ಎಂದೂ ಹಾಗೆ ಭಾವಿಸದೆ, ಅದುವೇ ತ್ವಂ ಪದದ ಲಕ್ಷಣಾರ್ಥಕವಾದ ಆತ್ಮವು ಎಂದು ತಿಳಿದುಕೊಂಡೆನು. ಹಾಗೆಂದು ತಾಪನೀಯ ಶ್ರುತಿಯು 'ತಂ ವಾ ಏತಮಾತ್ಮಾನಂ ಜಾಗ್ರತ್ಯಸ್ವಪ್ನಮಸುಷುಪ್ತಂ ಸ್ವಪ್ನೇಽಜಾಗ್ರತಮ–ಸುಷುಪ್ತಂ ಸುಷುಪ್ತೇಽಜಾಗ್ರತಮಸ್ವಪ್ನಂ ತುರೀಯೇಽಜಾಗ್ರತಮಸ್ವಪ್ನಮಸುಷುಪ್ತಮವ್ಯಭಿಚಾರಿಣಂ ನಿತ್ಯಾನಂದಸದೈಕರಸಂ ಹ್ಯೇವ ಚಕ್ಷುಷೋ ದ್ರಷ್ಟಾ ಶ್ರೋತ್ರಸ್ಯ ದ್ರಷ್ಟಾ ವಾಚೋ ದ್ರಷ್ಟಾ ಮನಸೋ ದ್ರಷ್ಟಾ ಬುದ್ಧೇರ್ದ್ರಷ್ಟಾ ಪ್ರಾಣಸ್ಯ ದ್ರಷ್ಟಾ ತಮಸೋ ದ್ರಷ್ಟಾ ಸರ್ವಸ್ಯ ದ್ರಷ್ಟಾ' (ನೃಸಿಂಹೋತ್ತರ ತಾಪನೀಯ 2 ಖಂಡ) ಎಂದು ಹೇಳುತ್ತದೆ. ಅದನ್ನೇ ತಿಳಿಸುವ **ಅಹಮಿತಿ ಅಂತಃಸ್ಫುರಂತಂ ಸದೇತಿ.** ***ಅಂತಃ*** ಶರೀರ ಮುತಾದವುಗಳ ಒಳಗೆ ***ಅಹಮಿತಿ*** ನಾನು ಎಂದು ಬುದ್ಧಿಗೆ ಗೋಚರವಾಗುವ ***ಸದಾ*** ಸರ್ವಕಾಲದಲ್ಲಿಯೂ ***ಸ್ಫುರಂತಂ*** ಭಾಸವಾಗುವುದು. ಉಪಲಕ್ಷಣವಾಗಿ ಸತ್ವದಿಂದ, ಪ್ರಿಯತ್ವದಿಂದ ಸದಾ ಸ್ಫುರಣೆಯಾಗಿ ಗೋಚರಿಸುವುದು. ಹೀಗಿರುವ ಪ್ರತ್ಯಗಾತ್ಮ ***ಯಃ*** ಪರಮೇಶ್ವರನು ***ಸ್ವಾತ್ಮಾನಮೇವ*** ತನ್ನನ್ನೇ. 'ಸತ್ಯಂ ಜ್ಞಾನಮನಂತಂ ಬ್ರಹ್ಮ' (ತೈ.ಉ.2–1), ವಿಜ್ಞಾನಮಾನಂದಂ ಬ್ರಹ್ಮ' (ಬೃ.ಉ.5–9–27) ಮುಂತಾದ ಶ್ರುತಿಗಳಲ್ಲಿ ಸಚ್ಚಿದಾನಂದ ರೂಪವಾಗಿ ಮೂರುವಿಧದ ಆವರಣಶೂನ್ಯನೆಂದು ಪ್ರಸಿದ್ಧವಾದ ಪರಮೇಶ್ವರನೇ ಆತ್ಮ ಸ್ವರೂಪನಾದ ಪ್ರತ್ಯಗಾತ್ಮನು. ಅವನು ಕತೃ ಮುಂತಾದ ರೂಪದಿಂದ ಪ್ರತೀತನಾಗುವವನಲ್ಲ ಮತ್ತು ಬ್ರಹ್ಮದಿಂದ ಅಭಿನ್ನನು.

ಭದ್ರಯಾ ಶೋಭನ, ಶುಭಕರವಾಗಿರುವ ***ಮುದ್ರಯಾ*** ಕರದಲ್ಲಿ ಪ್ರದರ್ಶಿಸಿರುವ ಜ್ಞಾನಮುದ್ರೆಯು ***ಭಜತಾಂ*** ತನ್ನ ಭಕ್ತರಿಗೆ ***ಪ್ರಕಟೀಕರೋತಿ*** ಆ ಪ್ರತ್ಯಗಾತ್ಮನನ್ನೇ ಬ್ರಹ್ಮಸ್ವರೂಪತ್ವದಿಂದ ಪ್ರಕಟಿಸುತ್ತದೆ.

ಬಾಲ್ಯಾದಿಷು ತಥಾ ಜಾಗ್ರದಾದಿಷ್ವಪಿ ಸರ್ವಾವಸ್ಥಾಸು ವ್ಯಾವೃತ್ತಾಸ್ವನುವರ್ತಮಾನಂ ಸದಾಽಂತರಹಮಿತಿ ಸ್ಫುರಂತಂ ಭಜತಾಂ ಪ್ರತ್ಯಗಾತ್ಮಾನಾಂ ಯೋ ಭದ್ರಯಾ ಮುದ್ರಯಾ ಸ್ವಾತ್ಮಾನಂ ಪ್ರಕಟೀಕರೋತಿ ತಸ್ಮೈ ನಮಃ ಎಂದು ಅನ್ವಯಿಸಿಕೊಳ್ಳುವುದು. {7}

ಇನ್ನು ಬ್ರಹ್ಮದಿಂದ ಹೊರತಾದ ವಸ್ತುಗಳು ಯಾಕೆ ಇಲ್ಲ? ಅದರೊಡನೆ ಪರಮಾರ್ಥ ಉಪದೇಶ ಮುಂತಾದ ವ್ಯವಹಾರಗಳು ಹೇಗೆ? ಅದಕ್ಕೆ ಬದ್ಧವಾಗಿರುವುದನ್ನು ಹೇಗೆ ಅರಿಯುವುದು? ಬಂಧನಿವೃತ್ತಿಗೆ ವಿದ್ಯೆಯ ಉಪದೇಶವಾದರೆ, ಯಾವುದರ ಅಭಾವವು ಬಂಧಕ್ಕೆ ಕಾರಣವಾಗುವುದು? ವಿದ್ಯಾವಂತರಿಗೆ ಕೂಡಾ ಮುಕ್ತಿಯು ಸಂಭವವಾಗುವುದಿಲ್ಲವಾದರೆ ಅದಕ್ಕೆ ಗುರು, ಶಾಸ್ತ್ರ ಮುಂತಾದವುಗಳ ಅಭಾವವೇ ಕಾರಣವಾಗಿರುವುದೋ ಎಂಬ ಶಂಕೆಗಳಿಗೆ ಅನಾದಿ ಅನಿರ್ವಚನೀಯ ಪರಮಾತ್ಮನಲ್ಲಿ ಅಧ್ಯಸ್ತವಾದ ಮಾಯೆಗೆ ವಶವಾಗಿಯೇ ಬ್ರಹ್ಮಸಾಕ್ಷಾತ್ಕಾರದವರೆಗಿನ ಸರ್ವ ವ್ಯವಹಾರಗಳು ಘಟಿಸುತ್ತವೆ ಎಂಬ ಅಭಿಪ್ರಾಯದ **ವಿಶ್ವಂ ಪಶ್ಯತೀತಿ.**

ವಿಶ್ವಂಪಶ್ಯತಿ ಕಾರ್ಯಕಾರಣತಯಾ ಸ್ವಸ್ವಾಮಿಸಂಬಂಧತಃ
ಶಿಷ್ಯಾಚಾರ್ಯತಯಾ ತಥೈವ ಪಿತೃಪುತ್ರಾದ್ಯಾತ್ಮನಾ ಭೇದತಃ ।
ಸ್ವಪ್ನೇ ಜಾಗ್ರತಿ ವಾ ಯ ಏಷ ಪುರುಷೋ ಮಾಯಾಪರಿಭ್ರಾಮಿತಃ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ 8 ॥

ಪುರುಷ ಪೂರ್ಣನಾದ ***ಯಃ*** ಶ್ರುತಿಗಳಲ್ಲಿ ಅತ್ಯಂತ ಪ್ರಸಿದ್ಧನಾದ ಪರಮೇಶ್ವರನು ***ಮಾಯಾಪರಿಭ್ರಾಮಿತಃ*** ತನ್ನ ಉಪಾಧಿಭೂತವಾಗಿರುವ ಮಾಯೆಯ ಮಲಿನಸತ್ತ್ವಪ್ರಧಾನತೆಯಿಂದ ಕಾರ್ಯಕಾರಣಗಳ ಸಂಯುಕ್ತಾಕಾರವಾಗಿ ಪರಿಣಮಿಸಿ ಬಹುವಿಧವಾದ ಭ್ರಮೆಯನ್ನು ಹೊಂದಿ ***ಏಷ*** ಸಂಸಾರತ್ವದಿಂದ ಭಾವಿಸಿರುವ ಸರ್ವ ಪ್ರಾಣಿಗಳ ಪರೋಕ್ಷವಾಗಿ ಜೀವದ ***ವಿಶ್ವಂ*** ಜಗತ್ತು ***ಭೇದತಃ*** ಬಹುವಾದ ಭೇದಗಳಿಂದ ಭಿನ್ನವಾಗಿರುವ ಭ್ರಮೆಯಿಂದ ***ಪಶ್ಯತಿ*** ಅವಲೋಕಿಸುವನು. ಭೇದವನ್ನೇ ತೋರಿಸಲು **ಕಾರ್ಯಕಾರಣತಯಾ ಇತ್ಯಾದಿನಾ.** ಇದರ ಅರ್ಥ: ಪರಮಾರ್ಥದಲ್ಲಿ ಬ್ರಹ್ಮದಿಂದ ಹೊರತಾದ ಯಾವುದೂ ಇಲ್ಲ, 'ನೇಹ ನಾನಾಸ್ತಿ ಕಿಂಚನ' (ಬೃ.ಉ.3–9–28) ಎಂಬ ಶ್ರುತಿಯ ನಿಷೇಧವಿರುವುದರಿಂದ. ಹಾಗಿದ್ದರೂ ಅನಾದಿ ಅನಿರ್ವಚನೀಯ ಅವಿದ್ಯೆಯ ವಶವಾಗಿ ಬುದ್ಧಿಭ್ರಮಿತವಾಗಿರುವ ಜೀವಿಯು ಪ್ರಪಂಚವನ್ನು ಬಹು ಭೇದಗಳಿಂದ ಭಿನ್ನವಾಗಿರುವಂತೆ ಕಾಣುತ್ತಾನೆ, ನಿದ್ರಾಪರವಶವಾಗಿರುವಾಗ ಅನೇಕವಿಧದ ಸ್ವಪ್ನಗಳನ್ನು ಕಾಣುವಂತೆ. ವಸ್ತುತಃ ಅಲ್ಲಿ ಬ್ರಹ್ಮ ಮಾತ್ರವೇ ಇರುವುದು ಮತ್ತು ಆತ್ಮವು ಸಮಸ್ತ ಅನರ್ಥಗಳ ಸಂಕುಲವಾಗಿರುವ ಮಾಯೆಯಿಂದ ಭ್ರಮಿತವಾಗಿ , ತನ್ನ ಭ್ರಾಂತಿಯಿಂದಲೇ ಸಿದ್ಧವಾಗುವ ಗುರು, ಶಾಸ್ತ್ರ, ನ್ಯಾಯ ಮುಂತಾಗಿ ವಿದ್ಯೆಯಿಂದ ಉತ್ಪತ್ತಿಯಾದ ಅವಿದ್ಯೆಯಿಂದ ವಾಸನೆಗಳಿಂದ ಕೂಡಿರುವುದಾಗಿ ವರ್ತಿಸುವುದು; ನಿದ್ರೆಯಲ್ಲಿರುವ ಪ್ರಬುದ್ಧನು ಕೂಡ ಸ್ವಪ್ನದಲ್ಲಿ ಕಲ್ಪಿತ ಹುಲಿಯ ದರ್ಶನವಾಗಿ ಭಯಭೀತನಾಗಬಹುದು. ಸಂಸಾರದಿಂದ ಮುಕ್ತನಾದವನು ಸ್ವಸ್ವರೂಪವಾದ ಸಚ್ಚಿದಾನಂದರೂಪಕ್ಕೆ ನಿರತಿಶಯ ಮಹತ್ವವನ್ನು ನೀಡಿದವನಾಗಿ, ಅದರಲ್ಲಿಯೇ ರಮಿಸುತ್ತಿರುವನು. ಹಾಗೆಂದು ಸರ್ವಜ್ಞಾತ್ಮಮುನಿಯು ಹೇಳಿದ್ದಾನೆ:

ತಸ್ಮಾದ್ಬ್ರಹ್ಮಾವಿದ್ಯಯಾ ಜೀವಭಾವಂ ಪ್ರಾಪ್ಯ ಸ್ಥಿತ್ವಾ ತಾವಕೇ ತು ಸ್ವರೂಪೇ ।
ತ್ವಚ್ಚಿತ್ತೇನ ಸ್ಪಂದಿತಂ ವಿಶ್ವಜಾತಮಾಕಾಶಾದಿ ಕ್ಷ್ಮಾವಸಾನಂ ಚ ಪಶ್ಯೇಃ ॥

ಸ್ವೀಯಾವಿದ್ಯಾಕಲ್ಪಿತಾಚಾರ್ಯವೇದನ್ಯಾಯಾದಿಭ್ಯೋ ಜಾಯತೇ ತಸ್ಯ ವಿದ್ಯಾ ।
ವಿದ್ಯಾಜನ್ಮಧ್ವಸ್ತಮೋಹಸ್ಯ ತಸ್ಯ ಸ್ವೀಯೇ ರೂಪೇವಸ್ಥಿತಿಸ್ಸ್ವಪ್ರಕಾಶೇ ॥

ಅವೆಲ್ಲವೂ ಪರಮಾರ್ಥದಲ್ಲಿ ಬ್ರಹ್ಮಮಾತ್ರವೇ ಆಗಿ ಮಾಯೆಯ ವಶವಾಗಿರುವುದರಿಂದ ಭ್ರಾಂತಿಗೊಳಗಾಗಿರುವುದು ಎಂದು ತಿಳಿದುಬರುವುದು. ***ಕಾರ್ಯಂ*** ಜನ್ಯವಾಗಿರುವ ***ಕಾರಣಂ*** ಜನಕವಾಗಿರುವ ***ಸ್ವಂ*** ಮನೆ ಕ್ಷೇತ್ರ ಸಂಪತ್ತು ಇತ್ಯಾದಿ, ***ಸ್ವಾಮಿ*** ಅವನಂತೆ ದೇವದತ್ತ ಇತ್ಯಾದಿ, ***ಶಿಷ್ಯಃ*** ಗುರುವಿನೆದುರು ವಿಧಿವತ್ತಾಗಿ ಕುಳಿತು ವಿದ್ಯಾರ್ಜನೆ ಮಾಡುವವ ***ಆಚಾರ್ಯಃ*** ವಿದ್ಯೆಯನ್ನು ಉಪದೇಶಿಸುವವ ***ಪಿತಾ*** ಜನ್ಮ ನೀಡಿದವ ***ಪುತ್ರಃ*** ಅವನ ಶುಕ್ಲದಿಂದ ಸಂಭವಿಸಿದವ ಇತ್ಯಾದಿ ರೂಪಗಳಿಂದ ಜಗತ್ತನ್ನು ಅವಲೋಕಿಸುತ್ತಿರುವವನು. ಆವನಿಗೆ ನಮಸ್ಕಾರಗಳು ಎಂದು ಸಂಬಂಧವು. {8}

ಹೀಗೆ ವಿವರಿಸಿರುವ ರೂಪವು ಬ್ರಹ್ಮತತ್ತ್ವದ ಅಪರೋಕ್ಷಜ್ಞಾನವಾಗಿದೆ. ಆದರೆ ಮಂದಾಧಿಕಾರಿಗಳಿಗೆ ಅಷ್ಟಮೂರ್ತಿಗಳ ಉಪಾಸನೆಯು ಕ್ರಮಮುಕ್ತಿದಾಯಕವಾಗಿರುವುದು. ಉತ್ತಮಾಧಿಕಾರಿಗಳಿಗೆ ಶ್ರುತಿಸಿದ್ಧವಾದ ವೇದಾಂತದಲ್ಲಿರುವ ಆ ವಿಷಯಕ ಬ್ರಹ್ಮವಿಚಾರದ ಸಾಧನೆಯು ಎಂಬ ಅಭಿಪ್ರಾಯವಿರುವ **ಭೂರಂಭಾಂಸೀತಿ.**

ಭೂರಂಭಾಂಸ್ಯನಲೋಽನಿಲೋಂಬರಮಹರ್ನಾಥೋ ಹಿಮಾಂಶುಃ
ಪುಮಾನಿತ್ಯಾಭಾತಿ ಚರಾಚರಾತ್ಮಕಮಿದಂ ಯಸ್ಯೈವ ಮೂರ್ತ್ಯಷ್ಟಕಮ್ ।
ನಾನ್ಯತ್ಕಿಂಚನ ವಿದ್ಯತೇ ವಿಮೃಶತಾಂ ಯಸ್ಮಾತ್ಪರಸ್ಮಾದ್ವಿಭೋಃ
ತಸ್ಮೈ ಶ್ರೀಗುರುಮೂರ್ತಯೇ ನಮ ಇದಂ ಶ್ರೀದಕ್ಷಿಣಾಮೂರ್ತಯೇ ॥ 9 ॥

ಭೂಃ ಪೃಥ್ವೀ ***ಅಂಭಾಂಸಿ*** ಜಲ ***ಅನಲಃ*** ಅಗ್ನಿ ***ಅನಿಲೋ*** ವಾಯು ***ಅಂಬರಂ*** ಆಕಾಶ ***ಅಹರ್ನಾಥಃ*** ಸೂರ್ಯ ***ಹಿಮಾಂಶುಃ*** ಚಂದ್ರ ***ಪುಮಾನ್*** ಸಕಲ ಕರ್ಮ, ವಿದ್ಯೆಗಳ ಅಧಿಕಾರಿಯಾಗಿರುವ ಜೀವ ***ಇತಿ*** ಈ ಪ್ರಕಾರವಾಗಿ ***ಯಸ್ಯೈವ*** ಪರಮೇಶ್ವರನ, ಸರ್ವಜ್ಞ ಸರ್ವಶಕ್ತ ಸಚ್ಚಿದಾನಂದ ಅದ್ವಯ ಸದಾಶಿವನದೇ ಆದ ***ಮೂರ್ತ್ಯಷ್ಟಕಂ*** ಎಂಟು ವಿಗ್ರಹರೂಪಗಳನ್ನು ***ಆಭಾತಿ*** ಚೆನ್ನಾಗಿ ಭಾವಿಸುವ. ಇದರ ಅರ್ಥ: ಉಪಾಸಕನ ಸ್ವದೇಹದಲ್ಲಿರುವ ವ್ಯಷ್ಟಿ ಪಂಚಭೂತಗಳು ಮತ್ತು ಸಮಷ್ಟಿ ಭೂತಗಳು, ಪ್ರಾಣ ಅಪಾನ ಇತ್ಯಾದಿಗಳನ್ನು ಸೂರ್ಯ, ಚಂದ್ರರಲ್ಲಿ ಏಕೀಕರಿಸಿ, ಪಂಭೂತಾತ್ಮಕ ಶರೀರಾಭಿಮಾನಿ ಸ್ವ ಆತ್ಮವನ್ನು ಹೀಗೆ ಎಂಟು ಮೂರ್ತಿಗಳನ್ನು ಪರಮೇಶ್ವರನಲ್ಲಿ ಏಕೀಕರಿಸಿ ಸಕಲ ವ್ಯಾಪಿಯಾದ ಅಷ್ಟಮೂರ್ತ್ಯಾತ್ಮಕ ಸದಾಶಿವನೇ ನಾನಾಗಿರುವೆನೆಂದು ಚಿಂತಿಸುವುದು. ಆಗ ಭಾವನಾತಿಶಯದಿಂದ ಅವನೊಡನೆ ಸಾಯುಜ್ಯವನ್ನು ಹೊಂದಿ ಸರ್ವೈಶ್ವರ್ಯಸಂಪನ್ನನಾಗಿ, ಅವನ ಪ್ರಸಾದದಿಂದ ಲಭಿಸಿದ ತತ್ತ್ವಜ್ಞಾನದಿಂದ ತತ್ತ್ವಸಾಕ್ಷಾತ್ಕಾರವನ್ನು ಗಳಿಸಿ ವಿಮೋಚನೆ ಪಡೆಯುತ್ತಾನೆ ಎಂದು. ***ವಿಮೃಶತಾಂ*** ತತ್ತ್ವವನ್ನು ವಿಧಿವತ್ತಾಗಿ ಗುರು, ಶ್ರುತಿಗಳಿಂದ ಗಳಿಸಿಕೊಂಡು ನಿರಂತರವಾಗಿ ವಿಚಾರಮಾಡುವ ಪುರುಷನು ***ಪರಸ್ಮಾತ್*** ವಿಧಿವತ್ತಾಗಿ ವೈರುದ್ಧ್ಯಮಯ ಪ್ರಪಂಚರೂಪವನ್ನು ಅರಿತು ***ಯಸ್ಮಾತ್*** ಸರ್ವಾಧಿಷ್ಠಾನವಾಗಿರುವ ಸಚ್ಚಿದಾನಂದ ರೂಪದ ಪರಮೇಶ್ವರನಿಂದ ಹೊರತಾಗಿ ಬೇರೆಯಾದುದು ***ಕಿಂಚನ*** ಯಾವುದೂ ಕಂಡುಬರುವುದಿಲ್ಲ, ಇರುವುದೂ ಇಲ್ಲ, ಸರ್ವವೂ ಆ ಪರಮೇಶ್ವರನಲ್ಲಿ ಅಧ್ಯಸ್ತವಾಗಿರುವ ತನ್ಮಾತ್ರೆಗಳು. ಹಾಗೆಂದು ಹೇಳುತ್ತಾರೆ:

ತ್ವಮರ್ಕಸ್ತ್ವಂ ಸೋಮಸ್ತ್ವಮಸಿ ಪವನಸ್ತ್ವಂ ಹುತವಹ–
ಸ್ತ್ವಮಾಪಸ್ತ್ವಂ ವ್ಯೋಮ ತ್ವಮು ಧರಣಿರಾತ್ಮಾ ತ್ವಮಿತಿ ಚ ।
ಪರಿಛಿನ್ನಾಮೇವಂ ತ್ವಯಿ ಪರಿಣತಾಂ ವಿಭ್ರತಿ ಗಿರಂ
ನ ವಿದ್ಮಸ್ತತ್ತತ್ತ್ವಂ ವಯಮಿಹ ತು ಯತ್ತ್ವಂ ನ ಭವಸಿ ॥ ಮಹಿಮ್ನಾಸ್ತವ ಶ್ಲೋ.27 ॥

ಮತ್ತು ಶ್ರುತಿಯಲ್ಲಿ

> ವಿಶ್ವಂ ಭೂತಂ ಭುವನಂ ಚಿತ್ರಂ ಬಹುಧಾ ಜಾತಂ ಜಾಯಮಾನಂ ಚ ಯತ್ ।
> ಸರ್ವೋ ಹ್ಯೇಷ ರುದ್ರಸ್ತಸ್ಮೈ ರುದ್ರಾಯ ನಮೋ ಅಸ್ತು ॥ ತೈ.ಉ.4–24 ॥

> ಯಸ್ಮಾತ್ಪರಂ ನಾಪರಮಸ್ತಿ ಕಿಂಚಿದ್ಯಸ್ಮಾನ್ನಾಣೀಯೋ ನ ಜ್ಯಾಯೋಸ್ತಿ ಕಶ್ಚಿತ್ ।
> ವೃಕ್ಷ ಇವ ಸ್ತಬ್ಧೋ ದಿವಿ ತಿಷ್ಠತ್ಯೇಕಸ್ತೇನೇದಂ ಪೂರ್ಣಂ ಪುರುಷೇಣ ಸರ್ವಮ್ ॥ ತೈ.ಉ.4–12 ॥

ಮುಂತಾಗಿ. *ಸ್ತಬ್ಧಃ* ನಿಶ್ಚಲವಾಗಿ, *ದಿವಿ* ಸ್ವಪ್ರಕಾಶಿತ ಸ್ವರೂಪದಲ್ಲಿ. ಮತ್ತು ಹೀಗೆ ಹೇಳಿರುವ ರೂಪದ ಬ್ರಹ್ಮಾತ್ಮಜ್ಞಾನಕ್ಕೆ ಉತ್ತಮ ಅಧಿಕಾರಿಗಳು ಇಹದಲ್ಲಿಯೇ ಸಚ್ಚಿದಾನಂದ ಅದ್ವಯ ಪರಶಿವರೂಪವಾಗಿ ಇರುವ ಲಕ್ಷಣದಿಂದ ಮುಕ್ತಿಯನ್ನು ಆಸ್ವಾದಿಸುವರು; 'ಅತ್ರ ಬ್ರಹ್ಮ ಸಮಶ್ನುತೇ' (ಕಠ.ಉ.6–14) ಎಂದು ಮುಂತಾದ ಶ್ರುತಿಗಳ ಭಾವವು. ಅಂತಹ ಜ್ಞಾನವನ್ನು ಉಪದೇಶಿಸಿರುವ ಗುರುರೂಪದ ದಕ್ಷಿಣಾಮೂರ್ತಿಗೆ, ಪರಮೇಶ್ವರನಿಗೆ ನಮಸ್ಕಾರಗಳು. {9}

ಮುಂದೆ ಈ ಸ್ತೋತ್ರದ ಪಠನ ಮುಂತಾದವುಗಳಲ್ಲಿ ಪ್ರವೃತ್ತನಾಗಿರುವ ಧೀರ ಪುರುಷರಿಗೆ ಅವಶ್ಯವಾಗಿ ಲಭಿಸುವ ಫಲವನ್ನು ಕೀರ್ತಿಸುತ್ತಾ ಸ್ತೋತ್ರವನ್ನು ಉಪಸಂಹರಿಸುವ **ಸರ್ವಾತ್ಮತ್ವಮಿತಿ.**

> **ಸರ್ವಾತ್ಮತ್ವಮಿತಿ ಸ್ಫುಟೀಕೃತಮಿದಂ ಯಸ್ಮಾದಮುಷ್ಮಿಂ ಸ್ತವೇ**
> **ತೇನಾಸ್ಯ ಶ್ರವಣಾತ್ತದರ್ಥಮನನಾದ್ಧ್ಯಾನಾಚ್ಚ ಸಂಕೀರ್ತನಾತ್ ।**
> **ಸರ್ವಾತ್ಮತ್ವಮಹಾವಿಭೂತಿಸಹಿತಂ ಸ್ಯಾದೀಶ್ವರತ್ವಂ ಸ್ವತಃ**
> **ಸಿದ್ಧ್ಯೇತ್ತತ್ಪುನರಷ್ಟಧಾ ಪರಿಣತಂ ಚೈಶ್ವರ್ಯಮವ್ಯಾಹತಮ್ ॥ 10 ॥**

ಇತಿ ಹೇಳಿರುವ ಪ್ರಕಾರದ ***ಅಮುಷ್ಮಿಂ ಸ್ತವೇ*** ಈ ಸ್ತೋತ್ರವೆಂಬ ***ಇದಂ*** ಶ್ರುತಿಯು; 'ಇದಂ ಸರ್ವಂ ಯದಯಮಾತ್ಮಾ' (ಬೃ.ಉ.4–5–7) ಮುಂತಾದವುಗಳಂತೆ ಕೇಳಿಬರುವ ***ಸರ್ವಾತ್ಮತ್ವಂ*** ಪ್ರತ್ಯಗಾತ್ಮ ಸ್ವರೂಪತ್ವವನ್ನು ***ಸ್ಫುಟೀಕೃತಂ*** ಸ್ಫುಟವಾಗಿ ಅರಿತು ***ಯಸ್ಮಾತ್*** ಯಾವನು ***ತೇನಾಸ್ಯ*** ಸ್ತೋತ್ರದ ***ಶ್ರವಣಾತ್*** ಗುರುವಿನಿಂದ ವಿಧಿವತ್ತಾಗಿ ಶ್ರವಣಮಾಡಿದರೆ ***ತದರ್ಥಮನನಾತ್*** ಕೇಳಿರುವುದರ ಅರ್ಥವನ್ನು ಯುಕ್ತಿಯಿಂದ ಚಿಂತಿಸಿದರೆ ***ಧ್ಯಾನಾತ್*** ಶ್ರವಣ ಮನನದಿಂದ ನಿರ್ಣಯಿತವಾದ ಅದುವೇ ನಾನು, ಸರ್ವಾತ್ಮನಾದ ಪರಮೇಶ್ವರನು ನಾನಾಗಿದ್ದೇನೆ; ವಿಜಾತೀಯ ಪ್ರತ್ಯಯಗಳನ್ನು ತಿರಸ್ಕರಿಸಿ ಸಜಾತೀಯ ಪತ್ಯಯಗಳ ಐಕ್ಯದ ವಿಷಯವಾಗಿರುವುದು. ***ಸಂಕೀರ್ತನಾತ್*** ಚೆನ್ನಾಗಿ ಕಥನಮಾಡಿದರೆ ***ಸರ್ವಾತ್ಮತ್ವ*** ಸರ್ವಾತ್ಮಕತೆಯೇ ***ಮಹಾವಿಭೂತಿಃ*** ಮಹತ್ತಾದ ಸಿದ್ಧಿಗಳು, ಅಣಿಮಾ ಇತ್ಯಾದಿಗಳ ಅಪೇಕ್ಷೆಯಲ್ಲಿ ಅದರ ಮೂರು ವಿಧದ ಆವರಣಶೂನ್ಯತೆಯಿಂದ ***ಸಹಿತಂ*** ಯುಕ್ತವಾಗಿ ***ಈಶ್ವರತ್ವಂ*** ಸತ್ಯ ಜ್ಞಾನ ಆನಂದ ಲಕ್ಷಣಗಳ ಪರಮೇಶ್ವರತ್ವವು ***ತತ್*** ಶ್ರುತಿಪ್ರಸಿದ್ಧವಾದ ***ಸ್ವತಃ*** ನಿತ್ಯ ವಿದ್ಯಮಾನವಾಗಿ ***ಭವೇತ್*** ಇರುವುದು, ಎಂದು ತಿಳಿಯುವುದು ಎಂಬ ಅರ್ಥ. ***ಪುನಃ*** ಮತ್ತೆ ***ಅಷ್ಟಧಾ*** ಎಂಟು ಪ್ರಕಾರದಿಂದ ***ಪರಿಣತಂ*** ಮಾಯೆಯ ಪರಿಣಾಮರೂಪದ ***ಐಶ್ವರ್ಯಂ ಚ*** ಅಣಿಮಾ ಮೊದಲಾದವುಗಳು ***ಅವ್ಯಾಹತಂ*** ಅಪ್ರತಿಹತವಾಗಿ ***ಸಿದ್ಧ್ಯೇತ್*** 'ಸ ಏಕಧಾ ಭವತಿ ತ್ರಿಧಾ ಭವತಿ' (ಛಾ.ಉ.7–26), 'ಸ ಯದಿ ಪಿತೃಲೋಕಕಾಮೋ ಭವತಿ ಸಂಕಲ್ಪಾದೇವಾಸ್ಯ ಪಿತರಸ್ಸಮುಪತಿಷ್ಠಂತೇ' (ಛಾ.ಉ.8–2) ಇತ್ಯಾದಿ ಶ್ರುತಿಗಳಲ್ಲಿ ಹೇಳಿರುವಂತೆ ಎಲ್ಲವೂ ಆಗುವನು ಎಂಬ ಅರ್ಥವು. {10}

ಏವಮೇಶಾ ಕೃತಾ ವ್ಯಾಖ್ಯಾ ದಕ್ಷಿಣಾಶಾಮುಖಸ್ತುತೇಃ ।
ಯಥಾಮಪಿ ತಯಾ ತುಷ್ಟೋ ದಕ್ಷಿಣಾಮೂರ್ತಿರಸ್ತು ನಃ ॥

ಇತಿ ಶ್ರೀಮತ್ ಪರಮಹಂಸಪರಿವ್ರಾಜಕಾಚಾರ್ಯ ಕೈವಲ್ಯಾನಂದಯೋಗೀಂದ್ರಪಾದಕಮಲ ಭೃಂಗಾಯಮಾಣ ಸ್ವಯಂಪ್ರಕಾಶಯತಿವಿರಚಿತ ಶ್ರೀದಕ್ಷಿಣಾಮೂರ್ತಿಸ್ತೋತ್ರವ್ಯಾಖ್ಯಾ ತತ್ತ್ವಸುಧಾಖ್ಯಾ ಸಮಾಪ್ತಾ ।

॥ ॐ तत् सत् ॥ ॐ ತತ್ ಸತ್ ॥

ಸುರೇಶ್ವರಾಚಾರ್ಯರ

ಪಂಚೀಕರಣ (ಪ್ರಣವ) ವಾರ್ತಿಕಮ್

पञ्चीकरण (प्रणव) वार्तिकम्

ಪಂಚೀಕರಣ (ಪ್ರಣವ) ವಾರ್ತಿಕಮ್

ಇದರ ಅಗತ್ಯ

ओंकारस्सर्ववेदानां सारस्तत्वप्रकाशकः ।
तेन चित्तसमाधानं मुमुक्षूणां प्रकाश्यते ॥ १ ॥

ಓಂಕಾರಸ್ಸರ್ವವೇದಾನಾಂ ಸಾರಸ್ತತ್ವಪ್ರಕಾಶಕಃ ।
ತೇನ ಚಿತ್ತಸಮಾಧಾನಂ ಮುಮುಕ್ಷೂಣಾಂ ಪ್ರಕಾಶ್ಯತೇ ॥ 1 ॥

ಓಂಕಾರವು ಎಲ್ಲಾ ವೇದಗಳ ಸಾರವಾಗಿ ತತ್ತ್ವಗಳನ್ನು ಪ್ರಕಾಶಿಸುತ್ತದೆ; ಮುಮುಕ್ಷುಗಳಿಗೆ (ಮೋಕ್ಷವನ್ನು ಬಯಸುವವರು) ಮನಸಿನ ಸಮಾಧಾನವನ್ನು ಪಡೆಯುವ ಬಗೆಯನ್ನು ತಿಳಿಸುತ್ತೇವೆ. [1]

ಅವ್ಯಾಕೃತ

आसीदेकं परं ब्रह्म नित्यमुक्तविक्रियम् ।
तत्स्वमायासमावेशाद्बीजमव्याकृतात्मकम् ॥ २ ॥

ಆಸೀದೇಕಂ ಪರಂ ಬ್ರಹ್ಮ ನಿತ್ಯಮುಕ್ತವಿಕ್ರಿಯಮ್ ।
ತತ್ಸ್ವಮಾಯಾಸಮಾವೇಶಾದ್ಬೀಜಮವ್ಯಾಕೃತಾತ್ಮಕಮ್ ॥ 2 ॥

ಮೊದಲಿಗೆ ಬದಲಾವಣೆಯಿಲ್ಲದ, ಬಂಧನಗಳಿಲ್ಲದ, ನಿತ್ಯವಾಗಿರುವ ಪರಬ್ರಹ್ಮವೊಂದೇ ಇತ್ತು; ಅದು ತನ್ನದೇ ಆದ ಮಾಯೆಯೊಂದಿಗೆ ಸೇರಿಕೊಂಡು, ಅವ್ಯಾಕೃತ ಅಂದರೆ ವಸ್ತುವಿನ ಏಕೀಕೃತ ಮೂಲದ್ರವ್ಯವಾದ ಬೀಜವಾಯಿತು. [2]

ಹಿರಣ್ಯಗರ್ಭನ ಸೂತ್ರಗಳು

तस्मादाकाशमुत्पन्नं शब्दतन्मात्ररूपकम् ।
स्पर्शात्मकस्ततो वायुस्तेजो रूपत्मकं ततः ॥ ३ ॥
आपो रसात्मिकास्तस्मात्ताभ्यो गन्धात्मिका मही ।
शब्दैकगुणामाकाशं शब्दस्पर्शगुणो मरुत् ॥ ४ ॥
शब्दस्पर्शरूपगुणैस्त्रिगुणं तेज उच्यते ।
शब्दस्पर्शरूपरसगुणैरापश्चतुर्गुणाः ॥ ५ ॥

शब्दस्पर्शरूपरसगन्धैः पञ्चगुणा मही ।
तेभ्यस्समभवत्सूत्रं लिङ्गं सर्वात्मकं महत् ॥ ६ ॥

ತಸ್ಮಾದಾಕಾಶಮುತ್ಪನ್ನಂ ಶಬ್ದತನ್ಮಾತ್ರರೂಪಕಮ್ ।
ಸ್ಪರ್ಶಾತ್ಮಕಸ್ತತೋ ವಾಯುಸ್ತೇಜೋ ರೂಪಾತ್ಮಕಂ ತತಃ ॥ 3 ॥
ಆಪೋ ರಸಾತ್ಮಿಕಾಸ್ತಸ್ಮಾತ್ತಾಭ್ಯೋ ಗಂಧಾತ್ಮಿಕಾ ಮಹೀ ।
ಶಬ್ದೈಕಗುಣಮಾಕಾಶಂ ಶಬ್ದಸ್ಪರ್ಶಗುಣೋ ಮರುತ್ ॥ 4 ॥
ಶಬ್ದಸ್ಪರ್ಶರೂಪಗುಣೈಸ್ತ್ರಿಗುಣಂ ತೇಜ ಉಚ್ಯತೇ ।
ಶಬ್ದಸ್ಪರ್ಶರೂಪರಸಗುಣೈರಾಪಶ್ಚತುರ್ಗುಣಾಃ ॥ 5 ॥
ಶಬ್ದಸ್ಪರ್ಶರೂಪರಸಗಂಧೈಃ ಪಂಚಗುಣಾ ಮಹೀ ।
ತೇಭ್ಯಸ್ಸಮಭವತ್ಸೂತ್ರಂ ಲಿಂಗಂ ಸರ್ವಾತ್ಮಕಂ ಮಹತ್ ॥ 6 ॥

ಅದರಿಂದ ಶಬ್ದವು ತನ್ಮಾತ್ರೆಯಾಗಿ (ಸತ್ವ) ಆಕಾಶವು ಉತ್ಪನ್ನವಾಯಿತು; ಆನಂತರ ಸ್ಪರ್ಶ ತನ್ಮಾತ್ರೆಯಾಗಿ ವಾಯುವಿನ, ರೂಪ ತನ್ಮಾತ್ರೆಯಾಗಿ ಅಗ್ನಿಯ, ರಸ ತನ್ಮಾತ್ರೆಯಾಗಿ ಜಲದ ಹಾಗೂ ಗಂಧ ತನ್ಮಾತ್ರೆಯಾಗಿ ಭೂಮಿಯ ಉತ್ಪತ್ತಿಯಾಯಿತು. ಆಕಾಶಕ್ಕೆ ಶಬ್ದವೊಂದೇ ಗುಣ; ವಾಯುವಿಗೆ ಶಬ್ದ ಮತ್ತು ಸ್ಪರ್ಶ ಗುಣಗಳಾಗಿವೆ; ಅಗ್ನಿಗೆ ಶಬ್ದ, ಸ್ಪರ್ಶ, ರೂಪಗಳು ಗುಣಗಳು; ಜಲಕ್ಕೆ ಶಬ್ದ, ಸ್ಪರ್ಶ, ರೂಪ, ರಸಗಳು ಗುಣಗಳು; ಮತ್ತು ಭೂಮಿಗೆ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು ಗುಣಗಳಾಗಿವೆ. ಅವುಗಳಿಂದ ಸೂತ್ರ ಅಥವಾ ಲಿಂಗ ಎಂದು ಕರೆಯಲ್ಪಡುವ ಸರ್ವಾತ್ಮಕವಾದ ಮಹತ್ ತತ್ತ್ವವು ಸಂಭವಿಸಿದೆ. [3–6]

ವಿರಾಟ್

ततः स्थूलनि भूतनि पञ्च तेभ्यो विराड्भूत् ।
पञ्चीकृतानि भूतानि स्थूलानीत्युच्यते बुधैः॥ ७ ॥
पृथिव्यादीनि भूतानि प्रत्येकं विभजेद्द्विधा ।
एकैकं भागमादाय चतुर्धा विभजेत्पुनः ॥ ८ ॥
एकैकं भागमेकस्मिन् भूतेसंवेशयेत्क्रमात् ।
ततश्चाकाशभूतस्य भागाः पञ्च भवन्ति हि ॥ ९ ॥
वाय्वदिभागाश्चत्वारो वाय्वादिष्ववमादिशेत् ।
पञ्चीकरणमेतत्स्यादित्याहुस्तत्ववेदिनः ॥ १० ॥
पञ्चीकृतानि भूतनि तत्कार्यं च विराड्भवेत् ।
स्थूलं शरीरमेतत्स्यादशरीरस्य चात्मनः ॥ ११ ॥

ತತಃ ಸ್ಥೂಲಾನಿ ಭೂತಾನಿ ಪಂಚ ತೇಭ್ಯೋ ವಿರಾಡ್‌ಭೂತ್ ।
ಪಂಚೀಕೃತಾನಿ ಭೂತಾನಿ ಸ್ಥೂಲಾನೀತ್ಯುಚ್ಯತೇ ಬುಧೈಃ ॥ 7 ॥
ಪೃಥಿವ್ಯಾದೀನಿ ಭೂತಾನಿ ಪ್ರತ್ಯೇಕಂ ವಿಭಜೇದ್‌ದ್ವಿಧಾ ।
ಏಕೈಕಂ ಭಾಗಮಾದಾಯ ಚತುರ್ಧಾ ವಿಭಜೇತ್ಪುನಃ ॥ 8 ॥
ಏಕೈಕಂ ಭಾಗಮೇಕಸ್ಮಿನ್ ಭೂತೇಸಂವೇಶಯೇತ್ಕ್ರಮಾತ್ ।
ತತಶ್ಚಾಕಾಶಭೂತಸ್ಯ ಭಾಗಾಃ ಪಂಚ ಭವಂತಿ ಹಿ ॥ 9 ॥
ವಾಯ್ವಾದಿಭಾಗಾಶ್ಚತ್ವಾರೋ ವಾಯ್ವಾದಿಷ್ವವಮಾದಿಶೇತ್ ।
ಪಂಚೀಕರಣಮೇತತ್ಸ್ಯಾದಿತ್ಯಾಹುಸ್ತತ್ವವೇದಿನಃ ॥ 10 ॥
ಪಂಚೀಕೃತಾನಿ ಭೂತಾನಿ ತತ್ಕಾರ್ಯ ಚ ವಿರಾಡ್‌ಭವೇತ್ ।
ಸ್ಥೂಲಂ ಶರೀರಮೇತತ್ಸ್ಯಾದಶರೀರಸ್ಯ ಚಾತ್ಮನಃ ॥ 11 ॥

ಆಬಳಿಕ ಸ್ಥೂಲ ರೂಪದ ಪಂಚಭೂತಗಳು ಉತ್ಪತ್ತಿಯಾದವು ಮತ್ತು ಅವುಗಳಿಂದ ವಿರಾಟ್ ಪುರುಷನು. ಭೂತಗಳು ಪಂಚೀಕೃತವಾದಾಗ ಅವು ಸ್ಥೂಲ ಭೂತಗಳಾಗುವುವು ಎಂದು ಬುದ್ಧಿವಂತರು ಹೇಳುತ್ತಾರೆ. ಪ್ರತಿಯೊಂದು ಸೂಕ್ಷ್ಮತತ್ತ್ವಗಳನ್ನು ಎರಡಾಗಿ ವಿಭಜಿಸಬೇಕು; ಒಂದು ಅರ್ಧವನ್ನು ಪುನಃ ನಾಲ್ಕು ಭಾಗಗಳಾಗಿ ವಿಭಾಗಿಸಬೇಕು; ಒಂದು ತತ್ತ್ವದ ಅರ್ಧಭಾಗವನ್ನು ಇತರ ತತ್ತ್ವಗಳ ಎಂಟನೆಯ ಒಂದು ಭಾಗದೊಡನೆ ಸಂಯೋಜಿಸಿದಾಗ, ಐದು ಭಾಗಗಳುಳ್ಳ ಒಂದು ಸ್ಥೂಲ ತತ್ತ್ವವು ದೊರೆಯುತ್ತದೆ. ಸೂಕ್ಷ್ಮ ಆಕಾಶದ ಅರ್ಧದೊಡನೆ ಸೂಕ್ಷ್ಮ ವಾಯು, ಅಗ್ನಿ, ಜಲ, ಭೂಮಿಗಳ ಎಂಟನೆಯ ಒಂದು ಭಾಗಗಳೊಡನೆ ಸಂಯೋಜಿಸಿದರೆ ಸ್ಥೂಲ ಆಕಾಶ ತತ್ತ್ವವು ಉಂಟಾಗುತ್ತದೆ; ಇದೇ ರೀತಿ ಇತರ ಸ್ಥೂಲ ತತ್ತ್ವಗಳನ್ನು ಪಡೆಯಬಹುದು; ಬಲ್ಲವರು ಇದನ್ನು ಪಂಚೀಕರಣವೆನ್ನುತ್ತಾರೆ. ಪಂಚೀಕೃತವಾದ ಸ್ಥೂಲ ಭೂತಗಳು ವಿರಾಟ್ ಪುರುಷನ ಅಂಗಗಳಾಗಿವೆ. ಇದು ಶರೀರವಿಲ್ಲದ ಆತ್ಮನ ಸ್ಥೂಲ ಶರೀರವಾಗಿದೆ. [7–11]

ಬ್ರಹ್ಮದರ್ಶನದ ಮೂರು ಮುಖಗಳು

अधिदैवतमद्यात्ममधिभूतामितित्रिधा ।
एकं ब्रह्मा विभागेन भ्रमाद्भाति न तत्वतः ॥ १२ ॥
इन्द्रियैरर्थविज्ञानं देवतानुग्रहान्वितैः ।
शब्दादिविषयं ज्ञानं तज्जागरितमुच्यते ॥ १३ ॥
श्रोत्रमध्यात्ममित्युक्तं श्रोत्रैव्यं शब्दलक्षणम् ।
अधिभूतं तदित्युक्तं दिशस्तत्राधिदैवतम् ॥ १४ ॥
त्वगध्यात्ममिति प्रोक्तं स्प्रष्तव्यं स्पर्शलक्षणम् ।
अधिभूतं तदित्युक्तं वायुस्तत्राधिदैवतम् ॥ १५ ॥
चक्षुरध्यात्ममित्युक्तं द्रष्टव्यं रूपलक्षणम् ।

अधिभूतं तदित्युक्तमादित्योत्राधिदैवतम् ॥ १६ ॥
जिह्वाध्यात्मं तयास्वाद्यमधिभूतं रसात्मकम् ।
वरुणो देवता तत्र जिह्वायामधिदैवतम् ॥ १७ ॥
घ्राणमध्यात्ममित्युक्त घ्रातव्यं गन्धलक्षणम् ।
अधिभूतं तदित्युक्तमश्विनावधिदैवतम् ॥ १८ ॥
वागध्यात्ममिति प्रोक्त वक्तव्यं शब्दलक्षणम् ।
अधिभूतं तदित्युक्तमग्निस्तत्राधिदैवतम् ॥ १९ ॥
हस्ताचध्यात्ममित्युक्तमादातव्यं च यद्भवेत् ।
अधिभूतं तदित्युक्तमिन्द्रस्तत्राधिदैवतम् ॥ २० ॥
पादावध्यात्ममित्युक्तं गन्तव्यन्तत्र यद्भवेत् ।
अधिभूतं तदीत्युक्तं विष्णुस्तत्राधिदैवतम् ॥ २१ ॥
पायरिन्द्रियमध्यात्मं विसर्गस्तत्र यो भवेत् ।
अधिभूतं तदीत्युक्तं मृत्युस्तत्राधिदैवतम् ॥ २२ ॥
उपस्थेन्द्रियमध्यात्मं स्त्राद्यानन्दस्य कारणम् ।
अधिभूतं तदीयुक्तमधिदैवं प्रजापतिः ॥ २३ ॥
मनोध्यात्ममिति प्रोक्तं मन्तव्यं तत्र यद्भवेत् ।
अधिभूतं तदीत्युक्तं चन्द्रस्तत्राधिदैवतम् ॥ २४ ॥
बुद्धिरध्यात्ममित्युक्तं बोद्धव्यं तत्र यद्भवेत् ।
अधिभूतं तदीत्युक्तं अधिदैवं बृहस्पतिः ॥ २५ ॥
अहङ्कारस्तथाध्यात्ममहंकर्तव्यमेव यत् ।
अधिभूतं तदीत्युक्तं रुद्रस्तत्राधिदैवतम् ॥ २६ ॥
चित्तमध्यात्ममित्युक्तं चेतव्यं तत्र यद्भवेत् ।
अधिभूतं तदीत्युक्तं क्षेत्रज्ञोत्राधिदैवतम् ॥ २७ ॥
तमोध्यात्ममिति प्रोक्तं विकारस्तत्र यो भवेत् ।
अधिभूतं तदीत्युक्तमीश्वरोत्राधिदैवतम् ॥ २८ ॥

ಅಧಿದೈವತಮಧ್ಯಾತ್ಮಮಧಿಭೂತಾಮಿತಿತ್ರಿಧಾ ।
ಏಕಂ ಬ್ರಹ್ಮ ವಿಭಾಗೇನ ಭ್ರಮಾದ್ಭಾತಿ ನ ತತ್ವತಃ ॥ 12 ॥

ಇಂದ್ರಿಯೈರರ್ಥವಿಜ್ಞಾನಂ ದೇವತಾನುಗ್ರಹಾನ್ವಿತೈಃ ।
ಶಬ್ದಾದಿವಿಷಯಂ ಜ್ಞಾನಂ ತಜ್ಜಾಗರಿತಮುಚ್ಯತೇ ॥ 13 ॥
ಶ್ರೋತ್ರಮಧ್ಯಾತ್ಮಮಿತ್ಯುಕ್ತಂ ಶ್ರೋತ್ರವ್ಯಂ ಶಬ್ದಲಕ್ಷಣಮ್ ।
ಅಧಿಭೂತಂ ತದಿತ್ಯುಕ್ತಂ ದಿಶಸ್ತತ್ರಾಧಿದೈವತಂ ॥ 14 ॥
ತ್ವಗಧ್ಯಾತ್ಮಮಿತಿ ಪ್ರೋಕ್ತಂ ಸ್ಪ್ರಷ್ಟವ್ಯಂ ಸ್ಪರ್ಶಲಕ್ಷಣಮ್ ।
ಅಧಿಭೂತಂ ತದಿತ್ಯುಕ್ತಂ ವಾಯುಸ್ತತ್ರಾಧಿದೈವತಮ್ ॥ 15 ॥
ಚಕ್ಷುರಧ್ಯಾತ್ಮಮಿತ್ಯುಕ್ತಂ ದ್ರಷ್ಟವ್ಯಂ ರೂಪಲಕ್ಷಣಮ್ ।
ಅಧಿಭೂತಂ ತದಿತ್ಯುಕ್ತಮಾದಿತ್ಯೋತ್ರಾಧಿದೈವತಮ್ ॥ 16 ॥
ಜಿಹ್ವಾಧ್ಯಾತ್ಮಂ ತಯಾಸ್ವಾದ್ಯಮಧಿಭೂತಂ ರಸಾತ್ಮಕಮ್ ।
ವರುಣೋ ದೇವತಾ ತತ್ರ ಜಿಹ್ವಾಯಾಮಧಿದೈವತಮ್ ॥ 17 ॥
ಘ್ರಾಣಮಧ್ಯಾತ್ಮಮಿತ್ಯುಕ್ತ ಘ್ರಾತವ್ಯಂ ಗಂಧಲಕ್ಷಣಮ್ ।
ಅಧಿಭೂತಂ ತದಿತ್ಯುಕ್ತಮಶ್ವಿನಾವಧಿದೈವತಮ್ ॥ 18 ॥
ವಾಗಧ್ಯಾತ್ಮಮಿತಿ ಪ್ರೋಕ್ತ ವಕ್ತವ್ಯಂ ಶಬ್ದಲಕ್ಷಣಮ್ ।
ಅಧಿಭೂತಂ ತದಿತ್ಯುಕ್ತಮಗ್ನಿಸ್ತತ್ರಾಧಿದೈವತಮ್ ॥ 19 ॥
ಹಸ್ತಾವಧ್ಯಾತ್ಮಮಿತ್ಯುಕ್ತಮಾದಾತವ್ಯಂ ಚ ಯದ್ಭವೇತ್ ।
ಅಧಿಭೂತಂ ತದಿತ್ಯುಕ್ತಮಿಂದ್ರಸ್ತತ್ರಾಧಿದೈವತಮ್ ॥ 20 ॥
ಪಾದಾವಧ್ಯಾತ್ಮ ಮಿತ್ಯುಕ್ತಂ ಗಂತವ್ಯಂತತ್ರ ಯದ್ಭವೇತ್ ।
ಅಧಿಭೂತಂ ತದೀತ್ಯುಕ್ತಂ ವಿಷ್ಣುಸ್ತತ್ರಾಧಿದೈವತಮ್ ॥ 21 ॥
ಪಾಯುರಿಂದ್ರಿಯಮಧ್ಯಾತ್ಮಂ ವಿಸರ್ಗಸ್ತತ್ರ ಯೋ ಭವೇತ್ ।
ಅಧಿಭೂತಂ ತದೀತ್ಯುಕ್ತಂ ಮೃತ್ಯುಸ್ತತ್ರಾಧಿದೈವತಮ್ ॥ 22 ॥
ಉಪಸ್ಥೇಂದ್ರಿಯಮಧ್ಯಾತ್ಮಂ ಸ್ತ್ರ್ಯಾದ್ಯಾನಂದಸ್ಯ ಕಾರಣಮ್ ।
ಅಧಿಭೂತಂ ತದೀತ್ಯುಕ್ತಮಧಿದೈವಂ ಪ್ರಜಾಪತಿಃ ॥ 23 ॥
ಮನೋಧ್ಯಾತ್ಮಮಿತಿ ಪ್ರೋಕ್ತಂ ಮಂತವ್ಯಂ ತತ್ರ ಯದ್ಭವೇತ್ ।
ಅಧಿಭೂತಂ ತದೀತ್ಯುಕ್ತಂ ಚಂದ್ರಸ್ತತ್ರಾಧಿದೈವತಮ್ ॥ 24 ॥
ಬುದ್ಧಿರಧ್ಯಾತ್ಮಮಿತ್ಯುಕ್ತಂ ಬೋದ್ಧವ್ಯಂ ತತ್ರ ಯದ್ಭವೇತ್ ।
ಅಧಿಭೂತಂ ತದೀತ್ಯುಕ್ತಂ ಅಧಿದೈವಂ ಬೃಹಸ್ಪತಿಃ ॥ 25 ॥
ಅಹಂಕಾರಸ್ತಥಾಧ್ಯಾತ್ಮಮಹಂಕರ್ತವ್ಯಮೇವ ಯತ್ ।
ಅಧಿಭೂತಂ ತದೀತ್ಯುಕ್ತಂ ರುದ್ರಸ್ತತ್ರಾಧಿದೈವತಮ್ ॥ 26 ॥
ಚಿತ್ತಮಧ್ಯಾತ್ಮಮಿತ್ಯುಕ್ತಂ ಚೇತವ್ಯಂ ತತ್ರ ಯದ್ಭವೇತ್ ।
ಅಧಿಭೂತಂ ತದೀತ್ಯುಕ್ತಂ ಕ್ಷೇತ್ರಜ್ಞೋತ್ರಾಧಿದೈವತಮ್ ॥ 27 ॥

ತಮೋಧ್ಯಾತ್ಮಮಿತಿ ಪ್ರೋಕ್ತಂ ವಿಕಾರಸ್ತತ್ರ ಯೋ ಭವೇತ್ ।
ಅಧಿಭೂತಂ ತದೀತ್ಯುಕ್ತಮೀಶ್ವರೋತ್ರಾಧಿದೈವತಮ್ ॥ 28 ॥

ಭ್ರಮೆಯ ಕಾರಣದಿಂದ ಒಬ್ಬ ಬ್ರಹ್ಮನು ಮೂರು ರೀತಿಯಲ್ಲಿ, ಅಧಿದೈವ (ಬ್ರಹ್ಮಾಂಡ), ಅಧ್ಯಾತ್ಮ (ಏಕ ವ್ಯಕ್ತಿ) ಮತ್ತು ಅಧಿಭೂತ (ಬಾಹ್ಯವಾಗಿ ಕಾಣಿಸುವ ಜಗತ್ತು), ಕಾಣಿಸಿಕೊಳ್ಳುತ್ತಾನೆ, ತತ್ತ್ವಶಃ ಅಲ್ಲ. ಇಂದ್ರಿಯಗಳು ವಿಶೇಷವಾದ ಜ್ಞಾನವನ್ನು ಒದಗಿಸುವುವುಗಳು, ಶಬ್ದ ಇತ್ಯಾದಿಗಳು ಅವುಗಳಿಗೆ ವಿಷಯಗಳಾಗಿ ಅರಿವನ್ನು ಜಾಗ್ರತಗೊಳಿಸುವುವು ಮತ್ತು ದೇವತೆಗಳು ಅನುಗ್ರಹವನ್ನು ಕರುಣಿಸುವವರು. [12–28]

ಅಧ್ಯಾತ್ಮ **ಇಂದ್ರಿಯ/ಅಂಗ**	**ಅಧಿಭೂತ** **ವಿಷಯ**	**ಅಧಿದೈವ** **ದೇವತೆ**
ಶ್ರವಣೇಂದ್ರಿಯ, ಕಿವಿಗಳು	ಶಬ್ದ	ದಿಕ್ಕುಗಳು
ಸ್ಪರ್ಶೇಂದ್ರಿಯ, ಚರ್ಮ	ಸ್ಪರ್ಶ	ವಾಯು
ಚಕ್ಷುರಿಂದ್ರಿಯ, ಕಣ್ಣುಗಳು	ರೂಪ	ಆದಿತ್ಯ
ರಸನೇಂದ್ರಿಯ, ನಾಲಗೆ	ರಸ	ವರುಣ
ಘ್ರಾಣೇಂದ್ರಿಯ, ಮೂಗು	ಗಂಧ	ಅಶ್ವಿನಿ ದೇವತೆಗಳು
ವಾಗೀಂದ್ರಿಯ, ನಾಲಿಗೆ	ವಾಕ್, ಮಾತು	ಅಗ್ನಿ
ಪಾಣೀಂದ್ರಿಯ, ಕೈಗಳು	ಕ್ರಿಯೆ	ಇಂದ್ರ
ಪಾದೇಂದ್ರಿಯ, ಕಾಲುಗಳು	ಚಲನೆ	ವಿಷ್ಣು
ಪಾಯೀಂದ್ರಿಯ, ಗುದ	ವಿಸರ್ಜನೆ	ಮೃತ್ಯು, ಯಮ
ರಹಸ್ಯೇಂದ್ರಿಯ, ಜನನಾಂಗ	ವಿಷಯಾನಂದ	ಪ್ರಜಾಪತಿ
ಮನಸು	ಯೋಚಿಸುವ ವಸ್ತುಗಳು	ಚಂದ್ರ
ಬುದ್ಧಿ	ಅರಿವಿನ ವಸ್ತುಗಳು	ಬ್ರಹಸ್ಪತಿ
ಅಹಂಕಾರ	ನನ್ನದು ಎಂಬ ವಸ್ತುಗಳು	ರುದ್ರ
ಚಿತ್ತ	ನೆನಪುಗಳು	ಕ್ಷೇತ್ರಜ್ಞ
ತಮಸ್, ಅಜ್ಞಾನ	ಕತ್ತಲೆಯ ರೂಪಗಳು	ಈಶ್ವರ

ವಿಶ್ವ ಮತ್ತು ವಿರಾಟ್ ಸ್ವರೂಪದ ಏಕತೆ

बाह्यान्तःकरणैरेवं देवतानुग्रहान्वितैः ।
स्वं स्वं च विषयज्ञानं तज्जागरितमुच्यते ॥ २९ ॥
येयं जगरितावस्था शरीरं करणाश्रयम् ।
यस्तयोरभिमानी स्याद्विश्व इत्यभिधीयते ॥ ३० ॥
विश्वं वैराजरूपेण पश्येद्भेदनिवृत्तये ।

ಬಾಹ್ಯಂತಃಕರಣೈರೇವಂ ದೇವತಾನುಗ್ರಹಾನ್ವಿತೈಃ ।
ಸ್ವಂ ಸ್ವಂ ಚ ವಿಷಯಜ್ಞಾನಂ ತಜ್ಜಾಗರಿತಮುಚ್ಯತೇ ॥ 29 ॥

ಯೋಽಯಂ ಜಾಗರಿತಾವಸ್ಥಾ ಶರೀರಂ ಕರಣಾಶ್ರಯಮ್ ।
ಯಸ್ತಯೋರಭಿಮಾನೀ ಸ್ಯಾದ್ವಿಶ್ವ ಇತ್ಯಭಿಧೀಯತೇ ॥ 30 ॥
ವಿಶ್ವಂ ವೈರಾಜರೂಪೇಣ ಪಶ್ಯೇದ್ಭೇದನಿವೃತ್ತಯೇ ।

ಬಾಹ್ಯ ಮತ್ತು ಆಂತರಿಕ ಇಂದ್ರಿಯಗಳು, ತಮ್ಮ ತಮ್ಮ ದೇವತೆಗಳ ಅನುಗ್ರಹದಿಂದ, ತಮ್ಮ ತಮ್ಮ ವಿಷಯ ವಸ್ತುಗಳ ಜ್ಞಾನವನ್ನು ಪಡೆಯುವ ಸ್ಥಿತಿಯನ್ನು ಜಾಗ್ರತಾವಸ್ಥೆಯೆನ್ನುತ್ತಾರೆ. ಇಂದ್ರಿಯಗಳಿಗೆ ಆಶ್ರಯವಾಗಿರುವ ಭೌತಿಕ ದೇಹದೊಂದಿಗೆ ಜಾಗ್ರತಾವಸ್ಥೆಯಲ್ಲಿ ತನ್ನನ್ನು ಗುರುತಿಸಿಕೊಳ್ಳುವ ಆತ್ಮವನ್ನು ವಿಶ್ವ ಎನ್ನುತ್ತಾರೆ. ಭೇದವನ್ನು ಹೋಗಲಾಡಿಸಲು ವಿಶ್ವನನ್ನು ವಿರಾಜ್ ರೂಪದಲ್ಲಿ ಕಾಣಬೇಕು. [29–31]

ತೈಜಸ ಮತ್ತು ಹಿರಣ್ಯಗರ್ಭನ ಏಕತೆ

ज्ञानेन्द्रियाणि पञ्चैव पञ्च कर्मेन्द्रियाणि च ॥ ३१ ॥
श्रोत्रत्वङ्नयनघ्राणजिह्वादीन्द्रियपञ्चकम् ।
वाक्पाणिपादपायूपस्थाः कर्मेन्द्रियपञ्चकम् ॥ ३२ ॥
मनो बुद्धिरहङ्कारश्चित्तं चेति चतुष्टयम् ।
सङ्कल्पाख्यं मनोरूपं बुद्धिनिश्चयेरूपिणी ॥ ३३ ॥
अभिमानात्मकस्तद्वदहङ्कारः प्रकीर्तितः ।
अनुसन्धानरूपश्च चित्तमित्यभिधीयते ॥ ३४ ॥
प्राणोपानस्तथा व्यान उदानाख्यस्तथैव च ।
समानश्चेति पञ्चैताः कीर्तिताः प्राणवृत्तयः ॥ ३५ ॥
खवाय्वग्न्यम्बुक्षितयो भुतसूक्ष्माणि पञ्च च ।
अविद्याकामकर्माणि लिङ्गं पर्यष्टकं विदुः ॥ ३६ ॥
एतत्सूक्ष्मशरीरं स्यान्मायिकं प्रत्यगात्मनः ।
करणोपरमे जाग्रत्संस्कारोत्थप्रबोधवत् ॥ ३७ ॥
ग्राह्यग्राहकरूपेण स्फुरणं स्वप्न उच्यते ।
अभिमानी तयोर्यस्तु तैजसः परिकीर्तितः ॥ ३८ ॥
हिरन्यगर्भरूपेण तैजसः चिन्तयेद्बुधः ।

ಜ್ಞಾನೇಂದ್ರಿಯಾಣಿ ಪಂಚೈವ ಪಂಚ ಕರ್ಮೇಂದ್ರಿಯಾಣಿ ಚ ॥ 31 ॥
ಶ್ರೋತ್ರತ್ವಙ್‌ನಯನಘ್ರಾಣಜಿಹ್ವಾದೀಂದ್ರಿಯಪಂಚಕಮ್ ।
ವಾಕ್ಪಾಣಿಪಾದಪಾಯೂಪಸ್ಥಾಃ ಕರ್ಮೇಂದ್ರಿಯಪಂಚಕಮ್ ॥ 32 ॥

ಮನೋ ಬುದ್ಧಿರಹಂಕಾರಶ್ಚಿತ್ತಂ ಚೇತಿ ಚತುಷ್ಟಯಮ್ ।
ಸಂಕಲ್ಪಾಖ್ಯಂ ಮನೋರೂಪಂ ಬುದ್ಧಿರ್ನಿಶ್ಚಯರೂಪಿಣೀ ॥ 33 ॥
ಅಭಿಮಾನಾತ್ಮಕಸ್ತದ್ವದಹಂಕಾರಃ ಪ್ರಕೀರ್ತಿತಃ ।
ಅನುಸಂಧಾನರೂಪಶ್ಚ ಚಿತ್ತಮಿತ್ಯಭಿಧೀಯತೇ ॥ 34 ॥
ಪ್ರಾಣೋಪಾನಸ್ತಥಾ ವ್ಯಾನ ಉದಾನಾಖ್ಯಸ್ತಥೈವ ಚ ।
ಸಮಾನಶ್ಚೇತಿ ಪಂಚೈತಾಃ ಕೀರ್ತಿತಾಃ ಪ್ರಾಣವೃತ್ತಯಃ ॥ 35 ॥
ಖವಾಯ್ವಗ್ನ್ಯಂಬುಕ್ಷಿತಯೋ ಭೂತಸೂಕ್ಷ್ಮಾಣಿ ಪಂಚ ಚ ।
ಅವಿದ್ಯಾಕಾಮಕರ್ಮಾಣಿ ಲಿಂಗಂ ಪರ್ಯಷ್ಟಕಂ ವಿದುಃ ॥ 36 ॥
ಏತತ್ಸೂಕ್ಷ್ಮಶರೀರಂ ಸ್ಯಾನ್ಮಾಯಿಕಂ ಪ್ರತ್ಯಗಾತ್ಮನಃ ।
ಕರಣೋಪರಮೇ ಜಾಗ್ರತ್ಸಂಸ್ಕಾರೋತ್ಥಪ್ರಬೋಧವತ್ ॥ 37 ॥
ಗ್ರಾಹ್ಯಗ್ರಾಹಕರೂಪೇಣ ಸ್ಫುರಣಂ ಸ್ವಪ್ನ ಉಚ್ಯತೇ ।
ಅಭಿಮಾನೀ ತಯೋರ್ಯಸ್ತು ತೈಜಸಃ ಪರಿಕೀರ್ತಿತಃ ॥ 38 ॥
ಹಿರಣ್ಯಗರ್ಭರೂಪೇಣ ತೈಜಸಃ ಚಿಂತಯೇದ್ಬುಧಃ ।

ಪ್ರತ್ಯಗಾತ್ಮನ ಭ್ರಮಾತ್ಮಕವಾದ ಸೂಕ್ಷ್ಮ ಶರೀರವು ಇವುಗಳನ್ನು ಒಳಗೊಂಡಿದೆ:

(1) ಐದು ಜ್ಞಾನೇಂದ್ರಿಯಗಳು (ಬಾಹ್ಯ) – ಶ್ರೋತ್ರ (ಕಿವಿ), ತ್ವಕ್ (ಚರ್ಮ), ನಯನ (ಕಣ್ಣು), ಘ್ರಾಣ (ಮೂಗು), ಜಿಹ್ವಾ (ನಾಲಗೆ).

(2) ಐದು ಕರ್ಮೇಂದ್ರಿಯಗಳು – ವಾಕ್ (ನಾಲಗೆ), ಪಾಣಿ (ಕೈ), ಪಾದ (ಕಾಲು), ಪಾಯು (ಗುದ), ಉಪಸ್ಥ (ಜನನಾಂಗ).

(3) ನಾಲ್ಕು ಆಂತರಿಕ ಇಂದ್ರಿಯಗಳು (ಅಂತಃಕರಣ) – ಮನಸು (ಆಲೋಚಿಸುವ), ಬುದ್ಧಿ (ನಿಶ್ಚಯಿಸುವ), ಅಹಂಕಾರ (ಸ್ವಯಂ ಅಭಿಮಾನ), ಚಿತ್ತ (ನೆನಪಿಸುವ).

(4) ಐದು ಪ್ರಾಣ ವಿಧಗಳು – ಪ್ರಾಣ, ಅಪಾನ, ಸಮಾನ, ಉದಾನ, ವ್ಯಾನ.

(5) ಪುರ್ಯಷ್ಟಕ ಯಾ ಅಷ್ಟ ಪುರಗಳು – ಪಂಚ ಸೂಕ್ಷ್ಮ ಭೂತಗಳು ಆಕಾಶ, ವಾಯು, ಅಗ್ನಿ, ಜಲ, ಭೂಮಿ ಮತ್ತು ಅವಿದ್ಯೆ, ಕಾಮ, ಕರ್ಮ – ಇವುಗಳು ಲಿಂಗ ಶರೀರವನ್ನುಂಟುಮಾಡುತ್ತವೆ ಎಂದು ತಿಳಿದವರು ಹೇಳುತ್ತಾರೆ.

ಇಂದ್ರಿಯಗಳು ನಿಶ್ಚಲವಾಗಿರುವಾಗ ಸಂಸ್ಕಾರಗಳು ಅಥವಾ ಜಾಗ್ರತಾವಸ್ಥೆಯ ನೆನಪುಗಳನ್ನು ಗ್ರಾಹಕ–ಗ್ರಾಹ್ಯ ರೂಪದಲ್ಲಿ ಆತ್ಮವು ಅನುಭವಿಸುವುದನ್ನು ಸ್ವಪ್ನಾವಸ್ಥೆ ಎನ್ನುತ್ತಾರೆ. ಸೂಕ್ಷ್ಮದೇಹದೊಡನೆ ಸ್ವಪ್ನಾವಸ್ಥೆಯಲ್ಲಿ ಇರುವ ಆತ್ಮವನ್ನು ತೈಜಸ ಎನ್ನುತ್ತಾರೆ. ಅರಿತವರು ತೈಜಸನನ್ನು ಹಿರಣ್ಯಗರ್ಭನ ರೂಪದಲ್ಲಿ ಚಿಂತಿಸಬೇಕು. [31–39]

चैतन्याभासखचितं शरीरद्वयकारणम् ॥ ३९ ॥
आत्मज्ञानं तदव्यक्तमव्याकृतमितीर्यते ।
न सन्नासन्न सदसद्भिन्नाभिन्नं न चोभयम् ॥ ४० ॥
न सभागं न निर्भागं न चाप्युभयरूपकम् ।
ब्रह्मात्मैकत्वविज्ञानहेयं मिथ्यात्वकारणात् ॥ ४१ ॥
ज्ञानानामुपसंहारो बुद्धेः कारणास्थितिः ।
वटबीजे वटस्येव सुषुप्तिरबिधीयते ॥ ४२ ॥
अभिमानी तयोर्यस्तु प्राज्ञ इत्यभिधीयते ।
जगत्कारणरूपेण प्राज्ञात्मानं विचिन्तयेत् ॥ ४३ ॥

ಚೈತನ್ಯಾಭಾಸಖಚಿತಂ ಶರೀರದ್ವಯಕಾರಣಮ್ ॥ 39 ॥
ಆತ್ಮಜ್ಞಾನಂ ತದವ್ಯಕ್ತಮವ್ಯಾಕೃತಮಿತೀರ್ಯತೇ ।
ನ ಸನ್ನಾಸನ್ನ ಸದಸದ್ಭಿನ್ನಾಭಿನ್ನಂ ನ ಚೋಭಯಂ ॥ 40 ॥
ನ ಸಭಾಗಂ ನ ನಿರ್ಭಾಗಂ ನ ಚಾಪ್ಯುಭಯರೂಪಕಮ್ ।
ಬ್ರಹ್ಮಾತ್ಮೈಕತ್ವವಿಜ್ಞಾನಹೇಯಂ ಮಿಥ್ಯಾತ್ವಕಾರಣಾತ್ ॥ 41 ॥
ಜ್ಞಾನಾನಾಮುಪಸಂಹಾರೋ ಬುದ್ಧೇಃ ಕಾರಣಾಸ್ಥಿತಿಃ ।
ವಟಬೀಜೇ ವಟಸ್ಯೇವ ಸುಷುಪ್ತಿರಭಿಧೀಯತೇ ॥ 42 ॥
ಅಭಿಮಾನೀ ತಯೋರ್ಯಸ್ತು ಪ್ರಾಜ್ಞ ಇತ್ಯಭಿಧೀಯತೇ ।
ಜಗತ್ಕಾರಣರೂಪೇಣ ಪ್ರಾಜ್ಞಾತ್ಮಾನಂ ವಿಚಿಂತಯೇತ್ ॥ 43 ॥

ಅಜ್ಞಾನ ಮತ್ತು ಭ್ರಾಮಕ ಜ್ಞಾನಗಳು ಆತ್ಮವನ್ನು ಎರಡು ದೇಹಗಳಂತೆ (ಸ್ಥೂಲ – ಸೂಕ್ಷ್ಮ) ಕಾಣಿಸುತ್ತವೆ; ಅದನ್ನು ಅವ್ಯಕ್ತ ಮತ್ತು ಅವ್ಯಾಕೃತ ಎಂದು ಹೇಳುತ್ತಾರೆ. ಅವುಗಳಿಗೆ ಅಸ್ತಿತ್ವವಿದೆ ಯಾ ಅಸ್ತಿತ್ವವಿಲ್ಲ ಅಥವಾ ಎರಡೂ ಅಸ್ತಿತ್ವವುಳ್ಳದ್ದೂ, ಅಸ್ತಿತ್ವವಿಲ್ಲದ್ದೂ ಆಗಿವೆ. ಅವು ಬ್ರಹ್ಮನಿಂದ ಭಿನ್ನವಾಗಿವೆ ಹಾಗೂ ಅಭಿನ್ನವಾಗಿವೆ ಯಾ ಎರಡೂ ಆಗಿವೆ. ಅವು ಅಂಗಗಳಿಂದ ಮಾಡಲ್ಪಟ್ಟಿವೆ ಯಾ ಅಂಗಗಳಿಂದ ಮಾಡಲ್ಪಟ್ಟಿಲ್ಲ ಅಥವಾ ಎರಡೂ ಅಗಿವೆ. ಅವು ಮಿಥ್ಯೆಯಾದುದರಿಂದ ಬ್ರಹ್ಮ ಮತ್ತು ಆತ್ಮದ ಏಕತೆಯ ಜ್ಞಾನದಿಂದ ಅವುಗಳನ್ನು ತೊಡೆದುಹಾಕಬಹುದು. ಗುರುತುಹಿಡಿಯುವ ಎಲ್ಲಾ ಕಾರ್ಯಗಳೂ ಸ್ಥಗಿತವಾಗಿ, ಬುದ್ಧಿಯು ತನ್ನ ಕಾರಣದೊಡನೆ ಒಂದಾದಾಗ, ಆಲದಮರವು ಅದರ ಬೀಜದೊಳಗೆ ಇರುವಂತೆ, ಆತ್ಮವು ಸುಷುಪ್ತಿ ಅವಸ್ಥೆಯನ್ನು ಹೊಂದುತ್ತದೆ. ಸುಷುಪ್ತಿಯಲ್ಲಿರುವ ಆತ್ಮವನ್ನು ಪ್ರಾಜ್ಞ ಎನ್ನುತ್ತಾರೆ ಹಾಗೂ ಪ್ರಾಜ್ಞ ಮತ್ತು ಜಗತ್ಕಾರಣನಾದ ಈಶ್ವರನ ಅಭೇದವನ್ನು ಕುರಿತು ಚಿಂತಿಸಬೇಕು. [39–43]

विश्वतैजससौषुप्तविराट्सूत्राक्षरात्मभिः ।
विभिन्नमिव संमोहादेकतत्त्वं चिदात्मकम् ॥ ४४ ॥
विश्वादित्रयं यस्माद्वैराजादित्रयात्मकम् ।
एकत्वेन समं पश्येदन्याभावप्रसिद्धये ॥ ४५ ॥

ವಿಶ್ವತೈಜಸೌಷುಪ್ತವಿರಾಟ್ಸೂತ್ರಾಕ್ಷರಾತ್ಮಭಿಃ ।
ವಿಭಿನ್ನಮಿವ ಸಂಮೋಹಾದೇಕತತ್ತ್ವಂ ಚಿದಾತ್ಮಕಮ್ ॥ 44 ॥
ವಿಶ್ವಾದಿತ್ರಯಂ ಯಸ್ಮಾದ್ವೈರಾಜಾದಿತ್ರಯಾತ್ಮಕಮ್ ।
ಏಕತ್ವೇನ ಸಮಂ ಪಶ್ಯೇದನ್ಯಾಭಾವಪ್ರಸಿದ್ಧಯೇ ॥ 45 ॥

ಒಂದೇ ಆದ ಸ್ವಯಂಜ್ಞಾನಿಯಾದ ಆತ್ಮತತ್ತ್ವವು, ಭ್ರಮೆಯ ಕಾರಣದಿಂದ ವಿಶ್ವ, ತೈಜಸ ಮತ್ತು ಪ್ರಾಜ್ಞನಾಗಿ ಹಾಗೂ ವಿರಾಟ್, ಸೂತ್ರ ಮತ್ತು ಅಕ್ಷರನಾಗಿಯೂ ಕಂಡುಬರುತ್ತದೆ. ವಿಶ್ವ ಇತ್ಯಾದಿ ಮೂರು ರೂಪಗಳು ವಿರಾಟ್ ಇತ್ಯಾದಿ ಮೂರು ರೂಪಗಳೊಂದಿಗೆ ಏಕತ್ವವನ್ನು ಹೊಂದಿರುವುದರಿಂದ, ಅವೆಲ್ಲವೂ ಒಂದೇ ತತ್ತ್ವವಾಗಿದೆ ಹಾಗೂ ಬೇರೆಲ್ಲದರ ಅಭಾವವಿದೆ ಎಂದು ತಿಳಿಯಬೇಕು. [44–45]

ಪ್ರಣವದಿಂದ ಆತ್ಮಧ್ಯಾನ

ओंकारमात्रमखिलं विश्वप्राज्ञादिलक्षणम् ।
वाच्यवाचकताभेदाद्भेदेनानुपलब्धितः ॥ ४६ ॥
अकारमात्रं विश्वस्य उकारस्तैजसस्स्मृतः ।
प्राज्ञो मकार इत्येवं परिपश्येत्क्रमेण तु ॥ ४७ ॥

ಓಂಕಾರಮಾತ್ರಮಖಿಲಂ ವಿಶ್ವಪ್ರಾಜ್ಞಾದಿಲಕ್ಷಣಮ್ ।
ವಾಚ್ಯವಾಚಕತಾಭೇದಾದ್ಭೇದೇನಾನುಪಲಬ್ಧಿತಃ ॥ 46 ॥
ಅಕಾರಮಾತ್ರಂ ವಿಶ್ವಸ್ಯ ಉಕಾರಸ್ತೈಜಸಸ್ಸ್ಮೃತಃ ।
ಪ್ರಾಜ್ಞೋ ಮಕಾರ ಇತ್ಯೇವಂ ಪರಿಪಶ್ಯೇತ್ಕ್ರಮೇಣ ತು ॥ 47 ॥

ಪ್ರಾಜ್ಞಾದಿಗಳಿಂದ ಮಾಡಲ್ಪಟ್ಟ ಸಂಪೂರ್ಣ ಜಗತ್ತು 'ಓಂ'ಕಾರದೊಂದಿಗೆ ಐಕ್ಯತೆಯನ್ನು ಹೊಂದಿದೆ; ಯಾಕೆಂದರೆ ಜಗತ್ತು ಬೇರೆ ಬೇರೆಯಾಗಿ ಅನುಭವಕ್ಕೆ ಬರದ ವಾಚ್ಯ–ವಾಚಕ (ಹೇಳಿದ್ದು–ಹೇಳುವವನು) ಭೇದದಿಂದ ಮಾಡಲ್ಪಟ್ಟಿದೆ. ವಿಶ್ವನು 'ಅ'ಕಾರದೊಂದಿಗೆ, ತೈಜಸನು 'ಉ'ಕಾರದೊಂದಿಗೆ ಮತ್ತು ಪ್ರಾಜ್ಞನು 'ಮ'ಕಾರದೊಂದಿಗೆ ಕ್ರಮವಾಗಿ ಐಕ್ಯವಾಗಿರುವರು ಎಂದು ಪರಿಗಣಿಸಬೇಕು. [46–47]

समाधिकालाप्रागेवं विचिन्त्यातिप्रयत्नतः ।
स्तूलसूक्ष्मक्रमात्सर्वं चिदात्मनि विलपयेत् ॥ ४८ ॥
अकारं पुरुषं विश्वमुकारे प्रविलापयेत् ।
उकारं तैजसं सूक्ष्मं मकारे प्रविलापयेत् ॥ ४९ ॥
मकारं कारणं प्राज्ञा चिदात्मनि विलापयेत् ।
चिदात्माहं नित्यशुद्धमुद्धमुक्तसदद्वयः ॥ ५० ॥
परमानन्दसन्दोहवासुदेवोहमोमिति ।
ज्ञात्वा विवेचकं चित्तं तत्साक्षिणि विलापयेत् ॥ ५१ ॥
चिदात्मनि विलीनंचेत्तच्चित्तं नैव चालयेत् ।
पूर्णबोधात्मनासीत पूर्णाचलसमुद्रवत् ॥ ५२ ॥

ಸಮಾಧಿಕಾಲಾಪ್ರಾಗೇವಂ ವಿಚಿಂತ್ಯಾತಿಪ್ರಯತ್ನತಃ ।
ಸ್ಥೂಲಸೂಕ್ಷ್ಮಕ್ರಮಾತ್ಸರ್ವಂ ಚಿದಾತ್ಮನಿ ವಿಲಾಪಯೇತ್ ॥ 48 ॥
ಅಕಾರಂ ಪುರುಷಂ ವಿಶ್ವಮುಕಾರೇ ಪ್ರವಿಲಾಪಯೇತ್ ।
ಉಕಾರಂ ತೈಜಸಂ ಸೂಕ್ಷ್ಮಂ ಮಕಾರೇ ಪ್ರವಿಲಾಪಯೇತ್ ॥ 49 ॥
ಮಕಾರಂ ಕಾರಣಂ ಪ್ರಾಜ್ಞಾ ಚಿದಾತ್ಮನಿ ವಿಲಾಪಯೇತ್ ।
ಚಿದಾತ್ಮಾಹಂ ನಿತ್ಯಶುದ್ಧಮುದ್ಧಮುಕ್ತಸದದ್ವಯಃ ॥ 50 ॥
ಪರಮಾನಂದಸಂದೋಹವಾಸುದೇವೋಹಮೋಮಿತಿ ।
ಜ್ಞಾತ್ವಾ ವಿವೇಚಕಂ ಚಿತ್ತಂ ತತ್ಸಾಕ್ಷಿಣಿ ವಿಲಾಪಯೇತ್ ॥ 51 ॥
ಚಿದಾತ್ಮನಿ ವಿಲೀನಂ ಚೇತ್ತಚ್ಚಿತ್ತಂ ನೈವ ಚಾಲಯೇತ್ ।
ಪೂರ್ಣಬೋಧಾತ್ಮನಾಸೀತ ಪೂರ್ಣಾಚಲಸಮುದ್ರವತ್ ॥ 52 ॥

ಸಮಾಧಿ ಸ್ಥಿತಿಯನ್ನು ಪಡೆಯುವ ಮೊದಲು, ಪ್ರಯತ್ನಪೂರ್ವಕವಾಗಿ ಸ್ಥೂಲವನ್ನು ಸೂಕ್ಷ್ಮದಲ್ಲಿ ವಿಲೀನಗೊಳಿಸುವ ಕ್ರಮದಿಂದ ಭಾವಿಸಿ ಕೊನೆಗೆ ಸಂಪೂರ್ಣ ಬ್ರಹ್ಮಾಂಡವನ್ನು ಚಿದಾತ್ಮನಲ್ಲಿ ವಿಲೀನಗೊಳಿಸಬೇಕು. ಅಕಾರದ ಸ್ಥೂಲ ವಿಶ್ವ ರೂಪದ ಪುರುಷನನ್ನು ಉಕಾರದಲ್ಲಿ ವಿಲೀನಗೊಳಿಸಬೇಕು; ಉಕಾರದ ಸೂಕ್ಷ್ಮ ತೈಜಸನನ್ನು ಮಕಾರದಲ್ಲಿ ವಿಲೀನಗೊಳಿಸಬೇಕು; ಮಕಾರದ ಪ್ರಾಜ್ಞನನ್ನು ಚಿದಾತ್ಮನಲ್ಲಿ ವಿಲೀನಗೊಳಿಸಬೇಕು. "ನಾನು ಚಿದಾತ್ಮನು ಶಾಶ್ವತ, ಶುದ್ಧ, ಬುದ್ಧ (ಜ್ಞಾನಿ), ಮುಕ್ತ, ಸತ್ಯ ಮತ್ತು ಅದ್ವಿತೀಯನು; ನಾನೇ ಓಂಕಾರವು, ವಾಸುದೇವನು, ಪರಮಾನಂದ ಸ್ವರೂಪನು" ಎಂದು ಆಲೋಚಿಸಿ ವಿಭಜಿಸುವ ಯೋಚನೆಗಳ ಚಿತ್ತವನ್ನು ಅದರ ಸಾಕ್ಷಿಯಲ್ಲಿ ವಿಲೀನಗೊಳಿಸಬೇಕು. ಸ್ವರೂಪಜ್ಞಾನಿಯಾದ ಆತ್ಮದಲ್ಲಿ ವಿಲೀನ ಹೊಂದಿದಾಗ, ಬೇರಾವ ಯೋಚನೆಗಳು ಬರದೆ ಪೂರ್ಣಜ್ಞಾನಿಯಾಗುತ್ತಾನೆ, ತುಂಬಿದ ನಿಶ್ಚಲವಾದ ಸಮುದ್ರದಂತೆ. [48–52]

एवं समाहितो योगी श्रद्धाभक्तिसमन्वितः ।

जितेन्द्रियो जितक्रोधः पश्येदात्मानमद्वयम् ॥ ५३ ॥
आदिमध्यावसानेषु दुःखं सर्वमिदं यतः ।
तस्मात्सर्वं परित्यज्य तत्त्वनिष्ठो भवेत्सदा ॥ ५४ ॥

ಏವಂ ಸಮಾಹಿತೋ ಯೋಗೀ ಶ್ರದ್ಧಾಭಕ್ತಿಸಮನ್ವಿತಃ ।
ಜಿತೇಂದ್ರಿಯೋ ಜಿತಕ್ರೋಧಃ ಪಶ್ಯೇದಾತ್ಮಾನಮದ್ವಯಮ್ ॥ 53 ॥
ಆದಿಮಧ್ಯಾವಸಾನೇಷು ದುಃಖಂ ಸರ್ವಮಿದಂ ಯತಃ ।
ತಸ್ಮಾತ್ಸರ್ವಂ ಪರಿತ್ಯಜ್ಯ ತತ್ತ್ವನಿಷ್ಠೋ ಭವೇತ್ಸದಾ ॥ 54 ॥

ಹೀಗೆ ಸಮಾಹಿತನಾದ ಯೋಗಿಯು, ಶ್ರದ್ಧಾ ಭಕ್ತಿಯಿಂದ ಇಂದ್ರಿಯಗಳನ್ನು ಮತ್ತು ಕ್ರೋಧವನ್ನು ಜಯಿಸಿದರೆ ಅದ್ವಿತೀಯನಾದ ಆತ್ಮವನ್ನು ಕಾಣುತ್ತಾನೆ. ಆದಿ, ಮಧ್ಯ ಮತ್ತು ಅಂತ್ಯದಲ್ಲಿ ದುಃಖವೇ ತುಂಬಿರುವಾಗ ಪ್ರಯತ್ನದಿಂದ ಎಲ್ಲವನ್ನೂ ಪರಿತ್ಯಜಿಸಿ, ಚಿದಾತ್ಮನಲ್ಲಿ ನಿಷ್ಠನಾಗಿರಬೇಕು. [53–54]

ಜೀವನ್ಮುಕ್ತಿ

यः पश्येत्सर्वगं शान्तमानन्दात्मानमद्वयम् ।
न तेन किञ्चिदाप्तव्यं ज्ञातव्यं वाऽवशिष्यते ॥ ५५ ॥
कृतकृत्यो भवेद्विद्वान् जीवन्मुक्तो भवेत्सदा ।
आत्मन्यारूढभावस्तु जगदेतन्न वीक्षते ॥ ५६ ॥
कदाचिद्व्यवहारेषु द्वैतं यद्यपि पश्यति ।
बोधात्मव्यतिरेकेण न पश्यति चिदन्वयात् ॥ ५७ ॥
किं तु पश्यति मिथ्येदं दिङ्मोहेन्दुविभागवत् ।
प्रतिभासशरीरस्स्यात्तदा प्रारब्दसञ्चयात् ॥ ५८ ॥
तस्य तावदेव चिरमित्यादिश्रुतिरब्रवीत् ।
प्रारब्धस्यानुवृत्तिस्तु मुक्तस्याभासमात्रतः ॥ ५९ ॥
सर्वदा मुक्त एव स्यात् ज्ञाततत्त्वः पुमानसौ ।
प्रारब्धशेषभोगस्य संक्षये तदनन्तरम् ॥ ६० ॥
अविद्यातिमिरातीतं सर्वाभासविवर्जितम् ।
चैतन्यममलं शुद्धं मनोवाचामगोचरम् ॥ ६१ ॥
वाच्यवाचकनिर्मुक्तं हेयोपादेयवर्जितम् ।
प्रज्ञानघनमानन्दं वैष्णवं पदमश्नुते ॥ ६२ ॥

ಯಃ ಪಶ್ಯೇತ್ಸರ್ವಗಂ ಶಾಂತಮಾನಂದಾತ್ಮಾನಮದ್ವಯಂ ।
ನ ತೇನ ಕಿಂಚಿದಾಪ್ತವ್ಯಂ ಜ್ಞಾತವ್ಯಂ ವಾಽವಶಿಷ್ಯತೇ ॥ 55 ॥
ಕೃತಕೃತ್ಯೋ ಭವೇದ್ವಿದ್ವಾನ್ ಜೀವನ್ಮುಕ್ತೋ ಭವೇತ್ಸದಾ ।
ಆತ್ಮನ್ಯಾರೂಢಭಾವಸ್ತು ಜಗದೇತನ್ನ ವೀಕ್ಷತೇ ॥ 56 ॥
ಕದಾಚಿದ್ವ್ಯವಹಾರೇಷು ದ್ವೈತಂ ಯದ್ಯಪಿ ಪಶ್ಯತಿ ।
ಬೋಧಾತ್ಮವ್ಯತಿರೇಕೇಣ ನ ಪಶ್ಯತಿ ಚಿದನ್ವಯಾತ್ ॥ 57 ॥
ಕಿಂ ತು ಪಶ್ಯತಿ ಮಿಥ್ಯೇದಂ ದಿಙ್ಮೋಹೇಂದುವಿಭಾಗವತ್ ।
ಪ್ರತಿಭಾಸಶರೀರಸ್ಸ್ಯಾತ್ತದಾ ಪ್ರಾರಬ್ಧಸಂಚಯಾತ್ ॥ 58 ॥
ತಸ್ಯ ತಾವದೇವ ಚಿರಮಿತ್ಯಾದಿಶ್ರುತಿರಬ್ರವೀತ್ ।
ಪ್ರಾರಬ್ಧಸ್ಯಾನುವೃತ್ತಿಸ್ತು ಮುಕ್ತಸ್ಯಾಭಾಸಮಾತ್ರತಃ ॥ 59 ॥
ಸರ್ವದಾ ಮುಕ್ತ ಏವ ಸ್ಯಾತ್ ಜ್ಞಾತತತ್ತ್ವಃ ಪುಮಾನಸೌ ।
ಪ್ರಾರಬ್ಧಶೇಷಭೋಗಸ್ಯ ಸಂಕ್ಷಯೇ ತದನಂತರಮ್ ॥ 60 ॥
ಅವಿದ್ಯಾತಿಮಿರಾತೀತಂ ಸರ್ವಾಭಾಸವಿವರ್ಜಿತಮ್ ।
ಚೈತನ್ಯಮಮಲಂ ಶುದ್ಧಂ ಮನೋವಾಚಾಮಗೋಚರಮ್ ॥ 61 ॥
ವಾಚ್ಯವಾಚಕನಿರ್ಮುಕ್ತಂ ಹೇಯೋಪಾದೇಯವರ್ಜಿತಮ್ ।
ಪ್ರಜ್ಞಾನಘನಮಾನಂದಂ ವೈಷ್ಣವಂ ಪದಮಶ್ನುತೇ ॥ 62 ॥

ಸರ್ವವ್ಯಾಪಕ, ಶಾಂತ, ಅದ್ವಯ, ಆನಂದಮಯನಾದ ಆತ್ಮವನ್ನು ಕಂಡವನಿಗೆ, ಬೇರೇನೂ ಗಳಿಸಲು ಯಾ ತಿಳಿಯಲು ಉಳಿದಿಲ್ಲ. ಎಲ್ಲಾ ಬಯಕೆಗಳನ್ನು ತೀರಿಸಿಕೊಂಡವನಾದ ಅವನು ವಿದ್ವಾನನಾಗಿ ಜೀವನ್ಮುಕ್ತನಾಗುತ್ತಾನೆ; ಆತ್ಮದಲ್ಲೇ ಲೀನನಾದ ಅವನಿಗೆ ಜಗತ್ತು ಕಾಣುವುದಿಲ್ಲ. ಕೆಲವು ಬಾರಿ ಜಗತ್ತಿನ ವ್ಯವಹಾರದಲ್ಲಿ ನಿರತನಾಗಿದ್ದಾಗ ಅವನಿಗೆ ದ್ವೈತ ರೂಪದ ಜಗತ್ತು ಅನುಭವಕ್ಕೆ ಬರುತ್ತದೆ; ಆದರೆ ಅದು ಚಿದಾತ್ಮನಿಗಿಂತ ಬೇರೆಯೆಂದು ಅವನು ಭಾವಿಸುವುದಿಲ್ಲ. ಹಾಗಲ್ಲದೆ ಅವನು ವಿಶ್ವವನ್ನು ಮಿಥ್ಯೆಯೆಂದು, ನಾಲ್ಕು ದಿಕ್ಕುಗಳು ಭ್ರಮೆಗೊಳಿಸುವಂತೆ ಅಥವಾ ಹಲವು ಚಂದ್ರರು ಕಾಣುವಂತೆ, ತಿಳಿಯುತ್ತಾನೆ. ಬಳಿಕ ಸಂಗ್ರಹವಾದ ಪ್ರಾರಬ್ಧಕರ್ಮದ (ಫಲ ನೀಡಲು ಆರಂಭಿಸಿರುವ ಕರ್ಮ) ಕಾರಣದಿಂದ ಅವನು ಶರೀರದ ಅಸ್ತಿತ್ವವನ್ನು ಕಂಡುಕೊಳ್ಳುತ್ತಾನೆ; ಅವನು ಮೃತ್ಯುವಿನವರೆಗೆ ಮಾತ್ರ ಕಾಯಬೇಕು ಹಾಗೂ ಜೀವನ್ಮುಕ್ತರಲ್ಲಿ ಪ್ರಾರಬ್ದವು ಮುಂದುವರಿಯುವುದೆಂಬುದು ಕೇವಲ ಭ್ರಮೆಯಾಗಿದೆ. ನಿಜಸ್ವರೂಪವನ್ನು ತಿಳಿದಿರುವ ಈ ವ್ಯಕ್ತಿಯು ಯಾವಾಗಲೂ ಬಂಧನಗಳಿಂದ ಮುಕ್ತನಾಗಿರುತ್ತಾನೆ ಮತ್ತು ಬೇರೆ ರೀತಿ ಅಲ್ಲ. ಪ್ರಾರಬ್ಧದ ಫಲಗಳು ನಿವೃತ್ತಿಯಾದ ಬಳಿಕ ಅವನು ಅವಿದ್ಯೆಯ ಕತ್ತಲೆಯಿಂದ ದೂರವಿರುವ, ಎಲ್ಲಾ ಆಭಾಸಗಳಿಗೆ ಹೊರತಾಗಿರುವ, ಮಲರಹಿತವಾದ, ಶುದ್ಧವಾಗಿ ಮನಸು ವಾಕ್‌ಗಳಿಗೆ ಅಗೋಚರವಾದ, ವಾಚ್ಯ–ವಾಚಕ ಭೇದದಿಂದ ಮುಕ್ತನಾದ, ಗಳಿಸಿರುವ ಮತ್ತು ಗಳಿಸದಿರುವ ಎಂಬ ಭೇದವಿಲ್ಲದ, ಜ್ಞಾನ ಮತ್ತು ಆನಂದಗಳಿಂದ ತುಂಬಿದ ವಿಷ್ಣುವಿನ ಪದವನ್ನು ಅಲಂಕರಿಸುತ್ತಾನೆ. [55–62]

ಉಪಸಂಹಾರ

इदं प्रकरणं यस्मात् ज्ञातव्यं भगवत्तमै ।

अमानित्वादिनियमैर्गुरुभक्तिप्रसादतः ॥ ६३ ॥
इमां विद्यां प्रयत्नेन योगि सन्ध्यासु सर्वदा ।
समभ्यसेदिहामुत्र भोगानासक्तधीस्सुधीः ॥ ६४ ॥
रागद्वेषादिरहितं स्वात्मानं चिन्तयेत्सदा ॥ ६५ ॥

ಇದಂ ಪ್ರಕರಣಂ ಯಸ್ಮಾತ್ ಜ್ಞಾತವ್ಯಂ ಭಗವತ್ತಮೈ ।
ಅಮಾನಿತ್ವಾದಿನಿಯಮೈರ್ಗುರುಭಕ್ತಿಪ್ರಸಾದತಃ ॥ 63 ॥
ಇಮಾಂ ವಿದ್ಯಾಂ ಪ್ರಯತ್ನೇನ ಯೋಗೀ ಸಂಧ್ಯಾಸು ಸರ್ವದಾ ।
ಸಮಭ್ಯಸೇದಿಹಾಮುತ್ರ ಭೋಗಾನಾಸಕ್ತಧೀಸ್ಸುಧೀಃ ॥ 64 ॥
ರಾಗದ್ವೇಷಾದಿರಹಿತಂ ಸ್ವಾತ್ಮಾನಂ ಚಿಂತಯೇತ್ಸದಾ ॥ 65 ॥

ಈ ಸ್ತೋತ್ರವನ್ನು ನಿರಹಂಕಾರ ಮುಂತಾದ ಗುಣಗಳಿಂದ (ಭಗವದ್ಗೀತೆ 12, 13–20), ಗುರುಭಕ್ತಿಯನ್ನು ಕೂಡಿ ಗುರುವಿನ ಅನುಗ್ರಹ ಸಹಿತವಾಗಿ ಎಲ್ಲರೂ ತಿಳಿದುಕೊಳ್ಳಬೇಕು. ಜ್ಞಾನಿಯಾದ ಯೋಗಿಯು ಎಲ್ಲಾ ಸಂಧ್ಯೆಗಳಲ್ಲಿಯೂ ಇಹ–ಪರ ಭೋಗಲಾಲಸೆಗಳ ಬೆನ್ನುಹತ್ತದೆ ಈ ವಿದ್ಯೆಯನ್ನು ಪ್ರಯತ್ನಪೂರ್ವಕವಾಗಿ ಅಭ್ಯಾಸ ಮಾಡಬೇಕು. ಅವನು ರಾಗ–ದ್ವೇಷರಹಿತನಾಗಿ ತನ್ನ ಆತ್ಮದ ಕುರಿತು ಸದಾ ಧ್ಯಾನಿಸಬೇಕು. [63–65]

॥ ॐ तत् सत् ॥ ॐ ತತ್ ಸತ್ ॥

ದಕ್ಷಿಣಾಮೂರ್ತಿ ಉಪನಿಷತ್ತು

याजुषी दक्षिणामूर्ति उपनिषत्

ಯಾಜುಷೀ ದಕ್ಷಿಣಾಮೂರ್ತಿ ಉಪನಿಷತ್

(ಕೃಷ್ಣ ಯಜುರ್ವೇದಕ್ಕೆ ಸೇರಿದೆ)

ओं सह नाववतु । सह नौभुनक्तु । सह वीर्यं करवावहै । तेजस्वि नावधीतमस्तु । मा विद्विषावहै । ओं शान्तिः शान्तिः शान्तिः ॥

ಓಂ ಸಹ ನಾವವತು । ಸಹ ನೌ ಭುನಕ್ತು । ಸಹ ವೀರ್ಯಂ ಕರವಾವಹೈ । ತೇಜಸ್ವಿ ನಾವಧೀತಮಸ್ತು । ಮಾ ವಿದ್ವಿಷಾವಹೈ । ಓಂ ಶಾಂತಿಃ ಶಾಂತಿಃ ಶಾಂತಿಃ ॥

(ಬ್ರಹ್ಮನು) ನಮ್ಮನ್ನು (ಗುರು ಮತ್ತು ಶಿಷ್ಯರನ್ನು) ರಕ್ಷಿಸಲಿ; ನಾವೆಲ್ಲರೂ ಒಟ್ಟಿಗೇ ಆಹಾರವನ್ನು ಸೇವಿಸುವ; ನಮ್ಮೆಲ್ಲರ ಶಕ್ತಿಯು ವೃದ್ಧಿಸಲಿ; ನಾವೆಲ್ಲರೂ ತೇಜಸ್ವಿಗಳಾಗೋಣ; ಯಾರನ್ನೂ ದ್ವೇಷಿಸದೇ ಇರೋಣ. ಓಂ ಶಾಂತಿಃ ಶಾಂತಿಃ ಶಾಂತಿಃ.

ओं । ब्रह्मावर्ते महाभाण्डीरवटमूले महासत्राय समेता महर्षयः शौनकादयः । ते ह समित्पाणयस्तत्वं जिज्ञासवो मार्कण्डेयं चिरजीविनमुपसमेत्य प्रपच्छुः – केन त्वं चिरं जीवसि? केन वाऽऽनन्दमनुबवसीति ?

ಓಂ । ಬ್ರಹ್ಮಾವರ್ತೇ ಮಹಾಭಾಂಡೀರವಟಮೂಲೇ ಮಹಾಸತ್ರಾಯ ಸಮೇತಾ ಮಹರ್ಷಯಃ ಶೌನಕಾದಯಃ । ತೇ ಹ ಸಮಿತ್ಪಾಣಯಸ್ತತ್ವಂ ಜಿಜ್ಞಾಸವೋ ಮಾರ್ಕಂಡೇಯಂ ಚಿರಜೀವಿನಮುಪಸಮೇತ್ಯ ಪಪ್ರಚ್ಛುಃ – ಕೇನ ತ್ವಂ ಚಿರಂ ಜೀವಸಿ ? ಕೇನ ವಾಽಽನಂದಮನುಭವಸೀತಿ ?

ಓಮ್. ಬ್ರಹ್ಮಾವರ್ತದಲ್ಲಿ, ಒಂದು ಮಹಾ ಭಾಂಡೀರವೆಂಬ ವಟವೃಕ್ಷದ ಕೆಳಗೆ, ಶೌನಕಾದಿ ಋಷಿಗಳ ಸಮೇತವಾಗಿ ಅನೇಕ ಮಹಾಋಷಿಗಳು ಒಂದು ಮಹಾಯಾಗವನ್ನು ಮಾಡಲು ಸೇರಿದ್ದರು. ಆಗ ಸತ್ಯವನ್ನು ತಿಳಿಯುವ ಆಸಕ್ತಿಯುಳ್ಳ ಶೌನಕಾದಿಗಳು ಕೈಯಲ್ಲಿ ಸಮಿಧೆಯನ್ನು ಹಿಡಿದುಕೊಂಡು (ಜ್ಞಾನಾಕಾಂಕ್ಷಿಯಾದವನು ಗುರುವನ್ನು ಸಮೀಪಿಸುವ ಪದ್ಧತಿ), ಚಿರಂಜೀವಿಯಾದ (ಬಹು ಸಮಯ ಬದುಕಿದ್ದ) ಮಾರ್ಕಂಡೇಯ ಮುನಿಯನ್ನು ಸಮೀಪಿಸಿ ಕೇಳಿದರು: ನೀವು ಬಹುಕಾಲ ಹೇಗೆ ಬದುಕಿದ್ದೀರಿ? ಹಾಗೂ ಇಷ್ಟು ಆನಂದವನ್ನು ಯಾಕಾಗಿ ಅನುಭವಿಸುತ್ತಿದ್ದೀರಿ?

परमरहस्यशिवतत्त्वज्ञानेनोति स होवाच ।

ಪರಮರಹಸ್ಯಶಿವತತ್ತ್ವಜ್ಞಾನೇನೋತಿ ಸ ಹೋವಾಚ ।

ಅವನು ಹೇಳಿದನು: ಪರಮರಹಸ್ಯವಾದ ಶಿವತತ್ವವನ್ನು ತಿಳಿದುದರಿಂದ.

किं तत् परमरहस्यशिवतत्त्वज्ञानम् ? तत्र को देवः ? के मन्त्राः ? का निष्ठा ? किं तज्ज्ञानसाधनम् ? कः परिकरः ? को बलिः ? कः कालः ? किं तस्थानमिति ?

ಕಿಂ ತತ್ ಪರಮರಹಸ್ಯಶಿವತತ್ವಜ್ಞಾನಮ್ ? ತತ್ರ ಕೋ ದೇವಃ ? ಕೇ ಮಂತ್ರಾಃ ? ಕಾ ನಿಷ್ಠಾ ? ಕಿಂ ತಜ್ಜ್ಞಾನಸಾಧನಮ್ ? ಕಃ ಪರಿಕರಃ ? ಕೋ ಬಲಿಃ ? ಕಃ ಕಾಲಃ ? ಕಿಂ ತತ್ಸ್ಥಾನಮಿತಿ ?

ಪರಮರಹಸ್ಯವಾದ ಶಿವತತ್ವದ ಜ್ಞಾನ ಯಾವುದು? ಅದರ ದೇವತೆ ಯಾರು? ಅದರ ಮಂತ್ರಗಳು ಯಾವುವು? ಅದರ ನಿಯಮಗಳೇನು? ಆ ಜ್ಞಾನವನ್ನು ಪಡೆಯುವ ಉಪಾಯ ಯಾವುದು? ಅದಕ್ಕೆ ಬೇಕಾದ ಪರಿಕರಗಳು ಯಾವುದು? ಕೊಡಬೇಕಾದ ಬಲಿ (ನೈವೇದ್ಯ) ಯಾವುದು? ಅದನ್ನು ಸಾಧಿಸುವ ಕಾಲ ಯಾವುದು? ಅದರ ಸ್ಥಾನ ಯಾವುದು?

स होवाच – येन दक्षिणामुखः शिवोऽपरोपीकृतो भवति तत् परमरहस्यशिवतत्त्वज्ञानम् । यः सर्वोपरमकाले सर्वानात्मन्युपसंहृत्य स्वात्मानन्दे सुखे मोदते प्रकाशते वा स देवः । अत्रैते मन्त्ररहस्य श्लोका भवीन्त –

ಸ ಹೋವಾಚ – ಯೇನ ದಕ್ಷಿಣಾಮುಖಃ ಶಿವೋಽಪರೋಪೀಕೃತೋ ಭವತಿ ತತ್ ಪಮರಹಸ್ಯಶಿವತತ್ವಜ್ಞಾನಮ್ । ಯಃ ಸರ್ವೋಪರಮಕಾಲೇ ಸರ್ವಾನಾತ್ಮನ್ಯುಪಸಂಹೃತ್ಯ ಸ್ವಾತ್ಮಾನಂದೇ ಸುಖೇ ಮೋದತೇ ಪ್ರಕಾಶತೇ ವಾ ಸ ದೇವಃ । ಅತ್ರೈತೇ ಮಂತ್ರರಹಸ್ಯ ಶ್ಲೋಕಾ ಭವೀಂತ –

ಅವನು ಹೇಳಿದನು: ಅದು ಪರಮರಹಸ್ಯವಾದ ದಕ್ಷಿಣಾಮುಖನಾದ ಶಿವನ ದರ್ಶನವಾಗುವ ಜ್ಞಾನವಾಗಿದೆ. ಪರಮಸಂಹಾರದ ಕಾಲದಲ್ಲಿ ಎಲ್ಲಾ ಆತ್ಮಗಳನ್ನು ತನ್ನಲ್ಲಿ ಉಪಸಂಹಾರ (ವಿಲೀನಗೊಳಿಸಿಕೊಂಡು) ಮಾಡಿಕೊಂಡು ಸ್ವಾತ್ಮಾನಂದದ ಸುಖದಲ್ಲಿ ಸಂತೋಷದಿಂದ ಪ್ರಕಾಶಿಸುವ ದೇವನೇ ಅವನು. ರಹಸ್ಯವಾದ ಮಂತ್ರಾಕ್ಷರಗಳನ್ನು ಹೊಂದಿರುವ ಶ್ಲೋಕಗಳನ್ನು ಇಲ್ಲಿ ತಿಳಿಸಿದೆ.

‘ದಕ್ಷಿಣಾಮುಖ’ ಎಂಬ ಶಬ್ದವನ್ನು ಎರಡು ವಿಧವಾಗಿ ಅರ್ಥೈಸಬಹುದು. ಮೊದಲನೆಯದಾಗಿ ಗುರುವಿನ ರೂಪದಲ್ಲಿ ಆಲದಮರದ ಬುಡದಲ್ಲಿ ದಕ್ಷಿಣಾಭಿಮುಖವಾಗಿ ಕುಳಿತುಕೊಂಡು ಶಿಷ್ಯರಿಗೆ ಉಪದೇಶವನ್ನು ನೀಡುತ್ತಿರುವ ಶಿವನ ಒಂದು ಅವತಾರ ಸ್ವರೂಪವನ್ನು ಸಂಬೋಧಿಸುವ ಪದವೆಂದು ತಿಳಿಯುವುದು.
ಎರಡನೆಯದಾಗಿ ‘ದಕ್ಷಿಣಾ’ ಅಂದರೆ ಬುದ್ಧಿಯು ಪೂರ್ಣವಾಗಿ ಶುದ್ಧ ಮತ್ತು ಶಾಂತವಾದರೆ ಮಾತ್ರ ಪ್ರಕಟವಾಗುವ ಅನಿಯಮಿತವಾಗಿ ರೂಪರಹಿತವಾದ ಪರಮಾತ್ಮ ತತ್ತ್ವದ ಸಂಬೋಧನೆ. ಎರಡನೆಯ ವಿಧದಲ್ಲಿ ಧ್ಯಾನಿಸಲು ಅಸಮರ್ಥರಾದವರು, ಮೊದಲನೆಯ ರೂಪವನ್ನು ಅವಲಂಬಿಸಬಹುದು.

ಉಪನಿಷತ್ತು ಇಲ್ಲಿ 24, 9, 18, 12, 32 ಅಕ್ಷರಗಳ ಐದು ಮಂತ್ರಗಳನ್ನು ಹೇಳಿದೆ ಮತ್ತು ಮುಂದೆ ತಿಳಿಸಿದ ಯಾವುದೇ ಒಂದು ರೂಪದಲ್ಲಿ ಆರಾಧಿಸಲು ತಿಳಿಸಿದೆ. (ಮಂತ್ರಗಳು ಅತೀ ರಹಸ್ಯವಾದುದರಿಂದ ಇಲ್ಲಿ ವಿವರಿಸಿಲ್ಲ; ಅದನ್ನು ದೀಕ್ಷಿತನಾದ ಗುರುವಿನ ಮುಖದಿಂದ ತಿಳಿಯುವುದು ಉತ್ತಮ. ಉದ್ದನೆಯ ಮಂತ್ರಗಳಲ್ಲಿ ಪಾರಮಾರ್ಥಿಕ ಜ್ಞಾನವನ್ನು ಕರುಣಿಸಲು ದೇವತೆಯನ್ನು ಆರಾಧಿಸಿದೆ.)

1. मेधादक्षिणामूर्तिमन्त्रस्य ब्रह्मा ऋषिः गायत्री छन्दः देवता दक्षिणास्यः
मन्त्रेणाङ्गन्यासः । ओमादा नम उच्चार्य ततो भगवतेपदम् ।
दक्षिणेति पदं पश्चात् मूर्तयेपदमुद्धरेत् ॥
अस्मच्छब्दं चतुर्थ्यन्तं मेधां प्रज्ञांपदंवदेत् ।
प्रमुच्चार्य ततो वायुबीजं च्छं च ततः पठेत् ॥
अग्निजायां ततस्त्वेष चतुर्विंशाक्षरो मनुः ॥

ಮೇಧಾದಕ್ಷಿಣಾಮೂರ್ತಿಮಂತ್ರಸ್ಯ ಬ್ರಹ್ಮಾ ಋಷಿಃ ಗಾಯತ್ರೀ ಛಂದಃ ದೇವತಾ ದಕ್ಷಿಣಾಸ್ಯಃ
ಮಂತ್ರೇಣಾಂಗನ್ಯಾಸಃ ।
ಓಮಾದಾ ನಮ ಉಚ್ಚಾರ್ಯ ತತೋ ಭಗವತೇಪದಮ್ ।
ದಕ್ಷಿಣೇತಿಪದಂ ಪಶ್ಚಾತ್ ಮೂರ್ತಯೇಪದಮುದ್ಧರೇತ್ ॥
ಅಸ್ಮಚ್ಛಬ್ದಂ ಚತುರ್ಥ್ಯಂತಂ ಮೇಧಾಂಪ್ರಜ್ಞಾಂಪದಂವದೇತ್ ।
ಪ್ರಮುಚ್ಚಾರ್ಯ ತತೋ ವಾಯುಬೀಜಂ ಚ್ಛಂ ಚ ತತಃ ಪಠೇತ್ ॥
ಅಗ್ನಿಜಾಯಾಂ ತತಸ್ತ್ವೇಷ ಚತುವಿಂಶಾಕ್ಷರೋ ಮನುಃ ॥

ध्यानम्

स्फटिकरजतवर्णं मौक्तिकी
  क्षमालाममृतकलशविद्याज्ञानमुद्राः कराब्जैः ।
दधतमुरगकक्ष्यं चन्द्रचूडं त्रिणेत्रं
  विधृतविविधभूषं दक्षिणामूर्तिमीडे ॥

ಧ್ಯಾನಮ್

ಸ್ಫಟಿಕರಜತವರ್ಣಂ ಮೌಕ್ತಿಕೀ
  ಕ್ಷಮಾಲಾಮಮೃತಕಲಶವಿದ್ಯಾಜ್ಞಾನಮುದ್ರಾಃ ಕರಾಬ್ಜೈಃ ।

ದಧತಮುರಗಕಕ್ಷ್ಯಂ ಚಂದ್ರಚೂಡಂ ತ್ರಿಣೇತ್ರಂ
ವಿಧೃತವಿವಿಧಭೂಷಂ ದಕ್ಷಿಣಾಮೂರ್ತಿಮೀಡೇ ॥

ಮೂರು ಕಣ್ಣುಳ್ಳ, ಚಂದ್ರನನ್ನು ಶಿರದಲ್ಲಿ ಧರಿಸಿದ, ಸ್ಫಟಿಕದಂತೆ ಬಿಳಿಬಣ್ಣದಿಂದ ಹೊಳೆಯುವ, ಕೈಗಳಲ್ಲಿ ಅಕ್ಷಮಾಲೆ ಅಮೃತಕಲಶ ಪುಸ್ತಕ ಮತ್ತು ಜ್ಞಾನ ಮುದ್ರೆಯನ್ನು ಹೊಂದಿ, ಸೊಂಟದಲ್ಲಿ ಉರಗವನ್ನೂ ಅನೇಕ ಆಭೂಷಣಗಳನ್ನೂ ಧರಿಸಿದ ದಕ್ಷಿಣಾಮೂರ್ತಿಯನ್ನು ಭಜಿಸುತ್ತೇನೆ.

2. मन्त्रेण न्यासः ।
अदौ वेदादिमुच्चार्य स्वराद्यं सविसर्गकम् ।
पञ्चार्णं तत उद्धृत्य अंततः सविसर्गकम् ।
अन्ते समुद्ध्वरेत्तारं मनुरेष नवाक्षरः ॥

ಮಂತ್ರೇಣ ನ್ಯಾಸಃ ।
ಆದೌ ವೇದಾದಿಮುಚ್ಚಾರ್ಯ ಸ್ವರಾದ್ಯಂ ಸವಿಸರ್ಗಕಮ್ ।
ಪಂಚಾರ್ಣಂ ತತ ಉದ್ಧೃತ್ಯ ಅಂತತಃ ಸವಿಸರ್ಗಕಮ್ ।
ಅಂತೇ ಸಮುದ್ಧ್ವರೇತ್ತಾರಂ ಮನುರೇಷ ನವಾಕ್ಷರಃ ॥

ध्यानम्
मुद्रां भद्रार्थदात्रीं सपरशुहरिणं बाहुभिर्जानुमेकम्
जान्वासक्तं दधानो भुजगवरसमाबद्धकक्ष्यो वटाधः ।
आसीनश्चन्द्रखण्डप्रतिघटितजटः क्षीरगौरस्त्रिणेत्रो
दद्यादाद्यः शुकाद्यैमुनिभिरावृतो भावशुद्धिं भवो नः ॥

ಧ್ಯಾನಮ್
ಮುದ್ರಾಂ ಭದ್ರಾರ್ಥದಾತ್ರೀಂ ಸಪರಶುಹರಿಣಂ ಬಾಹುಭಿರ್ಜಾನುಮೇಕಮ್
ಜಾನ್ವಾಸಕ್ತಂ ದಧಾನೋ ಭುಜಗವರಸಮಾಬದ್ಧಕಕ್ಷ್ಯೋ ವಟಾಧಃ ।
ಆಸೀನಶ್ಚಂದ್ರಖಂಡಪ್ರತಿಘಟಿತಜಟಃ ಕ್ಷೀರಗೌರಸ್ತ್ರಿಣೇತ್ರೋ
ದದ್ಯಾದಾದ್ಯಃ ಶುಕಾದ್ಯೈರ್ಮುನಿಭಿರಭಿವೃತೋ ಭಾವಶುದ್ಧಿಂ ಭವೋ ನಃ ॥

ಹಾಲಿನಂತಹ ಬಿಳಿಯ ಬಣ್ಣದಿಂದ ಶೋಭಿಸುವ ತ್ರಿನೇತ್ರನಾದ ಭವನು ನಮ್ಮಲ್ಲಿ ಶುದ್ಧಭಾವನೆಗಳನ್ನು ಉಂಟುಮಾಡಲಿ. ಅವನು ವಟವೃಕ್ಷದ ಬುಡದಲ್ಲಿ ಕುಳಿತುಕೊಂಡು, ಶುಕ ಮತ್ತಿತರ ಮುನಿಗಳಿಂದ ಆವೃತನಾಗಿ, ಮೂರು ಕೈಗಳಲ್ಲಿ ಜ್ಞಾನಮುದ್ರೆ ಪರಶು ಮತ್ತು ಹರಿಣವನ್ನು ಧರಿಸಿ ಇನ್ನೊಂದು ಕರವು ತೊಡೆಯನ್ನು ಅಲಂಕರಿಸಿ, ನಡುವಿನಲ್ಲಿ ದೊಡ್ಡ ಸರ್ಪವನ್ನೂ ಜಟೆಯಲ್ಲಿ ಚಂದ್ರಖಂಡವನ್ನೂ ಅನೇಕ ಆಭರಣಗಳನ್ನೂ ಧರಿಸಿದ್ದಾನೆ.

3. मन्त्रेण न्यासः ।

तारं ब्लूं नम उच्चार्य मायां वाग्भवमेव च ।
दक्षिणापदमुच्चार्य ततः स्यान्मूर्तये पदम् ॥
ज्ञानंदेहिपदं पश्चात् वह्निजायां ततो न्यसेत् ।
मनुरष्टादशार्णोऽयं सर्वमन्त्रेषु गोपितः ॥

ಮಂತ್ರೇಣ ನ್ಯಾಸಃ ।
ತಾರಂ ಬ್ಲೂಂ ನಮ ಉಚ್ಚಾರ್ಯ ಮಾಯಾಂ ವಾಗ್ಭವಮೇವ ಚ ।
ದಕ್ಷಿಣಾಪದಮುಚ್ಚಾರ್ಯ ತತಃ ಸ್ಯಾನ್ಮೂರ್ತಯೇಪದಮ್ ॥
ಜ್ಞಾನಂದೇಹಿಪದಂ ಪಶ್ಚಾತ್ ವಹ್ನಿಜಾಯಾಂ ತತೋ ನ್ಯಸೇತ್ ।
ಮನುರಷ್ಟಾದಶಾರ್ಣೋಽಯಂ ಸರ್ವಮಂತ್ರೇಷು ಗೋಪಿತಃ ॥

ध्यानम्

भस्मव्यापाण्डुराङ्गः शशिकलधरो ज्ञानमुद्राक्षमलावीणा–
  पुस्तैर्विराजत्करकमलधरो योगपट्टाभिरामः ।
व्याख्यापीठे निशण्णो मुनिवरकरैः सेव्यमानः प्रसन्नः
  सव्यालः कृत्तिवासाः सततमवतु नो दक्षिणामूर्तिरीशः ॥

ಧ್ಯಾನಂ

ಭಸ್ಮವ್ಯಾಪಾಂಡುರಾಂಗಃ ಶಶಿಶಕಲಧರೋ ಜ್ಞಾನಮುದ್ರಾಕ್ಷಮಾಲಾವೀಣಾ–
  ಪುಸ್ತೈರ್ವಿರಾಜತ್ಕರಕಮಲಧರೋ ಯೋಗಪಟ್ಟಾಭಿರಾಮಃ ।
ವ್ಯಾಖ್ಯಾಪೀಠೇ ನಿಷಣ್ಣೋ ಮುನಿವರನಿಕರೈಃ ಸೇವ್ಯಮಾನಃ ಪ್ರಸನ್ನಃ
  ಸವ್ಯಾಲಃ ಕೃತ್ತಿವಾಸಾಃ ಸತತಮವತು ನೋ ದಕ್ಷಿಣಾಮೂರ್ತಿರೀಶಃ ॥

ಅಂಗಗಳಲ್ಲಿ ಭಸ್ಮವನ್ನು ಧಾರಣೆಮಾಡಿ ಶ್ವೇತವರ್ಣದವನಾಗಿ ಕಾಣುವ, ಚಂದ್ರನ ಒಂದು ಕಲೆಯನ್ನು ಧರಿಸಿದ, ಕಮಲದಂತೆ ಶೋಭಿಸುವ ಕರಗಳಲ್ಲಿ ಜ್ಞಾನಮುದ್ರೆ ಅಕ್ಷಮಾಲೆ ವೀಣೆ ಮತ್ತು ಪುಸ್ತಕ ವಿರಾಜಿಸುವ, ಯೋಗಿಗಳ ರಾಜನಾಗಿ ಸಮೀಪದಲ್ಲಿರುವ ಮುನಿಶ್ರೇಷ್ಠರಿಗೆ ಉಪದೇಶ ಮಾಡುವುದರಲ್ಲಿ ಸಮರ್ಥನಾಗಿರುವ, ಸರ್ಪಗಳನ್ನು ಧರಿಸಿ ಚರ್ಮಾಂಬರನಾದ ಒಡೆಯ ದಕ್ಷಿಣಾಮೂರ್ತಿಯು ನಮ್ಮನ್ನು ಯಾವಾಗಲೂ ರಕ್ಷಿಸಲಿ.

4. मन्त्रेण न्यासः ।

तारं मायां रमाबीजं पदं साम्बशिवाय च ।
तुभ्यं चानलजायां च मनुर्द्वादशवर्णकः ॥

ಮಂತ್ರೇಣ ನ್ಯಾಸಃ ।

ತಾರಂ ಮಾಯಾಂ ರಮಾಬೀಜಂ ಪದಂ ಸಾಂಬಶಿವಾಯ ಚ ।
ತುಭ್ಯಂ ಚಾನಲಜಾಯಾಂ ಚ ಮನುರ್ದ್ವಾದಶವರ್ಣಕಃ ॥

ध्यानम्

वीणां करैः पुस्तकमक्षमालां बिभ्राणमभ्राभगळं वराढ्यम् ।
फणीन्द्रकक्ष्यं मुनिभिः शुकाद्यैः सेव्यं वटाधःकृतनीडमीडे ॥

ಧ್ಯಾನಮ್

ವೀಣಾಂ ಕರೈಃ ಪುಸ್ತಕಮಕ್ಷಮಾಲಾಂ ಬಿಭ್ರಾಣಮಭ್ರಾಭಗಳಂ ವರಾಢ್ಯಮ್ ।
ಫಣೀಂದ್ರಕಕ್ಷ್ಯಂ ಮುನಿಭಿಃ ಶುಕಾದ್ಯೈಃ ಸೇವ್ಯಂ ವಟಾಧಃಕೃತನೀಡಮೀಡೇ ॥

ವೀಣೆ, ಪುಸ್ತಕ, ಅಕ್ಷಮಾಲೆ, ವರದ ಮುದ್ರೆಯನ್ನು ಕರಗಳಲ್ಲಿ ಧರಿಸಿ, ಕಪ್ಪಗಿನ ಮೋಡದಂತಹ ಕಂಠಪ್ರದೇಶವನ್ನು ಹೊಂದಿ, ನಡುವಿನಲ್ಲಿ ದೊಡ್ಡದಾದ ಸರ್ಪವನ್ನು ಸುತ್ತಿಕೊಂಡು ಶುಕ ಮುಂತಾದ ಮುನಿಶ್ರೇಷ್ಠರು ಆಶ್ರಯಿಸಿ ಸೇವಿಸುತ್ತಿರುವ, ವಟವೃಕ್ಷದ ಬುಡವನ್ನು ತನ್ನ ಮನೆಯಾಗಿಸಿಕೊಂಡಿರುವ ಅವನನ್ನು ಆರಾಧಿಸುತ್ತೇನೆ.

5. मन्त्रेणाङ्ग न्यासः ।

विष्णुः ऋषिः अनुष्टुप् छन्दः देवता दक्षिणास्यः ।
तारं नमो भगवते तुभ्यं वटपदं ततः ।
मूलेतिपदमुच्चारय वासिनेपदमुद्धरेत् ॥
वागीशायपदं पश्चात् महाज्ञानपदं ततः ।

दायिनेपदमुच्चार्य मायिनेनम उद्धरेत् ।
अनुष्टुभो मन्त्रराजः सर्वमन्त्रोत्तमोत्तमः ॥

ಮಂತ್ರೇಣಾಂಗ ನ್ಯಾಸಃ ।
ವಿಷ್ಣುಃ ಋಷಿಃ, ಅನುಷ್ಟುಪ್ ಛಂದಃ, ದೇವತಾ ದಕ್ಷಿಣಾಸ್ಯಃ ।
ತಾರಂ ನಮೋ ಭಗವತೇ ತುಭ್ಯಂ ವಟಪದಂ ತತಃ ।
ಮೂಲೇತಿಪದಮುಚ್ಚಾರಯ ವಾಸಿನೇಪದಮುದ್ಧರೇತ್ ॥
ವಾಗೀಶಾಯಪದಂ ಪಶ್ಚಾತ್ ಮಹಾಜ್ಞಾನಪದಂ ತತಃ ।
ದಾಯಿನೇಪದಮುಚ್ಚಾರ್ಯ ಮಾಯಿನೇನಮ ಉದ್ಧರೇತ್ ।
ಅನುಷ್ಟುಭೋ ಮಂತ್ರರಾಜಃ ಸರ್ವಮಂತ್ರೋತ್ತಮೋತ್ತಮಃ ॥

ध्यानम्
मुद्रापुस्तकवह्निन गाविलसद्बाहुं पसन्नाननं
  मुक्ताहारविभूषणं शशिकलाभास्वत्किरीटोज्ज्वलम् ।
अज्ञानापहमादिमादिमगिरामर्थं भवानीपतिं
  न्यग्रोधान्तनिवासिनं परगुरुं ध्यायाम्यभीष्टाप्तये ॥

ಧ್ಯಾನಮ್
ಮುದ್ರಾಪುಸ್ತಕವಹ್ನಿನ ಗಾವಿಲಸದ್ಬಾಹುಂ ಪ್ರಸನ್ನಾನನಂ
  ಮುಕ್ತಾಹಾರವಿಭೂಷಣಂ ಶಶಿಕಲಾಭಾಸ್ವತ್ಕಿರೀಟೋಜ್ಜ್ವಲಮ್ ।
ಅಜ್ಞಾನಾಪಹಮಾದಿಮಾದಿಮಗಿರಾಮರ್ಥಂ ಭವಾನೀಪತಿಂ
  ನ್ಯಗ್ರೋಧಾಂತನಿವಾಸಿನಂ ಪರಗುರುಂ ಧ್ಯಾಯಾಮ್ಯಭೀಷ್ಟಾಪ್ತಯೇ ॥

ಎಲ್ಲಾ ವೇದಗಳಲ್ಲಿ ಉಲ್ಲೇಖಿಸಿರುವ ಪ್ರಸನ್ನಮುಖನಾಗಿರುವ, ಕೈಗಳಲ್ಲಿ ಜ್ಞಾನಮುದ್ರೆ ಪುಸ್ತಕ ಅಗ್ನಿ ಮತ್ತು ಸರ್ಪಗಳು ಹೊಳೆಯುವ, ಮುತ್ತಿನಹಾರದಿಂದ ಶೋಭಿಸುವ, ಕಿರೀಟದಲ್ಲಿ ಚಂದ್ರಕಲೆಯಿಂದ ಪ್ರಕಾಶಿಸುವ, ನ್ಯಗ್ರೋಧ ವೃಕ್ಷದ ಕೆಳಗೆ ಆಸೀನನಾಗಿ ಅಜ್ಞಾನ ಅಹಂಕಾರಗಳನ್ನು ಕಳೆಯುವ, ಅಭೀಷ್ಟಗಳನ್ನು ಕರುಣಿಸುವ ಪರಮಗುರುವಾದ ಭವಾನೀಪತಿಯನ್ನು ಧ್ಯಾನಿಸುತ್ತೇನೆ.

सोऽहमिति यावदास्थितिः सा निष्ठा भवति । तदभेदेन मन्वाम्रेडनं ज्ञानसाधनम् । चित्ते तदेकतानता परिकरः । अङ्गचेष्टार्पणं बलिः । त्रीणि धामनि कालः । द्वादशान्तपदं स्थानमिति ।

ಸೋಽಹಮಿತಿ ಯಾವದಾಸ್ಥಿತಿಃ ಸಾ ನಿಷ್ಠಾ ಭವತಿ । ತದಭೇದೇನ ಮನ್ವಾಮ್ರೇಡನಂ ಜ್ಞಾನಸಾಧನಮ್ । ಚಿತ್ತೇ ತದೇಕತಾನತಾ ಪರಿಕರಃ । ಅಂಗಚೇಷ್ಟಾರ್ಪಣಂ ಬಲಿಃ । ತ್ರೀಣಿ ಧಾಮಾನಿ ಕಾಲಃ । ದ್ವಾದಶಾಂತಪದಂ ಸ್ಥಾನಮಿತಿ ।

'ನಾನು ಅವನಾಗಿದ್ದೇನೆ' (ನಾನು ಶಿವಸ್ವರೂಪನು) ಎಂಬ ಭಾವನೆಯಿಂದ ಸದಾಕಾಲ ನಿಷ್ಠೆಯಿಂದ ಮಾಡುವ ಭಕ್ತಿಯು ಉಪಾಸನೆಯೆನಿಸಿಕೊಳ್ಳುತ್ತದೆ. ಮಂತ್ರವನ್ನು ಅವನಿಗಿಂತ ಬೇರೆಯೆಂದು ಭಾವಿಸದೆ ಮಾಡುವ ಜಪವು ಈ ಜ್ಞಾನಕ್ಕೆ ದಾರಿಯಾಗಿದೆ. ಅವನ ಧ್ಯಾನವು ಇದರ ಉಪಕರಣ; ಎಲ್ಲಾ ದೈಹಿಕ ಕ್ರಿಯೆಗಳು ಅವನಿಗೆ ಅರ್ಪಿಸುವ ಸೇವೆ; ಮೂರು ಸ್ಥಿತಿಗಳು (ಜಾಗ್ರತ್, ಸ್ವಪ್ನ, ಸುಷುಪ್ತಿ) ಅದನ್ನು ಮಾಡುವ ಸಮಯ; ಹನ್ನೆರಡು ದಳದ ಪದ್ಮದ ಮೇಲೆ (ನೆತ್ತಿಯಲ್ಲಿರುವ ಸಹಸ್ರಾರ) ಅದರ ಸ್ಥಾನವು.

ते ह पुनः श्रद्दधानास्तं प्रत्यूचुः – कथं वाऽस्योदयः ? किं स्वरूपम् ? को वाऽस्योपासकः ? इति ।

ತೇ ಹ ಪುನಃ ಶ್ರದ್ದಧಾನಾಸ್ತಂ ಪ್ರತ್ಯೂಚುಃ – ಕಥಂ ವಾಽಸ್ಯೋದಯಃ ? ಕಿಂ ಸ್ವರೂಪಮ್ ? ಕೋ ವಾಽಸ್ಯೋಪಾಸಕಃ ? ಇತಿ ।

ಆಗ ಅವರು ಶ್ರದ್ಧೆಯೆಂಬ ಧನವುಳ್ಳವರಾಗಿ ಪುನಃ ಅವನಲ್ಲಿ ಕೇಳಿದರು: ಅವನು ಹೇಗೆ ಪ್ರಕಟವಾಗುತ್ತಾನೆ? ಯಾವ ರೂಪದಲ್ಲಿ? ಯಾರು ಅವನ ಉಪಾಸಕರು?

स होवाच –
वैराग्यतैलसम्पूर्णे भक्तिवर्तिसमन्विते ।
प्रबोधपूर्णपात्रे तु ज्ञप्तिदीपं विलोकयेत् ॥
मोहान्धकारनिस्सारे उदेति स्वयमेव हि ।
वैराग्यमरणिं कृत्वा ज्ञानं कृत्वोत्तरारणिम् ॥
गाढतामिस्रसंशान्त्यै गूढमर्थं निवेदयेत् ।
मोहभानुजसङ्क्रान्तं विवेकाख्यं मृकण्डुजम् ॥
तत्त्वाविचारपाशेन बद्धं द्वैतभयातुरम् ।
उज्जीव यन्निजानन्दे स्वस्वरूपेण संस्थितः ॥

शेमुषी दक्षिणा प्रोक्ता सा यस्याभीक्षणे मुखम् ।
दक्षिणाभिमुखः प्रोक्तः शिवोऽसौ ब्रह्मवादिभिः ॥

ಸ ಹೋವಾಚ –
ವೈರಾಗ್ಯತೈಲಸಂಪೂರ್ಣೇ ಭಕ್ತಿವರ್ತಿಸಮನ್ವಿತೇ ।
ಪ್ರಬೋಧಪೂರ್ಣಪಾತ್ರೇ ತು ಜ್ಞಪ್ತಿದೀಪಂ ವಿಲೋಕಯೇತ್ ॥
ಮೋಹಾಂಧಕಾರನಿಸ್ಸಾರೇ ಉದೇತಿ ಸ್ವಯಮೇವ ಹಿ ।
ವೈರಾಗ್ಯಮರಣಿಂ ಕೃತ್ವಾ ಜ್ಞಾನಂ ಕೃತ್ವೋತ್ತರಾರಣಿಮ್ ॥
ಗಾಢತಾಮಿಸ್ರಸಂಶಾಂತ್ಯೈ ಗೂಢಮರ್ಥಂ ನಿವೇದಯೇತ್ ।
ಮೋಹಭಾನುಜಸಂಕ್ರಾಂತಂ ವಿವೇಕಾಖ್ಯಂ ಮೃಕಂಡುಜಮ್ ॥
ತತ್ವಾವಿಚಾರಪಾಶೇನ ಬದ್ಧಂ ದ್ವೈತಭಯಾತುರಮ್ ।
ಉಜ್ಜೀವಯನ್ನಿಜಾನಂದೇ ಸ್ವಸ್ವರೂಪೇಣ ಸಂಸ್ಥಿತಃ ॥
ಶೇಮುಷೀ ದಕ್ಷಿಣಾ ಪ್ರೋಕ್ತಾ ಸಾ ಯಸ್ಯಾಭಿಕ್ಷಣೇ ಮುಖಂ ।
ದಕ್ಷಿಣಾಭಿಮುಖಃ ಪ್ರೋಕ್ತಃ ಶಿವೋಽಸೌ ಬ್ರಹ್ಮವಾದಿಭಿಃ ॥

ಅವನು ಹೇಳಿದನು: ವೈರಾಗ್ಯವೆಂಬ (ಕಾಮನೆಗಳನ್ನು ತ್ಯಜಿಸಿ) ಎಣ್ಣೆಯಿಂದ ಭಕ್ತಿಯೆಂಬ ಬತ್ತಿಯೊಡನೆ ಜ್ಞಾನವೆಂಬ ದೀಪ ಹಚ್ಚಿ ಆಲೋಕಿಸಬೇಕು. ಆಗ ಮೋಹ–ಭ್ರಮೆಯೆಂಬ ಕತ್ತಲೆಯು ಕಳೆದು, ಶಿವನು ಸ್ವಯಂ ಉದಯಿಸುತ್ತಾನೆ. ವೈರಾಗ್ಯವನ್ನು ಕೆಳಗಿನ ಅರಣಿಯಾಗಿಸಿ, ಜ್ಞಾನವನ್ನು ಮೇಲಿನ ಅರಣಿಯಾಗಿಸಿ ಕಡೆದಾಗ ಅಗ್ನಿಯು ಜ್ವಲಿಸಿ, (ಇದು ಅರಣಿಗಳನ್ನು ಕಡೆದು ಅಗ್ನಿಯನ್ನು ಉತ್ಪಾದಿಸುವ ಉಪಾಯ) ಗಾಢಾಂಧಕಾರವು ನಾಶವಾಗಿ ಶಿವನು ಅವನಿಗೆ ಗೂಢವಾದ ತನ್ನ ನಿಜಸ್ವರೂಪವನ್ನು ಪ್ರಕಟಿಸುತ್ತಾನೆ. ಆನಂದದಿಂದ ತುಂಬಿದ ಸ್ವಸ್ವರೂಪದಿಂದ ಭಕ್ತನಲ್ಲಿ ನೆಲೆಸಿರುವ ಶಿವನು ಮಾಯೆಯೆಂಬ ಮೋಹಪಾಶದಿಂದ ಮುಚ್ಚಿಹೋಗಿರುವ ಹಾಗೂ ದ್ವೈತವೆಂಬ ಭೇದಜ್ಞಾನದಿಂದ ಭಯಗೊಂಡಿರುವ ಅವನಲ್ಲಿ ವಿವೇಕವನ್ನು ಪ್ರಕಾಶಿಸಿ ಸ್ವರೂಪಜ್ಞಾನವನ್ನು ಕರುಣಿಸುತ್ತಾನೆ. (ಆನಂದ ಸ್ವರೂಪನಾದ ಶಿವನು ಇಲ್ಲಿಯವರೆಗೆ ಯಮನ ಪಾಶದಿಂದ ಭಯಗೊಂಡಿರುವ ಮೃಕಂಡುವಿನ ಮಗನ ಜೀವವನ್ನು ಉಳಿಸಿ ವಿವೇಕವನ್ನು ಕರುಣಿಸುತ್ತಾನೆ).

ಇಲ್ಲಿ ಪುರಾಣಗಳಲ್ಲಿ ಉಲ್ಲೇಖಿಸಿರುವ ಘಟನೆಯೊಂದು ಉಪನಿಷತ್ತಿನಲ್ಲಿ ಸ್ಥಾನವನ್ನು ಪಡೆದಿದೆ. ಮೃಕಂಡು ಋಷಿಯ ಮಗ ಮಾರ್ಕಂಡೇಯರು ಅಲ್ಪ ಜೀವಿತವನ್ನು ಹೊಂದಿದ್ದರು. ಯಮರಾಜನು ಅವರ ಪ್ರಾಣವನ್ನು ಸೆಳೆಯಲು ಬಂದು ಪಾಶವನ್ನು ಬೀಸಿದಾಗ ಪರಮ ಶಿವಭಕ್ತರಾಗಿದ್ದ ಅವರು ಅವನ ಕೃಪೆಯಿಂದ ದೀರ್ಘಾಯಸ್ಸನ್ನು ಪಡೆದರು ಎಂಬುದು ಐತಿಹ್ಯ. ವಿವೇಕವನ್ನು ಮಾರ್ಕಂಡೇಯರಿಗೂ, ಮೋಹವನ್ನು ಯಮರಾಜನಿಗೂ, ಭೇದಜ್ಞಾನವನ್ನು ಪಾಶಕ್ಕೂ, ಭಯವನ್ನು ದ್ವೈತಕ್ಕೂ ಹೋಲಿಸಿದ್ದಾರೆ.

‘ದಕ್ಷಿಣಾ’ ಶಬ್ದವು ಬುದ್ಧಿಯನ್ನು ಸೂಚಿಸುತ್ತದೆ. ಬುದ್ಧಿಯೆಂಬ ಕಣ್ಣಿನಿಂದ ಶಿವನನ್ನು ದರ್ಶಿಸಬಹುದಾದರಿಂದ, ಅವನನ್ನು ದಕ್ಷಿಣಾಭಿಮುಖನೆಂದು ಬ್ರಹ್ಮವಾದಿಗಳು ಹೇಳುತ್ತಾರೆ.

सर्गादिकाले भगवान् विरिञ्चिरुपास्यैनं सर्गसामर्थ्यमाप्य ।
तुतोष चित्ते वाञ्छितार्थांश्च लब्ध्वा धन्यः सोऽस्योपासको भवति धाता ॥

ಸರ್ಗಾದಿಕಾಲೇ ಭಗವಾನ್ ವಿರಿಂಚಿರುಪಾಸ್ಯೈನಂ ಸರ್ಗಸಾಮರ್ಥ್ಯಮಾಪ್ಯ ।
ತುತೋಷ ಚಿತ್ತೇ ವಾಂಛಿತಾರ್ಥಾಂಶ್ಚ ಲಬ್ಧ್ವಾ ಧನ್ಯಃ ಸೋಽಸ್ಯೋಪಾಸಕೋ
ಭವತಿ ಧಾತಾ ॥

ಸೃಷ್ಟಿಯ ಆರಂಭದಲ್ಲಿ ಬ್ರಹ್ಮನು ಭಗವಾನ್ ಶಿವನನ್ನು ಆರಾಧಿಸಿ ಸೃಷ್ಟಿಯನ್ನು ಮಾಡುವ ಶಕ್ತಿಯನ್ನು ಗಳಿಸಿ ಸಂತೋಷಗೊಂಡನು. ಅದೇರೀತಿ ಸ್ಥಿರವಾದ ಸಂತೋಷ ಚಿತ್ತದಿಂದ ಉಪಾಸಿಸುವ ಭಕ್ತನು ಎಲ್ಲಾ ಬಯಕೆಗಳನ್ನು ಪಡೆದುಕೊಂಡು ಧನ್ಯನಾಗುತ್ತಾನೆ.

य इमां परमरहस्यशिवतत्वविद्यामधीते स सर्व पापेभ्यो मुक्तो भवति । य एवम् वेद स कैवल्यमनुभवति । इत्युपनिषत् ।

ಯ ಇಮಾಂ ಪರಮರಹಸ್ಯಶಿವತತ್ವವಿದ್ಯಾಮಧೀತೇ ಸ ಸರ್ವ ಪಾಪೇಭ್ಯೋ ಮುಕ್ತೋ ಭವತಿ । ಯ ಏವಮ್ ವೇದ ಸ ಕೈವಲ್ಯಮನುಭವತಿ । ಇತ್ಯುಪನಿಷತ್ ॥

ಯಾರು ಈ ಪರಮರಹಸ್ಯವಾದ ಶಿವವಿದ್ಯೆಯನ್ನು ಅಭ್ಯಸಿಸುತ್ತಾರೋ, ಅವರು ಸರ್ವ ಪಾಪದಿಂದ ಮುಕ್ತರಾಗುತ್ತಾರೆ. ಹೀಗೆ ತಿಳಿದವರು ಕೈವಲ್ಯವನ್ನು ಹೊಂದುತ್ತಾರೆ.

ಇತೀ ಉಪನಿಷತ್ತು.

ओं सह नाववतु । सह नौभुनक्तु । सह वीर्यं करवावहै । तेजस्वि नावधीतमस्तु । मा विद्विषावहै । ओं शान्तिः शान्तिः शान्तिः ॥

ಓಂ ಸಹ ನಾವವತು । ಸಹ ನೌ ಭುನಕ್ತು । ಸಹ ವೀರ್ಯಂ ಕರವಾವಹೈ । ತೇಜಸ್ವಿ ನಾವಧೀತಮಸ್ತು । ಮಾ ವಿದ್ವಿಷಾವಹೈ । ಓಂ ಶಾಂತಿಃ ಶಾಂತಿಃ ಶಾಂತಿಃ ॥

॥ ॐ तत् सत् ॥ ॐ ತತ್ ಸತ್ ॥

ಆಕರಗ್ರಂಥಗಳ ಸೂಚಿ
